|| श्रीः ||

ಶ್ರೀಮಾಧವೀಯ ಶ್ರೀಮಚ್ಛಂಕರ ದಿಗ್ವಿಜಯಃ

ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಮ್
ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಂ
ಶೃಂಗೇರಿ 577 139

ಶ್ರೀವಿದ್ಯಾರಣ್ಯ ಪ್ರಣೀತಃ

ಶ್ರೀಶಂಕರ ದಿಗ್ವಿಜಯಃ

ಭಾಗ - ೧

ಕನ್ನಡ ಅನುವಾದ ಮತ್ತು ಟಿಪ್ಪಣಿಗಳೊಡನೆ
ವಿದ್ವಾನ್ ಎನ್. ರಂಗನಾಥಶರ್ಮಾ

ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಮ್
ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಂ
ಶೃಂಗೇರಿ 577 139

ಶ್ರೀಮಚ್ಛಂಕರ ದಿಗ್ವಿಜಯಃ ಶ್ರೀವಿದ್ಯಾರಣ್ಯ ವಿರಚಿತಃ

ಕನ್ನಡ ಅನುವಾದ – ವಿದ್ವಾನ್ ಎನ್. ರಂಗನಾಥ ಶರ್ಮಾ, ಬೆಂಗಳೂರು.

ಪ್ರಥಮ ಸಂಪುಟ ೧-೯ ಸರ್ಗಗಳು: ಪುಟಗಳು: xxv+349

ಪ್ರಥಮ ಮುದ್ರಣ ೧೯೯೬

© ಹಕ್ಕನ್ನು ಕಾದಿರಿಸಲಾಗಿದೆ

75-00

ಬೆಲೆ:ರೂ.50=00

Typeset at: M&M Hi-tech DTP
Bangalore-84 Ph: 5464742

ಮುದ್ರಕರು: ಶ್ರೀ ಆಫ್‌ಸೆಟ್
ಶಂಕರಮಠ ರಸ್ತೆ, ಶಂಕರಪುರಂ
ಬೆಂಗಳೂರು - 560 004

॥ श्री शृङ्गेरी श्रीजगद्गुरुमहासंस्थानम् ॥

श्रीमत्परमहंसपरिव्राजकाचार्यवर्य पदवाक्यप्रमाणपारावारपारीण
यमनियमासनप्रणायामप्रत्याहारधारणाध्यानसमाध्यष्टाङ्गयोगानुष्ठाननिष्ठ
तपश्चक्रवर्त्यनाद्यविच्छिन्न श्रीशङ्कराचार्यगुरुपरम्पराप्राप्त षड्दर्शनस्थापनाचार्य
व्याख्यानसिंहासनाधीश्वर सकलनिगमागमसारहृदय सांख्यत्रयप्रतिपादक वैदिकमार्गप्रवर्तक
सर्वतन्त्रस्वतन्त्रादिराजधानी विद्यानगरमहाराजधानी कर्णाटकसिंहासनप्रतिष्ठापनाचार्य
श्रीमद्राजाधिराजगुरुभूमंडलाचार्य ऋष्यशृङ्गपुरवराधीश्वर तुङ्गभद्रातीरवासि
श्रीमद्विद्या शङ्करपादपद्माराधक श्रीजगद्गुरु श्रीमदभिनवविद्यातीर्थस्वामिगुरुकरकमलसञ्जात

॥ श्री जगद्गुरु शृङ्गेरी श्रीमद्भारतीतीर्थमहास्वामिभिः ॥

निखिलास्तिकमहाजनेषु नारायणस्मरणपूर्वकं विरचिता आशिषस्समुल्लसन्तु ।

इह खलु सर्वसहायामस्यां लब्धजन्मनां लोकानां वेदबोधितस्य सनातनस्य धर्मस्याचरणमेव ऐहिकामुष्मिक श्रेयोनिदानमिति निश्चप्रचम् । परन्तु दुष्कलिप्रभावेण केचन नास्तिकाः प्रादुर्भूय सिद्धान्तमिमं प्रदूष्य लोकान् श्रेयोमार्गात् प्रच्यावयन्तो ददृशिरे । अतो भगवान् कलानिधिशेखरः श्री शंकराचार्यरूपेण स्वयमवतीर्य तान् दुर्वादिनो विद्राव्य सनातने धर्ममविकलं प्रतिष्ठाप्य लोकानतिवेलमन्वग्रहीत् ।

ते खलु श्री शंकरभगवत्पादाचार्याः केरलेषु कालट्यामवतीर्य बाल्य एव चुलुकीकृतसकल शास्त्रपारावाराः श्री गोविन्दभगवत्पादयोगिभ्यः स्वीकृतपारमहंस्याः प्रस्थानत्रयभाष्याद्यनेकनिबन्धान् विरचय्य सर्वत्रदेशे सञ्चर्य स्वीययुक्तिशतकोटिधाराभिः प्रतिपक्षगिरीन् विभिद्य औपनिषदमद्वैतमात्मत्त्वं सर्वानवबोध्य तस्यास्य धर्मस्य सार्वदिकप्रचाराय चतुराम्नायपीठानि प्रतिष्ठाप्य काश्मीरे सर्वज्ञपीठमधिरुह्य हिमालयेषु केदारक्षेत्रे अन्तर्दधिरे ।

तदीयं पवित्रं चरित्रं माधवीयशंकरविजये विस्तरेणोपलभ्यते। स एव ग्रन्थः भगवत्पादचरित्रप्रतिपादकग्रन्थेषु मूर्धन्यो वरीवर्ति। आसेतुशीतनगं सकलशिष्टजनादृतस्य अत एव नैकभाषास्वनूदितस्य ग्रन्थतल्लजस्यास्य कर्णाटकभाषानुवाददौर्लभ्यमाकलय्य तदिदं नैयून्यं परिजिहीर्षवो वयं विद्वत्तल्लजान् ईदृशेषु कार्येषु सोत्साहं प्रवर्तनशीलान् श्री यन्. रंङ्गनाथशर्मणः ग्रन्थमिमं कर्णाटकभाषया अनुवदितुं प्रैरयाम। ते च आत्मनः श्रममविगणय्य पुण्यप्रदमिदं कार्यमिति, गुर्वाज्ञा पालनीयेति, अनेन च परस्सहस्रलोकानामुपकृतिर्भवेदिति च धिया स्वरसतया अन्ववादिषुः। वयं चेममनुवादमवलोक्य नितराममोदिष्महि।

श्रीशारदाचन्द्रकलावतंसयोर्निरवग्रहानुग्रहेण ग्रन्थोऽयं
आस्तिकजनादरपात्रतामेत्वित्याशास्महे।

शृङ्गगिरिः
धातृवत्सरीय चैत्रपूर्णिमा सौम्यवासरः
3-4-1996

इति नारायणस्मरणम्
श्री

श्री श्री जगद्गुरु शङ्कराचार्य महासंस्थानम्, दक्षिणाम्नाय श्री शारदापीठम्, शृङ्गेरी

V. R. GOWRI SHANKAR B.E., D.I.I.Sc., AMIMA
Administrator

ಪ್ರಕಾಶಕರ ಮಾತು

ಧರ್ಮಗ್ಲಾನಿಯಾದಾಗ ಶಿಷ್ಟರ ರಕ್ಷಣೆಗಾಗಿ ಮತ್ತು ದುಷ್ಟರ ಶಿಕ್ಷೆಗಾಗಿ ಭಗವಂತನು ಅವತರಿಸುವನೆಂದು ಸ್ವತಃ ಭಗವಂತನೇ ಭಗವದ್ಗೀತೆಯಲ್ಲಿ ಅಭಯ ವಚನವನ್ನಿತ್ತಿದ್ದಾನಷ್ಟೆ. ಅಂತಹ ಒಂದು ಧರ್ಮ ವಿಪ್ಲವದ ಸಂದರ್ಭವು ಭಾರತ ದೇಶಕ್ಕೆ ಸುಮಾರು 7-8ರ ಶತಮಾನದ ಮಧ್ಯಭಾಗದಲ್ಲಿ ಒದಗಿ ಬಂದಿತ್ತು. ಈ ಸಂದಿಗ್ಧ ಸಂದರ್ಭದಲ್ಲಿ ಕೇರಳ ರಾಜ್ಯದ ಕಾಲಟಿ ಕ್ಷೇತ್ರದಲ್ಲಿ ಮಹಾಚೇತನವೊಂದು ಜನ್ಮತಾಳಿತು. ಸಾಕ್ಷಾತ್ ಪರಮೇಶ್ವರನ ಅವತಾರವೆಂದೇ ಭಾವಿಸಲಾದ ಈ ಚೇತನವು ಆದಿ ಶ್ರೀ ಶಂಕರ ಭಗವತ್ಪಾದರೆಂದು ಪ್ರಥಿತವಾಯಿತು.

ಅಪ್ರತಿಮ ಪ್ರತಿಭಾಶಾಲಿಗಳಾದ ಶ್ರೀ ಶಂಕರ ಭಗವತ್ಪಾದರು ತಮ್ಮ 8ನೇ ವಯಸ್ಸಿನಲ್ಲೆಯೇ ಮಹಾ ವಿದ್ವಾಂಸರೆನಿಸಿ, 16ನೇ ವಯಸ್ಸಿನಲ್ಲಿ ಪ್ರಸ್ಥಾನತ್ರಯಗಳಿಗೆ ಭಾಷ್ಯಗಳನ್ನೂ, ಅನೇಕ ಪ್ರಕರಣ ಗ್ರಂಥಗಳನ್ನೂ ಹಾಗೂ ಸ್ತೋತ್ರ ಕಾವ್ಯಗಳನ್ನೂ ರಚಿಸಿ, ಕೇವಲ ತಮ್ಮ 32ವರ್ಷಗಳ ವಯೋಮಾನದಲ್ಲಿ ಸಮಗ್ರ ಭಾರತ ದೇಶವನ್ನು ಕಾಲ್ನಡಿಗೆಯಲ್ಲಿ ಸಂಚರಿಸಿದ ಹಿರಿಮೆಯುಳ್ಳವರು. ಜನರಲ್ಲಿ ಪ್ರಚಲಿತವಾಗಿದ್ದ ನಾಸ್ತಿಕ್ಯ ಭಾವವನ್ನು ನಿರ್ಮೂಲಮಾಡಿ, ಅವೈದಿಕ ಮತಗಳಲ್ಲಿದ್ದ ದೋಷಗಳನ್ನು ತೋರಿಸಿ, ವೈದಿಕ ಕರ್ಮಗಳನ್ನು ಪರಿಶುದ್ಧಗೊಳಿಸಿ, ಆರ್ಷೇಯವಾದ ಔಪನಿಷದ ದರ್ಶನವನ್ನು ಪ್ರಸಾರಮಾಡುವುದರ ಮೂಲಕ ಸನಾತನ ಧರ್ಮವನ್ನು ಪುನಃ ಭದ್ರವಾಗಿ ಪ್ರತಿಷ್ಠಾಪಿತಗೊಳಿಸಿದರು. ಈ ಕಾರ್ಯವನ್ನು ಮಾಡಿದ್ದರಿಂದ ಷಣ್ಮತಸ್ಥಾಪನಾಚಾರ್ಯ ಎಂಬ ಪ್ರಖ್ಯಾತಿಗೆ ಪಾತ್ರರಾದ ಮಹಾಮಹಿಮರು.

ಈ ಅವತಾರ ಪುರುಷರ ಜೀವನ ಮತ್ತು ಸಾಧನೆಗಳನ್ನು ವಿವರವಾಗಿ ಪ್ರಸ್ತಾಪ ಮಾಡುವ "ಶ್ರೀ ಶಂಕರ ವಿಜಯ" ವೆಂಬ ಹೆಸರಿನ ಅನೇಕ ಗ್ರಂಥಗಳು ಉಪಲಬ್ಧವಾಗುತ್ತವೆ. ಪ್ರಕೃತ ಉಪಲಬ್ಧವಾಗಿರುವ ಶಂಕರ ವಿಜಯ ಗ್ರಂಥಗಳಲ್ಲೆಲ್ಲಾ ಪರಂಪರೆಗೆ ಅನುಸಾರವಾಗಿ ಪ್ರಾಮಾಣಿಕವಾಗಿರುವುದು - ಶ್ರೀ ಮಾಧವೀಯ ಶಂಕರ ವಿಜಯ ಗ್ರಂಥ. ಈ ಗ್ರಂಥದಲ್ಲಿ ಶ್ರೀ ಭಗವತ್ಪಾದರ ಜೀವನ ವೃತ್ತಾಂತ, ಸಾಧನೆ ಮುಂತಾದವುಗಳ ಪ್ರಾಮಾಣಿಕವಾದ ವರ್ಣನೆ ಇರುತ್ತದೆ. 16 ಸರ್ಗಗಳಿಂದ ಕೂಡಿರುವ ಈ ಗ್ರಂಥವು ಅತ್ಯಂತ ಪ್ರೌಢವಾದ ಕಾವ್ಯಶೈಲಿಯಲ್ಲಿ ರಚಿತವಾಗಿದೆ.

ಈ ಪ್ರೌಢ ಗ್ರಂಥದ ಕನ್ನಡ ಅನುವಾದವು ಈಗ ಸಿಗುವುದು ದುರ್ಲಭ. ಮಾಧವೀಯ ಶಂಕರ ವಿಜಯದಂತಹ ಶ್ರೇಷ್ಠ ಗ್ರಂಥದ ಕನ್ನಡ ಅನುವಾದವು ಇಲ್ಲದಿರುವುದು, ಮತ್ತು ತತ್ಪರಿಣಾಮವಾಗಿ ಶ್ರೀ ಶಂಕರ ಭಗವತ್ಪಾದರ ಜೀವನ ಮತ್ತು ಸಾಧನೆಯನ್ನೊಳಗೊಂಡ ಪ್ರಾಮಾಣಿಕ ಗ್ರಂಥದ ಪರಿಚಯ ಕನ್ನಡ ಜನತೆಗೆ ಲಭ್ಯವಾಗದಿರುವುದನ್ನು ಮನಗಂಡ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಮಹಾಸ್ವಾಮಿಗಳವರು ಈ ಗ್ರಂಥವನ್ನು ಸಮರ್ಥ ವಿದ್ವಾಂಸರಾದ ವಿದ್ವಾನ್ ಶ್ರೀ ಎನ್. ರಂಗನಾಥ ಶರ್ಮ ಅವರಿಂದ ಅನುವಾದ ಮಾಡಿಸಿ ಪ್ರಕಾಶಪಡಿಸಲು ಆದೇಶ ವಿತ್ತರು. ಅದರಂತೆ ನಮ್ಮ ನಾಡಿನ ಶ್ರೇಷ್ಠ ವಿದ್ವಾಂಸರಲ್ಲೊಬ್ಬರೂ, ರಾಷ್ಟ್ರ ಹಾಗೂ ರಾಜ್ಯ ಪ್ರಶಸ್ತಿಗಳಿಂದ ಸನ್ಮಾನಿತರೂ ಹಾಗೂ ಶ್ರೀ ಮಠದ ಪ್ರಿಯಶಿಷ್ಯರೂ ಆದ ವಿದ್ವಾನ್ ಶ್ರೀ ಎನ್. ರಂಗನಾಥ ಶರ್ಮಾ ಅವರು ತಮ್ಮ ವಯೋಧರ್ಮಕ್ಕನುಗುಣವಾದ ಕ್ಲೇಶಗಳನ್ನು ಪರಿಗಣಿಸದೆ, ಈ ಕಾರ್ಯವನ್ನು ಅತ್ಯಂತ ಶ್ರದ್ಧೆಯಿಂದ ನಿರ್ವಹಿಸಿಕೊಟ್ಟಿದ್ದಾರೆ. ಇವರಿಗೂ ಮತ್ತು ಲೇಖನ ಕಾರ್ಯದಲ್ಲಿ ಸಹಕರಿಸಿದ ಶ್ರೀಮತಿ ಸರೋಜ ಗಣಪತಿ ಇವರಿಗೂ ಶ್ರೀ ಶಾರದಾ ಚಂದ್ರಮೌಳೀಶ್ವರರು ಸಕಲ ಸನ್ಮಂಗಳಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಪ್ರಕೃತ "ಶ್ರೀ ಮಾಧವೀಯ ಶಂಕರ ವಿಜಯ" ದ 9 ಸರ್ಗಗಳ ಅನುವಾದದಿಂದ ಕೂಡಿದ ಈ ಮೊದಲನೆಯ ಸಂಪುಟವನ್ನು ಪ್ರಕಾಶಪಡಿಸಲಾಗಿದೆ. ಉಳಿದ 7 ಸರ್ಗಗಳ ಅನುವಾದವನ್ನೊಳಗೊಂಡ ಎರಡನೆಯ ಸಂಪುಟವು ಶ್ರೀಘ್ರವಾಗಿ ಹೊರಬರುತ್ತದೆ.

ಈ ಮುದ್ರಣ ಕಾರ್ಯದಲ್ಲಿ ಸಹಕರಿಸಿದ ಎಂ.ಎಂ. ಹೈಟೆಕ್‌ನ ಶ್ರೀ ವೈದ್ಯನಾಥನ್ ಮತ್ತು ಶ್ರೀ ಆಫ್‌ಸೆಟ್ ಮುದ್ರಣಾಲಯದವರಿಗೂ ಕೃತಜ್ಞತೆಗಳು.

ಶ್ರೀ ಭಗವತ್ಪಾದರ ಜೀವನ ವೃತ್ತಾಂತ, ಸಾಧನೆ ಮುಂತಾದವುಗಳನ್ನು ಕನ್ನಡ ಜನತೆ ಅರಿತುಕೊಳ್ಳುವಂತೆ ಆಗಬೇಕೆಂಬ ಮಹೋದ್ದೇಶದಿಂದ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರ ಅಪ್ಪಣೆಯಂತೆ ಶ್ರೀ ಶಾರದಾ ಪೀಠದ ವತಿಯಿಂದ ಈ ಗ್ರಂಥವನ್ನು ಪ್ರಕಾಶಿಸಿ, ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡಿದ್ದು, ಇದು ಆಸ್ತಿಕ ಜನತೆಯ ಕೈಸೇರಿ, ಉಪಯೋಗ ಪಡೆಯುವಂತಾದರೆ ನಮ್ಮ ಉದ್ದೇಶ ಸಫಲವಾಗುವುದು.

ಶೃಂಗೇರಿ
4.4.1996

ವಿ.ಆರ್. ಗೌರಿಶಂಕರ್
ಆಡಳಿತಾಧಿಕಾರಿಗಳು

ಪ್ರಸ್ತಾವನೆ

ಪುಣ್ಯಭೂಮಿಯಾದ ಈ ಭರತಖಂಡದಲ್ಲಿ ಚಿರಕಾಲದಿಂದ ಸುಪ್ರತಿಷ್ಠಿತವಾಗಿ ನಿಂತಿರುವುದು ಅಧ್ಯಾತ್ಮವಿದ್ಯೆ. ಅದು ಸರ್ವವಿದ್ಯೆಗಳಲ್ಲಿಯೂ ಶ್ರೇಷ್ಠವಾದದ್ದೆಂದು ಸರ್ವಮಾನ್ಯವಾಗಿರುತ್ತದೆ. ಇದನ್ನೇ 'ಸ ಬ್ರಹ್ಮವಿದ್ಯಾಂ ಸರ್ವವಿದ್ಯಾಪ್ರತಿಷ್ಠಾಮಥರ್ವಾಯ ಜ್ಯೇಷ್ಠಪುತ್ರಾಯ ಪ್ರಾಹ' ಎಂದು ಮುಂಡಕೋಪನಿಷತ್ತು ತಿಳಿಸಿಕೊಟ್ಟಿದೆ. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ 'ಅಧ್ಯಾತ್ಮವಿದ್ಯಾ ವಿದ್ಯಾನಾಂ' ಎಂದು ನುಡಿದು ಈ ಅಧ್ಯಾತ್ಮವಿದ್ಯೆಯೇ ವಿದ್ಯೆಗಳಲ್ಲಿ ಸಾರಭೂತವಾದದ್ದೆಂದು ಘೋಷಿಸಿದ್ದಾನೆ. ವೈಶೇಷಿಕಾದಿದರ್ಶನಗಳೂ ತಂತ್ರಾಗಮಗಳೂ ಆತ್ಮವಿದ್ಯೆಗಳೇ ಆಗಿದ್ದರೂ ಅವು ಅಧಿಕಾರಭೇದದಿಂದ ವ್ಯವಸ್ಥಿತವಾಗಿದ್ದು ಸೋಪಾನಸ್ಥಾನದಲ್ಲಿರುತ್ತವೆ. ಪರಮಪುರುಷಾರ್ಥವಾದ ಮೋಕ್ಷವನ್ನು ನೇರವಾಗಿ ಸಾಧಿಸಿಕೊಡತಕ್ಕದ್ದು ವೇದಾಂತದರ್ಶನವೆಂದೂ ಅದೇ ಸಮ್ಯಗ್‌ದರ್ಶನವೆಂದೂ ಬ್ರಹ್ಮವಿದ್ಯೆ, ಅಧ್ಯಾತ್ಮವಿದ್ಯೆ– ಎಂದರೆ ವೇದಾಂತವೆಂದೂ ನಿಶ್ಚಿತವಾಗಿದೆ. ವೇದಾಂತವೆಂದರೆ ಉಪನಿಷತ್. ಇದರಲ್ಲಿ ಪ್ರತಿಪಾದಿತವಾದದ್ದೇ ಔಪನಿಷದದರ್ಶನ. ಎಲ್ಲ ಉಪನಿಷತ್ತುಗಳ ಅರ್ಥವನ್ನು ಏಕವಾಕ್ಯತೆಯಿಂದ ನಿರ್ಧರಿಸಿ ವೇದಾಂತಸಿದ್ಧಾಂತವನ್ನು ಸುವ್ಯವಸ್ಥಿತವಾಗಿ ನಿರೂಪಿಸುವುದಕ್ಕಾಗಿ ಶ್ರೀಬಾದರಾಯಣಾಚಾರ್ಯರು ಶಾರೀರಕಸೂತ್ರಗಳನ್ನು ರಚಿಸಿದರು. ಈ ಸೂತ್ರಗಳಿಗೆ ಬ್ರಹ್ಮಸೂತ್ರಗಳೆಂದೂ ಹೆಸರಿದೆ. ಉಪನಿಷತ್ತುಗಳ ವಿಷಯವನ್ನೇ ಭಗವದ್ಗೀತೆಯು ಲಲಿತಶೈಲಿಯಲ್ಲಿ ವಿಸ್ತಾರವಾಗಿ ತಿಳಿಸಿದೆ. ಉಪನಿಷತ್, ಬ್ರಹ್ಮಸೂತ್ರ, ಭಗವದ್ಗೀತೆ– ಇವು ಮೂರು ಬ್ರಹ್ಮವಿದ್ಯೆಯೆಂಬ ಸುಮೇರುಪರ್ವತದ ತ್ರಿಕೂಟಶಿಖರಗಳು. ಇವುಗಳಿಗೆ ಪ್ರಸ್ಥಾನತ್ರಯವೆಂದು ಹೆಸರಿರುವುದು ಸರ್ವವೇದ್ಯ.

ಇದು ಭರತಖಂಡದ ಎಲ್ಲ ಶಾಸ್ತ್ರಗಳಿಗಿಂತಲೂ ಜಗತ್ತಿನ ಎಲ್ಲ ತತ್ತ್ವಚಿಂತನೆಗಳಿಗಿಂತಲೂ ಮುಂದೆ ಹೋಗಿ 'ಬ್ರಹ್ಮ ಸತ್ಯಂ ಜಗನ್ಮಿಥ್ಯಾ' ಎಂಬ ಆರ್ಷದರ್ಶನವನ್ನು ಸ್ಥಾಪಿಸಿದೆ. ಈ ಗಂಭೀರವಾದ ಪರಮಸತ್ಯವನ್ನು ಎಳೆ ಎಳೆಯಾಗಿ ಬಿಡಿಸಿ, ಸಮಸ್ತವೈದಿಕ ಪ್ರಮಾಣಗಳಿಂದಲೂ ಯುಕ್ತಿಗಳಿಂದಲೂ ತತ್ತ್ವಜ್ಞಾನಿಗಳ ಅನುಭವಬಲದಿಂದಲೂ ಈ ಕೇವಲಾದ್ವೈತವನ್ನು ಸಿದ್ಧಾಂತಿಸಿ, ಇದೇ ನಮ್ಮ ಸಾಂಪ್ರದಾಯಿಕವೂ ಸನಾತನವೂ ಆದ ಅಧ್ಯಾತ್ಮವಿದ್ಯೆಯೆಂದು ಸಾರಿದ ಮಹಾತ್ಮರು ಶ್ರೀಶಂಕರಭಗವತ್ಪಾದರು. ಸರ್ವ ಮುಮುಕ್ಷುಗಳಿಗೆ ಪ್ರಾತಃಸ್ಮರಣೀಯರೂ ಅದ್ವೈತಸಿದ್ಧಾಂತದ ಉಳಿವಿಗೆ ಅಮೃತ ಧಾರೆಯನ್ನೆರೆದ ಮಹಾಮಹಿಮರೂ ಆದ ಶ್ರೀಶಂಕರಾಚಾರ್ಯರ ದಿವ್ಯಜೀವನಚರಿತೆಯನ್ನು ನಿರೂಪಿಸುವುದಕ್ಕಾಗಿ ಪ್ರಕೃತವಾದ ಈ ಮಾಧವೀಯ ಶ್ರೀಶಂಕರದಿಗ್ವಿಜಯವು ಪ್ರವೃತ್ತವಾಗಿದೆ.

ಶ್ರೀಶಂಕರಚಾರ್ಯರ ಜೀವನಚರಿತೆಯನ್ನು ಐತಿಹಾಸಿಕವಾಗಿ ನಿರ್ಧರಿಸುವುದು ಕಠಿಣವೇ.

ಸಂಶೋಧಕರು ಈ ವಿಷಯದಲ್ಲಿ ಬಹಳ ಶ್ರಮಿಸಿದ್ದಾರೆ. ದೇಶಕಾಲಗಳ ವಿಷಯವಾಗಿ ಸಹ ಇವರಲ್ಲಿ ಭಿನ್ನಾಭಿಪ್ರಾಯಗಳಿವೆ. ಆಚಾರ್ಯರು ತಮ್ಮ ವಿಷಯವಾಗಿ ಏನನ್ನೂ ಹೇಳಿಕೊಂಡಿಲ್ಲ. ಅವೆಲ್ಲವನ್ನು ಬಾಹ್ಯಪ್ರಮಾಣಗಳಿಂದ ಗೊತ್ತುಪಡಿಸಬೇಕಾಗಿದೆ. ಅವರ ಚರಿತೆಯನ್ನು ವರ್ಣಿಸುವ ಶಂಕರವಿಜಯಾದಿ ಗ್ರಂಥಗಳೇನೋ ಬೇಕಾದಷ್ಟಿವೆ. ಪುರಾಣಶೈಲಿಯನ್ನವಲಂಬಿಸಿರುವ ಅವುಗಳಲ್ಲಿ ಏಕವಾಕ್ಯತೆ ಇಲ್ಲ. ಇವೆಲ್ಲವನ್ನು ಪರಿಶೀಲಿಸಿ ಸಂಶೋಧಕರು ತಾಳಿರುವ ನಿಲುವನ್ನು ಇಲ್ಲಿ ಸಂಕ್ಷೇಪವಾಗಿ ಪ್ರಸ್ತಾವಿಸಬಹುದು.

ಆಧಾರಗ್ರಂಥಗಳು

ಇತಿಹಾಸ ಸಂಶೋಧಕರು ಸಂಗ್ರಹಿಸಿ ಬರೆದಿರುವ ಗ್ರಂಥಸೂಚಿಗಳಲ್ಲಿ ಆಚಾರ್ಯರನ್ನು ಕುರಿತು ಬರೆದ ಗ್ರಂಥಗಳ ವಿವರವು ಈ ರೀತಿಯಾಗಿದೆ.

ಗ್ರಂಥ	ಕರ್ತೃ
೧. ಶಂಕರದಿಗ್ವಿಜಯ	ಮಾಧವಾಚಾರ್ಯ
೨. ಶಂಕರ ವಿಜಯ	ಆನಂದಗಿರಿ
೩. "	ಚಿದ್ವಿಲಾಸಯತಿ
೪. "	ವ್ಯಾಸಾಚಲ
೫. ಶಂಕರವಿಜಯಸಾರ	ಸದಾನಂದವ್ಯಾಸ
೬. ಆಚಾರ್ಯಚರಿತ	ಗೋವಿಂದಾನಂದಯತಿ
೭ ಶಂಕರಾಭ್ಯುದಯ	ರಾಜಚೂಡಮಣಿ ದೀಕ್ಷಿತ
೮. ಬೃಹತ್ ಶಂಕರ ವಿಜಯ ಬ್ರಹ್ಮಾನಂದ	
೯. ಕೇರಲೀಯ ಶಂಕರವಿಜಯ	ಗೋವಿಂದನಾಥ
೧೦. ಭಗವತ್ಪಾದಾಭ್ಯುದಯ	ಲಕ್ಷ್ಮಣಸೂರಿ

ಇತ್ಯಾದಿಗ್ರಂಥಗಳು ಇನ್ನೂ ಇವೆ. ಪದ್ಮಪಾದರ ವಿಜಯಡಿಂಡಿಮ, ಚಿತ್ಸುಖರ ಬೃಹತ್‌ಶಂಕರವಿಜಯ, ಆನಂದಗಿರಿಯ ಪ್ರಾಚೀನಶಂಕರವಿಜಯ - ಈ ಮೂರು ಗ್ರಂಥಗಳು ನಾಮಾವಶೇಷವಾಗಿವೆ. ಹಸ್ತಪ್ರತಿಗಳೂ ದೊರಕಿಲ್ಲ. ಇವಲ್ಲದೆ ಲಿಂಗಪುರಾಣ, ಕೂರ್ಮಪುರಾಣ, ವಾಯುಪುರಾಣ, ಶಿವರಹಸ್ಯ - ಮೊದಲಾದವುಗಳಲ್ಲಿ ಆಚಾರ್ಯರ ಪರಾಮರ್ಶವು ಬಂದಿದೆ. ಇವೆಲ್ಲವೂ ಶ್ರೀಶಂಕರಾಚಾರ್ಯರ ಲೋಕವಿಖ್ಯಾತಿಯನ್ನು ತೋರಿಸುತ್ತವೆ. ಇವುಗಳಲ್ಲಿ ದೊರಕುವ ಚಾರಿತ್ರಿಕಸಾಮಗ್ರಿಯು ಅತ್ಯಲ್ಪವಾದದ್ದು.

ವಾಸ್ತವವಾಗಿ ಆಚಾರ್ಯರ ಕಾಲನಿರ್ಣಯಕ್ಕೆ ಅವರ ಭಾಷ್ಯಗಳನ್ನೇ ಸಾಕ್ಷ್ಯವಾಗಿ ತೆಗೆದುಕೊಳ್ಳುವುದು ಉತ್ತಮ ಪಕ್ಷ. ಅವರು ಪ್ರಾಸಂಗಿಕವಾಗಿ ತಮ್ಮ ಕೃತಿಗಳಲ್ಲಿ ರಾಜನ

ಹೆಸರು, ನಗರ, ವಾದಿ- ಪ್ರತಿವಾದಿಗಳ ಪಕ್ಷಗಳನ್ನು ಉಲ್ಲೇಖಿಸಿದ್ದಾರೆ. ಅವುಗಳ ಆಧಾರದಿಂದ ಸಾಮಾನ್ಯವಾದ ಒಂದು ನಿರ್ಣಯಕ್ಕೆ ಬರಲು ಶಕ್ಯವಿದೆ. ಈ ಎಲ್ಲ ಸಾಮಗ್ರಿಗಳನ್ನೂಪರಿಶೀಲಿಸಿ ಪ್ರಾಚ್ಯ, ಪಾಶ್ಚಾತ್ಯ ವಿದ್ವಾಂಸರು ತುಂಬ ಶ್ರಮಿಸಿ ಮನನೀಯ ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ನಾಲ್ಕು ಗ್ರಂಥಗಳನ್ನು ಇಲ್ಲಿ ಗಮನಿಸಬಹುದು -

೧. ಹೊಳೆನರಸೀಪುರದ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು ರಚಿಸಿದ ಶ್ರೀಶಂಕರಭಗವತ್ಪಾದವೃತ್ತಾಂತಸಾರ ಸರ್ವಸ್ವ.

೨. ಶ್ರೀ ಬಲದೇವ ಉಪಾಧ್ಯಾಯರು ರಚಿಸಿದ 'ಶ್ರೀಶಂಕರಾಚಾರ್ಯರು'. ಇದು ಹಿಂದಿಭಾಷೆಯಲ್ಲಿದೆ. ಪ್ರೊ. ಎಸ್. ರಾಮಚಂದ್ರಶಾಸ್ತ್ರಿಗಳು ಕನ್ನಡಕ್ಕೆ ಅನುವಾದಿಸಿದ್ದಾರೆ. ಮೈಸೂರು ಕಾವ್ಯಾಲಯದ ಪ್ರಕಾಶನ.

೩. ಶ್ರೀ ಟಿ.ಎಂ.ಪಿ. ಮಹಾದೇವನ್ ಅವರು ಬರೆದ 'ಶಂಕರಾಚಾರ್ಯ'. ಶ್ರೀ. ಜಿ. ವೆಂಕಟಸುಬ್ಬಯ್ಯನವರ ಕನ್ನಡ ಅನುವಾದ. ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ. ಪ್ರಕಟನೆ.

೪. Life and Thought of Sankaracharya by Govind Chandra Pande (Published in the year 1992). Motilal Banarsidass Publishers.)

ಮೇಲ್ಕಂಡ ನಾಲ್ಕುಗ್ರಂಥಗಳಲ್ಲಿ ಆಚಾರ್ಯರ ಕಾಲದೇಶಾದಿಗಳ ನಿರ್ಣಯಕ್ಕಾಗಿ ನಡೆದ ಸಕಲವಿಚಾರಗಳೂ ಕ್ರೋಡೀಕೃತವಾಗಿವೆ. ಇವುಗಳಲ್ಲಿ ಗೋವಿಂದ ಚಂದ್ರಪಾಂಡೆಯವರ ಗ್ರಂಥವು ಇತ್ತೀಚಿನದು. ಈವಿದ್ವಾಂಸರ ಪರಿಶೋಧನೆ ನಿಜವಾಗಿಯೂ ಪ್ರಶಂಸನೀಯವಾದದ್ದು. ಅವರ ನಿರ್ಣಯವೇ ಸದ್ಯದಲ್ಲಿ ಕಡೆಯ ಮಾತಾಗಿ ತೋರುತ್ತದೆ. ಒಟ್ಟಿನಲ್ಲಿ ಈ ನಾಲ್ಕುಗ್ರಂಥಗಳ ಮಥಿತಾರ್ಥವನ್ನು ಸಂಗ್ರಹಿಸಿ ಸಂಕ್ಷೇಪವಾಗಿ ಮುಂದೆ ಬರೆದಿದ್ದೇನೆ.

ಭಗವತ್ಪಾದರ ಜೀವಿತಾವಧಿ ಮೂವತ್ತೆರಡು ವರ್ಷಗಳು ಮಾತ್ರ. ಇದನ್ನು ಎಲ್ಲ ಸಾಂಪ್ರದಾಯಿಕರೂ ಹೇಳಿದ್ದಾರೆ. ಎಲ್ಲ ಸಂಶೋಧಕರೂ ಇದನ್ನು ಅಂಗೀಕರಿಸಿದ್ದಾರೆ. ಇದರ ಮೇಲೆ ಶಂಕೆಗೆ ಅವಕಾಶವಿಲ್ಲ. ಒಂದು ಪ್ರಾಚೀನ ಶ್ಲೋಕ ಈ ರೀತಿಇದೆ -

ಅಷ್ಟವರ್ಷೇ ಚತುರ್ವೇದೀ ದ್ವಾದಶೇ ಸರ್ವಶಾಸ್ತ್ರವಿತ್|
ಷೋಡಶೇ ಕೃತವಾನ್ ಭಾಷ್ಯಂ ದ್ವಾತ್ರಿಂಶೇ ಮುನಿರಭ್ಯಗಾತ್||

"ಶ್ರೀಶಂಕರಮುನಿಗಳು ಎಂಟುವರ್ಷದವರಿರುವಾಗ ನಾಲ್ಕುವೇದಗಳನ್ನೂ ಕಲಿತಿದ್ದರು. ಹನ್ನೆರಡನೆಯ ವರ್ಷದಲ್ಲಿ ಸರ್ವಶಾಸ್ತ್ರಗಳನ್ನು ಬಲ್ಲವರಾಗಿದ್ದರು. ಹದಿನಾರನೆಯ ವಯಸ್ಸಿನಲ್ಲಿ ಭಾಷ್ಯವನ್ನು ರಚಿಸಿದರು. ಮೂವತ್ತೆರಡನೆಯ ವರ್ಷದಲ್ಲಿ ತಿರೋಧಾನವನ್ನೈದಿದರು"

ಈ ಮಾತು ಅದ್ಭುತವೆಂದು ತೋರಿದರೂ ಅಸಂಭವ ಸರ್ವಥಾ ಅಲ್ಲವೆಂಬುದು ನಿಶ್ಚಿತ. ಜನ್ಮಾಂತರ ಸಂಸ್ಕಾರ ಬಲದಿಂದಲೋ ಏನೋ ಇಂತಹ ಮಹಿಮ ಶಾಲಿಗಳು ಇದ್ದರೆಂಬುದು ಐತಿಹಾಸಿಕವಾಗಿ ರುಜುವಾತಾಗಿದೆ.

ಆಚಾರ್ಯರ ಕಾಲ

ಕಾಂಚೀಪೀಠದ ಸಾಂಪ್ರದಾಯಿಕರು ಆಚಾರ್ಯರ ಕಾಲವು ಕ್ರಿ. ಪೂ. ೫೦೮ ರಿಂದ ಕ್ರಿ. ಪೂ. ೪೭೬ ರ ವರೆಗೆಂದು ವಾದಿಸುತ್ತಾರೆ. ಇದಕ್ಕೆ ಆಧಾರವಾಗಿ ಬೃಹಚ್ಛಂಕರವಿಜಯ, ಆತ್ಮಬೋಧರ ಪ್ರಾಚೀನಶಂಕರವಿಜಯ, ಪುಣ್ಯಶ್ಲೋಕಮಂಜರಿ ಮುಂತಾದ ಗ್ರಂಥಗಳನ್ನು ಉದಾಹರಿಸುತ್ತಾರೆ. ನಂದನ ಸಂವತ್ಸರದ ವೈಶಾಖ ಶುದ್ಧ ಪಂಚಮೀ ಭಾನುವಾರ ಆಚಾರ್ಯರ ಜನ್ಮವೆಂದೂ ರಕ್ತಾಕ್ಷಿ ಸಂವತ್ಸರದ ಕಾರ್ತಿಕಶುದ್ಧ ಏಕಾದಶಿಯಂದು ಅಂತರ್ಧಾನವೆಂದೂ ಹೇಳುತ್ತಾರೆ. ಸಂವತ್ಸರ, ತಿಥಿ, ವಾರಗಳು ಒಂದು ವೇಳೆ ಸತ್ಯವಾಗಿದ್ದರೂ ಕಾಲವು ಮಾತ್ರ ಅಂಗೀಕಾರ್ಯವಲ್ಲವೆಂದು ಸಂಶೋಧಕರ ಖಚಿತವಾದ ತೀರ್ಮಾನವಾಗಿದೆ. ಆಚಾರ್ಯರು ಎಂದಿಗೂ ಕ್ರಿಸ್ತಪೂರ್ವದವರಲ್ಲ.

ಆಚಾರ್ಯರ ಸೂತ್ರಭಾಷ್ಯದಲ್ಲಿ ಸ್ರುಘ್ನ, ಮಥುರಾ, ಪಾಟಲೀಪುತ್ರ ಎಂಬ ನಗರಗಳ ನಿರ್ದೇಶವಿದೆ(ಸೂ. ಭಾ. ೪-೨-೫). ಪಾಟಲೀಪುತ್ರವು ಕ್ರಿ. ಶ. ೭೫೬ ರಲ್ಲಿ ನದೀಪ್ರವಾಹದಿಂದ ಮುಳಿಗಿತೆಂದು ಇತಿಹಾಸವು ಹೇಳುತ್ತದೆ. ಆದ್ದರಿಂದ ಶ್ರೀ ಶಂಕರರು ಅದಕ್ಕಿಂತ ಹಿಂದಿನವರು - ಎಂದು ಕೆಲವರು ಹೇಳುತ್ತಾರೆ. ಇದೇನೂ ಯುಕ್ತವಾಗಿ ತೋರುವುದಿಲ್ಲ. ಸಂಸ್ಕೃತಗ್ರಂಥಗಳಲ್ಲಿ ವಾಡಿಕೆಯಾಗಿ ಪ್ರಸಿದ್ಧನಗರಗಳ ಉಲ್ಲೇಖವಿರುತ್ತದೆ. ಅದನ್ನು ಗ್ರಂಥಕಾರರು ಪ್ರತ್ಯಕ್ಷ ನೋಡಿರಬೇಕೆಂದು ವಾದಿಸುವುದು ಸರಿಯಲ್ಲ. ಹಾಗೆಯೇ ಆಚಾರ್ಯರ ಭಾಷ್ಯಗಳಲ್ಲಿ ಪೂರ್ಣವರ್ಮ, ರಾಜವರ್ಮ- ಎಂಬ ರಾಜರ ಹೆಸರಿರುವುದರಿಂದ ಆಚಾರ್ಯರು ಆ ರಾಜರ ಕಾಲದವರೆಂದು ವಾದಿಸುವುದೂ ಸರಿಯಲ್ಲ. ಆ ಹೆಸರಿನ ರಾಜರು ಎಷ್ಟುಜನರಿದ್ದರೋ ಯಾರು ಬಲ್ಲರು? ಅವರ ಹೆಸರು ಭಾಷ್ಯಕಾರರಿಗೆ ಗೊತ್ತಿತ್ತು ಎಂದು ಮಾತ್ರ ಹೇಳಬಹುದು. ಇತರ ಪ್ರಬಲ ಪ್ರಮಾಣಗಳಿಂದ ಕಾಲನಿರ್ಣಯವಾದರೆ ಉಳಿದವನ್ನು ಸಹಾಯಕ ಪ್ರಮಾಣಗಳೆಂದು ಅಭ್ಯುಚ್ಚಯವಾಗಿ ಸ್ವೀಕರಿಸಬಹುದು. ಆದ್ದರಿಂದ ಭಗವತ್ಪಾದರಿಗಿಂತ ಪೂರ್ವ ವರ್ತಿಗಳಾದ ಗ್ರಂಥಕಾರರು ಮತ್ತು ಅವರ ಅನಂತರದಲ್ಲಿದ್ದ ಗ್ರಂಥಕಾರರು - ಈ ಉಭಯರ ಕಾಲವು ನಿರ್ಣೀತವಾದರೆ, ಈ ಉಭಯಕಾಲಗಳ ಮಧ್ಯದಲ್ಲಿ ಆಚಾರ್ಯರಿದ್ದರೆಂದು ನಿರ್ಣಯಿಸಬಹುದು. ಇದು ಸಾಧುವಾದ ನಿರ್ಣಯ ಮಾರ್ಗವೆಂದು ಒಪ್ಪಿಕೊಳ್ಳ ಬಹುದು. ಅದನ್ನೀಗ ಪರೀಕ್ಷಿಸೋಣ -

ಆಚಾರ್ಯರ ಸಾಕ್ಷಾತ್ ಶಿಷ್ಯರಾದ ಸುರೇಶ್ವರಾಚಾರ್ಯರು ಬೃಹದಾರಣ್ಯಕ ಭಾಷ್ಯ ವಾರ್ತಿಕದಲ್ಲಿ 'ತ್ರಿಷ್ಟೇವ ತ್ವವಿನಾಭಾವಾದಿತಿ ಯದ್ಧರ್ಮಕೀರ್ತಿನಾ' ಎಂದು

ಬೌದ್ಧಾಚಾರ್ಯನಾದ ಧರ್ಮಕೀರ್ತಿಯನ್ನು ಉಲ್ಲೇಖಿಸಿದ್ದಾರೆ. ಅಲ್ಲದೆ 'ಅಪಿ ಚ ಸಹೋಪಲಂಭನಿಯಮಾದಭೇದೋ ವಿಷಯವಿಜ್ಞಾನಯೋರಾಪತತಿ' ಎಂಬ ವಾಕ್ಯವು ಸೂತ್ರಭಾಷ್ಯದಲ್ಲಿಯೇ ಇದೆ (೨-೨೮). ವಿಜ್ಞಾನವಾದಿಗಳ ಮತವನ್ನು ಖಂಡಿಸುವುದಕ್ಕಾಗಿ ಈ ಮಾತನ್ನು ಆಚಾರ್ಯರು ಅನುವಾದಮಾಡಿ ಕೊಂಡಿದ್ದಾರೆ. ಇದೇ ವಾಕ್ಯವು ಧರ್ಮಕೀರ್ತಿಯ ಪ್ರಮಾಣನಿಶ್ಚಯವೆಂಬ ಗ್ರಂಥದಲ್ಲಿದೆ. ಆದ್ದರಿಂದ ಶ್ರೀ ಶಂಕರರು ಧರ್ಮಕೀರ್ತಿಗಿಂತ ಈಚಿನವರೆಂದು ಸಿದ್ಧವಾಗುತ್ತದೆ. ಧರ್ಮಕೀರ್ತಿಯು ಕ್ರಿ. ಶ. ೬೩೫ ರಿಂದ ೬೫೦ ರಲ್ಲಿ ಗ್ರಂಥರಚನೆ ಮಾಡಿದನೆಂದು ನಿಶ್ಚಿತವಾಗಿ ತಿಳಿದಿದೆ. ಆದ್ದರಿಂದ ಆಚಾರ್ಯರು ಈ ಕಾಲಕ್ಕಿಂತ ಮೊದಲೇ ಇರುವ ಸಂಭವವಿಲ್ಲ.

ಬೌದ್ಧ ಮತ್ತು ಜೈನ ಮತಗಳ ಗ್ರಂಥಕಾರರ ಕಾಲನಿರ್ಣಯದಲ್ಲಿ ಹೆಚ್ಚಿನ ತೊಡಕಿಲ್ಲ. ಏಕಂದರೆ, ಪ್ರಾಯೇಣ ಅವರು ತಮ್ಮ ಗ್ರಂಥರಚನೆಯ ಕಾಲವನ್ನು ಹೇಳಿಕೊಂಡಿರುತ್ತಾರೆ. ಅಲ್ಲದೆ ದಿಜ್ನಾಗನೆಂಬ ಬೌದ್ಧಾಚಾರ್ಯನ ಆಲಂಬನಪರೀಕ್ಷೆಯ ಆರನೇ ಕಾರಿಕೆಯಲ್ಲಿ 'ಯದಂತರ್ಜ್ಞೇಯರೂಪಂ ತದ್ಬಹಿರ್ವದವಭಾಸತೇ' ಎಂದಿದೆ. ಇದೇ ಮಾತು ಪೂರ್ವೋಕ್ತಸೂತ್ರಭಾಷ್ಯದಲ್ಲಿ ಅನೂದಿತವಾಗಿದೆ. ವಸುಬಂಧುವಿನ ಶಿಷ್ಯನಾದ ಈ ದಿಜ್ನಾಗನು ಕ್ರಿ.ಶ. ೫ ನೆಯ ಶತಮಾನದವನು. ಸೂತ್ರಭಾಷ್ಯವು ಈ ಸಮಯಕ್ಕಿಂತ ಹಿಂದಿನದಲ್ಲ. ಸೂತ್ರಭಾಷ್ಯದಲ್ಲಿ (೨-೨-೨೨)'ಬುದ್ಧಿಬೋಧ್ಯಂ ತ್ರಯಾದನ್ಯತ್ ಸಂಸ್ಕೃತಂ ಕ್ಷಣಿಕಂ ಚ ' ಎಂಬ ವಾಕ್ಯವು ಅನೂದಿತವಾಗಿದೆ. ಇದು ಗುಣಮತಿ ಎಂಬಾತನ ಅಭಿಧರ್ಮಕೋಶ ವ್ಯಾಖ್ಯಾನದಲ್ಲಿದೆ. ಗುಣಮತಿಯ ಕಾಲ ಕ್ರಿ. ಶ. ೬೩೦ ರಿಂದ ೬೪೦. ಆದ್ದರಿಂದ ಸೂತ್ರಭಾಷ್ಯವು ಇದಕ್ಕಿಂತ ಹಿಂದಿನದಲ್ಲ. ಅಲ್ಲಿಗೆ ಕ್ರಿ. ಶ. ೬೪೦ ರಿಂದ ಈಚೆಗೆ ಆಚಾರ್ಯರ ಕಾಲವೆಂದು ನಿಣಯವಾಯಿತು.

ಈಗ ಆಚಾರ್ಯರ ಉತ್ತರಕಾಲಾವಧಿ ಯಾವುದೆಂದು ಗೊತ್ತಾಗಬೇಕು. ಕುಮಾರಿಲಭಟ್ಟರು ಆಚಾರ್ಯರ ಸಮಕಾಲಿಕರೆಂದು ಪ್ರಸಿದ್ಧಿ ಇದೆ. ಈ ಮಾಧವೀಯ ಶಂಕರವಿಜಯದಲ್ಲಿ ಆ ಪ್ರಸಂಗ ಬಂದಿದೆ. ಅವರೀರ್ವರಿಗೆ ಭೇಟಿಯಾದಾಗ ಕುಮಾರಿಲಭಟ್ಟರು ಬಹಳ ವೃದ್ಧರಾಗಿದ್ದರು. ಶ್ರೀಶಂಕರರಿಗೆ ಆಗ ೧೬ -೧೭ ವರ್ಷ ಗಳಾಗಿರಬಹುದು. ಕುಮಾರಿಲರ ಕಾಲವು ಕ್ರಿ. ಶ. ೭ ನೆಯ ಶತಮಾನದ ಮಧ್ಯಭಾಗವೆಂದು ನಿಶ್ಚಿತವಾಗಿದೆ. ಟಿಬೆಟ್ಟಿನಲ್ಲಿ ಕ್ರಿ.ಶ. ೬೨೭ ರಿಂದ ಕ್ರಿ.ಶ. ೬೫೦ ವರೆಗೆ ರಾಜ್ಯಭಾರಮಾಡಿದ ಸಾಂಗ್-ಸಾನ್-ಗಾಂಪೋ ಎಂಬ ರಾಜನ ಸಮಕಾಲಿಕರು ಕುಮಾರಿಲರೆಂದು ಇತಿಹಾಸಜ್ಞರು ನಿರ್ಣಯಿಸಿದ್ದಾರೆ. ಕ್ರಿ.ಶ. ೬೫೦ ರಲ್ಲಿದ್ದ ಧರ್ಮಕೀರ್ತಿಯು ಬ್ರಾಹ್ಮಣಧರ್ಮದ ರಹಸ್ಯವನ್ನು ತಿಳಿಯವುದಕ್ಕಾಗಿ ವೇಷವನ್ನು ಬದಲಾಯಿಸಿಕೊಂಡು ಕುಮಾರಿಲರ ಸೇವಕನಾಗಿ ವರ್ತಿಸುತ್ತಿದ್ದನೆಂದು ತಿಳಿದು ಬಂದಿದೆ. ಆದ್ದರಿಂದ ಕುಮಾರಿಲಭಟ್ಟರು ಕ್ರಿ.ಶ. ೬೭೦ ರ ವರೆಗೂ ಇದ್ದಿರಬಹುದು. ಕುಮಾರಿಲಭಟ್ಟರ ಶಿಷ್ಯನಾದ ನಾಟಕಕಾರ ಭವಭೂತಿಯು ಕ್ರಿ.ಶ. ೭೦೦-೭೪೦ ರಲ್ಲಿದ್ದನು.

ಸೂತ್ರಭಾಷ್ಯಕ್ಕೆ ಭಾಮತೀ ಎಂಬ ವ್ಯಾಖ್ಯಾನವನ್ನು ಬರೆದ ಸುಪ್ರಸಿದ್ಧವಿದ್ವಾಂಸನಾದ ವಾಚಸ್ಪತಿ ಮಿಶ್ರನು ತನ್ನ ನ್ಯಾಯಸೂಚೀನಿಬಂಧವನ್ನು ಶಕ ೮೯೮ ರಲ್ಲಿ (ವಸ್ವಂಕವಸು ವತ್ಸರೇ) ಬರೆದೆನೆಂದು ಹೇಳಿದ್ದಾನೆ. ಇದು ವಿಕ್ರಮಶಕವೆಂದು ದೃಢಪ್ರಮಾಣಗಳಿಂದ ನಿಶ್ಚಿತವಾದದ್ದು. ಇದು ಕ್ರಿ.ಶ. ೮೪೧ ಆಗುತ್ತದೆ. ಆಚಾರ್ಯರ ಭಾಷ್ಯದ ಮೇಲೆ ಆಕ್ಷೇಪಗಳೆನ್ನೆತ್ತಿದ ಭಾಸ್ಕರಾಚಾರ್ಯನ ಮತವನ್ನು ವಾಚಸ್ಪತಿಮಿಶ್ರನು ಖಂಡಿಸಿದ್ದಾನೆ. ಅಲ್ಲದೆ ಕ್ರಿ.ಶ. ೮೦೦ ರಲ್ಲಿದ್ದ ಜೈನಾಚಾರ್ಯ ಪ್ರಭಾಚಂದ್ರನು ಭಾಸ್ಕರಾಚಾರ್ಯನ ಸಿದ್ಧಾಂತವನ್ನು ದೂಷಿಸಿದ್ದಾನೆ. ಅಲ್ಲಿಗೆ ಕ್ರಿ.ಶ. ೮೦೦ ಕ್ಕಿಂತ ಪೂರ್ವದಲ್ಲಿಯೇ ಭಾಸ್ಕರಾಚಾರ್ಯನಿದ್ದನೆಂದೂ ಆಗಲೇ ಆಚಾರ್ಯರ ಸೂತ್ರಭಾಷ್ಯವು ಪ್ರಸಿದ್ಧವಾಗಿತ್ತೆಂದೂ ಸ್ಪಷ್ಟವಾಗುತ್ತದೆ. ಆದ್ದರಿಂದ ಕ್ರಿ.ಶ. ೭೮೮-೮೨೦ ಆಚಾರ್ಯರ ಕಾಲವೆಂಬ ನವೀನರ ಸಿದ್ಧಾಂತವು ನಿರಾಕೃತವಾಗುತ್ತದೆ.

ಶ್ರೀದೇವೇಶ್ವರರ (ಸುರೇಶ್ವರಾಚಾರ್ಯರ) ಶಿಷ್ಯರಾದ ಸರ್ವಜ್ಞಾತ್ಮಮುನಿಗಳು 'ಸಂಕ್ಷೇಪಶಾರೀರಕ'ವನ್ನು ಮನುಕುಲಾದಿತ್ಯನ ಕಾಲದಲ್ಲಿ ರಚಿಸಿರುವುದಾಗಿ ಬರೆದು ಕೊಂಡಿದ್ದಾರೆ. ಮನುಕುಲಾದಿತ್ಯನು ಚಾಲುಕ್ಯವಂಶದ ಇಬ್ಬರು ವಿಕ್ರಮಾದಿತ್ಯರಲ್ಲಿ ಒಬ್ಬನು. ಎರಡನೆಯ ವಿಕ್ರಮಾದಿತ್ಯನೆಂದು ಭಾವಿಸಿದರೂ ಅವನ ಆಳ್ವಿಕೆ ಕ್ರಿ.ಶ. ೭೪೭ ಕ್ಕೆ ಅಂತ್ಯವಾಯಿತೆಂದು ಇತಿಹಾಸವು ದೃಢಪಡಿಸಿದೆ. ಸರ್ವಜ್ಞಾತ್ಮರ ಪರಮಗುರುಗಳಾಗಿರಬಹುದಾದ ಆಚಾರ್ಯರು ೩೦ ವರ್ಷಗಳಷ್ಟಾದರೂ ಹಿಂದಿನವರಾಗಿರಬೇಕು. ಅಲ್ಲಿಗೆ ೭ನೇ ಶತಕದ ಅಂತ್ಯಭಾಗದಲ್ಲಾದರೂ ಆಚಾರ್ಯರು ಇದ್ದಿರಬೇಕು.

ಕ್ರಿ.ಶ. ೧೬೩೮ ರಲ್ಲಿ ಬರೆಯಲ್ಪಟ್ಟ 'ದರ್ಶನಪ್ರಕಾಶ'ಎಂಬ ಗ್ರಂಥದಲ್ಲಿ 'ಶಂಕರ ಪದ್ಧತಿ' ಎಂಬ ಪ್ರಾಚೀನ ಹಸ್ತ ಪ್ರತಿಯ ಉಲ್ಲೇಖವಿದೆ. ಆದರಲ್ಲಿ ಶ್ರೀಶಂಕರರ ತಿರೋಧಾನವು ಶಕ ೬೪೨ (ಕ್ರಿ.ಶ. ೭೨೦) ಎಂದು ಬರೆದಿದೆಯಂತೆ.

ಅಲ್ಲದೆ ನಮ್ಮ ಶೃಂಗೇರಿಮಠದ ಗುರುಪರಂಪರೆಯ ಅನುಸಾರವಾಗಿ ಆಚಾರ್ಯ ಶಂಕರರ ಜನನವು ಚಾಲುಕ್ಯವಿಕ್ರಮಾಬ್ದ ೧೪ ಎಂದೂ ಇದು ಸರಿಯಾಗಿ ಕ್ರಿ.ಶ. ೬೮೪ ಆಗುತ್ತದೆಯೆಂದೂ ಶ್ರೀಬಲದೇವ ಉಪಧ್ಯಾಯರು 'ಶ್ರೀ ಶಂಕರಾಚಾರ್ಯರು'ಎಂಬ ತಮ್ಮಗ್ರಂಥದಲ್ಲಿ ಸಪ್ರಮಾಣವಾಗಿ ನಿರೂಪಿಸಿದ್ದಾರೆ. ಈ ಎಲ್ಲ ಕಾರಣಗಳಿಂದ ಶ್ರೀಶಂಕರರು ಕ್ರಿಸ್ತೀಯ ೭ ನೇ ಶತಕದ ಅಂತ್ಯಭಾಗದಲ್ಲಿದ್ದರೆಂಬುದು ದೃಢವಾಗುತ್ತದೆ. ಆದ್ದರಿಂದ ಕ್ರಿ. ಶ. ೬೮೮-೭೨೦ ಆಚಾರ್ಯರ ಸಮಯವೆಂದು ಸ್ವೀಕರಿಸುವುದು ನ್ಯಾಯಸಂಮತವೆಂದು ಸಂಶೋಧಕರ ನಿರ್ಣಯವಾಗಿದೆ. ಆಚಾರ್ಯರು ಕುಮಾರಿಲಭಟ್ಟರ ಅಂತ್ಯಕಾಲದಲ್ಲಿದ್ದವರಾದ್ದರಿಂದ, ಆಚಾರ್ಯರ ಕಾಲವನ್ನು ಇನ್ನೂ ಮೂವತ್ತು ವರ್ಷ ಹಿಂದಕ್ಕೆ ಹಾಕುವುದು ಯುಕ್ತವೆಂದು ನನಗೆ ತೋರುತ್ತದೆ. ಒಟ್ಟಿನಲ್ಲಿ ಭಗವತ್ಪಾದರು ಇಂದಿಗೆ ಸುಮಾರು ೧೩೦೦ ವರ್ಷಗಳಷ್ಟು ಪ್ರಾಚೀನರೆಂದು ನನ್ನ ಅಭಿಪ್ರಾಯವಾಗಿದೆ.

ಈ ಕಾಲನಿರ್ಣಯಕ್ಕಾಗಿ ಮೊದಲು ಉದಾಹರಿಸಿದ ನಾಲ್ಕುಗ್ರಂಥಗಳಿಂದ ಸಾಕಷ್ಟು ಸಾಮಗ್ರಿಗಳನ್ನು ಬಳಸಿಕೊಂಡಿದ್ದೇನೆ. ಇದಕ್ಕಾಗಿ ಆ ಗ್ರಂಥಕರ್ತರಿಗೆ ನನ್ನ ಕೃತಜ್ಞತೆಗಳನ್ನರ್ಪಿಸುತ್ತೇನೆ.

ಶ್ರೀ ಶಂಕರಾಚಾರ್ಯರ ಜನ್ಮ, ಮಾತಾಪಿತೃಗಳು

ಈಗ ಕೇರಳರಾಜ್ಯದಲ್ಲಿರುವ ಕಾಲಟಿ (ಕಾಲಡಿ) ಗ್ರಾಮವು ಆಚಾರ್ಯರ ಜನ್ಮಸ್ಥಳ. ಬಳಿಯಲ್ಲಿ ಪೂರ್ಣಾನದಿಯು ಹರಿಯುತ್ತಿದೆ. ಕೆಲವು ವರ್ಷಗಳ ಹಿಂದೆ ಈ ಭಾಗವು ಕಾಡಾಗಿತ್ತು. ಕ್ರಿ.ಶ. ೧೮೭೯ ರಿಂದ ೧೯೧೨ ರ ವರೆಗೂ ಶ್ರೀ ಶೃಂಗೇರಿ ಜಗದ್ಗುರು ಪೀಠದಲ್ಲಿ ವಿರಾಜಮಾನರಾಗಿದ್ದ ಶ್ರೀಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತೀ ಮಹಾಸ್ವಾಮಿಗಳು ಆಚಾರ್ಯರ ಮನೆಯಿದ್ದ ಸ್ಥಳವನ್ನು ಮಹಾಪ್ರಯತ್ನದಿಂದ ಗುರುತಿಸಿ ಆ ಸ್ಥಳದಲ್ಲಿ ಒಂದು ಭವ್ಯವಾದ ಶ್ರೀ ಮಠವನ್ನು ನಿರ್ಮಿಸಿದರು. ಅಲ್ಲದೆ ಶ್ರೀ ಶಂಕರರ ತಾಯಿಯ ವೃಂದಾವನವನ್ನು ಕಟ್ಟಿಸಿದರು.

ಈ ಸ್ಥಳದ ಪೂರ್ವಕಥೆ ಸುಂದರವಾಗಿದೆ. ಪರಿಶೋಧಕರು ಶ್ರೀ ಶಂಕರರ ಜನ್ಮಸ್ಥಳವನ್ನು ಕಂಡು ಹಿಡಿಯುವುದಕ್ಕೆ ಬಂದಾಗ ಕಾಡು ಪೊದೆಗಳ ನಡುವೆ ಒಂದು ಚಿಕ್ಕ ಗುಡಿ ಇತ್ತು. ಅಲ್ಲಿ ಮಿನುಗುತ್ತಿದ್ದ ದೀಪವನ್ನು ಕಂಡು ವಿಚಾರಿಸಿದಾಗ ಅರ್ಚಕನೂ ಕಾವಲುಗಾರರೂ ಹೀಗೆ ತಿಳಿಸಿದರು- " ಇದು ಶಂಕರಾಚಾರ್ಯರ ಮನೆಯಿದ್ದ ಸ್ಥಳ. ಅವರ ತಾಯಿಯ ದಹನಕ್ರಿಯೆ ಮನೆಯ ಅಂಗಳದ ಈ ಸ್ಥಳದಲ್ಲಿ ನಡೆಯಿತು. ದಹನಕ್ರಿಯೆಗೆ ನಮ್ಮ ಪೂರ್ವಜರು ಸಹಾಯಮಾಡಿದರು. ಆದ್ದರಿಂದ ಅವರಿಗೆ ಸುಮಾರು ೫೦-೬೦ ಎಕರೆಗಳಷ್ಟು ಜಮೀನನ್ನು ಕೊಟ್ಟು ಇಲ್ಲಿ ಪೂಜೆಮಾಡಿಕೊಂಡಿರಬೇಕೆಂದು ತಿಳಿಸಿದರು. ಅದನ್ನು ನಾವು ಯಥಾಶಕ್ತಿ ನಡೆಸಿಕೊಂಡು ಬರುತ್ತಿದ್ದೇವೆ". ಅನಂತರ ಶ್ರೀ ಶೃಂಗೇರಿಜಗದ್ಗುರುಗಳು ತಿರುವಾಂಕೂರು ಮಹಾರಾಜರ ಸಹಾಯವನ್ನು ಪಡೆದು ಅವರೆಲ್ಲರಿಗೂ ಬೇರೆಭೂಮಿಯನ್ನೂ ಪರಿಹಾರದ್ರವ್ಯವನ್ನೂಕೊಡಿಸಿ ಆ ಸ್ಥಳದಲ್ಲಿ ಹೊಸಕಟ್ಟಡಗಳನ್ನು ನಿರ್ಮಿಸಿದರು.

ಆಚಾರ್ಯರ ತಂದೆ ಶಿವಗುರು. ತಾಯಿ ಸತೀದೇವಿ. ಈಕೆಗೆ ಆರ್ಯಾಂಬಾ ಎಂಬ ಹೆಸರೂ ಇತ್ತು. ಶಿವಗುರು ಮತ್ತು ಆತನ ತಂದೆಯಾದ ವಿದ್ಯಾಧಿರಾಜ - ಇಬ್ಬರೂ ವಿಖ್ಯಾತವಿದ್ವಾಂಸರಾಗಿದ್ದರು. ಬಹಳ ಕಾಲ ಶಿವಗುರುವಿಗೆ ಸಂತತಿಯಾಗಲಿಲ್ಲ. ಆಗ ಶಿವಗುರು ಮತ್ತು ಆತನ ಪತ್ನಿ ಇಬ್ಬರೂ ಸಮೀಪದಲ್ಲಿದ್ದ ಶಿವಕ್ಷೇತ್ರವಾದ ತ್ರಿಚೂರಿಗೆ ಹೋಗಿ ತಪೋನಿರತರಾದರು. ಒಂದು ದಿನ ಕನಸಿನಲ್ಲಿ ಶಿವನು ಪ್ರತ್ಯಕ್ಷನಾಗಿ ಶಿವಗುರುವಿಗೆ ವರವನ್ನಿತ್ತನು. ವಿಶ್ವವಿಖ್ಯಾತನಾದ ಪುತ್ರನು ನಿನಗೆ ಜನಿಸುವನು. ಆದರೆ ಅವನ ಆಯುಸ್ಸು ಅಲ್ಪವಾಗಿರುತ್ತದೆ ಎಂದು ತಿಳಿಸಿದನು. ಪುತ್ರಸಂತತಿಯಾದರೆ ಸಾಕೆಂದು ಕಾದಿದ್ದ ದಂಪತಿಗಳು ಸಂತುಷ್ಟರಾಗಿ ಮನೆಗೆ ಬಂದರು. ಸ್ವಲ್ಪ ಕಾಲದಲ್ಲಿ ಸತೀದೇವಿಯು ಗರ್ಭಿಣಿಯಾಗಿ ಶುಭ ಮುಹೂರ್ತದಲ್ಲಿ ಗಂಡು ಶಿಶುವನ್ನು ಹೆತ್ತಳು.

ಈ ಶಿಶುವೇ ಶ್ರೀ ಶಂಕರರು. ಶಂಕರನ ಕೃಪೆಯಿಂದ ಜನಿಸಿದ ಕಾರಣ ಮಗುವಿಗೆ ಶಂಕರ ನೆಂದೇ ನಾಮಕರಣವಾಯಿತು.

ಈ ಮಾಧವೀಯ ಶಂಕರ ವಿಜಯದಲ್ಲಿ 'ಲಗ್ನೇ ಶುಭೇ ಶುಭಯುತೇ ಸುಷುವೇ ಕುಮಾರಂ' (೨-೭೧) ಎಂದು ಆಚಾರ್ಯರು ಜನಿಸಿದ ಶುಭಮುಹೂರ್ತವನ್ನು ಮಾತ್ರ ಹೇಳಿದ್ದಾರೆ. ಸಂವತ್ಸರಾದಿಗಳನ್ನು ತಿಳಿಸಿಲ್ಲ. ಸಂಪ್ರದಾಯದ ಪ್ರಕಾರ ಅದು ವೈಶಾಖಶುದ್ಧ ಪಂಚಮಿ.

ಆಚಾರ್ಯರ ಜನ್ಮಕುಂಡಲಿಯನ್ನು ಈ ರೀತಿಯಾಗಿ ಗುರುತಿಸಿದ್ದಾರೆ.

<table>
<tr><td></td><td>ರವಿ
ಬುಧ</td><td>ಶುಕ್ರ
ಲಗ್ನ</td><td>ರಾಹು</td></tr>
<tr><td></td><td colspan="2" rowspan="2">ಶ್ರೀಶಂಕರ</td><td>ಚಂದ್ರ</td></tr>
<tr><td>ಕುಜ</td><td></td></tr>
<tr><td>ಕೇತು</td><td>ಗುರು</td><td>ಶನಿ</td><td></td></tr>
</table>

ಶ್ರೀಶಂಕರರು ನಂಬೂದರಿ ಬ್ರಾಹ್ಮಣ ವರ್ಗದವರು. ಕೃಷ್ಣಯಜುರ್ವೇದಿಗಳೆಂದೂ ಅತ್ರಿಗೋತ್ರದವರೆಂದು ಪ್ರಸಿದ್ಧಿ ಇದೆ.

ವಿದ್ಯಾಭ್ಯಾಸ

ಶ್ರೀಶಂಕರರು ಬಾಲ್ಯದಲ್ಲಿಯೇ ಬಹಳ ಬುದ್ಧಿಶಾಲಿಗಳಾಗಿದ್ದರು. ಅವರಿಗೆ ಉಪನಯನವನ್ನು ಮಾಡಿ ವಿದ್ವಾಂಸನನ್ನಾಗಿ ಮಾಡಬೇಕೆಂದು ತಂದೆ ಶಿವಗುರುವಿನ ಸಂಕಲ್ಪವಿತ್ತು. ಆದರೆ ಮಗನಿಗೆ ಮೂರುವರ್ಷಗಳಾಗುತ್ತಿರುವಾಗಲೇ ಶಿವಗುರು ವಿಧಿವಶನಾದನು. ಏಕಾಕಿನಿ ಯಾದ ತಾಯಿ ಆರ್ಯಾಂಬೆ ಶ್ರೀಶಂಕರರಿಗೆ ಐದನೆಯ ವರ್ಷದಲ್ಲಿ ಉಪನಯನವನ್ನುಮಾಡಿಸಿ ಸಮೀಪದ ಗುರುಕುಲಕ್ಕೆ ಸೇರಿಸಿದಳು. ಏಕಸಂಧಿಗ್ರಾಹಿಗಳಾದ ಶ್ರೀಶಂಕರರು ತಮ್ಮ ಅನುಪಮವಾದ ಮೇಧಾ ಶಕ್ತಿಯಿಂದ ಸಮಸ್ತವೇದಗಳನ್ನೂ ಶೀಘ್ರವಾಗಿ ಕಲಿತು ಶಾಸ್ತ್ರಗಳಲ್ಲಿ ಅಸಾಧಾರಣ ಪಾಂಡಿತ್ಯವನ್ನು ಗಳಿಸಿದರು.

ಶ್ರೀ ಶಂಕರರು ಶಿವನ ಅವತಾರವೆಂದು ಎಲ್ಲ ಸಾಂಪ್ರದಾಯಿಕರೂ ಏಕಕಂಠದಿಂದ

ಹೇಳಿದ್ದಾರೆ. ಸಕಲ ದುರ್ಮತಗಳನ್ನು ಖಂಡಿಸಿ ವೈದಿಕ ಧರ್ಮವನ್ನು ಸ್ಥಾಪಿಸುವುದು ಅವತಾರದ ಉದ್ದೇಶವಾಗಿತ್ತೆಂದು ತಿಳಿಸಿದ್ದಾರೆ. ವಿದ್ಯಾರ್ಥಿಯಾಗಿದ್ದಾಗಲೇ ಕೆಲವು ಅದ್ಭುತ ಶಕ್ತಿಗಳನ್ನು ಪ್ರಕಟಿಸಿದರೆಂದು ಶಂಕರವಿಜಯಗಳಿಂದ ತಿಳಿದು ಬರುತ್ತದೆ. ಒಂದುದಿನ ಭಿಕ್ಷಾಟನೆಗಾಗಿ ಸಹಪಾಠಿಗಳೊಡನೆ ಹೋದಾಗ ಒಬ್ಬ ಬಡಬ್ರಾಹ್ಮಣನ ಪತ್ನಿಯು ಈ ತೇಜಸ್ವಿವಟುವಿಗೆ ಭಿಕ್ಷೆನೀಡಲು ಮನೆಯಲ್ಲಿ ಏನೂ ಇಲ್ಲವೆಂದು ಖಿನ್ನಳಾಗಿ ಒಂದು ನೆಲ್ಲಿಕಾಯಿಯನ್ನು ದೈನ್ಯದಿಂದ ಅರ್ಪಿಸಿದಳಂತೆ. ಅವಳ ಬಡತನಕ್ಕಾಗಿ ನೊಂದು ಶ್ರೀಶಂಕರರು ಲಕ್ಷ್ಮಿಯನ್ನು ಸ್ತೋತ್ರಮಾಡಿದರು. ಪರಿಣಾಮವಾಗಿ ಆ ಬ್ರಾಹ್ಮಣಿಯ ಮನೆಯು ಚಿನ್ನದ ನೆಲ್ಲಿಕಾಯಿಗಳಿಂದ ತುಂಬಿತು. ಆ ಸಮಯದಲ್ಲಿ ಆಚಾರ್ಯರು ಮಾಡಿದ ಸ್ತೋತ್ರಕ್ಕೆ ಕನಕಧಾರಾ ಸ್ತೋತ್ರವೆಂದು ಹೆಸರಿದೆ. ಶ್ರೀಶಂಕರರು ಭಿಕ್ಷೆಗೆಹೋದ ಸ್ಥಳವೆಂದು ಕಾಲಟಿಗೆ ಸಮೀಪದಲ್ಲಿರುವ 'ಪೊನ್ನರ್ ತೋಡತ' ಎಂಬ ಹಳ್ಳಿಯನ್ನು ಈಗಲೂ ಜನರು ತೋರಿಸುತ್ತಾರೆ. ಅಲ್ಲಿ ಎರಡು ಕುಟುಂಬಗಳು ಇಂದಿಗೂ ಶ್ರೀಮಂತವಾಗಿವೆ. ಆ ಮನೆಗೆ 'ಸ್ವರ್ಣತ್ತಿಲ್ಲಂ' ಎಂದು ಈಗಲೂ ಹೆಸರಿದೆ.

ಶ್ರೀಶಂಕರರು ವೇದಶಾಸ್ತ್ರಗಳ ಅಧ್ಯಯನವನ್ನು ಮುಗಿಸಿ ಗುರುಕುಲದಿಂದ ಬಂದು ಮನೆಯಲ್ಲಿಯೇ ಅಧ್ಯಾಪನಕಾರ್ಯವನ್ನು ನಡೆಸುತ್ತಿದ್ದರು. ಆ ವಟುವಿನ ಮಹಿಮೆಯನ್ನು ಕೇಳಿ ಕೇರಳದ ರಾಜನಾದ ರಾಜಶೇಖರನೆಂಬವನು ಅರಮನೆಗೆ ಆಮಂತ್ರಿಸುವುದಕ್ಕಾಗಿ ತನ್ನ ಮಂತ್ರಿಯನ್ನು ಕಳುಹಿಸಿಕೊಟ್ಟನು. ಕಾಣಿಕೆಯಾಗಿ ಸಮರ್ಪಿಸಬೇಕೆಂದು ವಿಪುಲ ಸುವರ್ಣನಾಣ್ಯಗಳನ್ನು ಕಳಿಸಿದ್ದನು. ಈ ಅಲೌಕಿಕ ವಟು ಚಿನ್ನದನಾಣ್ಯಗಳ ಸ್ಪರ್ಶವನ್ನೂ ಮಾಡಲಿಲ್ಲ. ಅರಮನಗೆ ಬರಬೇಕೆಂಬ ಆಮಂತ್ರಣವನ್ನೂ ಸ್ವೀಕರಿಸಲಿಲ್ಲ ಕಡೆಗೆ ರಾಜನೇ ಸ್ವತಃ ಬಂದನು. ತಾನು ಬರೆದ ಕೆಲವು ನಾಟಕಗಳನ್ನು ಓದಿಹೇಳಿದನು. ಶ್ರೀಶಂಕರರು ರಾಜನನ್ನು ಸತ್ಕರಿಸಿ ಆದರದಿಂದ ವಾಪಸು ಕಳಿಸಿದರು.

ಮಾತೃಭಕ್ತಿ

ಶ್ರೀಶಂಕರರಿಗೆ ತಮ್ಮ ತಾಯಿಯಲ್ಲಿ ಅತಿಶಯವಾದ ಭಕ್ತಿ ಇತ್ತು. ಒಂದುದಿನ ಆರ್ಯಾಂಬೆ ದೂರದ ಪೂರ್ಣಾನದಿಗೆ ಹೋಗಿ ಸ್ನಾನಮಾಡಿ ನೀರನ್ನು ಹೊತ್ತುತರುತ್ತಿದ್ದಳು. ಬಿಸಿಲಿನ ತಾಪಕ್ಕೆ ಬಳಲಿದ ಆ ವೃದ್ಧೆ ದಾರಿಯಲ್ಲಿ ಆಯಾಸಪಡುತ್ತಿದ್ದಳು. ಒಡನೆಯೇ ಶಂಕರರು ಓಡಿಹೋಗಿ ತಾಯಿಯನ್ನು ಶ್ರಮದಿಂದ ಕರೆತಂದು ಮನೆಯಲ್ಲಿ ಉಪಚರಿಸಿದರು. ತಾಯಿಯ ಕರುಣಾಜನಕ ಸ್ಥಿತಿಯಿಂದ ನೊಂದು ರಾತ್ರಿಯೆಲ್ಲ ತಮ್ಮ ಕುಲದೇವತೆಯಾದ ಶ್ರೀಕೃಷ್ಣನನ್ನು ಪ್ರಾರ್ಥಿಸುತ್ತಿದ್ದರು. ಪ್ರಾತಃಕಾಲದಲ್ಲಿ ಎಲ್ಲರೂ ಆಶ್ಚರ್ಯದಿಂದ ನೋಡುತ್ತಾರೆ, ಪೂರ್ಣಾನದಿ ತನ್ನ ಪಾತ್ರವನ್ನು ಬದಲಾಯಿಸಿ ಮನೆಯ ಬಳಿಯಲ್ಲಿಯೇಹರಿಯುತ್ತಿದೆ! ಈಗಲೂ ಆ ನದಿಯು ವಿಚಿತ್ರಗತಿಯಿಂದ ತಿರುಗಿ ಬಂದು ಮನೆಯ ಬಳಿ ಹರಿಯುವುದನ್ನು ನೋಡಬಹುದು.

ಆತುರಸಂನ್ಯಾಸ

ಒಂದು ದಿನ ಅಗಸ್ತ್ಯ, ದಧೀಚಿ, ತ್ರಿತಲರೇ ಮೊದಲಾದ ಋಷಿಗಳು ಶಂಕರರನ್ನು ಕಾಣಲು ಬಂದರು. ತಾಯಿಯು ಮಗನ ಆಯುಸ್ಸು ಎಷ್ಟೆಂದು ವಿಚಾರಿಸಿದಳು. ಅಗಸ್ತ್ಯರು 'ಈ ಬಾಲಕನ ಆಯುಸ್ಸು ಎಂಟು ವರ್ಷ. ಕಾರಣಾಂತರದಿಂದ ಇನ್ನೆಂಟು ವರ್ಷಲಭಿಸುತ್ತದೆ. ಒಟ್ಟು ಹದಿನಾರು ವರ್ಷ ಆಯುಸ್ಸು' ಎಂದು ಹೇಳಿದಮೇಲೆ ಎಲ್ಲರೂ ಹೊರಟುಹೋದರು. ತಾಯಿಯ ಶೋಕಕ್ಕೆ ಪಾರವಿಲ್ಲವಾಯಿತು.

ಶ್ರೀಶಂಕರರಿಗೆ ತಾವು ಸಂನ್ಯಾಸಿಗಳಾಗಬೇಕೆಂದು ಪ್ರಬಲವಾದ ಇಚ್ಛೆಇತ್ತು. ಒಂದು ದಿನ ಇದನ್ನು ತಮ್ಮ ತಾಯಿಗೆ ನಿವೇದಿಸಿದಾಗ ಅವಳು ಅದಕ್ಕೆ ಒಪ್ಪಲಿಲ್ಲ. ತಾಯಿಯ ಒಪ್ಪಿಗೆಯಿಲ್ಲದೆ ಸಂನ್ಯಾಸವನ್ನು ಸ್ವೀಕರಿಸಿಲು ಶಂಕರರಿಗೆ ಮನಸ್ಸಾಗಲಿಲ್ಲ. ದೈವಯೋಗದಿಂದ ಅವರಿಗೆ ಅನುಕೂಲವಾದ ಒಂದು ಘಟನೆ ನಡೆಯಿತು. ಶಂಕರರು ಸ್ನಾನಕ್ಕಾಗಿ ಪೂರ್ಣಾನದಿಗೆ ಹೋಗಿ ನೀರಿನಲ್ಲಿಳಿದಾಗ ಒಂದು ಮೊಸಳೆ ಅವರ ಕಾಲನ್ನು ಹಿಡಿದು ಜಗ್ಗಲಾರಂಭಿಸಿತು. ಶಂಕರರು ತಾಯಿಗೆ ಕೇಳಿಸುವಂತೆ ಕೂಗಿಕೊಂಡರು. ಆರ್ಯಾಂಬೆ ಓಡುತ್ತ ಹೋಗಿ ಮಗನ ದುರವಸ್ಥೆಯನ್ನು ನೋಡಿ ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು. ಆಗ ಶಂಕರರು 'ಅಮ್ಮ, ನನಗೆ ಸಂನ್ಯಾಸವನ್ನು ಸ್ವೀಕರಿಸಲು ಅಪ್ಪಣೆಯನ್ನು ಕೊಡು. ನಾನು ಸಂನ್ಯಾಸಿಯಾದರೆ ಬದುಕುವ ಸಂಭವ ಇದೆ' ಎಂದು ಕೂಗಿಹೇಳಿದರು. ಹೇಗಾದರೂ ಮಗನು ಬದುಕಿದರೆ ಸಾಕೆಂದು ತಾಯಿ ಒಪ್ಪಿದಳು. ಶಂಕರರು ಪ್ರೈಷೋಚ್ಚಾರಣೆಮಾಡಿ ಆತುರಸಂನ್ಯಾಸವನ್ನು ಸ್ವೀಕರಿಸಿದರು. ಮೊಸಳೆ ಅವರನ್ನು ಬಿಟ್ಟಿತು. ಶಂಕರರು ದಡಕ್ಕೆ ಬಂದು ತಾಯಿಯನ್ನು ಸಂತೈಸಿದರು. ಇದರಿಂದ ಅವರಿಗೆ ಇನ್ನೂ ಎಂಟು ವರ್ಷಗಳ ಆಯುಸ್ಸು ಲಭ್ಯವಾಯಿತು. ಪ್ರಾಯಶಃ ಸಂನ್ಯಾಸವು ನೂತನ ಜನ್ಮವೆಂದು ಗ್ರಂಥಕಾರರ ಅಭಿಪ್ರಾಯವಿರಬಹುದು.

ಮುಂದಿನ ವ್ಯವಸ್ಥೆ ಹೇಗೆ? ಶಂಕರರು ವಿಧಿಪೂರ್ವಕವಾಗಿ ಕ್ರಮಸಂನ್ಯಾಸವನ್ನು ಒಬ್ಬಗುರುವಿನಿಂದ ಸ್ವೀಕರಿಸಲುದ್ದೇಶಿಸಿ ಮನೆಯಿಂದ ಹೊರಡಲು ಸಂಸಿದ್ಧರಾದರು. ದಿಕ್ಕುಗಾಣದೆ ಗೋಳಾಡುತ್ತಿದ್ದ ತಾಯಿಗೆ ಸಮಾಧಾನ ಹೇಳಿ, ಆಕೆಯು ನೆನಿಸಿಕೊಂಡಾಗ ಮತ್ತೆ ಬಂದು ಕಾಣುವುದಾಗಿ ಮಾತು ಕೊಟ್ಟರು. ತಾಯಿಯ ಬಯಕೆಯಂತೆ ಮುಂದೆ ಅವಳ ಮೃತಸಂಸ್ಕಾರವನ್ನು ತಾವೇ ಮಾಡುವುದಾಗಿ ಪ್ರತಿಜ್ಞೆಮಾಡಿದರು. ಮನೆಯಲ್ಲಿ ಬಡತನವೇನೂ ಇರಲಿಲ್ಲ. ಹಿರಿಯರಿಂದ ಬಂದ ಆಸ್ತಿ, ಸಂಪತ್ತು ಯಥೇಷ್ಟವಾಗಿತ್ತು. ಅದೆಲ್ಲದರ ಮೇಲ್ವಿಚಾರಣೆಯನ್ನು ಬಂಧುಗಳಿಗೆ ಒಪ್ಪಿಸಿ, ಏಕಾಕಿನಿಯಾದ ತಮ್ಮ ತಾಯಿಯ ಯೋಗಕ್ಷೇಮಗಳನ್ನು ಸರಿಯಾಗಿ ನೋಡಿಕೊಳ್ಳುವಂತೆ ಏರ್ಪಡಿಸಿ, ತಾಯಿಯ ಅನುಜ್ಞೆಯನ್ನು ಪಡೆದು ಮನೆಯಿಂದ ನಿರ್ಗಮಿಸಿದರು.

ಗುರುವಿನ ಅನ್ವೇಷಣೆ

ಹೀಗೆ ಪರಿವ್ರಾಜಕರಾದ ಆಚಾರ್ಯರು ವಿಧಿಪೂರ್ವಕಸಂನ್ಯಾಸ ಗ್ರಹಣಕ್ಕಾಗಿಯೂ ಸಂಪ್ರದಾಯಾನುಸಾರವಾಗಿ ವೇದಾಂತವನ್ನು ಅಧ್ಯಯನಮಾಡುವುದಕ್ಕಾಗಿಯೂ ಯೋಗ್ಯನೂ ಸಮರ್ಥನೂ ಆದ ಗುರುವನ್ನು ಹುಡುಕುತ್ತ ಉತ್ತರದಿಕ್ಕಿಗೆ ಹೊರಟರು. ಆಗ ಆಚಾರ್ಯರಿಗೆ ಎಂಟುವರ್ಷ ವಯಸ್ಸೆಂಬುದನ್ನುನೆನಪಿನಲ್ಲಿಡಬೇಕು. ಗೋವಿಂದಭಗತ್ಪಾದ ರೆಂಬ ಮಹಾಯೋಗಿಗಳೋರ್ವರು ನರ್ಮದಾತೀರದಲ್ಲಿದ್ದಾರೆಂಬುದನ್ನು ಕೇಳಿ, ಬಹುಶ್ರಮದಿಂದ ಹುಡುಕಿ ಅವರ ಆಶ್ರಮಕ್ಕೆ ಹೋದರು. ಆಶ್ರಮದ ಗುಹೆಯೊಂದರಲ್ಲಿ ಸಮಾಧಿಸ್ಥರಾಗಿದ್ದ ಗೋವಿಂದಯೋಗಿಗಳು ಆಗಷ್ಟೇ ಬಹಿರ್ಮುಖರಾಗಿದ್ದರು. ಆಚಾರ್ಯರು ಅವರನ್ನು ಸ್ತುತಿಸುತ್ತ ಗುಹೆಗೆ ಪ್ರದಕ್ಷಿಣೆಮಾಡಿ ಸಾಷ್ಟಾಂಗ ನಮಸ್ಕಾರಮಾಡಿದರು. ಗೋವಿಂದಭಗವತ್ಪಾದರು 'ನೀನು ಯಾರು?' ಎಂದು ವಿಚಾರಿಸಿದರು. ಶ್ರೀಶಂಕರರ ಸಮರ್ಥವೂ ವಿನಯಪೂರ್ಣವೂ ಆದ ಉತ್ತರಗಳಿಂದ ಸಂತುಷ್ಟರಾಗಿ ಅವರಿಗೆ ಕ್ರಮಬದ್ಧವಾದ ಸಂನ್ಯಾಸದೀಕ್ಷೆಯನ್ನಿತ್ತರು. ಆಚಾರ್ಯರು ಆಶ್ರಮವಾಸಿಗಳಾಗಿದ್ದು ಗುರುಶುಶ್ರೂಷೆಮಾಡುತ್ತ ಸಂಪ್ರದಾಯಪೂರ್ವಕವಾಗಿ ವೇದಾಂತದ ರಹಸ್ಯಾರ್ಥಗಳನ್ನು ತಿಳಿದುಕೊಂಡರು. ಶ್ರೀ ಗೋವಿಂದಭಗವತ್ಪಾದರು ಸುಪ್ರಸಿದ್ಧರಾದ ಶ್ರೀ ಗೌಡಪಾದಾಚಾರ್ಯರ ಸಾಕ್ಷಾತ್ ಶಿಷ್ಯರು.

ಕೆಲವು ವರ್ಷಗಳವರೆಗೆ ಆಚಾರ್ಯರು ಗೋವಿಂದಭಗವತ್ಪಾದರ ಶಿಷ್ಯರಾಗಿದ್ದರೆಂದು ಕಾಣುತ್ತದೆ. ಆಚಾರ್ಯರಿಗೆ ನಾನಾಶಾಸ್ತ್ರಗಳಲ್ಲಿದ್ದ ಅದ್ವಿತೀಯ ಪಾಂಡಿತ್ಯವನ್ನು ಕಂಡು ಪರಮ ಸಂತುಷ್ಟರಾದ ಗೋವಿಂದಯೋಗಿಗಳು ಶ್ರೀಶಂಕರರನ್ನು ಕುರಿತು "ವತ್ಸ , ನಿನ್ನಿಂದ ಮಹತ್ತರವಾದ ಕಾರ್ಯವಾಗಬೇಕಾಗಿದೆ. ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆಗಳಿಗೆ ಉತ್ತಮವಾದ ಭಾಷ್ಯಗ್ರಂಥ'ಗಳಿಲ್ಲ. ಇತತಕ್ಕ ಕೆಲವು ವ್ಯಾಖ್ಯಾನಗಳು ಸಂಪ್ರದಾಯಶುದ್ಧಿಯಿಲ್ಲದ್ದರಿಂದ ಅಲ್ಲಲ್ಲಿ ದಾರಿತಪ್ಪಿವೆ. ಅವೆಲ್ಲವನ್ನೂ ಸರಿಪಡಿಸಿ ಪ್ರತಿವಾದಿಗಳಿಗೆ ಯೋಗ್ಯವಾದ ಉತ್ತರವನ್ನಿತ್ತು ವೈದಿಕ ಧರ್ಮವನ್ನು ಪ್ರತಿಷ್ಠಾಪಿಸಬೇಕಾಗಿದೆ. ಸಮ್ಯಗ್ ದರ್ಶನವಾದ ಅದ್ವೈತ ಸಿದ್ಧಾಂತದ ಮರ್ಮವನ್ನರಿಯದೆ, ಇದನ್ನು ದೂಷಿಸತಕ್ಕವರ ಸಂಖ್ಯೆಬೆಳೆಯುತ್ತಿದೆ. ಇದಕ್ಕೆ ತಡೆಹಾಕಲೇಬೇಕು. ಈ ಮಹಾಕಾರ್ಯವನ್ನು ನಡೆಸಲು ನೀನು ದಕ್ಷನಾಗಿದ್ದೀಯೆ. ಆದ್ದರಿಂದ ನೀನು ಕಾಶೀನಗರಕ್ಕೆಹೋಗು. ಪ್ರಸ್ಥಾನತ್ರಯ ಭಾಷ್ಯಗಳನ್ನು ರಚಿಸಿ ವೇದಾಂತದ ಸಾರವಾದ ಅದ್ವೈತಸಿದ್ಧಾಂತವನ್ನು ಪ್ರತಿಷ್ಠಾಪಿಸು" ಎಂದು ತಿಳಿಸಿದರು. ಗುರುಗಳ ಆಜ್ಞೆಯನ್ನು ಪಡೆದು ಶ್ರೀಶಂಕರಾಚಾರ್ಯರು ಕಾಶೀನಗರದ ಕಡೆಗೆ ಪ್ರಯಾಣ ಮಾಡಿದರು.

ಇದಿಷ್ಟು ಅವಶ್ಯ ತಿಳಿರಬೇಕಾದ ಪೂರ್ವಕಥಾವೃತ್ತಾಂತ. ಇದರ ಮುಂದಿನ ವೃತ್ತಾಂತವು ಮಹತ್ತರವೂ ಮಹಿಮಾನ್ವಿತವೂ ಆದುದು. ಅದು ವಿಸ್ತಾರವಾದ್ದರಿಂದ ದ್ವಿತೀಯಭಾಗದ

ಪ್ರಸ್ತಾವನೆಯಲ್ಲಿ ಬರೆಯಲಾಗುವುದು.

ಗ್ರಂಥ ಮತ್ತು ಗ್ರಂಥಕರ್ತೃ

ಈ ಶಂಕರದಿಗ್ವಿಜಯವು ಹದಿನಾರು ಸರ್ಗಗಳಿಂದ ಕೂಡಿದ ಒಂದು ಮಹಾಕಾವ್ಯ. ಪ್ರತಿಯೊಂದು ಸರ್ಗದ ಕಡೆಯಲ್ಲಿಯೂ -

ಇತಿ ಶ್ರೀಮಾಧವೀಯೇ ತದುಪೋದ್ಘಾತಕಥಾ ಪರಃ |
ಸಂಕ್ಷೇಪಶಂಕರಜಯೇ ಸರ್ಗೋಽಯಂ ಪ್ರಥಮೋಽಭವತ್||

ಎಂಬ ಆಕಾರದ ಶ್ಲೋಕಗಳಿದ್ದು, ಸರ್ಗಸಂಖ್ಯೆಯನ್ನೂ ಆ ಸರ್ಗದ ಕಥಾಸಾರವನ್ನು ತಿಳಿಸಲಾಗಿದೆ. 'ಸಂಕ್ಷೇಪಶಂಕರಜಯ' ಎಂದು ಕವಿಯು ಮಾಡಿದ ನಾಮಕರಣ. ಇದೇ 'ಮಾಧವೀಯ ಶಂಕರವಿಜಯ''ಶ್ರೀ ಶಂಕರ ದಿಗ್ವಿಜಯ' ಎಂಬ ಹೆಸರಿನಿಂದ ವಿಖ್ಯಾತವಾಗಿದೆ. ಮಾಧವ ಎಂಬ ಕವಿಯಿಂದ ಇದು ರಚಿತವಾಗಿದೆಯೆಂಬುದು ಸ್ಪಷ್ಟವಾದ ವಿಚಾರ. ಇದರಲ್ಲಿ ವಿವಾದವೇನೂ ಇಲ್ಲ.

ಆದರೆ ಮಾಧವ ಎಂದರೆ ಯಾರು? ಈ ಹೆಸರಿನಿಂದ ಖ್ಯಾತರಾದವರು ಇತಿಹಾಸದಲ್ಲಿ ಮೂವರು ಇದ್ದಾರೆ. ವಿಜಯನಗರದ ಸಂಸ್ಥಾಪಕರಾಗಿ ಮಹಾವಿದ್ವಾಂಸರೆಂದೂ ಜ್ಞಾನಿಗಳೆಂದೂ ಸುಪ್ರಸಿದ್ಧರಾದ ಶ್ರೀವಿದ್ಯಾರಣ್ಯಯತಿಗಳೊಬ್ಬರು. ಇವರಿಗೆ ಪೂರ್ವಾಶ್ರಮದಲ್ಲಿ ಮಾಧವ ಎಂದು ಹೆಸರು. ಆ ಕಾಲದಲ್ಲಿಯೇ ಬುಕ್ಕರಾಜನ ಮಂತ್ರಿಯಾಗಿದ್ದ ಮಾಧವಮಂತ್ರಿಯೊಬ್ಬನು. ಶ್ರೀವಿದ್ಯಾರಣ್ಯರ ತಮ್ಮಂದಿರಾದ ಸಾಯಣಾಚಾರ್ಯರ ಮಗನಾದ ಮಾಧವ ನೊಬ್ಬನು. ಈಮೂವರೂ ವಿದ್ವಾಂಸರೇ ಆಗಿದ್ದರು. ಆದರೆ ವಿದ್ಯಾರಣ್ಯರು ಅತಿಶಯ ಕೀರ್ತಿಶಾಲಿಗಳು. ಸಾಯಣಾಚಾರ್ಯರ ಮಗನು ಚಿಕ್ಕವನು. ಅವನು ಪಂಡಿತನಾಗಿದ್ದರೂ ಇತಿಹಾಸದಲ್ಲಿ ಅಷ್ಟು ಪ್ರಸಿದ್ಧನಲ್ಲ. ಈ ಗ್ರಂಥವನ್ನು ವಿದ್ಯಾರಣ್ಯಸ್ವಾಮಿಗಳು ರಚಿಸಿದ್ದಾರೆಂದು ಲೋಕಪ್ರಸಿದ್ಧಿಯುಂಟು. ಶ್ರೀಶೃಂಗೇರಿಮಠದ ಸಂಪ್ರದಾಯವು ಇದನ್ನು ವಿದ್ಯಾರಣ್ಯರಚಿತವೆಂದು ಆದರಿಸಿದೆ. ಭಕ್ತಜನರು ಪೂಜಾಪಾರಾಯಣಾದಿಗಳಿಗೆ, ಇನ್ನೂ ಅನೇಕ ಶಂಕರವಿಜಗಳಿದ್ದರೂ, ಇದನ್ನೇ ಬಳಸುತ್ತಿದ್ದಾರೆ. ಅದಕ್ಕೆ ಕಾರಣ ಶ್ರೀವಿದ್ಯಾರಣ್ಯರ ಪುಣ್ಯನಾಮ. ಶ್ರೀಶಂಕರಾಚಾರ್ಯರ ಚರಿತೆಯನ್ನು ವರ್ಣಿಸುವ ಎಷ್ಟೋ ಶಂಕರ ವಿಜಯಗಳೂ ಇತರ ಗ್ರಂಥಗಳೂ ಇವೆ. ಆದರೆ ಮಾಧವೀಯ ಶಂಕರ ವಿಜಯಕ್ಕೆ ಯಾವುದೂ ಸಮವಲ್ಲ. ಆಚಾರ್ಯಚರಿತೆಯನ್ನು ಇಷ್ಟು ಸಮಗ್ರವಾಗಿ, ಇಷ್ಟುವಿಶಾಲವಾಗಿ, ಇಷ್ಟು ಸುಂದರವಾಗಿ, ವಿಶದವಾದ ಶಾಸ್ತ್ರವಿಚಾರಗಳನ್ನೊಳಗೊಂಡು, ಈ ಪ್ರೌಢಶೈಲಿಯಲ್ಲಿ ವರ್ಣಿಸುವ ಇನ್ನೊಂದು ಗ್ರಂಥವಿಲ್ಲ. ಪೂರ್ವೋಕ್ತ ಮಾಧವತ್ರಯರಲ್ಲಿ ವಿದ್ಯಾರಣ್ಯರು ಅಸದೃಶರಾದ್ದರಿಂದ, ಅಸದೃಶವಾದ ಈ ಶಂಕರ ವಿಜಯವು ಶ್ರೀವಿದ್ಯಾರಣ್ಯರಚಿತವೆಂದು ಜನತೆಯು ನಂಬಿರುವುದು

ಸಹಜವೇ.

ಆದರೆ ಇತಿಹಾಸವಿಮರ್ಶಕರು ಬಿಡಬೇಕಲ್ಲ ! ಅವರಲ್ಲಿ ಅನೇಕ ವಿದ್ವಾಂಸರು ಈ ಗ್ರಂಥವು ವಿದ್ಯಾರಣ್ಯರಚಿತ ವಲ್ಲವೆಂದು ವಾದಿಸುತ್ತಾರೆ.

ಅವರು ಮುಂದಿಡುವ ಕಾರಣಗಳಿವು -

೧. ಶೃಂಗೇರಿಯಲ್ಲಿ ಪೀಠಾಧ್ಯಕ್ಷರಾಗಿದ್ದ ಶ್ರೀ ಸಚ್ಚಿದಾನಂದ ಭಾರತೀಸ್ವಾಮಿಗಳ ಅಪ್ಪಣೆಯಂತೆ ಕಾಶೀಲಕ್ಷ್ಮಣಶಾಸ್ತ್ರಿಗಳು ಗುರುವಂಶಕಾವ್ಯವೆಂಬ ಗ್ರಂಥವನ್ನು ಬರೆದಿದ್ದಾರೆ. ಅದರಲ್ಲಿರುವ ಶಂಕರ ಚರಿತ್ರೆಗೂ ಮಾಧವೀಯದಲ್ಲಿರುವ ಶಂಕರ ಚರಿತ್ರೆಗೂ ವ್ಯತ್ಯಾಸವೂ ವಿರೋಧವೂ ಇದೆ. ವಿದ್ಯಾರಣ್ಯರು ಬರೆದ ಗ್ರಂಥಕ್ಕೆ ವಿರುದ್ಧವಾಗಿ ಶೃಂಗೇರಿಮಠದವರು ಶಂಕರಚರಿತೆಯನ್ನು ಬರೆಸಿದರೆಂಬುದು ವಿಶ್ವಸನೀಯವಲ್ಲ.

೨. ಗ್ರಂಥಕರ್ತನು 'ಪ್ರೌಢೋಽಯಂ ನವಕಾಲಿದಾಸಕವಿತಾಸಂತಾನಸಂತಾನಕಃ' 'ವಾಗೇಷಾ ನವಕಾಲಿದಾಸವಿದುಷಃ' ಎಂದು ತನ್ನನ್ನು ನವಕಾಲಿದಾಸನೆಂದು ಹೊಗಳಿಕೊಂಡಿದ್ದಾನೆ. ಮಾಧವಾ ಚಾರ್ಯರಿಗೆ ಈ ಬಿರುದು ಇದ್ದುದಕ್ಕೆ ಆಧಾರವಿಲ್ಲ.

೩. ರಾಜಚೂಡಮಣಿ ದೀಕ್ಷಿತನ ಶಂಕರಾಭ್ಯುದಯದ ನಾಲ್ಕನೆಯ ಸರ್ಗದಲ್ಲಿರುವ ೨೪ ಶ್ಲೋಕಗಳು ಮಾಧವೀಯದ ೧೨ನೆಯ ಸರ್ಗದ ಆದಿಯಲ್ಲಿವೆ. ಈ ದೀಕ್ಷಿತನ ಕಾಲ ಹದಿನೇಳನೆಯ ಶತಮಾನ. ವಿದ್ಯಾರಣ್ಯರು ಹದಿನಾಲ್ಕನೆಯ ಶತಮಾನದವರು. ಇಲ್ಲಿ ಗ್ರಂಥಚೌರ್ಯನಡೆದಿದೆ. ಆದ್ದರಿಂದ ೧೭ನೇ ಶತಮಾನದ ಈಚಿನ ಕವಿ ಶಂಕರವಿಜಯವನ್ನು ಬರೆದವನು.

೪. ಶ್ರೀಶಂಕರರಿಗಿಂತ ಪೂರ್ವಕಾಲದಲ್ಲಿ ಬಾಣ, ದಂಡಿ, ಮಯೂರ - ಎಂಬ ಕವಿಗಳಿದ್ದರು. ಆಚಾರ್ಯರ ಉತ್ತರ ಕಾಲದಲ್ಲಿ ಭಟ್ಟಭಾಸ್ಕರ, ಶ್ರೀಹರ್ಷ, ಅಭಿನವಗುಪ್ತ - ಮೊದಲಾದವರಿದ್ದರು. ಇವರೊಡನೆ ಆಚಾರ್ಯರು ವಾದಮಾಡಿದಂತೆ ಗ್ರಂಥಕಾರನು ಬರೆದಿದ್ದಾನೆ. ವಿದ್ಯಾರಣ್ಯರಂಥ ಮಹಾನುಭಾವರು ಅವರನ್ನು ಸಮಕಾಲಿಕರನ್ನಾಗಿ ಪರಿಗಣಿಸಿದರೆಂಬುದು ಯುಕ್ತವಲ್ಲ.

೫. ವಿದ್ಯಾರಣ್ಯರ ಗ್ರಂಥಗಳೆಂದು ಪರಿಗಣಿತವಾದ ಪುಸ್ತಕಗಳ ಪಟ್ಟಿಯಲ್ಲಿ ಶಂಕರ ವಿಜಯವನ್ನು ಯಾರೂ ಸೇರಿಸಿಲ್ಲ.

೬. ಈ ಗ್ರಂಥದಲ್ಲಿ ಅನೇಕ ವ್ಯಾಕರಣ ದೋಷಗಳಿವೆ. ವಿದ್ಯಾರಣ್ಯರಂಥ ಪಂಡಿತೋತ್ತಮರು ಅಪಶಬ್ದಗಳನ್ನು ಪ್ರಯೋಗಿಸಲಾರರು.

ಈ ಶಂಕರವಿಜಯವು ವಿದ್ಯಾರಣ್ಯಕೃತವಲ್ಲವೆಂದು ವಾದಿಸುವ ವಿಮರ್ಶಕರು ಮಾಡುವ ಆಕ್ಷೇಪಗಳು ಇವು. ಇವುಗಳಿಗೆ ಉತ್ತರವನ್ನೀಯುವುದೇನೂ ಕಷ್ಟವಲ್ಲ. ಈ ಆಕ್ಷೇಪಗಳಿಗೆ

ಅನುಕ್ರಮವಾಗಿ ಉತ್ತರಗಳು -

೧. ಕಾಶೀಲಕ್ಷ್ಮಣ ಶಾಸ್ತ್ರಿಗಳು ಶೃಂಗೇರಿಮಠದ ಆಶ್ರಿತ ವಿದ್ವಾಂಸರಾದ್ದರಿಂದ ಗುರುಗಳಿಗೆ ಗೌರವವನ್ನು ತೋರಿಸುವುದಕ್ಕಾಗಿ 'ಸಚ್ಚಿದಾನಂದ ಭಾರತೀನಿರ್ಮಾಪಿತೇ' ಎಂದು ಬರೆದಿದ್ದಾರೆ. ಜಗದ್ಗುರುಗಳು ಆ ಗ್ರಂಥವನ್ನೋದಿ ಅನುಮೋದಿಸಿದರೆಂಬುದಕ್ಕೆ ಆಧಾರವೇನು ?ಮೈಸೂರು ಮಹಾರಾಜರ ಆಸ್ಥಾನದಲ್ಲಿದ್ದ ಪಂಡಿತರು ಹೀಗೆಯೇ ನೂರಾರು ಗ್ರಂಥಗಳನ್ನು ಬರೆದು ಮಹಾರಾಜರನ್ನು ಸ್ಮರಿಸಿದ್ದಾರೆ. ಮಹಾರಾಜರು ಅವುಗಳನ್ನೆಲ್ಲ ಓದಿದ್ದರೆಂದು ಹೇಳಬಹುದೆ?

೨. ಮಾಧವಾಚಾರ್ಯರ ತಮ್ಮನಾದ ಭೋಗನಾಥನು ಶ್ರೇಷ್ಠಕವಿಯೆಂದು ವಿಖ್ಯಾತ ನಾಗಿದ್ದಾನೆ. ಈ ಕವಿತಾಸಂಸ್ಕಾರವು ಮಾಧವರಿಗೂ ಇದ್ದು 'ನವಕಾಲಿದಾಸ' ಎಂಬ ಬಿರುದನ್ನು ಗಳಿಸಿಕೊಟ್ಟಿರಬಹುದು. ಅವರು ಸಂನ್ಯಾಸಿಗಳಾದದ್ದು ತುಂಬ ಇಳಿವಯಸಿನಲ್ಲಿ. ವಿದ್ಯಾರಣ್ಯರ ಪೂರ್ವೋತ್ತರ ಚರಿತೆಗಳು ಇತಿಹಾಸಕಾರರಿಗೆ ಇದುವರೆಗೂ ಸರಿಯಾಗಿ ಗೊತ್ತಾಗಿಲ್ಲ.

೩. ಇದೊಂದು ಆಕ್ಷೇಪವೇ ಅಲ್ಲ. ತುಂಬ ಪ್ರಾಚೀನರಾದ ವಿದ್ಯಾರಣ್ಯರ ಗ್ರಂಥದಿಂದಲೇ ರಾಜಚೂಡಾಮಣಿ ದೀಕ್ಷಿತನು ಗ್ರಂಥಚೌರ್ಯವನ್ನು ಮಾಡಿರಬಹುದು.

೪. ಆಚಾರ್ಯರು ಸಮಕಾಲಿಕರಲ್ಲದವರೊಡನೆ ವಾದಮಾಡಿದರೆಂದು ವಿದ್ಯಾರಣ್ಯರಂಥ ಮಹಾನುಭಾವರು ಬರೆಯಲಾರರು ಎಂದು ಹೇಳತಕ್ಕವರು ಒಂದು ವಿಷಯವನ್ನು ಲಕ್ಷ್ಯದಲ್ಲಿಡಬೇಕು. ಈ ಶಂಕರದಿಗ್ವಿಜಯವು ಪೌರಾಣಿಕಮಹಾಕಾವ್ಯ. ಪುರಾಣ ಗಳಲ್ಲಿರುವಂತೆ ದೇವತೆಗಳ ಅವತಾರ, ದೇವತೆಗಳೊಡನೆ ಸಂಭಾಷಣೆ -ಮೊದಲಾದವು ಇದರಲ್ಲಿ ಬಂದಿವೆ. ಅಲೌಕಿಕ ಘಟನೆಗಳು ಇಲ್ಲಿ ವರ್ಣಿತವಾಗಿವೆ. ಇತಿಹಾಸಗಳೆಂದು ಪ್ರಸಿದ್ಧವಾದ ರಾಮಾಯಣ ಮಹಾಭಾರತಗಳಲ್ಲಿಯೇ ಇಂತಹ ಅಲೌಕಿಕವಿಷಯಗಳು ವಿಪುಲವಾಗಿವೆ. ಎಲ್ಲ ಶಂಕರವಿಜಯಗಳಲ್ಲಿಯೂ ಇತಿಹಾಸಕ್ಕೆವಿರುದ್ಧವಾದ ವಿಷಯುಗಳಿದ್ದೇ ಇವೆ. ಆಚಾರ್ಯರ ವೈದುಷ್ಯವನ್ನೂ ಮತಾಂತರ ಖಂಡನ ಪ್ರಕಾರಗಳನ್ನೂ ವರ್ಣಿಸುವುದು ಕವಿಗೆ ಉದ್ದಿಷ್ಟವಾದದ್ದು. ಈ ಉದ್ದೇಶ ಸಾಧನೆ ಮುಖ್ಯವೇ ಹೊರತು ಸಂಬಂಧಿಸಿದ ವ್ಯಕ್ತಿಗಳಲ್ಲ. ಸಮಕಾಲಿಕರಲ್ಲದಿದ್ದರೂ ಪ್ರಸಿದ್ಧರಾದವರ ಹೆಸರುಗಳನ್ನು ನಿರ್ದೇಶಿಸಿ, ಉದ್ದಿಷ್ಟಸಾಧನೆಗಾಗಿ ಕವಿಯು ಯತ್ನಿಸಿದ್ದಾನೆಂದು ತಿಳಿಯಬೇಕು. ಅಲೌಕಿಕ ಘಟನೆಗಳು ವರ್ಣನೀಯ ಪುರುಷನ ಮಹಿಮೆಯನ್ನು ಕೊಂಡಾಡುವ ದೃಷ್ಟಿಯಿಂದಲೇ. ಅಲ್ಲದೆ ,ಭಟ್ಟಭಾಸ್ಕರ, ಅಭಿನವಗುಪ್ತ -ಇತ್ಯಾದಿ ಹೆಸರುಗಳುಳ್ಳ ಬೇರೆ ವ್ಯಕ್ತಿಗಳಿದ್ದರೂ ಇರಬಹುದು. ಭಟ್ಟಭಾಸ್ಕರ - ಎಂದರೆ ಆತನಂತೆ ಭೇದಾಭೇದವನ್ನು ಅಂಗೀಕರಿಸಿದವನು ಎಂದು ಮಾತ್ರ ಅರ್ಥ. ಆತನು ಭಟ್ಟಭಾಸ್ಕರರ ಗುರುವಾಗಿರಬಹುದು. ಅಥವಾ ಆ ಪದ್ಧತಿಗೆ

ಮಾನ್ಯತೆಯನ್ನು ಕೊಟ್ಟಿರುವ ಇನ್ನೊಬ್ಬ ಪಂಡಿತನಾಗಿರ ಬಹುದು.

೫. ಗ್ರಂಥಸೂಚಿಯನ್ನು ಮಾಡಿದವರ ಗಮನಕ್ಕೆ ಈ ಶಂಕರವಿಜಯವು ಬಂದಿಲ್ಲ ಎಂದು ಹೇಳಬಹುದಲ್ಲ. ಈ ಆಕ್ಷೇಪವನ್ನೆತ್ತಿದವರಂತೆ ಅವರೂ ಭಿನ್ನಭಿಪ್ರಾಯವನ್ನು ತಳೆದಿರಬಹುದು.

೬. ವ್ಯಾಕರಣದೋಷಗಳು ಕಾಳಿದಾಸ, ಭಾರವಿ, ಮಾಘ -ಮೊದಲಾದವರ ಕಾವ್ಯಗಳಲ್ಲಿಯೂ ಕಂಡು ಬರುತ್ತವೆ. ಮಹಾವಿದ್ವಾಂಸನೆಂದು ವಿಖ್ಯಾತನಾದ ಶ್ರೀಹರ್ಷನ ನೈಷಧೀಯ ಚರಿತದಲ್ಲಿಯೂ ಅಪಶಬ್ದಗಳಿವೆ. ಕಾವ್ಯ ದೋಷಗಳಿವೆ. 'ನಿರಂಕುಶಾಃ ಖಲು ಕವಯಃ' ಎಂದು ಮಹಾಭಾಷ್ಯಕಾರರು ಹೇಳಿಯೇ ಇದ್ದಾರೆ. ಅಲ್ಲದೆ ವಿದ್ಯಾರಣ್ಯರು ತಮ್ಮ ಪೂರ್ವವಯಸ್ಸಿನಲ್ಲಿ ಇದನ್ನು ಬರೆದಿರಬೇಕು. 'ಮಾಧವೀಯ' ಎಂದು ಮತ್ತೆ ಮತ್ತೆ ಹೇಳಿರುವುದು ಪೂರ್ವಾಶ್ರಮವನ್ನು ಸೂಚಿಸುತ್ತದೆ. ಕಾರ್ಯಭಾರದಿಂದ ಪುನಃ ಈ ಗ್ರಂಥವನ್ನು ಸಂಸ್ಕರಿಸದಿರಬಹುದು. ಪ್ರಮಾದವು ಯಾರಿಗಾದರೂ ಸಹಜ.

ಈ ಆಕ್ಷೇಪವನ್ನೆತ್ತಿದವರ ಮೇಲೆಯೇ ಈಆಕ್ಷೇಪವನ್ನು ಹೇರಬಹುದು. ಈ ಗ್ರಂಥವನ್ನು ರಚಿಸಿದವರು ಯಾರೇ ಆಗಿರಲಿ, ಆತನು ದೊಡ್ಡವಿದ್ವಾಂಸನೆಂದೂ ಕವಿತಾಚತುರನೆಂದೂ ಒಪ್ಪಿಕೊಳ್ಳಲೇಬೇಕು. ಗಹನವಾದ ಶಾಸ್ತ್ರಸಂಬಂಧಿ ವಿವಾದಗಳನ್ನು ಎಷ್ಟು ಲೀಲೆಯಿಂದ ತಡವರಿಸದೆ ಹೇಗೆ ಜೋಡಿಸುತ್ತಾನೆ - ಎಂಬುದನ್ನು ಗಮನಿಸಬೇಕು. ಇಂತಹ ವಿದ್ವತ್ಕವಿ ಯಾರೇ ಆದರೂ ಅಪಶಬ್ದಗಳು ಹೇಗೆ ಬಂದವು ? ಇನ್ನೊಬ್ಬ ಮಾಧವನಾದರೂ ಯಾರು?ವಿದ್ಯಾರಣ್ಯರ ಗುರುಗಳು ಶ್ರೀ ವಿದ್ಯಾತೀರ್ಥಸ್ವಾಮಿಗಳು. ಈ ಗುರುಗಳನ್ನು ತಮ್ಮ ಪ್ರತಿಯೊಂದು ಗ್ರಂಥದ ಆದಿಯಲ್ಲಿಯೂ ವಿದ್ಯಾರಣ್ಯರು ಸ್ತುತಿಸಿದ್ದಾರೆ. ಈ ಶಂಕರ ವಿಜಯದ ಆದಿಯಲ್ಲಿ-

'ಪ್ರಣಮ್ಯಪರ ಮಾತ್ಮನಂ ಶ್ರೀ ವಿದ್ಯಾತೀರ್ಥರೂಪಿಣಮ್'- ಎಂದು ಗುರುವಂದನೆ ಇದೆ. ಶ್ರೀವಿದ್ಯಾತೀರ್ಥರ ಶಿಷ್ಯನಾದ ಇನ್ನೊಬ್ಬ ಮಾಧವ ಯಾರು? ಈ ಗ್ರಂಥಕ್ಕೆ ಧನಪತಿಸೂರಿಯ ಡಿಂಡಿಮ, ಅಚ್ಯುತರಾಯನ ಅದ್ವೈತರಾಜ್ಯ ಲಕ್ಷ್ಮಿ - ಎಂಬ ಎರಡು ವ್ಯಾಖ್ಯಾನಗಳು ದೊರೆತಿವೆ. ಧನಪತಿಸೂರಿಯು ಪಂಜಾಬಿನವನು. ಮಹಾವಿದ್ವಾಂಸನಾದ ಅಚ್ಯುತರಾಯನು ಗೋದಾವರೀ ತೀರದ ಪಂಚವಟೀಕ್ಷೇತ್ರದವನು. ಈ ಇಬ್ಬರು ವ್ಯಾಖ್ಯಾನಕಾರರೂ ಈ ಶಂಕರವಿಜಯವು ವಿದ್ಯಾರಣ್ಯಪ್ರಣೀತವೆಂದು ಏಕಕಂಠದಿಂದ ಒಪ್ಪಿದ್ದಾರೆ. ಮದ್ರಾಸಿನಲ್ಲಿರುವ ಶ್ರೀರಾಮಕೃಷ್ಣಮಠದ ಸ್ವಾಮಿ ತಪಸ್ಯಾನಂದರು ಈ ಶಂಕರದಿಗ್ವಿಜಯವನ್ನು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ಅದರ ಪ್ರಸ್ತಾವನೆಯಲ್ಲಿ ಇದು ವಿದ್ಯಾರಣ್ಯರಚಿತವಾದದ್ದೇ ನಿಶ್ಚಯವೆಂದೂ ಶಂಕರವಿಜಯಗಳಲ್ಲಿ ಇದೇ ಅತ್ಯುತ್ತಮವಾದ್ದರಿಂದ ಇಂಗ್ಲೀಷಿಗೆ ಭಾಷಾಂತರಿಸಿದ್ದೇನೆಂದೂ ಹೇಳಿದ್ದಾರೆ. (Publisher : The President, Sri Ramakrishna Math, Mylapore, Madras- 600 004).

ಪ್ರಸಿದ್ಧಿಯೂ ಒಂದು ಪ್ರಮಾಣವೇ.

ಶ್ರೀ ವಿದ್ಯಾರಣ್ಯಸ್ವಾಮಿಗಳ ಪರಿಚಯ

ಗ್ರಂಥಕರ್ತರಾದ ಶ್ರೀವಿದ್ಯಾರಣ್ಯಸ್ವಾಮಿಗಳ ವಿಷಯವಾಗಿ ನಮಗೆ ಗೊತ್ತಿರುವುದು ಅತ್ಯಲ್ಪವೆಂದೇ ಹೇಳಬೇಕು. ಲೋಕೋತ್ತರಕೀರ್ತಿಶಾಲಿಗಳಾದ ಈ ಮಹಾನುಭಾವರ ಜೀವನ ಚರಿತೆಯೇನೆಂಬುದನ್ನು ಇತಿಹಾಸವು ಸ್ಪಷ್ಟವಾಗಿ ತಿಳಿಯಲಾರದೆ ಹೋಗಿದೆ. ನಿರ್ಣೀತವಾಗಿರುವುದಿಷ್ಟು- ಇವರಿಗೆ ಪೂರ್ವಾಶ್ರಮದಲ್ಲಿ ಮಾಧವ ಎಂದು ಹೆಸರಿತ್ತು. ಹಂಪೆಯ ಬಳಿಇರುವ ಆನೆಗೊಂದಿ ಇವರ ಜನ್ಮಸ್ಥಾನ. ತಂದೆ ಮಾಯಣ. ತಾಯಿ ಶ್ರೀಮತಿ. ಸಾಯಣ, ಭೋಗನಾಥ ಎಂಬ ಇಬ್ಬರು ತಮ್ಮಂದಿರು. ಮಾಧವರದು ಯಜುಃಶಾಖೆ, ಬೋಧಾಯನ ಸೂತ್ರ. ಭಾರದ್ವಾಜ ಗೋತ್ರ. ಬಡತನದಲ್ಲಿ ಬೆಳೆದರು. ಇವರ ಜನನ ಕ್ರಿ.ಶ. ೧೨೬೫ ರಲ್ಲಿ.

ಮಾಧವ, ಸಾಯಣ, ಭೋಗನಾಥ - ಈ ಮೂವರು ಸೋದರರೂ ವೇದಶಾಸ್ತ್ರ ಪಾರಂಗತರಾದರು. ಮಾಧವರು ಮಹಾತಪಸ್ವಿಗಳಾಗಿದ್ದರಲ್ಲದೆ ಲೋಕವ್ಯವಸ್ಥಾ ಧುರೀಣರೂ ಆಗಿದ್ದರು. ಮುಸಲ್ಮಾನರ ಹಾವಳಿಯನ್ನು ತಪ್ಪಿಸಿ ವೈದಿಕಧರ್ಮವನ್ನು ಪುನರುದ್ಧರಿಬೇಕೆಂದು ವಿಜಯನಗರ ಸಂಸ್ಥಾಪನೆಗೆ ಸೂತ್ರಧಾರರಾದರು. ಪ್ರಾಯಶಃ ಕ್ರಿ.ಶ. ೧೩೩೬ ರಲ್ಲಿ ವಿಜಯನಗರದ ಸಾಮ್ರಾಜ್ಯಸಿಂಹಾಸನದಲ್ಲಿ ಹರಿಹರನೆಂಬ ಯಾದವಕುಲ ವೀರನನ್ನು ಕುಳ್ಳಿರಿಸಿ ಪಟ್ಟಾಭಿಷೇಕ ಮಾಡಿಸಿದರು. ಹರಿಹರನ ತಮ್ಮ ಬುಕ್ಕ. ಅವನ ಮಗ ಎರಡನೆಯ ಹರಿಹರ. ಈ ಮೂವರ ಕಾಲದಲ್ಲಿಯೂ ಇದ್ದು ಅವರೆಲ್ಲರಿಗೂ ಮಾರ್ಗದರ್ಶನಮಾಡಿದರಲ್ಲದೆ ವೇದಭಾಷ್ಯಾದಿ ಗ್ರಂಥಗಳನ್ನು ನಿರ್ಮಿಸಲು ಪ್ರೋತ್ಸಾಹಿಸಿದರು. ಇವರ ತಮ್ಮಂದಿರಾದ ಸಾಯಣಾಚಾರ್ಯರು ವೇದಭಾಷ್ಯಗಳ ಕರ್ತೃವೆಂಬುದು ಪ್ರಸಿದ್ಧವಾಗಿಯೇ ಇದೆ. ಇನ್ನೊಬ್ಬ ತಮ್ಮನಾದ ಭೋಗನಾಥನು ಶ್ರೇಷ್ಠಕವಿಯೂ ಕಾವ್ಯಮೀಮಾಂಸಕನೂ ಆಗಿದ್ದನು. ವಿಜಯನಗರದ ಸರ್ವತೋಮುಖವಾದ ಅಭಿವೃದ್ಧಿಗೆ ಮಾಧವಾಚಾರ್ಯರೇ ಕಾರಣ. ಅನಂತರ ಮಾಧವರು ಸಂನ್ಯಾಸವನ್ನು ತೆಗೆದುಕೊಂಡು ಶ್ರೀವಿದ್ಯಾರಣ್ಯ ಎಂಬ ಹೆಸರಿನಿಂದ ವಿಖ್ಯಾತರಾದರು. ಶ್ರೀವಿದ್ಯಾರಣ್ಯರು ಶ್ರೀಶೃಂಗೇರಿಮಠದ ಪೀಠಾಧ್ಯಕ್ಷರಾಗಿದ್ದು, ಕೆಲವು ವರ್ಷಗಳಾದಮೇಲೆ ಕ್ರಿ.ಶ. ೧೩೮೬ ರಲ್ಲಿ ವಿದೇಹಕೈವಲ್ಯವನ್ನೈದಿದರು. ಇವರು ಪಂಚದಶಿ, ಅನುಭೂತಿಪ್ರಕಾಶ, ಜೀವನ್ಮುಕ್ತಿವಿವೇಕ - ಮುಂತಾದ ಕೆಲವು ಶ್ರೇಷ್ಠಕೃತಿಗಳನ್ನು ರಚಿಸಿದ್ದಾರೆ. ಶ್ರೀವಿದ್ಯಾತೀರ್ಥರು ಮತ್ತು ಶ್ರೀ ಶಂಕರಾನಂದರು - ಶ್ರೀ ವಿದ್ಯಾರಣ್ಯರ ಗುರುಗಳಾಗಿದ್ದರೆಂದು ತಿಳಿದು ಬರುತ್ತದೆ.

ಗ್ರಂಥ ಪರಿಚಯ

ಈ ಕೃತಿಯು ರಸವತ್ತಾದ ಪ್ರೌಢಕಾವ್ಯ. ಲೇಖನ ಸೌಕರ್ಯಕ್ಕಾಗಿ ಕವಿಯನ್ನೀಗ ಏಕವಚನದಲ್ಲಿ

ವ್ಯವಹರಿಸುವುದು ಉತ್ತಮವೆನಿಸಿದೆ. ಕವಿಗೆ ಪೂರ್ವದಲ್ಲಿ ಅನೇಕ ಶಂಕರವಿಜಯಗಳಿದ್ದವು. ಅವು ಯಾವುವೂ ಶ್ರೀಶಂಕರಾಚಾರ್ಯ ದಿವ್ಯಚರಿತೆಯನ್ನು ಸಮರ್ಪಕವಾಗಿ ವರ್ಣಿಸಿಲ್ಲವೆಂದು ಕವಿಯು ಈ ಗ್ರಂಥದ ರಚನೆಗೆ ತೊಡಗಿದ್ದಾನೆ. 'ಪ್ರಾಚೀನ ಶಂಕರಜಯೇ ಸಾರಃ ಸಂಗೃಹ್ಯತೇ ಸ್ಫುಟಮ್'ಎಂದು ಆರಂಭದಲ್ಲಿಯೇ ತಿಳಿಸಿದ್ದಾನೆ.'ಪ್ರಾಚೀನಶಂಕರಜಯೇ' ಎಂಬುದು ಜಾತ್ಯೇಕವಚನ. ಪ್ರಾಚೀನವಾದ ಎಷ್ಟೋ ಶಂಕರಜಯಗಳಿವೆ. ಅವುಗಳ ಮುಖ್ಯ ಪ್ರಮೇಯವನ್ನು ಇಲ್ಲಿ ತಿಳಿಸುತ್ತೇನೆ– ಎಂದು ಕವಿಯ ಆಶಯ. 'ಪ್ರಾಚೀನಶಂಕರಜಯೇ' ಎಂಬುದು ಒಂದು ಗ್ರಂಥದ ಹೆಸರಲ್ಲ. ತನ್ನ ಗ್ರಂಥವನ್ನು 'ಪ್ರಾಚೀನ' ಎಂದು ಯಾವ ಕವಿಯೂ ಹೇಳಿಕೊಳ್ಳುವುದಿಲ್ಲ. ಅದೊಂದು ಕೃತಿಯ ಹೆಸರೆಂದು ತಿಳಿದು ಅನೇಕ ವಿಮರ್ಶಕರು ದಾರಿತಪ್ಪಿದ್ದಾರೆ. ೧೬ನೆಯ ಸರ್ಗದ ೧೦೩ನೇ ಶ್ಲೋಕದ ಡಿಂಡಿಮ ವ್ಯಾಖ್ಯಾನದಲ್ಲಿ ಧನಪತಿಸೂರಿಯು "ಏತತ್ ಕಥಾಜಾಲಂ 'ಬೃಹಚ್ಛಂಕರವಿಜಯ'ಏವ ಶ್ರೀಮದಾನಂದ ಜ್ಞಾನಾಖ್ಯಾನಂದಗಿರಿವಿರಚಿತೇ ದೃಷ್ಟವ್ಯಮಿತಿ ದಿಕ್" ಎಂದು ಬರೆದಿದ್ದಾನೆ. ಈ ಬೃಹಚ್ಛಂಕರವಿಜಯವು ಈಗ ದೊರಕಿಲ್ಲ. ಚಿಕ್ಕದಾದ ಅನೇಕ ಶಂಕರವಿಜಯ ಗಳಿದ್ದುದರಿಂದಲೇ 'ಬೃಹತ್' ಎಂಬ ವಿಶೇಷಣವು ಸಾರ್ಥಕವಾಗುತ್ತದೆ.

ಕವಿಯು ಈ ಗ್ರಂಥವನ್ನು ಸಂಕ್ಷೇಪಶಂಕರಜಯ ಎಂದು ಕರೆದಿದ್ದರೂ ಇದರಲ್ಲಿ ೧೮೪೩ ಶ್ಲೋಕಗಳಿವೆ. ವಸ್ತುವರ್ಣನೆಯನ್ನು ಕವಿಯು ಸಂಕ್ಷೇಪಗೊಳಿಸಿಲ್ಲ. ಆಚಾರ್ಯರು ಪ್ರತಿವಾದಿಗಳೊಡನೆ ವಾದಮಾಡಿದ ಶಾಸ್ತ್ರವಿಚಾರವನ್ನು ಸಂಕ್ಷೇಪಮಾಡಿರಬಹುದು. ಮಾಧವನು ಈ ಕಾವ್ಯದಲ್ಲಿ ಪ್ರಮಿತಾಕ್ಷರಾ, ಶಿಖರಿಣೀ, ಶಾಲಿನೀ,, ಮಾಲಿನೀ, ಹರಿಣೀ, ವಿಯೋಗಿನೀ, ಶಾರ್ದೂಲವಿಕ್ರೀಡಿತ, ಸ್ರಗ್ಧರಾ, ವಸಂತತಿಲಕ, ದ್ರುತವಿಲಂಬಿತ, ಉಪಜಾತಿ ಮುಂತಾದ ನಾನಾವೃತ್ತಗಳನ್ನು ಬಳಸಿದ್ದಾನೆ. ಕವಿಗೆ ಪ್ರಶಂಸನೀಯವಾದ ಕವಿತಾ ಶಕ್ತಿಯುಂಟು. ವಾಗ್ವೈಖರೀ, ಶಬ್ದಝರಿಗಳು ಕಾವ್ಯದ ಉದ್ದಕ್ಕೂ ಕಂಡು ಬರುತ್ತವೆ. ಶಂಕರಾಚಾರ್ಯರಲ್ಲಿ ಕವಿಗೆ ಅತಿಶಯವಾದ ಭಕ್ತಿ ಇದೆ. ಅವರ ವ್ಯಕ್ತಿತ್ವವನ್ನು ಅಸಾಧಾರಣ ರೀತಿಯಲ್ಲಿ ಚಿತ್ರಿಸಿದ್ದಾನೆ. ಆಚಾರ್ಯರ ಪಾಂಡಿತ್ಯ, ತಪೋಮಹಿಮೆ, ವಾಗ್ವೈಭವಗಳ ಪ್ರಸಂಗ ಬಂದಾಗ ಕವಿಯು ಭಾವಾವಿಷ್ಟನಾಗಿಬಿಡುತ್ತಾನೆ. ತನ್ನ ಮಿತಿಯನ್ನು ಮೀರಿ ಹರಿಯುವ ವಾಗ್ವಿಲಾಸಪ್ರವಾಹದಲ್ಲಿ ನಮ್ಮನ್ನು ತೇಲಿಸಿಕೊಂಡು ಹೋಗಿಬಿಡುತ್ತಾನೆ. ತಾನು ಬಳಸಿದ ಶಬ್ದವು ಸಾಧುವೆ, ಅಸಾಧುವೆ – ಎಂಬುದನ್ನೂ ಚಿಂತಿಸುವುದಿಲ್ಲ. ಕಾವ್ಯದೋಷವನ್ನೂ ಗಣಿಸುವುದಿಲ್ಲ. ಮಳೆಗಾಲದ ಜಡಿಮಳೆಯಂತೆ ರಪರಪನೆ ಶಬ್ದಗಳು ನುಗ್ಗಿಬರುತ್ತಿವೆ. ಈ ಕವಿಯ ಪ್ರೌಢಕಲ್ಪನೆಗಳಿಗೆ, ವಾಗ್ವೈಖರಿಗೆ, ಸಮಾಸ ಜಟಿಲವಾಕ್ಯರಚನೆಗೆ ಉದಾಹರಣೆ ಯಾಗಿ ನಾಲ್ಕನೆಯ ಸರ್ಗವನ್ನು ಪರಿಶೀಲಿಸಬಹುದು.

ಇದರಲ್ಲಿ ಯಮಕಾನುಪ್ರಾಸಗಳು ಯಥೇಷ್ಟವಾಗಿ ಬಂದಿವೆ. ರೂಪಕ, ಉಪಮಾ, ಉತ್ಪ್ರೇಕ್ಷೆ, ಅತಿಶಯೋಕ್ತಿ– ಮುಂತಾದ ಅಲಂಕಾರಗಳು ರಮಣೀಯವಾಗಿ ಬಂದಿವೆ.

ಅಮರುಕರಾಜನ ಪ್ರಸಂಗದಲ್ಲಿಶೃಂಗಾರವಿದೆ. ಪ್ರಾಯೇಣ ಎಲ್ಲರಸಗಳ ಸಮಾವೇಶವೂ ಇದರಲ್ಲುಂಟು. ಹಾಸ್ಯವಿದೆ, ಪಾಂಡಿತ್ಯವೀರವಿದೆ. ಶಾಂತವು ಪ್ರಧಾನರಸ. ಕವಿಯು ಎಷ್ಟು ಪ್ರೌಢಶೈಲಿಯಲ್ಲಿ ಬರೆಯಬಲ್ಲನೋ ಅಷ್ಟೇ ಸರಳ ಶೈಲಿಯಲ್ಲಿಯೂ ಬರೆಯಬಲ್ಲ. ಉದಾಹರಣೆಗೆ ೫ ನೆಯ ಸರ್ಗವನ್ನು ನೋಡಬಹುದು. ಶ್ಲೋಕರಚನಾ ಕೌಶಲ, ಶಬ್ದಗಳ ಸುರಿಮಳೆ, ರಸಭಾವಗಳ ಪುಷ್ಟಿ, ಧ್ವನಿಮಾರ್ಗ - ಇವುಗಳನ್ನು, ಪ್ರಸ್ತಾವನೆಯು ವಿಸ್ತಾರಗೊಳ್ಳುತ್ತದೆಯೆಂದು, ಸೋದಾಹರಣವಾಗಿ ಇಲ್ಲಿ ನಿರೂಪಿಸುವುದಿಲ್ಲ. ಗ್ರಂಥವೇ ವಾಚಕರ ಕೈಯಲ್ಲಿದೆ. ಸಹೃದಯರು ನೋಡಿ ಆನಂದಿಸಬಹುದು.

ಸುಧನ್ವರಾಜನು ಎಲ್ಲ ಬೌದ್ಧರನ್ನು ಕೊಲ್ಲಿಸಿದನೆಂದು ಪ್ರಥಮ ಸರ್ಗದಲ್ಲಿ ಬಂದಿದೆ. ಈ ಘಟನೆಗೆ ಇತಿಹಾಸದಲ್ಲಿಯಾವ ದಾಖಲೆಯೂ ಇಲ್ಲ. ಆಚಾರ್ಯರಿಗೂ ಮಂಡನನಿಗೂ ಪ್ರಥಮ ದರ್ಶನದಲ್ಲಿ ನಡೆದ ಸಂವಾದವು ಚಮತ್ಕಾರಿಯಾಗಿದೆ. ಆದರೆ ಅವರೀರ್ವರ ಯೋಗ್ಯತೆಗೆ ತಕ್ಕದ್ದಾಗಲಿಲ್ಲವೆಂದು ಅನೇಕ ಮಹಾಜನರ ಅಭಿಪ್ರಾಯವಿದೆ. ಆಕ್ಷೇಪಣೀಯವಲ್ಲವೆಂದು ಕೆಲವರು ಹೇಳುತ್ತಾರೆ. 'ಲೋಕೋ ಭಿನ್ನರುಚಿ'. ಆಚಾರ್ಯರು ಪರಕಾಯ ಪ್ರವೇಶವಿದ್ಯೆಯಿಂದ ಅಮರುಕರಾಜನ ದೇಹವನ್ನು ಪ್ರವೇಶಿಸಿದರೆಂಬ ವರ್ಣನೆಯು ಅಸಮರ್ಥನೀಯ ಮತ್ತು ಅನುಚಿತ -ಎಂದು ಕೆಲವರ ಹೇಳಿಕೆ ಇದೆ. ಅಸಮರ್ಥನೀಯವೆಂಬುದನ್ನು ಒಪ್ಪಲಾಗುವುದಿಲ್ಲ. ಪರಕಾಯಪ್ರವೇಶವು ಒಂದು ಯೋಗಸಿದ್ಧಿ. ಯೋಗಿಯಾದವನಿಗೆ ಈ ಸಿದ್ಧಿ ಪ್ರಾಪ್ತವಾಗುವುದೆಂದು ಯೋಗಶಾಸ್ತ್ರದಲ್ಲಿ ಹೇಳಿದೆ. ಅದು ಆಚಾರ್ಯರಿಗೆ ಅನುಚಿತವೆಂಬುದಕ್ಕೆ ಈ ಗ್ರಂಥದಲ್ಲಿಯೇ ಸಮಾಧಾನವಿದೆ. ಬ್ರಹ್ಮಜ್ಞಾನಿಯು ನಾನು ಕರ್ತ, ನಾನು ಭೋಕ್ತ' - ಎಂಬ ಅಭಿಮಾನವನ್ನು ಪೂರ್ಣವಾಗಿ ತ್ಯಜಿಸಿರುತ್ತಾನೆ. ಆತನಿಗೆ ಯಾವ ಪಾಪವೂ ಅಂಟುವುದಿಲ್ಲ. ಮತ್ತು ಆ ಘಟನೆ ಅಮರುಕನ ಶರೀರದಲ್ಲಿ ನಡೆದದ್ದು. ಆಚಾರ್ಯರ ದೇಹಕ್ಕೆ ಯಾವ ಸಂಬಂಧವೂ ಇಲ್ಲ. ಜನ್ಮಾಂತರದಲ್ಲಿ ಗೃಹಸ್ಥನಾದವನು ಈ ಜನ್ಮದಲ್ಲಿ ಸಂನ್ಯಾಸಿಯಾದರೆ ಸಂನ್ಯಾಸಧರ್ಮಕ್ಕೆ ಭಂಗಬರುತ್ತದೆಯೆ? ಆಚಾರ್ಯರಿಗೆ ಯೋಗಸಿದ್ಧಿ ಇತ್ತೆಂದೂ ಯೋಗಸಿದ್ಧನಿಗೆ ಯಾವ ದೋಷವೂ ಅಂಟುವುದಿಲ್ಲವೆಂದೂ ತಿಳಿಸುವುದು ಕವಿಯ ಉದ್ದೇಶವಾಗಿದೆ.

ಒಟ್ಟಿನಲ್ಲಿ ಇದೊಂದು ರಮಣೀಯವಾದ, ಸರ್ವರೂ ಓದಬೇಕಾದ ಉತ್ತಮಕೃತಿ ಯೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಭಗವತ್ಪಾದರ ದಿವ್ಯಚರಿತೆ, ಶ್ರೀ ವಿದ್ಯಾರಣ್ಯಸ್ವಾಮಿಗಳ ರಚನೆ -ಈ ಗಂಗಾಯಮುನೆಗಳ ಸಂಗಮಕ್ಷೇತ್ರವಾದ ಪುಣ್ಯಗ್ರಂಥವಿದು.

ಅನುವಾದ

ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಬೇಕೆಂದು, ಶೃಂಗೇರಿಯ ಪರಮಪೂಜ್ಯಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥಮಹಾಸ್ವಾಮಿಗಳಿಂದ ಒಂದು ಆದೇಶ ಪತ್ರವು ನನಗೆ ಬಂದಿತು.

ಅನಿರೀಕ್ಷಿತವಾಗಿ ಬಂದ ಆ ಪತ್ರವನ್ನೋದಿ ನಾನು ಚಕಿತನಾದೆ. ಶ್ರೀ ಶಂಕರದಿಗ್ವಿಜಯವು ಹದಿನಾರು ಸರ್ಗಗಳಿಂದ ಕೂಡಿದ ಪ್ರೌಢವಾದ ಮಹಾಕಾವ್ಯ. ಕೆಲವು ಶ್ಲೋಕಗಳು ತುಂಬ ಜಟಿಲವಾದವು. ಅಲ್ಲದೆ ವೇದಾಂತಾದಿಶಾಸ್ತ್ರಗಳ ಮಾರ್ಮಿಕವಿವೇಚನೆ ಇದರಲ್ಲಿದೆ. ನಾನಾದರೋ ವಯಸ್ಸಿನ ಅಪರಭಾಗದಲ್ಲಿದ್ದೇನೆ. ಆರೋಗ್ಯವೂ ನೆಟ್ಟಗಿಲ್ಲ- ಎಂದು ಚಿಂತಿಸಿದೆ. "ಈ ಗ್ರಂಥದ ಅನುವಾದಕಾರ್ಯವು ಕ್ಲಿಷ್ಟವಾದದ್ದು. ನನ್ನ ದೇಹಸ್ಥಿತಿ ಉತ್ತಮವಿಲ್ಲ. ಬರವಣಿಗೆ ಅಸಾಧ್ಯವಾದ್ದರಿಂದ ಈ ಕಾರ್ಯವನ್ನು ಒಪ್ಪಿಕೊಳ್ಳಲಾರೆ" ಎಂದು ನಿವೇದಿಸಿ ಉತ್ತರವನ್ನು ಬರೆದೆ. "ಅನುವಾದ ಕಾರ್ಯವು ಕ್ಲಿಷ್ಟವಾದ್ದರಿಂದಲೇ ನೀವು ಮಾಡಬೇಕೆಂದು ತಿಳಿಸಿದ್ದೇವೆ. ಬರವಣಿಗೆಗೆ ಲೇಖಕರನ್ನು ಒದಗಿಸಿಕೊಡುತ್ತೇವೆ. ಅನುವಾದಮಾಡಿರಿ" ಎಂದು ಮಹಾಸ್ವಾಮಿಗಳವರಿಂದ ಮತ್ತೆ ಆಜ್ಞೆಯಾಯಿತು. ಶ್ರೀಶಂಕರ ಭಗವತ್ಪಾದರೇ ಶ್ರೀ ಗುರುಮುಖದಿಂದ ಹೀಗೆ ಅನುಗ್ರಹಿಸಿದ್ದಾರೆಂದು ತಿಳಿದು ಈ ಸಾಹಸಕಾರ್ಯಕ್ಕೆ ಕೈಹಾಕಿದೆ. ಲೇಖಕರ ಸಹಾಯವೂ ಒದಗಿತು.

ಇನ್ನೊಂದು ಭಾಷೆಯಿಂದ ಕನ್ನಡಕ್ಕೆ ಅನುವಾದಿಸುವ ಕಾರ್ಯವು ಸರಳವಾದ್ದಲ್ಲ. ಕವಿಯ ಆಶಯವನ್ನು ಅಷ್ಟೇ ಸೂಕ್ಷ್ಮವಾಗಿ ತಿಳಿಸುವುದು ಕಠಿಣ. ಅದರಲ್ಲಿಯೂ ಸಂಸ್ಕೃತದ ಪ್ರೌಢಕಾವ್ಯವನ್ನು ಹೊಸಗನ್ನಡಕ್ಕೆ ತಿರುಗಿಸುವಾಗ ಬಹಳ ಕ್ಲೇಶವನ್ನು ಎದುರಿಸ ಬೇಕಾಗುತ್ತದೆ. ಒಂದು ಶ್ಲೋಕವು ಸಮಾಸಜಟಿಲವಾದ ಒಂದೇ ವಾಕ್ಯವಾಗಿರುವುದುಂಟು. ಅನುಕ್ರಮದಲ್ಲಿ ಭಾಷಾಂತರಿಸಿದರೆ ಕನ್ನಡಿಗರಿಗೆ ಏನೇನೂ ಅರ್ಥವಾಗುವುದಿಲ್ಲ. ನಾನು ಅನುಸರಿದ ವಿಧಾನ ಹೀಗೆ - ಒಂದು ಶ್ಲೋಕದ ಕಡೆಯ ಸಾಲಿನ ಅರ್ಥವು ಮೊದಲನೆಯ ವಾಕ್ಯದಲ್ಲಿ ಬರಬಹುದು. ಮೊದಲನೆಯ ಸಾಲಿನ ಅರ್ಥವು ನಡುವೆ ಬರಬಹುದು. ಅನುವಾದ್ಯವಿಶೇಷಣವು ವಿಧೇಯವಿಶೇಷಣವಾಗಬಹುದು. ಅಂತೂ ಮೂಲದಲ್ಲಿ ಕವಿಯು ಬಳಸಿದ ಎಲ್ಲ ಶಬ್ದಗಳ ಅರ್ಥವೂ ಅನುವಾದದಲ್ಲಿ ಬಂದಿರಬೇಕು. ಹೊಸದನ್ನುಕೈಯಿಂದ ಸೇರಿಸಕೂಡದು. ಇರುವ ಶಬ್ದಾರ್ಥವನ್ನು ಬಿಡಕೂಡದು. ಹೆಚ್ಚಾಗಿ ಹೇಳುವದಿದ್ದರೆ ಕಂಸದಲ್ಲಿ ಬರೆಯಬೇಕು. ಅನುವಾದದಲ್ಲಿ ಈ ಸೂತ್ರಗಳನ್ನು ಯಥಾಮತಿಯಾಗಿ ಪಾಲಿಸಲು ಯತ್ನಿಸಿದ್ದೇನೆ. ಆವಶ್ಯಕವಾದ ಕಡೆ ಕೆಳಗೆ ವಿವರಣೆಯನ್ನು ಬರೆದಿದ್ದೇನೆ. ಕಠಿಣಶಬ್ದಾರ್ಥ, ವ್ಯಾಕರಣ ವಿಶೇಷಗಳನ್ನು ಟಿಪ್ಪಣಿಯಲ್ಲಿ ಗುರುತಿಸಿದ್ದೇನೆ.

ಆದರ್ಶವಾಗಿ ಇಟ್ಟುಕೊಂಡದ್ದು ಆನಂದಾಶ್ರಮದಲ್ಲಿಮುದ್ರಿತವಾದ ಶ್ರೀಶಂಕರದಿಗ್ವಿಜಯ. ಇದರಲ್ಲಿ ಡಿಂಡಿಮ ವ್ಯಾಖ್ಯಾನವೂ ಅದ್ವೈತರಾಜ್ಯಲಕ್ಷ್ಮೀ ವ್ಯಾಖ್ಯಾನದಿಂದ ಅಲ್ಲಲ್ಲಿ ಉದ್ಧೃತವಾದ ಕೆಲವು ವಾಕ್ಯಗಳೂ ಇವೆ. ವಿದ್ವಾನ್ ಉದ್ದಿ. ದಕ್ಷಿಣಾಮೂರ್ತಿಶಾಸ್ತ್ರಿಗಳೂ ವಿದ್ವಾನ್ ಉದ್ದಿ. ರಾಮಚಂದ್ರಶಾಸ್ತ್ರಿಗಳೂ ಸೇರಿ ಶ್ರೀಶಂಕರವಿಜಯಕ್ಕೆ ಕನ್ನಡ ಟೀಕೆಯನ್ನು ಬರೆದಿದ್ದಾರೆ. ೧೯೩೭ ನೆಯ ಇಸವಿಯಲ್ಲಿ ಮುದ್ರಿತವಾದ ಇದರ ಒಂದು ಜೀರ್ಣಪ್ರತಿಯೂ ಅನಂತರ ದೊರಕಿತು. ಇದನ್ನು

ಉಪಯೋಗಿಸಿಕೊಂಡಿದ್ದೇನೆ. ಆನಂದಾಶ್ರಮ ಮುದ್ರಿತವಾದ ಸಂಸ್ಕೃತಗ್ರಂಥದ ೪ನೆಯ ಸರ್ಗದಲ್ಲಿ ೫ನೆಯ ಶ್ಲೋಕದ ಮುಂದೆ ೪ ಶ್ಲೋಕಗಳು ಪೂರ್ವಾಪರವಿಷಯಗಳಿಗೆ ಹೊಂದಿಕೊಳ್ಳುತ್ತಿರಲಿಲ್ಲ. ಇಲ್ಲಿ ಏನೋ ತಪ್ಪಾಗಿದೆಯೆಂಬ ಸಂಶಯ ಬಂದಿತು. ಅನಂತರ ಮೇಲ್ಕಂಡ ಕನ್ನಡ ಟೀಕೆಯಿರುವ ಪುಸ್ತಕವನ್ನು ತರಿಸಿ ನೋಡಿದಾಗ ಸಂಶಯದ ಪರಿಹಾರವಾಯಿತು. ಆ ನಾಲ್ಕುಶ್ಲೋಕಗಳು ಹನ್ನೆರಡನೆಯ ಶ್ಲೋಕವಾದಮೇಲೆ ಇರಬೇಕಾಗಿತ್ತು. ಈ ಅನುವಾದಗ್ರಂಥದಲ್ಲಿ ಸರಿಪಡಿಸಲಾಗಿದೆ. ಅಲ್ಲಲ್ಲಿ ವ್ಯಾಕರಣ ದೋಷಗಳನ್ನು ಗುರುತಿಸಲಾಗಿದೆ. ಎಲ್ಲವನ್ನೂ ಪಟ್ಟಿಮಾಡಲು ಪ್ರಯತ್ನಿಸಿಲ್ಲ. ಒಂದೆರಡು ಕಡೆ ಛಂದೋದೋಷವೂ ಕಂಡುಬರುತ್ತದೆ.

ಈ ಮೂಲಗ್ರಂಥವನ್ನು ಯಾರೂ ಸರಿಯಾಗಿ ಶೋಧಿಸಿಲ್ಲ. ಶೋಧಿಸಿದರೆ ಕೆಲವು ದೋಷಗಳನ್ನು ನಿವಾರಿಸಲು ಸಾಧ್ಯವಿದೆ. ಉದಾಹರಣೆಗೆ, ೫-೧೨೯ ರಲ್ಲಿ 'ಭಜೇನ್ನವಿರಾಗಮ್' ಎಂಬ ವಾಕ್ಯದಲ್ಲಿ'ನ' ಶಬ್ದವಿರಬಾರದು. ಡಿಂಡಿಮಕಾರನು ವಿರಾಗಶಬ್ದಕ್ಕೆ ವಿಚಿತ್ರವಾದ ಅರ್ಥವನ್ನು ಕಲ್ಪಿಸಿ, ಅದನ್ನು ಸಮರ್ಥಿಸಲು ಯತ್ನಿಸಿದ್ದಾನೆ. ಕನ್ನಡಟೀಕಯು ಮೌನವನ್ನವಲಂಬಿಸಿದೆ. ಆ ವಾಕ್ಯವು 'ಭಜೇತ ವಿರಾಗಮ್' ಎಂದೋ 'ಭಜೇನ್ನು ವಿರಾಗಮ್' ಎಂದೋ ಇದ್ದಿರಬೇಕು. ಲೇಖಕ ಪ್ರಮಾದವೆಂಬುದು ಸ್ಪಷ್ಟವಾಗಿದೆ.

ಇದು ಮೊದಲನೆಯ ಭಾಗ. ಎರಡನೆಯದರಲ್ಲಿ ಈ ಗ್ರಂಥವು ಪೂರ್ಣವಾಗುತ್ತದೆ. ಅದರ ಪ್ರಸ್ತಾವನೆಯಲ್ಲಿ ಅದ್ವೈತಸಿದ್ಧಾಂತ, ಶ್ರೀಶಂಕರಾಚಾರ್ಯರ ಕೃತಿಗಳು, ಆಚಾರ್ಯರ ವೈದುಷ್ಯ, ಭಾಷಾಶೈಲಿ, ಅವರಿಂದಾದ ಲೋಕೋಪಕಾರ - ಇವುಗಳ ಸಮೀಕ್ಷೆಯನ್ನು ಬರೆಯಬೇಕೆಂಬ ಉದ್ದೇಶವಿದೆ. ಶ್ರೀ ಭಗವತ್ಪಾದರ ಅನುಗ್ರಹದಿಂದಲೂ ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆಶೀರ್ವಾದಬಲದಿಂದಲೂ ಅದು ಸಾಧ್ಯವಾದೀತೆಂದು ನಂಬಿದ್ದೇನೆ.

ಶ್ರೀ ಶೃಂಗೇರಿ ಜಗದ್ಗುರು ಪೀಠದಲ್ಲಿ ವಿರಾಜಮಾನರಾಗಿರುವ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು ಈ ಗ್ರಂಥವನ್ನು ಅನುವಾದಿಸುವುದಕ್ಕೆ ಸರ್ವವಿಧಪ್ರೋತ್ಸಾಹಗಳನ್ನಿತ್ತು ಕೃಪೆಯಿಂದ ನನ್ನನ್ನು ಆಶೀರ್ವದಿಸಿದ್ದಾರೆ. ಅವರಿಗೆ ಭಕ್ತಿಪೂರ್ವಕವಾಗಿ ಸಾಷ್ಟಾಂಗ ಪ್ರಣಾಮಗಳನ್ನರ್ಪಿಸುತ್ತೇನೆ.

ಶ್ರೀ ಶಾರದಾಪೀಠದ ಮುಖ್ಯಧಿಕಾರಿಗಳಾದ (Administrator) ಶ್ರೀಮಾನ್ ವಿ. ಆರ್. ಗೌರೀಶಂಕರ ಅವರು ನನಗೆ ಬೇಕಾದ ಎಲ್ಲಾ ಸೌಕರ್ಯಗಳನ್ನೂ ಸಂತೋಷದಿಂದ ಕಲ್ಪಿಸಿದ್ದಲ್ಲದೆ ಇದರ ಮುದ್ರಣಕ್ಕೆ ಏರ್ಪಾಡುಗಳನ್ನು ಮಾಡಿ ಉಪಕರಿಸಿದ್ದಾರೆ. ಪ್ರೊ. ಎಸ್. ರಾಮಚಂದ್ರಶಾಸ್ತ್ರಿಗಳು ಮುದ್ರಣಸಂವಿಧಾನವನ್ನು ನೋಡಿಕೊಂಡು ಕರಡನ್ನು ತಿದ್ದುವುದರಲ್ಲಿ ತುಂಬ ಸಹಾಯಮಾಡಿದ್ದಾರೆ. ಶ್ರೀಮತಿ ಸರೋಜ ಗಣಪತಿ ಎಂ.ಎ. ಅವರು ಅನುವಾದವನ್ನು ಬರೆಯುವ ಕಾರ್ಯದಲ್ಲಿ ವಿಶೇಷವಾದ ನೆರವನ್ನು ನೀಡಿದ್ದಾರೆ. ವಿದ್ವಾನ್ ಎಂ.

ಆರ್. ವೆಂಕಟೇಶಮೂರ್ತಿಗಳು ಮೂಲಶ್ಲೋಕಗಳನ್ನು ಕನ್ನಡಲಿಪಿಯಲ್ಲಿ ಸುಂದರವಾಗಿ ಬರೆದು ಕೊಟ್ಟಿದ್ದಾರೆ.

ಬೆಂಗಳೂರಿನ M & M Hi - Tech DTPಯವರು ನನ್ನಿಂದಾದ ಶ್ರಮವನ್ನು ಗಣಿಸದೆ ತಾಳ್ಮೆಯಿಂದ ಸಹಕರಿಸಿ ಈ ಗ್ರಂಥವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿದ್ದಾರೆ. ಪುಣ್ಯಭಾಜನರಾದ ಈ ಎಲ್ಲ ಮಹನೀಯರ ಉಪಕಾರವನ್ನು ಸ್ಮರಿಸಿ ಕೊಳ್ಳುತ್ತ ಇವರೆಲ್ಲರಿಗೂ ಹಾರ್ದಿಕವಾದ ಕೃತಜ್ಞತೆಗಳನ್ನರ್ಪಿಸುತ್ತೇನೆ.

ನಮಃ ಶ್ರೀ ಶಂಕರಾಚಾರ್ಯ ಭಗವತ್ಪಾದಮೂರ್ತಯೇ|
ವಿಪಶ್ಚಿದ್ಗೀತ ಪೂರ್ಣೇಂದು ಕಿರಣ ಸ್ವಚ್ಛಕೀರ್ತಯೇ||

ಬೆಂಗಳೂರು
ತಾ. ೩-೧-೧೯೯೬

ಎನ್. ರಂಗನಾಥಶರ್ಮಾ

ಓಂ

ಶ್ರೀಗುರುಚರಣಾರವಿಂದಾಭ್ಯಾಂ ನಮಃ

ಶ್ರೀವಿದ್ಯಾರಣ್ಯವಿರಚಿತಃ

ಶ್ರೀಮಚ್ಛಂಕರ ದಿಗ್ವಿಜಯಃ

ಪ್ರಥಮಃ ಸರ್ಗಃ

ಉಪೋದ್ಘಾತಃ

ದೇವತೆಗಳ ಪ್ರಾರ್ಥನೆಯಂತೆ ಪರಮೇಶ್ವರನು ಭೂಲೋಕದಲ್ಲಿ ಅವತರಿಸಿ ವೈದಿಕ ಸಿದ್ಧಾಂತವನ್ನು ಪುನಃ ಸ್ಥಾಪಿಸಲು ನಿರ್ಧರಿಸುವುದು. ಸ್ಕಂದನು ಕುಮಾರಿಲಭಟ್ಟರೆಂಬ ಹೆಸರಿನಿಂದ ಅವತರಿಸಿ ಬೌದ್ಧಮತವನ್ನು ಖಂಡಿಸಿ ವೇದೋಕ್ತವಾದ ಕರ್ಮಕಾಂಡವನ್ನು ಪ್ರಚಾರ ಮಾಡುವುದು.

ಸರ್ಗ ೧

ಪ್ರಣಮ್ಯ ಪರಮಾತ್ಮಾನಂ ಶ್ರೀವಿದ್ಯಾತೀರ್ಥರೂಪಿಣಮ್ ।
ಪ್ರಾಚೀನಶಂಕರಜಯೇ ಸಾರಃ ಸಂಗೃಹ್ಯತೇ ಸ್ಫುಟಮ್ ॥ ೧

ಶ್ರೀವಿದ್ಯಾತೀರ್ಥಗುರುಗಳ ರೂಪದಲ್ಲಿ ಅವತರಿಸಿರುವ ಪರಮಾತ್ಮನನ್ನು ನಮಸ್ಕರಿಸಿ ಪ್ರಾಚೀನ ಶ್ರೀಶಂಕರದಿಗ್ವಿಜಯಗಳಲ್ಲಿದ್ದ ಕಥಾಸಾರವನ್ನು ಚೆನ್ನಾಗಿ ತಿಳಿಯುವಂತೆ ಇಲ್ಲಿ ಸಂಗ್ರಹಿಸುತ್ತೇನೆ.

ಯದ್ವದ್ಘಟಾನಾಂ ಪಟಲೋ ವಿಶಾಲೋ
ವಿಲೋಕ್ಯತೇಽಲ್ಪೇ ಕಿಲ ದರ್ಪಣೇಽಪಿ ।
ತದ್ವನ್ಮದೀಯೇ ಲಘುಸಂಗ್ರಹೇಽಸ್ಮಿನ್
ಉದ್ವೀಕ್ಷ್ಯತಾಂ ಶಾಂಕರವಾಕ್ಯಸಾರಃ ॥ ೨

ದೊಡ್ಡದಾದ ಆನೆಗಳ ಹಿಂಡನ್ನು ಚಿಕ್ಕದಾದ ಕನ್ನಡಿಯಲ್ಲಿ ಚೊಕ್ಕಟವಾಗಿ ನೋಡಬಹುದು. ಹಾಗೆಯೇ ಶ್ರೀಶಂಕರಾಚಾರ್ಯರ ವಿಸ್ತೃತಚರಿತ್ರೆಯ ಮುಖ್ಯಾಂಶವನ್ನು ನನ್ನ ಈ ಚಿಕ್ಕಸಂಗ್ರಹ ಗ್ರಂಥದಲ್ಲಿ ನೋಡಬಹುದು.

ಟಿಪ್ಪಣಿ: ಘಟಾನಾಂ ಪಟಲಃ = ಗಡಿಗೆಗಳ ಸಾಲು ಎಂದೂ ಅರ್ಥಮಾಡಬಹುದು.

ಯಥಾಽತಿರುಚ್ಯೇ ಮಧುರೇಽಪಿ ರುಚ್ಯ-
ತ್ವಾದಾಯ ರುಚ್ಯಾಂತರಯೋಜನಾರ್ಹಾ |
ತಥೇಷ್ಯತಾಂ ಪ್ರಾಕ್-ಕವಿ-ಹೃದ್ಯಪದ್ಯೇ-
ಷ್ವೇಷಾಽಪಿ ಮತ್ಪದ್ಯ-ನಿವೇಶಭಂಗೀ || ೩

ಅತ್ಯಂತರುಚಿಕರವಾದ ಮಧುರವಾದ ಆಹಾರದಲ್ಲಿ ಇನ್ನೂರುಚಿಯನ್ನುಂಟು ಮಾಡುವುದಕ್ಕಾಗಿ (ಲವಂಗ, ಏಲಕ್ಕಿ, ಕೇಸರಿ) ಮೊದಲಾದ ರುಚಿಕರ ವಸ್ತುಗಳ ಯೋಜನೆ ಯೋಗ್ಯವಾಗಿಯೇ ಇರುತ್ತದೆ. ಹಾಗೆಯೇ ಪ್ರಾಚೀನ ಕವಿಯ ಮನೋಹರ ಪದ್ಯಗಳಲ್ಲಿಯೂ ನನ್ನ ಪದ್ಯಗಳ ನಿವೇಶನವು ಹಿತಕರವಾಗಿರುತ್ತದೆಯೆಂದು ನೀವು ಸ್ವಾಗತಿಸಬಹುದು.

ಸ್ತುತೋಽಪಿ ಸಮ್ಯಕ್ ಕವಿಭಿಃ ಪುರಾಣೈಃ
ಕೃತ್ಯಾಽಪಿ ನಸ್ತುಷ್ಯತು ಭಾಷ್ಯಕಾರಃ |
ಕ್ಷೀರಾಬ್ಧಿ ವಾಸೀ ಸರಸೀರುಹಾಕ್ಷಃ
ಕ್ಷೀರಂ ಪುನಃ ಕಿಂ ಚಕಮೇ ನ ಗೋಷ್ಠೇ || ೪

ಭಾಷ್ಯಕಾರರಾದ ಶ್ರೀಶಂಕರಾಚಾರ್ಯರು ಪ್ರಾಚೀನ ಕವಿಗಳಿಂದ ಉತ್ತಮ ರೀತಿಯಲ್ಲಿ ಸ್ತುತರಾಗಿದ್ದರೂ ಸಹ, ನನ್ನ ಈ ಕೃತಿಯಿಂದ ಸಂತುಷ್ಟರಾಗಲೆಂದು ಆಶಿಸುತ್ತೇನೆ. ಕ್ಷೀರಸಾಗರಶಾಯಿಯಾಗಿದ್ದರೂ ಪುಂಡರೀಕಾಕ್ಷನಾದ ಶ್ರೀಮನ್ನಾರಾಯಣನು ಗೋಕುಲದಲ್ಲಿ (ಗೊಲ್ಲರು ಕೊಟ್ಟ) ಕ್ಷೀರವನ್ನು ಸಂತೋಷದಿಂದ ಸೇವಿಸಲಿಲ್ಲವೆ?

ಪಯೋಽಬ್ಧಿವಿವರೀಸುನಿಃಸೃತ ಸುಧಾಝುರೀ ಮಾಧುರೀ-
ಧುರೀಣ ಭಣಿತಾಧರೀಕೃತ ಫಣಾಧರಾಧೀಶಿತುಃ |
ಶಿವಂಕರ ಸುಶಂಕರಾಭಿಧ ಜಗದ್ಗುರೋಃ ಪ್ರಾಯಶೋ
ಯಶೋ ಹೃದಯ ಶೋಧಕಂ ಕಲಯಿತುಂ ಸಮೀಹಾಮಹೇ || ೫

ಕ್ಷೀರಸಮುದ್ರವನ್ನು ಕಡೆದಾಗ ಮೇಲೆದ್ದುಬಂದ ಅಮೃತಝುರಿಯ ಮಾಧುರ್ಯ ವೇನುಂಟು, ಅಷ್ಟು ಮಾಧುರ್ಯವುಳ್ಳದ್ದು ಶ್ರೀಶಂಕರರ ಸುಂದರವಾದ ಸಂಸ್ಕೃತ ವಾಕ್ಯಶೈಲಿ. ಈ ವಾಗ್ಧೋರಣೆಯು ನಾಗರಾಜನಾದ ಆದಿಶೇಷನನ್ನು ತಲೆತಗ್ಗಿಸುವಂತೆ ಮಾಡಿದೆ. ಜಗತ್ತಿಗೆ ಹಿತಕಾರಿಗಳಾದ ಆ ಜಗದ್ಗುರುಗಳ ಚಿತ್ತಶುದ್ಧಿಕರವಾದ ಯಶಸ್ಸನ್ನು ಕೀರ್ತಿಸುವುದಕ್ಕೆ ನಾವೀಗ ಉದ್ಯುಕ್ತರಾಗಿದ್ದೇವೆ.

ಟಿಪ್ಪಣಿ: ವ್ಯಾಕರಣ ಮಹಾಭಾಷ್ಯಕಾರನಾದ ಪತಂಜಲಿಯ ಭಾಷಾಶೈಲಿ ಸಂಸ್ಕೃತ ವಾಙ್ಮಯದಲ್ಲಿ ಬಹುಸುಂದರವೆಂದು ವಿಖ್ಯಾತವಾಗಿದೆ. 'ಮಹಾಭಾಷ್ಯಂ ವಾ ಪಠನೀಯಂ ಮಹಾರಾಜ್ಯಂ ವಾ ಪಾಲನೀಯಂ'ಎಂಬ ಗಾದೆಯೇ ಉಂಟಾಗಿದೆ. ಪತಂಜಲಿಯು ಆದಿಶೇಷನ ಅವತಾರವೆಂದು

ಪ್ರಸಿದ್ಧಿಯುಂಟು. ಆದ್ದರಿಂದ ಈ ಶ್ಲೋಕದಲ್ಲಿ ಆದಿಶೇಷನೆಂದು ಪತಂಜಲಿಮುನಿಯನ್ನು ಗ್ರಹಿಸುವುದು ಯುಕ್ತವಾಗಿದೆ.

ಕ್ವೇಮೇ ಶಂಕರಸದ್ಗುರೋರ್ಗುಣಗಣಾ ದಿಗ್ಪಾಲಕೂಲಂಕಷಾಃ
ಕಾಲೋನ್ಮೀಲಿತ ಮಾಲತೀಪರಿಮಲಾವಷ್ಟಂಭಮುಷ್ಟಿಂಧಯಾಃ |
ಕ್ವಾಹಂ ಹಂತ ತಥಾಽಪಿ ಸದ್ಗುರುಕೃಪಾಪೀಯೂಷ ಪಾರಂಪರೀ-
ಮಗ್ನೋನ್ಮಗ್ನಕಟಾಕ್ಷವೀಕ್ಷಣ ಬಲಾದಸ್ತಿ ಪ್ರಶಸ್ತಾರ್ಹತಾ || ೬

ಶ್ರೀ ಶಂಕರಸದ್ಗುರುಗಳ ಗುಣಗಣಗಳು ದಿಗಂತವ್ಯಾಪಿಯಾದವುಗಳು. ವಸಂತಕಾಲದಲ್ಲಿ ಅರಳಿದ ಮಾಲತೀ (ಜಾಜಿ) ಪುಷ್ಪಗಳ ಪರಿಮಳಕ್ಕಿಂತ ಮನೋಹರವಾದವು. ಅಂತಹ ಗುಣರಾಶಿಗಳೆಲ್ಲಿ? ಅಯ್ಯೋ, ನಾನೆಲ್ಲಿ? ಆದರೂ ಸಹ ಸದ್ಗುರುಗಳ ಕಾರುಣ್ಯಾಮೃತದಲ್ಲಿ ಎದ್ದುಮುಳುಗಿದ ಅವರ ಕಟಾಕ್ಷ ಪಾತದ ಬಲದಿಂದ ನನಗೆ ಉತ್ತಮವಾದ ಯೋಗ್ಯತೆ ಬಂದಿದೆ!

ಧನ್ಯಂಮನ್ಯ ವಿವೇಕಶೂನ್ಯಸುಜನಂಮನ್ಯಾಬ್ಧಿಕನ್ಯಾನಟೀ-
ನೃತ್ಯೋನ್ಮತ್ತನರಾಧಮಾಧಮಕಥಾಸಂಮರ್ದದುಷ್ಕರ್ದಮೈಃ |
ದಿಗ್ಧಾಂ ಮೇ ಗಿರಮದ್ಯ ಶಂಕರಗುರುಕ್ರೀಡಾಸಮುದ್ಯದ್ಯಶಃ
ಪಾರಾವಾರ ಸಮುಚ್ಚಲಜ್ಜಲಧರೈಃ ಸಂಕ್ಷಾಲಯಾಮಿ ಸ್ಫುಟಮ್ || ೭

ವಿವೇಕಶೂನ್ಯರಾದ ಕೆಲವು ಶ್ರೀಮಂತರು ತಾವೇ ಧನ್ಯರೆಂದೂ ಸಜ್ಜನರೆಂದೂ ತಿಳಿದುಕೊಂಡು ಬಿಟ್ಟಿರುತ್ತಾರೆ. ಲಕ್ಷ್ಮೀ ಎಂಬ ನಟಿಯ ನರ್ತನದಿಂದ ಉನ್ಮತ್ತರಾದ ಈ ನರಾಧಮರ ಅಧಮಕಥೆಗಳ ಸಂಪರ್ಕವೆಂಬ ಕೆಟ್ಟ ಕೆಸರುಗಳು ನನ್ನ ವಾಣಿಗೆ ಮೆತ್ತಿಕೊಂಡಿವೆ. ಈಗ ಶ್ರೀ ಶಂಕರಗುರುಗಳ ಲೀಲೆಗಳಿಂದ ಉಂಟಾದ ಕೀರ್ತಿ ಸಮುದ್ರದ ಜಲಪ್ರವಾಹಗಳಿಂದ, ಕೊಳೆಯಾಗಿರುವ ನನ್ನ ವಾಣಿಯನ್ನು ಚೆನ್ನಾಗಿ ತೊಳೆಯುತ್ತೇನೆ.

ವಂಧ್ಯಾಸೂನುಖರೀವಿಷಾಣಸದೃಶ ಕ್ಷುದ್ರಕ್ಷಿತೀಂದ್ರಕ್ಷಮಾ
ಶೌರ್ಯೌದಾರ್ಯದಯಾದಿ ವರ್ಣನಕಲಾದುರ್ವಾಸನಾವಾಸಿತಾಮ್ |
ಮದ್ವಾಣೀಮಧಿವಾಸಯಾಮಿ ಯಮಿನಸ್ತ್ರೈಲೋಕ್ಯರಂಗಸ್ಥಲೀ
ನೃತ್ಯತ್ಕೀರ್ತಿನಟೀಪಟೀರಪಟಲೀ ಚೂರ್ಣೈರ್ವಿಕೀರ್ಣೈಃ ಕ್ಷಿತೌ || ೮

ಕ್ಷುದ್ರರಾದ ಕೆಲವು ರಾಜರನ್ನು ವರ್ಣಿಸುವಾಗ ಅವರ ತಾಳ್ಮೆ, ಶೌರ್ಯ, ಔದಾರ್ಯ, ದಯೆ-ಇತ್ಯಾದಿ ವರ್ಣನೆಗಳನ್ನು ಮಾಡಿದ್ದೇನೆ. ಅವರಲ್ಲಿ ಆ ಗುಣಗಳು ಬಂಜೆಯ ಮಕ್ಕಳಂತೆ, ಕತ್ತೆಯ ಕೊಂಬುಗಳಂತೆ, ಇರತಕ್ಕವೇ ಅಲ್ಲ!ಆದ್ದರಿಂದ ಈ ವರ್ಣನೆಯೆಂಬ ದುರ್ವಾಸನೆಯಿಂದ ನನ್ನ ವಾಣಿಯು ಮುಚ್ಚಿಹೋಗಿದೆ. ಈಗಲಾದರೋ ನಮ್ಮ ಯತಿರಾಜರ

ಕೀರ್ತಿಯೆಂಬ ನಟಿಯು ತ್ರೈಲೋಕ್ಯವೆಂಬ ರಂಗಸ್ಥಳದಲ್ಲಿ ನರ್ತಿಸುತ್ತಿದ್ದಾಳೆ. ಅವಳು (ಆ ನಟಿಯು) ಮೈಗೆ ಹಚ್ಚಿಕೊಂಡು ನೆಲಕ್ಕೆ ಉದುರಿದ ಶ್ರೀಗಂಧದ ಚೂರ್ಣಗಳಿಂದ ನನ್ನ ವಾಣಿಯ ದುರ್ಗಂಧವನ್ನು ಹೋಗಲಾಡಿಸಿಕೊಳ್ಳುತ್ತೇನೆ.

ಪೀಯೂಷದ್ಯುತಿಖಂಡ ಮಂಡನ ಕೃಪಾರೂಪಾಂತರಶ್ರೀಗುರು-
ಪ್ರೇಮಸ್ಥೇಮಸಮರ್ಹಣಾರ್ಹ ಮಧುರವ್ಯಾಹಾರಸೂನೋತ್ಕರಃ |
ಪ್ರೌಢೋಽಯಂ ನವಕಾಲಿದಾಸ ಕವಿತಾಸಂತಾನ ಸಂತಾನಕೋ
ದದ್ಯಾದದ್ಯ ಸಮುದ್ಯತಃ ಸುಮನಸಾಮಾಮೋದಪಾರಂಪರೀಮ್ || ೯

ನವಕಾಳಿದಾಸನೆಂಬ ಬಿರುದನ್ನಾಂತ ಈ ಕವಿಯ ಕವಿತಾರೂಪವಾದ ಸಂತಾನಕವೆಂಬ ದೇವವೃಕ್ಷವು ಪ್ರೌಢವಾಗಿ ಬೆಳೆದುನಿಂತಿದೆ. ಅಮೃತಕಿರಣನಾದ ಚಂದ್ರನ ಖಂಡವನ್ನು ಧರಿಸಿದ ಪರಮೇಶ್ವರನ ಕೃಪೆಯೋ ಎಂಬಂತಿರುವ ಶ್ರೀ ಶಂಕರಗುರುಗಳನ್ನು ಉತ್ಕಟವಾದ ಪ್ರೇಮ ಭಕ್ತಿಯಿಂದ ಪೂಜಿಸಲು ಯೋಗ್ಯವಾದ ವಚನಗಳೆಂಬ ಹೂವಿನರಾಶಿಗಳು ಈ ಕವಿತಾವೃಕ್ಷದಲ್ಲಿ ಅರಳಿನಿಂತಿವೆ. ಈ ವೃಕ್ಷವು ಈಗ ವಿದ್ವಾಂಸರಿಗೆ ಮತ್ತು ದೇವತೆಗಳಿಗೆ ಆನಂದವನ್ನೂ ಪರಿಮಳವನ್ನೂ ತಂದು ಕೊಡಲಿ.

ಸಾಮೋದ್ಯೈರನುಮೋದಿತಾ ಮೃಗಮದ್ಯೈರಾನಂದಿತಾ ಚಂದನೈ-
ರ್ಮಂದಾರ್ಯೈರಭಿನಂದಿತಾ ಪ್ರಿಯಗಿರಾ ಕಾಶ್ಮೀರಜೈಃ ಸ್ಮೇರಿತಾ |
ವಾಗೇಷಾ ನವಕಾಲಿದಾಸವಿದುಷೋ ದೋಷೋಜ್ಝಿತಾ ದುಷ್ಕವಿ-
ವ್ರಾತೈರ್ನಿಷ್ಕರುಣೈಃ ಕ್ರಿಯೇತ ವಿಕೃತಾ ಧೇನುಸ್ತುರುಷ್ಕೈರಿವ || ೧೦

ನವಕಾಳಿದಾಸನೆಂಬ ಬಿರುದಿನಿಂದ ಭೂಷಿತನಾದ ಈ ವಿದ್ವಾಂಸನ ಕವಿತಾವಾಣಿಯನ್ನು ಪರಿಮಳಪೂರ್ಣವಾದ ಕಸ್ತೂರೀಮೃಗಗಳು ಅನುಮೋದಿಸಿವೆ. ಚಂದನ ವೃಕ್ಷಗಳು, ಮಂದಾರ ತರುಗಳು ಒಳ್ಳೆಯ ಮಾತನ್ನಾಡಿ ಅಭಿನಂದಿಸಿವೆ. ಕಾಶ್ಮೀರದಲ್ಲಿ ಹುಟ್ಟಿದ ಕೇಸರಿ ಗಿಡಗಳು ಹೊಗಳಿ ಸಂತೋಷಪಡಿಸಿವೆ. ಆದರೂ ಕರುಣಾಹೀನರಾದ ಮ್ಲೇಂಚ್ಛರು ಗೋವನ್ನು ವಿಕಾರಗೊಳಿಸಿ ಕೆಡಿಸುವಂತೆ, ದೋಷಮುಕ್ತವಾದ ಈ ವಾಣಿಯನ್ನು ದುಷ್ಕವಿಗಳು ದೋಷಾರೋಪಮಾಡಿ ವಿಕಾರಗೊಳಿಸಬಹುದೆಂಬ ಶಂಕೆ ನನಗಿದೆ.

ಟಿಪ್ಪಣಿ:ಮೃಗಮದವೆಂದರೆ ಕಸ್ತೂರಿ. ಇಲ್ಲಿ ಕಸ್ತೂರೀಮೃಗವೆಂದು ಔಚಿತ್ಯವನ್ನನುಸರಿಸಿ ಅರ್ಥ ಮಾಡಲಾಗಿದೆ.

ಯದ್ವಾ ದೀನದಯಾಲವಃ ಸಹೃದಯಾಃ ಸೌಜನ್ಯಕಲ್ಲೋಲಿನೀ-
ದೋಲಾಂದೋಲನ ಖೇಲನೈಕರಸಿಕ ಸ್ವಾಂತಾಃ ಸಮಂತಾದಮೀ |

ಸಂತಃ ಸಂತಿ ಪರೋಕ್ತಿಮೌಕ್ತಿಕಜುಷಃ ಕಿಂ ಚಿಂತಯಾಽನಂತಯಾ
ಯದ್ವಾ ತುಷ್ಯತಿ ಶಂಕರಃ ಪರಗುರುಃ ಕಾರುಣ್ಯರತ್ನಾಕರಃ || ೧೧

ಅಥವಾ ಅನಂತವಾದ ಈ ಚಿಂತೆಯಾದರೂ ಏಕೆ?ಲೋಕದಲ್ಲಿ ದೀನದಯಾಳುಗಳೂ ಸಹೃದಯರೂ ಆದ ಜನರು ಎಲ್ಲ ಕಡೆಯಲ್ಲಿಯೂ ಇರುತ್ತಾರೆ. ಅವರು ಸೌಜನ್ಯದ ನದಿಗಳಲ್ಲಿ ಕ್ರೀಡಿಸುವ ರಸಿಕಚಿತ್ತವುಳ್ಳವರು. ಆ ಸಜ್ಜನರು ಅನ್ಯರ ಉಕ್ತಿಗಳೆಂಬ ಮುತ್ತುಗಳನ್ನು ಮೆಚ್ಚಿ ಆನಂದ ಪಡತಕ್ಕವರು. ಅಥವಾ ದಯಾಸಮುದ್ರರೂ ಪರಮಗುರುಗಳೂ ಆದ ಶ್ರೀ ಶಂಕರರಾದರೂ ಕಡೆಗೆ ಸಂತೋಷಪಡುತ್ತಾರೆ. ನನಗೆ ಚಿಂತೆ ಏಕೆ?

ಉಪಕ್ರಮ್ಯ ಸ್ತೋತುಂ ಕತಿಚನ ಗುಣಾನ್ ಶಂಕರಗುರೋಃ
ಪ್ರಭಗ್ನಾಃ ಶ್ಲೋಕಾರ್ಧೇ ಕತಿಚನ ತದರ್ಧಾರ್ಧರಚನೇ |
ಅಹಂ ತುಷ್ಟೂಷುಸ್ತಾನಹಹ ಕಲಯೇ ಶೀತಕಿರಣಂ
ಕರಾಭ್ಯಾಮಾಹರ್ತುಂ ವ್ಯವಸಿತಮತೇಃ ಸಾಹಸಿಕತಾಮ್ || ೧೨

ಶ್ರೀಶಂಕರಗುರುಗಳ ಗುಣಗಳನ್ನು ಹೊಗಳುತ್ತೇವೆಂದು ಹೊರಟ ಕೆಲವರು ಅರ್ಧ ಶ್ಲೋಕವನ್ನು ಬರೆಯುವಷ್ಟರಲ್ಲಿ ಬಳಲಿಹೋದರು. ಇನ್ನು ಕೆಲವರಂತೂ ಶ್ಲೋಕದ ಕಾಲುಭಾಗವನ್ನು ರಚಿಸುವಷ್ಟರಲ್ಲಿಯೇ ಆಯಾಸಗೊಂಡರು. ನಾನಾದರೋ ಆ ಗುಣಗಳನ್ನು ಹೊಗಳುತ್ತೇನೆಂದು ಆರಂಭಿಸಿದ್ದೇನೆ. ಆಹಾ, ಎರಡು ಕೈಗಳಿಂದ ಚಂದ್ರಮಂಡಲವನ್ನು ಹಿಡಿದು ತರುತ್ತೇನೆಂದು ಹೊರಟ ಮೂರ್ಖನ ಸಾಹಸವನ್ನು ಮಾಡುತ್ತಿದ್ದೇನೆ!

ತಥಾಽಪ್ಯುಜ್ಜೃಂಭಂತೇ ಮಯಿ ವಿಪುಲ ದುಗ್ಧಾಬ್ಧಿಲಹರೀ-
ಲಲತ್ಕಲ್ಲೋಲಾಲೀಲಸಿತ ಪರಿಹಾಸೈಕರಸಿಕಾಃ |
ಅಮೀ ಮೂಕಾನ್ವಾಚಾಲಯಿತುಮಪಿ ಶಕ್ತಾ ಯತಿಪತೇಃ
ಕಟಾಕ್ಷಾಃ ಕಿಂ ಚಿತ್ರಂ ಭೃಶಮಘಟಿತಾಭೀಷ್ಟಘಟನೇ || ೧೩

ಆದರೆ ನಮ್ಮ ಯತಿರಾಜರ ಕಟಾಕ್ಷಗಳು ಮೂಕರನ್ನೂ ವಾಚಾಟರನ್ನಾಗಿ ಮಾಡಿಬಿಡುತ್ತವೆ. ಅವರ ಕಟಾಕ್ಷಗಳು ಕ್ಷೀರಸಾಗರದ ಅಲೆಗಳನ್ನು ಪರಿಹಾಸಮಾಡುವಷ್ಟು ಶುಭ್ರವಾದವು. ಹೀಗಿರುವಾಗ ಈ ಕಟಾಕ್ಷಗಳು ನನ್ನಲ್ಲಿ ಒಂದು ಅಘಟಿತ ಘಟನೆಯನ್ನುಂಟುಮಾಡುತ್ತವೆಂದರೆ ಆಶ್ಚರ್ಯವೇನು?

ಅಸ್ಮಜ್ಜಿಹ್ವಾಗ್ರಸಿಂಹಾಸನಮುಪನಯತು ಸ್ತೋಕ್ತಿಧಾರಾಮುದಾರಾಮ್
ಅದ್ವೈತಾಚಾರ್ಯಪಾದಸ್ತುತಿಕೃತಸುಕೃತೋದಾರತಾ ಶಾರದಾಂಬಾ |

ನೃತ್ಯನ್ಮೃತ್ಯುಂಜಯೋಚ್ಚೈರ್ಮುಕುಟತಟಕುಟೀನಿಸ್ಸ್ರವತ್ಸ್ವಃಸ್ರವಂತೀ-
ಕಲ್ಲೋಲೋದ್ವೇಲಕೋಲಾಹಲ ಮದಲಹರೀ-
ಖಂಡಿಪಾಂಡಿತ್ಯಹೃದ್ಯಾಮ್ || ೧೪

ಈ ಅದ್ವೈತಾಚಾರ್ಯಪಾದರನ್ನು ಸ್ತುತಿಸುವುದರಿಂದ ನಾನು ಪುಣ್ಯಶಾಲಿಯಾಗುತ್ತೇನೆ. ಆದ್ದರಿಂದ ನನ್ನಲ್ಲಿ ಶ್ರೀ ಶಾರದಾದೇವಿಯು ಔದಾರ್ಯವನ್ನು ತೋರಿಸಿ ವಿಶಾಲವಾದ ತನ್ನ ಉಕ್ತಿಧಾರೆಯನ್ನು ನನ್ನ ನಾಲಿಗೆಯ ಸಿಂಹಾಸನದ ಮೇಲೆ ಕುಳ್ಳಿರಿಸಲಿ. ತಾಂಡವ ನೃತ್ಯಮಾಡುವ ಮೃತ್ಯುಂಜಯನ ಜಟಾಜೂಟದಿಂದ ಧುಮುಕುವ ಗಂಗಾನದಿಯ ಅಲೆಗಳ ಕೋಲಾಹಲದ ಗರ್ವವನ್ನು ಖಂಡಿಸುವ ಪಾಂಡಿತ್ಯವು ಆ ಉಕ್ತಿ ಧಾರೆಗಿರಲಿ!

ಕ್ವೇದಂ ಶಂಕರಸದ್ಗುರೋಃ ಸುಚರಿತಂ ಕ್ವಾಹಂ ವರಾಕೀ ಕಥಂ
ನಿರ್ಬಧ್ನಾಸಿ ಚಿರಾರ್ಜಿತಂ ಮಮ ಯಶಃ ಕಿಂ ಮಜ್ಜಯಸ್ಯಂಬುಧೌ |
ಇತ್ಯುಕ್ತ್ವಾ ಚಪಲಾಂ ಪಲಾಯಿತವತೀಂ ವಾಚಂ ನಿಯುಂಕ್ತೇ ಬಲಾತ್
ಪ್ರತ್ಯಾಹೃತ್ಯ ಗುಣಸ್ತುತೌ ಕವಿಗಣಶ್ಚಿತ್ರಂ ಗುರೋರ್ಗೌರವಮ್ || ೧೫

"ಶ್ರೀಶಂಕರಸದ್ಗುರುಗಳ ಸುಂದರವಾದ ಚರಿತ್ರೆಯೆಲ್ಲಿ?ಅಲ್ಪಳಾದ ನಾನೆಲ್ಲಿ?ಎಲೈ ಕವಿಯೆ, ನನ್ನನ್ನೇಕೆ ನಿರ್ಬಂಧಿಸುವೆ?ಚಿರಕಾಲದಿಂದ ನಾನು ಸಂಪಾದಿಸಿಕೊಂಡಿರುವ ಕೀರ್ತಿಯನ್ನು ಕಡಲಿನಲ್ಲಿ ಮುಳುಗಿಸಿಬಿಡುವಿಯೋ ಹೇಗೆ?-"ಹೀಗೆ ಹೇಳಿ ಓಡಿಹೋಗುತ್ತಿದ್ದ ಚಪಲೆಯಾದ ವಾಗ್ದೇವಿಯನ್ನು ಕವಿಗಳು ಬಲವಂತವಾಗಿ ಎಳೆದುತಂದು ಶ್ರೀ ಶಂಕರರ ಗುಣಸ್ತುತಿಯಲ್ಲಿ ನಿಯೋಜಿಸುತ್ತಾರೆ. ಆಹಾ! ನಮ್ಮ ಗುರುಗಳ ಮಹಿಮೆ ಎಷ್ಟು ದೊಡ್ಡದು!

ರೂಕ್ಷೈಕಾಕ್ಷರವಾಙ್ ನಿಘಂಟು ಶರಣೈರೌಣಾದಿಕ ಪ್ರತ್ಯಯ
ಪ್ರಾಯೈರ್ಹಂತ ಯಜಂತ ದಂತುರ ತರ್ರೈರ್ದುರ್ಬೋಧ ದೂರಾನ್ವಯೈಃ|
ಕ್ರೂರಾಣಾಂ ಕವಿತಾವತಾಂ ಕತಿಪಯೈಃ ಕಷ್ಟೇನ ಕೃಷ್ಟೈಃ ಪದ್ಯೈಃ
ಹಾಹಾ ಸ್ಯಾದ್ವಶಗಾ ಕಿರಾತವಿತತೇರೇಣೀವ ವಾಣೀ ಮಮ || ೧೬

ಒರಟು ಮಾತುಗಳನ್ನು ಬಳಸುವ ಕೆಲವು ಕವಿಗಳು ಇದ್ದಾರೆ. ಅವರು ಕರ್ಕಶ ವರ್ಣಗಳನ್ನೂ ಏಕಾಕ್ಷರದ ಮಾತುಗಳನ್ನೂ ನಿಘಂಟುಗಳಲ್ಲಿ ಹುಡುಕಿ ತೆಗೆದ ಪದಗಳನ್ನೂ ಬಳಸುತ್ತಾರೆ. ಆ ಕೃತಿಗಳಲ್ಲಿ ಉಣಾದಿಸೂತ್ರಗಳಿಂದ ನಿಷ್ಪನ್ನವಾದ ಶಬ್ದಗಳೇ ಹೆಚ್ಚಾಗಿರುತ್ತವೆ. ಯಜಂತ ಶಬ್ದಗಳೂ ತುಂಬಿಕೊಂಡಿರುತ್ತವೆ. ತಿಳಿಯಲು ಕಷ್ಟವಾದ ಅರ್ಥವುಳ್ಳ ಈ ಶಬ್ದಗಳ ಪರಸ್ಪರ ಅನ್ವಯವೂ ದೂರದೂರದಲ್ಲಿರುತ್ತದೆ. ಹೇಗೋ ಎಳೆದು ತಂದು ಪದಗಳನ್ನು ಜೋಡಿಸಿರುತ್ತಾರೆ. ಕಿರಾತರ ಗುಂಪಿಗೆ ಸಿಕ್ಕಿಬಿದ್ದ ಹೆಣ್ಣು ಜಿಂಕೆಯಂತೆ ಈ ಕರ್ಕಶ ಕವಿಗಳ ವಶಕ್ಕೆ, ಅಯ್ಯೋ, ನನ್ನ ವಾಣಿಯು ಸಿಕ್ಕಿಹೋದರೇನು ಗತಿ?

ನೇತಾ ಯತ್ರೋಲ್ಲಸತಿ ಭಗವತ್ಪಾದಸಂಜ್ಞೋ ಮಹೇಶಃ
ಶಾಂತಿರ್ಯತ್ರ ಪ್ರಕಟತಿ ರಸಃ ಶೇಷವಾನುಜ್ಜ್ವಲಾದ್ಯೈಃ |
ಯತ್ರಾವಿದ್ಯಾಕ್ಷತಿರಪಿ ಫಲಂ ತಸ್ಯ ಕಾವ್ಯಸ್ಯ ಕರ್ತಾ
ಧನ್ಯೋ ವ್ಯಾಸಾಚಲಕವಿವರಸ್ತತ್ಕೃತಿಜ್ಞಾಶ್ಚ ಧನ್ಯಾಃ || ೧೭

ಈ ನನ್ನ ಕಾವ್ಯದಲ್ಲಿ ಶ್ರೀ ಶಂಕರಭಗವತ್ಪಾದರೆಂಬ ಹೆಸರಿನ ಮಹೇಶ್ವರನು ನಾಯಕನಾಗಿದ್ದಾನೆ. ಶೃಂಗಾರಾದಿ ಗುಣಗಳಿಂದ ಸಹಿತವಾದ ಶಾಂತರಸವು ಪ್ರಧಾನವಾಗಿ ಇಲ್ಲಿ ಪ್ರಕಾಶಿಸುತ್ತದೆ. ಈ ಕಾವ್ಯಕ್ಕೆ ಆನಂದಾದಿಗಳು ಮಾತ್ರವಲ್ಲ, ಅಜ್ಞಾನದ ನಾಶವೂ ಸಹ ಫಲವಾಗಿರುತ್ತದೆ. ಇಂತಹ ಶ್ರೇಷ್ಠವಾದ ಕಾವ್ಯದ ಕರ್ತನಾದ, ವೇದವ್ಯಾಸರಂತೆ ಸ್ಥಿರಚಿತ್ತನಾದ ಈ ಕವಿಶ್ರೇಷ್ಠನು ಧನ್ಯನೇ ಸರಿ. ಈ ಕಾವ್ಯವನ್ನು ಓದುವ ವಾಚಕರು ಧನ್ಯರು.

ತತ್ರಾದಿಮ ಉಪೋದ್ಘಾತೋ ದ್ವಿತೀಯೇ ತು ತದುದ್ಭವಃ |
ತೃತೀಯೇ ತತ್ತದಮೃತಾಂಧೋಽವತಾರ ನಿರೂಪಣಮ್ || ೧೮

ಈ ಶಂಕರ ವಿಜಯದ ಮೊದಲನೆಯ ಸರ್ಗದಲ್ಲಿ ಉಪೋದ್ಘಾತವಿದೆ (ಪ್ರಸ್ತಾವನೆ). ಎರಡನೆಯದರಲ್ಲಿ ಪರಮೇಶ್ವರನ ಅವತಾರದ ವರ್ಣನೆಯೂ, ಮೂರನೆಯದರಲ್ಲಿ ದೇವತೆಗಳ ಅವತಾರದ ನಿರೂಪಣೆಯೂ ಇದೆ.

ಚತುರ್ಥಸರ್ಗೇ ತಚ್ಛುದ್ಧಾಷ್ಟಮ ಪ್ರಾಕ್ಚರಿತಂ ಸ್ಥಿತಮ್ |
ಪಂಚಮೇ ತದ್ಯೋಗ್ಯಸುಖಾಶ್ರಮಪ್ರಾಪ್ತಿ ನಿರೂಪಣಮ್ || ೧೯

ನಾಲ್ಕನೆಯ ಸರ್ಗದಲ್ಲಿ ಆಚಾರ್ಯರ ಎಂಟು ವರ್ಷಗಳ ಒಳಗಿನ ಪರಿಶುದ್ಧವಾದ ಚರಿತ್ರೆ ಇದೆ. ಐದನೆಯದರಲ್ಲಿ ಆನಂದಾಶ್ರಮವೆನಿಸಿದ ಸಂನ್ಯಾಸಸ್ವೀಕಾರದ ನಿರೂಪಣೆ ಇದೆ.

ಮಹತಾಽನೇಹಸಾ ಯೈಷಾ ಸಂಪ್ರದಾಯಾಗತಾ ಗತಾ |
ತಸ್ಯಾಃ ಶುದ್ಧಾತ್ಮವಿದ್ಯಾಯಾಃ ಷಷ್ಠೇ ಸರ್ಗೇ ಪ್ರತಿಷ್ಠಿತಿಃ || ೨೦

ಬಹಳ ದೀರ್ಘಕಾಲದಿಂದ ಸಂಪ್ರದಾಯಾನುಸಾರವಾಗಿ ಬಂದು ನಡುವೆಲುಪ್ತವಾಗಿದ್ದ ಈ ಶುದ್ಧವಾದ ಆತ್ಮವಿದ್ಯೆಯ ಸ್ಥಾಪನೆಯು ಆರನೆಯ ಸರ್ಗದಲ್ಲಿ ವರ್ಣಿತವಾಗಿದೆ.

ತದ್ವ್ಯಾಸಾಚಾರ್ಯಸಂದರ್ಶ ವಿಚಿತ್ರಂ ಸಪ್ತಮೇ ಸ್ಥಿತಮ್ |
ಸ್ಥಿತೋಽಷ್ಟಮೇ ಮಂಡನಾರ್ಯಸಂವಾದೋ ನವಮೇ ಮುನೇಃ || ೨೧

ವಾಣೀಸಾಕ್ಷಿಕ ಸಾರ್ವಜ್ಞ್ಯ ನಿರ್ವಾಹೋಪಾಯ ಚಿಂತನಮ್ |
ದಶಮೇ ಯೋಗಶಕ್ತ್ಯಾ ಭೂಪತಿಕಾಯ ಪ್ರವೇಶನಮ್ || ೨೨

ಏಳನೆಯ ಸರ್ಗದಲ್ಲಿ ವೇದವ್ಯಾಸರ ಸಂದರ್ಶನವೆಂಬ ಆಶ್ಚರ್ಯಕರವಾದ ಕಥೆ ಇದೆ. ಎಂಟನೆಯುದರಲ್ಲಿ ಮಂಡನಮಿಶ್ರರೊಡನೆ ಸಂವಾದವೂ, ಒಂಬತ್ತನೆಯದರಲ್ಲಿ ಉಭಯಭಾರತೀಸಮ್ಮತವಾದ ಆಚಾರ್ಯರ ಸರ್ವಜ್ಞತ್ವವೂ, ಹತ್ತನೆಯ ಸರ್ಗದಲ್ಲಿ ಆಚಾರ್ಯರು ತಮ್ಮ ಯೋಗಶಕ್ತಿಯಿಂದ ಅಮರುಕರಾಜನ ದೇಹವನ್ನು ಪ್ರವೇಶಿಸಿದ ಕಥೆಯೂ ಬಂದಿವೆ.

ಬುದ್ಧ್ವಾ ಮೀನಧ್ವಜ ಕಲಾಸ್ತತ್ಪ್ರಸಂಗ ಪ್ರಪಂಚನಮ್ |
ಸರ್ಗ ಏಕಾದಶೇ ತೂಗ್ರಭೈರವಾಭಿಧನಿರ್ಜಯಃ || ೨೩

ಅಲ್ಲದೆ ಕಾಮಶಾಸ್ತ್ರವನ್ನು ದೇಹಾಂತರದಲ್ಲಿ ಆಚಾರ್ಯರು ಕಲಿತರೆಂಬ ನಿರೂಪಣೆಯು ಹತ್ತನೆಯ ಸರ್ಗದಲ್ಲಿ ಬಂದಿದೆ. ಹನ್ನೊಂದನೆಯ ಸರ್ಗದಲ್ಲಿ ಉಗ್ರಭೈರವನನ್ನು ಜಯಿಸಿದ ಪ್ರಸಂಗವುಂಟು.

ದ್ವಾದಶೇ ಹಸ್ತಧಾತ್ರ್ಯಾರ್ಯ ತೋಟಕೋಭಯಸಂಶ್ರಯಃ |
ವಾರ್ತಿಕಾಂತಬ್ರಹ್ಮವಿದ್ಯಾಚಾಲನಂ ತು ತ್ರಯೋದಶೇ || ೨೪

ಹನ್ನೆರಡನೆಯ ಸರ್ಗದಲ್ಲಿ ಹಸ್ತಾಮಲಕಾಚಾರ್ಯರು ಮತ್ತು ತೋಟಕಾಚಾರ್ಯರು ಎಂಬ ಇಬ್ಬರು ಶಿಷ್ಯರ ಸಂಗ್ರಹದ ವರ್ಣನೆಯುಂಟು. ಹದಿಮೂರನೇ ಸರ್ಗದಲ್ಲಿ ವಾರ್ತಿಕ ಪರ್ಯಂತವಾದ ಬ್ರಹ್ಮವಿದ್ಯೆಯ ಪ್ರಚಾರವನ್ನು ವರ್ಣಿಸಲಾಗಿದೆ.

ಚತುರ್ದಶೇ ಪದ್ಮಪಾದತೀರ್ಥಯಾತ್ರಾನಿರೂಪಣಮ್ |
ಸರ್ಗೇ ಪಂಚದಶೇ ತೂಕ್ತಂ ತದಾಶಾಜಯಕೌತುಕಮ್ || ೨೫

ಹದಿನಾಲ್ಕನೆಯ ಸರ್ಗದಲ್ಲಿ ಪದ್ಮಪಾದಾಚಾರ್ಯರ ತೀರ್ಥಯಾತ್ರೆಯ ವರ್ಣನೆಯುಂಟು. ಹದಿನೈದನೆಯ ಸರ್ಗದಲ್ಲಾದರೋ ಶ್ರೀ ಶಂಕರಾಚಾರ್ಯರ ದಿಗ್ವಿಜಯದ ವರ್ಣನೆ ಇದೆ.

ಷೋಡಶೇ ಶಾರದಾಪೀಠ ವಾಸಸ್ತಸ್ಯ ಮಹಾತ್ಮನಃ |
ಇತಿ ಷೋಡಶಭಿಃ ಸರ್ಗೈರ್ವ್ಯ್ರಕ್ತಾಪ್ಯದ್ಯಾ ಶಾಂಕರೀ ಕಥಾ || ೨೬

ಹದಿನಾರರಲ್ಲಿ ಆ ಮಹಾತ್ಮರು ಕಾಶ್ಮೀರದ ಶಾರದಾಪೀಠವನ್ನೇರಿದುದರ ವರ್ಣನೆ ಇದೆ. ಹೀಗೆ ಹದಿನಾರು ಸರ್ಗಗಳಿಂದ ಶ್ರೀ ಶಂಕರರ ಕಥೆಯು ಪ್ರತಿಪಾದಿತವಾಗುತ್ತದೆ.

ಸೈಷಾ ಕಲಿಮಲಚ್ಛೇತ್ರೀ ಸಕೃಚ್ಛ್ರುತ್ಯಾಽಪಿ ಕಾಮದಾ|
ನಾನಾ ಪ್ರಶ್ನೋತ್ತರೈ ರಮ್ಯಾ ವಿದಾಮಾರಭ್ಯತೇ ಮುದೇ || ೨೭

ಈ ಶಂಕರಾಚಾರ್ಯಚರಿತ್ರೆಯು ಕಲಿಕಲ್ಮಷವನ್ನು ಹೋಗಲಾಡಿಸತಕ್ಕದ್ದೂ, ಒಮ್ಮೆ ಕೇಳಿದರೆ ಸಾಕು, ಇಷ್ಟಾರ್ಥವನ್ನು ಕೊಡತಕ್ಕದ್ದೂ ಆಗಿದೆ. ನಾನಾ ಪ್ರಶ್ನೋತ್ತರಗಳಿಂದ ರಮ್ಯವಾದ ಈ ಕಥೆಯನ್ನು ವಿದ್ವಾಂಸರಿಗೆ ಆನಂದವಾಗಲೆಂದು ಆರಂಭಿಸುತ್ತಿದ್ದೇನೆ.

ಏಕದಾ ದೇವತಾ ರೂಪ್ಯಾಚಲಸ್ಥಮುಪತಸ್ಥಿರೇ |
ದೇವದೇವಂ ತುಷಾರಾಂಶುಮಿವ ಪೂರ್ವಾಚಲಸ್ಥಿತಮ್ || ೨೮

ಒಂದು ಸಲ ದೇವತೆಗಳು, ಉದಯಾಚಲದಲ್ಲಿ ಪ್ರಕಾಶಿಸುವ ಪೂರ್ಣಚಂದ್ರನಂತಿರುವ, ಕೈಲಾಸಪರ್ವತದಲ್ಲಿರುವ ದೇವದೇವನಾದ ಪರಮೇಶ್ವರನ ಬಳಿಗೆ ಹೋದರು.

ಪ್ರಸಾದಾನುಮಿತಸ್ವಾರ್ಥ ಸಿದ್ಧಯಃ ಪ್ರಣಿಪತ್ಯ ತಮ್ |
ಮುಕುಲೀಕೃತ ಹಸ್ತಾಬ್ಜಾ ವಿನಯೇನ ವ್ಯಜಿಜ್ಞಪನ್ || ೨೯

ಪರಮೇಶ್ವರನ ಪ್ರಸನ್ನತೆಯಿಂದಲೇ ತಮ್ಮ ಇಷ್ಟಾರ್ಥಸಿದ್ಧಿಯಾಗುತ್ತದೆ ಎಂದು ಊಹಿಸಿಕೊಂಡ ಆ ದೇವತೆಗಳು ಶಿವನಿಗೆ ಸಾಷ್ಟಾಂಗವೆರಗಿ ಕರಕಮಲಗಳನ್ನು ಮುಗಿದುಕೊಂಡು ಹೀಗೆ ವಿಜ್ಞಾಪಿಸಿದರು:

ವಿಜ್ಞಾತಮೇವ ಭಗವನ್ ವಿದ್ಯತೇ ಯದ್ಧಿತಾಯ ನಃ |
ವಂಚಯನ್ ಸುಗತಾನ್ ಬುದ್ಧವಪುರ್ಧಾರೀ ಜನಾರ್ದನಃ || ೩೦

"ಹೇ ಭಗವನ್, ನಮ್ಮ ಹಿತಕ್ಕಾಗಿಯೇ ಮಹಾವಿಷ್ಣುವು ಬುದ್ಧನ ವೇಷವನ್ನು ಧರಿಸಿ, ಸುಗತರೆಂಬ ಜನರನ್ನು ವಂಚಿಸುತ್ತಿದ್ದಾನೆಂಬುದು ನಿನಗೆ ತಿಳಿದೇ ಇದೆ.

ತತ್ಪ್ರಣೀತಾಗಮಾಲಂಬೈರ್ಬೌದ್ಧೈರ್ದರ್ಶನದೂಷಕೈಃ |
ವ್ಯಾಪ್ತೇದಾನೀಂ ಪ್ರಭೋ ಧಾತ್ರೀ ರಾತ್ರಿಃ ಸಂತಮಸೈರಿವ || ೩೧

"ಆ ಬುದ್ಧನಿಂದ ಪ್ರಣೀತವಾದ ಆಗಮವನ್ನು ಅವಲಂಬಿಸಿದ ಬೌದ್ಧರು ವೈದಿಕ ದರ್ಶನಗಳನ್ನು ದೂಷಿಸುತ್ತಾ, ರಾತ್ರಿಯನ್ನು ಕತ್ತಲೆಯ ಖಂಡಗಳು ವ್ಯಾಪಿಸಿದಂತೆ, ಹೇ ಸ್ವಾಮಿ, ಭೂಮಿಯನ್ನು ಈಗ ವ್ಯಾಪಿಸಿಬಿಟ್ಟಿದ್ದಾರೆ.

ವರ್ಣಾಶ್ರಮಸಮಾಚಾರಾನ್ ದ್ವಿಷಂತಿ ಬ್ರಹ್ಮವಿದ್ವಿಷಃ|
ಬ್ರುವಂತ್ಯಾಮ್ನಾಯವಚಸಾಂ ಜೀವಿಕಾಮಾತ್ರತಾಂ ಪ್ರಭೋ || ೩೨

ನ ಸಂಧ್ಯಾದೀನಿ ಕರ್ಮಾಣಿ ನ್ಯಾಸಂ ವಾ ನ ಕದಾಚನ|
ಕರೋತಿ ಮನುಜಃ ಕಶ್ಚಿತ್ ಸರ್ವೇ ಪಾಖಂಡತಾಂ ಗತಾಃ || ೩೩

"ಈ ವೇದವಿರೋಧಿಗಳು ವರ್ಣಾಶ್ರಮಾಚಾರಗಳನ್ನು ದ್ವೇಷಿಸುತ್ತಾರೆ. ಓ ಪ್ರಭುವೇ, ವೇದಗಳೆಲ್ಲವೂ ಹೊಟ್ಟೆಪಾಡಿಗಾಗಿ – ಎಂದು ಹೇಳುತ್ತಿದ್ದಾರೆ. ಈಗ ಮನುಷ್ಯನು ಸಂಧ್ಯಾವಂದನೆ ಮೊದಲಾದ ಕರ್ಮಗಳನ್ನು ಆಚರಿಸುತ್ತಿಲ್ಲ. ಸಂನ್ಯಾಸವನ್ನಂತೂ ಸ್ವೀಕರಿಸುವುದೇ ಇಲ್ಲ. ಎಲ್ಲರೂ ಪಾಖಂಡಿಗಳಾಗಿ ಬಿಟ್ಟಿದ್ದಾರೆ.

ಶ್ರುತೇ ಪಿದಧತಿ ಶ್ರೋತ್ರೇ ಕ್ರತುರಿತ್ಯಕ್ಷರದ್ವಯೇ |
ಕ್ರಿಯಾಃ ಕಥಂ ಪ್ರವರ್ತೇರನ್ ಕಥಂ ಕ್ರತುಭುಜೋ ವಯಮ್ || ೩೪

"ಕ್ರತು (ಯಾಗ)-ಎಂಬ ಎರಡು ಅಕ್ಷರಗಳನ್ನು ಕೇಳಿದರೆ ಸಾಕು, ಮನುಷ್ಯನು ಎರಡೂ ಕಿವಿಗಳನ್ನು ಮುಚ್ಚುತ್ತಾನೆ. ಹೀಗಿರುವಾಗ ಯಾಗ ಕರ್ಮಗಳು ಹೇಗೆ ತಾನೇ ನಡೆದಾವು? ನಾವು ಕ್ರತು ಭುಜರಾಗಿರುವುದಾದರೂ ಹೇಗೆ?

ಟಿಪ್ಪಣಿ:ಕ್ರತುಭುಕ್=ಯಾಗದಲ್ಲಿ ಕೊಟ್ಟ ಹವಿಸ್ಸನ್ನು ಭಕ್ಷಿಸತಕ್ಕವನು, ದೇವತೆ.

ಶಿವವಿಷ್ಣ್ವಾಗಮಪರೈರ್ಲಿಂಗ ಚಕ್ರಾದಿ ಚಿಹ್ನಿತೈಃ |
ಪಾಖಂಡೈಃ ಕರ್ಮ ಸಂನ್ಯಸ್ತಂ ಕಾರುಣ್ಯಮಿವ ದುರ್ಜನೈಃ || ೩೫

ಅನನ್ಯೇನೈವ ಭಾವೇನ ಗಚ್ಛಂತ್ಯುತ್ತಮ ಪೂರುಷಮ್ |
ಶ್ರುತಿಃ ಸಾಧ್ವೀ ಮದಕ್ಷೀಬೈಃ ಕಾ ವಾ ಶಾಕ್ಯೈರ್ನ ದೂಷಿತಾ || ೩೬

"ಅಲ್ಲದೆ ಲಿಂಗ, ಚಕ್ರ ಮುಂತಾದ ಚಿಹ್ನೆಗಳನ್ನು ಧರಿಸಿದ ಶೈವಾಗಮದವರು, ವೈಷ್ಣವಾಗಮದವರು-ಎಂಬ ಪಾಖಂಡರು ವೈದಿಕವಿಧಿಯನ್ನು ತ್ಯಜಿಸಿದ್ದಾರೆ. ದುರ್ಜನರು ಕರುಣೆಯನ್ನು ತ್ಯಜಿಸಿದಂತೆ, ಅವರು ಕರ್ಮವನ್ನು ತ್ಯಜಿಸಿದ್ದಾರೆ. ಅನನ್ಯಭಾವದಿಂದ ತನ್ನ ಪತಿಯನ್ನೇ ಅನುಸರಿಸುವ ಸಾಧ್ವಿಯನ್ನು ಮದೋನ್ಮತ್ತರು ಕೆಡಿಸುವಂತೆ, ಅನನ್ಯಭಾವದಿಂದ ಉತ್ತಮ ಪುರುಷನಾದ ಪರಮಾತ್ಮನನ್ನು ಪ್ರತಿಪಾದಿಸುವ ಶ್ರುತಿಯನ್ನು ಈ ಬೌದ್ಧರು ದೂಷಿಸುತ್ತಿದ್ದಾರೆ.

ಸದ್ಯಃಕೃತ್ತದ್ವಿಜಶಿರಃ ಪಂಕಜಾರ್ಚಿತಭೈರವೈಃ |
ನ ಧ್ವಸ್ತಾ ಲೋಕಮರ್ಯಾದಾ ಕಾ ವಾ ಕಾಪಾಲಿಕಾಧಮೈಃ || ೩೭

ಅನ್ಯೇಽಪಿ ಬಹವೋ ಮಾರ್ಗಾಃ ಸಂತಿ ಭೂಮೌ ಸಕಂಟಕಾಃ |
ಜನೈರ್ಯೇಷು ಪದಂ ದತ್ತ್ವಾ ದುರಂತಂ ದುಃಖಮಾಪ್ಯತೇ || ೩೮

"ಕಮಲದಂತೆ ಕಾಣುವ ಬ್ರಾಹ್ಮಣನ ಶಿರಸ್ಸನ್ನು ಕಡಿದು ಒಡನೆಯೇ ಭೈರವನನ್ನು ಅರ್ಚಿಸತಕ್ಕ ಕಾಪಲಿಕಾಧಮರು ಎಲ್ಲ ಬಗೆಯ ಲೋಕಮರ್ಯಾದೆಯನ್ನೂ

ಹಾಳುಮಾಡಿದ್ದಾರೆ. ಹೀಗೆ ಭೂಲೋಕದಲ್ಲಿ ಮುಳ್ಳುಗಳಿಂದ ತುಂಬಿದ ಇನ್ನೂ ಬಹಳ ಕೊಳಕು ಮಾರ್ಗಗಳು ಇವೆ. ಜನರು ಈ ಮುಳ್ಳಿನ ಮಾರ್ಗಗಳಲ್ಲಿ ಹೆಜ್ಜೆಯನ್ನಿಟ್ಟು ದುಃಖದ ದುರಂತವನ್ನೇ ಪಡೆಯುತ್ತಿದ್ದಾರೆ.

ತದ್ಭವಾನ್ ಲೋಕರಕ್ಷಾರ್ಥಮುತ್ಸಾದ್ಯ ನಿಖಿಲಾನ್ ಖಲಾನ್ |
ವರ್ತ್ಮ ಸ್ಥಾಪಯತು ಶ್ರೌತಂ ಜಗದ್ಯೇನ ಸುಖಂ ವ್ರಜೇತ್ || ೩೯

ಇತ್ಯುಕ್ತ್ವೋಪರತಾನ್ ದೇವಾನುವಾಚ ಗಿರಿಜಾಪ್ರಿಯಃ |
ಮನೋರಥಂ ಪೂರಯಿಷ್ಯೇ ಮಾನುಷ್ಯಮವಲಂಬ್ಯ ವಃ || ೪೦

ಆದ್ದರಿಂದ ಲೋಕರಕ್ಷಣೆಗಾಗಿ ನೀನು ಈ ಎಲ್ಲ ಖಳಜನರನ್ನೂ ನಿರ್ಮೂಲಮಾಡಿ ವೈದಿಕ ಮಾರ್ಗವನ್ನು ಭೂಲೋಕದಲ್ಲಿ ಸ್ಥಾಪಿಸಬೇಕು. ಅದರಿಂದ ಜಗತ್ತಿಗೆ ಸುಖವಾಗುತ್ತದೆ"- ಎಂದು ಹೇಳಿ ಸುಮ್ಮನಾದ ದೇವತೆಗಳನ್ನು ಕುರಿತು ಗಿರಿಜಾರಮಣನಾದ ಶಿವನು ಹೀಗೆಂದನು- "ನಾನು ಮನುಷ್ಯಾವತಾರವನ್ನು ಮಾಡಿ ನಿಮ್ಮ ಮನೋರಥವನ್ನು ನಡೆಸಿಕೊಡುವೆನು.

ದುಷ್ಟಾಚಾರ ವಿನಾಶಾಯ ಧರ್ಮಸಂಸ್ಥಾಪನಾಯ ಚ |
ಭಾಷ್ಯಂ ಕುರ್ವನ್ ಬ್ರಹ್ಮಸೂತ್ರ ತಾತ್ಪರ್ಯಾರ್ಥ ವಿನಿರ್ಣಯಮ್ || ೪೧

"ದುಷ್ಟವಾದ ಆಚಾರವನ್ನು ನಾಶಗೊಳಿಸಿ, ಧರ್ಮಸಂಸ್ಥಾಪನೆ ಮಾಡುವುದಕ್ಕಾಗಿ ಬ್ರಹ್ಮಸೂತ್ರಗಳ ತಾತ್ಪರ್ಯವನ್ನು ನಿರ್ಣಯಿಸುವ ಶಾರೀರಕ ಭಾಷ್ಯವನ್ನು ನಿರ್ಮಿಸುವೆನು.

ಮೋಹನಪ್ರಕೃತಿದ್ವೈತ ಧ್ವಾಂತ ಮಧ್ಯಾಹ್ನಭಾನುಭಿಃ |
ಚತುರ್ಭಿಃ ಸಹಿತಃ ಶಿಷ್ಯೈಶ್ಚತುರ್ಭೈರ್ಹರಿವದ್ಭುಜೈಃ || ೪೨

"ಅಜ್ಞಾನದಿಂದ ಹುಟ್ಟಿದ ದ್ವೈತವೆಂಬ ಕತ್ತಲೆಯನ್ನು ನಾಶಮಾಡುವ ಮಧ್ಯಾಹ್ನದ ಸೂರ್ಯರಂತೆ ಕಾಣುವ ನಾಲ್ವರು ಶಿಷ್ಯರಿಂದ ಸಹಿತನಾಗಿರುವೆನು. ಧೀಮಂತರಾದ ಆ ಶಿಷ್ಯರು, ಶ್ರೀಹರಿಗೆ ನಾಲ್ಕುತೋಳುಗಳಿದ್ದಂತೆ ನನಗೆ ಸಹಾಯಕರಾಗಿರುವರು.

ಯತೀಂದ್ರಃ ಶಂಕರೋ ನಾಮ್ನಾ ಭವಿಷ್ಯಾಮಿ ಮಹೀತಲೇ |
ಮದ್ವತ್ತಥಾ ಭವಂತೋಽಪಿ ಮಾನುಷೀಂ ತನುಮಾಶ್ರಿತಾಃ || ೪೩

ತಂ ಮಾಮನುಸರಿಷ್ಯಂತಿ ಸರ್ವೇ ತ್ರಿದಿವವಾಸಿನಃ|
ತದಾ ಮನೋರಥಃ ಪೂರ್ಣೋ ಭವತಾಂ ಸ್ಯಾನ್ನಸಂಶಯಃ || ೪೪

ನಾನು ಭೂಲೋಕದಲ್ಲಿ ಯತೀಂದ್ರನಾದ ಶಂಕರಾಚಾರ್ಯನೆಂಬ ಹೆಸರಿನಿಂದ ಅವತರಿಸಿ ಸಂಚರಿಸುವೆನು. ನನ್ನಂತೆ ನೀವೂ ಸಹ, ಸ್ವರ್ಗವಾಸಿಗಳಾದ ಎಲ್ಲರೂ , ಮನುಷ್ಯರಾಗಿ ಜನಿಸಿ ನನ್ನನ್ನು ಅನುಸರಿಸಿಕೊಂಡಿರತಕ್ಕದ್ದು. ಆಗ ನಿಮ್ಮೆಲ್ಲರ ಮನೋರಥವು ಪೂರ್ಣವಾಗುವುದು, ಸಂಶಯವಿಲ್ಲ.

ಬ್ರುವನ್ನೇವಂ ದಿವಿಷದಃ ಕಟಾಕ್ಷಾನನ್ಯದುರ್ಲಭಾನ್ ।
ಕುಮಾರೇ ನಿದಧೇ ಭಾನುಃ ಕಿರಣಾನಿವ ಪಂಕಜೇ ॥ ೪೫

ಈ ರೀತಿಯಲ್ಲಿ ದೇವತೆಗಳಿಗೆ ಹೇಳಿ ಇನ್ನೊಬ್ಬರಿಗೆ ದೊರಕಲಾಗದ ಕಟಾಕ್ಷ ವೀಕ್ಷಣಗಳನ್ನು ಕುಮಾರನಾದ ಸ್ಕಂದನಮೇಲೆ ಇಟ್ಟನು. ಆಗ ಸೂರ್ಯನು ಕಮಲದಲ್ಲಿ ತನ್ನ ಕಿರಣಗಳನ್ನಿಟ್ಟಂತೆ ಕಾಣಿಸಿತು.

ಕ್ಷೀರನೀರಧೇರ್ವೀಚಿಸಚಿವಾನ್ ಪ್ರಾಪ್ಯ ತಾನ್ ಗುಹಃ ।
ಕಟಾಕ್ಷಾನ್ ಮುಮುದೇ ರಶ್ಮೀನ್ ಉದನ್ವಾನ್ ಐಂದವಾನಿವ ॥ ೪೬

ಅವದನ್ನಂದನಂ ಸ್ಕಂದಮಮಂದಂ ಚಂದ್ರಶೇಖರಃ ।
ದಂತಚಂದ್ರಾತಪಾನಂದಿಬೃಂದಾರಕಚಕೋರಕಃ ॥ ೪೭

ಕ್ಷೀರಸಾಗರದ ತರಂಗಗಳಂತೆ ಶುಭ್ರವಾದ ಆ ಕಟಾಕ್ಷ ವೀಕ್ಷಣಗಳನ್ನು ಪಡೆದು ಷಣ್ಮುಖನು ಆನಂದಿಸಿದನು. ಚಂದ್ರಕಿರಣಗಳನ್ನು ಪಡೆದ ಸಮುದ್ರದಂತೆ ಹಿಗ್ಗಿದನು. ಆ ಚಂದ್ರಶೇಖರನು ತನ್ನ ನಂದನನಾದ ಸ್ಕಂದನನ್ನು ಕುರಿತು ಸ್ಪಷ್ಟವಾಗಿ ಹೀಗೆ ನುಡಿದನು. ಅವನು ಮಾತನಾಡುವಾಗ ಹಲ್ಲುಗಳ ಶುಭ್ರಕಾಂತಿಯು ದೇವತೆಗಳೆಂಬ ಚಕೋರಗಳನ್ನು ಸಂತೋಷಪಡಿಸಿತು.

ಶೃಣು ಸೌಮ್ಯ ವಚಃ ಶ್ರೇಯೋ ಜಗದುದ್ಧಾರಗೋಚರಮ್ ।
ಕಾಂಡತ್ರಯಾತ್ಮಕೇ ವೇದೇ ಪ್ರೋದ್ಧೃತೇ ಸ್ಯಾದ್ ದ್ವಿಜೋದ್ಧೃತಿಃ ॥ ೪೮

ತದ್ರಕ್ಷಣೇ ರಕ್ಷಿತಂ ಸ್ಯಾತ್ಸಕಲಂ ಜಗತೀತಲಮ್ ।
ತದಧೀನತ್ವತೋ ವರ್ಣಾಶ್ರಮಧರ್ಮತತೇಸ್ತತಃ ॥ ೪೯

"ಸೌಮ್ಯ, ಜಗತ್ತಿನ ಉದ್ಧಾರಕ್ಕೆ ಕಾರಣವೂ ಶ್ರೇಯಸ್ಕರವೂ ಆದ ಈ ಮಾತನ್ನು ಕೇಳು. (ಕರ್ಮ, ಉಪಾಸನಾ, ಜ್ಞಾನ) ಎಂಬ ಕಾಂಡತ್ರಯವುಳ್ಳ ವೇದವನ್ನು ಉದ್ಧರಿಸಿದರೆ ದ್ವಿಜರನ್ನು ಉದ್ಧರಿಸಿದಂತೆಯೇ ಆಗುತ್ತದೆ. ಈ ದ್ವಿಜರನ್ನು ಸಂರಕ್ಷಿಸಿದರೆ ಸಕಲ ಜಗತ್ತಿನ ಸಂರಕ್ಷಣೆಯೂ ಆಗುತ್ತದೆ. ಏಕೆಂದರೆ, ವರ್ಣಾಶ್ರಮಧರ್ಮಗಳು ವಿಪ್ರಜನರಿಗೆ ಅಧೀನವಾಗಿವೆ.

ಇದಾನೀಮಿದಮುದ್ಧಾರ್ಯಮಿತಿವೃತ್ತಿಮತಃ ಪುರಾ |
ಮಮ ಗೂಢಾಶಯವಿದೌ ವಿಷ್ಣುಶೇಷೌ ಸಮೀಪಗೌ || ೫೦

ಮಧ್ಯಮಂ ಕಾಂಡಮುದ್ಧರ್ತುಮನುಜ್ಞಾತೌ ಮಯೈವ ತೌ |
ಅವತೀರ್ಯಾಂಶತೋ ಭೂಮೌ ಸಂಕರ್ಷಣ ಪತಂಜಲೀ || ೫೧

"ಆದ್ದರಿಂದ ಇದನ್ನು ಉದ್ಧರಿಸಬೇಕೆಂಬ ನನ್ನ ಗೂಢಾಶಯವನ್ನು ಅರಿತುಕೊಂಡ ಮಹಾವಿಷ್ಣು ಮತ್ತು ಆದಿಶೇಷ-ಇವರಿಬ್ಬರೂ ಈ ಕಾರ್ಯವನ್ನು ಮಾಡಬೇಕೆಂದು ಉದ್ದೇಶಿಸಿದರು. ಮಧ್ಯಮವಾದ ದೇವತಾಕಾಂಡವನ್ನು ಉದ್ಧರಿಸಲು ನನ್ನ ಅನುಜ್ಞೆಯನ್ನು ಪಡೆದು ಅವರಿಬ್ಬರೂ ಕ್ರಮವಾಗಿ ತಮ್ಮ ಅಂಶಗಳಿಂದ ಸಂಕರ್ಷಣ, ಪತಂಜಲಿ ಎಂಬ ಹೆಸರಿನಿಂದ ಭೂಲೋಕದಲ್ಲಿ ಅವತರಿಸಿದ್ದಾರೆ.

ಟಿಪ್ಪಣಿ:ಸಂಕರ್ಷಣನು ಉಪಾಸನಾಕಾಂಡವನ್ನೂ ಪತಂಜಲಿಯು ಯೋಗಕಾಂಡವನ್ನೂ ಉದ್ಧರಿಸುತ್ತಾರೆ. ಮಧ್ಯಮಕಾಂಡದಲ್ಲಿ ಇವೆರಡು ವಿಭಾಗಗಳೂ ಸೇರುತ್ತವೆ.

ಮುನೀ ಭೂತ್ವಾ ಮುದೋಪಾಸ್ತಿ ಯೋಗಕಾಂಡಕೃತೌ ಸ್ಥಿತೌ |
ಅಗ್ರಿಮಂ ಜ್ಞಾನಕಾಂಡಂ ತೂದ್ಧರಿಷ್ಯಾಮೀತಿ ದೇವತಾಃ || ೫೨

"ಅವರಿಬ್ಬರೂ ಮುನಿಗಳಾಗಿ ಸಂತೋಷದಿಂದ ಉಪಾಸನೆ ಯೋಗ ಇವುಗಳು ಸೇರಿದ ಮಧ್ಯಮಕಾಂಡವನ್ನು ಉದ್ಧರಿಸುತ್ತಿದ್ದಾರೆ. ಮುಂದಿನ ಜ್ಞಾನಕಾಂಡವನ್ನು ನಾನು ಉದ್ಧರಿಸುವೆನು. ದೇವತೆಗಳನ್ನು ಕುರಿತು –

ಸಂಪ್ರತಿ ಪ್ರತಿಜಾನೇ ಸ್ಮ ಜಾನಾತ್ಯೇವ ಭವಾನಪಿ |
ಜೈಮಿನೀಯನಯಾಂಭೋಧೇಃ ಶರತ್ಪರ್ವಶಶೀ ಭವ || ೫೩

"ಈ ರೀತಿಯಾಗಿ ಪ್ರತಿಜ್ಞೆಮಾಡಿಯೇ ಇದ್ದೇನೆ. ಕುಮಾರ, ಇದನ್ನು ನೀನು ಬಲ್ಲೆ. ಈಗ ನೀನು ಜೈಮಿನಿಮುನಿಯ ಕರ್ಮಸಿದ್ಧಾಂತವೆಂಬ ಸಮುದ್ರಕ್ಕೆ ಶರತ್ಕಾಲದ ಪೂರ್ಣ ಚಂದ್ರನಾಗು !

ವಿಶಿಷ್ಟಂ ಕರ್ಮಕಾಂಡಂ ತ್ವಮುದ್ಧರ ಬ್ರಹ್ಮಣಃ ಕೃತೇ |
ಸುಬ್ರಹ್ಮಣ್ಯ ಇತಿ ಖ್ಯಾತಿಂ ಗಮಿಷ್ಯಸಿ ತತೋಽಧುನಾ || ೫೪

ನೈಗಮೀಂ ಕುರು ಮರ್ಯಾದಾಮವತೀರ್ಯ ಮಹೀತಲೇ |
ನಿರ್ಜಿತ್ಯ ಸೌಗತಾನ್ಸರ್ವಾನಾಮ್ನಾಯಾರ್ಥವಿರೋಧಿನಃ || ೫೫

"ಈ ರೀತಿಯಾಗಿ ('ಬ್ರಹ್ಮ'ಎಂದು ಹೆಸರುಳ್ಳ ವೇದದ, ಬ್ರಾಹ್ಮಣರ, ತಪಸ್ಸಿನ ಮತ್ತು ಪರಬ್ರಹ್ಮದ ವಿಷಯವಾಗಿ ಕರ್ಮಕಾಂಡದ ಉದ್ಧಾರವೆಂಬ ಉತ್ತಮ ಕಾರ್ಯವನ್ನು ನೀನು

ಮಾಡುವುದರಿಂದ) ಸುಬ್ರಹ್ಮಣ್ಯ ಎಂದು ವಿಖ್ಯಾತನಾಗುವೆ. ನೀನು ಭೂತಳದಲ್ಲಿ ಅವತರಿಸಿ ವೈದಿಕಮರ್ಯಾದೆಯನ್ನು ಸ್ಥಾಪಿಸು. ವೇದಾರ್ಥಕ್ಕೆ ವಿರೋಧಿಗಳಾದ ಸಮಸ್ತ ಸೌಗತರನ್ನೂ ಜಯಿಸು.

ಬ್ರಹ್ಮಾಽಪಿ ತೇ ಸಹಾಯಾರ್ಥಂ ಮಂಡನೋ ನಾಮ ಭೂಸುರಃ |
ಭವಿಷ್ಯತಿ ಮಹೇಂದ್ರೋಽಪಿ ಸುಧನ್ವಾ ನಾಮ ಭೂಮಿಪಃ || ೫೬

ಬ್ರಹ್ಮನು ನಿನಗೆ ಸಹಾಯಮಾಡುವುದಕ್ಕಾಗಿ ಮಂಡನಮಿಶ್ರ ಎಂಬ ಹೆಸರಿನ ಬ್ರಾಹ್ಮಣನಾಗಿ ಜನಿಸುವನು. ದೇವೇಂದ್ರನು ಸುಧನ್ವನೆಂಬ ರಾಜನಾಗಿ ಹುಟ್ಟಲಿ"ಎಂದನು.

ತಥೇತಿ ಪ್ರತಿಜಗ್ರಾಹ ವಿಧೇರಪಿ ವಿಧಾಯಿನೀಮ್ |
ಬುಧಾನೀಕಪತಿರ್ವಾಣೀಂ ಸುಧಾಧಾರಾಮಿವ ಪ್ರಭೋಃ || ೫೭

ಆಗ ಬ್ರಹ್ಮದೇವನಿಗೂ ಆಜ್ಞೆಯನ್ನೀಯುವಂತಹ ಶಿವನ ವಾಣಿಯನ್ನು ದೇವಸೇನಾಪತಿಯಾದ ಸ್ಕಂದನು ಅಮೃತಧಾರೆಯನ್ನು ಹೇಗೋ ಹಾಗೆ ಆನಂದದಿಂದ ಸ್ವೀಕರಿಸಿದನು.

ಅಥೇಂದ್ರೋ ನೃಪತಿರ್ಭೂತ್ವಾ ಪ್ರಜಾ ಧರ್ಮೇಣ ಪಾಲಯನ್ |
ದಿವಂ ಚಕಾರ ಪೃಥಿವೀಂ ಸ್ವಪುರೀಮಮರಾವತೀಮ್ || ೫೮

ಅನಂತರ ದೇವೇಂದ್ರನು ಸುಧನ್ವನೆಂಬ ರಾಜನಾಗಿ ಹುಟ್ಟಿ ಪೃಥ್ವಿಯನ್ನು ಸ್ವರ್ಗವನ್ನಾಗಿಯೂ ತನ್ನ ರಾಜಧಾನಿಯನ್ನು ಅಮರಾವತಿಯನ್ನಾಗಿಯೂ ಪರಿವರ್ತಿಸಿಬಿಟ್ಟನು.

ಸರ್ವಜ್ಞೋಽಪ್ಯಸತಾಂ ಶಾಸ್ತ್ರೇ ಕೃತ್ರಿಮಶ್ರದ್ಧಯಾಽನ್ವಿತಃ |
ಪ್ರತೀಕ್ಷಮಾಣಃ ಕ್ರೌಂಚಾರಿಂ ಮೇಲಯಾಮಾಸ ಸೌಗತಾನ್ || ೫೯

ಸರ್ವಜ್ಞನಾದರೂ ಸುಧನ್ವರಾಜನು ಅವಿವೇಕಿಗಳ ಶಾಸ್ತ್ರವಾದ ಬೌದ್ಧ ಧರ್ಮದಲ್ಲಿ ಕೃತ್ರಿಮವಾದ ಶ್ರದ್ಧೆಯನ್ನು ತೋರಿಸುತ್ತ, ಷಣ್ಮುಖನ ಅವತಾರವನ್ನು ನಿರೀಕ್ಷಿಸುತ್ತಾ ಬೌದ್ಧರನ್ನು ಒಂದುಗೂಡಿಸಿದನು.

ತತಃ ಸ ತಾರಕಾರಾತಿರಜನಿಷ್ಟ ಮಹೀತಲೇ |
ಭಟ್ಟಪಾದಾಭಿಧಾ ಯಸ್ಯ ಭೂಷಾ ದಿಕ್ಸುದೃಶಾಮಭೂತ್ || ೬೦

ಆಮೇಲೆ ತಾರಕಾಸುರನ ವೈರಿಯಾದ ಷಣ್ಮುಖನು ಕುಮಾರಿಲಭಟ್ಟಪಾದರೆಂಬ ಹೆಸರಿನಿಂದ ಭೂಮಿಯಲ್ಲಿ ಅವತರಿಸಿದನು. ಆತನ ಹೆಸರೇ ದಿಗಂಗನೆಯರಿಗೆ ಅಲಂಕಾರವಾಗಿತ್ತು. (ದಿಕ್ಕು ದಿಕ್ಕುಗಳಿಗೆ ಅವರ ಕೀರ್ತಿಯು ಹರಡಿತು).

ಸ್ಫುಟಯನ್ ವೇದತಾತ್ಪರ್ಯಮಭಾಜ್ಜೈಮಿನಿ ಸೂತ್ರಿತಮ್ |
ಸಹಸ್ರಾಂಶುರಿವಾನೂರುವ್ಯಂಜಿತಂ ಭಾಸಯನ್ ಜಗತ್ || ೬೧

ಉಷಃಕಾಲದಲ್ಲಿ ಅರುಣನು ಸಾಮಾನ್ಯರೀತಿಯಿಂದ ಪ್ರಕಾಶಗೊಳಿಸಿದ ಜಗತ್ತನ್ನು ಸಹಸ್ರಕಿರಣನಾದ ಸೂರ್ಯನು ಸ್ಪಟವಾಗಿ ಬೆಳಗುವಂತೆ, ಜೈಮಿನಿಮುನಿಗಳು ತಮ್ಮ ಸೂತ್ರಗಳಿಂದ ಪ್ರಕಾಶಪಡಿಸಿದ ವೇದತಾತ್ಪರ್ಯವನ್ನು ಭಟ್ಟಪಾದರು ಅತ್ಯಂತ ಸ್ಫುಟವಾಗಿ ವಿವರಿಸಿದರು.

ರಾಜ್ಞಃ ಸುಧನ್ವನಃ ಪ್ರಾಪ ನಗರೀಂ ಸ ಜಯನ್ ದಿಶಃ |
ಪ್ರತ್ಯುದ್ಗಮ್ಯ ಕ್ಷಿತೀಂದ್ರೋಽಪಿ ವಿಧಿವತ್ ತಮಪೂಜಯತ್ || ೬೨

ಸೋಽಭಿನಂದ್ಯಾಶಿಷಾ ಭೂಪಮಾಸೀನಃ ಕಾಂಚನಾಸನೇ |
ತಾಂ ಸಭಾಂ ಶೋಭಯಾಮಾಸ ಸುರಭಿರ್ದ್ಯುವನೀಮಿವ || ೬೩

ಆ ಕುಮಾರಿಲಭಟ್ಟರು ದಿಗ್ವಿಜಯ ಮಾಡುತ್ತಾ ಒಂದುಸಲ ಸುಧನ್ವರಾಜನ ರಾಜಧಾನಿಗೆ ಬಂದರು. ರಾಜನು ಅವರನ್ನು ಸ್ವಾಗತಿಸಿ ವಿಧಿವತ್ತಾಗಿ ಪೂಜಿಸಿದನು. ಕುಮಾರಿಲಭಟ್ಟರು ಸುವರ್ಣಾಸನದಲ್ಲಿ ಕುಳಿತು ರಾಜನನ್ನು ಆಶೀರ್ವದಿಸಿ, ಆ ರಾಜಸಭೆಗೆ ಒಂದು ದಿವ್ಯ ಶೋಭೆಯನ್ನುಂಟುಮಾಡಿದರು. ಈ ಸನ್ನಿವೇಶವು ಕಾಮಧೇನುವು ದೇವಲೋಕದ ಉದ್ಯಾನವನವನ್ನು ಶೋಭೆಗೊಳಿಸಿದಂತೆ ಕಾಣಿಸಿತು.

ಸಭಾಸಮೀಪವಿಟಪಿಶ್ರಿತಕೋಕಿಲ ಕೂಜಿತಮ್ |
ಶ್ರುತ್ವಾ ಜಗಾದ ತದ್ವ್ಯಾಜಾದ್ರಾಜಾನಂ ಪಂಡಿತಾಗ್ರಣೀಃ || ೬೪

ಆಗ ರಾಜಸಭೆಯ ಸಮೀಪದಲ್ಲಿರುವ ಮರದಲ್ಲಿ ಒಂದು ಕೋಗಿಲೆ ಕೂಗಿತು. ಅದನ್ನು ಕೇಳಿ ಆ ವ್ಯಾಜದಿಂದ ಪಂಡಿತೋತ್ತಮರಾದ ಕುಮಾರಿಲಭಟ್ಟರು ರಾಜನಿಗೆ ಹೀಗೆಂದರು-

ಮಲಿನೈಶ್ಚೇನ್ನ ಸಂಗಸ್ತೇ ನೀಚೈಃ ಕಾಕಕುಲೈಃ ಪಿಕ |
ಶ್ರುತಿದೂಷಕನಿರ್ಹ್ರಾದೈಃ ಶ್ಲಾಘನೀಯಸ್ತದಾ ಭವೇಃ || ೬೫

"ಎಲೈ ಕೋಗಿಲೆಯೆ, ಮಲಿನವರ್ಣದವೂ, ಕ್ಷುದ್ರಜಾತಿಯವೂ ಶ್ರುತಿ (ವೇದ ಮತ್ತು ಶ್ರವಣ) ವಿರುದ್ಧವಾದ ಶಬ್ದ ಮಾಡತಕ್ಕವೂ ಆದ ಕಾಗೆಗಳ ಜೊತೆಗೆ ನಿನಗೆ ಸಂಗವಾಗದಿದ್ದರೆ ಆಗ ನೀನು ಪ್ರಶಂಸೆಗೆ ಪಾತ್ರನಾಗುತ್ತೀಯೆ!"ಎಂದರು.

ಷಡಭಿಜ್ಞಾ ನಿಶಮ್ಯೇಮಾಂ ವಾಚಂ ತಾತ್ಪರ್ಯಗರ್ಭಿತಾಮ್ |
ನಿತರಾಂ ಚರಣಸ್ಪೃಷ್ಟಾ ಭುಜಂಗಾ ಇವ ಚುಕ್ರುಧುಃ || ೬೬

ಆಗ ಸಭೆಯಲ್ಲಿದ್ದ ಬೌದ್ಧರು ಅಭಿಪ್ರಾಯಗರ್ಭಿತವಾದ ಈ ಮಾತನ್ನು ಕೇಳಿ ಕಾಲಿನಿಂದ ತುಳಿಯಲ್ಪಟ್ಟ ಸರ್ಪಗಳಂತೆ ಸಿಡಿಮಿಡಿಗೊಂಡರು.

ಛಿತ್ವಾ ಯುಕ್ತಿಕುಠಾರೇಣ ಬುದ್ಧಸಿದ್ಧಾಂತಶಾಖಿನಮ್ |
ಸ ತದ್ಗ್ರಂಥೇಂಧನೈಶ್ಶೀರ್ಣೈಃ ಕ್ರೋಧಜ್ವಾಲಾಮವರ್ಧಯತ್ || ೬೭

ಆಗ ಕುಮಾರಿಲಭಟ್ಟರು ಯುಕ್ತಿಯೆಂಬ ಕೊಡಲಿಯಿಂದ ಬುದ್ಧಸಿದ್ಧಾಂತವೆಂಬ ವೃಕ್ಷವನ್ನು ಕತ್ತರಿಸಿಹಾಕಿ ಅವರ ಹಳಸಿದ ಗ್ರಂಥಗಳೆಂಬ ಸೌದೆಗಳಿಂದಲೇ ಬೌದ್ಧರ ಕ್ರೋಧವೆಂಬ ಜ್ವಾಲೆಯನ್ನು ತೀವ್ರಗೊಳಿಸಿದರು. (ಬೌದ್ಧರ ಗ್ರಂಥಗಳಲ್ಲಿಯೇ ದೋಷಗಳನ್ನು ತೋರಿಸಿಕೊಟ್ಟರು).

ಸಾ ಸಭಾ ವದನೈಸ್ತೇಷಾಂ ರೋಷಪಾಟಲಕಾಂತಿಭಿಃ |
ಬಭೌ ಬಾಲಾತಪಾತಾಮ್ರೈಃ ಸರಸೀವ ಸರೋರುಹೈಃ || ೬೮

ಆಗ ಬೌದ್ಧರ ಮುಖಗಳು ರೋಷದಿಂದ ಕೆಂಪಾದವು. ಎಳೆ ಬಿಸಿಲಿನಿಂದ ಕೆಂಪಾಗಿಕಾಣುವ ಕಮಲಗಳಿಂದ ಸರೋವರವು ಹೇಗೆ ಕಾಣುವುದೋ ಹಾಗೇ ಬೌದ್ಧರ ಕೆಂಪು ಮುಖಗಳಿಂದ ರಾಜಸಭೆಯು ರಂಜಿಸಿತು.

ಉಪನ್ಯಸ್ಯತ್ಸು ಸಾಕ್ಷೇಪಂ ಖಂಡಯತ್ಸು ಪರಸ್ಪರಮ್ |
ತೇಷೂದತಿಷ್ಠನ್ನಿರ್ಘೋಷೋ ಭಿಂದನ್ನಿವ ರಸಾತಲಮ್ || ೬೯

ಕೆಲವರು ಸಿದ್ಧಾಂತದಲ್ಲಿ ಆಕ್ಷೇಪಗಳೆನ್ನೆತ್ತುತ್ತಲೂ, ಕೆಲವರು ಪರಸ್ಪರ ಸಿದ್ಧಾಂತಗಳನ್ನು ಖಂಡಿಸುತ್ತಲೂ ಇರುವಾಗ ಪಂಡಿತರ ವಾಗ್ವಾದದ ಕೋಲಾಹಲವು ಪಾತಾಳವನ್ನು ಭೇದಿಸುವುದೋ ಎಂಬಂತೆ ಮೇಲೆದ್ದಿತು.

ಅಧಃ ಪೇತುರ್ಬುಧೇಂದ್ರೇಣ ಕ್ಷತಾಃ ಪಕ್ಷೇಷು ತತ್ ಕ್ಷಣಮ್ |
ವ್ಯೂಢಕರ್ಕಶತರ್ಕೇಣ ತಥಾಗತಧರಾಧರಾಃ || ೭೦

ಬುಧೇಂದ್ರರಾದ ಕುಮಾರಿಲಭಟ್ಟರ ಕರ್ಕಶತರ್ಕದಿಂದ ಬೌದ್ಧರ ಪಕ್ಷಗಳು ಕತ್ತರಿಸಿ ಬೀಳಲು ಬೌದ್ಧರೆಂಬ ಪರ್ವತಗಳು ಕೆಳಗೆ ಉರುಳಿ ಬಿದ್ದವು. (ಇಂದ್ರನು ಬೆಟ್ಟಗಳ ರೆಕ್ಕೆಗಳನ್ನು ಕತ್ತರಿಸಿದಾಗ ಅವು ನೆಲಕ್ಕೆ ಬಿದ್ದಂತೆ ಬೌದ್ಧರು ಸೋತರು ಎಂದು ಅಭಿಪ್ರಾಯ).

ಸ ಸರ್ವಜ್ಞಪದಂ ವಿಜ್ಞೋಽಸಹಮಾನ ಇವ ದ್ವಿಷಾಮ್ |
ಚಕಾರ ಚಿತ್ರವಿನ್ಯಸ್ತಾನೇತಾನ್ ಮೌನ ವಿಭೂಷಿತಾನ್ || ೭೧

ಪ್ರಾಜ್ಞರಾದ ಕುಮಾರಿಲಭಟ್ಟರು ಎದುರುಪಕ್ಷದವರನ್ನು ವಾದದಲ್ಲಿ ಸೋಲಿಸಲಾಗಿ, ಆ ಬೌದ್ಧರು ಉತ್ತರವನ್ನು ಹೇಳಲಾರದೆ, ಚಿತ್ರದಲ್ಲಿ ಬರೆದ ಆಕೃತಿಗಳೋ ಎಂಬಂತೆ ಮೌನವನ್ನು ವಹಿಸಿದರು. ಆ ಜನರು ಬುದ್ಧನಿಗೆ 'ಸರ್ವಜ್ಞ'ಎಂಬ ಪದವನ್ನು ಬಳಸುತ್ತಿದ್ದರು. ಭಟ್ಟಪಾದರು ಅದನ್ನು ಸಹಿಸಲಾರದೆ, ಬೌದ್ಧರು ಆ ಪದವನ್ನು ಮತ್ತೆ ಉಚ್ಚರಿಸಲಾರದಂತೆ ಅವರನ್ನು ಮೂಕರನ್ನಾಗಿ ಮಾಡಿಬಿಟ್ಟರೋ ಎಂಬಂತೆ ಕಾಣಿಸಿತು!

ತತಃ ಪ್ರಕ್ಷೀಣದರ್ಪೇಷು ಬೌದ್ಧೇಷು ವಸುಧಾಧಿಪಮ್ |
ಬೋಧಯನ್ ಬಹುಧಾ ವೇದವಚಾಂಸಿ ಪ್ರಶಶಂಸ ಸಃ || ೭೨

ಬಭಾಷೇಽಥ ಧರಾಧೀಶೋ ವಿದ್ಯಾಯತ್ತೌ ಜಯಾಜಯೌ |
ಯಃ ಪತಿತ್ವಾ ಗಿರೇಃ ಶೃಂಗಾದವ್ಯಯಸ್ತನ್ಮತಂ ಧ್ರುವಮ್ || ೭೩

ಹೀಗೆ ಬೌದ್ಧರ ದರ್ಪವು ಅಡಗಲಾಗಿ ಭಟ್ಟಪಾದರು ಸುಧನ್ವರಾಜನಿಗೆ ಬುದ್ಧಿವಾದವನ್ನು ಹೇಳುತ್ತ ವೇದವಾಕ್ಯಗಳನ್ನು ಪ್ರಶಂಸೆಮಾಡಿದರು. ಆಗ ರಾಜನು "ಮಹಾಶಯರೆ, ವಾದದಲ್ಲಿ ಜಯಪರಾಜಯಗಳು ಆಯಾ ವ್ಯಕ್ತಿಗಳ ಪಾಂಡಿತ್ಯವನ್ನವಲಂಬಿಸಿರುತ್ತವೆ. (ಅಷ್ಟುಮಾತ್ರ ದಿಂದ ಸತ್ಯವಾದ ಸಿದ್ಧಾಂತವು ಯಾವುದೆಂದು ನಿಶ್ಚಿತವಾಗುವುದಿಲ್ಲ). ಯಾವಾತನು ತನ್ನ ಸಿದ್ಧಾಂತದ ಹೆಸರಿನಲ್ಲಿ ಪರ್ವತಶಿಖರದಿಂದ ಧುಮುಕಿದರೂ ಸಾಯದೆ ಉಳಿಯುವನೋ ಆ ಸಿದ್ಧಾಂತವೇ ಸತ್ಯ ಎಂದು ನಂಬುತ್ತೇನೆ"ಎಂದು ನುಡಿದನು.

ತದಾಕರ್ಣ್ಯ ಮುಖಾನ್ಯನ್ಯೇ ಪರಸ್ಪರಮಲೋಕಯನ್ |
ದ್ವಿಜಾಗ್ರ್ಯಸ್ತು ಸ್ಮರನ್ ವೇದಾನಾರುರೋಹ ಗಿರೇಃ ಶಿರಃ || ೭೪

ಆ ನುಡಿಯನ್ನು ಕೇಳಿ ಬೌದ್ಧರು ಅಳುಕುತ್ತ ಒಬ್ಬರ ಮುಖವನ್ನೊಬ್ಬರು ನೋಡಿಕೊಳ್ಳ ತೊಡಗಿದರು. ದ್ವಿಜೇಂದ್ರರಾದ ಕುಮಾರಿಲಭಟ್ಟರಾದರೋ ವೇದಗಳನ್ನು ಸ್ಮರಿಸುತ್ತ ಪರ್ವತ ಶಿಖರವನ್ನು ಏರಿಯೇಬಿಟ್ಟರು.

ಯದಿ ವೇದಾಃ ಪ್ರಮಾಣಂ ಸ್ಯುರ್ಭೂಯಾತ್ಕಾಚಿನ್ನ ಮೇ ಕ್ಷತಿಃ |
ಇತಿ ಘೋಷಯತಾ ತಸ್ಮಾನ್ನ್ಯಪಾತಿ ಸುಮಹಾತ್ಮನಾ || ೭೫

ಕಿಮು ದೌಹಿತ್ರದತ್ತೇಽಪಿ ಪುಣ್ಯೇ ವಿಲಯಮಾಸ್ಥಿತೇ |
ಯಯಾತಿಶ್ಚ್ಯವತೇ ಸ್ವರ್ಗಾತ್ಪುನರಿತ್ಯೂಚಿರೇ ಜನಾಃ || ೭೬

"ವೇದಗಳು ಪ್ರಮಾಣವಾಗಿದ್ದರೆ ನನಗೆ ಯಾವ ಹಾನಿಯೂ ಆಗದಿರಲಿ"ಎಂದು ಘೋಷಿಸಿ, ಆ ಮಹಾತ್ಮರು ಪರ್ವತಶಿಖರದಿಂದ ಕೆಳಗೆ ಧುಮುಕಿದರು. ಹಿಂದೆ ಯಯಾತಿರಾಜನಿಗೆ ಅವನ ಮಗಳ ಮಕ್ಕಳಾದ ಅಷ್ಟಕ, ವಸುಮಾನ್-ಮೊದಲಾದವರು ತಮ್ಮ ಪುಣ್ಯವನ್ನು ದಾನ ಮಾಡಿದರೂ ಸಹ ಅದು ಕ್ಷೀಣವಾಗಿ ಯಯಾತಿರಾಜನು ಮತ್ತೆ ಸ್ವರ್ಗದಿಂದ ಭೂಮಿಗೆ ಬೀಳುತ್ತಿರುವನೋ ಎಂಬಂತೆ, ಬೆಟ್ಟದಿಂದ ಕೆಳಗೆ ಬೀಳುತ್ತಿದ್ದ ಭಟ್ಟಪಾದರು ಕಾಣಿಸಿದರೆಂದು ಜನರು ಹೇಳಿಕೊಳ್ಳುತ್ತಿದ್ದರು.

ವಿವರಣೆ-ಯಯಾತಿರಾಜನು ತನ್ನ ಪುಣ್ಯಬಲದಿಂದ ಸ್ವರ್ಗವನ್ನನುಭವಿಸಿ, ಪುಣ್ಯವು ಕ್ಷೀಣವಾದ ಮೇಲೆ ಭೂಲೋಕಕ್ಕೆ ಬೀಳುತ್ತಿದ್ದನು. ಆಗ ಮಹಾತ್ಮರಾದ ಅಷ್ಟಕನೇ ಮೊದಲಾದವರು ಗಗನಮಧ್ಯದಲ್ಲಿ ಅವನನ್ನು ಕಂಡು, ತಮ್ಮ ಪುಣ್ಯಗಳನ್ನೆಲ್ಲ ಯಯಾತಿಗೆ ಧಾರೆಯೆರೆದು ಕೊಟ್ಟರು. ಯಯಾತಿಯು ಮತ್ತೆ ಸ್ವರ್ಗಕ್ಕೆ ಹೋದನು-ಎಂದು ಕಥೆ ಇದೆ. ಅಷ್ಟಕ ಮೊದಲಾದವರು ಯಯಾತಿಯ ಮಗಳಾದ ಮಾಧವಿಯ ಮಕ್ಕಳು. ನೋಡಿ:ಮಹಾಭಾರತ, ಆದಿಪರ್ವ. ೯೦-೯೩ ಅಧ್ಯಾಯ.

ಅಪಿ ಲೋಕಗುರುಃ ಶೈಲಾತ್ತೂಲಪಿಂಡ ಇವಾಪತತ್ |
ಶ್ರುತಿರಾತ್ಮಶರಣ್ಯಾನಾಂ ವ್ಯಸನಂ ನೋಚ್ಛಿನತ್ತಿ ಕಿಮ್ || ೭೭

ಕುಮಾರಿಲರು ಲೋಕಗುರುವಾಗಿದ್ದರೂ (ಮತ್ತು ಬಹಳ ಭಾರವಾಗಿದ್ದರೂ)ಹತ್ತಿಯ ಪಿಂಡಿಯಂತೆ ಹಗುರವಾಗಿ ಪೆಟ್ಟಾಗದೆ ಬೆಟ್ಟದ ತುದಿಯಿಂದ ಬಿದ್ದರು. ತನಗೆ ಶರಣಾಗತರಾದವರ ಕಷ್ಟವನ್ನು ವೇದಮಾತೆಯು ನೀಗದೆ ಇದ್ದಾಳೆ?

ಶ್ರುತ್ವಾ ತದದ್ಭುತಂ ಕರ್ಮ ದ್ವಿಜಾ ದಿಗ್ಭ್ಯಃ ಸಮಾಯಯುಃ |
ಘನಘೋಷಮಿವಾಕರ್ಣ್ಯ ನಿಕುಂಜೇಭ್ಯಃ ಶಿಖಾವಲಾಃ || ೭೮

ದೃಷ್ಟ್ವಾ ತಮಕ್ಷತಂ ರಾಜಾ ಶ್ರದ್ಧಾಂ ಶ್ರುತಿಷು ಸಂದಧೇ |
ನಿನಿಂದ ಬಹುಧಾತ್ಮಾನಂ ಖಲಸಂಸರ್ಗದೂಷಿತಮ್ || ೭೯

ಮೋಡದ ಗುಡುಗು ಶಬ್ದವನ್ನು ಕೇಳಿ ಕಾಡಿನ ಪೊದೆಗಳಿಂದ ನವಿಲುಗಳು ಹೊರಬಂದಂತೆ, ಭಟ್ಟಪಾದರ ಆ ಅದ್ಭುತ ಕಾರ್ಯವನ್ನು ಕೇಳಿ ಬ್ರಾಹ್ಮಣರು ನಾನಾ ದಿಕ್ಕುಗಳಿಂದ ಅಲ್ಲಿಗೆ ಬಂದು ಸೇರಿದರು. ಸುಧನ್ವರಾಜನು ಹೀಗೆ ಯಾವ ಗಾಯವೂ ಆಗದೆ ಭಟ್ಟಪಾದರು ಕೆಳಗೆ

ಧುಮುಕಿದ್ದನ್ನು ಕಂಡು ವೇದಗಳಲ್ಲಿ ಸಂಪೂರ್ಣ ವಿಶ್ವಾಸವನ್ನಿಟ್ಟನು. ಇದುವರೆಗೆ ಖಳರಾದ ಸೌಗತರ ಸಂಪರ್ಕದಿಂದ ತಾನು ದೂಷಿತನಾದೆನೆಂದು ತನ್ನನ್ನು ಬಹು ವಿಧವಾಗಿ ಹಳಿದುಕೊಂಡನು.

ಸೌಗತಾಸ್ತ್ವಬ್ರುವನ್ನೇದಂ ಪ್ರಮಾಣಂ ಮತನಿರ್ಣಯೇ |
ಮಣಿಮಂತ್ರೌಷಧೈರೇವಂ ದೇಹರಕ್ಷಾ ಭವೇದಿತಿ || ೪೦

ಆಗ ಸೌಗತರು "ಮಹಾರಾಜ, ಸಿದ್ಧಾಂತವನ್ನು ನಿರ್ಣಯಿಸುವುದಕ್ಕೆ ಈ ಪರ್ವತದಿಂದ ಹೀಗೆ ಧುಮುಕುವುದು ಪ್ರಮಾಣವಾಗಲಾರದು. ಮಣಿ-ಮಂತ್ರ-ಔಷಧಗಳಿಂದಲೂ ಸಹ ಈ ರೀತಿ ದೇಹರಕ್ಷಣೆಯನ್ನು ಮಾಡಿಕೊಳ್ಳಲು ಸಾಧ್ಯವಿದೆ"ಎಂದರು.

ದುರ್ವಿಧೈರನ್ಯಥಾ ನೀತೇ ಪ್ರತ್ಯಕ್ಷೇಽರ್ಥೇಽಪಿ ಪಾರ್ಥಿವಃ |
ಭ್ರುಕುಟೀಭೀಕರಮುಖಃ ಸಂಧಾಮುಗ್ರತರಾಂ ವ್ಯಧಾತ್ || ೪೧

ಪೃಚ್ಛಾಮಿ ಭವತಃ ಕಿಂಚಿದ್ವಕ್ತುಂ ನ ಪ್ರಭವಂತಿ ಯೇ |
ಯಂತ್ರೋಪಲೇಷು ಸರ್ವಾಂಸ್ತಾನ್ ಘಾತಯಿಷ್ಯಾಮ್ಯಸಂಶಯಮ್ ||

ಆ ದುಷ್ಟರು ಪ್ರತ್ಯಕ್ಷವಾದ ವಿಷಯವನ್ನು ಈ ಪ್ರಕಾರ ಅಲ್ಲಗಳೆದಾಗ ಸುಧನ್ವರಾಜನ ಹುಬ್ಬು ಗಂಟಿಕ್ಕಿತು. ಅವನ ಮುಖವು ಭೀಕರವಾಯಿತು. ಅವನು ಇನ್ನೊಂದು ಉಗ್ರವಾದ ಪಣವನ್ನು ಮುಂದಿಟ್ಟನು. "ಈಗ ಒಂದು ಗುಪ್ತವಾದ ವಿಷಯವನ್ನು ಕುರಿತು ನಿಮ್ಮೆಲ್ಲರಿಗೂ ಒಂದು ಪ್ರಶ್ನೆಯನ್ನು ಹಾಕುತ್ತೇನೆ. ಯಾರಿಗೆ ಉತ್ತರ ಹೇಳುವುದಕ್ಕಾಗುವುದಿಲ್ಲವೋ ಅವರೆಲ್ಲರನ್ನು ಕಲ್ಲಿನ ಗಾಣಗಳಲ್ಲಿ ಹಾಕಿಸಿ ಕೊಲ್ಲಿಸಿಬಿಡುತ್ತೇನೆ. ಇದು ನಿಶ್ಚಯ"ಎಂದು ಹೇಳಿದನು.

ಇತಿ ಸಂಶ್ರುತ್ಯ ಗೋತ್ರೇಶೋ ಘಟಮಾಶೀವಿಷಾನ್ವಿತಮ್ |
ಆನೀಯಾತ್ರ ಕಿಮಸ್ತೀತಿ ಪಪ್ರಚ್ಛ ದ್ವಿಜಸೌಗತಾನ್ || ೪೩

ಹೀಗೆ ಪಣವನ್ನೊಡ್ಡಿ ಆ ರಾಜನು ಒಂದು ಗಡಿಗೆಯಲ್ಲಿ ವಿಷಪೂರ್ಣವಾದ ಸರ್ಪವನ್ನಿಟ್ಟು ಮುಚ್ಚಿ ಸಭೆಗೆ ತರಿಸಿ 'ಇದರಲ್ಲೇನಿದೆ' ಎಂದು ಬ್ರಾಹ್ಮಣರನ್ನೂ ಸೌಗತರನ್ನೂ ಕುರಿತು ಪ್ರಶ್ನೆ ಮಾಡಿದನು.

ಟಿಪ್ಪಣಿ: ಗೋತ್ರಾ= ಭೂಮಿ

ವಕ್ಷ್ಯಾಮಹೇ ವಯಂ ಭೂಪ ಶ್ವಃ ಪ್ರಭಾತೇಽಸ್ಯ ನಿರ್ಣಯಮ್ |
ಇತಿ ಪ್ರಸಾದ್ಯ ರಾಜಾನಂ ಜಗ್ಮುರ್ಭೂಸುರಸೌಗತಾಃ || ೪೪

ಆಗ ಅವರೆಲ್ಲರೂ "ಮಹಾರಾಜ! ನಾಳೆ ಪ್ರಾತಃಕಾಲದಲ್ಲಿ ಇದರ ನಿರ್ಣಯವನ್ನು ನಾವು ಹೇಳುವೆವು" ಎಂದು ನುಡಿದು ರಾಜನನ್ನು ಪ್ರಸನ್ನಗೊಳಿಸಿ ಹೊರಟುಹೋದರು.

ಪದ್ಮಾ ಇವ ತಪಸ್ತೇಪುಃ ಕಂಠದ್ವಯಸಪಾಥಸಿ |
ದ್ಯುಮಣಿಂ ಪ್ರತಿ ಭೂದೇವಾಃ ಸೋಽಪಿ ಪ್ರಾದುರಭೂತ್ತತಃ || ೮೫

ಸಂದಿಶ್ಯ ವಚನೀಯಾಂಶಮಾದಿತ್ಯೇಽತರ್ಹಿತೇ ದ್ವಿಜಾಃ |
ಆಜಗ್ಮುರಪಿ ನಿಶ್ಚಿತ್ಯ ಸೌಗತಾಃ ಕಲಶಸ್ಥಿತಮ್ || ೮೬

ಅನಂತರ ಬ್ರಾಹ್ಮಣರು ತಾವರೆಯ ಗಿಡಗಳಂತೆ ಕಂಠಪರ್ಯಂತ ನೀರಿನಲ್ಲಿ ಮುಳುಗಿ ಸೂರ್ಯನನ್ನು ಕುರಿತು ತಪಸ್ಸು ಮಾಡಿದರು. ಅವರ ತಪಸ್ಸಿಗೆ ಮೆಚ್ಚಿ ಸೂರ್ಯನು ಪ್ರಸನ್ನನಾಗಿ ಮಾರನೆಯದಿನ ಅವರು ಹೇಳ ಬೇಕಾದುದನ್ನು ತಿಳಿಸಿ ಅಂತರ್ಹಿತನಾದನು. ಇತ್ತಲಾಗಿ ಬೌದ್ಧರೂ ಸಹ ಗಡಿಗೆಯಲ್ಲಿ ಇದ್ದುದೇನೆಂಬುದನ್ನು ನಿಶ್ಚಯಿಸಿಕೊಂಡು ಸಭೆಗೆ ಬಂದರು.

ತತಸ್ತೇ ಸೌಗತಾಃ ಸರ್ವೇ ಭುಜಂಗೋಽಸ್ತೀತ್ಯವಾದಿಷುಃ |
ಭೋಗೀಶಭೋಗಶಯನೋ ಭಗವಾನಿತಿ ಭೂಸುರಾಃ || ೮೭

ಶ್ರುತಭೂಸುರವಾಕ್ಯಸ್ಯ ವದನಂ ಪೃಥಿವೀಪತೇಃ |
ಕಾಸಾರಶೋಷಣಮ್ಲಾನಸಾರಸಶ್ರಿಯಮಾದದೇ || ೮೮

ಅನಂತರ ಎಲ್ಲ ಬೌದ್ಧರೂ ಗಡಿಗೆಯಲ್ಲಿ ಸರ್ಪವಿದೆ ಎಂದು ನುಡಿದರು. ಬ್ರಾಹ್ಮಣರು ಈ ಗಡಿಗೆಯಲ್ಲಿ ಆದಿಶೇಷನ ಮೇಲೆ ಮಲಗಿದ ಮಹಾವಿಷ್ಣುವಿದ್ದಾನೆ ಎಂದು ನುಡಿದರು. ಬ್ರಾಹ್ಮಣರ ಈ ಮಾತನ್ನು ಕೇಳಿ ಸುಧನ್ವರಾಜನ ಮುಖವು ಕೊಳದ ನೀರು ಒಣಗಿದ ಮೇಲೆ ಬಾಡಿಹೋಗುವ ಕಮಲದಂತೆ ಕಂದಿತು.

ಅಥ ಪ್ರೋವಾಚ ದಿವ್ಯಾ ವಾಕ್ ಸಮ್ರಾಜಮಶರೀರಿಣೀ |
ತುದಂತೀ ಸಂಶಯಂ ತಸ್ಯ ಸರ್ವೇಷಾಮೇವ ಶೃಣ್ವತಾಮ್ || ೮೯

ಸತ್ಯಮೇವ ಮಹಾರಾಜ ಬ್ರಾಹ್ಮಣಾ ಯದ್ಬಭಾಷಿರೇ |
ಮಾ ಕೃಥಾಃ ಸಂಶಯಂ ತತ್ರ ಭವ ಸತ್ಯಪ್ರತಿಶ್ರವಃ || ೯೦

ಅಷ್ಟು ಹೊತ್ತಿಗೆ ಒಂದು ದಿವ್ಯವಾದ ಅಕಾಶವಾಣಿಯು ರಾಜನ ಕಳವಳವನ್ನು ಹೋಗಲಾಡಿಸುತ್ತಾ ಸರ್ವರಿಗೂ ಕೇಳುವಂತೆ "ಮಹಾರಾಜ, ಈ ಬ್ರಾಹ್ಮಣರು ಏನು ಹೇಳಿದರೋ ಅದು ಸತ್ಯವೇ ಆಗಿದೆ. ಸಂಶಯ ಪಡಬೇಡ. ನೀನು ಮಾಡಿದ ಪ್ರತಿಜ್ಞೆಯನ್ನು ನಡೆಸಿ ಸತ್ಯಪ್ರತಿಜ್ಞನಾಗು"ಎಂದು ನುಡಿಯಿತು.

ಶ್ರುತ್ವಾಽಶರೀರಿಣೀಂ ವಾಣೀಂ ದದರ್ಶ ವಸುಧಾಧಿಪಃ |
ಮೂರ್ತಿಂ ಮಧುದ್ವಿಷಃ ಕುಂಭೇ ಸುಧಾಮಿವ ಸುರಾಧಿಪಃ || ೯೧

ನಿರಸ್ತಾಖಿಲಸಂದೇಹೋ ವಿನ್ಯಸ್ತೇತರದರ್ಶನಾತ್ |
ವ್ಯಧಾದಾಜ್ಞಾಂ ತತೋ ರಾಜಾ ವಧಾಯ ಶ್ರುತಿವಿದ್ವಿಷಾಮ್ || ೯೨

ಆಸೇತೋರಾತುಷಾರಾದ್ರೇರ್ಬೌದ್ಧಾನಾವೃದ್ಧ ಬಾಲಕಮ್ |
ನ ಹಂತಿ ಯಃ ಸ ಹಂತವ್ಯೋ ಭೃತ್ಯಾನಿತ್ಯನ್ವಶಾನ್ನೃಪಃ || ೯೩

ಈ ಅಶರೀರವಾಣಿಯನ್ನು ಕೇಳಿ ಭೂಪತಿಯು ಗಡಿಗೆಯೊಳಗೆ ನೋಡಲಾಗಿ ಮಧುಸೂಧನನ ದಿವ್ಯಮೂರ್ತಿಯು ಕಾಣಿಸಿತು. ದೇವೇಂದ್ರನಿಗೆ ಅಮೃತವನ್ನು ಕಂಡಂತೆ ಆಯಿತು. ಅನಂತರ ಗಡಿಗೆಯಲ್ಲಿ ತಾನು ಇರಿಸಿದ್ದ ಸರ್ಪಕ್ಕಿಂತ ಬೇರೆಯಾದ ವಿಷ್ಣುಮೂರ್ತಿಯನ್ನು ಕಂಡು ಅವನ ಸಂದೇಹಗಳೆಲ್ಲವೂ ಹೊರಟುಹೋದವು. ಶ್ರುತಿದ್ವೇಷಿಗಳಾದವರನ್ನು ವಧಿಸಬೇಕೆಂದು ರಾಜನು ಆಜ್ಞೆಮಾಡಿದನು. ರಾಮಸೇತುವಿನಿಂದ ಹಿಡಿದು ಹಿಮಾಲಯದ ವರೆಗೆ ಇರುವ ಬೌದ್ಧರನ್ನು, ಮುದುಕರು, ಹುಡುಗರು ಸಹಿತವಾಗಿ ಎಲ್ಲರನ್ನೂ ಯಾವಾತನು ಕೊಲ್ಲುವುದಿಲ್ಲವೋ ಆತನನ್ನೇ ಕೊಲ್ಲಬೇಕು ಎಂದು ಭೃತ್ಯರಿಗೆ ಆಜ್ಞೆಯನ್ನು ಮಾಡಿದನು.

ಇಷ್ಟೋಽಪಿ ದೃಷ್ಟದೋಷಶ್ಚೇದ್ವಧ್ಯ ಏವ ಮಹಾತ್ಮನಾಮ್ |
ಜನನೀಮಪಿ ಕಿಂ ಸಾಕ್ಷಾನ್ನಾವಧೀತ್ ಭೃಗುನಂದನಃ || ೯೪

ತನಗೆ ಪ್ರಿಯನಾದವನಲ್ಲಿಯೂ ಸಹ ಯಾವುದಾದರೂ ದೊಡ್ಡ ದೋಷವಿದ್ದರೆ ಅವನು ಮಹಾತ್ಮರ ದೃಷ್ಟಿಯಲ್ಲಿ ವಧ್ಯನಾಗುತ್ತಾನೆ. ಭೃಗುನಂದನ ನಾದ ಪರಶುರಾಮನು ಸಾಕ್ಷಾತ್ ತನ್ನ ಜನನಿಯಾದ ರೇಣುಕಾದೇವಿಯನ್ನು ಸಂಹರಿಸಲಿಲ್ಲವೆ?

ಸ್ಕಂದಾನುಸಾರಿರಾಜೇನ ಜೈನಾ ಧರ್ಮದ್ವಿಷೋ ಹತಾಃ |
ಯೋಗೀಂದ್ರೇಣೇವ ಯೋಗಘ್ನಾ ವಿಘ್ನಾಸ್ತತ್ತ್ವಾವಲಂಬಿನಾ || ೯೫

ಹೀಗೆ ಕುಮಾರಿಲಭಟ್ಟರನ್ನು ಅನುಸರಿಸಿದ ರಾಜನಿಂದ ಧರ್ಮದ್ವೇಷಿಗಳಾದ ಬೌದ್ಧರು ಹತರಾದರು. ತತ್ತ್ವನ್ನವಲಂಬಿಸಿದ ಯೋಗೀಂದ್ರನು ಯೋಗ ಕಂಟಕಗಳಾದ ವಿಘ್ನಗಳನ್ನು ನಿವಾರಿಸಿದಂತೆ ರಾಜನು ಬೌದ್ಧರನ್ನು ನಿವಾರಿಸಿದನು.

ಟಿಪ್ಪಣಿ:ಇಲ್ಲಿ ಜೈನರೆಂದರೆ ಬೌದ್ಧರೆಂದರ್ಥ. ಬುದ್ಧನಿಗೆ ಜಿನ ಎಂಬ ಹೆಸರಿದೆ. ಮಾರಜಿಲ್ಲೋಕಜಿಜ್ಜಿನಃ-ಎಂದು ಬುದ್ಧ ಪರ್ಯಾಯದಲ್ಲಿ ಅಮರ ಕೋಶವಿದೆ. 'ಬುದ್ಧೋ ಜಿನಃ ಪಾತು ವಃ' ಎಂದು ಕವಿಪ್ರಯೋಗವುಂಟು.

ಹತೇಷು ತೇಷು ದುಷ್ಟೇಷು ಪರಿತಸ್ತಾರ ಕೋವಿದಃ |
ಶ್ರೌತವರ್ತ್ಮ ತಮಿಸ್ರೇಷು ನಷ್ಟೇಷ್ಟಿವ ರವಿರ್ಮಹಃ || ೯೬

ಕುಮಾರಿಲಮೃಗೇಂದ್ರೇಣ ಹತೇಷು ಜಿನಹಸ್ತಿಷು |
ನಿಷ್ಪ್ರತ್ಯೂಹಮವರ್ಧಂತ ಶ್ರುತಿಶಾಖಾಃ ಸಮಂತತಃ || ೯೭

ದುಷ್ಟರಾದ ವೇದನಿಂದಕರು ನಾಶವಾಗಲಾಗಿ ಪಂಡಿತರಾದ ಭಟ್ಟಪಾದರು, ಕತ್ತಲೆಯು ಹೋದಮೇಲೆ ಸೂರ್ಯನು ತನ್ನ ಕಿರಣವನ್ನು ಹರಡುವಂತೆ ವೇದಮಾರ್ಗವನ್ನು ಎಲ್ಲಕಡೆ ಪ್ರಚಾರ ಮಾಡಿದರು. ಕುಮಾರಿಲರೆಂಬ ಸಿಂಹದಿಂದ ಬೌದ್ಧರೆಂಬ ಆನೆಗಳು ಹತರಾಗಲಾಗಿ ವೇದ ಶಾಖೆಗಳು (ಮರದ ಕೊಂಬೆಗಳು) ಸುತ್ತಲೂ ಅಡೆತಡೆ ಇಲ್ಲದೆ ಬೆಳೆದವು.

ಪ್ರಾಗಿತ್ಥಂ ಜ್ವಲನಭುವಾ ಪ್ರವರ್ತಿತೇಽಸ್ಮಿನ್
ಕರ್ಮಾಧ್ವನ್ಯಖಿಲವಿದಾ ಕುಮಾರಿಲೇನ |
ಉದ್ಧರ್ತುಂ ಭುವನಮಿದಂ ಭವಾಬ್ಧಿಮಗ್ನಂ
ಕಾರುಣ್ಯಾಂಬುನಿಧಿರಿಯೇಷ ಚಂದ್ರಚೂಡಃ || ೯೮

ಈ ಪ್ರಕಾರವಾಗಿ ಮೊದಲು ಷಣ್ಮುಖಸ್ವರೂಪರೂ ಸರ್ವಜ್ಞರೂ ಆದ ಕುಮಾರಿಲರಿಂದ ವೈದಿಕ ಕರ್ಮಮಾರ್ಗವು ಪ್ರವರ್ತಿತವಾಗಲಾಗಿ, ಕರುಣಾಸಾಗರನಾದ ಚಂದ್ರಶೇಖರನು ಸಂಸಾರವೆಂಬ ಸಮುದ್ರದಲ್ಲಿ ಮುಳುಗಿರುವ ಲೋಕದ ಜನರನ್ನು ಮೇಲೆತ್ತುವುದಕ್ಕೆ ಮನಸ್ಸುಮಾಡಿದನು.

ಇತಿ ಶ್ರೀಮಾಧವೀಯೇ ತದುಪೋದ್ಘಾತಕಥಾಪರಃ |
ಸಂಕ್ಷೇಪ ಶಂಕರಜಯೇ ಸರ್ಗೋಽಯಂ ಪ್ರಥಮೋಽಭವತ್ ||

ಇಲ್ಲಿಗೆ ಶ್ರೀಮಾಧವೀಯ ಶಂಕರವಿಜಯದಲ್ಲಿ ಉಪೋದ್ಘಾತಪ್ರಕರಣವೆಂಬ
ಮೊದಲನೆಯ ಸರ್ಗವು ಸಮಾಪ್ತವಾಯಿತು

✤ ✤ ✤

ದ್ವಿತೀಯಃ ಸರ್ಗಃ

ಆಚಾರ್ಯಜನ್ಮಾದಿಕಥನಮ್

ಕಾಲಟಿ ಎಂಬ ಗ್ರಾಮದಲ್ಲಿದ್ದ ಶಿವಗುರುವಿಗೆ ಸತೀ ಎಂಬ ಕನ್ಯೆಯೊಡನೆ ವಿವಾಹ. ಸಂತಾನಾರ್ಥವಾಗಿ ಆ ದಂಪತಿಗಳ ತಪಸ್ಸು. ಪರಮೇಶ್ವರನ ಅನುಗ್ರಹದಿಂದ ಆ ದಂಪತಿಗಳಿಗೆ ಪುತ್ರನಾಗಿ ಶ್ರೀಶಂಕರನು ಅವತರಿಸುವುದು. ಬಾಲಕನ ಬಾಲಲೀಲೆ.

ತತೋ ಮಹೇಶಃ ಕಿಲ ಕೇರಲೇಷು
  ಶ್ರೀಮದ್ ವೃಷಾದ್ರೌ ಕರುಣಾಸಮುದ್ರಃ |
ಪೂರ್ಣಾನದೀಪುಣ್ಯತಟೇ ಸ್ವಯಂಭೂ-
  ಲಿಂಗಾತ್ಮನಾಽನಂಗಧಗಾವಿರಾಸೀತ್ || ೧

ಅನಂತರ ಕರುಣಾಸಮುದ್ರನೂ ಮನ್ಮಥನನ್ನು ಸುಟ್ಟುಹಾಕಿದವನೂ ಆದ ಪರಮೇಶ್ವರನು ಕೇರಳದೇಶದಲ್ಲಿ, ಪೂರ್ಣಾನದಿಯ ಪುಣ್ಯತೀರದಲ್ಲಿ ಸ್ವಯಂಭೂಲಿಂಗವಾಗಿ ಪ್ರಕಟನಾದನು.

ತಚ್ಚೋದಿತಃ ಕಶ್ಚನ ರಾಜಶೇಖರಃ
  ಸ್ವಪ್ನೇ ಮುಹುರ್ದೃಷ್ಟತದೀಯ ವೈಭವಃ |
ಪ್ರಾಸಾದಮೇಕಂ ಪರಿಕಲ್ಪ್ಯ ಸುಪ್ರಭಂ
  ಪ್ರಾವರ್ತಯತ್ತಸ್ಯ ಸಮರ್ಹಣಂ ವಿಭೋಃ || ೨

ಆ ದೇಶದಲ್ಲಿ ರಾಜನಾಗಿದ್ದ ರಾಜಶೇಖರನೆಂಬವನಿಗೆ ಸ್ವಪ್ನದಲ್ಲಿ ಆ ಸ್ವಯಂಭೂಲಿಂಗದ ಮಹಿಮೆಯು ಕಾಣಿಸಿತು. ಅಂತೆಯೇ ಪರಮೇಶ್ವರನ ಪ್ರೇರಣೆಯಂತೆ ಆ ರಾಜನು ಲಿಂಗಕ್ಕೆ ಒಂದು ದೇವಾಲಯವನ್ನು ಕಟ್ಟಿಸಿ ಪೂಜಾಕಾರ್ಯವನ್ನೇರ್ಪಡಿಸಿದನು.

ತಸ್ಯೇಶ್ವರಸ್ಯ ಪ್ರಣತಾರ್ತಿಹರ್ತುಃ
  ಪ್ರಸಾದತಃ ಪ್ರಾಪ್ತನಿರೀತಿಭಾವಃ |
ಕಶ್ಚಿತ್ತದಭ್ಯಾಶಗತೋಽಗ್ರಹಾರಃ
  ಕಾಲಟ್ಯಭಿಖ್ಯೋಽಸ್ತಿ ಮಹಾನ್ಮನೋಜ್ಞಃ || ೩

ಆ ದೇವಾಲಯಕ್ಕೆ ಸಮೀಪದಲ್ಲಿ ಸುಂದರವೂ ವಿಶಾಲವೂ ಆದ ಕಾಲಟಿ-ಎಂಬ ಅಗ್ರಹಾರವಿದೆ. ಭಕ್ತರ ಕಷ್ಟಗಳನ್ನು ದೂರ ಮಾಡುವ ಈಶ್ವರನ ಅನುಗ್ರಹದಿಂದ ಆ ಅಗ್ರಹಾರದಲ್ಲಿ ಯಾವ ಈತಿಬಾಧೆಗಳೂ ಇರಲಿಲ್ಲ.

ಟಿಪ್ಪಣಿ:
ಅತಿವೃಷ್ಟಿರನಾವೃಷ್ಟಿ ರ್ಮೂಷಕಾಃ ಶಲಭಾಃ ಶುಕಾಃ |
ಅತ್ಯಾಸನ್ನಾಶ್ಚ ರಾಜಾನಃ ಷಡೇತಾ ಈತಯಃ ಸ್ಮೃತಾಃ ||

ಅತಿವೃಷ್ಟಿ, ಅನಾವೃಷ್ಟಿ, ಇಲಿಗಳು, ಪತಂಗಗಳು, (ಪೈರುಗಳನ್ನು ತಿಂದು ಹಾಳುಮಾಡುವ ಗಿಳಿ)ಮೊದಲಾದ ಹಕ್ಕಿಗಳು, ಬಹಳ ಹತ್ತಿರದಲ್ಲಿರುವ ರಾಜರು-ಇವು ಆರು ಈತಿಗಳು.

ಕಶ್ಚಿದ್ವಿಪಶ್ಚಿದಿಹ ನಿಶ್ಚಲಧೀರ್ವಿರೇಜೇ
ವಿದ್ಯಾಧಿರಾಜ ಇತಿ ವಿಶ್ರುತನಾಮಧೇಯಃ |
ರುದ್ರೋಽ ವೃಷಾದ್ರಿನಿಲಯೋಽವತರೀತುಕಾಮಃ
ಯತ್ಪುತ್ರಮಾತ್ಮಪಿತರಂ ಸಮರೋಚಯತ್ಸಃ || ೪

ಆ ಕಾಲಟಿಗ್ರಾಮದಲ್ಲಿ ವಿದ್ಯಾಧಿರಾಜನೆಂಬ ಹೆಸರಿನಿಂದ ವಿಖ್ಯಾತನಾದ ಒಬ್ಬ ವಿದ್ವಾಂಸನಿದ್ದನು. ವೃಷಾದ್ರಿವಾಸಿಯಾದ ಶ್ರೀರುದ್ರನು ಭೂಲೋಕದಲ್ಲಿ ಅವತರಿಸ ಬೇಕೆಂದು ಉದ್ದೇಶಿಸಿ, ಸ್ಥಿರಬುದ್ಧಿಯಾದ ಆ ವಿದ್ಯಾಧಿರಾಜನ ಪುತ್ರನು ತನ್ನ ತಂದೆಯಾಗ ಬೇಕೆಂದು ಬಯಸಿದನು.

ಪುತ್ರೋಽಭವತ್ತಸ್ಯ ಪುರಾತ್ತಪುಣ್ಯೈಃ
ಸುಬ್ರಹ್ಮತೇಜಾಃ ಶಿವಗುರ್ವಭಿಖ್ಯಃ |
ಜ್ಞಾನೇ ಶಿವೋ ಯೋ ವಚನೇ ಗುರುಸ್ತ-
ಸ್ಯಾನ್ವರ್ಥ ನಾಮಾಽಕೃತ ಲಬ್ಧವರ್ಣಃ || ೫

ವಿದ್ಯಾಧಿರಾಜನು ಪೂರ್ವಜನ್ಮದಲ್ಲಿ ಮಾಡಿದ ಪುಣ್ಯಗಳ ಬಲದಿಂದ ಆತನಿಗೆ ಬ್ರಹ್ಮತೇಜೋಽನ್ವಿತನಾದ ಒಬ್ಬ ಪುತ್ರನು ಹುಟ್ಟಿದನು. ವಿದ್ವಾಂಸನಾದ ತಂದೆಯು ಪುತ್ರನಿಗೆ 'ಶಿವಗುರು'ಎಂದು ಹೆಸರಿಟ್ಟನು. ಆ ಬಾಲಕನು ಜ್ಞಾನದಲ್ಲಿ ಸಾಕ್ಷಾತ್ ಶಿವನೂ ಮಾತಾಡುವುದರಲ್ಲಿ ಗುರುವೂ(ಬೃಹಸ್ಪತಿಯೂ)ಆಗಿ ವಿರಾಜಿಸಿದ್ದರಿಂದ'ಶಿವಗುರು'ಎಂಬ ಹೆಸರು ಅನ್ವರ್ಥವಾಯಿತು.

ಸ ಬ್ರಹ್ಮಚಾರೀ ಗುರುಗೇಹವಾಸೀ
ತತ್ಕಾರ್ಯಕಾರೀ ವಿಹಿತಾನ್ನಭೋಜೀ |
ಸಾಯಂ ಪ್ರಭಾತಂ ಚ ಹುತಾಶಸೇವೀ
ವ್ರತೇನ ವೇದಂ ನಿಜಮಧ್ಯಗೀಷ್ಟ || ೬

ಶಿವಗುರುವು ಬ್ರಹ್ಮಚಾರಿಯಾಗಿ ತನ್ನ ಗುರುವಿನ ಗೃಹದಲ್ಲಿ ವಾಸಮಾಡುತ್ತ, ಗುರು ಸೇವೆಮಾಡುತ್ತ, ವಿಹಿತವಾದ ಭಿಕ್ಷಾನ್ನವನ್ನು ಭುಂಜಿಸುತ್ತ ಬೆಳಿಗ್ಗೆ ಮತ್ತು ಸಂಜೆ

ಅಗ್ನಿಕಾರ್ಯವನ್ನು ನಿರ್ವಹಿಸುತ್ತ ವ್ರತಬದ್ಧನಾಗಿ ತನ್ನ ವೇದಶಾಖೆಯನ್ನು ಅಭ್ಯಾಸ ಮಾಡಿದನು.

ಟಿಪ್ಪಣಿ:ಶ್ರೀಶಂಕರಾಚಾರ್ಯರದು ಯಜುರ್ವೇದದ ತೈತ್ತಿರೀಯಶಾಖೆ ಎಂದು ಪ್ರಸಿದ್ಧಿಯುಂಟು.

ಕ್ರಿಯಾದ್ಯನುಷ್ಠಾನ ಫಲೋಽರ್ಥಬೋಧಃ
ಸ ನೋಪಜಾಯೇತ ವಿನಾ ವಿಚಾರಮ್ |
ಅಧೀತ್ಯ ವೇದಾನಥ ತದ್ವಿಚಾರಂ
ಚಕಾರ ದುರ್ಬೋಧತರೋ ಹಿ ವೇದಃ || ೭

ವೇದೋಕ್ತ ಕ್ರಿಯೆಯೂ ಧ್ಯಾನವೂ ಸರಿಯಾದ ಫಲವನ್ನು ನೀಡಬೇಕಾದರೆ, ವೇದವಾಕ್ಯಗಳ ಅರ್ಥಜ್ಞಾನವು ಆವಶ್ಯಕ. ಅರ್ಥಜ್ಞಾನವು ವಿಚಾರಮಾಡದೆ ಲಭಿಸತಕ್ಕದ್ದಲ್ಲ. ಆದ್ದರಿಂದ ಶಿವಗುರುವು ವೇದಾರ್ಥವಿಚಾರರೂಪವಾದ ಪೂರ್ವಮೀಮಾಂಸಾ ಶಾಸ್ತ್ರವನ್ನು ಅಧ್ಯಯನ ಮಾಡಿದನು. ಶಾಸ್ತ್ರಾಧ್ಯಯನ ಮಾಡದೆ ವೇದದ ಅರ್ಥವನ್ನು ನಿರ್ಣಯಿಸಲಾಗುವುದಿಲ್ಲ.

ವೇದೇಷ್ವಧೀತೇಷು ವಿಚಾರಿತೇಽರ್ಥೇ
ಶಿಷ್ಯಾನುರಾಗೀ ಗುರುರಾಹ ತಂ ಸ್ಮ |
ಅಪಾಠಿ ಮತ್ತಃ ಸಷಡಂಗವೇದೋ
ವ್ಯಚಾರಿ ಕಾಲೋ ಬಹುರತ್ಯಗಾತ್ತೇ || ೮

ಹೀಗೆ ವೇದಾಧ್ಯಯನವನ್ನು ಮುಗಿಸಿ ವೇದಾರ್ಥವನ್ನು ವಿಚಾರಿಸಿ ತಿಳಿದುಕೊಂಡ ಮೇಲೆ, ಶಿಷ್ಯನನ್ನು ಪ್ರೀತಿಯಿಂದ ಕಾಣುತ್ತಿದ್ದ ಆತನ ಆಚಾರ್ಯನು ಶಿವಗುರುವನ್ನು ಕುರಿತು ಹೀಗೆಂದನು:"ಅಪ್ಪಾ -ಶಿವಗುರು, ಷಡಂಗಸಹಿತವಾಗಿ ವೇದವನ್ನು ನನ್ನಿಂದ ಅಧ್ಯಯನ ಮಾಡಿದ್ದೀಯೆ. ವೇದಾರ್ಥವನ್ನು ಮೀಮಾಂಸೆಯಿಂದ ತಿಳಿದು ಕೊಂಡಿದ್ದೀಯೆ. ನೀನು ನನ್ನ ಬಳಿಗೆ ಬಂದು ಬಹಳ ಕಾಲವಾಯಿತು.

ಟಿಪ್ಪಣಿ:ಶಿಕ್ಷೆ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ ಮತ್ತು ಕಲ್ಪ-ಇವು ವೇದದ ಷಡಂಗಗಳು.

ಭಕ್ತೋಽಪಿ ಗೇಹಂ ವ್ರಜ ಸಂಪ್ರತಿ ತ್ವಂ
ಜನೋಽಪಿ ತೇ ದರ್ಶನಲಾಲಸಃ ಸ್ಯಾತ್ |
ಗತ್ವಾ ಕದಾಚಿತ್ ಸ್ವಜನ ಪ್ರಮೋದಂ
ವಿಧೇಹಿ ಮಾ ತಾತ ವಿಲಂಬಯಸ್ವ || ೯

"ನೀನು ನನ್ನನ್ನು ಶುಶ್ರೂಷೆ ಮಾಡುತ್ತ ನನ್ನ ಭಕ್ತನಾಗಿರುವೆ. ಆದರೂ ನೀನು ಇನ್ನು ನಿನ್ನ ಮನೆಗೆ ಹೋಗುವುದು ಯುಕ್ತವಾಗಿದೆ. ನಿನ್ನ ತಂದೆತಾಯಿಗಳು ಮತ್ತು ಬಂಧುಜನರು ನಿನ್ನನ್ನು

ಕಾಣಲು ಕಾದಿರುತ್ತಾರೆ. ಆದ್ದರಿಂದ ನೀನು ಮನೆಗೆ ತೆರಳಿ ಅವರೆಲ್ಲರಿಗೂ ಆನಂದವನ್ನುಂಟುಮಾಡು. ಮಗು-ಶಿವಗುರು, ಇನ್ನು ವಿಲಂಬಿಸಬೇಡ.

ವಿಧಾತುಮಿಷ್ಟಂ ಯದಿಹಾಪರಾಹ್ನೇ
ವಿಜಾನತಾ ತತ್ಪುರುಷೇಣ ಪೂರ್ವಮ್ |
ವಿಧೇಯಮೇವಂ ಯದಿಹ ಶ್ವ ಇಷ್ಟಂ
ಕರ್ತುಂ ತದದ್ಯೇತಿ ವಿನಿಶ್ಚಿತೋಽರ್ಥಃ || ೧೦

"ಮಧ್ಯಾಹ್ನದ ಮೇಲೆ ಮಾಡಬೇಕಾದ ಕೆಲಸವನ್ನು ಪ್ರಾತಃ ಕಾಲವೇ ಮಾಡಬೇಕು. ನಾಳೆ ಮಾಡಬೇಕೆಂದಿರುವುದನ್ನು ಈ ದಿನವೇ ಮಾಡಬೇಕು-ಎಂದು ನಿಶ್ಚಿತವಾದ ಲೋಕನೀತಿ.

ಕಾಲೋಪ್ತಬೀಜಾದಿಹ ಯಾದೃಶಂ ಸ್ಯಾತ್
ಸಸ್ಯಂ ನ ತಾದೃಗ್ವಿಪರೀತಕಾಲಾತ್ |
ತಥಾ ವಿವಾಹಾದಿ ಕೃತಂ ಸ್ವಕಾಲೇ
ಫಲಾಯ ಕಲ್ಪೇತ ನ ಚೇದ್ ವೃಥಾ ಸ್ಯಾತ್ || ೧೧

"ಯೋಗ್ಯಕಾಲದಲ್ಲಿ ಬೀಜವನ್ನು ಬಿತ್ತಿದರೆ ಉತ್ತಮವಾಗಿ ಸಸಿ ಬೆಳೆಯುತ್ತದೆ. ಅಕಾಲದಲ್ಲಿ ಬಿತ್ತಿದರೆ ಹಾಗಾಗುವುದಿಲ್ಲ. ಆದ್ದರಿಂದ ಸ್ವಕಾಲದಲ್ಲಿ ಮದುವೆ ಮೊದಲಾದ್ದನ್ನು ನಡೆಸಿದರೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ವ್ಯರ್ಥವೇ ಆದೀತು.

ಆ ಜನ್ಮನೋ ಗಣಯತೋ ನನು ತಾನ್‌ಗತಾಬ್ದಾನ್
ಮಾತಾ ಪಿತಾ ಪರಿಣಯಂ ತವ ಕರ್ತುಕಾಮೌ |
ಪಿತ್ರೋರಿಯಂ ಪ್ರಕೃತಿರೇವ ಪುರೋಪನೀತಿಂ
ಯದ್ಧ್ಯಾಯತಸ್ತನುಭವಸ್ಯ ತತೋ ವಿವಾಹಮ್ || ೧೨

"ಮಕ್ಕಳು ಹುಟ್ಟಿದಂದಿನಿಂದ ತಾಯಿತಂದೆಗಳು ಅವರ ವಯಸ್ಸು ಎಷ್ಟಾಯಿತೆಂದು ಎಣಿಸುತ್ತಲೇ ಇರುತ್ತಾರೆ. ನಿನ್ನ ತಾಯಿತಂದೆಗಳು ನಿನಗೆ ಮದುವೆಮಾಡಬೇಕೆಂದು ಬಯಸುತ್ತಿದ್ದಾರೆ. ತಾಯಿತಂದೆಯಾದವರ ಸ್ವಭಾವವೇ ಹೀಗಿರುತ್ತದೆ. ಮೊದಲು ಪುತ್ರನಿಗೆ ಉಪನಯನ ಮಾಡಬೇಕೆಂಬ ಚಿಂತೆ;ಆಮೇಲೆ ವಿವಾಹಮಾಡಬೇಕೆಂಬ ಆಲೋಚನೆ.

ತತ್ತತ್ಕುಲೀನಪಿತರಃ ಸ್ಪೃಹಯಂತಿ ಕಾಮಂ
ತತ್ತತ್ಕುಲೀನಪುರುಷಸ್ಯ ವಿವಾಹಕರ್ಮ |
ಪಿಂಡಪ್ರದಾತೃಪುರುಷಸ್ಯ ಸಸಂತತಿತ್ವೇ
ಪಿಂಡಾವಿಲೋಪಮುಪರಿ ಸ್ಫುಟಮೀಕ್ಷಮಾಣಾಃ || ೧೩

"ಉತ್ತಮಕುಲಜಾತರಾದ ಮಾತಾಪಿತೃಗಳು ತಮ್ಮ ಸಂತತಿಗೆ ವಿವಾಹವಾಗಬೇಕೆಂದು ವಿಶೇಷವಾಗಿ ಆಸೆಪಡುತ್ತಾರೆ. ತಮಗೆ ಮುಂದೆ ಪಿಂಡಪ್ರದಾನ ಮಾಡುವ ಪುತ್ರನಿಗೆ ಸಂತತಿಯಾದರೆ, ಪಿಂಡಪ್ರದಾನವು ವಿಚ್ಛಿನ್ನವಾಗುವುದಿಲ್ಲವೆಂಬುದು ಅವರ ಕಣ್ಣಿಗೆ ಕಟ್ಟಿದಂತಿರುತ್ತದೆ.

ಅರ್ಥಾವಬೋಧನ ಫಲೋ ಹಿ ವಿಚಾರ ಏಷ
ತಚ್ಚಾಪಿ ಚಿತ್ರಬಹುಕರ್ಮ ವಿಧಾನಹೇತೋಃ |
ಅತ್ರಾಧಿಕಾರಮಧಿಗಚ್ಛತಿ ಸದ್ವಿತೀಯಃ
ಕೃತ್ವಾ ವಿವಾಹಮಿತಿ ವೇದವಿದಾಂ ಪ್ರವಾದಃ || ೧೪

ನೀನು ಮೀಮಾಂಸಾಶಾಸ್ತ್ರವನ್ನು ಕಲಿತಿರುವುದು ವೇದಾರ್ಥವನ್ನು ತಿಳಿದು ನಾನಾಬಗೆಯ ಕರ್ಮಾನುಷ್ಠಾನಗಳನ್ನು ಮಾಡುವುದಕ್ಕಾಗಿ ಸರಿಯಷ್ಟೆ?ಪತ್ನಿಯಿದ್ದವನಿಗೆ ಮಾತ್ರ ಕರ್ಮಾನುಷ್ಠಾನದಲ್ಲಿ ಅಧಿಕಾರ ಬರುತ್ತದೆ. ಪತ್ನಿ ಇರಬೇಕಾದರೆ ವಿವಾಹವಾಗಬೇಕು!-ಇದು ವೇದವಿದರ ಸಿದ್ಧಾಂತವಾಗಿರುತ್ತದೆ"-ಎಂದು ಆಚಾರ್ಯನು ಶಿವಗುರುವಿಗೆ ಹೇಳಿದನು.

ಸತ್ಯಂ ಗುರೋ ನ ನಿಯಮೋಽಸ್ತಿ ಗುರೋರಧೀತ-
ವೇದೋ ಗೃಹೀ ಭವತಿ ನಾನ್ಯಪದಂ ಪ್ರಯಾತಿ |
ವೈರಾಗ್ಯವಾನ್ ವ್ರಜತಿ ಭಿಕ್ಷುಪದಂ ವಿವೇಕೀ
ನೋ ಚೇದ್‌ಗೃಹೀ ಭವತಿ ರಾಜಪದಂ ತದೇತತ್ || ೧೫

ಆಗ ಶಿವಗುರುವು ತನ್ನ ಗುರುವನ್ನು ಕುರಿತು ಹೀಗೆಂದನು:" ಗುರುಗಳೆ, ನೀವು ಹೇಳಿದ್ದು ನಿಜ. ಆದರೆ ಗುರುವಿನಿಂದ ಹೇಳಿಸಿಕೊಂಡು ವೇದಾಧ್ಯಯನವನ್ನು ಮಾಡಿಮುಗಿಸಿದ ಮೇಲೆ, ಆತನು ಗೃಹಸ್ಥನೇ ಆಗಬೇಕು, ಬೇರೆ ಆಶ್ರಮವನ್ನೂ ಸ್ವೀಕರಿಸಬಾರದೆಂಬ ನಿಯಮವೇನೂ ಇಲ್ಲ. ವಿವೇಕಿಯಾದವನು ವಿರಕ್ತನಾದರೆ ಸಂನ್ಯಾಸವನ್ನು ಸ್ವೀಕರಿಸುತ್ತಾನೆ, ಇಲ್ಲದಿದ್ದರೆ ಗೃಹಸ್ಥನಾಗುತ್ತಾನೆ-ಎಂಬುದು ರಾಜಮಾರ್ಗ.

ಶ್ರೀನೈಷ್ಠಿಕಾಶ್ರಮಮಹಂ ಪರಿಗೃಹ್ಯ ಯಾವ-
ಜ್ಜೀವಂ ವಸಾಮಿ ತವ ಪಾರ್ಶ್ವಗತಶ್ಚಿರಾಯುಃ |
ದಂಡಾಜಿನೀ ಸವಿನಯೋ ಬುಧ ಜುಹ್ವದಗ್ನೌ
ವೇದಂ ಪಠನ್ ಪಠಿತವಿಸ್ಮೃತಿ ಹಾನಿಮಿಚ್ಛನ್ || ೧೬

"ನಾನು ನೈಷ್ಠಿಕಬ್ರಹ್ಮಚಾರಿಯಾಗಿ, ಬದುಕಿರುವವರೆಗೆ ನಿಮ್ಮ ಬಳಿಯಲ್ಲಿಯೇ ಇರಲು ಬಯಸುತ್ತೇನೆ. ದಂಡಾಜಿನಗಳನ್ನು ಧರಿಸಿ ದೀರ್ಘಾಯುಷ್ಮಂತನಾಗಿ ವಿನಯದಿಂದ ನಿಮ್ಮ

ಸೇವೆಮಾಡುತ್ತ ಅಗ್ನಿಕಾರ್ಯಗಳನ್ನು ನೆರವೇರಿಸುತ್ತಿರುವೆನು. ಹಾಗೆಯೇ ಕಲಿತವೇದವು ಮರೆತು ಹೋಗಬಾರದೆಂದು ವೇದವನ್ನು ಪಠಿಸುತ್ತಲೇ ಇರುವೆನು.

ದಾರಗ್ರಹೋ ಭವತಿ ತಾವದಯಂ ಸುಖಾಯ
ಯಾವ ತ್ವತೋಽನುಭವ ಗೋಚರತಾಂ ಗತಃ ಸ್ಯಾತ್ |
ಪಶ್ಚಾಚ್ಛನೈರ್ವಿರಸತಾಮುಪಯಾತಿ ಸೋಽಯಂ
ಕಿಂ ನಿಹ್ನುಷೇ ತ್ವಮನುಭೂತಿಪದಂ ಮಹಾತ್ಮನ್ || ೧೭

"ಮುಂದೆ ಸರಿಯಾಗಿ ಅನುಭವವಾಗುವವರೆಗೆ ವಿವಾಹವು ಸುಖಕರವಾಗಿ ತೋರುತ್ತದೆ. ಆಮೇಲೆ ಮೆಲ್ಲಗೆ ವಿರಸವಾಗತೊಡಗುತ್ತದೆ! ಮಹಾತ್ಮರೆ, ಈ ರೀತಿ ಅನುಭವ ಗೋಚರವಾದ ವಿಷಯವನ್ನು ಏಕೆ ಮರೆಮಾಚುತ್ತಿದ್ದೀರಿ?

ಯಾಗೋಽಪಿ ನಾಕಫಲದೋ ವಿಧಿನಾ ಕೃತಶ್ಚೇತ್
ಪ್ರಾಯಃ ಸಮಗ್ರಕರಣಂ ಭುವಿ ದುರ್ಲಭಂ ತತ್ |
ವೃಷ್ಟ್ಯಾದಿವನ್ನ ಹಿ ಫಲಂ ಯದಿ ಕರ್ಮಣಿ ಸ್ಯಾತ್
ದಿಷ್ಟ್ಯಾ ಯಥೋಕ್ತವಿರಹೇ ಫಲದುರ್ವಿಧತ್ವಮ್ || ೧೮

"ಯಾಗವೂ ಸಹ ವಿಧಿಪೂರ್ವಕವಾಗಿ ಸರ್ವವನ್ನೂ ಅನುಷ್ಠಾನ ಮಾಡಿದರೆ ಮಾತ್ರ ಸ್ವರ್ಗಫಲವನ್ನು ನೀಡುತ್ತದೆ. ಈ ಲೋಕದಲ್ಲಿ ಸರ್ವವನ್ನೂ ಸಮಗ್ರವಾಗಿ ನೆರವೇರಿಸುವುದು ಕಷ್ಟವೇಸರಿ. ಕಾರೀರಿ ಎಂಬ ಯಾಗ ಮಾಡಿದರೆ ಅವಶ್ಯವಾಗಿ ಮಳೆಬರಬೇಕಷ್ಟೇ, ದೈವ ವಶದಿಂದ ವಿಧಿವತ್ತಾಗಿ ನಡೆಯದೆ ಹೋದರೆ ಕೆಟ್ಟಫಲವೇ ದೊರಕಿಬಿಡುತ್ತದೆ.

ನಿಃಸ್ವೋ ಭವೇದ್ಯದಿ ಗೃಹೀ ನಿರಯೀ ಸ ನೂನಂ
ಭೋಕ್ತುಂ ನ ದಾತುಮಪಿ ಯಃ ಕ್ಷಮತೇಽಣು ಮಾತ್ರಮ್ |
ಪೂರ್ಣೋಽಪಿ ಪೂರ್ತಿಮಭಿಮಂತುಮಶಕ್ನುವನ್ಯೋ
ಮೋಹೇನ ಶಂ ನ ಮನುತೇ ಖಲು ತತ್ರ ತತ್ರ || ೧೯

"ಒಂದುವೇಳೆ ಗೃಹಸ್ಥನು ದರಿದ್ರನಾಗಿ ತಾನು ತಿನ್ನುವುದಕ್ಕೂ ಇಲ್ಲದೆ ಅಣುಮಾತ್ರವನ್ನೂ ದಾನಮಾಡಲೂ ಶಕ್ತನಾಗದೇ ಹೋದರೆ, ಅವನು ನರಕವನ್ನೇ ಪಡೆಯುತ್ತಾನಲ್ಲವೆ? ಅಥವಾ ಗೃಹಸ್ಥನು ಶ್ರೀಮಂತನಾದರೂ ತನಗೆ ಹಣ ಸಾಲದೆಂಬ ಅವಿವೇಕದಿಂದ ಯಾಗವು ಸುಖಕರವಾದುದೆಂದು ತಿಳಿಯದೇ ಹೋಗುವ ಸಂಭವವೂ ಇದೆ, ಅಲ್ಲವೆ?

ಯಾವತ್ಸು ಸತ್ಸು ಪರಿಪೂರ್ತಿರಥೋ ಅಮೀಷಾಂ
ಸಾಧೋ ಗೃಹೋಪಕರಣೇಷು ಸದಾ ವಿಚಾರಃ |

ಏಕತ್ರ ಸಂಹತವತಃ ಸ್ಥಿತಪೂರ್ವನಾಶ-
ಸ್ತಚ್ಚಾಪಯಾತಿ ಪುನರಪ್ಯಪರೇಣ ಯೋಗಃ || ೨೦

ಒಂದುವೇಳೆ ಗೃಹಸ್ಥನ ಮನೆಯಲ್ಲಿ ಸರ್ವಸಂಪತ್ತುಗಳು ಪೂರ್ಣವಾಗಿದ್ದರೂ ಮನೆಗೆ ಬೇಕಾದ ಉಪಕರಣಗಳ ವಿಷಯದಲ್ಲಿಯೇ ಅವನು ವಿಚಾರಮಾಡತೊಡಗುತ್ತಾನೆ. ಅಲ್ಲದೇ ಅವನಲ್ಲಿದ್ದ ಸಾಮಗ್ರಿಗಳು ಕಾರಣಾಂತರದಿಂದ ನಾಶವಾಗಬಹುದು. ಹಾಗಾಗದಿದ್ದರೆ ರೋಗವೇ ಮೊದಲಾದ ಇನ್ನೊಂದು ಕಷ್ಟ ಒದಗಬಹುದು" ಎಂದನು.

ಏವಂ ಗುರೌ ವದತಿ ತಜ್ಜನಕೋ ನಿನೀಷು-
ರಾಗಚ್ಛದತ್ರ ತನಯಂ ಸ್ವಗೃಹಂ ಗೃಹೇಶಃ |
ತೇನಾನುನೀಯ ಬಹುಲಂ ಗುರವೇ ಪ್ರದಾಪ್ಯ
ಯತ್ನಾನ್ನಿಕೇತನಮನಾಯಿ ಗೃಹೀತವಿದ್ಯಃ || ೨೧

ಈ ಪ್ರಕಾರ ಶಿವಗುರುವು ಹೇಳುತ್ತಿರುವಾಗ ಅವನ ತಂದೆಯಾದ ವಿದ್ಯಾಧಿರಾಜನು ತನ್ನ ಮಗನನ್ನು ಮನೆಗೆ ಕರೆದುಕೊಂಡು ಹೋಗಬೇಕೆಂದು ಆಗಮಿಸಿದನು. ಆಮೇಲೆ ಆತನು ಶಿವಗುರುವಿಗೆ ನಾನಾ ಬಗೆಯಾಗಿ ಹಿತೋಪದೇಶವನ್ನು ಮಾಡಿ, ಗುರುವಿಗೆ ಗುರುದಕ್ಷಿಣೆಯನ್ನು ಕೊಡಿಸಿ ವಿದ್ಯಾವಂತನಾದ ತನ್ನ ಮಗನನ್ನು ಮನೆಗೆ ಕರೆದುಕೊಂಡು ಹೋದನು.

ಗತ್ವಾ ನಿಕೇತನಮಸೌ ಜನನೀಂ ವವಂದೇ
ಸಾಽಽಲಿಂಗ್ಯ ತದ್ವಿರಹಜಂ ಪರಿತಾಪಮೌಜ್ಝತ್ |
ಪ್ರಾಯೇಣ ಚಂದನರಸಾದಪಿ ಶೀತಲಂ ತತ್
ಯತ್ಪುತ್ರಗಾತ್ರ ಪರಿರಂಭಣ ನಾಮಧೇಯಮ್ || ೨೨

ಶಿವಗುರುವು ತನ್ನ ಗೃಹಕ್ಕೆ ಹೋಗಿ ತಾಯಿಗೆ ವಂದಿಸಿದನು. ಅವಳು ಪುತ್ರನನ್ನು ಆಲಂಗಿಸಿಕೊಂಡು ಅವನ ವಿರಹದಿಂದಾದ ದುಃಖವನ್ನು ಕಳೆದುಕೊಂಡಳು. ಪುತ್ರನನ್ನು ಆಲಂಗಿಸುವುದೆಂದರೆ ಚಂದನ ರಸಕ್ಕಿಂತ ಹೆಚ್ಚು ತಂಪನ್ನುಂಟುಮಾಡತಕ್ಕದ್ದಾಗಿರುತ್ತದೆ.

ಶ್ರುತ್ವಾ ಗುರೋಃ ಸದನತಶ್ಚಿರಮಾಗತಂ ತಂ
ತದ್ಬಂಧುರಾಗಮದಥ ತ್ವರಿತೇಕ್ಷಣಾಯ |
ಪ್ರತ್ಯುದ್ಗಮಾದಿಭಿರಸಾವಪಿ ಬಂಧುತಾಯಾಃ
ಸಂಭಾವನಾಂ ವ್ಯಧಿತ ವಿತ್ತಕುಲಾನುರೂಪಾಮ್ || ೨೩

ಶಿವಗುರುವು ಬಹಳ ಕಾಲದಮೇಲೆ ಮನೆಗೆ ಮರಳಿ ಬಂದನೆಂಬುದನ್ನು ಕೇಳಿ, ಅವನ ಬಂಧುವರ್ಗದವರು ಶಿವಗುರುವನ್ನು ನೋಡುವುದಕ್ಕಾಗಿ ತ್ವರೆಯಿಂದ ಬಂದರು. ಶಿವಗುರುವು

ಎದ್ದು ಅವರಿಗೆ ನಮಸ್ಕರಿಸುವುದೇ ಮೊದಲಾದ ವಿಧಿಯಿಂದ ತನ್ನ ಕುಲಕ್ಕೆ ಮತ್ತು ಸಂಪತ್ತಿಗೆ ಅನುಗುಣವಾದ ಸತ್ಕಾರವನ್ನು ಮಾಡುತ್ತಿದ್ದನು.

ವೇದೇ ಪದಕ್ರಮ ಜಟಾದಿಷು ತಸ್ಯ ಬುದ್ಧಿಂ
ಸಂವೀಕ್ಷ್ಯ ತಜ್ಜನಯಿತಾ ಬಹುಶೋಽ ಪ್ಯಪೃಚ್ಛತ್ |
ಯಸ್ಯಾಭವತ್ಪ್ರಥಿತನಾಮ ವಸುಂಧರಾಯಾಂ
ವಿದ್ಯಾಧಿರಾಜ ಇತಿ ಸಂಗತವಾಚ್ಯಮಸ್ಯ || ೨೪

ಭಾಟ್ಟೇ ನಯೇ ಗುರುಮತೇ ಕಣಭುಜ್‌ಮತಾದೌ
ಪ್ರಶ್ನಂ ಚಕಾರ ತನಯಸ್ಯ ಮತಿಂ ಬುಭುತ್ಸುಃ |
ಶಿಷ್ಯೋಽಪ್ಯುವಾಚ ನತಪೂರ್ವಗುರುಃ ಸಮಾಧಿಂ
ಪಿತ್ರೋದಿತಃ ಸ್ಮಿತಮುಖೋ ಹಸಿತಾಂಬುಜಾಸ್ಯಃ || ೨೫

ವಿದ್ಯಾಧಿರಾಜನೆಂದು ದೇಶದಲ್ಲಿ ವಿಖ್ಯಾತನಾದ ಅವನ ತಂದೆಯು ಶಿವಗುರುವಿಗೆ ವೇದದಲ್ಲಿ, ಪದ ಕ್ರಮ ಜಟೆ ಮೊದಲಾದುವುಗಳಲ್ಲಿ, ಮಗನ ಬುದ್ಧಿಶಕ್ತಿ ಎಷ್ಟಿದೆ ಎಂಬುದನ್ನು ಮತ್ತೆ ಮತ್ತೆ ಪ್ರಶ್ನೆಗಳನ್ನು ಹಾಕಿ ತಿಳಿದು ಕೊಂಡನು. ಮಗನ ಪ್ರಜ್ಞಾಶಕ್ತಿಯನ್ನು ತಿಳಿದು ಕೊಳ್ಳುವುದಕ್ಕಾಗಿ ಆತನು ಶಿವಗುರುವನ್ನು ಕುರಿತು ಕುಮಾರಿಲಭಟ್ಟರ ಸಿದ್ಧಾಂತದಲ್ಲಿಯೂ ಪ್ರಭಾಕರಗುರುಮತದಲ್ಲಿಯೂ ಹಾಗೆಯೇ ಕಣಾದಾದಿಗಳ ಮತಗಳಲ್ಲಿಯೂ ಪ್ರಶ್ನೆಮಾಡಿದನು. ತಂದೆಯು ಹೀಗೆ ಪ್ರಶ್ನೆಗಳನ್ನು ಕೇಳಿದಾಗ ಮುಗುಳ್ನಗೆ ಬೀರುತ್ತಾ ಆ ಶಿಷ್ಯನು ಪ್ರಾಚೀನರಾದ ಆ ಗುರುಗಳನ್ನು ವಂದಿಸಿ ಸರಿಯಾದ ಸಮಾಧಾನವನ್ನು ಹೇಳುತ್ತಿದ್ದನು.

ವೇದೇ ಚ ಶಾಸ್ತ್ರೇ ಚ ನಿರೀಕ್ಷ್ಯ ಬುದ್ಧಿಂ
ಪ್ರಶ್ನೋತ್ತರಾದಾವಪಿ ನೈಪುಣೀಂ ತಾಮ್ |
ದೃಷ್ಟ್ವಾ ತುತೋಷಾತಿತರಾಂ ಪಿತಾಽಸ್ಯ
ಸ್ಸುತಃ ಸುಖಾ ಯಾ ಕಿಮು ಶಾಸ್ತ್ರತೋ ವಾಕ್ || ೨೬

ಹೀಗೆ ವೇದದಲ್ಲಿಯೂ ಶಾಸ್ತ್ರದಲ್ಲಿಯೂ ಶಿವಗುರುವಿಗಿದ್ದ ಮೇಧಾಶಕ್ತಿಯನ್ನೂ ಪ್ರಶ್ನೆಗೆ ಉತ್ತರಕೊಡುವ ನೈಪುಣ್ಯವನ್ನೂ ಕಂಡು ಅವನ ತಂದೆಗೆ ಬಹಳ ಸಂತೋಷವಾಯಿತು. ಮಗನ ಮಾತೆಂದರೆ ಸಹಜವಾಗಿಯೇ ತಂದೆಗೆ ಸುಖಕರವಾಗಿರುತ್ತದೆ. ಹೀಗಿರುವಾಗ ಶಾಸ್ತ್ರಪೂರ್ವಕವಾದ ವಾಣಿಯನ್ನು ಕೇಳಿ ತಂದೆಗೆ ಎಷ್ಟು ಆನಂದವಾಗಬೇಡ?

ಕನ್ಯಾಂ ಪ್ರದಾತುಮನಸೋ ಬಹವೋಽಪಿ ವಿಪ್ರಾ-
ಸ್ತನ್ಮಂದಿರಂ ಪ್ರತಿ ಯಯುರ್ಗುಣಪಾಶಕೃಷ್ಟಾಃ |

ಪೂರ್ವಂ ವಿವಾಹಸಮಯಾದಪಿ ತಸ್ಯ ಗೇಹಂ
ಸಂಬಂಧವತ್ಕಿಲ ಬಭೂವ ವರೀತುಕಾಮೈಃ ॥ ೨೭

ಹೀಗಿರಲು ಶಿವಗುರುವಿನ ಗುಣಗಣಗಳಿಂದ ಆಕೃಷ್ಟರಾದ ಬಹುಮಂದಿ ಬ್ರಾಹ್ಮಣರು ಹೆಣ್ಣುಕೊಡುವುದಕ್ಕಾಗಿ ಆತನ ಮನೆಗೆ ಬರತೊಡಗಿದರು. ಅವನ ವಿವಾಹದ ಪ್ರಸ್ತಾವಕ್ಕೆ ಮೊದಲೇ ವರಾರ್ಥಿಗಳಾದವರು ಬರತೊಡಗಿದ್ದರು.

ಬಹ್ವರ್ಥದಾಯಿಷು ಬಹುಷ್ವಪಿ ಸತ್ಸು ದೇಶೇ
ಕನ್ಯಾಪ್ರದಾತೃಷು ಪರೀಕ್ಷ್ಯ ವಿಶಿಷ್ಟ ಜನ್ಮ ।
ಕನ್ಯಾಮಯಾಚತ ಸುತಾಯ ಸ ವಿಪ್ರವರ್ಯೋ
ವಿಪ್ರಂ ವಿಶಿಷ್ಟ ಕುಲಜಂ ಪ್ರಥಿತಾನುಭಾವಃ ॥ ೨೮

ವಿಪುಲವಾಗಿ ಹಣವನ್ನು ಕೊಟ್ಟು ಮಗಳನ್ನು ಮದುವೆ ಮಾಡಿಕೊಡಲು ಬಂದವರು ಬಹಳಮಂದಿ ಇದ್ದರೂ, ಕೀರ್ತಿಶಾಲಿಯೂ ಬ್ರಾಹ್ಮಣೋತ್ತಮನೂ ಆದ ವಿದ್ಯಾಧಿರಾಜನು ಉತ್ತಮ ಕುಲದಲ್ಲಿ ಒಳ್ಳೆಯ ಮುಹೂರ್ತದಲ್ಲಿ ಜನಿಸಿದ ಒಬ್ಬ ಕನ್ಯೆಯನ್ನು ಮಾತ್ರ ಆರಿಸಿ ತನ್ನ ಪುತ್ರನಿಗೋಸ್ಕರ ಕೇಳಿದನು.

ಕನ್ಯಾ ಪಿತುರ್ವರಪಿತುಶ್ಚ ವಿವಾದ ಆಸೀ-
ದಿತ್ಥಂ ತಯೋಃ ಕುಲಜುಷೋಃ ಪ್ರಥಿತೋರುಭೂತ್ಯೋಃ ।
ಕಾರ್ಯಸ್ತ್ವಯಾ ಪರಿಣಯೋ ಗೃಹಮೇತ್ಯ ಪುತ್ರೀ-
ಮಾನೀಯ ಸದ್ಮ ತನಯಾಯ ಸುತಾ ಪ್ರದೇಯಾ ॥ ೨೯

ಅನಂತರ ಕನ್ಯಾಪಿತೃವಿಗೂ ವರನ ಪಿತೃವಿಗೂ ಒಂದು ವಿವಾದ ಹುಟ್ಟಿತು. ಅವರಿಬ್ಬರೂ ಉತ್ತಮ ಕುಲಜಾತರೂ ಒಳ್ಳೆಯ ಶ್ರೀಮಂತರೂ ಆಗಿದ್ದರು. ಆದ್ದರಿಂದ ಕನ್ಯಾಪಿತೃವು ತನ್ನ ಮನೆಯಲ್ಲಿ ವಿವಾಹವಾಗಬೇಕೆಂದೂ, ವರನ ತಂದೆಯು ಹುಡುಗಿಯನ್ನು ತನ್ನ ಮನೆಗೆ ಕರೆತಂದು ಮದುವೆ ಮಾಡಿಕೊಡಬೇಕೆಂದು ಹೇಳತೊಡಗಿದರು.

ಸಂಕಲ್ಪಿತಾದ್ ದ್ವಿಗುಣಮರ್ಥಮಹಂ ಪ್ರದಾಸ್ಯೇ
ಮದ್ಗೇಹ ಮೇತ್ಯ ಪರಿಣೇತಿರಿಯಂ ಕೃತಾ ಚೇತ್ ।
ಅರ್ಥಂ ವಿನಾ ಪರಿಣಯಂ ದ್ವಿಜ ಕಾರಯಿಷ್ಯೇ
ಪುತ್ರೇಣ ಮೇ ಗೃಹಗತಾ ಯದಿ ಕನ್ಯಕಾ ಸ್ಯಾತ್ ॥ ೩೦

ಕನ್ಯಾಪಿತೃವು "ನನ್ನ ಮನೆಗೆ ಬಂದು ವರನು ವಿವಾಹ ಮಾಡಿಕೊಳ್ಳುವುದಾದರೆ ನಾನು ಸಂಕಲ್ಪಿಸಿದ್ದಕ್ಕಿಂತ ಎರಡರಷ್ಟು ಹಣವನ್ನು ಕೊಡುತ್ತೇನೆ! "ಎಂದನು. ವರನ ಪಿತನು"ಹೇ

ಬ್ರಾಹ್ಮಣ, ನನ್ನ ಮನೆಗೆ ಬಂದು ನನ್ನ ಮಗನಿಗೆ ಮದುವೆ ಮಾಡಿಕೊಡುವುದಾದರೆ ನೀನು ಯಾವ ಹಣವನ್ನೂ ಕೊಡಬೇಕಾದ್ದೇ ಇಲ್ಲ!"ಎಂದನು.

ಕಶ್ಚಿತ್ತು ತಸ್ಯಾಃ ಪಿತರಂ ಬಭಾಣ
ಮಿಥಃ ಸಮಾಹೂಯ ವಿಶೇಷವಾದೀ ।
ಅಸ್ಮಾಸು ಗೇಹಂ ಗತವತ್ಸ್ವಮುಷ್ಮೈ
ವಿಗೃಹ್ಯ ಕನ್ಯಾಮಪರಃ ಪ್ರದದ್ಯಾತ್ ॥ ೬೧

ಹೀಗೆ ಮಾತು ಬೆಳೆಯುತ್ತಿರಲಾಗಿ ವಿಶೇಷಜ್ಞನಾದ ಒಬ್ಬನು ಕನ್ಯಾಪಿತೃವನ್ನು ಇನ್ನೊಂದೆಡೆಗೆ ಕರೆದುಕೊಂಡು ಹೋಗಿ "ನೋಡು, ಹೀಗೆ ಏನನ್ನೂ ನಿಶ್ಚಯಿಸದೆ ನಾವು ಮನೆಗೆ ಹೋದರೆ ಆ ಸಮಯದಲ್ಲಿ ಇನ್ನೊಬ್ಬನು ಬಂದು ತನ್ನ ಮಗಳನ್ನು ಮದುವೆ ಮಾಡಿಕೊಟ್ಟು ಬಿಡಬಹುದು"ಎಂದನು.

ತೇನಾನುನೀತೋ ವರತಾತಭಾಷಿತಂ
ದ್ವಿಜೋಽನುಮೇನೇ ವರರೂಪ ಮೋಹಿತಃ ।
ದೃಷ್ಟೋ ಗುಣಃ ಸಂವರಣಾಯ ಕಲ್ಪತೇ
ಮಂತ್ರೋಽಭಿಜಾಪಾಚ್ಚಿರಕಾಲಭಾವಿತಃ ॥ ೬೨

ಹೀಗೆ ಆತನು ವರನ ತಂದೆಯ ಮಾತಿನಂತೆ ನಡೆಯಬೇಕೆಂದು ಕನ್ಯಾಪಿತೃವಿಗೆ ಬುದ್ಧಿ ಹೇಳಲಾಗಿ, ವರನ ಸೌಂದರ್ಯದಿಂದ ಮುಗ್ಧನಾಗಿದ್ದ ಆ ಬ್ರಾಹ್ಮಣನು ಹಾಗೆಯೇ ಆಗಲೆಂದು ಒಪ್ಪಿಕೊಂಡನು. ಎದ್ದು ಕಾಣುವ ಕುಲ ಶೀಲ ಸೌಂದರ್ಯಾದಿಗುಣವು ಮೆಚ್ಚುಗೆಯನ್ನೀಯಲು ಸಮರ್ಥವಾಗುತ್ತದೆ. ಬಹಳ ಕಾಲ ವಿಧಿವತ್ತಾಗಿ ಜಪಿಸಿದ ಮಂತ್ರವು ಆಯಾದೇವತೆಯ ಮೆಚ್ಚುಗೆಯನ್ನು ಬೇಗನೆ ಗಳಿಸುತ್ತದೆ.

ವಿದ್ಯಾಧಿರಾಜ ಮಘಪಂಡಿತ ನಾಮಧೇಯೌ
ಸಂಪ್ರತ್ಯಯಂ ವ್ಯತನುತಾಮಭಿಪೂಜ್ಯ ದೈವಮ್ ।
ಸಮ್ಯಙ್ಮುಹೂರ್ತಮವಲಂಬ್ಯ ವಿಚಾರಣೀಯಾ
ಮೌಹೂರ್ತಿಕಾ ಇತಿ ಪರಸ್ಪರಮೂಚಿವಾಂಸೌ ॥ ೬೩

ಅನಂತರ ವಿದ್ಯಾಧಿರಾಜನೂ ಕನ್ಯಾಪಿತೃವಾದ ಮಘಪಂಡಿತನೂ ಕುಲದೇವತೆಯನ್ನು ಪೂಜಿಸಿ ವಾಗ್ದಾನವೆಂಬ ಕ್ರಿಯೆಯನ್ನು ವಿಧಿವತ್ತಾಗಿ ನಡೆಸಿದರು. ಜ್ಯೌತಿಷಿಕರನ್ನು ಕಂಡು ಉತ್ತಮವಾದ ಮುಹೂರ್ತವನ್ನು ಕುರಿತು ವಿಚಾರಮಾಡಬೇಕಂದು ಅನ್ಯೋನ್ಯವಾಗಿ ಮಾತಾಡಿಕೊಂಡರು.

ಉದ್ವಾಹ್ಯ ಶಾಸ್ತ್ರವಿಧಿನಾ ವಿಹಿತೇ ಮುಹೂರ್ತೇ
ತೌ ಸಂಮುದಂ ಬಹುಮವಾಪತುರಾಪ್ತಕಾಮೌ |
ತತ್ರಾಗತೋ ಭೃಶಮಮೋದತ ಬಂಧುವರ್ಗಃ
ಕಿಂ ಭಾಷಿತೇನ ಬಹುನಾ ಮುದಮಾಪ ವರ್ಗಃ || ೩೪

ಆಮೇಲೆ ಅವರು ಗೊತ್ತು ಮಾಡಿದ ಮುಹೂರ್ತದಲ್ಲಿ ಶಾಸ್ತ್ರೋಕ್ತ ರೀತಿಯಲ್ಲಿ ವಿವಾಹಕಾರ್ಯವನ್ನು ನೆರವೇರಿಸಿ, ತಮ್ಮ ಇಷ್ಟವು ನೆರವೇರಿತೆಂದು ಇಬ್ಬರೂ ಸಂತೋಷಪಟ್ಟರು. ಆ ಮದುವೆಗೆ ಆಗಮಿಸಿದ ಬಂಧುಗಳೆಲ್ಲರೂ ತುಂಬ ಸಂತೋಷಪಟ್ಟರು. ಹೆಚ್ಚು ಹೇಳುವುದೇನು?ಬಂದವರೆಲ್ಲರೂ ಆನಂದಿಸಿದರು.

ತೌ ದಂಪತೀ ಸುವಸನೌ ಶುಭದಂತಪಂಕ್ತೀ
ಸಂಭೂಷಿತೌ ವಿಕಸಿತಾಂಬುಜರಮ್ಯವಕ್ತ್ರೌ |
ಸವ್ರೀಡಹಾಸ ಮುಖವೀಕ್ಷಣ ಸಂಪ್ರಹೃಷ್ಟೌ
ದೇವಾವಿವಾಪತುರನುತ್ತಮಶರ್ಮ ನಿತ್ಯಮ್ || ೩೫

ಶುಭ್ರವಾದ ದಂತಪಂಕ್ತಿಗಳಿಂದ ಕೂಡಿದ ಆ ನೂತನ ದಂಪತಿಗಳು ಉತ್ತಮ ವಸ್ತ್ರಗಳನ್ನು ಉಟ್ಟು ಒಡವೆಗಳನ್ನು ಧರಿಸಿದ್ದರು. ಅವರೀರ್ವರ ರಮಣೀಯವಾದ ಮುಖಕಮಲಗಳು ಅರಳಿದ್ದವು. ನಾಚಿಕೆಯಿಂದ ನಗುತ್ತಾ ಒಬ್ಬರ ಮುಖವನ್ನೊಬ್ಬರು ನೋಡಿ ತಮ್ಮೊಳಗೇ ಹರ್ಷಿಸುತ್ತಿದ್ದರು. ದೇವತೆಗಳಂತೆ ಕಾಣುತ್ತಿದ್ದ ಅವರು ಬಹಳ ಆನಂದದಿಂದಿದ್ದರು.

ಅಗ್ನೀನಥಾಧಿತ ಮಹೋತ್ತರ ಯಾಗಜಾತಂ
ಕರ್ತುಂ ವಿಶೇಷ ಕುಶಲೈಃ ಸಹಿತೋ ದ್ವಿಜೇಶಃ |
ತತ್ತತ್ಫಲಂ ಹಿ ಯದನಾಹಿತ ಹವ್ಯವಾಹಃ
ಸ್ಯಾದುತ್ತರೇಷು ವಿಹಿತೇಷ್ವಪಿ ನಾಧಿಕಾರೀ || ೩೬

ಹೀಗೆ ವಿವಾಹವಾದ ಮೇಲೆ ದ್ವಿಜೋತ್ತಮನಾದ ಶಿವಗುರುವು ಕುಶಲರಾದ ಋತ್ವಿಜರೊಡನೆ ಸೇರಿ ಮುಂದೆ ವಿವಾಹ ಫಲವಾಗಿ ದೊಡ್ಡ ದೊಡ್ಡ ಯಾಗಗಳನ್ನು ಮಾಡುವ ಉದ್ದೇಶದಿಂದ ಅಗ್ನ್ಯಾಧಾನವನ್ನು ಮಾಡಿದನು. ಅಗ್ನ್ಯಾಧಾನವನ್ನು ಮಾಡದಿದ್ದರೆ ಶಾಸ್ತ್ರವಿಹಿತವಾದರೂ ಮುಂದಿನ ಯಾಗಗಳಲ್ಲಿ ಆತನಿಗೆ ಅಧಿಕಾರ ವಿರುವುದಿಲ್ಲ.

ಟಿಪ್ಪಣಿ:ಅಗ್ನ್ಯಾಧಾನ =ಗಾರ್ಹಪತ್ಯ, ಆಹವನೀಯ, ದಕ್ಷಿಣಾಗ್ನಿ ಎಂಬ ಮೂರು ಅಗ್ನಿಗಳನ್ನು ಸ್ಥಾಪಿಸುವುದು.

ಯಾಗೈರನೇಕೈರ್ಬಹುವಿತ್ತ ಸಾಧ್ಯೈ-
ರ್ವಿಜೇತುಕಾಮೋ ಭುವನಾನ್ಯಯಷ್ಟ |
ವ್ಯಸ್ಮಾರಿ ದೇವೈರಮೃತಂ ತದಾಶ್ಯೈ-
ರ್ದಿನೇ ದಿನೇ ಸೇವಿತಯಜ್ಞಭಾಗೈಃ || ೩೭

ಆಮೇಲೆ ಶಿವಗುರುವು ಸ್ವರ್ಗಾದಿ ಲೋಕಗಳನ್ನು ಬಯಸಿ ಬಹಳ ಧನವ್ಯಯದಿಂದ ಸಾಧ್ಯವಾಗತಕ್ಕ ನಾನಾ ಬಗೆಯ ಯಾಗಗಳನ್ನು ನಡೆಸುತ್ತಿದ್ದನು. ದಿನದಿನದಲ್ಲಿಯೂ ಯಜ್ಞಶೇಷವನ್ನು ಅಮೃತವೆಂದು ತಿಳಿದು ಭುಂಜಿಸುತ್ತಿದ್ದ ದೇವತೆಗಳು ತಮ್ಮ ನಿಜವಾದ ಅಮೃತವನ್ನು ಮರೆತುಬಿಟ್ಟರು!

ಸಂತರ್ಪಯಂತಂ ಪಿತೃದೇವ ಮಾನುಷಾನ್
ತತ್ತತ್ಪದಾರ್ಥೈರಭಿವಾಂಛಿತೈಃ ಸಹ |
ವಿಶಿಷ್ಟವಿತ್ತೈಃ ಸುಮನೋಭಿರಂಚಿತಂ
ತಂ ಮೇನಿರೇ ಜಂಗಮಕಲ್ಪಪಾದಪಮ್ || ೩೮

ಪಿತೃಗಳನ್ನೂ ದೇವತೆಗಳನ್ನೂ ಮನುಷ್ಯರನ್ನೂ ಸಹ ಅವರಿಗೆ ಪ್ರಿಯವಾದ ಪದಾರ್ಥಗಳಿಂದ ತೃಪ್ತಿಪಡಿಸುತ್ತಿದ್ದ ಆ ಶಿವಗುರುವನ್ನು ವಿಶಿಷ್ಟವಾದ ಸಂಪತ್ತುಗಳೆಂಬ ಪುಷ್ಪಗಳಿಂದ ಕೂಡಿದ ಮತ್ತು ವಿದ್ವಾಂಸರಿಂದ ಕೂಡಿದ ತಿರುಗಾಡುವ ಕಲ್ಪವೃಕ್ಷವೆಂದೇ ಜನರು ಭಾವಿಸುತ್ತಿದ್ದರು.

ಪರೋಪಕಾರ ವ್ರತಿನೋ ದಿನೇ ದಿನೇ
ವ್ರತೇನ ವೇದಂ ಪಠತೋ ಮಹಾತ್ಮನಃ |
ಶ್ರುತಿಸ್ಮೃತಿ ಪ್ರೋದಿತಕರ್ಮ ಕುರ್ವತಃ
ಸಮಾ ವ್ಯತೀಯುರ್ದಿನ ಮಾಸ ಸಂಮಿತಾಃ || ೩೯

ಆ ಮಹಾತ್ಮನು ಹೀಗೆ ಪ್ರತಿದಿನವೂ ಪರೋಪಕಾರವೆಂಬ ವ್ರತವನ್ನು ಆಚರಿಸುತ್ತಾ, ನಿಯಮಪೂರ್ವಕವಾಗಿ ವೇದವನ್ನು ಪಠಿಸುತ್ತಾ, ಶ್ರುತಿ, ಸ್ಮೃತಿಗಳಲ್ಲಿ ಹೇಳಿದ ಶಾಸ್ತ್ರೀಯ ಕರ್ಮಗಳನ್ನು ಆಚರಿಸುತ್ತಾ ಇರುವಾಗ ವಿವಾಹವಾದ ಮೇಲೆ ಇಪ್ಪತ್ತೇಳು ವರ್ಷಗಳು ಸಂದವು.

ಟಿಪ್ಪಣಿ: ದಿನ = ಒಂದು ಪಕ್ಷದಲ್ಲಿರುವ 15 ದಿನ. ಮಾಸ = ಒಂದು ವರ್ಷದ ಹನ್ನೆರಡು ತಿಂಗಳು. 15 +12 =27

ರೂಪೇಷು ಮಾರಃ ಕ್ಷಮಯಾ ವಸುಂಧರಾ
ವಿದ್ಯಾಸು ವೃದ್ಧೋ ಧನಿನಾಂ ಪುರಸ್ಸರಃ |
ಗರ್ವಾನಭಿಜ್ಞೋ ವಿನಯೀ ಸದಾ ನತಃ
ಸ ನೋಪಲೇಭೇ ತನಯಾನನಂ ಜರನ್ || ೪೦

ಆತನು ರೂಪದಲ್ಲಿ ಮನ್ಮಥನೂ ತಾಳ್ಮೆಯ ಗುಣದಲ್ಲಿ ಭೂದೇವಿಯೂ ವಿದ್ಯೆಯಲ್ಲಿ ಸರ್ವೋತ್ತಮನೂ ಧನದಲ್ಲಿ ಅಗ್ರಗಣ್ಯನೂ ಗರ್ವರಹಿತನೂ ವಿನಯಶೀಲನೂ ಗುರುಹಿರಿಯರಿಗೆ ನಮಸ್ಕರಿಸತಕ್ಕವನೂ ಆಗಿದ್ದನು. ಅವನಿಗೆ ವಯಸ್ಸಾಗುತ್ತಾ ಬಂದರೂ ಪುತ್ರಮುಖದರ್ಶನ ವಾಗಲಿಲ್ಲ.

ಗಾವೋ ಹಿರಣ್ಯಂ ಬಹುಸಸ್ಯಮಾಲಿನೀ
ವಸುಂಧರಾ ಚಿತ್ರಪದಂ ನಿಕೇತನಮ್ |
ಸಂಭಾವನಾ ಬಂಧುಜನೈಶ್ಚ ಸಂಗಮೋ
ನ ಪುತ್ರಹೀನಂ ಬಹವೋಽಪ್ಯಮೂಮುಹನ್ || ೪೧

ಹಸುಗಳು, ಸಂಪತ್ತು, ಬೇಕಾದಷ್ಟು ಬೆಳೆ ಬೆಳೆಯುವ ಹೊಲಗದ್ದೆಗಳು, ಭವ್ಯವಾದ ಭವನ, ಸಮಾಜದಲ್ಲಿ ಗೌರವ, ಬಂಧುಜನರೊಡನೆ ಸಹವಾಸ-ಇವೆಲ್ಲವೂ ಬಹಳವಾಗಿದ್ದರೂ ಪುತ್ರಹೀನನಾದ ಶಿವಗುರುವಿಗೆ ಪ್ರೀತಿಯನ್ನುಂಟು ಮಾಡಲಿಲ್ಲ.

ಅಸ್ಯಾಮಜಾತಾ ಮಮ ಸಂತತಿಶ್ಚೇ-
ಚ್ಛರದ್ಯವಶ್ಯಂ ಭವಿತೋಪರಿಷ್ಟಾತ್ |
ತತ್ರಾಪ್ಯಜಾತಾ ತತ ಉತ್ತರಸ್ಯಾ -
ಮೇವಂ ಸ ಕಾಲಂ ಮನಸಾ ನಿನಾಯ || ೪೨

ಈ ವರ್ಷ ನನಗೆ ಸಂತತಿಯಾಗದಿದ್ದರೆ ಮುಂದಿನ ವರ್ಷದಲ್ಲಿ ಆದೀತು ಎಂದೂ, ಮುಂದಿನ ವರ್ಷದಲ್ಲಾಗದಿದ್ದರೆ ಅದರ ಮುಂದಿನ ವರ್ಷದಲ್ಲಾದೀತೆಂದೂ-ಹೀಗೆ ಮನಸ್ಸಿನಲ್ಲಿಯೇ ಎಣಿಸುತ್ತಾ ಆತನು ಕಾಲವನ್ನು ಕಳೆದನು.

ಖಿಂದನ್ಮನಾಃ ಶಿವಗುರುಃ ಕೃತಕಾರ್ಯಶೇಷೋ
ಜಾಯಾಮಚಷ್ಟ ಸುಭಗೇ ಕಿಮತಃ ಪರಂ ನೌ |
ಸಾಂಗಂ ವಯೋಽರ್ಧಮಗಮತ್ಕುಲಜೇ ನ ದೃಷ್ಟಂ
ಪುತ್ರಾನನಂ ಯದಿಹಲೋಕ್ಯಮುದಾಹರಂತಿ || ೪೩

ಹೀಗಿರಲು ತನ್ನ ಕರ್ತವ್ಯಗಳೆಲ್ಲವನ್ನೂ ಮುಗಿಸಿದ ಶಿವಗುರುವು ವಿಷಣ್ಣಚಿತ್ತನಾಗಿ ಒಂದು ದಿನ ಪತ್ನಿಯನ್ನು ಕುರಿತು ಹೀಗೆಂದನು:"ಭದ್ರೆ, ಗಟ್ಟಿಮುಟ್ಟಯಾಗಿ ಆರೋಗ್ಯವಾಗಿದ್ದ ನಮಗೆ ಅರ್ಧ ಆಯಸ್ಸು ಕಳೆದು ಹೋಯಿತು. ನೀನು ಉತ್ತಮ ಕುಲದಲ್ಲಿ ಜನಿಸಿದವಳು. ನಾವು ಪುತ್ರನ ಮುಖವನ್ನು ನೋಡಲಿಲ್ಲ. ಪುತ್ರನಿಂದಲೇ ಇಹಲೋಕವೆಂದು ಬಲ್ಲವರು ಹೇಳುತ್ತಾರೆ.

ಏವಂ ಪ್ರಿಯೇ ಗತವತೋಃ ಸುತದರ್ಶನಂ ಚೇ-
ತ್ಪಂಚತ್ವಮೈಷ್ಯದಥ ನೌ ಶುಭಮಾಪತಿಷ್ಯತ್ |
ಅಸ್ಯಾಭ್ಯುಪಾಯಮನಿಶಂ ಭುವಿ ವೀಕ್ಷಮಾಣೋ
ನೇಕ್ಷೇ ತತಃ ಪಿತೃಜನಿರ್ವಿಫಲಾ ಮಮಾಭೂತ್ || ೪೪

"ಪ್ರಿಯೆ, ನಮಗೆ ಒಬ್ಬ ಪುತ್ರನ ದರ್ಶನವಾಗಿದ್ದರೆ ಆ ಮೇಲೆ ಸಾವು ಬಂದರೂ ಒಳ್ಳೆಯದೇ ಆಗುತ್ತಿತ್ತು. ಇದಕ್ಕೆ ಉಪಾಯವೇನೆಂದು ಯಾವಾಗಲೂ ನಾನು ಆಲೋಚಿಸುತ್ತಲೇ ಇದ್ದೇನೆ. ಏನೂ ತೋರುವುದಿಲ್ಲ. ನಾನು ತಂದೆಗೆ ಮಗನಾಗಿ ಹುಟ್ಟಿದ್ದು ವ್ಯರ್ಥವಾಯಿತು.

ಭದ್ರೇ ಸುತೇನ ರಹಿತೌ ಭುವಿ ಕೇ ವದಂತಿ
ನೌ ಪುತ್ರಪೌತ್ರಸರಣಿಕ್ರಮತಃ ಪ್ರಸಿದ್ಧಿಃ |
ಲೋಕೇ ನ ಪುಷ್ಪಫಲಶೂನ್ಯ ಮುದಾಹರಂತಿ
ವೃಕ್ಷಂ ಪ್ರವಾಲಸಮಯೇ ಫಲಿತಂ ವಿಹಾಯ || ೪೫

ಭದ್ರೆ, ಸಂತತಿ ರಹಿತರಾದ ನಮ್ಮನ್ನು ಲೋಕದಲ್ಲಿ ಯಾರೂ ಗಣಿಸುವುದಿಲ್ಲ. ಪುತ್ರ ಪೌತ್ರ ಕ್ರಮದಿಂದಲೇ ಜನರಿಗೆ ಪ್ರಸಿದ್ಧಿ ಬರುತ್ತದೆ. ವಸಂತಕಾಲದಲ್ಲಿ ಮರವು ಚಿಗುರಿದರೂ ಹೂವು ಹಣ್ಣುಗಳನ್ನು ಬಿಡದಿದ್ದರೆ ಆ ಮರವನ್ನು ಯಾರೂ ಹೊಗಳುವುದಿಲ್ಲ. ಹಣ್ಣು ಬಿಡುವ ಮರವನ್ನು ಮಾತ್ರ ಗಣಿಸುತ್ತಾರೆ"ಎಂದನು.

ಇತೀರಿತೇ ಪ್ರಾಹ ತದೀಯ ಭಾರ್ಯಾ
ಶಿವಾಖ್ಯಕಲ್ಪದ್ರುಮಮಾಶ್ರಯಾವಃ |
ತತ್ಸೇವನಾನ್ನೌ ಭವಿತಾ ಸುನಾಥ
ಫಲಂ ಸ್ಥಿರಂ ಜಂಗಮರೂಪ ಮೈಶಮ್ || ೪೬

ಈ ರೀತಿ ಶಿವಗುರುವು ಹೇಳಲಾಗಿ ಅವನ ಪತ್ನಿಯು ಹೀಗೆಂದಳು:"ನಾಥ, ಶಿವನೆಂಬ ಕಲ್ಪವೃಕ್ಷವನ್ನು ನಾವು ಆಶ್ರಯಿಸೋಣ. ಆತನನ್ನು ಸೇವಿಸಿದರೆ ಈಶ್ವರಾನುಗ್ರಹದಿಂದ ಜಂಗಮ ರೂಪವಾದ- ನಡೆದಾಡುವ ಮತ್ತು ಸ್ಥಿರವಾದ ಫಲವು ಲಭಿಸುತ್ತದೆ.

ಭಕ್ತೇಪ್ಸಿತಾರ್ಥ ಪರಿಕಲ್ಪನ ಕಲ್ಪವೃಕ್ಷಂ
ದೇವಂ ಭಜಾವ ಕಮಿತಃ ಸಕಲಾರ್ಥಸಿದ್ಧ್ಯೈ |
ತತ್ರೋಪಮನ್ಯುಮಹಿಮಾ ಪರಮಂ ಪ್ರಮಾಣಂ
ನೋ ದೇವತಾಸು ಜಡಿಮಾ ಜಡಿಮಾ ಮನುಷ್ಯೇ || ೪೭

ಭಕ್ತರ ಇಷ್ಟಾರ್ಥವನ್ನು ನೆರವೇರಿಸುವುದರಲ್ಲಿ ಕಲ್ಪವೃಕ್ಷನಾಗಿರುವ ಆ ಪರಮದೇವನನ್ನು ನಾವು ಶರಣು ಹೋಗೋಣ. ಅವನನ್ನು ಬಿಟ್ಟು ಸಕಲಾರ್ಥ ಸಿದ್ಧಿಗಾಗಿ ಇನ್ನು ಯಾರ ಬಳಿಗೆ ಹೋಗಲಾದೀತು ?ಈ ವಿಷಯದಲ್ಲಿ ಉಪಮನ್ಯುವಿನ ಕಥಾಮಹಿಮೆಯು ನಮಗೆ ಪರಮ ಪ್ರಮಾಣವಾಗಿರುತ್ತದೆ. ದೇವತೆಗಳಲ್ಲಿ ಜಡತ್ವವಿರುವುದಿಲ್ಲ. ಜಡತ್ವವಿರುವುದು ಮನುಷ್ಯರಲ್ಲಿ"ಎಂದಳು.

ಟಿಪ್ಪಣಿ:ಉಪಮನ್ಯುವೆಂಬವನು ಒಬ್ಬ ಋಷಿಯ ಮಗ. ಬಾಲಕನಾಗಿದ್ದಾಗ ಜೊತೆಗಾರರು ಕುಡಿಯುತ್ತಿದ್ದ ಹಾಲನ್ನು ನೋಡಿ ತನಗೂ ಹಾಲು ಬೇಕೆಂದು ತಾಯಿಯನ್ನು ಕೇಳಿದನು. ಬಡತನದ ಕಾರಣದಿಂದ ಹಾಲನ್ನು ಕಾಣಲಾರದ ಅವಳು ಅಕ್ಕಿಯ ಹಿಟ್ಟನ್ನು ನೀರಿನಲ್ಲಿ ಕದಡಿಕೊಟ್ಟಳು. ಅದು ಹಾಲಲ್ಲವೆಂದು ತಿಳಿದು ಉಪಮನ್ಯು ಅಳತೊಡಗಿದನು. ಅನಂತರ ಶಿವನ ಅನುಗ್ರಹದಿಂದ ಮಾತ್ರವೇ ಹಾಲು ದೊರೆತೀತೆಂದು ತಾಯಿ ಹೇಳಲಾಗಿ, ಆ ಹುಡುಗನು ತಪಸ್ಸು ಮಾಡಿ ಶಿವನನ್ನು ಮೆಚ್ಚಿಸಿ ಕ್ಷೀರಸಮುದ್ರದ ಒಡೆತನವನ್ನೇ ಪಡೆದನೆಂದು ಪುರಾಣ ಕಥೆ ಇದೆ.

ಇತ್ಥಂ ಕಲತ್ರೋಕ್ತಿಮನುತ್ತಮಾಂ ಸ
ಶ್ರುತ್ವಾ ಸುತಾರ್ಥೀ ಪ್ರಣತೈಕವಶ್ಯಮ್ |
ಇಯೇಷ ಸಂತೋಷಯಿತುಂ ತಪೋಭಿಃ
ಸೋಮಾರ್ಧಮೂರ್ಧಾನ ಮುಮಾರ್ಧಮೀಶಮ್ || ೪೮

ಹೀಗೆ ಮಡದಿಯು ಹೇಳಲಾಗಿ ಅವಳ ಮಾತು ಯುಕ್ತವಾಗಿದೆ ಎಂದು ತಿಳಿದ ಶಿವಗುರುವು ಭಕ್ತರಿಗೆ ಮಾತ್ರ ವಶನಾಗತಕ್ಕ ಅರ್ಧಚಂದ್ರಶೇಖರನೂ ಅರ್ಧನಾರೀಶ್ವರನೂ ಆದ ಪರಮೇಶ್ವರನನ್ನು ಪುತ್ರಾರ್ಥವಾಗಿ ತಪಸ್ಸುಗಳಿಂದ ಮೆಚ್ಚಿಸಬೇಕೆಂದು ಇಚ್ಛಿಸಿದನು.

ತಸ್ಯೋಪಧಾಮ ಕಿಲ ಸನ್ನಿಹಿತಾಽಽಪಗೈಕಾ
ಸ್ನಾತ್ವಾ ಸದಾಶಿವಮುಪಾಸ್ತ ಜಲೇ ಸ ತಸ್ಯಾಃ |
ಕಂದಾಶನಃ ಕತಿಚಿದೇವ ದಿನಾನಿ ಪೂರ್ವಂ
ಪಶ್ಚಾತ್ತದಾ ಸ ಶಿವಪಾದಯುಗಾಬ್ಜಭೃಂಗಃ || ೪೯

ಆ ಶಿವಾಲಯಕ್ಕೆ ಸಮೀಪದಲ್ಲಿಯೇ ಒಂದು ನದಿ ಇದ್ದಿತು. ಪ್ರತಿದಿನವೂ ಅದರಲ್ಲಿ ಸ್ನಾನಮಾಡಿ ಸದಾಶಿವನನ್ನು ಉಪಾಸನೆ ಮಾಡತೊಡಗಿದನು. ಮೊದಲು ಕೆಲವು ದಿನಗಳವರೆಗೆ

ಗಡ್ಡೆ ಗೆಣಸುಗಳನ್ನು ತಿನ್ನುತ್ತಾ ಅನಂತರ ಶಿವನ ಚರಣಯುಗಳವೆಂಬ ಕಮಲದಲ್ಲಿ ದುಂಬಿಯಾಗಿ ಬಿಟ್ಟನು.

ಜಾಯಾಽಪಿ ತಸ್ಯ ವಿಮಲಾ ನಿಯಮೋಪತಾಪೈ-
ಶ್ಚಿಕ್ಲೇಶ ಕಾಯಮನಿಶಂ ಶಿವಮರ್ಚಯಂತೀ |
ಕ್ಷೇತ್ರೇ ವೃಷಸ್ಯ ನಿವಸಂತಮಜಂ ಸ ಭರ್ತುಃ
ಕಾಲೋಽತ್ಯಗಾದಿತಿ ತಯೋಸ್ತಪತೋರನೇಕಃ || ೫೦

ಪುಣ್ಯಾತ್ಮಳಾದ ಅವನ ಮಡದಿಯೂ ಸಹ ಸರ್ವದಾ ಶಿವನನ್ನು ಅರ್ಚಿಸುತ್ತಾ, ವಿಧವಿಧವಾದ ನಿಯಮಗಳಿಂದ ತನ್ನ ದೇಹವನ್ನು ಕ್ಲೇಶ ಪಡಿಸುತ್ತಿದ್ದಳು. ಹೀಗೆ ವೃಷಕ್ಷೇತ್ರದಲ್ಲಿ ವಾಸವಾಗಿ ಶಿವಪೂಜಾ ನಿರತರಾಗಿ ತಪೋಮಗ್ನರಾದ ಅವರಿಗೆ ಬಹಳ ದಿನಗಳು ಕಳೆದವು.

ದೇವಃ ಕೃಪಾಪರವಶೋ ದ್ವಿಜವೇಷಧಾರೀ
ಪ್ರತ್ಯಕ್ಷತಾಂ ಶಿವಗುರುಂ ಗತ ಆತ್ತನಿದ್ರಮ್ |
ಪ್ರೋವಾಚ ಭೋಃ ಕಿಮಭಿವಾಂಛಸಿ ಕಿಂ ತಪಸ್ತೇ
ಪುತ್ರಾರ್ಥಿತೇತಿ ವಚನಂ ಸ ಜಗಾದ ವಿಪ್ರಃ || ೫೧

ಹೀಗಿರಲು ಕರುಣಾಶಾಲಿಯಾದ ಪರಮೇಶ್ವರನು ಶಿವಗುರುವಿಗೆ ಸ್ವಪ್ನದಲ್ಲಿ ಒಬ್ಬ ಬ್ರಾಹ್ಮಣವೇಷಧಾರಿಯಾಗಿ ಕಾಣಿಸಿಕೊಂಡು "ಎಲೈ ಶಿವಗುರುವೆ, ಏಕೆ ತಪಸ್ಸು ಮಾಡುತ್ತಿರುವೆ ?ನಿನ್ನ ಬಯಕೆ ಏನು? "ಎಂದನು. ಆಗ ಶಿವಗುರುವು ನನಗೆ ಪುತ್ರನ ಅಪೇಕ್ಷೆ ಇದೆ-ಎಂದನು.

ದೇವೋಽಪ್ಯಪೃಚ್ಛದಥ ತಂ ದ್ವಿಜ ವಿದ್ಧಿ ಸತ್ಯಂ
ಸರ್ವಜ್ಞಮೇಕಮಪಿ ಸರ್ವಗುಣೋಪಪನ್ನಮ್ |
ಪುತ್ರಂ ದದಾನ್ಯಥ ಬಹೂನ್ವಿಪರೀತಕಾಂಸ್ತೇ
ಭೂರ್ಯಾಯುಷಸ್ತನುಗುಣಾನವದದ್ ದ್ವಿಜೇಶಃ || ೫೨

ಅದಕ್ಕೆ ಪರಮೇಶ್ವರನು "ಎಲೈ ಬ್ರಾಹ್ಮಣ, ಈಗ ನಾನು ಹೇಳುವುದು ಸತ್ಯವೆಂದು ತಿಳಿ. ಸಮಸ್ತ ಗುಣಸಮೇತನೂ ಸರ್ವಜ್ಞನೂ ಆದ ಒಬ್ಬ ಪುತ್ರನನ್ನು ನಿನಗೆ ಕೊಡಲೆ?ಆದರೆ ಅವನು ಅಲ್ಪಾಯುಷ್ಕನಾಗಿರುವನು. ಅಥವಾ ಹೀಗೆ ಗುಣಶಾಲಿಗಳಲ್ಲದ ವಿಪರೀತ ಬುದ್ಧಿಯ ಮತ್ತು ಧೀರ್ಘಕಾಲ ಜೀವಿಸುವ ಬಹುಮಂದಿ ಪುತ್ರರನ್ನು ಕೊಡಲೆ?"-ಎಂದು ಕೇಳಿದನು.

ಪುತ್ರೋऽಸ್ತು ಮೇ ಬಹುಗುಣಃ ಪ್ರಥಿತಾನುಭಾವಃ
ಸರ್ವಜ್ಞತಾಪದಮಿತೀರಿತ ಆಬಭಾಷೇ |
ದದ್ಯಾಮುದೀರಿತ ಪದಂ ತನಯಂ ತಪೋ ಮಾ
ಪೂರ್ಣೋ ಭವಿಷ್ಯಸಿ ಗೃಹಂ ದ್ವಿಜ ಗಚ್ಛ ದಾರೈಃ || ೫೩

ವಿಪ್ರೋತ್ತಮನಾದ ಶಿವಗುರುವು "ಮಹಾಮಹಿಮಶಾಲಿಯೂ ಬಹುಗುಣಾನ್ವಿತನೂ ಸರ್ವಜ್ಞನೂ ಆದ ಪುತ್ರನು ನನಗೆ ಬೇಕು"ಎಂದು ಹೇಳಿದನು. "ಒಳ್ಳೆಯದು, ನೀನು ಹೇಳಿದಂತಹ ತನಯನು ನಿನಗೆ ಜನಿಸುವನು. ಇನ್ನು ತಪಸ್ಸು ಬೇಡ. ತನಯನಿಂದ ನೀನು ಪೂರ್ಣನಾಗುವೆ. ಎಲೈ ಬ್ರಾಹ್ಮಣ, ಪತ್ನಿಯೊಡನೆ ಮನೆಗೆ ತೆರಳು"ಎಂದು ಬ್ರಾಹ್ಮಣವೇಷದಲ್ಲಿ ಕಾಣಿಸಿಕೊಂಡಿದ್ದ ಪರಮೇಶ್ವರನು ನುಡಿದನು.

ಆಕರ್ಣಯನ್ನಿತಿ ಬುಬೋಧ ಸ ವಿಪ್ರವರ್ಯ-
ಸ್ತಂ ಚಾಬ್ರವೀನ್ನಿಜಕಲತ್ರಮನಿಂದಿತಾತ್ಮಾ |
ಸ್ವಪ್ನಂ ಶಶಂಸ ವನಿತಾಮಣಿರಸ್ಯ ಭಾರ್ಯಾ
ಸತ್ಯಂ ಭವಿಷ್ಯತಿ ತು ನೌ ತನಯೋ ಮಹಾತ್ಮಾ || ೫೪

ಹೀಗೆ ಸ್ವಪ್ನದಲ್ಲಿ ಹೇಳಿದ ಮಾತನ್ನು ಕೇಳುತ್ತಿರುವಾಗ ಆ ವಿಪ್ರೋತ್ತಮನಿಗೆ ಎಚ್ಚರವಾಯಿತು. ಆ ಪುಣ್ಯಾತ್ಮನು ಈ ಸ್ವಪ್ನದ ವಿಚಾರವನ್ನು ತನ್ನ ಪತ್ನಿಗೆ ತಿಳಿಸಿದನು. ಆ ವನಿತಾಮಣಿಯು " ಹಾಗಾದರೆ ಮಹಾತ್ಮನಾದ ತನಯನೊಬ್ಬನು ನಮಗೆ ಜನಿಸುವುದು ದಿಟ" ಎಂದಳು.

ತೌ ದಂಪತೀ ಶಿವಪರೌ ನಿಯತೌ ಸ್ಮರಂತೌ
ಸ್ವಪ್ನೇಕ್ಷಿತಂ ಗೃಹಗತೌ ಬಹುದಕ್ಷಿಣಾನ್ನೈಃ |
ಸಂತರ್ಪ್ಯ ವಿಪ್ರನಿಕರಂ ತದುದೀರಿತಾಭಿ-
ರಾಶೀರ್ಭಿರಾಪತುರನಲ್ಪಮುದಂ ವಿಶುದ್ಧೌ || ೫೫

ಶಿವ ಭಕ್ತರೂ ವಿಶುದ್ಧರೂ ಆದ ಆ ದಂಪತಿಗಳು ಸ್ವಪ್ನದಲ್ಲಿ ಕಂಡದ್ದನ್ನು ನೆನೆಸಿಕೊಳ್ಳುತ್ತಾ ತಮ್ಮ ಮನೆಗೆ ಹಿಂದಿರುಗಿದರು. ಅನ್ನಸಂತರ್ಪಣೆ, ಯಥೇಚ್ಛವಾಗಿ ದಕ್ಷಿಣೆ-ಮೊದಲಾದವುಗಳಿಂದ ಬ್ರಾಹ್ಮಣಸಂತರ್ಪಣೆಯನ್ನು ಮಾಡಿಸಿ ಅವರ ಆಶೀರ್ವಾದಗಳಿಂದ ಬಹಳ ಸಂತೋಷ ಪಟ್ಟರು.

ತಸ್ಮಿನ್ ದಿನೇ ಶಿವಗುರೋರುಪಭೋಕ್ಷ್ಯಮಾಣೇ
ಭಕ್ತೇ ಪ್ರವಿಷ್ಟಮಭವತ್ಕಿಲ ಶೈವತೇಜಃ |

ಭುಕ್ತಾನ್ನ ವಿಪ್ರವಚನಾದುಪಭುಕ್ತ ಶೇಷಂ
ಸೋಽಭುಂಕ್ತ ಸಾಽಪಿ ನಿಜಭರ್ತೃಪದಾಬ್ಜಭೃಂಗೀ || ೫೬

ಆ ದಿನ ವಿಪ್ರರ ಭೋಜನವಾದ ಮೇಲೆ ಮಿಕ್ಕದ್ದನ್ನು ಊಟ ಮಾಡಬೇಕೆಂದು ವಿಪ್ರರು ಹೇಳಿದರು. ಅಂತೆಯೇ ಶಿವಗುರುವು ಊಟ ಮಾಡುವಾಗ ಅನ್ನದಲ್ಲಿ ಶಿವನ ತೇಜಸ್ಸು ಸೇರಿಕೊಂಡಿತು. ಪತಿಯ ಪಾದಕಮಲದ ಭೃಂಗಿಯಾದ ಅವನ ಮಡದಿಯೂ ಸಹ ಭುಕ್ತಶೇಷವನ್ನು ಊಟ ಮಾಡಿದಳು.

ಗರ್ಭಂ ದಧಾರ ಶಿವಗರ್ಭಮಸೌ ಮೃಗಾಕ್ಷೀ
ಗರ್ಭೋಽಪ್ಯವರ್ಧತ ಶನೈರಭವಚ್ಛರೀರಮ್ |
ತೇಜೋಽತಿರೇಕ ವಿನಿವಾರಿತ ದೃಷ್ಟಿಪಾತ
ವಿಶ್ವಂ ರವೇರ್ದಿವಸಮಧ್ಯ ಇವೋಗ್ರತೇಜಃ || ೫೭

ಅನಂತರ ಹರಿಣಾಕ್ಷಿಯಾದ ಆ ಸತಿಯು ಶಿವತೇಜಸ್ಸಿನಿಂದ ಕೂಡಿದ ಗರ್ಭವನ್ನು ಧರಿಸಿದಳು. ಕಾಲಕ್ರಮದಲ್ಲಿ ಆ ಗರ್ಭವು ಶರೀರಾಕೃತಿಯನ್ನು ಪಡೆಯಿತು. ಮಧ್ಯಾಹ್ನಕಾಲದಲ್ಲಿ ಸೂರ್ಯನ ಉಗ್ರತೇಜಸ್ಸು ಜನರ ಕಣ್ಣನ್ನು ಕುಕ್ಕುವುದರಿಂದ ಸೂರ್ಯನು ಹೇಗೆ ಅಗೋಚರನಾಗುವನೋ ಹಾಗೆ ತೇಜಸ್ವಿಯಾದ ಮಗುವಿನ ಶರೀರವು ಜನರಿಗೆ ಗೋಚರವಾಗದಂತೆ ಗರ್ಭದಲ್ಲಿ ಬೆಳೆಯಿತು.

ಗರ್ಭಾಲಸಾ ಭಗವತೀ ಗತಿಮಾಂದ್ಯಮೀಷ-
ದಾಪೇತಿ ನಾದ್ಭುತಮಿದಂ ಧರತೇ ಶಿವಂ ಯಾ |
ಯೋ ವಿಷ್ಟಪಾನಿ ಬಿಭೃತೇ ಹಿ ಚತುರ್ದಶಾಪಿ
ಯಸ್ಯಾಪಿ ಮೂರ್ತಯ ಇಮಾ ವಸುಧಾಜಲಾದ್ಯಾಃ || ೫೮

ಶಿವಗುರುವಿನ ಪತ್ನಿಯಾದ ಆ ಪುಣ್ಯಾತ್ಮಳು ಗರ್ಭಭರದಿಂದ ಬೇಗನೆ ನಡೆಯಲಾರದೆ ಮಂದಗಮನೆಯಾದಳು. ಇದೇನೂ ಆಶ್ಚರ್ಯವಲ್ಲ. ಅವಳು ಗರ್ಭದಲ್ಲಿ ಸಾಕ್ಷಾತ್ ಶಿವನನ್ನೇ ಧರಿಸಿದ್ದಳಲ್ಲವೆ? ಶಿವನಾದರೋ ಹದಿನಾಲ್ಕು ಲೋಕಗಳನ್ನು ಧರಿಸಿ ನಿಂತವನು. ಅಲ್ಲದೆ ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ, ಜೀವಾತ್ಮ-ಎಂಬಿವು ಅವನ ಅಷ್ಟಮೂರ್ತಿಗಳು.

ಸಂವ್ಯಾಪ್ತವಾನಪಿ ಶರೀರಮಶೇಷಮೇವ
ನೋಪಾಸ್ತಿಮಾವಿರಸಕಾವಕೃತಾತ್ರ ಕಾಂಚಿತ್ |
ಯತ್ಪೂರ್ವಮೇವ ಮಹಸಾ ದುರತಿಕ್ರಮೇಣ
ವ್ಯಾಪ್ತಂ ಶರೀರಮದಸೀಯಮಮುಷ್ಯ ಹೇತೋಃ || ೫೯

ಪರಶಿವನು ಸಕಲರ ದೇಹಗಳನ್ನೂ ವ್ಯಾಪಿಸಿಕೊಂಡೇ ಇರುತ್ತಾನೆ. ಈಗ ಮತ್ತೆ ಗರ್ಭರೂಪದಿಂದ ಅವಳ ದೇಹದಲ್ಲಿ ಸೇರಿದರೂ ಆಕೆಗೆ ಹೆಚ್ಚಿನ ಭಾರವನ್ನೇನೂ ಕೊಡಲಿಲ್ಲ. ಏಕೆಂದರೆ, ದುರತಿಕ್ರಮವಾದ ಒಂದಾನೊಂದು ತಪೋಬಲದ ತೇಜಸ್ಸು ಅವಳ ಶರೀರದಲ್ಲಿ ಮೊದಲೇ ನೆಲೆಸಿತ್ತು.

ಟಿಪ್ಪಣಿ: ತಾಯಿಯು ತನ್ನ ತಪೋಬಲದಿಂದ ಗರ್ಭದ ಭಾರವನ್ನು ಸುಲಭವಾಗಿ ಸಹಿಸಿದಳೆಂದು ಅಭಿಪ್ರಾಯ. ಉಪಾಸ್ತಿಶಬ್ದದಲ್ಲಿ ಉಪ ಎನ್ನುವುದು ಉಪಸರ್ಗ ಅಸು = ಕ್ಷೇಪೇ ಎಂಬ ಧಾತುವಿಗೆ ಕ್ತಿನ್ ಪ್ರತ್ಯಯವು ಬಂದು ಅಸ್ತಿಶಬ್ದವು ನಿಷ್ಪನ್ನವಾಗಿದೆ. ಉಪಾಸ್ತಿ = ಹೆಚ್ಚಿದ ಪ್ರಕ್ಷೇಪ, ಭಾರವೆಂದರ್ಥ.

ರಮ್ಯಾಣಿ ಗಂಧಕುಸುಮಾನ್ಯಪಿ ಗರ್ಧಿಮಸ್ಯೈ
ನಾಧಾತುಮೈಶತ ಭರಾತ್ಕಿಮು ಭೂಷಣಾನಿ |
ಯದ್ಯದ್ಗುರುತ್ವಪದಮಸ್ತಿ ಪದಾರ್ಥಜಾತಂ
ತತ್ತದ್ವಿಧಾರಣ ವಿಧಾವಲಸಾ ಬಭೂವ || ೬೦

ರಮಣೀಯವಾದ ಗಂಧಪುಷ್ಪಗಳನ್ನು ಸ್ವೀಕರಿಸುವುದಕ್ಕೆ ಸಹ ಅವಳಿಗೆ ಆಸೆಯಾಗಲಿಲ್ಲ. ಇನ್ನು ಭಾರವಾದ ಒಡವೆಗಳನ್ನು ತೊಡುವುದುಂಟೆ?ಯಾವ ಯಾವ ಪದಾರ್ಥವು ಭಾರವೆನಿಸುತ್ತದೆಯೋ ಅದನ್ನವಳು ಧರಿಸಲು ಬಯಸದೆ ಆಲಸ್ಯವನ್ನು ತಳೆದಳು.

ತಾಂ ದೌಹೃದಂ ಭೃಶಮಬಾಧತ ದುಃಶರಾರಿಃ
ಪ್ರಾಯಃ ಪರಂ ಕಿಲ ನ ಮುಂಚತಿ ಮುಂಚತೇಽಪಿ |
ಆನೀತದುರ್ಲಭಮಪೋಹತ ಯಾಚತೇಽನ್ಯ-
ತ್ತಚ್ಚಾಪ್ಯಪೋಹ್ಯ ಪುನರರ್ದತಿ ಸಾಽನ್ಯವಸ್ತು || ೬೧

ಶಿವಗುರುವಿನ ಪತ್ನಿಯನ್ನು ಬಸುರಿಯ ಬಯಕೆ ಬಹಳ ಪೀಡಿಸತೊಡಗಿತು. ಶರಾರಿಯೆಂಬ ಒಂದು ಬಗೆಯ ಕೆಟ್ಟ ನೀರುಹಕ್ಕಿ ಇನ್ನೊಂದನ್ನು ಹಿಡಿದುಕೊಂಡರೆ ಅದನ್ನು ಬಿಡುವುದೇ ಇಲ್ಲ. ಬಿಡುವುದಾದರೆ ಅದಾಗಿಯೇ ಬಿಡುತ್ತದೆ!ಈ ಬಯಕೆಯ ದೆಸೆಯಿಂದ ಅವಳು ದುರ್ಲಭವಾದ ವಸ್ತುವನ್ನು ಬಯಸುತ್ತಿದ್ದಳು. ಅದನ್ನು ತಂದುಕೊಟ್ಟರೆ ಬೇಡವೆಂದು ಹೇಳಿ ಇನ್ನೊಂದನ್ನು ಆಶಿಸುತ್ತಿದ್ದಳು. ಅದನ್ನೂ ತಂದಾಗ ಬೇಡವೆನ್ನುತ್ತ ಮತ್ತೊಂದನ್ನು ಆಶಿಸುತ್ತಿದ್ದಳು.

ಟಿಪ್ಪಣಿ: ಶರಾರಿ ಎಂಬ ಶಬ್ದಕ್ಕೆ ಸರಕುಟ ಹಕ್ಕಿ ಎಂದು ಕನ್ನಡದಲ್ಲಿ ಅರ್ಥವನ್ನು ಬರೆದಿದ್ದಾರೆ. 'ಮುಂಚ'ಧಾತು ಉಭಯಪದಿಯಾದ್ದರಿಂದ ಮುಂಚತಿ-ಮುಂಚತೇ ಎಂಬ ಎರಡು ರೂಪಗಳಿವೆ. ಅರ್ದ= ಗತೌಯಾಚ ನೇ ಚ.

ತಾಂ ಬಂಧುತಾಽಽಗಮದುಪಶ್ರುತ ದೋಹದಾರ್ಥಿ-
ರಾದಾಯ ದುರ್ಲಭಮನರ್ಘ್ಯಮಪೂರ್ವವಸ್ತು |

ಆಸ್ವಾದ್ಯ ಬಂಧುಜನದತ್ತಮಸೌ ಜಹರ್ಷ
ಹಾ ಹಂತ ಗರ್ಭಧರಣಂ ಖಲು ದುಃಖಹೇತುಃ || ೬೨

ಅವಳಿಗೆ ಗರ್ಭಿಣಿಯ ಬಯಕೆ ಹುಟ್ಟಿದೆಯೆಂಬುದನ್ನು ಕೇಳಿ ಬಂಧುವರ್ಗದವರು ದುರ್ಲಭವೂ ಉತ್ತಮವೂ ಆದ ಭಕ್ಷ್ಯಗಳನ್ನು ಮಾಡಿ ತಂದುಕೊಡಲಾರಂಭಿಸಿದರು. ಅವಳು ಅವನ್ನು ಆಸ್ವಾದಿಸಿ ಹರ್ಷಪಡುತ್ತಿದ್ದಳು. "ಅಯ್ಯೊ, ಗರ್ಭಿಣಿಯಾದರೆ ಎಷ್ಟು ಕಷ್ಟವಾಗುತ್ತದೆ!"ಎನ್ನುತ್ತಿದ್ದಳು. ('ಇತಿ ಜಗಾದ' ಎಂದು ಅಧ್ಯಾಹಾರ)

ಮಾನುಷ್ಯಧರ್ಮಮನುಸೃತ್ಯ ಮಯೇದಮುಕ್ತಂ
ಕ್ವಾಽಪಿ ವ್ಯಥಾ ಶಿವಮಹೋಭರಣೇನ ವಧ್ವಾಃ |
ಸರ್ವವ್ಯಥಾವ್ಯತಿಕರಂ ಪರಿಹರ್ತುಕಾಮಾ
ದೇವಂ ಭಜಂತ ಇತಿ ತತ್ತ್ವವಿದಾಂ ಪ್ರವಾದಃ || ೬೩

'ಆಹಾ! ಮನುಷ್ಯಸ್ವಭಾವವು ಹೀಗಿರುತ್ತದೆಯೆಂದು ಗ್ರಹಿಸಿ ಈ ರೀತಿ ವರ್ಣಿಸಿಬಿಟ್ಟೆನು!' (ಇದು ಕವಿಯ ಸ್ವಗತವಾದ ನುಡಿ). ಎಲ್ಲಾದರೂ ಉಂಟೆ?ಪರಶಿವನ ತೇಜಸ್ಸನ್ನು ಧರಿಸಿದ ಆ ಸುಮಂಗಲಿಗೆ ಯಾವ ಕಷ್ಟವೂ ಆಗಲಿಲ್ಲ!ಸರ್ವಕಷ್ಟಗಳನ್ನೂ ನಿವಾರಿಸಿಕೊಳ್ಳುವುದಕ್ಕಾಗಿ ಜನರು ಆ ಮಹಾದೇವನನ್ನು ಭಜಿಸುತ್ತಾರೆಂದು ತತ್ತ್ವಜ್ಞಾನಿಗಳು ಸ್ಪಷ್ಟವಾಗಿ ನುಡಿಯುತ್ತಾರೆ.

ಉಕ್ಷ್ಣಾ ನಿಸರ್ಗಧವಲೇನ ಮಹೀಯಸಾ ಸಾ
ಸ್ವಾತ್ಮಾನಮೈಕ್ಷತ ಸಮೂಢಮುಪಾತ್ತನಿದ್ರಾ |
ಸಂಗೀಯಮಾನಮಪಿ ಗೀತವಿಶಾರದಾಢ್ಯೈ-
ರ್ವಿದ್ಯಾಧರಪ್ರಭೃತಿಭಿರ್ವಿನಯೋಪಯಾತೈಃ || ೬೪

ಶಿವಗುರುವಿನ ಪತ್ನಿಯು ನಿದ್ರೆಮಾಡುವಾಗ, ಬೆಳ್ಳಗಿರುವ ಒಂದು ದೊಡ್ಡ ವೃಷಭದ ಮೇಲೆ ಕುಳಿತು ತಾನು ಸವಾರಿಮಾಡುತ್ತಿರುವಂತೆಯೂ ಸಂಗೀತವಿಶಾರದರಾದ ವಿದ್ಯಾಧರರೇ ಮೊದಲಾದ ದೇವಗಂಧರ್ವರು ಮಧುರವಾಗಿ ಹಾಡುತ್ತ ವಿನಯದಿಂದ ಹಿಂಬಾಲಿಸಿ ಬರುತ್ತಿರುವಂತೆಯೂ ಕನಸುಕಾಣುತ್ತಿದ್ದಳು.

ಆಕರ್ಣಯಜ್ಜ್ಞಯ ಜಯೇತಿ ವರಂ ದದಾನಾ
ರಕ್ಷೇತಿ ಶಬ್ದಮವಲೋಕಯ ಮಾ ದೃಶೇತಿ |
ಆಕರ್ಣ್ಯ ನೋತ್ಥಿತವತೀ ಪುನರುಕ್ತಶಬ್ದಂ
ಸಾ ವಿಸ್ಮಿತಾ ಕಿಲ ಶೃಣೋತಿ ನಿರೀಕ್ಷಮಾಣಾ || ೬೫

ಸ್ವಪ್ನದಲ್ಲಿ 'ಜಯ ಜಯ'ಎಂಬ ಘೋಷಣೆಯನ್ನು ಕೇಳಿದಂತೆಯೂ 'ಕಾಪಾಡು ಕಾಪಾಡು; ಕರುಣಾದೃಷ್ಟಿಯಿಂದ ನನ್ನನ್ನು ನೋಡು'ಎಂಬ ಮಾತನ್ನು ಕೇಳಿ ತಾನು ಭಕ್ತರಿಗೆ ವರವನ್ನು ಕೊಡುತ್ತಿರುವಂತೆಯೂ ಅವಳಿಗೆ ಕಾಣಿಸುತ್ತಿತ್ತು. ಆಗ ಎಚ್ಚರಗೊಂಡು ಆಲಿಸತೊಡಗಿದಾಗ ಮತ್ತೆ ಯಾವ ಶಬ್ದವೂ ಕೇಳಿಸುತ್ತಿರಲಿಲ್ಲ!

ನರ್ಮೋಕ್ತಿಕೃತ್ಯಾಮಪಿ ಖಿದ್ಯಮಾನಾ
ಕಿಂಚಾಪಿ ಚಂಚತ್ತರಮಂಚರೋಹೇ |
ಜಿತ್ವಾ ಮುದಾऽನ್ಯಾನತಿ ಹೃದ್ಯವಿದ್ಯಾ-
ಸಿಂಹಾಸನೇऽಸೌ ಸ್ಥಿತಿಮೀಕ್ಷತೇ ಸ್ಮ || ೬೬

ಉತ್ತಮವಾದ ಮಂಚದಲ್ಲಿ ಕುಳಿತಾಗ ಗೆಳತಿಯರ ಪರಿಹಾಸೋಕ್ತಿಗಳಿಗೆ ಉತ್ತರಹೇಳುವುದಕ್ಕೆ ಸಹ ಆಯಾಸಪಡುತ್ತಿದ್ದ ಆ ಗರ್ಭಿಣಿಯು, ಘನವಿದ್ವಾಂಸರೊಡನೆ ತಾನು ವಾದಮಾಡಿ ಅವರನ್ನು ಜಯಿಸಿದಂತೆಯೂ ಸರಸ್ವತಿಯ ಸಿಂಹಾಸನದ ಮೇಲೆ ತಾನು ಕುಳಿತುಕೊಂಡಿರುವಂತೆಯೂ ಸ್ವಪ್ನವನ್ನು ಕಾಣುತ್ತಿದ್ದಳು.

ಸಮಾನತಾ ಸಾತ್ತ್ವಿಕವೃತ್ತಿಭಾಜಾಂ
ವಿರಾಗತಾ ವೈಷಯಿಕಪ್ರವೃತ್ತೌ |
ತಸ್ಯಾಃ ಸ್ತ್ರಿಯಾ ಗರ್ಭಗಪುತ್ರಚಿತ್ರ-
ಚರಿತ್ರಶಂಸಿನ್ಯಜನಿಷ್ಟ ಚೇಷ್ಟಾ || ೬೭

ಸಾತ್ತ್ವಿಕರಾದ ಸಜ್ಜನರ ವಿಷಯದಲ್ಲಿ ಅವಳಿಗಿದ್ದ ಸಮತ್ವಬುದ್ಧಿಯೂ ವಿಷಯಭೋಗದಲ್ಲಿದ್ದ ವೈರಾಗ್ಯವೂ ಅವಳ ಗರ್ಭದಲ್ಲಿದ್ದ ಶಿಶುವಿನ ಪ್ರಶಂಸನೀಯ ಚಾರಿತ್ರವನ್ನು ಎತ್ತಿ ತೋರಿಸುತ್ತಿದ್ದವು.

ತದ್ರೋಮವಲ್ಲೀ ರುರುಚೇ ಕುಚಾದ್ರ್ಯ-
ವೃಣ್ವತ್ರಭಾಧುನ್ಯುರುಶೈವಲಾಲಿಃ |
ಯತ್ನಾಚ್ಛಿಶೋರಸ್ಯ ಕೃತೇ ಪ್ರಶಸ್ತೋ
ನ್ಯಸ್ತೋ ವಿಧಾತ್ರೇವ ನವೀನವೇಣುಃ || ೬೮

ಶಿವಗುರು ಪತ್ನಿಯ ಉಬ್ಬಿದ ಸ್ತನಗಳೆಂಬ ಬೆಟ್ಟಗಳಿಂದ, ನಾಭಿ ಪರ್ಯಂತವಾಗಿ ಹರಡಿದ ಕಾಂತಿಯು ಕೆಳಮುಖವಾಗಿ ಹರಿಯುವ ನದಿಯಂತೆ ಇತ್ತು. ನದಿಯ ಸುತ್ತಲೂ ಬೆಳೆದ ಜಲಸಸ್ಯಗಳಂತಿರುವ ರೋಮಗಳ ಪಂಕ್ತಿಯು ದೀರ್ಘವಾಗಿತ್ತು. ಗರ್ಭದಲ್ಲಿರುವ ಶಿಶುವಿಗೆ ಯೋಗ್ಯವಾದದ್ದೆಂದು ಬ್ರಹ್ಮನು ನಿರ್ಮಿಸಿ ಕೊಟ್ಟ ವೇಣುದಂಡವೋ ಎಂಬಂತೆ ಆ ರೋಮ ಪಂಕ್ತಿಯು ರಂಜಿಸುತ್ತಿತ್ತು.

ವಿವರಣೆ-ಬೆಟ್ಟದಿಂದ ನದಿ ಹರಿಯುತ್ತದೆ. ನದಿಯ ಇಕ್ಕೆಲದಲ್ಲಿ ಬಿದಿರು ಬೆಳೆಯುತ್ತದೆ. ಬಿದಿರಿನ ದಂಡವು ಸಂನ್ಯಾಸಿಗೆ ಯೋಗ್ಯವಾದದ್ದು. ರೋಮಪಂಕ್ತಿಯೇ ಬಿದಿರಿನ ದಂಡವೆಂದು ಕಲ್ಪಿಸಿಕೊಳ್ಳಲಾಗಿದೆ. ಶೈವಲಶಬ್ದಕ್ಕೆ ಜಲಸಸ್ಯವೆಂಬ ಅರ್ಥವೂ ಇದೆ.

ಪಯೋಧರದ್ವಂದ್ವಮಿಷಾದಮುಷ್ಯಾಃ
ಪಯಃ ಪಿಬತ್ಯರ್ಥವಿಧಾನಯೋಗ್ಯೌ ।
ಕುಂಭೌ ನವೀನಾಮೃತ ಪೂರಿತೌ ದ್ವಾ-
ವಂಭೋಜಯೋನಿಃ ಕಲಯಾಂಬಭೂವ ॥ ೬೯

ಹಾಲುಕುಡಿಯಲು ಉಪಯುಕ್ತವಾದ ಎರಡು ಕಲಶಗಳನ್ನು ಅವಳ ಸ್ತನದ್ವಯವೆಂಬ ಹೆಸರಿನಲ್ಲಿ ಬ್ರಹ್ಮನು ನಿರ್ಮಿಸಿದ್ದನು. ಆ ಕಲಶಗಳಲ್ಲಿ ನೂತನವಾದ ಹೊಸಬಗೆಯ ಅಮೃತವನ್ನೇ ತುಂಬಿದ್ದನು!

ಟಿಪ್ಪಣಿ: ಅಮೃತಶಬ್ದಕ್ಕೆ ಹಾಲು, ಮೋಕ್ಷ-ಎಂಬ ಅರ್ಥಗಳಿವೆ. ಹೊಸಬಗೆಯ ಅಮೃತವೆಂದರೆ ಮೋಕ್ಷವೆಂಬ ಅಮೃತ ಅಥವಾ ಅದ್ವೈತತತ್ತ್ವ ಜ್ಞಾನವೆಂಬ ಅಮೃತ. ಮಾಂಡೂಕ್ಯಕಾರಿಕಾ ಭಾಷ್ಯದ ಕಡೆಯಲ್ಲಿರುವ 'ಪ್ರಜ್ಞಾವೈಶಾಖಮಂಥ'ಎಂಬ ಶ್ಲೋಕದಲ್ಲಿ 'ಅಮೃತಮಿದಮಮರ್ತ್ಯೈರ್ದುರ್ಲಭಂ ಭೂತ ಹೇತೋಃ'ಎಂದು ಆಚಾರ್ಯರೇ ಹೇಳಿದ್ದಾರೆ. ಮುಂದೆ ಅವತರಿಸುವ ಮಗು ಅದ್ವೈತಜ್ಞಾನಾಮೃತವನ್ನು ಹೀರಿಕೊಳ್ಳುವುದು-ಎಂದು ಅಭಿಪ್ರಾಯ.

ದ್ವೈತಪ್ರವಾದಂ ಕುಚಕುಂಭಮಧ್ಯೇ
ಮಧ್ಯೇ ಪುನರ್ಮಾಧ್ಯಮಿಕಂ ಮತಂ ಚ ।
ಸುಭ್ರೂರ್ಮಣೇರ್ಗರ್ಭಗ ಏವ ಸೋಽರ್ಭೋ
ದ್ರಾಗ್ಗರ್ಹಯಾಮಾಸ ಮಹಾತ್ಮಗರ್ಹ್ಯಮ್ ॥ ೭೦

ಆ ಗರ್ಭಿಣಿಯ ಸ್ತನಗಳು ಬೆಳೆದು ತಮ್ಮ ದ್ವೈತವನ್ನು (ಭೇದವನ್ನು)ಕಳೆದು ಕೊಂಡು ಸಂದಿಲ್ಲದಂತೆ ಒಂದಾದವು. ಚಿಕ್ಕದಾಗಿದ್ದ ನಡುವು ತನ್ನ ಶೂನ್ಯತೆಯನ್ನು ವರ್ಜಿಸಿ ದಪ್ಪವಾಯಿತು. ಆದ್ದರಿಂದ ಮನೋಹರವಾದ ಹುಬ್ಬುಗಳುಳ್ಳ ಆ ಸುಂದರಿಯ ಗರ್ಭದಲ್ಲಿರುವಾಗಲೇ ಬಾಲಕನು ಸಾಂಖ್ಯಾದಿಗಳ ದ್ವೈತವಾದವನ್ನೂ ಬೌದ್ಧರಾದ ಮಾಧ್ಯಮಿಕರ ಶೂನ್ಯವಾದವನ್ನೂ ಖಂಡಿಸಿದಂತಾಯಿತು. ಅವೆರಡು ವಾದಗಳೂ ಮಹಾತ್ಮರಿಂದ ನಿಂದಿತವಾದ ಮತಗಳು.

ಲಗ್ನೇ ಶುಭೇ ಶುಭಯುತೇ ಸುಷುವೇ ಕುಮಾರಂ
ಶ್ರೀಪಾರ್ವತೀವ ಸುಖಿನೀ ಶುಭವೀಕ್ಷಿತೇ ಚ ।
ಜಾಯಾ ಸತೀ ಶಿವಗುರೋರ್ನಿಜತುಂಗ ಸಂಸ್ಥೇ
ಸೂರ್ಯೇ ಕುಜೇ ರವಿಸುತೇ ಚ ಗುರೌ ಚ ಕೇಂದ್ರೇ ॥ ೭೧

(ಹೀಗಿರಲು ನವಮಾಸಗಳು ತುಂಬಲಾಗಿ) ಶಿವಗುರುವಿನ ಪತ್ನಿಯಾದ ಸತೀದೇವಿಯು ಶುಭಗ್ರಹಗಳಿಂದ ವೀಕ್ಷಿತವಾದ ಮತ್ತು ಶುಭಗ್ರಹಸಹಿತವಾದ ಶುಭಲಗ್ನದಲ್ಲಿ, ಶ್ರೀಪಾರ್ವತೀದೇವಿಯು ಕುಮಾರನನ್ನು (ಷಣ್ಮುಖಸ್ವಾಮಿಯನ್ನು)ಪ್ರಸವಿಸಿದಂತೆ, ಯಾವ ನೋವೂ ಇಲ್ಲದಂತೆ ಸುಖವಾಗಿ ಒಬ್ಬ ಗಂಡುಮಗುವನ್ನು ಪ್ರಸವಿಸಿದಳು. ಆ ಸಮಯದಲ್ಲಿ ರವಿಯೂ ಕುಜನೂ ಶನಿಯೂ ಉಚ್ಚರಾಶಿಯಲ್ಲಿದ್ದರು. ಗುರುವು ಕೇಂದ್ರದಲ್ಲಿದ್ದನು.

ಟಿಪ್ಪಣಿ: ಈ ಶ್ಲೋಕದಿಂದ ಶಿವಗುರುವಿನ ಪತ್ನಿಯ ಹೆಸರು 'ಸತೀ'ಎಂದು ಗೊತ್ತಾಗುತ್ತದೆ. ರವಿಗೆ ಮೇಷರಾಶಿಯೂ ಕುಜನಿಗೆ ಮಕರವೂ ಶನಿಗೆ ತುಲಾರಾಶಿಯೂ ಉಚ್ಚರಾಶಿಗಳು. ಲಗ್ನರಾಶಿ ಮತ್ತು ಅದಕ್ಕೆ ೪, ೭, ೧೦ ನೆಯ ರಾಶಿಗಳಿಗೆ ಕೇಂದ್ರವೆಂದು ಹೆಸರು.

ದೃಷ್ಟ್ವಾ ಸುತಂ ಶಿವಗುರುಃ ಶಿವವಾರಿರಾಶೌ
ಮಗ್ನೋಽಪಿ ಶಕ್ತಿಮನುಸೃತ್ಯ ಜಲೇ ನ್ಯಮಾಂಕ್ಷೀತ್ |
ವ್ಯಶ್ರಾಣಯದ್ಬಹು ಧನಂ ವಸುಧಾಶ್ಚ ಗಾಶ್ಚ
ಜನ್ಮೋಕ್ತಕರ್ಮವಿಧಯೇ ದ್ವಿಜಪುಂಗವೇಭ್ಯಃ || ೭೨

ಶಿವಗುರುವು ತನ್ನ ಪುತ್ರನನ್ನು ನೋಡಿ ಸುಖಸಮುದ್ರದಲ್ಲಿ ಮುಳುಗಿ ಹೋದರೂ ಯಥಾಶಕ್ತಿಯಾಗಿ ನೀರಿನಲ್ಲಿ ಮುಳುಗಿ ಸ್ನಾನಮಾಡಿದನು. ಅನಂತರ ಪುತ್ರಜನ್ಮಕ್ಕೆ ಸಂಬಂಧಿಸಿದ ವಿಧಿಯನ್ನು ಪಾಲಿಸುವುದಕ್ಕಾಗಿ ಬಹಳ ಧನವನ್ನೂ ಭೂಮಿಯನ್ನೂ ಗೋವುಗಳನ್ನೂ ವಿಪ್ರಶ್ರೇಷ್ಠರಿಗೆ ದಾನಮಾಡಿದನು.

ತಸ್ಮಿನ್ದಿನೇ ಮೃಗಕರೀಂದ್ರತರಕ್ಷುಸಿಂಹ-
ಸರ್ಪಾಖುಮುಖ್ಯಬಹುಜಂತುಗಣಾ ದ್ವಿಷಂತಃ |
ವೈರಂ ವಿಹಾಯ ಸಹ ಚೇರುರತೀವ ಹೃಷ್ಟಾಃ
ಕಂಡೂಮಪಾಕೃಷತ ಸಾಧುತಯಾ ನಿಘೃಷ್ಟಾಃ || ೭೩

ಆ ಶುಭದಿನದಲ್ಲಿ ಜಿಂಕೆ, ಆನೆ, ಚಿರತೆ, ಸಿಂಹ, ಸರ್ಪ, ಇಲಿ-ಮೊದಲಾದ ಪ್ರಾಣಿಗಳು ತಮಗೆ ವೈರಿಗಳಾದ ಇತರ ಪ್ರಾಣಿಗಳೊಡನೆ ದ್ವೇಷವನ್ನು ತ್ಯಜಿಸಿ ಸಂತೋಷದಿಂದ ಜೊತೆಯಲ್ಲಿ ತಿರುಗಾಡಿದವು. ಅಲ್ಲದೆ ಸಾಧುಭಾವದಿಂದ ಒಂದನ್ನೊಂದು ತೀಡಿ ತಮ್ಮ ದೇಹದ ನವೆಯನ್ನು ಹೋಗಲಾಡಿಸಿಕೊಳ್ಳುತ್ತಿದ್ದವು.

ವೃಕ್ಷಾ ಲತಾಃ ಕುಸುಮರಾಶಿ ಫಲಾನ್ಯಮುಂಚ-
ನ್ನದ್ಯಃ ಪ್ರಸನ್ನಸಲಿಲಾ ನಿಖಿಲಾಸ್ತಥೈವ |
ಜಾತಾ ಮುಹುರ್ಜಲಧರೋಽಪಿ ನಿಜಂ ವಿಕಾರಂ
ಭೂಭೃದ್ಗಣಾದಪಿ ಜಲಂ ಸಹಸೋತ್ಪಪಾತ || ೭೪

ಮರಬಳ್ಳಿಗಳು ಹೂವಿನ ರಾಶಿಗಳನ್ನೂ ಹಣ್ಣುಗಳನ್ನೂ ನೆಲದಮೇಲೆ ಬಳಬಳನೆ ಸುರಿಸತೊಡಗಿದವು. ಎಲ್ಲ ನದಿಗಳೂ ತಿಳಿನೀರಿನಿಂದ ತುಂಬಿ ಹರಿದವು. (ಬೇಸಿಗೆಯಾದರೂ ಸಹ)ಮೋಡವು ಮಳೆಯನ್ನು ಸುರಿಸಿತು. ಬೆಟ್ಟಗಳಿಂದ ನೀರಿನ ಬುಗ್ಗೆಗಳು ಚಿಮ್ಮಿದವು!

ಅದ್ವೈತವಾದಿವಿಪರೀತ ಮತಾವಲಂಬಿ-
ಹಸ್ತಾಗ್ರವರ್ತಿವರಪುಸ್ತಕ ಮಪ್ಯಕಸ್ಮಾತ್ |
ಉಚ್ಚೈಃ ಪಪಾತ ಜಹಸುಃ ಶ್ರುತಿಮಸ್ತಕಾನಿ
ಶ್ರೀವ್ಯಾಸಚಿತ್ತಕಮಲಂ ವಿಕಚೀಬಭೂವ || ೭೫

ಅದ್ವೈತಸಿದ್ಧಾಂತಕ್ಕೆ ವಿರುದ್ಧವಾದ ಮತವನ್ನು ಬೋಧಿಸುತ್ತಿದ್ದ ಪಂಡಿತರ ಕೈಯಿಂದ ಪುಸ್ತಕವು ಜಾರಿ ದೊಪ್ಪನೆ ಕೆಳಗೆ ಬಿದ್ದಿತು! ಆಗ ಉಪನಿಷತ್ತುಗಳು ನಕ್ಕವು! ಶ್ರೀವೇದವ್ಯಾಸಮಹರ್ಷಿಗಳ ಚಿತ್ತಕಮಲವು ಅರಳಿ ಪ್ರಸನ್ನವಾಯಿತು.

ಸರ್ವಾಭಿರಾಶಾಭಿರಲಂ ಪ್ರಸೇದೇ
ವಾತೈರಭಾವ್ಯದ್ಭುತದಿವ್ಯಗಂಧೈಃ |
ಪ್ರಜಜ್ವಲೇಽಪಿ ಜ್ವಲನೈಸ್ತದಾನೀಂ
ಪ್ರದಕ್ಷಿಣೀಭೂತ ವಿಚಿತ್ರಕೀಲೈಃ || ೭೬

ಆ ದಿನ ದಿಕ್ಕುಗಳೆಲ್ಲವೂ ಸ್ವಚ್ಛವಾಗಿ ಪ್ರಸನ್ನವಾದವು. ಆಶ್ಚರ್ಯಕರವಾದ ಸುಗಂಧವನ್ನು ಬೀರುತ್ತ ಗಾಳಿಯು ಬೀಸುತ್ತಿತ್ತು. ಎಲ್ಲ ಅಗ್ನಿಗಳೂ ವಿಚಿತ್ರವಾಗಿ ಜ್ವಾಲೆಯನ್ನು ಹರಡುತ್ತ ಪ್ರದಕ್ಷಿಣಾಕಾರವಾಗಿ ಉರಿಯುತ್ತಿದ್ದವು.

ಸುಮನೋಹರಗಂಧಿನೀ ಸತಾಂ
ಸುಮನೋವದ್ವಿಮಲಾ ಶಿವಂಕರೀ |
ಸುಮನೋನಿಕರ ಪ್ರಚೋದಿತಾ
ಸುಮನೋವೃಷ್ಟಿರಭೂತ್ತದಾಽದ್ಭುತಮ್ || ೭೭

ಸುಮನೋಹರವಾದ ಪರಿಮಳವನ್ನು ಬೀರತಕ್ಕದ್ದಾಗಿ, ಸಜ್ಜನರ ಸುಮನಸ್ಸಿನಂತೆ ವಿಮಲವೂ ಶುಭಕರವೂ ಆದ ಸುಮನೋವೃಷ್ಟಿಯನ್ನು (ಪುಷ್ಪವೃಷ್ಟಿಯನ್ನು) ಸುಮನಸರು(ದೇವತೆಗಳು) ಸುರಿದರು. ಇದೊಂದು ಅದ್ಭುತ!

ಲೋಕತ್ರಯೀ ಲೋಕದೃಶೇವ ಭಾಸ್ವತಾ
ಮಹೀಧರೇಣೇವ ಮಹೀ ಸುಮೇರುಣಾ |

ವಿದ್ಯಾ ವಿನೀತ್ಯೈವ ಸತೀ ಸುತೇನ ಸಾ
ರರಾಜ ತತ್ತಾದೃಶರಾಜತೇಜಸಾ || ೭೮

ಲೋಕತ್ರಯವು ಲೋಕಸಾಕ್ಷಿಯಾದ ಸೂರ್ಯನಿಂದಲೂ ಭೂದೇವಿಯು ಸುಮೇರುಪರ್ವತದಿಂದಲೂ ವಿದ್ಯೆಯು ವಿನಯದಿಂದಲೂ ಶೋಭಿಸುವ ಹಾಗೆ ಸತೀದೇವಿಯು ಅಸಾಧಾರಣ ರಾಜತೇಜಸ್ಸಿನಿಂದ ಕೂಡಿದ ಪುತ್ರನಿಂದ ಶೋಭಿಸಿದಳು.

ಟಿಪ್ಪಣಿ: ರಾಜಶಬ್ದಕ್ಕೆ ಚಂದ್ರನೆಂದೂ ಅರ್ಥವಿದೆ.

ಸತ್ಕಾರ ಪೂರ್ವಮಭಿಯುಕ್ತ ಮುಹೂರ್ತವೇದಿ-
ವಿಪ್ರಾಃ ಶಶಂಸುರಭಿವೀಕ್ಷ್ಯ ಸುತಸ್ಯ ಜನ್ಮ |
ಸರ್ವಜ್ಞ ಏಷ ಭವಿತಾ ರಚಯಿಷ್ಯತೇ ಚ
ಶಾಸ್ತ್ರಂ ಸ್ವತಂತ್ರಮಥ ವಾಗಧಿಪಾಂಶ್ಚ ಜೇತಾ || ೭೯

ಶಿವಗುರುವು ಮುಹೂರ್ತಜ್ಞರಾದ ವಿಪ್ರರನ್ನು ಸತ್ಕಾರಪೂರ್ವಕವಾಗಿ ಸ್ವಾಗತಿಸಿ ಪುತ್ರನ ಜನ್ಮಲಗ್ನದ ಫಲವನ್ನು ವಿಚಾರಿಸಿದನು. ಅವರು ಜಾತಕವನ್ನು ಪರೀಕ್ಷಿಸಿ "ಈ ಬಾಲಕನು ಸರ್ವಜ್ಞನೇ ಆಗುವನು. ಅದ್ವೈತಪ್ರಧಾನವಾದ ವೇದಾಂತಶಾಸ್ತ್ರವನ್ನು ಸ್ವಬುದ್ಧಿವೈಭವದಿಂದ ವಿಸ್ತರಿಸಿ ರಚಿಸುವನು. ವಾಚಸ್ಪತಿಗಳೆನಿಸಿದ ವಿದ್ವಾಂಸರನ್ನೂ ವಾದದಲ್ಲಿ ಜಯಿಸುವನು.

ಕೀರ್ತಿಂ ಸ್ವಕಾಂ ಭುವಿ ವಿಧಾಸ್ಯತಿ ಯಾವದೇಷಾ
ಕಿಂ ಬೋಧಿತೇನ ಬಹುನಾ ಶಿಶುರೇಷ ಪೂರ್ಣಃ |
ನಾಪೃಚ್ಛಿ ಜೀವಿತಮನೇನ ಚ ತೈರ್ನ ಚೋಕ್ತಂ
ಪ್ರಾಯೋ ವಿದನ್ನಪಿ ನ ವಕ್ತ್ಯಶುಭಂ ಶುಭಜ್ಞಃ || ೮೦

ಈತನು ಭೂಲೋಕವನ್ನು ವ್ಯಾಪಿಸಿ ತನ್ನ ಕೀರ್ತಿಯನ್ನು ಬಿತ್ತರಿಸುವನು. ಹೆಚ್ಚು ಹೇಳುವುದರಿಂದೇನು ?ಈ ಶಿಶುವು ಸರ್ವಜ್ಞತೆಯಿಂದ ಪೂರ್ಣವಾಗಿದೆ"ಎಂದು ಹೇಳಿದರು. ಶಿವಗುರುವು ಮಗುವಿನ ಆಯುಸ್ಸು ಎಷ್ಟೆಂದು ಕೇಳಲಿಲ್ಲ. ಅವರೂ ಹೇಳಲಿಲ್ಲ! ಸಾಮಾನ್ಯವಾಗಿ ಶುಭಜ್ಞರಾದ ಜ್ಯೋತಿಷಿಗಳು ಗೊತ್ತಿದ್ದರೂ ಅಶುಭಕರವಾದ ಭವಿಷ್ಯವನ್ನು ಹೇಳುವುದಿಲ್ಲ!

ತಜ್ಜ್ಞಾತಿಬಂಧುಸುಹೃದಿಷ್ಟಜನಾಂಗನಾಸ್ತ-
ಸ್ತಂ ಸೂತಿಕಾಗೃಹನಿವಿಷ್ಟಮಥೋ ನಿದಧ್ಯುಃ |
ಸೋಪಾಯನಾಸ್ತಮಭಿವೀಕ್ಷ್ಯ ಯಥಾ ನಿದಾಘೇ
ಚಂದ್ರಂ ಮುದಂ ಯಯುರತೀವ ಸರೋಜವಕ್ತ್ರಮ್ || ೮೧

ಆ ದಂಪತಿಗಳಿಗೆ ಜ್ಞಾತಿಗಳೂ ಬಂಧುಗಳೂ ಇಷ್ಟಮಿತ್ರರೂ ಆದ ಸ್ತ್ರೀಯರು ಪಾರಿತೋಷಿಕಗಳನ್ನು ತಂದು, ಬಾಣಂತಿಮನೆಯಲ್ಲಿದ್ದ ಶಿಶುವನ್ನು ಆಸಕ್ತಿಯಿಂದ ನೋಡುತ್ತಿದ್ದರು. ಅರಳಿದ ತಾವರೆಯಂತೆ ಮುಖವಿದ್ದ ಆ ಮಗುವನ್ನು ನೋಡಿ, ಬೇಸಿಗೆಯ ಕಾಲದಲ್ಲಿ (ಶೀತಕಿರಣನಾದ)ಚಂದ್ರನನ್ನು ಕಂಡಂತೆ ಹರ್ಷಿಸಿದರು.

ತತ್ಸೂತಿಕಾಗೃಹ ಮವೈಕ್ಷತ ನ ಪ್ರದೀಪಂ
ತತ್ತೇಜಸಾ ಯದವಭಾತಮಭೂತ್ ಕ್ಷಪಾಯಾಮ್ |
ಆಶ್ಚರ್ಯಮೇತದಜನಿಷ್ಟ ಸಮಸ್ತ ಜಂತೋ-
ಸ್ತನ್ಮಂದಿರಂ ವಿತಿಮಿರಂ ಯದಭೂದದೀಪಮ್ || ೮೨

ಆ ಸೂತಿಕಾಗೃಹದಲ್ಲಿ ರಾತ್ರಿಯೂ ದೀಪವಿರಲಿಲ್ಲ!ಏಕೆಂದರೆ, ಶಿಶುವಿನ ತೇಜಸ್ಸಿನಿಂದಲೇ ಬೆಳಕು ಹರಡಿತ್ತು. ಆ ಸ್ಥಳದಲ್ಲಿ ದೀಪವಿಲ್ಲದೆಯೇ ಕತ್ತಲೆ ಹೋಗಿರುವುದನ್ನು ಕಂಡು ಸಮಸ್ತಜನರೂ ಆಶ್ಚರ್ಯಚಕಿತರಾದರು.

ಯತ್ಪಶ್ಯತಾಂ ಶಿಶುರಸೌ ಕುರುತೇ ಶಮಗ್ರ್ಯಂ
ತೇನಾಕೃತಾಸ್ಯ ಜನಕಃ ಕಿಲ ಶಂಕರಾಖ್ಯಾಮ್ |
ಯದ್ವಾ ಚಿರಾಯ ಕಿಲ ಶಂಕರಸಂಪ್ರಸಾದಾ-
ಜ್ಜಾತಸ್ತತೋ ವ್ಯಧಿತ ಶಂಕರನಾಮಧೇಯಮ್ || ೮೩

ನೋಡತಕ್ಕವರಿಗೆ ಆ ಮಗುವು ಅಧಿಕವಾದ ಶಂ=ಎಂದರೆ ಸಂತೋಷವನ್ನು ಉಂಟು ಮಾಡುತ್ತಿದ್ದುದರಿಂದ ತಂದೆಯು ಅದಕ್ಕೆ 'ಶಂಕರ'ಎಂದು ನಾಮಕರಣ ಮಾಡಿದನು. ಅಥವಾ ಬಹಳ ಕಾಲದ ಮೇಲೆ ಶ್ರೀಶಂಕರನ ಕೃಪೆಯಿಂದ ಜನಿಸಿದ ನಿಮಿತ್ತವಾಗಿಯೋ ಏನೋ ಆತನು ಶಿಶುವಿಗೆ 'ಶಂಕರ' ಎಂದು ಹೆಸರಿಟ್ಟನು.

ಸರ್ವಂ ವಿದನ್ಸಕಲಶಕ್ತಿಯುತೋಽಪಿ ಬಾಲೋ
ಮಾನುಷ್ಯಜಾತಿಮನುಸೃತ್ಯ ಚಚಾರ ತದ್ವತ್ |
ಬಾಲಃ ಶನೈರ್ಹಸಿತುಮಾರಭತ ಕ್ರಮೇಣ
ಸೃಪ್ತುಂ ಶಶಾಕ ಗಮನಾಯ ಪದಾಂಬುಜಾಭ್ಯಾಮ್ || ೮೪

ಆ ಬಾಲಕನು ಸರ್ವವನ್ನು ಬಲ್ಲವನಾಗಿ ಸರ್ವಸಾಮರ್ಥ್ಯದಿಂದ ಕೂಡಿದ್ದರೂ ಮನುಷ್ಯಜನ್ಮವನ್ನನುಸರಿಸಿ ಮನುಷ್ಯನಂತೆಯೇ ನಡೆದುಕೊಂಡನು. ಆ ಕುಮಾರನು ಮೆಲ್ಲಮೆಲ್ಲನೆ ನಗುತ್ತ ಮಗ್ಗುಲಾಗಿ ಹೊರಳಿ ನೆಲದಮೇಲೆ ಈಸುತ್ತ ತೆವಳುತ್ತ ತನ್ನ ಪಾದಕಮಲಗಳಿಂದ ಕ್ರಮವಾಗಿ ನಡೆಯಲಾರಂಭಿಸಿದನು.

ಬಾಲೇಽಥ ಮಂಚೇ ಕಿಲ ಶಾಯಿತೇಽಸ್ಮಿನ್
ಸತಾಂ ಪ್ರಸನ್ನಂ ಹೃದಯಂ ಬಭೂವ ।
ಸಂವೀಕ್ಷಮಾಣೇ ಮಣಿಗುಚ್ಛವರ್ಯಂ
ವಿದ್ವನ್ಮುಖಂ ಹಂತ ವಿನೀಲಮಾಸೀತ್ ॥ ೮೫

ಈ ಕುಮಾರನು ಮಂಚದಲ್ಲಿ ಮಲಗಿದಾಗ ಸಜ್ಜನರ ಹೃದಯವು ಪ್ರಸನ್ನವಾಯಿತು. ಮೇಲುಗಡೆ ಮಗುವಿನ ವಿನೋದಕ್ಕಾಗಿ ಕಟ್ಟಿದ ಮಣಿಗಳ ಗೊಂಚಲನ್ನು ನೋಡುತ್ತಿರಲಾಗಿ, ಪ್ರತಿವಾದಿಗಳಾದ ವಿದ್ವಾಂಸರ ಮುಖವು, ಅಯ್ಯೊ, ಕಪ್ಪುಗಟ್ಟಿತು!

ಟಿಪ್ಪಣಿ: ಅವು ಕರಿಮಣಿಗಳೆಂಬ ಕಲ್ಪನೆಯಿಂದ ಹೀಗೆ ಕವಿಯು ವರ್ಣಿಸಿರಬಹುದು.

ಸಂತಾಡಯನ್ ಹಂತ ಶನೈಃ ಪದಾಭ್ಯಾಂ
ಪರ್ಯಂಕವರ್ಯಂ ಕಮನೀಯ ಶಯ್ಯಮ್ ।
ಬಿಭೇದ ಸದ್ಯಃ ಶತಧಾ ಸಮೂಹಾನ್
ವಿಭೇದವಾದೀಂದ್ರಮನೋರಥಾನಾಮ್ ॥ ೮೬

ಸುಂದರವಾದ ಹಾಸಿಗೆಯನ್ನು ಹಾಸಿದ್ದ ಉತ್ತಮವಾದ ಮಂಚವನ್ನು ಆ ಬಾಲಕನು ಕಾಲುಗಳಿಂದ ಪಟಪಟನೆ ಒದೆದಾಗ, ಪ್ರತಿಕಕ್ಷಿಗಳಾದ ಭೇದವಾದಿಗಳ ಮನೋರಥಗಳು, ಅಬ್ಬಾ, ಒಡನೆಯೇ ಒಡೆದು ನೂರಾರು ಹೋಳುಗಳಾದವು!

ದ್ವಿತ್ರಾಣಿ ವರ್ಣಾನಿ ವದತ್ಯಮುಷ್ಮಿನ್
ದ್ವೈತಿಪ್ರವೀರಾ ದಧುರೇವ ಮೌನಮ್ ।
ಮುದಾ ಚಲತ್ಯಂಘ್ರಿ ಸರೋರುಹಾಭ್ಯಾಂ
ದಿಶಃ ಪಲಾಯಂತ ದಶಾಽಪಿ ಸದ್ಯಃ ॥ ೮೭

ಆತನು ಎರಡು ಮೂರಕ್ಷರಗಳ ಉಚ್ಚಾರಣೆಯನ್ನು ಕಲಿಯಲು, ವೀರರಾದ ದ್ವೈತಿಗಳು ಮೌನವನ್ನವಲಂಬಿಸಿದರು!ಬಾಲಕನು ಸಂತೋಷದಿಂದ ಹಿಗ್ಗುತ್ತ ನಡೆಯಲು ಕಲಿತಾಗ ಆ ವಾದಿಗಳೆಲ್ಲರೂ ದಶದಿಕ್ಕುಗಳಿಗೆ ಓಡಿ ಹೋದರು!

ಉದಚಾರಯದರ್ಭಕೋ ಗಿರಃ
ಪದಚಾರಾನತನೋದನಂತರಮ್ ।
ವಿಕಲೋಽಭವದಾದಿಮಾತ್ತಯೋಃ
ಪಿಕಲೋಕಶ್ಚರಮಾನ್ಮರಾಲಕಃ ॥ ೮೮

ಆ ಬಾಲಕನು ಮಾತಾಡುವುದನ್ನೂ ನಡಿಗೆಯನ್ನೂ ಕಲಿತನು. ಅವನು ಮಾತಾಡುವುದನ್ನು ಕಲಿತಾಗ ಕೋಗಿಲೆಯು ಹಾಡದೆ ಸುಮ್ಮನಾಯಿತು!ನಡಿಗೆಯನ್ನು ಆರಂಭಿಸಿದಾಗ ಹಂಸವು ವಿಷಾದಗೊಂಡಿತು!

ಟಿಪ್ಪಣಿ: ಬಾಲಕನ ಮಾತು ಕೋಗಿಲೆಯ ಹಾಡಿಗಿಂತ ಮಧುರವಾಗಿತ್ತು. ನಡಿಗೆಯು ಹಂಸದ ವಿಲಾಸಗಮನವನ್ನು ಮೀರಿಸುತ್ತಿತ್ತು-ಎಂದು ಅಭಿಪ್ರಾಯ.

ನವವಿದ್ರುಮ ಪಲ್ಲವಾಸ್ತೃತಾ-
ಮಿವ ಕಾಶ್ಮೀರ ಪರಾಗಪಾಟಲಾಮ್ |
ರಚಯನ್ನಚಲಾಂ ಪದತ್ವಿಷಾ
ಸ ಚಚಾರೇಂದುನಿಭಃ ಶನೈಃಶನೈಃ || ೪೯

ಚಂದ್ರನಂತೆ ಆಹ್ಲಾದಕರನಾದ ಆ ಚಿಕ್ಕಹುಡುಗನು ಮೆಲ್ಲಮೆಲ್ಲನೆ ನಡೆಯುತ್ತಿರುವಾಗ ಹವಳದ ಬಳ್ಳಿಯ ಹೊಸಚಿಗುರುಗಳನ್ನು ನೆಲದ ಮೇಲೆ ಹಾಸಿದಂತೆಯೂ ಕುಂಕುಮಕೇಸರದ ಧೂಳಿಯನ್ನು ಚೆಲ್ಲಿದಂತೆಯೂ ನೆಲವು ನಸುಗೆಂಪಾಗಿ ಕಾಣಿಸುತ್ತಿತ್ತು.

ಟಿಪ್ಪಣಿ: ಪವಳವು ಬಳ್ಳಿಯಂತೆ ಸಮುದ್ರದಲ್ಲಿ ಹಬ್ಬಿಕೊಂಡಿರುತ್ತದೆ. ಅದನ್ನು ಬಳ್ಳಿಯೆಂದು ವರ್ಣಿಸುವುದು ಕವಿಸಮಯ.

ಮೂರ್ಧನಿ ಹಿಮಕರಚಿಹ್ನಂ
ನಿಟಿಲೇ ನಯನಾಂಕಮಂಸಯೋಃ ಶೂಲಮ್ |
ವಪುಷಿ ಸ್ಫಟಿಕಸವರ್ಣಂ
ಪ್ರಾಜ್ಞಾಸ್ತಂ ಮೇನಿರೇ ಶಂಭುಮ್ || ೫೦

ಆ ಕುಮಾರನಿಗೆ ಶಿರಸ್ಸಿನಲ್ಲಿ ಚಂದ್ರರೇಖೆಯೂ, ಹಣೆಯಲ್ಲಿ ನಯನಚಿಹ್ನೆಯೂ, ಭುಜಗಳಲ್ಲಿ ತ್ರಿಶೂಲರೇಖೆಯೂ, ದೇಹದಲ್ಲಿ ಸ್ಫಟಿಕದಂತಹ ಶುಭ್ರವರ್ಣವೂ ಇದ್ದುದನ್ನು ನೋಡಿ ಪ್ರಾಜ್ಞರಾದವರು, ಆತನು ಸಾಕ್ಷಾತ್ ಪರಮೇಶ್ವರನೇ ಎಂದು ತಿಳಿದರು.

ಟಿಪ್ಪಣಿ: ಚಂದ್ರ, ನಯನ, ಶೂಲ-ಇವು ಅದೇ ಆಕೃತಿಯ ಆಭರಣಗಳಾಗಿದ್ದರೂ ಇರಬಹುದು ಅಥವಾ ಸಾಮುದ್ರಿಕಶಾಸ್ತ್ರದ ಚಿಹ್ನೆಗಳಾಗಿರಬಹುದು.

ರಾಜ್ಯಶ್ರೀರಿವ ನಯಕೋವಿದಸ್ಯ ರಾಜ್ಞೋ
ವಿದ್ಯೇವ ವ್ಯಸನ ದವೀಯಸೋ ಬುಧಸ್ಯ |
ಶುಭ್ರಾಂಶೋಶ್ಛವಿರಿವ ಶಾರದಸ್ಯ ಪಿತ್ರೋಃ
ಸಂತೋಷೈಃ ಸಹ ವವೃಧೇ ತದೀಯ ಮೂರ್ತಿಃ || ೫೧

ನೀತಿಜ್ಞನಾದ ರಾಜನ ರಾಜ್ಯಲಕ್ಷ್ಮಿಯಂತೆ, ದುರ್ವ್ಯಸನಗಳಿಲ್ಲದ ಪಂಡಿತನ ವಿದ್ಯೆಯಂತೆ, ಶರತ್ಕಾಲದ ಚಂದ್ರನ ಬೆಳದಿಂಗಳಂತೆ, ಬಾಲಕನ ಆಕೃತಿಯು ತಾಯಿತಂದೆಗಳ ಸಂತೋಷದೊಡನೆ ದಿನದಿನದಲ್ಲಿಯೂ ವರ್ಧಿಸಿತು.

ಟಿಪ್ಪಣಿ: ಬಾಲಕನು ಬೆಳೆದಂತೆ ತಂದೆತಾಯಿಗಳ ಆನಂದವೂ ಹೆಚ್ಚಿತು.

ನಾಗೇನೋರಸಿ ಚಾಮರೇಣ ಚರಣೇ ಬಾಲೇಂದುನಾ ಫಾಲಕೇ
ಪಾಣ್ಯೋಶ್ಚಕ್ರಗದಾಧನುರ್ಡಮರುಕೈರ್ಮೂರ್ಧ್ನಿ ತ್ರಿಶೂಲೇನ ಚ |
ತತ್ತ್ವಸ್ಯಾದ್ಭುತಮಾಕಲಯ್ಯ ಲಲಿತಂ ರೇಖಾಕೃತೇ ಲಾಂಛಿತಂ
ಚಿತ್ರಂ ಗಾತ್ರಮಮಂಸ್ತ ತತ್ರ ಜನತಾ ನೇತ್ರೈರ್ನಿಮೇಷೋಜ್ಝಿತೈಃ ||

೬೨

ಆ ಕುಮಾರನ ಕೋಮಲಶರೀರದ ವಕ್ಷಃಸ್ಥಳದಲ್ಲಿ ಸರ್ಪರೇಖೆಯೂ ಪಾದದಲ್ಲಿ ಚಾಮರರೇಖೆಯೂ ಹಣೆಯಲ್ಲಿ ಬಾಲಚಂದ್ರನ ಚಿಹ್ನೆಯೂ ಎರಡು ಕೈಗಳಲ್ಲಿ ಚಕ್ರ ಗದೆ ಧನುಸ್ಸು ಡಮರುಕಗಳ ಚಿಹ್ನೆಗಳೂ ನೆತ್ತಿಯಲ್ಲಿ ತ್ರಿಶೂಲ ರೇಖೆಯೂ ಇದ್ದ ಅದ್ಭುತವನ್ನು ಜನರು ಎವೆಯಿಕ್ಕದೆ ನೋಡುತ್ತ-ಈ ಮೂರ್ತಿಯು ರೇಖೆಗಳಿಂದ ಬರೆದ ಚಿತ್ರವೆಂದು ಭಾವಿಸುತ್ತಿದ್ದರು.

ಸರ್ಗೇ ಪ್ರಾಥಮಿಕೇ ಪ್ರಯಾತಿ ವಿರತಿಂ ಮಾರ್ಗೇ ಸ್ಥಿತೇ ದೌರ್ಗತೇ
ಸ್ವರ್ಗೇ ದುರ್ಗಮತಾಮುಪೇಯುಷಿ ಭೃಶಂ ದುರ್ಗೇಽಪವರ್ಗೇ ಸತಿ |
ವರ್ಗೇ ದೇಹಭೃತಾಂ ನಿಸರ್ಗಮಲಿನೇ ಜಾತೋಪಸರ್ಗೇಽಖಿಲೇ
ಸರ್ಗೇ ವಿಶ್ವಸೃಜಸ್ತದೀಯವಪುಷಾ ಭರ್ಗೋಽವತೀರ್ಣೋ ಭುವಿ ||

೬೩

ಪ್ರಾಥಮಿಕ ಸರ್ಗ-ಎಂದರೆ ಧರ್ಮಪ್ರಧಾನವಾದ ಸೃಷ್ಟಿಕಾಲವು ಮುಗಿಯಲಾಗಿ ದುರ್ಗತಿ ಸಂಪಾದಕವಾದ ಕಲಿಯುಗವು ಬಂದಿತು. ಜನರಿಗೆ ಸ್ವರ್ಗವು ದುರ್ಲಭವಾಗಿ ಮೋಕ್ಷವಂತೂ ದೊರೆಯತಕ್ಕದ್ದೇ ಅಲ್ಲವೆಂಬಂತಾಯಿತು. ಪ್ರಜೆಗಳು ಸಹಜವಾಗಿ ಕೊಳಕು ನಡತೆಯಲ್ಲಿ ತೊಡಗಿದರು. ಜಗತ್ತೆಲ್ಲವೂ ವಿಪತ್ತಿಗೊಳಗಾಯಿತು. ಬ್ರಹ್ಮನ ಸೃಷ್ಟಿ ಈ ಪ್ರಕಾರವಾಗಿರಲು ಶ್ರೀಶಂಕರನೆಂಬ ಬಾಲಕನ ರೂಪದಿಂದ ಪರಮೇಶ್ವರನು ಭೂಮಿಯಲ್ಲವತರಿಸಿದನು.

ಟಿಪ್ಪಣಿ: ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳಲ್ಲಿ ಧರ್ಮವು ಪ್ರಥಮವಾಗಿದೆ. ಕೃತ, ತ್ರೇತಾ, ದ್ವಾಪರ-ಎಂಬ ಯುಗಗಳು ಧರ್ಮಪ್ರಧಾನವಾದವುಗಳೆಂದು ಅಭಿಪ್ರಾಯ.
'ಸರ್ಗೇ ಪ್ರಾಥಮಿಕೇ'ಎಂಬ ಶಬ್ದಬಲದಿಂದ ಈ ಗ್ರಂಥದ ಆರಂಭದಲ್ಲಿ' ಶ್ರೀಶಂಕರಾಚಾರ್ಯರ ಅವತಾರದ ವರ್ಣನೆ ಇದೆ. ಈ ಸರ್ಗ ಮುಗಿಯಿತು'-ಎಂಬ ಅಭಿಪ್ರಾಯವು ವ್ಯಂಗ್ಯವಾಗಿ ತೋರುತ್ತದೆ.

ಇತಿ ಶ್ರೀ ಮಾಧವೀಯೇ ತದವತಾರಕಥಾಪರಃ |
ಸಂಕ್ಷೇಪಶಂಕರಜಯೇ ಸರ್ಗಃ ಪೂರ್ಣೋ ದ್ವಿತೀಯಕಃ ||

ಇಲ್ಲಿಗೆ ಶ್ರೀಮಾಧವೀಯ ಸಂಕ್ಷೇಪ ಶಂಕರವಿಜಯದಲ್ಲಿ ಶ್ರೀಶಂಕರನ ಅವತಾರ ಕಥೆಯನ್ನು ವರ್ಣಿಸುವ ಎರಡನೆಯ ಸರ್ಗವು ಸಮಾಪ್ತವಾಯಿತು

ತೃತೀಯಃ ಸರ್ಗಃ
ದೇವಾವತಾರಃ

ಪರಮೇಶ್ವರನ ಸಂಕಲ್ಪದಂತೆ ವೈದಿಕಸಿದ್ಧಾಂತರಕ್ಷಣೆಗಾಗಿ ಬ್ರಹ್ಮಾದಿದೇವತೆಗಳ ಅವತಾರ. ದುರ್ವಾಸರ ಶಾಪದಿಂದ ಸರಸ್ವತಿಯು ಉಭಯಭಾರತಿಯಾಗಿ ಜನಿಸುವುದು, ಬ್ರಹ್ಮನ ಅವತಾರವಾಗಿದ್ದ ವಿಶ್ವರೂಪನಿಗೂ ಉಭಯಭಾರತಿಗೂ ವಿವಾಹ.

ಇತಿ ಬಾಲ ಮೃಗಾಂಕಶೇಖರೇ
ಸತಿ ಬಾಲತ್ವಮುಪಾಗತೇ ತತಃ |
ದಿವಿಷತ್ಪ್ರವರಾಃ ಪ್ರಜಜ್ಞಿರೇ
ಭುವಿ ಷಟ್‌ಶಾಸ್ತ್ರವಿದಾಂ ಸತಾಂ ಕುಲೇ || ೧

ಈ ಪ್ರಕಾರವಾಗಿ ಚಂದ್ರಮೌಳಿಯಾದ ಸದಾಶಿವನು ಬಾಲಕನಾಗಿ ಅವತರಿಸಲಾಗಿ, ದೇವತೆಗಳಲ್ಲಿ ಮುಖ್ಯರಾದವರು ಭೂಲೋಕದಲ್ಲಿದ್ದ ಷಟ್ ಶಾಸ್ತ್ರಪಂಡಿತರಾದ ಸಜ್ಜನರ ವಂಶದಲ್ಲಿ ಹುಟ್ಟಿದರು.

ಕಮಲಾನಿಲಯಃ ಕಲಾನಿಧೇ-
ರ್ವಿಮಲಾಖ್ಯಾದಜನಿಷ್ಟ ಭೂಸುರಾತ್ |
ಭುವಿ ಪದ್ಮಪದಂ ವದಂತಿ ಯಂ
ಸವಿಪದ್ಯೇನ ವಿವಾದಿನಾಂ ಯಶಃ || ೨

ಲಕ್ಷ್ಮೀಪತಿಯಾದ ವಿಷ್ಣುವು ವಿದ್ಯಾನಿಧಿಯಾದ ವಿಮಲನೆಂಬ ಬ್ರಾಹ್ಮಣನಿಂದ ಜನಿಸಿದನು. ಆತನನ್ನು ಮುಂದೆ ಪದ್ಮಪಾದನೆಂಬ ಹೆಸರಿನಿಂದ ಕರೆಯುವರು. ಆತನು ಪ್ರತಿವಾದಿಗಳ ಕೀರ್ತಿಗಳನ್ನು ನಾಶಮಾಡತಕ್ಕ ವಿದ್ವಾಂಸನಾಗಿದ್ದನು.

ಪವನೋಽಪ್ಯಜನಿ ಪ್ರಭಾಕರಾತ್
ಸವನೋನ್ಮೀಲಿತ ಕೀರ್ತಿಮಂಡಲಾತ್ |

ಗಲಹಸ್ತಿತ ಭೇದವಾದ್ಯಸೌ
  ಕಿಲ ಹಸ್ತಾಮಲಕಾಭಿಧಾಮಧಾತ್ ॥ ೩

ವಾಯುದೇವನು ಪ್ರಭಾಕರನೆಂಬ ವಿದ್ವಾಂಸನ ಪುತ್ರನಾಗಿ ಹುಟ್ಟಿದನು. ಪ್ರಭಾಕರನಾದರೋ ನಾನಾ ಯಜ್ಞಗಳನ್ನು ಮಾಡಿ ಕೀರ್ತಿಯನ್ನು ಸಂಪಾದಿಸಿದವನು. ಹೀಗೆ ಅವತರಿಸಿದ ವಾಯುವು ಹಸ್ತಾಮಲಕಾಚಾರ್ಯನೆಂಬ ಹೆಸರಿನಿಂದ ಭೇದವಾದವನ್ನು ದೂರಕ್ಕೆ ತಳ್ಳಿ ಹಾಕಿದನು.

ಪವಮಾನ ದಶಾಂಶತೋಽಜನಿ
  ಪ್ಲವಮಾನಾಂಚತಿ ಯದ್ಯಶೋಂಬುಧೌ ।
ಧರಣೀ ಮಥಿತಾ ವಿವಾದಿವಾಕ್
  ತರಣೀ ಯೇನ ಸ ತೋಟಕಾಹ್ವಯಃ ॥ ೪

ವಾಯುದೇವನ ಹತ್ತನೆಯ ಒಂದು ಅಂಶದಿಂದ ತೋಟಕಾಚಾರ್ಯನು ಜನಿಸಿದನು. ಆತನ ಕೀರ್ತಿಸಮುದ್ರದಲ್ಲಿ ಸಮಸ್ತಭೂಮಿಯೇ ತೇಲಾಡುವಂತಾಯಿತು. ಆ ತೋಟಕಾಚಾರ್ಯನಿಂದ ಪ್ರತಿವಾದಿಗಳ ವಾದವೆಂಬ ಹಡಗು ನಾಶವಾಯಿತು.

ಉದಭಾವಿ ಶಿಲಾದಸೂನುನಾ
  ಮದವದ್ವಾದಿಕದಂಬನಿಗ್ರಹೈಃ ।
ಸಮುದಂಚಿತ ಕೀರ್ತಿಶಾಲಿನಂ
  ಯಮುದಂಕಂ ಬ್ರುವತೇ ಮಹೀತಲೇ ॥ ೫

ಶಿಲಾದಪುತ್ರನಾದ ನಂದಿಯು ಭೂತಳದಲ್ಲಿ ಅವತರಿಸಿದನು. ಆತನು ಉದಂಕ ಎಂಬ ಹೆಸರನ್ನು ಧರಿಸಿ ಮದಿಸಿದ ಪ್ರತಿವಾದಿಗಳ ಸಮುದಾಯವನ್ನು ನಿಗ್ರಹಿಸಿ ಕೀರ್ತಿಶಾಲಿಯಾದನು.

ವಿಧಿರಾಸ ಸುರೇಶ್ವರೋ ಗಿರಾಂ
  ನಿಧಿರಾನಂದ ಗಿರಿರ್ವ್ಯಜಾಯತ ।
ಅರುಣಃ ಸಮಭೂತ್ ಸನಂದನೋ
  ವರುಣೋಽಜಾಯತ ಚಿತ್ಸುಖಾಹ್ವಯಃ ॥ ೬

ಬ್ರಹ್ಮನು ಸುರೇಶ್ವರನೆಂಬ (ಮಂಡನಮಿಶ್ರ)ಹೆಸರಿನಿಂದಲೂ ಬೃಹಸ್ಪತಿಯು ಆನಂದಗಿರಿ ಎಂಬ ಹೆಸರಿನಿಂದಲೂ ಹುಟ್ಟಿದರು. ಅರುಣನು ಸನಂದನನಾಗಿಯೂ, ವರುಣನು ಚಿತ್ಸುಖಾಚಾರ್ಯನಾಗಿಯೂ ಹುಟ್ಟಿದರು.

ಟಿಪ್ಪಣಿ:ವಿಷ್ಣುವು ಪದ್ಮಪಾದನಾದನೆಂದು ಹಿಂದೆ ಹೇಳಿದೆ. ಆತನೇ ಸನಂದನನೆಂದು ಮುಂದೆ ವರ್ಣಿಸಲಾಗುತ್ತದೆ. ಆದ್ದರಿಂದ ಪಕ್ಷಭೇದದಿಂದ ಈ ಮಾತನ್ನು ಹೇಳಲಾಗಿದೆ ಎಂದು ತಿಳಿಯತಕ್ಕದ್ದು.

ಅಪರೇಽಪ್ಯಭವನ್ದಿವೌಕಸಃ
ಸ್ವಪರೇಷ್ಯಾರ್ಪರವಿದ್ವಿಷಃ ಪ್ರಭೋಃ |
ಚರಣಂ ಪರಿಸೇವಿತುಂ ಜಗ-
ಚ್ಚರಣಂ ಭೂಸುರ ಪುಂಗವಾತ್ಮಜಾಃ || ೭

ಇನ್ನೂ ಕೆಲವು ದೇವತೆಗಳು ಜಗತ್ತಿಗೇ ರಕ್ಷಕವಾದ, ಪ್ರಭುವಿನ ಚರಣವನ್ನು ಸೇವಿಸುವುದಕ್ಕಾಗಿ ಬ್ರಾಹ್ಮಣೋತ್ತಮರ ಮಕ್ಕಳಾಗಿ ಜನಿಸಿದರು. ತಮ್ಮನ್ನು ದ್ವೇಷಿಸತಕ್ಕ ದೈತ್ಯರಿಗೆ ವಿರೋಧಿಗಳಾಗಿ ಅವರು ಹುಟ್ಟಿದರು.

ಟಿಪ್ಪಣಿ:ಆಚಾರ್ಯರ ಸೇವೆಗಾಗಿ ಇನ್ನೂ ಕೆಲವು ದೇವತೆಗಳು ಅವತರಿಸಿದರು. ಅದ್ವೈತವಿರೋಧಿಗಳಾದ ವಾದಿಗಳು ದೈತ್ಯಾಂಶದವರೆಂದೂ ಅವರ ಮೇಲಿನ ದ್ವೇಷದಿಂದ ಇವರು ಶಿಷ್ಯರಾಗಿ ಅವತರಿಸಿದರೆಂದೂ ಅಭಿಪ್ರಾಯ.

ಚಾರ್ವಾಕದರ್ಶನ ವಿಧಾನಸರೋಷಧಾತೃ-
ಶಾಪೇನ ಗೀಷ್ಪತಿರಭೂದ್ಭುವಿ ಮಂಡನಾಖ್ಯಃ |
ನಂದೀಶ್ವರಃ ಕರುಣಯೇಶ್ವರಚೋದಿತಃ ಸನ್
ಆನಂದಗಿರ್ಯಭಿಧಯಾ ವ್ಯಜನೀತಿ ಕೇಚಿತ್ || ೮

ಇನ್ನು ಕೆಲವರು ಹೇಳುವುದೇನೆಂದರೆ-ಬೃಹಸ್ಪತಿಯು ಚಾರ್ವಾಕ ದರ್ಶನವನ್ನು ಬರೆದದ್ದರಿಂದ ಕೋಪಗೊಂಡ ಬ್ರಹ್ಮನು ಬೃಹಸ್ಪತಿಯನ್ನು ಶಪಿಸಿದನೆಂದೂ ಆದರಿಂದ ಬೃಹಸ್ಪತಿಯು ಭೂಮಿಯಲ್ಲಿ ಮಂಡನಮಿಶ್ರರೆಂಬ ಹೆಸರಿನಿಂದ ಹುಟ್ಟಿದನೆಂದೂ ಹೇಳುತ್ತಾರೆ. ಹಾಗೆಯೇ ಈಶ್ವರನು ಕರುಣೆಯಿಂದ ಪ್ರೇರಿಸಲಾಗಿ ನಂದೀಶ್ವರನು ಆನಂದಗಿರಿಯಾಗಿ ಹುಟ್ಟಿದನೆಂದೂ ಹೇಳುತ್ತಾರೆ.

ಅಥಾವತೀರ್ಣಸ್ಯ ವಿಧೇಃ ಪುರಂಧ್ರೀ
ಸಾಭೂದ್ಯದಾಖ್ಯೋಭಯಭಾರತೀತಿ |
ಸರಸ್ವತೀ ಸಾ ಖಲು ವಸ್ತುವೃತ್ತ್ಯಾ
ಲೋಕೋಽಪಿ ತಾಂ ವಕ್ತಿ ಸರಸ್ವತೀತಿ || ೯

ಹೀಗೆ ಬ್ರಹ್ಮನು ಭೂಮಿಯಲ್ಲಿ (ವಿಶ್ವರೂಪನೆಂಬ ಹೆಸರಿನಿಂದ)ಅವತರಿಸಲಾಗಿ ಆತನ ಪತ್ನಿಯಾದ ಸರಸ್ವತಿಯು ಉಭಯಭಾರತಿ ಎಂಬ ಹೆಸರಿನಿಂದ ಅವತರಿಸಿದಳು. ವಸ್ತುತಃ

ಸರಸ್ವತಿಯೇ ಆಗಿದ್ದರೂ ಬಹು ದೊಡ್ಡ ವಿದುಷಿಯಾದ್ದರಿಂದ ಜನರು ಸರಸ್ವತಿ ಎಂದೇ ಕರೆಯುತ್ತಿದ್ದರು.

ಟಿಪ್ಪಣಿ:ಬ್ರಹ್ಮನು ಮಂಡನಮಿಶ್ರನಾಗಿ ಅವತರಿಸಿದನೆಂದೂ ಮಂಡನಮಿಶ್ರನೇ ವಿಶ್ವರೂಪನೆಂದೂ ಆತನು ಸಂನ್ಯಾಸವನ್ನು ಸ್ವೀಕರಿಸಿದ ಮೇಲೆ ಸುರೇಶ್ವರಾಚಾರ್ಯನೆಂದು ವಿಖ್ಯಾತನಾದನೆಂದೂ ಮುಂದಿನ ಕಥಾಸರಣಿಯಿಂದ ತಿಳಿದು ಬರುತ್ತದೆ. ಅಲ್ಲಲ್ಲಿ ಗ್ರಂಥಪಾತವಾಗಿದ್ದರೂ ಇರಬಹುದು.

ಪುರಾಕಿಲಾಧ್ಯೈಷತ ಧಾತುರಂತಿಕೇ
ಸರ್ವಜ್ಞಕಲ್ಪಾ ಮುನಯೋ ನಿಜಂ ನಿಜಮ್ |
ವೇದಂ ತದಾ ದುರ್ವಸನೋಽತಿಕೋಪನೋ
ವೇದಾನಧೀಯನ್ ಕ್ವಚಿದಸ್ಖಲತ್ಸ್ವರೇ || ೧೦

ಹಿಂದೆ ಒಮ್ಮೆ ಬ್ರಹ್ಮನೆದುರಿಗೆ ಸರ್ವಜ್ಞರಂತಿದ್ದ ಋಷಿಗಳು ತಮ್ಮ ತಮ್ಮ ಶಾಖೆಯ ವೇದವನ್ನು ಪಠಿಸುತ್ತಿದ್ದರು. ಆಗ ಅತಿಕೋಪಿಷ್ಠನಾದ ದುರ್ವಾಸನು ವೇದವನ್ನು ಪಠಿಸುತ್ತಾ ಒಂದುಕಡೆ ಸ್ವರದಲ್ಲಿ ತಪ್ಪು ಮಾಡಿದನು.

ತದಾ ಜಹಾಸೇಂದುಮುಖೀ ಸರಸ್ವತೀ
ಯದಂಗಮರ್ಣೋದ್ಭವ-ಶಬ್ದಸಂತತಿಃ |
ಚುಕೋಪ ತಸ್ಯೈ ದಹನಾನುಕಾರಿಣಾ
ನಿರೈಕ್ಷತಾಕ್ಷ್ಣಾ ಮುನಿರುಗ್ರಶಾಸನಃ || ೧೧

ಆಗ ಇಂದುಮುಖಿಯಾದ ಸರಸ್ವತಿಯು ನಕ್ಕಳು. ಆಗ ದುರ್ವಾಸನು ಸರಸ್ವತಿಯ ಮೇಲೆ ಕೋಪಗೊಂಡನು. ಅವಳೇನು ಸಾಮಾನ್ಯಳೇ?ವರ್ಣಜನ್ಯವಾದ ಸಕಲಶಬ್ದರಾಶಿಯೂ ಅವಳ ಅಂಗವೇ ಆಗಿದೆ. ಉಗ್ರವಾದ ಶಾಪವನ್ನು ಕೊಡಬಲ್ಲ ಆ ಋಷಿಯು ಕೆಂಗಣ್ಣಿನಿಂದ ಸರಸ್ವತೀದೇವಿಯನ್ನು ನೋಡಿದನು.

ಶಶಾಪ ತಾಂ ದುರ್ವಿನಯೇಽವನೀತಲೇ
ಜಾಯಸ್ವ ಮರ್ತ್ಯೇಷ್ವಬಿಭೇತ್ಸರಸ್ವತೀ |
ಪ್ರಸಾದಯಾಮಾಸ ನಿಸರ್ಗಕೋಪನಂ
ತತ್ಪಾದಮೂಲೇ ಪತಿತಾ ವಿಷಾದಿನೀ || ೧೨

ಆತನು,"ಎಲೌ ವಿನಯರಹಿತಳೆ, ನೀನು ಭೂಲೋಕದಲ್ಲಿ ಮಾನುಷಿಯಾಗಿ ಹುಟ್ಟು"ಎಂದು ಶಪಿಸಿದನು. ಆಗ ಭೀತಳಾದ ಸರಸ್ವತಿಯು ವಿಷಣ್ಣಳಾಗಿ ಸಹಜಕೋಪಿಷ್ಠನಾದ ಆ ಋಷಿಯ ಪಾದಮೂಲದಲ್ಲಿ ಅಡ್ಡಬಿದ್ದು ಪ್ರಸನ್ನನಾಗುವಂತೆ ಕೇಳಿಕೊಂಡಳು.

ದೃಷ್ಟ್ವಾ ವಿಷಣ್ಣಾಂ ಮುನಯಃ ಸರಸ್ವತೀಂ
ಪ್ರಸಾದಯಾಂಚಕ್ರುರಿಮಂ ತಮಾದರಾತ್ |
ಕೃತಾಪರಾಧಾಂ ಭಗವನ್ ಕ್ಷಮಸ್ವ ತಾಂ
ಪಿತೇವ ಪುತ್ರಂ ವಿಹಿತಾಗಸಂ ಮುನೇ || ೧೩

ಅಲ್ಲಿದ್ದ ಇತರ ಮುನಿಗಳು ದುಃಖಿತಳಾದ ಸರಸ್ವತಿಯನ್ನು ನೋಡಿ ಅವಳನ್ನು ಕ್ಷಮಿಸಬೇಕೆಂದು ಆದರ ಪೂರ್ವಕವಾಗಿ ದುರ್ವಾಸನನ್ನು ಪ್ರಾರ್ಥಿಸಿದರು. "ಹೇ ಭಗವನ್, ಮುನೀಶ್ವರ, ಸರಸ್ವತಿಯು ಏನೋ ತಪ್ಪು ಮಾಡಿದಳು. ತಂದೆಯು ಮಗನನ್ನು ಕ್ಷಮಿಸುವಂತೆ ಅಪರಾಧಿನಿಯಾದ ಇವಳನ್ನು ಕ್ಷಮಿಸು" ಎಂದರು. (ಪಿತೇವ ಪುತ್ರೀಂ - ಎಂದಿದ್ದರೆ ಉತ್ತಮ)

ಪ್ರಸಾದಿತೋಽಭೂದಥ ಸಂಪ್ರಸನ್ನೋ
ವಾಣ್ಯಾ ಮುನೀಂದ್ರೈರಪಿ ಶಾಪಮೋಕ್ಷಮ್ |
ದದೌ ಯದಾ ಮಾನುಷಶಂಕರಸ್ಯ
ಸಂದರ್ಶನಂ ಸ್ಯಾದ್ಭವಿತಾಸ್ಯಮರ್ತ್ಯಾ || ೧೪

ಹೀಗೆ ಮುನೀಶ್ವರರಿಂದಲೂ ಪ್ರಾರ್ಥಿತನಾದ ದುರ್ವಾಸನು ಪ್ರಸನ್ನನಾಗಿ ಶಾಪಮೋಕ್ಷವನ್ನು ಈ ಮಾತಿನಿಂದ ಹೇಳಿದನು. ಏನೆಂದರೆ "ಮನುಷ್ಯರೂಪದಿಂದ ಅವತರಿಸಿದ ಭಗವಾನ್ ಶಂಕರನ ಸಂದರ್ಶನವು ಯಾವಾಗ ನಿನಗೆ ಆಗುವುದೋ ಆಗ ನೀನು ಮತ್ತೆ ದೇವತೆಯಾಗುವೆ"ಎಂದನು.

ಸಾ ಶೋಣತೀರೇಽಜನಿ ವಿಪ್ರಕನ್ಯಾ
ಸರ್ವಾರ್ಥವಿತ್ ಸರ್ವಗುಣೋಪಪನ್ನಾ |
ಯಸ್ಯಾ ಬಭೂವುಃ ಸಹಜಾಶ್ಚ ವಿದ್ಯಾಃ
ಶಿರೋಗತಂ ಕೇ ಪರಿಹರ್ತುಮೀಶಾಃ || ೧೫

ಅನಂತರ ಸರಸ್ವತೀದೇವಿಯು ಶೋಣಾನದೀ ತೀರದಲ್ಲಿ ವಿಷ್ಣುಮಿತ್ರನೆಂಬ ಹೆಸರಿನ ವಿಪ್ರನಿಗೆ ಪುತ್ರಿಯಾಗಿ ಜನಿಸಿದಳು. ಅವಳು ಸರ್ವಜ್ಞಳೂ ಸರ್ವಗುಣ ಸಂಪನ್ನಳೂ ಆಗಿದ್ದಳು. ಋಗ್ವೇದಾದಿ ಸಮಸ್ತ ವಿದ್ಯೆಗಳು ಅವಳಲ್ಲಿ ಸಹಜವಾಗಿ ಕಾಣಿಸಿಕೊಂಡವು. ಹಣೆಬರಹವನ್ನು ತಪ್ಪಿಸಿಕೊಳ್ಳಲು ಯಾರಿಗೆ ಸಾಮರ್ಥ್ಯವುಂಟು?

ಟಿಪ್ಪಣಿ : ಈ ವಿಪ್ರನ ಹೆಸರು ವಿಷ್ಣುಮಿತ್ರನೆಂದು ಮುಂದೆ ೪೯ನೇ ಶ್ಲೋಕದಲ್ಲಿದೆ.

ಸರ್ವಾಣಿ ಶಾಸ್ತ್ರಾಣಿ ಷಡಂಗ ವೇದಾನ್
ಕಾವ್ಯಾದಿಕಾನ್ ವೇತ್ತಿ ಪರಂ ಚ ಸರ್ವಮ್ |

ತನ್ನಾಸ್ತಿ ನೋ ವೇತ್ತಿ ಯದತ್ರ ಬಾಲಾ
ತಸ್ಮಾದಭೂಚ್ಚಿತ್ರಪದಂ ಜನಾನಾಮ್ || ೧೬

ಅವಳು ಬಾಲಿಕೆಯಾಗಿದ್ದಾಗಲೇ ಸಾಂಖ್ಯಾದಿ ಸರ್ವಶಾಸ್ತ್ರಗಳನ್ನೂ ತಿಳಿದಿದ್ದಳು. ಷಡಂಗ ವೇದಗಳನ್ನು ಅರಿತಿದ್ದಳು. ಕಾವ್ಯ ಮೊದಲಾದ ಎಲ್ಲ ಕಲೆಗಳನ್ನೂ ಬಲ್ಲವಳಾಗಿದ್ದಳು. ಅವಳಿಗೆ ತಿಳಿಯದ ಯಾವುದೇ ವಿಷಯವೂ ಇರಲಿಲ್ಲ. ಇದನ್ನು ನೋಡಿ ಜನರು ಅಚ್ಚರಿಗೊಂಡರು.

ಸಾ ವಿಶ್ವರೂಪಂ ಗುಣಿನಂ ಗುಣಜ್ಞಾ
ಮನೋಭಿರಾಮಂ ದ್ವಿಜಪುಂಗವೇಭ್ಯಃ |
ಶುಶ್ರಾವ ತಾಂ ಚಾಪಿ ಸ ವಿಶ್ವರೂಪ-
ಸ್ತಸ್ಮಾತ್ ತಯೋರ್ದರ್ಶನಲಾಲಸಾಽಭೂತ್ || ೧೭

ಗುಣಜ್ಞಳಾದ ಉಭಯಭಾರತಿಯು ಮನಸ್ಸಿಗೆ ಅಭಿರಾಮನೂ ಗುಣಶಾಲಿಯೂ ಆದ ವಿಶ್ವರೂಪನ ವಿಷಯವನ್ನು ದ್ವಿಜೋತ್ತಮರಿಂದ ಕೇಳಿ ತಿಳಿದಳು. ಆ ವಿಶ್ವರೂಪನೂ ಸಹ ಅವಳ ವಿಷಯವನ್ನು ಕೇಳಿದ್ದನು. ಹೀಗಾಗಿ ಅವರಬ್ಬರಿಗೂ ಪರಸ್ಪರರನ್ನು ನೋಡಬೇಕೆಂದು ಲಾಲಸೆಯಾಯಿತು.

ಟಿಪ್ಪಣಿ:ಮಂಡನ ಮಿಶ್ರನಿಗೆ ವಿಶ್ವರೂಪನೆಂದು ಇನ್ನೊಂದು ಹೆಸರಿತ್ತು.

ಅನ್ಯೋನ್ಯಸಂದರ್ಶನಲಾಲಸೌ ತೌ
ಚಿಂತಾಗ್ರಕರ್ಷಾದಧಿಗಮ್ಯ ನಿದ್ರಾಮ್ |
ಅವಾಪ್ಯ ಸಂದರ್ಶನಭಾಷಣಾನಿ
ಪುನಃ ಪ್ರಬುದ್ಧೌ ವಿರಹಾಗ್ನಿತಪ್ತೌ || ೧೮

ಅನ್ಯೋನ್ಯವಾಗಿ ಸಂದರ್ಶನ ಮಾಡಬೇಕೆಂದು ತೀವ್ರವಾದ ಅಭಿಲಾಷೆ ಉಳ್ಳ ಅವರಿಬ್ಬರಿಗೂ ಅದೇ ಚಿಂತೆ ಅಧಿಕವಾಯಿತು. ನಿದ್ರೆ ಮಾಡಿದಾಗ ಒಬ್ಬರನ್ನೊಬ್ಬರು ನೋಡಿದಂತೆಯೂ, ಮಾತನಾಡಿದಂತೆಯೂ ಕನಸು ಬೀಳುತ್ತಿತ್ತು. ಎಚ್ಚರವಾದ ಮೇಲೆ ವಿರಹಾಗ್ನಿಯಿಂದ ಬಳಲುತ್ತಿದ್ದರು.

ದಿದೃಕ್ಷಮಾಣಾವಪಿ ನೇಕ್ಷಮಾಣಾ-
ವನ್ಯೋನ್ಯವಾರ್ತಾಹೃತಮಾನಸೌ ತೌ |
ಯಥೋಚಿತಾಹಾರ ವಿಹಾರಹೀನೌ
ತನೌ ತನುತ್ವಂ ಸ್ಮರಣಾದುಪೇತೌ || ೧೯

ಒಬ್ಬರನ್ನೊಬ್ಬರು ನೋಡಲು ಕುತೂಹಲ ಉಳ್ಳವರಾದರೂ ಅವರು ನೋಡದಾದರು. ಅನ್ಯೋನ್ಯ ವೃತ್ತಾಂತವನ್ನು ಕೇಳಿ ಮನಸ್ಸು ಅತ್ತಕಡೆಗೇ ಹೋಗುತ್ತಿತ್ತು. ಆದ್ದರಿಂದ ಆಹಾರ ವಿಹಾರಗಳನ್ನು ತೊರೆದು ಒಬ್ಬರನ್ನೊಬ್ಬರು ಸ್ಮರಿಸುತ್ತಾ ದೇಹದಲ್ಲಿ ಕೃಶರಾದರು.

ದೃಷ್ಟ್ವಾ ತದೀಯೌ ಪಿತರೌ ಕದಾಚಿ-
ದಪೃಚ್ಛತಾಂ ತೌ ಪರಿಕರ್ಶಿತಾಂಗೌ |
ವಪುಃ ಕೃಶಂ ತೇ ಮನಸೋಽಪ್ಯಗರ್ವೋ
ನ ವ್ಯಾಧಿಮೀಕ್ಷ್ಯೇ ನ ಚ ಹೇತುಮನ್ಯಮ್ || ೨೦

ಅವರಿಬ್ಬರ ತಂದೆತಾಯಿಗಳು ದೇಹದಲ್ಲಿ ಕೃಶರಾಗುತ್ತಿದ್ದ ಅವರಿಬ್ಬರನ್ನು ನೋಡಿ ಹೀಗೆ ಪ್ರಶ್ನೆ ಮಾಡಿದರು."ನಿನ್ನ ದೇಹವು ಕೃಶವಾಗುತ್ತಿದೆ. ಮನಸ್ಸಿಗೂ ಉತ್ಸಾಹವಿಲ್ಲ. ದೇಹದಲ್ಲಿ ಯಾವ ರೋಗವೂ ಕಾಣಿಸುವುದಿಲ್ಲ. ಬೇರೆ ಯಾವ ಕಾರಣವೂ ತೋರುವುದಿಲ್ಲ.

ಇಷ್ಟಸ್ಯ ಹಾನೇರನಭೀಷ್ಟಯೋಗಾದ್
ಭವಂತಿ ದುಃಖಾನಿ ಶರೀರಭಾಜಾಮ್ |
ವೀಕ್ಷ್ಯೇ ನ ತೌ ದ್ವಾವಪಿ ವೀಕ್ಷಮಾಣೋ
ವಿನಾ ನಿದಾನಂ ನ ಹಿ ಕಾರ್ಯಜನ್ಮ || ೨೧

"ಸಾಮಾನ್ಯವಾಗಿ ಜನರಿಗೆ ತಮ್ಮ ಅಭೀಷ್ಟವು ದೊರೆಯದಿದ್ದಾಗಲೂ ಅನಿಷ್ಟವಾದದ್ದು ಬಂದಾಗಲೂ ದುಃಖಗಳುಂಟಾಗುತ್ತವೆ. ಅವುಗಳಲ್ಲಿ ಯಾವ ಕಾರಣವು ಬಂದದ್ದೂ ಕಾಣುವುದಿಲ್ಲ, ಆದರೆ ಕಾರಣವಿಲ್ಲದೆ ಕಾರ್ಯವು ಹುಟ್ಟುವುದೂ ಇಲ್ಲ.

ನ ತೇಽತ್ಯಗಾದುದ್ವಹನಸ್ಯ ಕಾಲಃ
ಪರಾವಮಾನೋ ನ ಚ ನಿಃಸ್ವತಾ ವಾ |
ಕುಟುಂಬಭಾರೋ ಮಯಿ ದುಃಸಹೋಽಯಂ
ಕುಮಾರವೃತ್ತೇಸ್ತವ ಕಾಽತ್ರ ಪೀಡಾ || ೨೨

"ನಿನಗೆ ಮದುವೆಯಾಗುವ ಸಮಯವೇನೂ ಮೀರಿಲ್ಲ. ಇನ್ನೊಬ್ಬರಿಂದ ನಿನಗೆ ಅವಮಾನವೂ ಆಗಿಲ್ಲ. ಬಡತನವೂ ಇಲ್ಲ. ಕುಟುಂಬವನ್ನು ನಡೆಸುವ ಭಾರ ಕಠಿಣವಾದರೂ ನನ್ನ ಮೇಲೆಯೇ ಇದೆ. ಚಿಕ್ಕ ವಯಸ್ಸಿನ ನಿನಗೆ ಯಾವ ತೊಂದರೆಯುಂಟು?

ನ ಮೂಢಭಾವಃ ಪರಿತಾಪಹೇತುಃ
ಪರಾಜಿತಿರ್ವಾ ತವ ತನ್ನಿದಾನಮ್ |

ವಿದ್ವತ್ಸು ವಿಸ್ಪಷ್ಟತಯಾಽಗ್ರಪಾತಾತ್
ಸುದುರ್ಗಮಾರ್ಥಾದಪಿ ತರ್ಕವಿದ್ಭಿಃ || ೨೩

"ಶೋಕಕ್ಕೆ ಕಾರಣವಾದ ಮೌಢ್ಯವೂ ನಿನಗಿಲ್ಲ. ಅಥವಾ ವಿದ್ವಾಂಸರೆದುರಿಗೆ ನಿನಗೆ ಯಾವ ಸೋಲೂ ಆಗಿಲ್ಲ. ತರ್ಕ ಪಂಡಿತರೊಡನೆ ವಾದ ಮಾಡುವಾಗ ಕಠಿಣವಾದ ವಿಷಯದಲ್ಲಿ ಕೂಡಾ ನೀನು ಸ್ಪಷ್ಟವಾಗಿ ಮುಂದೆಯೇ ನಿಲ್ಲುತ್ತೀಯೆ.

ಆ ಜನ್ಮನೋ ವಿಹಿತಕರ್ಮನಿಷೇವಣಂ ತೇ
ಸ್ವಪ್ನೇಽಪಿ ನಾಸ್ತಿ ವಿಹಿತೇತರಕರ್ಮಸೇವಾ |
ತಸ್ಮಾನ್ನ ಭೇಯಮಪಿ ನಾರಕಯಾತನಾಭ್ಯಃ
ಕಿಂ ತೇ ಮುಖಂ ಪ್ರತಿದಿನಂ ಗತಶೋಭಮಾಸ್ತೇ || ೨೪

ನೀನು ಹುಟ್ಟಿದಂದಿನಿಂದ ವಿಹಿತಕರ್ಮವನ್ನು ಸರಿಯಾಗಿಯೇ ಮಾಡುತ್ತಿದ್ದೀಯೆ. ನಿಷಿದ್ಧವಾದ ಕರ್ಮವನ್ನು ಸ್ವಪ್ನದಲ್ಲಿಯೂ ನೀನು ಮಾಡುವುದಿಲ್ಲ. ಹೀಗಿರುವಾಗ ನರಕಯಾತನೆಯಾದೀತೆಂದು ನೀನು ಹೆದರಬೇಕಾದ್ದೂ ಇಲ್ಲ. ಆದರೂ ನಿನ್ನ ಮುಖವು ಪ್ರತಿದಿನವೂ ಕಾಂತಿಹೀನವಾಗುತ್ತಿದೆಯಲ್ಲಾ, ಇದೇಕೆ?"ಎಂದು ಕೇಳ ತೊಡಗಿದರು.

ನಿರ್ಬಂಧತೋ ಬಹುದಿನಂ ಪ್ರತಿಪಾದ್ಯಮಾನೌ
ವಕ್ತುಂ ಕೃಪಾಭರಯುತಾವಿದಮೂಚತುಃ ಸ್ಮ |
ನಿರ್ಬಂಧತಸ್ತವ ವದಾಮಿ ಮನೋಗತಂ ಮೇ
ವಾಚ್ಯಂ ನ ವಾಚ್ಯಮಿತಿ ಯದ್ವಿತನೋತಿ ಲಜ್ಜಾಮ್ || ೨೫

ಹೀಗೆ ಮರುಕದಿಂದ ತಂದೆ ತಾಯಿಗಳು ಬಹಳದಿನಗಳವರೆಗೆ ಕೇಳುತ್ತಿರಲಾಗಿ ಒಂದು ಸಲ ಈ ರೀತಿ ವಿಶ್ವರೂಪನು ತನ್ನ ತಂದೆತಾಯಿಯರಿಗೆ ಹೇಳಿದನು. "ನಿಮ್ಮ ನಿರ್ಬಂಧದಿಂದ ನನ್ನ ಮನಸ್ಸಿನಲ್ಲಿರುವುದನ್ನು ಹೇಳುತ್ತೇನೆ. ಅದನ್ನು ಹೇಳಬೇಕೋ ಬೇಡವೋ ಎಂದು ನನಗೆ ನಾಚಿಕೆಯಾಗುತ್ತದೆ.

ಶೋಣಾಖ್ಯಪುಂನದತಟೇ ವಸತೋ ದ್ವಿಜಸ್ಯ
ಕನ್ಯಾ ಶ್ರುತಿಂ ಗತವತೀ ದ್ವಿಜಪುಂಗವೇಭ್ಯಃ |
ಸರ್ವಜ್ಞತಾಪದಮನುತ್ತಮ ರೂಪವೇಷಾಂ
ತಾಮುದ್ವಿವಕ್ಷತಿ ಮನೋ ಭಗವನ್ಮದೀಯಮ್ || ೨೬

ಶೋಣ ಎಂಬ ನದಿಯ ತೀರದಲ್ಲಿ ವಾಸಮಾಡುತ್ತಿರುವ ಒಬ್ಬ ಬ್ರಾಹ್ಮಣನ ಮಗಳ ವಿಷಯವನ್ನು ದ್ವಿಜೋತ್ತಮರಿಂದ ನಾನು ಕೇಳಿತಿಳಿದಿದ್ದೇನೆ. ಅವಳು ಸರ್ವಜ್ಞಳೇ

ಆಗಿದ್ದಾಳೆಂದೂ ಪರಮಸುಂದರಿಯೆಂದೂ ಕೇಳಿದ್ದೇನೆ. ಪೂಜ್ಯ ತಂದೆಯೇ, ನನ್ನ ಮನಸ್ಸು ಅವಳನ್ನು ಮದುವೆಯಾಗಲು ಬಯಸುತ್ತದೆ"ಎಂದನು.

ಟಿಪ್ಪಣಿ:ಶೋಣ ಎಂಬ ಶಬ್ದವು ಪುಲ್ಲಿಂಗವಾದ್ದರಿಂದ ಅದನ್ನು 'ಪುಂನದ' ಎಂದು ಶ್ಲೋಕದಲ್ಲಿ ಹೇಳಿದೆ.

ಪುತ್ರೇಣ ಸೋಽತಿವಿನಯಂ ಗದಿತೋಽನ್ಯಶಾದ್ ದ್ವೌ
ವಿಪ್ರೌ ವಧೂವರಣಕರ್ಮಣಿ ಸಂಪ್ರವೀಣೌ |
ತಾವಾಪತುರ್ದ್ವಿಜಗೃಹಂ ದ್ವಿಜಸಂದಿದೃಕ್ಷೂ
ದೇಶಾನತೀತ್ಯ ಬಹುಲಾನ್ನಿಜಕಾರ್ಯಸಿದ್ಧ್ಯೈ || ೨೭

ಹೀಗೆ ಪುತ್ರನು ಬಹಳ ವಿನಯದಿಂದ ನುಡಿಯಲಾಗಿ ಅವನ ತಂದೆಯು ವಧುವನ್ನು ಗೊತ್ತುಮಾಡುವ ಕೆಲಸದಲ್ಲಿ ಪ್ರವೀಣರಾದ ಇಬ್ಬರು ವಿಪ್ರರನ್ನು ವಧೂ ನಿಶ್ಚಯಕ್ಕಾಗಿ ಗೊತ್ತು ಮಾಡಿದನು. ಆ ವಿಪ್ರರು ತಮ್ಮ ಕಾರ್ಯವನ್ನು ಸಾಧಿಸುವುದಕ್ಕಾಗಿ ಉಭಯಭಾರತಿಯ ತಂದೆಯಾದ ಬ್ರಾಹ್ಮಣನನ್ನು ನೋಡುವುದಕ್ಕೋಸ್ಕರ ಬಹಳ ದೇಶಗಳನ್ನು ದಾಟಿ ಆತನ ಮನೆಗೆ ಬಂದು ಸೇರಿದರು.

ಭೂಭೃನ್ನಿಕೇತನಗತಃ ಶ್ರುತವಿಶ್ವಶಾಸ್ತ್ರಃ
ಶ್ರೀವಿಶ್ವರೂಪ ಇತಿ ಯಃ ಪ್ರಥಿತಃ ಪೃಥಿವ್ಯಾಮ್ |
ತತ್ಪಾದಪದ್ಮರಜಸೇ ಸ್ಪೃಹಯಾಮಿ ನಿತ್ಯಂ
ಸಾಹಾಯ್ಯಮತ್ರ ಯದಿ ತಾತ ಭವಾನ್ ವಿದಧ್ಯಾತ್ || ೨೮

ಇತ್ತಲಾಗಿ ಉಭಯಭಾರತಿಯೂ ಸಹ ತನ್ನ ತಂದೆಯನ್ನು ಕುರಿತು "ಸಮಸ್ತ ಶಾಸ್ತ್ರಗಳನ್ನು ಬಲ್ಲವನಾದ ಶ್ರೀ ವಿಶ್ವರೂಪ ಎಂಬವನು ಈ ಪೃಥ್ವಿಯಲ್ಲಿ ವಿಖ್ಯಾತನಾಗಿದ್ದಾನೆ. ಆತನು ರಾಜಗೃಹದಲ್ಲಿ ವಾಸಮಾಡುತ್ತಿದ್ದಾನೆ. ಆತನ ಪಾದಪದ್ಮದ ಧೂಳಿಗಾಗಿ ನಾನು ಸದಾ ಆಸೆ ಪಡುತ್ತಿದ್ದೇನೆ. ಅಪ್ಪಾ, ಈ ವಿಷಯದಲ್ಲಿ ಸಹಾಯ ಮಾಡುವುದಾದರೆ ಮಾಡಬಹುದು"ಎಂದು ಹೇಳಿದಳು.

ಪುತ್ರ್ಯಾ ವಚಃ ಪಿಬತಿ ಕರ್ಣಪುಟೇನ ತಾತೇ
ಶ್ರೀವಿಶ್ವರೂಪಗುರುಣಾ ಗುರುಣಾ ದ್ವಿಜಾನಾಮ್ |
ಆಜಗ್ಮತುಃ ಸುವಸನೌ ವಿಶದಾಭಯಷ್ಟೀ
ಸಂಪ್ರೇಷಿತೌ ಸುತವರೋದ್ವಹನಕ್ರಿಯಾಯೈ || ೨೯

ಈ ರೀತಿಯಾಗಿ ಮಗಳು ಹೇಳಿದ ಮಾತನ್ನು ಅವಳ ತಂದೆಯು ಪ್ರೀತಿಯುಕ್ತನಾಗಿ ಕಿವಿಯಿಂದ ಆಲಿಸುತ್ತಿರುವಾಗ, ಬ್ರಾಹ್ಮಣರಿಗೆ ಗುರುವಾದ ಶ್ರೀ ವಿಶ್ವರೂಪನ ತಂದೆಯಿಂದ ಪ್ರೇಷಿತರಾದ

ಆ ಇಬ್ಬರು ಬ್ರಾಹ್ಮಣರು ಅಲ್ಲಿಗೆ ಬಂದರು. ಅವರು ಶುಭ್ರವಸ್ತ್ರಗಳನ್ನು ಧರಿಸಿ ಸ್ವಚ್ಛವಾದ ದಂಡಯಷ್ಟಿಗಳನ್ನು ಕೈಯಲ್ಲಿ ಹಿಡಿದು ಈ ವಿವಾಹಕಾರ್ಯವನ್ನು ನಿಶ್ಚಯಿಸುವುದಕ್ಕಾಗಿ ಬಂದಿದ್ದರು.

ತಾವಾರ್ಚ್ಯ ಸ ದ್ವಿಜವರೌ ವಿಹಿತೋಪಚಾರೈ-
ರಾಯಾನಕಾರಣಮಥೋ ಶನಕೈರಪೃಚ್ಛತ್ |
ಶ್ರೀವಿಶ್ವರೂಪಗುರುವಾಕ್ಯತ ಆಗತೌ ಸ್ವಃ
ಇತ್ಯೂಚತುರ್ವರಣಕರ್ಮಣಿ ಕನ್ಯಕಾಯಾಃ || ೩೦

ಉಭಯಭಾರತಿಯ ತಂದೆಯು ಉತ್ತಮ ಸತ್ಕಾರಗಳಿಂದ ಆ ದ್ವಿಜೋತ್ತಮರನ್ನು ಅರ್ಚಿಸಿ ಮೆಲ್ಲಮೆಲ್ಲಗೆ ಅವರ ಆಗಮನದ ಕಾರಣವನ್ನು ಕೇಳಿದನು. ಅವರು ಶ್ರೀ ವಿಶ್ವರೂಪನ ತಂದೆಯ ಮಾತಿನಂತೆ ನಿನ್ನ ಮಗಳನ್ನು ವಿವಾಹ ನಿಮಿತ್ತವಾಗಿ ಕೇಳುವುದಕ್ಕಾಗಿ ನಾವು ಬಂದಿದ್ದೇವೆ ಎಂದರು.

ಸಂಪ್ರೇಷಿತೌ ಶ್ರುತವಯಃ ಕುಲವೃತ್ತಧರ್ಮೈಃ
ಸಾಧಾರಣೀಂ ಶ್ರುತವತಾ ಸ್ವಸುತಸ್ಯ ತೇನ |
ಯಾಚಾವಹೇ ತವ ಸುತಾಂ ದ್ವಿಜ ತಸ್ಯ ಹೇತೋ -
ರನ್ಯೋನ್ಯಸಂಘಟನಮೇತು ಮಣಿದ್ವಯಂ ತತ್ || ೩೧

"ಹೇ ಬ್ರಾಹ್ಮಣೋತ್ತಮ- ವಿದ್ಯೆ, ವಯಸ್ಸು, ವಂಶ, ನಡವಳಿಕೆ, ಧರ್ಮಾಚರಣೆ- ಇವುಗಳಲ್ಲಿ ನಿನ್ನ ಮಗಳು ತನ್ನ ಮಗನಿಗೆ ಯೋಗ್ಯಳಾಗಿದ್ದಾಳೆಂದು ತಿಳಿದು ಆತನು ನಮ್ಮನ್ನು ಕಳಿಸಿದ್ದಾನೆ. ಅದಕ್ಕಾಗಿ ನಿನ್ನ ಪುತ್ರಿಯನ್ನು ಯಾಚಿಸುತ್ತಿದ್ದೇವೆ. ಈ ಎರಡು ರತ್ನಗಳು ಅನ್ಯೋನ್ಯವಾಗಿ ಸೇರಿಕೊಳ್ಳಲಿ" ಎಂದರು.

ಮಹ್ಯಂ ತದುಕ್ತಮಭಿರೋಚತ ಏವ ವಿಪ್ರೌ
ಪೃಷ್ಟ್ವಾ ವಧೂಂ ಮಮ ಪುನಃ ಕರವಾಣಿ ನಿತ್ಯಮ್ |
ಕನ್ಯಾಪ್ರದಾನಮಿದಮಾಯತತೇ ವಧೂಷು
ನೋ ಚೇದಮೂರ್ವ್ಯಸನ ಸಕ್ತಿಷು ಪೀಡಯೇಯುಃ || ೩೨

ಆಗ ಉಭಯಭಾರತಿಯ ತಂದೆಯು "ಬ್ರಾಹ್ಮಣರೆ, ಆತನು ಹೇಳಿ ಕಳಿಸಿದ ಮಾತು ನನಗೆ ಸಮ್ಮತವಾಗಿಯೇ ಇದೆ. ಆದರೂ ನನ್ನ ಪತ್ನಿಯನ್ನೊಮ್ಮೆ ಕೇಳಿ ಅವಳ ಇಷ್ಟದಂತೆ ಮಾಡುವೆನು. ಕನ್ಯಾಪ್ರದಾನವೆಂಬುದು ಸ್ತ್ರೀಯರಿಗೆ ಬಹು ಮುಖ್ಯವಾದ ವಿಷಯ. ಅವರ ಒಪ್ಪಿಗೆ ಇಲ್ಲದಿದ್ದರೆ ಮುಂದೆ ಏನಾದರೂ ಕಷ್ಟ ಒದಗಿದರೆ ನಮ್ಮನ್ನು ಪೀಡಿಸುತ್ತಾರೆ"ಎಂದನು.

ಭಾರ್ಯಾಮಪೃಚ್ಛದಥ ಕಿಂ ಕರವಾವ ಭದ್ರೇ
ವಿಪ್ರೌ ವರೀತುಮನಸೌ ಖಲು ರಾಜಗೇಹಾತ್ |
ಏತಾಂ ಸುತಾಂ ಸುತನಿಭಾ ತವ ಯಾಽಸ್ತಿ ಕನ್ಯಾ
ಬ್ರೂಹಿ ತ್ವಮೇಕಮನುಮಾಯ ಪುನರ್ನ ವಾಚ್ಯಮ್ || ೩೩

ಆಮೇಲೆ ತನ್ನ ಪತ್ನಿಯ ಬಳಿಗೆ ಹೋಗಿ "ಸೌಮ್ಯೆ, ಆ ಇಬ್ಬರು ಬ್ರಾಹ್ಮಣರು ನಿನ್ನ ಮಗಳನ್ನು ವಿವಾಹಾರ್ಥವಾಗಿ ಕೇಳಲು ರಾಜಗೃಹದಿಂದ ಬಂದಿದ್ದಾರೆ. ನೀನು ಮಗಳನ್ನು ಪ್ರೀತಿಯಿಂದ ಗಂಡು ಮಗನಂತೆ ಸಾಕಿ ಬೆಳೆಸಿದ್ದೀಯೆ. ಈಗ ನಾವು ಅದಕ್ಕೆ ಒಪ್ಪಿಕೊಳ್ಳಬೇಕೋ ಬೇಡವೋ ಎಂಬುದನ್ನು ನಿಶ್ಚಯಿಸಿ ಹೇಳು. ಮಾತುಕೊಟ್ಟಮೇಲೆ ತಿರುಗಿ ಬೇರೆ ಹೇಳಬಾರದು"ಎಂದನು.

ದೂರೇ ಸ್ಥಿತಿಃ ಶ್ರುತವಯಃ ಕುಲವೃತ್ತಜಾತಂ
ನ ಜ್ಞಾಯತೇ ತದಪಿ ಕಿಂ ಪ್ರವದಾಮಿ ತುಭ್ಯಮ್ |
ವಿತ್ತಾನ್ವಿತಾಯ ಕುಲವೃತ್ತಸಮನ್ವಿತಾಯ
ದೇಯಾ ಸುತೇತಿ ವಿದಿತಂ ಶ್ರುತಿಲೋಕಯೋಶ್ಚ || ೩೪

ಅವನ ಪತ್ನಿಯು ಇಂತೆಂದಳು: "ಅವರಿರತಕ್ಕದ್ದು ಬಹಳ ದೂರದಲ್ಲಿ. ವರನ ವಿದ್ಯೆ, ವಯಸ್ಸು, ವಂಶ, ನಡತೆ-ಇದೊಂದೂ ನಮಗೆ ಗೊತ್ತಿಲ್ಲ. ಹೀಗಿರುವಾಗ ನಾನು ಏನು ಹೇಳಲಿ?ಶ್ರೀಮಂತನೂ ಉತ್ತಮವಂಶದಲ್ಲಿ ಹುಟ್ಟಿದವನೂ ಸಚ್ಚಾರಿತ್ರನೂ ಆದ ವರನಿಗೆ ಕನ್ಯೆಯನ್ನು ಕೊಡಬೇಕೆಂದು ವೇದವು ಹೇಳುತ್ತದೆ. ಲೋಕವೂ ಹೇಳುತ್ತದೆ"ಎಂದಳು.

ನೈವಂ ನಿಯಂತುಮನಘೇ ತವ ಶಕ್ಯಮೇತತ್
ತಾಂ ರುಕ್ಮಿಣೀಂ ಯದುಕುಲಾಯ ಕುಶಸ್ಥಲೀಶೇ |
ಪ್ರಾದಾತ್ ಸ ಭೀಷ್ಮಕನೃಪಃ ಖಲು ಕುಂಡಿನೇಶ-
ಸ್ತೀರ್ಥಾಪದೇಶಮಟತೇ ತ್ವಪರೀಕ್ಷಿತಾಯ || ೩೫

ಆಗ ಬ್ರಾಹ್ಮಣನು ಪತ್ನಿಗೆ ಈ ರೀತಿ ನುಡಿದನು- "ಸೌಮ್ಯೆ, ಈ ರೀತಿ ನಿಯಮಿಸುವುದು ಸರಿಯಲ್ಲ. ಹಿಂದೆ ಕುಂಡಿನೇಶ್ವರನಾದ ಭೀಷ್ಮಕರಾಜನು ಕುಶಸ್ಥಲಿಗೆ (ದ್ವಾರಕೆಗೆ)ಪ್ರಭುವಾದ ಮತ್ತು ಯದುಕುಲದಲ್ಲಿ ಹುಟ್ಟಿದ ಶ್ರೀಕೃಷ್ಣನಿಗೆ ರುಕ್ಮಿಣಿಯನ್ನು ಕೊಟ್ಟನು. ಶ್ರೀ ಕೃಷ್ಣನಾದರೋ ತೀರ್ಥಯಾತ್ರೆಗಾಗಿ ಬಂದಿದ್ದವನು. ಅವನನ್ನು ಪರೀಕ್ಷಿಸಲೂ ಇಲ್ಲ.

ಕಿಂ ಕೇನ ಸಂಗತಮಿದಂ ಸತಿ ಮಾ ವಿಚಾರೀ-
ರ್ಯೋಽ ವೈದಿಕೀಂ ಸರಣಿಮಪ್ರಹತಾಂ ಪ್ರಯತ್ನಾತ್ |
ಪ್ರಾತಿಷ್ಠಿಪತ್ ಸುಗತದುರ್ಜಯ ನಿರ್ಜಯೇನ
ಶಿಷ್ಯಂ ಯಮೇನಮಶಿಷತ್ ಸ ಚ ಭಟ್ಟಪಾದಃ || ೩೬

ಕಿಂ ವರ್ಣ್ಯತೇ ಸುದತಿ ಯೋ ಭವಿತಾ ವರೋ ನೋ
ವಿದ್ಯಾಧನಂ ದ್ವಿಜವರಸ್ಯ ನ ಬಾಹ್ಯ ವಿತ್ತಮ್ |
ಯಾಽನ್ವೇತಿ ಸಂತತಮನಂತ ದಿಗಂತಭಾಜಂ
ಯಾಂ ರಾಜಚೋರವನಿತಾ ನ ಚ ಹರ್ತುಮೀಶಾಃ || ೩೭

"ಪತಿವ್ರತೆ, ಯಾವುದಕ್ಕೆ ಯಾವುದರ ಸಂಬಂಧವೆಂದು ಪ್ರಶ್ನಿಸಬೇಡ. ಈ ವಿಶ್ವರೂಪನೆಂಬ ವರನಾದರೋ ಭಟ್ಟಪಾದರ ಶಿಷ್ಯನಾಗಿದ್ದಾನೆ. ಭಟ್ಟಪಾದರು ದುರ್ಜಯರಾದ ಬೌದ್ಧರನ್ನು ಜಯಿಸಿ ಬಹು ಪ್ರಯತ್ನದಿಂದ ವೈದಿಕಮಾರ್ಗವನ್ನು ಪ್ರತಿಷ್ಠಾಪಿಸಿದ ಮಹಾಪುರುಷರು. ಅವರ ಶಿಷ್ಯ ಈತ. ನಮಗೆ ವರನಾಗಿ ಬರತಕ್ಕವನನ್ನು ಎಷ್ಟೆಂದು ವರ್ಣಿಸಲಿ? ದ್ವಿಜೋತ್ತಮನಿಗೆ ವಿದ್ಯೆಯೇ ಧನ. ಬಾಹ್ಯವಾದ ಹಣವಲ್ಲ. ವಿದ್ಯಾವಂತನು ದಿಗಂತಕ್ಕೆ ಹೋದರೂ ವಿದ್ಯೆಯು ಹಿಂಬಾಲಿಸಿ ಬರುತ್ತದೆ. ರಾಜನಾಗಲಿ ಕಳ್ಳನಾಗಲಿ ಹೆಂಗಸರಾಗಲಿ ಈ ವಿದ್ಯಾಧನವನ್ನು ಕಿತ್ತುಕೊಳ್ಳಲಾರರು.

ವರ್ಧ್ವರ್ಜನಾವನ ಪರಿವ್ಯಯಗಾನಿ ತಾನಿ
ವಿತ್ತಾನಿ ಚಿತ್ತಮನಿಶಂ ಪರಿಖೇದಯಂತಿ |
ಚೋರಾನ್ನೃಪಾತ್ಸ್ವಜನತಶ್ಚ ಭಯಂ ಧನಾನಾಂ
ಶರ್ಮೇತಿ ಜಾತು ನ ಗುಣಃ ಖಲು ಬಾಲಿಶಸ್ಯ || ೩೮

"ಹೇ ವಧುವೆ, ಹಣಕ್ಕೆ ಸಂಬಂಧಿಸಿದಂತೆ ಸಂಪಾದನೆ, ರಕ್ಷಣೆ, ವ್ಯಯ ಇವು ಮೂರೂ ಯಾವಾಗಲೂ ಮನಸ್ಸಿಗೆ ಕಷ್ಟವನ್ನುಂಟು ಮಾಡುತ್ತವೆ. ಹಣವಿದ್ದವರಿಗೆ ಕಳ್ಳರಿಂದ, ರಾಜರಿಂದ ಮತ್ತು ಸ್ವಜನರಿಂದ ಸಹ ಭಯವಿರುತ್ತದೆ. ಹಣದಿಂದ ಸುಖವೆಂಬುದೇ ಇಲ್ಲ. ಹಣವಿರುವುದು ಗುಣವೆಂದು ಮೂರ್ಖನು ತಿಳಿಯುತ್ತಾನೆ.

ಕೇಚಿದ್ಧನಂ ನಿದಧತೇ ಭುವಿ ನೋಪಭೋಗಂ
ಕುರ್ವಂತಿ ಲೋಭವಶಗಾ ನ ವಿದಂತಿ ಕೇಚಿತ್ |
ಅನ್ಯೇನ ಗೋಪಿತಮಥಾನ್ಯಜನಾ ಹರಂತಿ
ತಚ್ಚೇನ್ನದೀಪರಿಸರೇ ಜಲಮೇವ ಹರ್ತೃ || ೩೯

"ಕೆಲವರು ಬಹಳ ಲೋಭಿಗಳಾಗಿ ಧನವನ್ನು ಭೂಮಿಯಲ್ಲಿ ಹೂಳಿಬಿಡುತ್ತಾರೆ. ಉಪಭೋಗಿಸುವುದೇ ಇಲ್ಲ. ಇನ್ನೊಬ್ಬನು ಗುಟ್ಟಾಗಿ ಹೂತಿಟ್ಟಿದ್ದರೆ ಅವನ ಮಗನೇ ಮೊದಲಾದ ಇನ್ನೊಬ್ಬರಿಗೆ ತಿಳಿಯುವುದೇ ಇಲ್ಲ. ಕೆಲವು ಕಡೆ ಬೇರೆಜನರು ಅದನ್ನು ಅಪಹರಿಸಿ ಬಿಡುತ್ತಾರೆ. ಹೊಳೆಯ ತೀರದಲ್ಲಿ ಹೂತಿಟ್ಟರೆ ಜಲಪ್ರವಾಹವು ಅದನ್ನು ಕೊಚ್ಚಿಕೊಂಡು ಹೋಗುತ್ತದೆ.

ಸರ್ವಾತ್ಮನಾ ದುಹಿತರೋ ನ ಗೃಹೇ ವಿಧೇಯಾ-
ಸ್ತಾಶ್ಚೇತ್ಪುರಾ ಪರಿಣಯಾದ್ರಜ ಉದ್ಗತಂ ಸ್ಯಾತ್ |
ಪಶ್ಯೇಯುರಾತ್ಮಪಿತರೌ ಬತ ಪಾತಯಂತಿ
ದುಃಖೇಷು ಘೋರನರಕೇಷ್ವಿತಿ ಧರ್ಮಶಾಸ್ತ್ರಮ್ || ೪೦

"ಹೇಗಿದ್ದರೂ ಹೆಣ್ಣುಮಕ್ಕಳನ್ನು ಮನೆಯಲ್ಲಿಯೇ ಇಟ್ಟುಕೊಳ್ಳಲಾಗುವುದಿಲ್ಲ. ವಿವಾಹಕ್ಕೆ ಮೊದಲು ಒಂದುವೇಳೆ ರಜೋದರ್ಶನವಾದರೆ ತಂದೆ ತಾಯಿಗಳನ್ನು ದುಃಖದಲ್ಲಿಯೂ ಘೋರ ನರಕದಲ್ಲಿಯೂ ಬೀಳಿಸುವರೆಂದು ಧರ್ಮಶಾಸ್ತ್ರದಲ್ಲಿದೆ.

ಮಾ ಭೂದಯಂ ತವ ಮಯಾ ಕಲಹಃ ಕುಮಾರೀಂ
ಪೃಚ್ಛಾವ ಸಾ ವದತಿ ಯಂ ಭವಿತಾ ವರೋಽಸ್ಯಾಃ |
ಏವಂ ವಿಧಾಯ ಸಮಯಂ ಪಿತರೌ ಕುಮಾರ್ಯಾಃ
ಅಭ್ಯಾಶಮೀಯತುರಿತೋ ಗದಿತೇಷ್ಟಕಾರ್ಯೌ || ೪೧

ಹೋಗಲಿ, ನಮ್ಮ ಮಗಳ ವಿಷಯವಾಗಿ ಜಗಳ ಬೇಡ. ಕುಮಾರಿಯನ್ನೇ ಕೇಳಿ ಬಿಡೋಣ. ಅವಳು ಯಾರನ್ನು ಕುರಿತು ಅಪೇಕ್ಷೆಯಿಂದ ಹೇಳುತ್ತಾಳೋ ಅವನು ವರನಾಗಲಿ" ಎಂದನು. ಹೀಗೆ ಮಗಳನ್ನು ಕೇಳುವುದು ಇಷ್ಟವಾದ ಕಾರ್ಯವೆಂದು ತಂದೆತಾಯಿಗಳು ನಿಶ್ಚಯಿಸಿಕೊಂಡು ಮಗಳ ಬಳಿಗೆ ಹೋದರು.

ಶ್ರೀವಿಶ್ವರೂಪಗುರುಣಾ ಪ್ರಹಿತೌ ದ್ವಿಜಾತೀ
ಕನ್ಯಾರ್ಥಿನೌ ಸುತನು ಕಿಂ ಕರವಾವ ವಾಚ್ಯಮ್ |
ತಸ್ಯಾಃ ಪ್ರಮೋದನಿಚಯೋ ನ ಮಮೌ ಶರೀರೇ
ರೋಮಾಂಚಪೂರಮಿಷತೋ ಬಹಿರುಜ್ಜಗಾಮ || ೪೨

ಅವರಿಬ್ಬರೂ "ಮಗಳೆ, ಶ್ರೀ ವಿಶ್ವರೂಪನ ತಂದೆಯು ಹೆಣ್ಣು ಕೇಳುವುದಕ್ಕಾಗಿ ಇಬ್ಬರು ಬ್ರಾಹ್ಮಣರನ್ನು ಕಳುಹಿಸಿದ್ದಾನೆ. ಈಗ ನಾವೇನು ಮಾಡೋಣ, ಹೇಳು"ಎಂದು ಕೇಳಿದರು. ಆಗ ಉಭಯಭಾರತಿಯ ಆನಂದವು ದೇಹದಲ್ಲಿ ಹಿಡಿಸಲಾರದೆ ರೋಮಾಂಚರೂಪದಲ್ಲಿ ಹೊರಗೆ ಪ್ರಕಟವಾಯಿತು.

ತೇನೈವ ಸಾ ಪ್ರತಿವಚಃ ಪ್ರದದೌ ಪಿತೃಭ್ಯಾಂ
ತೇನೈವ ತಾವಪಿ ತಯೋರ್ಯುಗಲಾಯ ಸತ್ಯಮ್ |
ಆದಾಯ ವಿಪ್ರಮಪರಂ ಪಿತೃಗೇಹತೋಽಸ್ಯಾ -
ಸ್ತೌ ಜಗ್ಮತುರ್ದ್ವಿಜವರೌ ಸ್ವನಿಕೇತನಾಯ || ೪೩

ಈ ರೋಮಾಂಚವೇ ತಾಯಿತಂದೆಗಳಿಗೆ ಉತ್ತರ ಹೇಳಿತು. ಆ ರೋಮಾಂಚದ ಉತ್ತರದಿಂದಲೇ (ಮಗಳ ಅಭಿಪ್ರಾಯವನ್ನು ತಿಳಿದು)ಅವರಿಬ್ಬರೂ ಆ ಬ್ರಾಹ್ಮಣರಿಗೆ ಸತ್ಯವಾದದ್ದನ್ನು ಹೇಳಿದರು. ಅನಂತರ ಕನ್ಯಾಪಿತೃವಿನ ಮನೆಯ ಕಡೆಯಿಂದ ಒಬ್ಬ ವಿಪ್ರನನ್ನು ಜೊತೆಗೆ ಕರೆದುಕೊಂಡು ಆ ಇಬ್ಬರು ವಿಪ್ರರು ತಮ್ಮ ಊರಿಗೆ ಹೊರಡಲು ಸಜ್ಜಾದರು.

ಅಸ್ಮಾಚ್ಚತುರ್ದಶದಿನೇ ಭವಿತಾ ದಶಮ್ಯಾಂ
ಜಾಮಿತ್ರಭಾದಿಶುಭಯೋಗಯುತೋ ಮುಹೂರ್ತಃ |
ಏವಂ ವಿಲಿಖ್ಯ ಗಣಿತಾದಿಷು ಕೌಶಲಾಸ್ಯಾ
ವ್ಯಾಖ್ಯಾಪರಾಯ ದಿಶತಿ ಸ್ಮ ಸರಸ್ವತೀ ಸಾ || ೪೪

"ಆಗ ಜ್ಯೌತಿಷ ಗಣಿತಾದಿ ವಿದ್ಯೆಗಳಲ್ಲಿ ಪಾರಂಗತಳಾದ ಆ ಉಭಯಭಾರತಿಯು ಇಂದಿನ ಹದಿನಾಲ್ಕನೆಯ ದಿನ ದಶಮೀ ತಿಥಿಯಲ್ಲಿ ಮುಹೂರ್ತವಿದೆ. ಈ ಮುಹೂರ್ತದ ಏಳನೆಯ ಸ್ಥಾನವು ಶುದ್ಧವಾಗಿದೆ. ಈ ಮುಹೂರ್ತವು ಶುಭನಕ್ಷತ್ರದಿಂದ ಕೂಡಿಯೂ ಇದೆ"ಎಂದು ಪತ್ರ ಬರೆಯುವವನಿಗೆ ತಿಳಿಸಿದಳು.

ತೌ ಹೃಷ್ಟಪುಷ್ಟಮನಸೌ ವಿಹಿತೇಷ್ಟಕಾರ್ಯೌ
ಶ್ರೀ ವಿಶ್ವರೂಪಗುರುಮುತ್ತಮಮೈಕ್ಷಿಷಾತಾಮ್ |
ಸಿದ್ಧಂ ಸಮೀಹಿತಮಿತಿ ಪ್ರಥಿತಾನುಭಾವೋ
ದೃಷ್ಟ್ವೈವ ತನ್ಮುಖಮಸಾವಥ ನಿಶ್ಚಿಕಾಯ || ೪೫

ಅನಂತರ ಆ ಬ್ರಾಹ್ಮಣರಿಬ್ಬರಿಗೂ ತಮ್ಮ ಇಷ್ಟಕಾರ್ಯವು ಸಿದ್ಧಿಸಿತೆಂದು ಹರ್ಷವಾಯಿತು. ಅವರು ಸಂತೋಷಭರಿತರಾಗಿ ಬಂದು ಶ್ರೀ ವಿಶ್ವರೂಪನ ತಂದೆಯನ್ನು ಕಂಡರು. ಆ ಮಹಾತ್ಮನು ಅವರ ಮುಖಚರ್ಯೆಯಿಂದಲೇ ತಮ್ಮ ಇಷ್ಟವು ಸಿದ್ಧಿಸಿತೆಂದು ನಿಶ್ಚಯಿಸಿ ಬಿಟ್ಟನು.

ಅನ್ಯಃ ಸ್ವಹಸ್ತಗತ ಪತ್ರಮದಾತ್ಸ ಪತ್ರಂ
ದೃಷ್ಟ್ವಾ ಜಹಾಸ ಸುಖವಾರಿನಿಧೌ ಮಮಜ್ಜ |
ವಿಪ್ರಾನ್ಯಥೋಚಿತ ಮಪೂಜಯದಾಗತಾಂಸ್ತಾ -
ನ್ನತ್ಯಾಂಶುಕಾದಿಭಿರಯಂ ಬಹುವಿತ್ತಲಭ್ಯೈಃ || ೪೬

ಅವರೊಡನೆ ಬಂದಿದ್ದ ಇನ್ನೊಬ್ಬ ವಿಪ್ರನು ತನ್ನ ಕೈಯಲ್ಲಿದ್ದ ಪತ್ರವನ್ನು ವಿಶ್ವರೂಪನ ತಂದೆಗೆ ಕೊಡಲಾಗಿ, ಅವನು ನಗುತ್ತಾ ಆನಂದ ಸಮುದ್ರದಲ್ಲಿ ಮುಳುಗಿದನು. ಆ ಮೇಲೆ ಮನೆಗೆ ಬಂದ ಆ ಮೂವರು ಬ್ರಾಹ್ಮಣರಿಗೂ ಬಹಳ ಬೆಲೆ ಬಾಳುವ ವಸ್ತ್ರಗಳನ್ನು ಕೊಟ್ಟು ನಮಸ್ಕರಿಸಿ ಸತ್ಕರಿಸಿದನು.

ಪಿತ್ರಾನುಶಿಷ್ಟವಸುಧಾಸುರಶಂಸಿತೇನ
ವಿಜ್ಞಾಪಿತಃ ಸುಖಮವಾಪ ಸ ವಿಶ್ವರೂಪಃ |
ಕಾರ್ಯಾಣ್ಯಥಾಽಹ ಪೃಥಗಾತ್ಮಜನಾನ್ ಸಮೇತಾನ್
ಬಂಧುಪ್ರಿಯಃ ಪರಿಣಯೋಚಿತಸಾಧನಾಯ || ೪೭

ಅನಂತರ ತಂದೆಯ ಮಾತಿನಂತೆ ಆ ವಿಪ್ರರು ವಿವಾಹದ ಸಂಗತಿಯನ್ನು ವಿಶ್ವರೂಪನಿಗೆ ತಿಳಿಸಲಾಗಿ ಅವನಿಗೆ ಸಂತೋಷವಾಯಿತು. ಆ ಮೇಲೆ ಮನೆಗೆ ಬಂದ ತನ್ನ ಕಡೆಯವರಿಗೆಲ್ಲಾ ಬಂಧುಪ್ರಿಯನಾದ ಆ ತಂದೆಯು ವಿವಾಹಕ್ಕೆ ಬೇಕಾದ ವಸ್ತುಗಳನ್ನು ಸಿದ್ಧಪಡಿಸುವುದಕ್ಕಾಗಿ ಬೇರೆ ಬೇರೆ ಕಾರ್ಯಗಳನ್ನು ತಿಳಿಸಿದನು.

ಮೌಹೂರ್ತಿಕೈರ್ಬಹುಭಿರೇತ್ಯ ಮುಹೂರ್ತಕಾಲೇ
ಸಂದರ್ಶಿತೇ ದ್ವಿಜವರೈರ್ಬಹುವಿದ್ಭಿರಿಷ್ಟೈಃ |
ಮಾಂಗಲ್ಯವಸ್ತು ಸಹಿತೋಽಖಿಲಭೂಷಣಾಢ್ಯಃ
ಸ ಪ್ರಾಪದಕ್ಷತತನುಃ ಪೃಥುಶೋಣತೀರಮ್ || ೪೮

ಜ್ಯೋತಿಃಶಾಸ್ತ್ರಜ್ಞರಾದ ಅನೇಕರು ಬಂದು ಪ್ರಯಾಣ ಮುಹೂರ್ತವನ್ನು ತಿಳಿಸಿಕೊಡಲಾಗಿ ವಿಶ್ವರೂಪನ ತಂದೆಯು ಬ್ರಾಹ್ಮಣರೊಡನೆಯೂ ಬಂಧು ಬಾಂಧವರೊಡನೆಯೂ ಮಾಂಗಲ್ಯ ವಸ್ತುಗಳನ್ನು ತೆಗೆದು ಕೊಂಡು ಸಕಲಭೂಷಣಗಳಿಂದಲೂ ಸಮೇತವಾಗಿ ಶುಭಮುಹೂರ್ತದಲ್ಲಿ ಪ್ರಯಾಣಮಾಡಿದನು. ಮತ್ತು ಶೋಣನದಿಯ ತೀರಕ್ಕೆ ಕ್ಷೇಮವಾಗಿ ಬಂದನು.

ಶೋಣಸ್ಯ ತೀರಮುಪಯಾತ ಮುಪಾಶೃಣೋತ್ ಸ
ಜಾಮಾತರಂ ಬಹುವಿಧಂ ಕಿಲ ವಿಷ್ಣುಮಿತ್ರಃ |
ಪ್ರತ್ಯುಜ್ಜಗಾಮ ಮುಮುದೇ ಪ್ರಿಯದರ್ಶನೇನ
ಪ್ರಾವೀವಿಶದ್ ಗೃಹಮಮುಂ ಬಹುವಾದ್ಯಘೋಷೈಃ || ೪೯

ಆಗ ಕನ್ಯಾಪಿತೃವಾದ ವಿಷ್ಣುಮಿತ್ರನಿಗೆ ಬೀಗರೆಲ್ಲರೂ ಶೋಣಾನದಿಯ ತೀರಕ್ಕೆ ಬಂದಿದ್ದಾರೆಂದು ಗೊತ್ತಾಯಿತು. ಅಲ್ಲದೆ ತನ್ನ ಅಳಿಯನು ಬಹು ವಿಧದಲ್ಲಿ ಶ್ರೇಷ್ಠನೆಂಬ ಮಾತನ್ನೂ ಕೇಳಿದನು. ಅನಂತರ ಅವರೆಲ್ಲರನ್ನೂ ಸ್ವಾಗತಿಸುವುದಕ್ಕಾಗಿ ಹೋದನಲ್ಲದೆ ಎಲ್ಲವೂ ಪ್ರಿಯವಾಗಿರುವುದನ್ನು ಕಂಡು ಸಂತೋಷಪಟ್ಟನು. ನಾನಾ ಬಗೆಯ ವಾದ್ಯ ಘೋಷಗಳಿಂದ ವರನನ್ನು ತನ್ನ ಮನೆಗೆ ಕರೆದು ಕೊಂಡು ಬಂದನು.

ದತ್ವಾ ಽಽಸನಂ ಮೃದುವಚಃ ಸಮುದೀರ್ಯ ತಸ್ಮೈ
ಪಾದ್ಯಂ ದದೌ ಸಮಧುಪರ್ಕಮನರ್ಘ್ಯಪಾತ್ರೇ |

ಅರ್ಘ್ಯಂ ದದಾವಹಮಿಯಂ ತನಯಾ ಗೃಹಾಸ್ತೇ
ಗಾವೋ ಹಿರಣ್ಯಮಖಿಲಂ ಭವದೀಯಮೂಚೇ || ೫೦

ವಿಷ್ಣುಮಿತ್ರನು ವಿಶ್ವರೂಪನಿಗೆ ಕುಳಿತುಕೊಳ್ಳಲು ಪೀಠವನ್ನಿತ್ತು, ಮೃದುವಾದ ಮಾತನ್ನಾಡುತ್ತ, ಪಾದ್ಯವನ್ನೂ ಅರ್ಘ್ಯಪಾತ್ರದಲ್ಲಿ ಅರ್ಘ್ಯವನ್ನು ಕೊಟ್ಟು ಮಧುಪರ್ಕವನ್ನಿತ್ತು ಸತ್ಕರಿಸಿದನು. ಅನಂತರ "ಇದೋ ನಾನು, ನನ್ನ ಮಗಳು, ಈ ಮನೆ, ಹಸುಗಳು, ಧನ-ಸಮಸ್ತವೂ ನಿಮ್ಮದು" ಎಂದನು.

ಅಸ್ಮಾಕಮದ್ಯ ಪವಿತಂ ಕುಲಮಾದೃತಾಃ ಸ್ಮಃ
ಸಂದರ್ಶನಂ ಪರಿಣಯವ್ಯಪದೇಶತೋಽಭೂತ್ |
ನೋ ಚೇದ್ಭವಾನ್ಬಹುವಿದಗ್ರಸರಃ ಕ್ವ ಚಾಹಂ
ಭದ್ರೇಣ ಭದ್ರಮುಪಯಾತಿ ಪುಮಾನ್ವಿಪಾಕಾತ್ || ೫೧

"ಇಂದು ನಮ್ಮ ವಂಶವು ಪವಿತ್ರವಾಯಿತು. ನಮ್ಮನ್ನು ಆದರಿಸಿದಿರಿ. ವಿವಾಹದ ನೆವದಿಂದ ನಿಮ್ಮೆಲ್ಲರ ದರ್ಶನವಾಯಿತು. ಇಲ್ಲದಿದ್ದರೆ ಪಂಡಿತೋತ್ತಮರಾದ ನೀವೆಲ್ಲಿ?ನಾನೆಲ್ಲಿ? ಮನುಷ್ಯನಿಗೆ ಪುಣ್ಯಕರ್ಮವು ಫಲಿಸಿದಾಗ ಅದರಿಂದ ಕಲ್ಯಾಣವಾಗುತ್ತದೆ.

ಯದ್ಯದ್ಗೃಹೇಽತ್ರ ಭಗವನ್ನಿಹ ರೋಚತೇ ತೇ
ತತ್ತನ್ನಿವೇದ್ಯಮಖಿಲಂ ಭವದೀಯಮೇತತ್ |
ವಕ್ಷ್ಯಾಮಿ ಸರ್ವಮಭಿಲಾಷಪದಂ ತ್ವದೀಯಂ
ಯುಕ್ತಂ ಹಿ ಸಂತತಮುಪಾಸಿತವೃದ್ಧಪೂಗೇ || ೫೨

ಪೂಜ್ಯರೆ, ಈ ಭವನದಲ್ಲಿ ಯಾವಯಾವುದು ನಿಮಗೆ ಪ್ರಿಯವೆನಿಸುತ್ತದೆಯೋ ಅದನ್ನು ತಿಳಿಸಬೇಕು. ಎಲ್ಲವೂ ನಿಮ್ಮದೇ. ನಿಮಗೆ ಬೇಕೆನಿಸಿದ್ದೆಲ್ಲವೂ ನಿಮ್ಮದೇ ಎಂದು ನಾನು ಹೇಳುವೆನು. ಹಿರಿಯರ ಸೇವೆಮಾಡಿದವರಾದ ನಿಮಗೆ ಇದು ಸಮುಚಿತವಾದದ್ದು"ಎಂದನು.

ಏವಂ ಮಿಥಃ ಪರಿನಿಗದ್ಯ ವಿಶೇಷಮೃದ್ವ್ಯಾ
ವಾಚಾ ಯುತಾ ಮುದಮವಾಪತುರುತ್ತಮಾಂ ತೌ |
ಅನ್ಯೇ ಚ ಸಂಮುಮುದಿರೇ ಪ್ರಿಯಸತ್ಕಥಾಭಿಃ
ಸ್ವೇಚ್ಛಾವಿಹಾರಹಸನೈರುಭಯೇ ವಿಧೇಯಾಃ || ೫೩

ಹೀಗೆ ವಿಷ್ಣುಮಿತ್ರನೂ ವಿಶ್ವರೂಪನೂ ಪರಸ್ಪರ ಸಂಭಾಷಿಸಿ ಇಬ್ಬರೂ ಬಹಳ ಸಂತೋಷಪಟ್ಟರು. ಉಳಿದವರೆಲ್ಲರೂ ಸಹ ಪ್ರಿಯವಾದ ಸಂಲಾಪಗಳನ್ನಾಡುತ್ತ, ಇಷ್ಟಬಂದಂತೆ ತಿರುಗಾಡುತ್ತ ನಗುತ್ತ ವಿನಯಶೀಲರಾಗಿ ಆನಂದಿಸಿದರು.

ಕನ್ಯಾವರೌ ಪ್ರಕೃತಿಸಿದ್ಧಸುರೂಪವೇಷೌ
ದೃಷ್ಟ್ವೋಭಯೇಽಪಿ ಪರಿಕರ್ಮ ವಿಲಂಬಮಾನಾಃ |
ಚಕ್ರುರ್ವಿಧೇಯಮಿತಿ ಕರ್ತುಮನೀಶ್ವರಾಸ್ತೇ
ಶೋಭಾವಿಶೇಷಮಪಿ ಮಂಗಲವಾಸರೇಽಸ್ಮಿನ್ || ೫೪

ವಧೂವರರು ಸಹಜವಾಗಿಯೇ ಅತ್ಯಂತಸುಂದರರಾದ್ದರಿಂದ ಮತ್ತೆ ಅವರನ್ನು ಅಲಂಕರಿಸಲು ಹೆಚ್ಚು ಮನಸ್ಸಿಲ್ಲದೆ ಎರಡು ಕಡೆಯವರೂ ತಡಮಾಡಿದರು! ಆದರೂ ಮಂಗಳೋತ್ಸವ ಸಮಯದಲ್ಲಿ ಅವರನ್ನು ಅಲಂಕರಿಸುವುದು ಕರ್ತವ್ಯವೆಂದು ತಿಳಿದು ಬೇರೆದಾರಿಯಿಲ್ಲದೆ ವಿಶೇಷ ಶೋಭೆಯನ್ನುಂಟುಮಾಡುವ ವಸ್ತ್ರಭೂಷಣಾದಿಗಳಿಂದ ವಧೂವರರನ್ನು ಸಿಂಗರಿಸಿದರು.

ಏತತ್ಪ್ರಭಾ ಪ್ರತಿಹತಾತ್ಮ ವಿಭೂತಿಭಾವಾ-
ದಾಕಲ್ಪಜಾತಮಪಿ ನಾತಿಶಯಂ ವಿತೇನೇ |
ಲೋಕಪ್ರಸಿದ್ಧಿಮನುಸೃತ್ಯ ವಿಧೇಯ ಬುದ್ಧ್ಯಾ
ಭೂಷಾಂ ವ್ಯಧುಸ್ತದುಭಯೇ ನ ವಿಶೇಷಬುದ್ಧ್ಯಾ || ೫೫

ಆದರೆ ವಧೂವರರ ಸೌಂದರ್ಯತೇಜಸ್ಸುಗಳಿಂದಲೇ ಒಡವೆಗಳ ಕಾಂತಿಯು ಮಾಸಿಹೋದಂತಾಯಿತು. ಅದು ಅವರಿಗೆ ಶೋಭಾತಿಶಯವನ್ನೀಯಲು ಸಮರ್ಥವಾಗಲಿಲ್ಲ!ಆ ಸಮಯದಲ್ಲಿ ಹೆಚ್ಚಿನ ವಸ್ತ್ರಾಲಂಕಾರಗಳನ್ನು ಮಾಡಿಕೊಳ್ಳುವುದು ಲೋಕಪ್ರಸಿದ್ಧವಾಗಿದೆಯೆಂದು ಅವರಿಬ್ಬರೂ ಅಲಂಕೃತರಾದರೇ ಹೊರತು ವಿಶೇಷ ಬುದ್ಧಿಯಿಂದಲ್ಲ.

ಮೌಹೂರ್ತಿಕಾ ಬಹುವಿದೋಽಪಿ ಮುಹೂರ್ತಕಾಲ
ಮಪ್ರಾಕ್ಷುರಕ್ಷತಧಿಯಂ ಖಿಲತೀಂ ಸಖೀಭಿಃ |
ಪಶ್ಚಾತ್ತದುಕ್ತಶುಭಯೋಗಯುತೇ ಶುಭಾಂಶೇ
ಮೌಹೂರ್ತಿಕಾಃ ಸ್ವಮತಿತೋ ಜಗೃಹುರ್ಮುಹೂರ್ತಮ್ || ೫೬

ಮುಹೂರ್ತಜ್ಞರಾದ ಜ್ಯೌತಿಷಿಗಳು ದೊಡ್ಡವಿದ್ವಾಂಸರಾಗಿದ್ದರೂ ಸಹ, ಗೆಳತಿಯರೊಡನೆ ಕ್ರೀಡಿಸುತ್ತಿದ್ದ ಮಹಾಪ್ರಾಜ್ಞಳಾದ ಉಭಯಭಾರತಿಯನ್ನು ಕಂಡು ಸರಿಯಾದ ಮುಹೂರ್ತವೇನೆಂದು ಕೇಳಿದರು!ಆಗ ಅವಳು ಹೇಳಿದ ಶುಭಗ್ರಹಯುಕ್ತವಾದ ಶುಭನವಾಂಶದಲ್ಲಿ ಸರಿಯಾದ ಮುಹೂರ್ತವಿದೆಯೆಂದು ತಮ್ಮ ಬುದ್ಧಿಯಿಂದಲೂ ಕಂಡುಕೊಂಡರು.

ಟಿಪ್ಪಣಿ: 'ಖಿಲತೀಂ'ಎಂಬಲ್ಲಿ ತುದಾದಿಯಾದ 'ಖಿಲ'ಧಾತುವೆಂದು ಟಿಪ್ಪಣೀಕಾರರು ಬರೆದಿದ್ದಾರೆ. ಆದರೆ 'ಕಿಲ- ಶ್ವೈತ್ಯಕ್ರೀಡನಯೋಃ'ಎಂದು ಅಲ್ಪಪ್ರಾಣವುಳ್ಳ ಧಾತು ತುದಾದಿಯಲ್ಲಿ ಕಂಡು ಬರುತ್ತದೆ. 'ಕಿಲತೀಂ'ಎಂಬುದು ಶುದ್ಧಪಾಠವಾಗುತ್ತದೆ. 'ಕಿಲ ತಾಂ'ಎಂದು ಪಾಠಾಂತರವಿದೆ.

ಜಗ್ರಾಹ ಪಾಣಿಕಮಲಂ ಹಿಮಮಿತ್ರ ಸೂನುಃ
ಶ್ರೀವಿಷ್ಣುಮಿತ್ರದುಹಿತುಃ ಕರಪಲ್ಲವೇನ |
ಭೇರೀ ಮೃದಂಗ ಪಟಹಾದ್ಯಯನಾಬ್ಜ ಘೋಷೈ -
ರ್ದಿಙ್ಮಂಡಲೇ ಸುಪರಿಮೂರ್ಛತಿ ದಿವ್ಯಕಾಲೇ || ೫೭

ಅನಂತರ ಶುಭಮುಹೂರ್ತದಲ್ಲಿ ಭೇರಿ, ಮೃದಂಗ, ತಮಟೆ, ಶಂಖಗಳ ಧ್ವನಿಯೂ ವೇದಘೋಷವೂ ದಿಗಂತವನ್ನು ವ್ಯಾಪಿಸುತ್ತಿರಲು, ಹಿಮಮಿತ್ರನ ಪುತ್ರನಾದ ವಿಶ್ವರೂಪನು ಚಿಗುರಿನಂತೆ ಕೋಮಲವಾದ ತನ್ನ ಪಾಣಿಯಿಂದ, ವಿಷ್ಣುಮಿತ್ರನ ಪುತ್ರಿಯಾದ ಉಭಯಭಾರತಿಯ ಕರಕಮಲವನ್ನು ಹಿಡಿದನು.

ಟಿಪ್ಪಣಿ:ವಿಶ್ವರೂಪನ ತಂದೆಯ ಹೆಸರು ಹಿಮಮಿತ್ರನೆಂದು ಈ ಶ್ಲೋಕದಿಂದ ತಿಳಿದು ಬರುತ್ತದೆ.

ಯಂ ಯಂ ಪದಾರ್ಥಮಭಿಕಾಮಯತೇ ಪುಮಾನ್ಯ-
ಸ್ತಂ ತಂ ಪ್ರದಾಯ ಸಮತೂತುಷತಾಂ ತದೀಡ್ಯೌ|
ದೇವದ್ರುಮಾವಿವ ಮಹಾಸುಮನಸ್ತ್ವಯುಕ್ತೌ
ಸಂಭೂಷಿತೌ ಸದಸಿ ಚೇರತುರಾತ್ಮಲಾಭೌ || ೫೮

ಆ ವಧೂವರರಿಗೆ ಪೂಜ್ಯರಾದ ವಿಷ್ಣುಮಿತ್ರ ಹಿಮಮಿತ್ರರಿಬ್ಬರೂ ತಮ್ಮ ಇಷ್ಟಾರ್ಥವು ಫಲಿಸಿತೆಂದು, ಅಲ್ಲಿದ್ದ ಯಾವಾತನು ಏನನ್ನು ಬಯಸುತ್ತಾನೋ ಅದನ್ನು ಆತನಿಗೆ ಕೊಟ್ಟು ಸಂತೋಷಪಡಿಸುತ್ತಿದ್ದರು. ಮಹಾಸುಮನಸ್ತ್ವದಿಂದ-ಎಂದರೆ-ಬಹಳ ಸಂತುಷ್ಟವಾದ ಚಿತ್ತದಿಂದ ಕೂಡಿ ಅಲಂಕೃತರಾಗಿದ್ದ ಅವರಿಬ್ಬರೂ, ಮಹಾಸುಮನಸ್ತ್ವದಿಂದ -ಎಂದರೆ-ಬಹಳ ಹೂಗಳಿಂದ ಕೂಡಿದ ಕಲ್ಪವೃಕ್ಷಗಳಂತೆ ವಿವಾಹಸಭೆಯಲ್ಲಿ ಸಂಚರಿಸುತ್ತಿದ್ದರು.

ಆಧಾಯ ವಹ್ನಿಮಥ ತತ್ರ ಜುಹಾವ ಸಮ್ಯಕ್
ಗೃಹ್ಯೋಕ್ತಮಾರ್ಗಮನುಸೃತ್ಯ ಸ ವಿಶ್ವರೂಪಃ |
ಲಾಜಾನ್‌ಜುಹಾವ ಚ ವಧೂಃ ಪರಿಜಿಘ್ರತಿ ಸ್ಮ
ಧೂಮಂ ಪ್ರದಕ್ಷಿಣಮಥಾಕೃತ ಸೋಽಪಿ ಚಾಗ್ನಿಮ್ || ೫೯

ಆಮೇಲೆ ವಿಶ್ವರೂಪನು ಗೃಹ್ಯೋಕ್ತವಿಧಿಯಂತೆ ಅಗ್ನಿಯನ್ನು ಪ್ರತಿಷ್ಠಾಪಿಸಿ ಹೋಮಮಾಡಿದನು. ವಧುವಾದ ಉಭಯಭಾರತಿಯು ಲಾಜಗಳನ್ನು ಅಗ್ನಿಯಲ್ಲಿ ಹವನ

ಮಾಡಿ ಧೂಮವನ್ನಾಘ್ರಾಣಿಸಿದಳು. ವಿಶ್ವರೂಪನು ಪತ್ನಿಯೊಡನೆ ಅಗ್ನಿಗೆ ಪ್ರದಕ್ಷಿಣೆಮಾಡಿ ನಮಸ್ಕರಿಸಿದನು.

ಹೋಮಾವಸಾನ ಪರಿತೋಷಿತ ವಿಪ್ರವರ್ಯಃ
ಪ್ರಸ್ಥಾಪಿತಾಖಿಲ ಸಮಾಗತ ಬಂಧುವರ್ಗಃ |
ಸಂರಕ್ಷ್ಯ ವಹ್ನಿಮನಯಾ ಸಮಮಗ್ನಿಗೇಹೇ
ದೀಕ್ಷಾಧರೋ ದಿನಚತುಷ್ಕಮುವಾಸ ಹೃಷ್ಟಃ || ೬೦

ಅನಂತರ ವಿಶ್ವರೂಪನು ಹೋಮ ವಿಧಿಯನ್ನು ಮುಗಿಸಿ ವಿಪ್ರೋತ್ತಮರಿಗೆ ದಕ್ಷಿಣೆಯನ್ನಿತ್ತು ಸಂತೋಷಪಡಿಸಿದನು. ಹೀಗೆ ವಿವಾಹಕಾರ್ಯವು ಮುಗಿದ ಮೇಲೆ ತನ್ನ ಕಡೆಯ ಬಂಧುವರ್ಗದವರನ್ನು ತಮ್ಮ ಊರುಗಳಿಗೆ ಕಳಿಸಿಕೊಟ್ಟು, ಅಗ್ನಿಗೃಹದಲ್ಲಿ ಗೃಹ್ಯಾಗ್ನಿಯನ್ನು ಕಾಪಾಡಿಕೊಳ್ಳುತ್ತ ದೀಕ್ಷೆಯನ್ನು ವಹಿಸಿ ವಧುವಿನೊಡನೆ ಸಂತೋಷದಿಂದ ನಾಲ್ಕುದಿನಗಳನ್ನು ಕಳೆದನು.

ಪ್ರತಿಷ್ಠಮಾನೇ ದಯಿತೇ ವರೇಽಸ್ಮಿನ್
ಉಪೇತ್ಯ ಮಾತಾಪಿತರೌ ವರಾಯಾಃ |
ಆಭಾಷಿಷಾತಾಂ ಶೃಣು ಸಾವಧಾನೋ
ಬಾಲೇವ ಬಾಲಾ ನ ತು ವೇತ್ತಿ ಕಿಂಚಿತ್ || ೬೧

ಈ ರೀತಿ ವಿಧಿಗಳೆಲ್ಲವೂ ಮುಗಿದಮೇಲೆ ವರನಾದ ವಿಶ್ವರೂಪನು (ಪತ್ನಿಯೊಡನೆ) ತನ್ನ ಮನೆಗೆ ಹೊರಡಲು ಸಿದ್ಧನಾದನು. ಆಗ ಉಭಯಭಾರತಿಯ ತಾಯಿತಂದೆಗಳು ಅಳಿಯನನ್ನು ಕುರಿತು ಹೀಗೆಂದರು: "ವಿಶ್ವರೂಪ, ಸಾವಧಾನನಾಗಿ ಕೇಳು. ಈ ಹುಡುಗಿಯು ಚಿಕ್ಕಬಾಲಿಕೆಯಂತೆಯೇ ಇದ್ದಾಳೆ. ಏನನ್ನೂ ಅರಿಯದವಳು!

ಬಾಲೈರಿಯಂ ಕ್ರೀಡತಿ ಕಂದುಕಾದ್ಯೈಃ
ಜಾತಕ್ಷುಧಾ ಗೇಹಮುಪೈತಿ ದುಃಖಾತ್ |
ಏಕೇತಿ ಬಾಲಾ ಗೃಹಕರ್ಮ ನೋಕ್ತಾ
ಸಂರಕ್ಷಣೀಯಾ ನಿಜಪುತ್ರಿತುಲ್ಯಾ || ೬೨

"ಇವಳು ಚಿಕ್ಕಹುಡುಗರೊಂದಿಗೆ ಚೆಂಡು ಮೊದಲಾದ್ದರಿಂದ ಆಡುತ್ತ ಇರುತ್ತಾಳೆ. ಹಸಿವಾದಾಗ ಬಳಲುತ್ತ ಮನೆಗೆ ಬರುತ್ತಾಳೆ. ಇವಳು ಒಬ್ಬಳೇ ನಮಗೆ ಮಗಳೆಂದು ಲಾಲಿಸಿದೆವು. ಮನೆಗೆಲಸವನ್ನು ಕಲಿಸಲಿಲ್ಲ. ಆಧ್ದರಿಂದ ನಿಮ್ಮ ಮಗಳನ್ನು ನೋಡಿಕೊಳ್ಳುವಂತೆ ಇವಳನ್ನು ನೋಡಿಕೊಳ್ಳಬೇಕು.

ಬಾಲೇಯಮಂಗ ವಚನೈರ್ಮೃದುಭಿರ್ವಿಧೇಯಾ
ಕಾರ್ಯಾ ನ ರೂಕ್ಷವಚನೈರ್ನ ಕರೋತಿ ರುಷ್ಟಾ |
ಕೇಚಿನ್ಮೃದೂಕ್ತಿವಶಗಾ ವಿಪರೀತ ಭಾವಾಃ
ಕೇಚಿದ್ವಿಹಾತುಮನಲಂ ಪ್ರಕೃತಿಂ ಜನೋ ಹಿ || ೬೩

"ಅಪ್ಪಾ ವಿಶ್ವರೂಪ, ಈ ಬಾಲೆಯನ್ನು ಮೃದುವಾದ ಮಾತುಗಳಿಂದ ಗೃಹಕೃತ್ಯಗಳಲ್ಲಿ ತೊಡಗಿಸಬಹುದು. ಕಟುವಾದ ಮಾತುಗಳನ್ನು ಇವಳಿಗೆ ಹೇಳಬಾರದು. ಆಗ ಸಿಟ್ಟುಬಂದು ಏನನ್ನೂ ಮಾಡುವುದಿಲ್ಲ! ಕೆಲವರು ಒಳ್ಳೆಯ ಮಾತುಗಳಿಗೆ ವಶರಾಗುತ್ತಾರೆ. ಕೆಲವರು ಇದಕ್ಕೆ ವಿಪರೀತವಾಗಿ ಕಠಿಣ ವಾಕ್ಯಗಳಿಗೆ ಮಾತ್ರ ಬಗ್ಗುತ್ತಾರೆ. ಜನರು ತಮ್ಮ ಹುಟ್ಟುಗುಣವನ್ನು ಬಿಡುವುದಿಲ್ಲವಷ್ಟೆ!

ಕಶ್ಚಿದ್ ದ್ವಿಜಾತಿರಧಿಗಮ್ಯ ಕದಾಚಿದೇನಾಂ
ಉದ್ವೀಕ್ಷ್ಯ ಲಕ್ಷಣ ಮವೋಚದನಿಂದಿತಾತ್ಮಾ |
ಮಾನುಷ್ಯಮಾತ್ರಜನನಂ ನಿಜದೇವಭಾವೇ-
ತ್ಯಸ್ಮಾಚ್ಚ ವೋ ವಚನಮುಗ್ರಮಯೋಜ್ಯಮಸ್ಯಾಮ್ || ೬೪

"ಒಂದು ಸಲ ಒಬ್ಬ ಮಹಾತ್ಮನಾದ ಬ್ರಾಹ್ಮಣನು ಬಂದಾಗ ಉಭಯಭಾರತಿಯ ಲಕ್ಷಣವನ್ನು ಗಮನಿಸಿ ನೋಡಿ ನಮಗೆ ಈ ರೀತಿ ಹೇಳಿದ್ದನು: "ನಿಮ್ಮ ಮಗಳು ಮನುಷ್ಯಜನ್ಮದಲ್ಲಿ ಹುಟ್ಟಿದ ದೇವತೆಯೇಸರಿ. ಆದ್ದರಿಂದ ನಿಮಗೆ ಹೇಳುತ್ತೇನೆ- ಯಾವ ಸಮಯದಲ್ಲಿಯೂ ಕಠೋರವಾದ ನುಡಿಯನ್ನು ಇವಳಿಗೆ ಹೇಳಬಾರದು.

ಸರ್ವಜ್ಞತಾಲಕ್ಷಣಮಸ್ತಿ ಪೂರ್ಣ-
ಮೇಷಾ ಕದಾಚಿದ್ವದತೋಃ ಕಥಾಯಾಮ್ |
ತತ್ಸಾಕ್ಷಿಭಾವಂ ವ್ರಜಿತಾಽನವದ್ಯಾ
ಸಂದಿಶ್ಯ ನಾವೇವಮಸೌ ಜಗಾಮ || ೬೫

ಇವಳಲ್ಲಿ ಸರ್ವಜ್ಞಳಾದ ವಿದುಷಿಯ ಲಕ್ಷಣವಿದೆ. ಮುಂದೆ ಒಂದಾನೊಂದು ಸಲ ಇಬ್ಬರು ವಿದ್ವಾಂಸರಿಗೆ ವಾದಗೋಷ್ಠಿಯು ನಡೆಯುವ ಸಂದರ್ಭದಲ್ಲಿ, ಈ ಪುಣ್ಯಾತ್ಮಳು ಮಧ್ಯಸ್ಥಳಾಗಿ ಸಾಕ್ಷಿಭಾವವನ್ನು ವಹಿಸುವ ಮಹಾಯೋಗವಿದೆ" ಎಂದು ನಮಗೆ ಹೇಳಿ ಆ ಬ್ರಾಹ್ಮಣನು ಹೊರಟು ಹೋದನು.

ಶ್ವಶ್ರೂರ್ವರಾಯಾ ವಚನೇನ ವಾಚ್ಯಾ
ಸ್ನುಷಾಭಿರಕ್ಷಾಽಽಯತತೇ ಹಿ ತಸ್ಯಾಮ್ |

ನಿಕ್ಷೇಪಭೂತಾ ತವ ಸುಂದರೀಯಂ
  ಕಾರ್ಯಾ ಗೃಹೇ ಕರ್ಮ ಶನೈಃ ಶನೈಸ್ತೇ || ೬೬

"ವಿಶ್ವರೂಪ, ಇವಳ ಅತ್ತೆಗೆ-ನಿನ್ನ ತಾಯಿಗೆ ನಾವು ಹೇಳಿದ್ದೇವೆಂದು ಒಂದು ಮಾತನ್ನು ಹೇಳು. ಏಕೆಂದರೆ, ಸೊಸೆಯನ್ನು ಚೆನ್ನಾಗಿ ನೋಡಿಕೊಳ್ಳುವುದು ಅತ್ತೆಯ ಕೈಯಲ್ಲಿರುತ್ತದೆ. ಏನೆಂದರೆ"ಈ ಸುಂದರಿಯನ್ನು ನಿಮಗೆ ನಿಕ್ಷೇಪವಾಗಿ ಒಪ್ಪಿಸಿದ್ದೇವೆ. ನಿಮ್ಮ ಮನೆಗೆಲಸವನ್ನು ಮೆಲ್ಲಮೆಲ್ಲಗೆ ಹೇಳಿ ಇವಳಿಂದ ಮಾಡಿಸಿಕೊಳ್ಳಬೇಕು.

ಬಾಲ್ಯೇಷು ಬಾಲ್ಯಾತ್ ಸುಲಭೋಽಪರಾಧಃ
  ಸ ನೇಕ್ಷಣೀಯೋ ಗೃಹಿಣೀಜನೇನ |
ವಯಂ ಸುಧೀಭೂಯ ಹಿ ಸರ್ವ ಏವ
  ಪಶ್ಚಾದ್ಗುರುತ್ವಂ ಶನಕೈಃ ಪ್ರಯಾತಾಃ || ೬೭

ಹುಡುಗತನದಲ್ಲಿ ತಪ್ಪು ಸಹಜವಾಗಿ ಆಗುತ್ತದೆ. ಗೃಹಿಣಿಯು ಅದನ್ನು ಗಮನಿಸಬಾರದು. ನಾವೆಲ್ಲರೂ ಹೀಗೆಯೇ ಬುದ್ಧಿಯನ್ನು ಕಲಿತುಕೊಂಡು ಕ್ರಮವಾಗಿ ಹಿರಿಯರೆನಿಸಿ ಕೊಂಡಿದೇವಲ್ಲವೆ?"ಎಂಬುದಾಗಿ ತಿಳಿಸು.

ದೃಷ್ಟ್ವಾಽಭಿಧಾತುಮನಲಂ ಚ ಮನೋಽಸ್ಮದೀಯಂ
  ಗೇಹಾಭಿರಕ್ಷಣವಿಧೌ ನ ಹಿ ದೃಶ್ಯತೇಽನ್ಯಃ |
ದೃಷ್ಟ್ವಾಽಭಿಧಾನಫಲಮೇವ ಯಥಾ ಭವೇನ್ನೋ
  ಬ್ರೂಯಾತ್ತಥೇಷ್ಟಜನತಾ ಜನನೀಂ ವರಸ್ಯ || ೬೮

ಅಳಿಯನೆ, ಎದುರಿಗೆ ಬಂದು ಕಂಡು ಈ ಮಾತನ್ನು ನಿನ್ನ ತಾಯಿಗೆ ಹೇಳಬೇಕೆಂದು ನಮ್ಮ ಮನಸ್ಸಿದ್ದರೂ ಅಲ್ಲಿಗೆ ಬರಲು ಸಾಧ್ಯವಾಗುತ್ತಿಲ್ಲ. ಇಲ್ಲಿ ಮನೆಯನ್ನು ರಕ್ಷಣೆ ಮಾಡಿ ಗೃಹಕೃತ್ಯವನ್ನು ನೋಡಿಕೊಳ್ಳತಕ್ಕವರು ಬೇರೆ ಯಾರೂ ಕಾಣಿಸುವುದಿಲ್ಲ. ನಾವು ಬಂದು ಕಂಡು ಹೇಳಿದರೆ ಯಾವ ಫಲವಾಗುತ್ತದೆಯೋ ಅಷ್ಟೇ ಫಲವು ದೊರೆಯುವಂತೆ ಇಷ್ಟಜನರು ವರನ ತಾಯಿಗೆ ಹೇಳ ಬೇಕಾಗುತ್ತದೆ"ಎಂದರು.

ವತ್ಸೇ ತ್ವಮದ್ಯ ಗಮಿತಾಽಸಿ ದಶಾಮಪೂರ್ವಾಂ
  ತದ್ರಕ್ಷಣೇ ನಿಪುಣಧೀರ್ಭವ ಸುಭ್ರು ನಿತ್ಯಮ್ |
ಕುರ್ಯಾನ್ನ ಬಾಲವಿಹೃತಿಂ ಜನತೋಪಹಾಸ್ಯಾಂ
  ಸಾ ನಾವಿವಾಪರ ಮಿಯಂ ಪರಿತೋಷಯೇತ್ತೇ || ೬೯

ಅನಂತರ ಆ ತಾಯಿತಂದೆಗಳು ಉಭಯಭಾರತಿಯನ್ನು ನೋಡಿ ಇಂತೆಂದರು:"ವತ್ಸೆ, ಈಗ ನೀನು ಹೊಸ ಪರಿಸ್ಥಿತಿಗೆ ಕಾಲಿಟ್ಟಿದ್ದೀಯೆ. ಮಗಳೆ, ಅದನ್ನೀಗ ಕಾಪಾಡಿಕೊಳ್ಳುವುದಕ್ಕಾಗಿ ಸದಾ ನೈಪುಣ್ಯದಿಂದ ವರ್ತಿಸು. ಹಿಂದಿನಂತೆ ಇನ್ನು ಮೇಲೆ ಬಾಲಕರೊಡನೆ ಆಟವಾಡಬಾರದು. ಜನರು ನೋಡಿ ನಗುತ್ತಾರೆ. ಅಂತಹ ಆಟವು ನಿನ್ನ ತಂದೆತಾಯಿಗಳಾದ ನಮಗೆ ಸಂತೋಷವನ್ನುಂಟುಮಾಡುವುದೇ ಹೊರತು ಪರರಿಗೆ ಮಾಡದು.

ಪಾಣಿಗ್ರಹಾತ್ಸ್ವಾಧಿಪತೀ ಸಮೀರಿತೌ
ಪುರಾ ಕುಮಾರ್ಯಾಃ ಪಿತರೌ ತತಃ ಪರಮ್ |
ಪತಿಸ್ತಮೇಕಂ ಶರಣಂ ವ್ರಜಾನಿಶಂ
ಲೋಕದ್ವಯಂ ಜೇಷ್ಯಸಿ ಯೇನ ದುರ್ಜಯಮ್ || ೭೦

"ಮದುವೆಯಾಗುವುದಕ್ಕೆ ಮೊದಲು ಕುಮಾರಿಗೆ ಅವಳ ತಂದೆತಾಯಿಗಳು ಪಾಲಕರೆಂದು ಶಾಸ್ತ್ರವು ಹೇಳಿದೆ. ಮದುವೆಯಾದ ಮೇಲೆ ಪತಿಯೇ ಪಾಲಕನಾಗುತ್ತಾನೆ. ಆದ್ದರಿಂದ ಇನ್ನುಮೇಲೆ ಪತಿಯನ್ನು ಸದಾ ಆಶ್ರಯಿಸಿಕೊಂಡಿರು. ಈ ರೀತಿ ಪತಿವ್ರತೆಯಾಗಿ ಬಾಳುತ್ತಿದ್ದರೆ ದುರ್ಜಯವಾದ ಇಹಪರಗಳೆರಡನ್ನೂ ಜಯಿಸುತ್ತೀಯೆ.

ಪತ್ಯಾವಭುಕ್ತವತಿ ಸುಂದರಿ ಮಾ ಸ್ಮ ಭುಂಕ್ಷ್ವ
ಯಾತೇ ಪ್ರಯಾತಮಪಿ ಮಾ ಸ್ಮ ಭವೇದ್ವಿಭೂಷಾ |
ಪೂರ್ವಾಪರಾದಿನಿಯಮೋಽಸ್ತಿ ನಿಮಜ್ಜನಾದೌ
ವೃದ್ಧಾಂಗನಾಚರಿತಮೇವ ಪರಂ ಪ್ರಮಾಣಮ್ || ೭೧

"ಸುಂದರಿ, ನಿನ್ನ ಪತಿಯು ಊಟಮಾಡುವುದಕ್ಕೆ ಮೊದಲು ಊಟಮಾಡಬೇಡ. ಅವನು ಪ್ರವಾಸಕ್ಕೆ ಹೋದಾಗ ವಿಶೇಷವಾಗಿ ಅಲಂಕರಿಸಿಕೊಳ್ಳಬಾರದು. ಹೀಗೆ ಸ್ನಾನ ಭೋಜನಾದಿಗಳಲ್ಲಿ ಪೂರ್ವಾಪರ ನಿಯಮವಿದೆ. ಹಿರಿಯರಾದ ಸುಮಂಗಲಿಯರ ಆಚಾರಣೆಯೇ ಈ ವಿಷಯದಲ್ಲಿ ಪರಮ ಪ್ರಮಾಣವಾಗಿರಲಿ.

ಟಿಪ್ಪಣಿ:ಪತಿಯು ಸ್ನಾನಮಾಡುವುದಕ್ಕೆ ಮೊದಲು ಸ್ನಾನಮಾಡಬೇಕು. ಅವನು ಭೋಜನಮಾಡಿದ ಮೇಲೆ ಪತ್ನಿಯು ಭೋಜನ ಮಾಡಬೇಕು – ಇತ್ಯಾದಿ ನಿಯಮಗಳಿವೆ.

ರುಷ್ಟೇ ಧವೇ ಸತಿ ರುಷೇಹ ನ ವಾಚ್ಯಮೇಕಂ
ಕ್ಷಂತವ್ಯಮೇವ ಸಕಲಂ ಸ ತು ಶಾಮ್ಯತೀತ್ಥಮ್ |
ತಸ್ಮಿನ್ ಪ್ರಸನ್ನವದನೇ ಚಕಿತೇವ ವತ್ಸೇ
ಸಿಧ್ಯತ್ಯಭೀಷ್ಟಮನಘೇ ಕ್ಷಮಯೈವ ಸರ್ವಮ್ || ೭೨

"ಪತಿಯು ಕೋಪಗೊಂಡಾಗ ಕೋಪದಿಂದ ಒಂದು ಎದುರುಮಾತನ್ನೂ ಆಡಬಾರದು. ಎಲ್ಲವನ್ನೂ ಸಹಿಸಿಕೊಳ್ಳುತ್ತ ಹೋಗಬೇಕು. ಹೀಗೆ ಮಾಡುತ್ತಿದ್ದರೆ ಅವನು ತಾನಾಗಿಯೇ ಶಾಂತನಾಗುವನು. ಅವನು ಪ್ರಸನ್ನಮುಖನಾದಮೇಲೆ ನೀನು ಹೆದರಿದಂತೆ ಇರಬೇಕು (ಅವನ ತಪ್ಪನ್ನು ತೋರಿಸಬಾರದು). ವತ್ಸೆ, ಹೀಗೆ ತಾಳ್ಮೆಯಿಂದಿದ್ದರೆ ಎಲ್ಲ ಅಭೀಷ್ಟವೂ ಸಿದ್ಧಿಸುತ್ತದೆ.

ಭರ್ತುಃ ಸಮಕ್ಷಮಪಿ ತದ್ವದನಂ ಸಮೀಕ್ಷ್ಯ
ವಾಚ್ಯೋ ನ ಜಾತು ಸುಭಗೇ ಪರಪೂರುಷಸ್ತೇ |
ಕಿಂ ವಾಚ್ಯ ಏಷ ರಹಸೀತಿ ತವೋಪದೇಶಃ
ಶಂಕಾ ವಧೂಪುರುಷಯೋಃ ಕ್ಷಪಯೇದ್ಧಿ ಹಾರ್ದಮ್ || ೭೩

"ಸೌಭಾಗ್ಯವತಿ-ಭಾರತಿ, ಗಂಡನೆದುರಿಗೆ ಸಹ ಪರಪುರುಷನನ್ನು ಸರಿಯಾಗಿ ನೋಡುತ್ತ ಮಾತಾಡಬಾರದು. ಇನ್ನು ಯಾರೂ ಇಲ್ಲದಾಗ ಏಕಾಂತದಲ್ಲಿ ಪರಪುರುಷನೊಡನೆ ಮಾತಾಡಕೂಡದೆಂದು ನಿನಗೆ ಹೇಳಬೇಕಾದ್ದೇನಿದೆ? ಗಂಡಹೆಂಡಿರಲ್ಲಿ ಏನಾದರೂ ಸಂದೇಹ ಬಂದಿತೆಂದರೆ ಅದು ಹಾರ್ದವಾದ ಪ್ರೇಮವನ್ನು ಕೆಡಿಸಿಬಿಡುತ್ತದೆ.

ಆಯಾತಿ ಭರ್ತರಿ ತು ಪುತ್ರಿ ವಿಹಾಯ ಕಾರ್ಯಮ್
ಉತ್ಥಾಯ ಶೀಘ್ರಮುದಕೇನ ಪದಾವನೇಕಃ |
ಕಾರ್ಯೋ ಯಥಾಭಿರುಚಿ ಹೇ ಸತಿ ಜೀವನಂ ವಾ
ನೋಪೇಕ್ಷಣೀಯ ಮಣುಮಾತ್ರಮಪೀಹ ಕಂ ತೇ || ೭೪

"ಮಗಳೆ, ಗಂಡನು ಮನೆಗೆ ಬಂದಾಗ ನೀನು ಮಾಡುತ್ತಿರುವ ಕೆಲಸವನ್ನು ಬಿಟ್ಟು ಎದ್ದು ಹೋಗಿ ನೀರನ್ನು ತಂದು, ಆತನು ಕಾಲು ತೊಳೆದುಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕು. ಅವನು ಬಯಸಿದ್ದನ್ನು ಅಥವಾ ಕುಡಿಯಲು ನೀರನ್ನು ತಂದುಕೊಡಬೇಕು. ನಿನ್ನ ಕಾಂತನಿಗೆ ಸುಖಕರವಾದ ಯಾವ ವಿಷಯದಲ್ಲಿಯೂ ನೀನು ಉಪೇಕ್ಷೆಮಾಡಬಾರದು.

ಟಿಪ್ಪಣಿ: 'ಕಂ ತೇ'ಎಂಬ ಸ್ಥಳದಲ್ಲಿ 'ಕಾಂತೇ'ಎಂದೂ ಪಾಠವಿದೆ. ಆಗ ಕಾಂತನ ವಿಷಯದಲ್ಲಿ ಯಾವ ಉಪೇಕ್ಷೆಯನ್ನು ಮಾಡಬಾರದು ಎಂದರ್ಥ. ಕಂ = ಸುಖ.

ಧವೇ ಪರೋಕ್ಷೇಽಪಿ ಕದಾಚಿದೇಯುಃ
ಗೃಹಂ ತದೀಯಾ ಅಪಿ ವಾ ಮಹಾಂತಃ |
ತೇ ಪೂಜನೀಯಾ ಬಹುಮಾನ ಪೂರ್ವಂ
ನೋ ಚೇನ್ನಿರಾಶಾಃ ಕುಲದಾಹಕಾಃ ಸ್ಯುಃ || ೭೫

"ಪತಿಯು ಸ್ಥಳದಲ್ಲಿಲ್ಲದಾಗ ಆತನ ಬಂಧುಮಿತ್ರರೋ ಅಥವಾ ಬೇರೆ ಮಹಾಪುರುಷರೋ ಮನೆಗೆ ಯಾವಾಗಲಾದರೂ ಬರುವ ಸಂಭವ ಉಂಟು. ಆಗ ನೀನು ಅವರನ್ನು ಗೌರವದಿಂದ ಸತ್ಕರಿಸಬೇಕು. ಇಲ್ಲದಿದ್ದರೆ ಅವರು ನಿರಾಶರಾಗಿ ವಂಶನಾಶಕ್ಕೆ ಕಾರಣರಾದಾರು.

ಟಿಪ್ಪಣಿ:ಅತಿಥಿಸತ್ಕಾರ ಮಾಡದಿದ್ದರೆ ವಂಶಕ್ಕೆ ಕೇಡಾಗುವುದೆಂದು ಅಭಿಪ್ರಾಯ.

ಪಿತ್ರೋರಿವ ಶ್ವಶುರಯೋರನುವರ್ತಿತವ್ಯಂ
ತದ್ವನ್ಮೃಗಾಕ್ಷಿ ಸಹಜೇಷ್ವಪಿ ದೇವರೇಷು |
ತೇ ಸ್ನೇಹಿನೋ ಹಿ ಕುಪಿತಾ ಇತರೇತರಸ್ಯ
ಯೋಗಂ ವಿಭಿದ್ಯುರಿತಿ ಮೇ ಮನಸಿ ಪ್ರತರ್ಕಃ || ೭೬

ನಿನ್ನ ತಾಯಿತಂದೆಗಳಲ್ಲಿ ಹೇಗೆ ನಡೆದುಕೊಳ್ಳುತ್ತೀಯೋ ಹಾಗೆ ನಿನ್ನ ಅತ್ತೆಮಾವಂದಿರಲ್ಲಿಯೂ ವಿನಯದಿಂದ ಅವರ ಇಚ್ಛೆಯನ್ನನುಸರಿಸಿ ನಡೆದು ಕೊಳ್ಳಬೇಕು. ಪತಿಯ ಸೋದರರಲ್ಲಿಯೂ ಪ್ರೀತಿವಿಶ್ವಾಸಗಳಿಂದ ವರ್ತಿಸಬೇಕು. ಅವರು ಬೇಸರದಿಂದ ಕೋಪಗೊಂಡರೆ, ಪ್ರೇಮಿಗಳಾದ ದಂಪತಿಗಳಲ್ಲಿಯೂ ಒಡಕನ್ನು ತಂದು ಬಿಡುವರೆಂದು ನಮ್ಮ ಮನಸ್ಸಿನಲ್ಲಿ ಶಂಕೆಯುಂಟು" ಎಂದು ಬುದ್ಧಿವಾದ ಹೇಳಿದರು.

ಹಿತೋಪದೇಶೇ ವಿನಿವಿಷ್ಟಮಾನಸೌ
ವಧೂವರೌ ರಾಜಗೃಹಂ ಸಮೀಯತುಃ |
ಲಬ್ಧಾನುಮಾನೌ ಗುರುಬಂಧು ವರ್ಗತೋ
ಬಭೂವ ಸಂಜ್ಞೋಭಯಭಾರತೀತಿ || ೭೭

ಅವರಿಬ್ಬರ ಹಿತೋಪದೇಶವನ್ನು ಮನಸ್ಸಿನಲ್ಲಿ ಮೆಲುಕುಹಾಕುತ್ತ, ಆ ವಧೂವರರು ವಿಶ್ವರೂಪನ ಸ್ಥಳವಾದ ರಾಜಗೃಹಕ್ಕೆ ಪ್ರಯಾಣಮಾಡಿದರು. ಅಲ್ಲಿ ಗುರುಹಿರಿಯರೂ ಬಂಧುವರ್ಗದವರೂ ದಂಪತಿಗಳನ್ನು ಆದರಿಸಿ ಉಪಚರಿಸಿದರು (ವಿಶ್ವರೂಪನ ಪತ್ನಿಯು ತಂದೆಯ ಮನೆಯಲ್ಲಿಯೂ ಪತಿಯ ಗೃಹದಲ್ಲಿಯೂ ಸರಸ್ವತಿಯಂತೆ ಪ್ರಕಾಶಕ್ಕೆ ಬಂದುದರಿಂದ) ಅವಳಿಗಿಟ್ಟಿದ್ದ ಉಭಯಭಾರತಿಯೆಂಬ ಹೆಸರು ಸರ್ವರಿಗೂ ಸಂಮತವಾಯಿತು.

ಸಾ ಭಾರತೀ ದುರ್ವಸನೇನ ದತ್ತಂ
ಪುನಃ ಪ್ರಸನ್ನೇನ ಪುರಾऽऽತ್ತಹರ್ಷಾ |
ಶಾಪಾವಧಿಂ ಸಂಸದಿ ವತ್ಸ್ಯರ್ತೇ ಯತ್
ಸರ್ವಜ್ಞತಾ ನಿರ್ವಹಣಾಯ ಸಾಕ್ಷ್ಯಮ್ || ೭೮

ವಾಸ್ತವದಲ್ಲಿ ಸರಸ್ವತೀದೇವಿಯೇ ಆದ ಅವಳು ಪ್ರಸನ್ನನಾದ ದುರ್ವಾಸ ಮುನಿಯು ತನಗಿತ್ತ ಶಾಪಾವಧಿಯು ಸಮೀಪಿಸಿತೆಂದು ಹೃಷ್ಟಚಿತ್ತಳಾದಳು. ಏಕೆಂದರೆ, ವಿದ್ವತ್ಸಭೆಯಲ್ಲಿ ಶ್ರೀಶಂಕರಾಚಾರ್ಯರು ಸರ್ವಜ್ಞರೆಂಬುದನ್ನು ನಿರ್ವಹಿಸುವುದಕ್ಕೆ ಸಾಕ್ಷಿಯ ಕಾರ್ಯವನ್ನು ಅವಳು ಸದ್ಯದಲ್ಲಿಯೇ ವಹಿಸತಕ್ಕವಳಾಗಿದ್ದಳು.

ಸ ಭಾರತೀಸಾಕ್ಷಿಕಸರ್ವವಿತ್ತ್ವೋಽಪ್ಯ-
ಪ್ಯಾತ್ಮೀಯಶಕ್ತ್ಯಾ ಶಿಶುವದ್ವಿಭಾತಃ |
ಸ್ವಶೈಶವಸ್ಯೋಚಿತ ಮನ್ವಕಾಂಕ್ಷೀತ್
ಸ ಕೇಶವೋ ಯದ್ವದುದಾರವೃತ್ತಃ || ೭೯

ಇತ್ತಲಾಗಿ ಶ್ರೀಶಂಕರನು ಸರಸ್ವತೀಸಾಕ್ಷಿಕವಾಗಿ ಸರ್ವಜ್ಞನಾಗಿದ್ದರೂ ತನ್ನ ಮಾಯಾಶಕ್ತಿಯಿಂದ ಶಿಶುವಿನಂತೆ ವರ್ತಿಸುತ್ತಿದ್ದನು. ಉದಾರಚರಿತನಾದ ಶ್ರೀಕೃಷ್ಣನು ಬಾಲ್ಯದಲ್ಲಿ ಉಚಿತವಾದ ಏನೇನನ್ನು ಬಯಸುತ್ತಿದ್ದನೋ ಅದರಂತೆ ಶ್ರೀಶಂಕರನೂ ಬಾಲ್ಯೋಚಿತವಾದ್ದನ್ನು ಬಯಸುತ್ತಿದ್ದನು.

ಶೈಶವೇ ಸ್ಥಿತವತಾ ಚಪಲಾಶೇ
ಶಾರ್ಙ್ಗಿಣೇವ ವಟವೃಕ್ಷಪಲಾಶೇ |
ಆತ್ಮನೀದಮಖಿಲಂ ವಿಲುಲೋಕೇ
ಭಾವಿ ಭೂತಮಪಿ ಯತ್ಖಲು ಲೋಕೇ || ೮೦

ಚಂಚಲಸ್ವಭಾವದ ಶೈಶವದಲ್ಲಿದ್ದರೂ ಶ್ರೀಶಂಕರನು, ವಟಪತ್ರಶಾಯಿಯಾದ ಬಾಲಮುಕುಂದನಂತೆ, ವಿಶ್ವದಲ್ಲಿರುವ ಭೂತಭವಿಷ್ಯತ್ಪದಾರ್ಥಗಳೆಲ್ಲವೂ ತನ್ನಲ್ಲಿಯೇ ಇರುವುದನ್ನು ಕಾಣುತ್ತಿದ್ದನು.

ತಂ ದದರ್ಶ ಜನತಾಽದ್ಭುತಬಾಲಂ
ಲೀಲಯಾಧಿಗತ ನೂತನದೋಲಮ್ |
ವಾಸುದೇವಮಿವ ವಾಮನಲೀಲಂ
ಲೋಚನೈರನಿಮಿಷೈರನುವೇಲಮ್ || ೮೧

ಬಾಲಲೀಲೆಯನ್ನಾಡುತ್ತಿದ್ದ ವಾಸುದೇವನಂತೆ, ಲೀಲೆಯಿಂದ ಹೊಸತೊಟ್ಟಿಲನ್ನೇರಿ ಮಲಗುವ ಆ ಅದ್ಭುತಬಾಲಕನನ್ನು ಜನರು ಕಣ್ಣುಗಳಿಂದ ಎವೆಯಿಕ್ಕದೆ ಸದಾ ನೋಡುತ್ತಿದ್ದರು.

ಟಿಪ್ಪಣಿ:ವಾಮನ = ಕುಳ್ಳ;ಪ್ರಕೃತದಲ್ಲಿ ಬಾಲಕ.

ಕೋಮಲೇನ ನವನೀರದರಾಜಿ-
ಶ್ಯಾಮಲೇನ ನಿತರಾಂ ಸಮರಾಜಿ |
ಕೇಶವೇಶ ತಮಸಾಽಧಿಕಮಸ್ಯ
ಕೇಶವೇಶ ಚತುರಾಸ್ಯಸಮಸ್ಯ || ೮೨

ಕೇಶವನಿಗೂ ಈಶ್ವರನಿಗೂ ಬ್ರಹ್ಮನಿಗೂ ಸಮನಾದ ಬಾಲಶಂಕರನ ಕೋಮಲವಾದ ತಲೆಗೂದಲಿನ ಕಪ್ಪುಬಣ್ಣವು ನವಮೇಘದಂತೆ ಕರಿಯದಾಗಿದ್ದು ಬಹುಸುಂದರವಾಗಿ ವಿರಾಜಿಸುತ್ತಿತ್ತು.

ಶಾಕ್ಯೈಃ ಪಾಶುಪತೈರಪಿ ಕ್ಷಪಣಕೈಃ ಕಾಪಾಲಿಕೈರ್ವೈಷ್ಣವೈ-
ರಪ್ಯನ್ಯೈರಖಿಲೈಃ ಖಲೈಃ ಖಲು ಖಿಲಂ ದುರ್ವಾದಿಭಿರ್ವೈದಿಕಮ್ |
ಪಂಥಾನಂ ಪರಿರಕ್ಷಿತುಂ ಕ್ಷಿತಿತಲಂ ಪ್ರಾಪ್ತಃ ಪರಿಕ್ರೀಡತೇ
ಘೋರೇ ಸಂಸೃತಿಕಾನನೇ ವಿಚರತಾಂ ಭದ್ರಂಕರಃ ಶಂಕರಃ || ೮೩

ಬೌದ್ಧರು, ಪಾಶುಪತರು, ಕ್ಷಪಣಕರು (ದಿಗಂಬರಜೈನರು), ಕಾಪಾಲಿಕರು, ವೈಷ್ಣವತಂತ್ರಾನುಸಾರಿಗಳು-ಇವರೇ ಮೊದಲಾದ ದುರ್ವಾದಿಗಳು ವೈದಿಕಮಾರ್ಗವನ್ನು ಹಾಳು ಮಾಡುತ್ತಿದ್ದರು. ಘೋರವಾದ ಸಂಸಾರವೆಂಬ ಅಡವಿಯಲ್ಲಿ ದಾರಿಕಾಣದೆ ತೊಳಲುತ್ತಿರುವವರಿಗೆ ಮೋಕ್ಷಪ್ರದನಾದ ಶ್ರೀಪರಮೇಶ್ವರನು ಆ ವೈದಿಕಮಾರ್ಗವನ್ನು ಸಂರಕ್ಷಿಸುವುದಕ್ಕಾಗಿ ಭೂಮಿಯಲ್ಲವತರಿಸಿ ಬಾಲಲೀಲೆಯಿಂದ ಕ್ರೀಡಿಸುತ್ತಿದ್ದನು.

ಇತಿ ಶ್ರೀ ಮಾಧವೀಯೇ ತತ್ತದ್ದೇವಾವತಾರಾರ್ಥಕಃ |
ಸಂಕ್ಷೇಪ ಶಂಕರಜಯೇ ತೃತೀಯಃ ಸರ್ಗ ಆಭವತ್ ||

ಶ್ರೀ ಮಾಧವೀಯ ಸಂಕ್ಷೇಪಶಂಕರವಿಜಯದಲ್ಲಿ ಆಯಾದೇವತೆಗಳ ಅವತಾರಗಳನ್ನು ವರ್ಣಿಸುವ ಮೂರನೆಯ ಸರ್ಗವು ಸಮಾಪ್ತವಾಯಿತು

✤ ✤ ✤

ಚತುರ್ಥಃ ಸರ್ಗಃ
ಕೌಮಾರಚರಿತ ವರ್ಣನಮ್

ಶಿವಗುರುವಿನ ಮರಣ. ಗುರುಕುಲದಲ್ಲಿ ಶ್ರೀಶಂಕರರ ವಿದ್ಯಾಭ್ಯಾಸ. ಅವರ ದೇಹ ಸೌಂದರ್ಯ. ಅವರು ಭಿಕ್ಷಾರ್ಥಿಗಳಾಗಿ ಹೋದಾಗ, ಬಡತನದಿಂದ ಬಳಲುತ್ತಿದ್ದ ಒಬ್ಬ ಗೃಹಣಿಯ ಮನೆಯಲ್ಲಿ ಲಕ್ಷ್ಮೀ ದೇವಿಯನ್ನು ಸ್ತುತಿಸಿ ಚಿನ್ನದ ನೆಲ್ಲಿಕಾಯಿಗಳು ಸುರಿಯುವಂತೆ ಮಾಡುವುದು. ಆಚಾರ್ಯರ ವೈದುಷ್ಯವನ್ನು ಭಾಷ್ಯಗ್ರಂಥಗಳನ್ನೂ ವರ್ಣಿಸುವುದು.

ಅಥಶಿವೋ ಮನುಜೋ ನಿಜಮಾಯಯಾ
ದ್ವಿಜಗೃಹೇ ದ್ವಿಜಮೋದ ಮುಪಾವಹನ್ |
ಪ್ರಥಮ ಹಾಯನ ಏವ ಸಮಗ್ರಹೀತ್
ಸಕಲವರ್ಣಮಸೌ ನಿಜಭಾಷಿಕಾಮ್ || ೧

ಶ್ರೀಶಿವನು ತನ್ನ ಮಾಯೆಯಿಂದ ಶಿವಗುರುವಿನ ಗೃಹದಲ್ಲಿ ಮನುಜನಾಗಿ ಅವತರಿಸಿ ಆತನಿಗೆ ಆನಂದವನ್ನುಂಟುಮಾಡುತ್ತ, ಮೊದಲನೆಯ ವರ್ಷದಲ್ಲಿಯೇ ಎಲ್ಲ ಅಕ್ಷರಗಳ ಉಚ್ಚಾರಣೆಯನ್ನು ಕೇರಳ ಭಾಷೆಯಲ್ಲಿ ಮಾತಾಡುವುದನ್ನು ಕಲಿತನು.

ದ್ವಿಸಮ ಏವ ಶಿಶುರ್ಲಿಖಿತಾಕ್ಷರಂ
ಗದಿತುಮಕ್ಷಮತಾಕ್ಷರವಿತ್ ಸುಧೀಃ |
ಅಥ ಸ ಕಾವ್ಯಪುರಾಣ ಮುಪಾಶೃಣೋತ್
ಸ್ವಯಮವೈತ್ಕಿಮಪಿ ಶ್ರವಣಂ ವಿನಾ || ೨

ಬಹಳ ಬುದ್ಧಿಶಾಲಿಯಾದ ಆ ಬಾಲಕನು ಅಕ್ಷರಜ್ಞಾನವನ್ನು ಗಳಿಸಿ ಎರಡನೆಯ ವರ್ಷದಲ್ಲಿಯೇ ಲಿಪಿಯನ್ನು ಓದುವುದನ್ನು ಕಲಿತನು. ಮತ್ತು ಕಾವ್ಯಪುರಾಣಗಳನ್ನು ಕೇಳುತ್ತಿದ್ದನಲ್ಲದೆ, ಕೇಳದೆ ಇದ್ದವುಗಳ ಅರ್ಥವನ್ನೂ ತಿಳಿದು ಕೊಳ್ಳಲು ಸಮರ್ಥನಾದನು.

ಅಜನಿ ದುಃಖಕರೋ ನ ಗುರೋರಸೌ
ಶ್ರವಣತಃ ಸಕೃದೇವ ಪರಿಗ್ರಹೀ |
ಸಹನಿಪಾಠ ಜನಸ್ಯ ಗುರುಃ ಸ್ವಯಂ
ಸ ಚ ಪಪಾಠ ತತೋ ಗುರುಣಾ ವಿನಾ || ೩

ಶ್ರೀಶಂಕರನನ್ನು ಒಂದುಸಲ ಕೇಳಿದರೆ ಸಾಕು, ಎಲ್ಲವನ್ನೂ ಗ್ರಹಿಸಿಬಿಡುತ್ತಿದ್ದನು. ಆದ್ದರಿಂದ ತನ್ನ ಗುರುವಿಗೆ ಯಾವ ಕಷ್ಟವನ್ನೂ ಕೊಡುತ್ತಿರಲಿಲ್ಲ. ಆಮೇಲೆ ಸಹಪಾಠಿಗಳಿಗೆ ತಾನೇ ಗುರುವಾದನಲ್ಲದೆ, ಉಪಾಧ್ಯಾಯರಿಲ್ಲದೆಯೇ ಮುಂದಿನ ಪಾಠವನ್ನೂ ಸ್ವಯಂ ತಿಳಿದುಕೊಂಡು ಬಿಡುತ್ತಿದ್ದನು.

ರಜಸಾ ತಮಸಾ ಽಪ್ಯನಾಶ್ರಿತೋ
  ರಜಸಾ ಖೇಲನಕಾಲ ಏವ ಹಿ |
ಸ ಕಲಾಧರ ಸತ್ತ್ವಮಾತ್ಮಜಃ
  ಸಕಲಾಶ್ಚಾಪಿ ಲಿಪೀರವಿಂದತ || ೪

ಪಂಡಿತೋತ್ತಮನಾದ ಶಿವಗುರುವಿನ ಆ ತನಯನಿಗೆ ಧೂಳಿಯಲ್ಲಾಡುವ ವಯಸ್ಸಿನಲ್ಲಿಯೇ ರಜೋಗುಣತಮೋಗುಣಗಳ ಸ್ಪರ್ಶವೂ ಇರಲಿಲ್ಲ. ಅವನು ಎಲ್ಲ ಭಾಷೆಗಳ ಲಿಪಿಗಳನ್ನೂ ಬೇಗನೆ ಕಲಿತು ಕೊಂಡನು.

ಸುಧಿಯೋಽಸ್ಯ ವಿದಿದ್ಯುತೇಽಧಿಕಂ
  ವಿಧಿವಚ್ಚೌಲ ವಿಧಾನ ಸಂಸ್ಕೃತಮ್ |
ಲಲಿತಂ ಕರಣಂ ಘೃತಾಹುತಿ-
  ಜ್ವಲಿತಂ ತೇಜ ಇವಾಽಽಶುಶುಕ್ಷಣೇಃ || ೫

ಕುಶಾಗ್ರ ಬುದ್ಧಿಯಾದ ಆ ಬಾಲಕನಿಗೆ ವಿಧಿವತ್ತಾಗಿ ಚೌಳವನ್ನು ಮಾಡಿದರು. ಚೌಲ ಕರ್ಮದಿಂದ ಸಂಸ್ಕಾರಗೊಂಡು ಅವನ ದೇಹವು, ಆಜ್ಯಾಹುತಿಯಿಂದ ಜ್ವಲಿಸುವ ಅಗ್ನಿಯ ತೇಜಸ್ಸಿನಂತೆ ತೇಜೋಯುಕ್ತವಾಯಿತು.

ಅಮುನಾ ತನಯೇನ ಭೂಷಿತಂ
  ಯಮುನಾತಾತಸಮಾನವರ್ಚಸಾ |
ತುಲಯಾ ರಹಿತಂ ನಿಜಂ ಕುಲಂ
  ಕಲಯಾಮಾಸ ಸ ಪುತ್ರಿಣಾಂ ವರಃ || ೬

ಸೂರ್ಯಸಮಾನ ತೇಜೋವಂತನಾದ ಆ ಬಾಲಕನಿಂದ ಭೂಷಿತವಾದ ತನ್ನ ವಂಶವು ಲೋಕದಲ್ಲಿ ಅಸದೃಶವಾದದ್ದೆಂದು ಪುತ್ರವಂತರಲ್ಲಿ ಶ್ರೇಷ್ಠನಾದ ಶಿವಗುರುವು ಭಾವಿಸಿ ಕೊಳ್ಳುತ್ತಿದ್ದನು.

ಶಿವಗುರುಃ ಸ ಜರಂಸ್ತ್ರಿಸಮೇ ಶಿಶಾ-
  ವಮೃತ ಕರ್ಮವಶಃ ಸುತಮೋದಿತಃ |
ಉಪನಿನೀಷಿತ ಸೂನುರಪಿ ಸ್ವಯಂ
  ನ ಹಿ ಯಮೋಽಸ್ಯ ಕೃತಾಕೃತಮಿಕ್ಷತೇ|| ೭

ಪುತ್ರನಿಂದ ಆನಂದಪಡುತ್ತಿದ್ದ ಶಿವಗುರುವು, ಆ ಮಗುವಿಗೆ ಮೂರನೆಯ ವರ್ಷವಾದಾಗ ಉಪನಯನ ಮಾಡಬೇಕೆಂದು ಸಂಕಲ್ಪಿಸಿ ಕೊಂಡನು. ಆದರೆ ವೃದ್ಧನಾಗಿದ್ದ ಅವನು ಒಂದು ದಿನ

ಕಾಲವಶನಾದನು. ಮನುಷ್ಯನು ತನ್ನ ಕರ್ತವ್ಯವನ್ನೆಲ್ಲ ಮಾಡಿ ಮುಗಿಸಿದನೆ ? ಇನ್ನೂ ಮಾಡದೆ ಉಳಿದಿದೆಯೆ ?- ಎಂಬುದನ್ನು ಯಮನು ಗಣಿಸುವುದಿಲ್ಲವಷ್ಟೆ.

ಇಹ ಭವೇತ್ ಸುಲಭಂ ನ ಸುತೇಕ್ಷಣಂ
ನ ಸುತರಾಂ ಸುಲಭಂ ವಿಭವೇಕ್ಷಣಂ |
ಸುತಮವಾಪ ಕಥಂಚಿದಯಂ ದ್ವಿಜೋ
ನ ಖಲು ವೀಕ್ಷಿತುಮೈಷ್ಟ ಸುತೋದಯಮ್ || ೮

ಈ ಲೋಕದಲ್ಲಿ ಸುತನ ಮುಖವನ್ನು ನೋಡುವ ಭಾಗ್ಯವು ಎಲ್ಲರಿಗೂ ಸುಲಭವಲ್ಲದಿರಬಹುದು. ಸುತನ ಅಭಿವೃದ್ಧಿಯನ್ನು ನೋಡುವ ಭಾಗ್ಯವು ಮಾತ್ರ ಎಂದಿಗೂ ಸುಲಭವಲ್ಲ. ಈ ಬ್ರಾಹ್ಮಣನು ಸುತನನ್ನೇನೋ ಪಡೆದನು. ಆದರೆ ಆತನ ಅಭಿವೃದ್ಧಿಯನ್ನು ಕಾಣುವ ಯೋಗವು ಅವನಿಗಿರಲಿಲ್ಲ.

ಮೃತಮದೀದಹದಾತ್ಮಸನಾಭಿಭಿಃ
ಪಿತರಮಸ್ಯ ಶಿಶೋರ್ಜನನೀ ತತಃ |
ಸಮನುನೀತವತೀ ಧವಖಂಡಿತಾಂ
ಸ್ವಜನತಾ ಮೃತಿ ಶೋಕಹರೈಃ ಪದೈಃ || ೯

ಆಮೇಲೆ ಈ ಬಾಲಕನ ತಾಯಿಯಾದ ಸತೀದೇವಿಯು* ಸಪಿಂಡರಾದ ದಾಯಾದಿಗಳಿಂದ ಶಿವಗುರುವಿನ ದಹನಕ್ರಿಯೆಯನ್ನು ಮಾಡಿದಳು. ಪತಿವಿಯುಕ್ತಳಾದ ಆವಳಿಗೆ ಬಂಧುಜನರು ಪತಿ ಮರಣದ ಶೋಕವನ್ನು ಹೋಗಲಾಡಿಸುವ ಮಾತುಗಳನ್ನಾಡಿ ಸಮಾಧಾನ ಪಡಿಸಿದರು.

ಟಿಪ್ಪಣಿ:-ಶ್ರೀಶಂಕರನ ತಾಯಿಗೆ ಆರ್ಯಾಂಬೆ ಎಂಬ ಹೆಸರಿದ್ದಂತೆ ಇತರ ವ್ಯಾಖ್ಯಾನ ಕಾರರು ತಿಳಿಸುತ್ತಾರೆ.

ಕೃತವತೀ ಮೃತಚೋದಿತಮಕ್ಷಮಾ
ನಿಜಜನೈರಪಿ ಕಾರಿತವತ್ಯಸೌ |
ಉಪನಿನೀಷುರಭೂತ್ ಸುತಮಾತ್ಮನಃ
ಪರಿಸಮಾಪ್ಯ ಚ ವತ್ಸರದೀಕ್ಷಣಮ್ || ೧೦

ಅವಳು ಮೃತನಾದ ಶಿವಗುರುವಿಗೆ ತಾನು ಮಾಡಬಹುದಾದ ಕಾರ್ಯವೆಲ್ಲವನ್ನೂ ಸ್ವತಃ ಮಾಡಿದಳು. ಯಾವ ಕ್ರಿಯೆಯನ್ನು ತಾನು ಮಾಡಲಾರಳೋ ಅದನ್ನು ಬಂಧುಜನರಿಂದ ಮಾಡಿಸಿದಳು. ಒಂದು ವರ್ಷದವರೆಗೆ ದೀಕ್ಷಾಕಾಲವು ಕಳೆಯಿತು. ಅದೆಲ್ಲವನ್ನೂ ನೆರವೇರಿಸಿ ತನ್ನ ಮಗನಿಗೆ ಉಪನಯನವನ್ನು ಮಾಡಲು ಸಂಕಲ್ಪಿಸಿದಳು.

ಉಪನಯಂ ಕಿಲ ಪಂಚಮವತ್ಸರೇ
ಪ್ರವರಯೋಗಯುತೇ ಸುಮುಹೂರ್ತಕೇ |
ದ್ವಿಜವಧೂರ್ನಿಯತಾ ಜನನೀ ಶಿಶೋ-
ರ್ವ್ಯಧಿತ ತುಷ್ಟಮನಾಃ ಸಹ ಬಂಧುಭಿಃ || ೧೧

ಬಾಲಕನ ತಾಯಿಯಾದ ಶಿವಗುರುಪತ್ನಿಯು ಹುಡುಗನಿಗೆ ಐದನೆಯ ವರ್ಷದಲ್ಲಿ. ಶುಭಯೋಗದಿಂದ ಕೂಡಿದ ಒಂದು ಸುಮುಹೂರ್ತದಲ್ಲಿ ಬಂಧುಗಳಿಂದ ಉಪನಯನವನ್ನು ಮಾಡಿಸಿ ಸಂತೋಷಪಟ್ಟಳು.

ಅಧಿಜಗೇ ನಿಗಮಾಂಶ್ಚತುರೋಽಪಿ ಸ
ಕ್ರಮತ ಏವ ಗುರೋಃ ಸಷಡಂಗಕಾನ್ |
ಅಜನಿ ವಿಸ್ಮಿತಮತ್ರ ಮಹಾಮತೌ
ದ್ವಿಜಸುತೇಽಲ್ಪತನೌ ಜನತಾಮನಃ || ೧೨

ಅನಂತರ ಶ್ರೀಶಂಕರನು ತನ್ನಗುರುವಿನಿಂದ ನಾಲ್ಕು ವೇದಗಳನ್ನೂ ಷಡಂಗಗಳನ್ನೂ ಕ್ರಮವಾಗಿ ಕಲಿತನು. ಚಿಕ್ಕವಯಸ್ಸಿನವನಾದರೂ ಧೀಮಂತನಾದ ಆ ಬ್ರಾಹ್ಮಣ ಪುತ್ರನ ಮೇಧಾಶಕ್ತಿಯನ್ನು ಕಂಡು ಜನರ ಮನಸ್ಸು ಆಶ್ಚರ್ಯಚಕಿತವಾಯಿತು.

ಉಪಪಾದನ ನಿರ್ವ್ಯಪೇಕ್ಷಧೀಃ
ಸ ಪಪಾಠಾಹೃತಿಪೂರ್ವಕಾಗಮಾನ್ |
ಅಧಿಕಾವ್ಯಮರಂಸ್ತ ಕರ್ಕಶೇಽ-
-ಪ್ಯಧಿಕಾಂಸ್ತರ್ಕನಯೇಽತ್ಯವರ್ತತ || ೧೩

ಗುರುಗಳು ಹೇಳುವ ವಿವರಣೆಯನ್ನು ಬಯಸದೆ ಸ್ವತಃ ತಿಳಿದುಕೊಳ್ಳವಷ್ಟು ಬುದ್ಧಿಶಕ್ತಿಯಿದ್ದ ಶ್ರೀಶಂಕರನು ವ್ಯಾಹೃತಿಪೂರ್ವಕವಾದ ಸಮಸ್ತವೇದ ಗಳನ್ನೂ ಅಧ್ಯಯನ ಮಾಡಿದನು. ಕಾವ್ಯಗಳಲ್ಲಿ ಆಸಕ್ತಿಯನ್ನು ತೋರಿದನು. ಕರ್ಕಶವಾದ ತರ್ಕಮಾರ್ಗದಲ್ಲಿ ಎಲ್ಲರನ್ನು ಮೀರಿಸಿದನು.

ಹರತಸ್ತ್ರಿದಶೇಜ್ಯ ಚಾತುರೀಂ
ಪುರತಸ್ತಸ್ಯ ನ ವಕ್ತುಮೀಶ್ವರಾಃ |
ಪ್ರಭವೋಽಪಿ ಕಥಾಸು ನೈಜವಾಗ್-
ವಿಭವೋತ್ಸಾರಿತ ವಾದಿನೋ ಬುಧಾಃ || ೧೪

ದೇವತೆಗಳಿಗೆ ಪೂಜ್ಯನಾದ ಬೃಹಸ್ಪತಿಯ ಬುದ್ಧಿಚಾತುರ್ಯವನ್ನೂ ಮೀರಿಸಿದ ಶ್ರೀಶಂಕರನೆದುರಿಗೆ ಮಾತಾಡಲು ಯಾರಿಗೂ ಶಕ್ತಿಯಿರಲಿಲ್ಲ. ಸಮರ್ಥರಾದ ವಿದ್ವಾಂಸರೂ ಸಹ ವಾಗ್ವಾದಗಳಲ್ಲಿ ಆತನ ವಾಗ್ವೈಭವಕ್ಕೆ ಅಂಜಿ ದೂರ ಸರಿಯುತ್ತಿದ್ದರು.

ಅಮುಕಕ್ರಮಿಕೋಕ್ತಿ ಧೋರಣೀ-
ಮುರಗಾಧೀಶಕಥಾವಧೀರಿಣೀಮ್ |
ಮುಮುಹುರ್ನಿಶಮಯ್ಯ ವಾದಿನಃ
ಪ್ರತಿವಾಕ್ಯೋಪಹೃತೌ ಪ್ರಮಾದಿನಃ || ೧೫

ಸರ್ಪರಾಜನಾದ ಆದಿಶೇಷನ ವಾಗ್ವೈಭವವನ್ನೂ ಅಲ್ಲಗಳೆಯುವ ಆತನ ಉಕ್ತಿಧೋರಣೆಯನ್ನು ಕೇಳಿ ವಾದಿಗಳು ದಿಗ್ಭ್ರಮೆಗೊಳ್ಳುತ್ತಿದ್ದರು. ಪ್ರತ್ಯುತ್ತರವನ್ನು ಹೇಳುವಾಗ ತಪ್ಪುಮಾಡುತ್ತಿದ್ದರು.

ಕುಮತಾನಿ ಚ ತೇನ ಕಾನಿ ನೋ-
ನ್ಮಥಿತಾನಿ ಪ್ರಥಿತೇನ ಧೀಮತಾ |
ಸ್ವಮತಾನ್ಯಪಿ ತೇನ ಖಂಡಿತಾ-
ನ್ಯತಿಯತ್ನೈರಪಿ ಸಾಧಿತಾನಿ ಕೈಃ || ೧೬

ಕೀರ್ತಿಶಾಲಿಯಾದ ಆ ಧೀಮಂತನು ಯಾವ ಕುತ್ಸಿತಮತಗಳನ್ನು ಖಂಡತುಂಡುಮಾಡದೆ ಉಳಿಸಿದನು ? ಆತನು ಖಂಡಿಸಿದ ಮತಗಳನ್ನು ಎಷ್ಟು ಪ್ರಯತ್ನಿಸಿದರೂ ಯಾವ ವಾದಿಗಳು ಮತ್ತೆ ಸ್ಥಾಪಿಸಲು ಸಮರ್ಥರಾದರು ? (ಆತನು ಎಲ್ಲ ದುರ್ಮತಗಳನ್ನೂ ಖಂಡಿಸಿದನು. ಅವನ್ನು ಸ್ಥಾಪಿಸಲು ಮತ್ತೆ ಯಾರಿಗೂ ಸಾಧ್ಯವಾಗಲಿಲ್ಲ)

ಸಹಪಾಠಯುತಾ ವಟವಃ ಸಮಂ
ಪಠಿತುಮ್ಶೈಶತ ನ ದ್ವಿಜಸೂನುನಾ |
ಅಪಿ ಗುರುರ್ವಿಶಯಂ ಪ್ರತಿಪೇದಿವಾನ್
ಕ ಇವ ಪಾಠಯಿತುಂ ಸಹಸಾ ಕ್ಷಮಃ || ೧೭

ಸಹಪಾಠಿಗಳಾದ ವಟುಗಳು ಆ ದ್ವಿಜಪುತ್ರನಿಗೆ ಸಮವಾಗಿ ವ್ಯಾಸಂಗ ಮಾಡಲು ಅಸಮರ್ಥರಾದರು. ಗುರುವೂ ಸಹ ಶ್ರೀಶಂಕರನಿಗೆ ಪಾಠಹೇಳುವುದು ಹೇಗೆಂದು ಸಂಶಯಕ್ಕೊಳಗಾದನು. ಆ ಬಾಲಕನಿಗೆ ಪಾಠಹೇಳಿ ಕಲಿಸಿಕೊಡಲು ಯಾವನು ಸಮರ್ಥನಾದಾನು ?

ಅತ್ರ ಕಿಂ ಸ ಯದಶಿಕ್ಷತ ಸರ್ವಾಂ-
ಶ್ಚಿತ್ರಮಾಗಮಗಣಾನನುವೃತ್ತಃ |
ದ್ವಿತ್ರಮಾಸ ಪಠನಾದ ಭವದ್ಯ-
ಸ್ತತ್ರ ತತ್ರ ಗುರುಣಾ ಸಮವಿದ್ಯಃ || ೧೮

ಎರಡು ಮೂರು ತಿಂಗಳು ಅಧ್ಯಯನ ಮಾಡುವಷ್ಟರಲ್ಲಿಯೇ ಶ್ರೀಶಂಕರನು ತನ್ನ ಗುರುವಿಗೆ ಸಮಾನನಾದ ವಿದ್ಯಾವಂತನಾದನು. ಆತನು ಸಕಲ ಶಾಸ್ತ್ರಗಣಗಳನ್ನೂ ಕಲಿತುಬಿಟ್ಟನೆಂಬ ವಿಷಯದಲ್ಲಿ ಅಚ್ಚರಿಯೇನು ?

ವೇದೇ ಬ್ರಹ್ಮಸಮಸ್ತದಂಗ ನಿಚಯೇ ಗಾರ್ಗ್ಯೋಪಮಸ್ತತ್ಕಥಾ-
ತಾತ್ಪರ್ಯಾರ್ಥ ವಿವೇಚನೇ ಗುರುಸಮಸ್ತತ್ಕರ್ಮ ಸಂವರ್ಣನೇ |
ಆಸೀಜ್ಜೈಮಿನಿರೇವ ತದ್ವಚನಜ ಪ್ರೌಢ್ರೋಧಕಂದೇ ಸಮೋ
ವ್ಯಾಸೇನೈವ ಸ ಮೂರ್ತಿ ಮಾನಿವ ನವೋ ವಾಣೀವಿಲಾಸೈರ್ವೃತಃ || ೧೯

ಸರಸ್ವತೀ ವಿಲಾಸಗಳಿಂದ ರಚಿತವಾದ ನೂತನ ಮೂರ್ತಿಯೋ ಎಂಬಂತಿದ್ದ ಶ್ರೀಶಂಕರನು ವೇದವಿಜ್ಞಾನದಲ್ಲಿ ಬ್ರಹ್ಮನಿಗೆ ಸಮನಾಗಿದ್ದನು. ವೇದಾಂಗಗಳ ತಾತ್ಪರ್ಯವನ್ನು ವಿವೇಚಿಸುವುದರಲ್ಲಿ ಬೃಹಸ್ಪತಿಗೆ ಸಮಾನನೂ ಆದನು. ವೇದೋಕ್ತ ಕರ್ಮಗಳ ನಿರ್ಣಯದಲ್ಲಿ ಸಾಕ್ಷಾತ್ ಜೈಮಿನಿಯೇ ಸರಿ. ವೇದವಚನಗಳ ತತ್ತ್ವಜ್ಞಾನಕ್ಕೆ ಮೂಲವಾದ ಉಪನಿಷತ್ತುಗಳ ಅರ್ಥ ವಿವರಣೆಯಲ್ಲಿ ವೇದವ್ಯಾಸರಿಗೆ ಸಮನಾದನು. (ಕಂದ = ಮೂಲ)

ಆನ್ವೀಕ್ಷಿಕ್ಯೈಕ್ಷಿ ತಂತ್ರೇ ಪರಿಚಿತಿರತುಲಾ ಕಾಪಿಲೇ ಕಾಽಪಿ ಲೇಭೇ
ಪೀತಂ ಪಾತಂಜಲಾಂಭಃ ಪರಮಪಿ ವಿದಿತಂ
ಭಾಟ್ಟಘಟ್ಟಾರ್ಥತತ್ತ್ವಮ್ |
ಯತ್ಸೈಃ ಸೌಖ್ಯಂ ತದಸ್ಯಾಂತರ ಭವದಮಲಾದ್ವೈತವಿದ್ಯಾಸುಖೇಽಸ್ಮಿನ್
ಕೂಪೇ ಯೋಽರ್ಥಃ ಸ ತೀರ್ಥೇ ಸುಪಯಸಿ ವಿತತೇ ಹಂತ -
ನಾಂತರ್ಭವೇತ್ ಕಿಮ್ || ೨೦

ಶ್ರೀಶಂಕರನು ತರ್ಕಶಾಸ್ತ್ರವನ್ನು ಚೆನ್ನಾಗಿ ವೀಕ್ಷಿಸಿದನು. ಕಪಿಲಪ್ರಣೀತವಾದ ಸಾಂಖ್ಯಶಾಸ್ತ್ರದಲ್ಲಿ ಆತನಿಗೆ ಅಸದೃಶವಾದ ಜ್ಞಾನವು ಲಭಿಸಿತು. ಪತಂಜಲಿಯ ಯೋಗಶಾಸ್ತ್ರವನ್ನು ನೀರಿನಂತೆ ಕುಡಿದನು. (ಮೀಮಾಂಸೆಯಲ್ಲಿ) ಭಟ್ಟಪಾದರು ಬರೆದ ವಾರ್ತಿಕಗಳ ನಾನಾಘಟ್ಟಗಳಲ್ಲಿ ಅಪಾರವಾದ ತಿಳಿವಳಿಕೆಯುಂಟಾಯಿತು. (ಮುಖ್ಯವಾಗಿ ಉಪನಿಷತ್ ಪ್ರತಿಪಾದ್ಯವಾದ) ಅದ್ವೈತ ವಿದ್ಯಾಸುಖದಲ್ಲಿ ತರ್ಕಾದಿಶಾಸ್ತ್ರಜನ್ಯವಾದ ಸುಖವು ಅಡಗಿತು. ಓಹೋ!ಅತಿವಿಶಾಲವಾಗಿ ಹರಡಿ ಸಮೃದ್ಧಜಲದಿಂದ ತುಂಬಿದ

ಜಲಾಶಯದಲ್ಲಿ ಭಾವಿಯಿಂದಾಗುವ ಪ್ರಯೋಜನವು ಅಡಗಿ ಹೋಗುವು ದಿಲ್ಲವೇ? (ತರ್ಕಾದಿಶಾಸ್ತ್ರಗಳೆಲ್ಲವೂ ಅದ್ವೈತವಿದ್ಯೆಯಲ್ಲಿ ಪರಿಸಮಾಪ್ತ ವಾಗುತ್ತವೆಯೆಂದೂ ಅದ್ವೈತ ಜ್ಞಾನವೇ ಪರಮೋತ್ತಮವೆಂದೂ ಅಭಿಪ್ರಾಯ)

ಟಿಪ್ಪಣಿ: -ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ| ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ|| ಎಂಬ ಗೀತಾಶ್ಲೋಕದ (೨ - ೪೬) ಅಭಿ ಪ್ರಾಯವಿದು.

ಸ ಹಿ ಜಾತು ಗುರೋಃ ಕುಲೇ ವಸನ್
ಸವಯೋಭಿಃ ಸಹ ಭೈಕ್ಷಲಿಪ್ಸಯಾ |
ಭಗವಾನ್ ಭವನಂ ದ್ವಿಜನ್ಮನೋ
ಧನಹೀನಸ್ಯ ವಿವೇಶ ಕಸ್ಯಚಿತ್ || ೨೧

ಭಗವಾನ್ ಶ್ರೀಶಂಕರನು ಗುರುಕುಲದಲ್ಲಿ ವಾಸಮಾಡುತ್ತಿರುವಾಗ, ಒಂದು ಸಲ ತನ್ನ ವಯಸ್ಕರೊಡನೆ ಭಿಕ್ಷಾರ್ಥಿಯಾಗಿ ಒಬ್ಬ ಬಡ ಬ್ರಾಹ್ಮಣನ ಮನೆಯನ್ನು ಪ್ರವೇಶಿಸಿದನು.

ತಮವೋಚತ ತತ್ರ ಸಾದರಂ
ವಟುವರ್ಯಂ ಗೃಹಿಣಃ ಕುಟುಂಬಿನೀ |
ಕೃತಿನೋ ಹಿ ಭವಾದೃಶೇಷು ಯೇ
ವರಿವಸ್ಯಾಂ ಪ್ರತಿಪಾದಯಂತಿ ತೇ || ೨೨

ಆಗ ಆ ಗೃಹಸ್ಥನ ಪತ್ನಿಯು ಆದರ ಪೂರ್ವಕವಾಗಿ ಆ ವಟು ಶ್ರೇಷ್ಠನನ್ನು ಕುರಿತು "ವಟುವೇ, ನಿನ್ನಂಥವರಿಗೆ ಯಾರು ಅರ್ಚನೆಯನ್ನು ಮಾಡಿ ಭಿಕ್ಷೆಯನ್ನು ನೀಡುತ್ತಾರೋ ಅವರೇ ಧನ್ಯರು.

ವಿಧಿನಾ ಖಲು ವಂಚಿತಾ ವಯಂ
ವಿತರೀತುಂ ವಟವೇ ನ ಶಕ್ನುಮಃ |
ಅಪಿ ಭೈಕ್ಷಮಕಿಂಚನತ್ವತೋ
ಧಿಗಿದಂ ಜನ್ಮ ನಿರರ್ಥಕಂ ಗತಮ್ || ೨೩

ನಾವಾದರೋ ವಿಧಿಯಿಂದ ವಂಚಿತರಾಗಿದ್ದೇವೆ. ಮನೆಯಲ್ಲಿ ಏನೂ ಇಲ್ಲದ್ದರಿಂದ ಒಬ್ಬ ವಟುವಿಗೆ ಭಿಕ್ಷೆಯನ್ನು ನೀಡಲು ನಮಗೆ ಶಕ್ತಿ ಇಲ್ಲವಾಗಿದೆ. ಈ ಜನ್ಮಕ್ಕೆ ಧಿಕ್ಕಾರ. ವ್ಯರ್ಥವಾಗಿ ಆಯುಸ್ಸು ಕಳೆಯುತ್ತಿದೆ" ಎಂದಳು.

ಇತಿ ದೀನಮುದೀರಯಂತ್ಯಸೌ
ಪ್ರದದಾವಾಮಲಕಂ ವ್ರತೀಂದವೇ |

ಕರುಣಂ ವಚನಂ ನಿಶಮ್ಯ ಸೋಽ
ಪ್ಯಭವಜ್ಜ್ಞಾನನಿಧಿರ್ದಯಾದ್ರ್ರಧೀಃ || ೨೪

ಈ ಪ್ರಕಾರವಾಗಿ ಅವಳು ದೈನ್ಯೋಕ್ತಿಗಳನ್ನಾಡುತ್ತಾ ಈ ವಟುಶ್ರೇಷ್ಠನಿಗೆ ಒಂದು ನೆಲ್ಲಿಕಾಯಿಯನ್ನು ಕೊಟ್ಟಳು. ಜ್ಞಾನ ನಿಧಿಯಾದ ಶ್ರೀಶಂಕರನು ಅವಳ ಕರುಣಾಪೂರ್ಣವಾದ ಮಾತನ್ನು ಕೇಳಿದಾಗ ಅವನ ಅಂತಃಕರಣವು ದಯೆಯಿಂದ ಕರಗಿತು.

ಸ ಮುನಿರ್ಮುರಭಿತ್ಕುಟುಂಬಿನೀಂ
ಪದಚಿತ್ರೈರ್ನವನೀತಕೋಮಲೈಃ |
ಮಧುರೈರುಪ ತಷ್ಠಿವಾಂಸ್ತವೈಃ
ದ್ವಿಜದಾರಿದ್ರ್ಯದಶಾನಿವೃತ್ತಯೇ || ೨೫

ಆ ಮುನಿಯು ಬೆಣ್ಣೆಯಂತೆ ಕೋಮಲವಾದ ವಿಚಿತ್ರ ಪದಗಳುಳ್ಳ ಮಧುರವಾದ ಸ್ತೋತ್ರಗಳಿಂದ ಮುರಾರಿಯಾದ ವಿಷ್ಣುವಿನ ಪತ್ನಿ ಲಕ್ಷ್ಮೀದೇವಿಯನ್ನು ಸ್ತುತಿಸಿದನು. ಬ್ರಾಹ್ಮಣನ ಬಡತನವನ್ನು ನೀಗಿಸುವುದು ಅವನ ಉದ್ದೇಶವಾಗಿತ್ತು.

ಅಥ ಕೈಟಭಜಿತ್ಕುಟುಂಬಿನೀ
ತಡಿದುದ್ದಾಮನಿಜಾಂಗಕಾಂತಿಭಿಃ |
ಸಕಲಾಶ್ಚ ದಿಶಃ ಪ್ರಕಾಶಯಂ-
ತ್ಯಚಿರಾದಾವಿರಭೂತ್ ತದಗ್ರತಃ || ೨೬

ಅನಂತರ ಕೈಟಭಾರಿಯಾದ ವಿಷ್ಣುವಿನ ಪತ್ನಿ ಲಕ್ಷ್ಮೀದೇವಿಯು ಮಿಂಚಿನಂತೆ ಬೆಳಗುವ ತನ್ನ ದೇಹ ಕಾಂತಿಗಳಿಂದ ಸಕಲ ದಿಕ್ಕುಗಳನ್ನೂ ಬೆಳಗುತ್ತಾ ಶೀಘ್ರದಲ್ಲಿಯೇ ಅವನೆದುರಿಗೆ ಪ್ರತ್ಯಕ್ಷಳಾದಳು.

ಅಭಿವಂದ್ಯ ಸುರೇಂದ್ರವಂದಿತಂ
ಪದಯುಗ್ಮಂ ಪುರತಃ ಕೃತಾಂಜಲಿಮ್ |
ಲಲಿತಸ್ತುತಿಭಿಃ ಪ್ರಹರ್ಷಿತಾ
ತಮುವಾಚ ಸ್ಮಿತಪೂರ್ವಕಂ ವಚಃ || ೨೭

ಆಗ ಮಧುರಸ್ತುತಿಗಳಿಂದ ಪ್ರಸನ್ನಳಾದ ದೇವಿಯು, ದೇವೇಂದ್ರ ವಂದಿತವಾದ ತನ್ನ ಪದಯುಗಳಕ್ಕೆ ನಮಸ್ಕರಿಸಿ ಅಂಜಲಿ ಬದ್ಧನಾಗಿ ನಿಂತ ಆ ವಟುವನ್ನು ಕುರಿತು ಮುಗುಳ್ನಗೆ ಬೀರುತ್ತ ಹೀಗೆಂದಳು -

ವಿದಿತಂ ತವ ವತ್ಸ ಹೃದ್ಗತಂ
ಕೃತಮೇಭಿರ್ನ ಪುರಾಭವೇ ಶುಭಮ್ |
ಅಧುನಾ ಮದಪಾಂಗ ಪಾತ್ರತಾಂ
ಕಥಮೇತೇ ಮಹಿತಾಮವಾಪ್ನುಯುಃ || ೨೮

"ವತ್ಸ, ನಿನ್ನ ಹೃದ್ಗತವಾದ ಅಭಿಪ್ರಾಯವು ತಿಳಿಯಿತು. ಈ ಜನರು ಪೂರ್ವಜನ್ಮದಲ್ಲಿ ಪುಣ್ಯಕಾರ್ಯವನ್ನು ಆಚರಿಸಲಿಲ್ಲ. ಈಗ ಉನ್ನತ ಸ್ಥಾನವನ್ನು ನೀಡುವ ನನ್ನ ಕಟಾಕ್ಷಕ್ಕೆ ಹೇಗೆ ಪಾತ್ರರಾದಾರು ?" ಎಂದಳು.

ಇತಿ ತದ್ವಚನಂ ಸ ಶುಶ್ರುವಾನ್
ನಿಜಗಾದಾಂಬ ಮಯೀದಮರ್ಪಿತಮ್ |
ಫಲಮದ್ಯ ದದಸ್ವ ತತ್ಫಲಂ
ದಯನೀಯೋ ಯದಿ ತೇಽ ಹಮಿಂದಿರೇ || ೨೯

ಈ ಮಾತನ್ನು ಕೇಳಿದ ಶ್ರೀಶಂಕರನು "ತಾಯಿ - ಇಂದಿರೆ, ಈ ಗೃಹಿಣಿಯು ನನಗೆ ಒಂದು ನೆಲ್ಲಿಕಾಯಿಯನ್ನು ದಾನಮಾಡಿದ್ದಾಳೆ. ತಾಯಿ, ನಾನು ನಿನ್ನ ಕೃಪಗೆ ಪಾತ್ರನಾಗಿದ್ದರೆ ಈ ದಾನದ ಫಲವನ್ನು ಇವರಿಗೆ ನೀಡು" ಎಂದು ಪ್ರಾರ್ಥಿಸಿದನು.

ಅಮುನಾ ವಚನೇನ ತೋಷಿತಾ
ಕಮಲಾ ತದ್ಭವನಂ ಸಮಂತತಃ |
ಕನಕಾಮಲಕೈರಪೂರಯತ್
ಜನತಾಯಾ ಹೃದಯಂ ಚ ವಿಸ್ಮಯೈಃ || ೩೦

ಆ ಮಾತನ್ನು ಕೇಳಿ ಸಂತುಷ್ಟಳಾದ ಲಕ್ಷ್ಮೀದೇವಿಯು ಆ ಮನೆಯೊಳಗೆ ಎಲ್ಲ ಕಡೆಯೂ ಚಿನ್ನದ ನೆಲ್ಲಿಕಾಯಿಗಳಿಂದ ತುಂಬಿಸಿಬಿಟ್ಟಳು. ಅದನ್ನು ಕಂಡು ಜನರ ಹೃದಯವೂ ಸಹ ವಿಸ್ಮಯಗಳಿಂದ ತುಂಬಿಹೋಯಿತು.

ಅಥ ಚಕ್ರಭೃತೋ ವಧೂಮಯೇ
ಸುಕೃತೇಽ ಂತರ್ಧಿಮುಪಾಗತೇ ಸತಿ |
ಪ್ರಶಶಂಸುರತೀವ ಶಂಕರಂ
ಮಹಿಮಾನಂ ತಮವೇಕ್ಷ್ಯ ವಿಸ್ಮಿತಾಃ || ೩೧

ಅನಂತರ ಮಹಾವಿಷ್ಣುವಿನ ವಧೂರೂಪವಾದ ಪುಣ್ಯವು (ಲಕ್ಷ್ಮೀದೇವಿ) ಅಂತರ್ಧಾನ ಹೊಂದಲಾಗಿ ಶ್ರೀಶಂಕರನ ಮಹಿಮೆಯನ್ನು ಕಂಡು ವಿಸ್ಮಿತರಾದ ಜನರು ಆತನನ್ನು ಹೊಗಳಿದರು.

ದಿವಿ ಕಲ್ಪತರುರ್ಯಥಾ ತಥಾ
ಭುವಿ ಕಲ್ಯಾಣಗುಣೋ ಹಿ ಶಂಕರಃ |
ಸುರಭೂಸುರಯೋರಪಿ ಪ್ರಿಯಃ
ಸಮಭೂದಿಷ್ಟ ವಿಶಿಷ್ಟವಸ್ತುದಃ || ೩೨

ಸ್ವರ್ಗದಲ್ಲಿ ಕಲ್ಪವೃಕ್ಷವು ಹೇಗೋ ಹಾಗೆ ಭೂಮಿಯಲ್ಲಿ ಕಲ್ಯಾಣಗುಣನಾದ ಶ್ರೀಶಂಕರನು ವರ್ತಿಸುತ್ತಿದ್ದನಲ್ಲವೆ?ಕಲ್ಪವೃಕ್ಷವೂ ಇಷ್ಟವಾದ ಅಪೂರ್ವ ವಸ್ತುವನ್ನು ಕೊಡತಕ್ಕದ್ದಾಗಿ ಸುರರಿಗೆ ಪ್ರಿಯವಾಗಿತ್ತು. ಶ್ರೀಶಂಕರನು ಅಂತೆಯೇ ಭೂಸುರರಿಗೆ ಪ್ರಿಯನಾಗಿದ್ದನು.

ಅಮರಸ್ಪೃಹಣೀಯ ಸಂಪದಂ
ದ್ವಿಜವರ್ಯಸ್ಯ ನಿವೇಶಮಾತ್ಮವಾನ್ |
ಸ ವಿಧಾಯ ಯಥಾಪುರಂ ಗುರೋಃ
ಸವಿಧೇ ಶಾಸ್ತ್ರವರಾಣ್ಯಶಿಕ್ಷತ || ೩೩

ಈ ಪ್ರಕಾರವಾಗಿ ಜಿತೇಂದ್ರಿಯನಾದ ಆ ವಟುವು ಬ್ರಹ್ಮಣೋತಮನ ಗೃಹದಲ್ಲಿ ದೇವತೆಗಳೂ ಬಯಸುವಷ್ಟು ಸಂಪತ್ತನ್ನು ತಂದು ಕೊಟ್ಟು ಯಥಾಪ್ರಕಾರ ತನ್ನ ಗುರುವಿನ ಬಳಿಯಲ್ಲಿ ಶಾಸ್ತ್ರಗಳ ಅಧ್ಯಯನವನ್ನು ಮಾಡುತ್ತಿದ್ದನು.

ವರಮೇನಮವಾಪ್ಯ ಭೇಜಿರೇ
ಪರಭಾಗಂ ಸಕಲಾಃ ಕಲಾ ಅಪಿ |
ಸಮವಾಪ್ಯ ನಿಜೋಚಿತಂ ಪತಿಂ
ಕಮನೀಯಾ ಇವ ವಾಮಲೋಚನಾಃ || ೩೪

ಸುಂದರನೇತ್ರಯರಾದ ರಮಣೀ ಜನರು ತಮಗೆ ಯೋಗ್ಯನಾದ ಪತಿಯನ್ನು ಪಡೆದು ಹೇಗೆ ಭಾಗ್ಯಶಾಲಿಗಳಾಗುವರೋ ಹಾಗೆ ಸಕಲ ವಿದ್ಯೆಗಳೂ ಈ ವಟುವೆಂಬ ವರನನ್ನು ಆಶ್ರಯಿಸಿ ಭಾಗ್ಯಶಾಲಿಗಳಾದವು.

ಸರಹಸ್ಯ ಸಮಗ್ರ ಶಿಕ್ಷತಾ-
ಖಿಲವಿದ್ಯಸ್ಯ ಯಶಸ್ವಿನೋ ವಪುಃ |

ಉಪಮಾನಕಥಾ ಪ್ರಸಂಗಮ-
ಪ್ಯಸಹಿಷ್ಣು ಶ್ರಿಯಮನ್ವಪದ್ಯತ ॥ ೩೫

ಸಮಸ್ತ ವಿದ್ಯೆಗಳ ಸಮಗ್ರರಹಸ್ಯಗಳನ್ನೂ ಕಲಿತು ಕೀರ್ತಿಶಾಲಿಯಾದ ಶ್ರೀಶಂಕರನ ಆಕೃತಿಯು ಇನ್ನೊಂದು ಪದಾರ್ಥದೊಡನೆ ಹೋಲಿಕೆಯ ಲೇಶವನ್ನೂ ಸಹಸಲಾರದಷ್ಟು ತೇಜಸ್ಸನ್ನು ಗಳಿಸಿತು.

ಜಯತಿ ಸ್ಮ ಸರೋರುಹಪ್ರಭಾ-
ಮದಕುಂಠೀಕರಣಕ್ರಿಯಾಚಣಮ್ ।
ದ್ವಿಜರಾಜಕರೋಪಲಾಲಿತಂ
ಪದಯುಗ್ಮಂ ಪರಗರ್ವಹಾರಿಣಃ ॥ ೩೬

ಪ್ರತಿವಾದಿಗಳ ಗರ್ವವನ್ನಿಳಿಸಲು ಸಮರ್ಥನಾದ ಶ್ರೀಶಂಕರನ ಪಾದಯುಗಳವು ಕಮಲಗಳ ಕಾಂತಿಯನ್ನು ಕುಂಠಿತ ಗೊಳಿಸಲು ಸಮರ್ಥವಾಗಿತ್ತು. ಬ್ರಾಹ್ಮಣೋತ್ತಮರ ಕೈಗಳಿಂದ ಸೇವಿತವಾದ ಪಾದಯುಗಳವಿದು.

ಟಿಪ್ಪಣಿ:-ದ್ವಿಜರಾಜ = ಬ್ರಾಹ್ಮಣೋತ್ತಮ ಮತ್ತು ಚಂದ್ರ. ಕರ = ಹಸ್ತ ಮತ್ತು ಕಿರಣ

ಚಂದ್ರಕಿರಣಗಳಿಗೆ ವಿರೋಧಿಯಾದ ಕಮಲವನ್ನು ಚಂದ್ರಕಿರಣಗಳಿಂದ ಸೇವಿತವಾದ ಪಾದಯುಗಳಕ್ಕೆ ಹೋಲಿಸಲಾಗುವುದಿಲ್ಲವೆಂಬುದು ಇಲ್ಲಿ ಧ್ವನಿತವಾಗಿದೆ.

ಜಲಮಿಂದುಮಣಿಂ ಸ್ರವೇದ್ಯದಿ
ಯದಿ ಪದ್ಮಂ ದೃಷದಸ್ತತಃ ಸರಃ ।
ಯದಿ ತತ್ರ ಭವೇತ್ಕುಶೇಶಯಂ
ತದಮುಷ್ಯಾಂಘ್ರಿತುಲಾಮವಾಪ್ನುಯಾತ್ ॥ ೩೭

ನೀರು ಚಂದ್ರಕಾಂತಶಿಲೆಯನ್ನು ಸ್ರವಿಸುವುದಾದರೆ, ಆ ಶಿಲೆಯಿಂದ ಕಮಲವು ಹುಟ್ಟುವುದಾದರೆ, ಆ ಕಮಲದಿಂದ ಸರಸ್ಸು ಹುಟ್ಟಿದರೆ, ಆ ಸರಸ್ಸಿನಲ್ಲಿ ಇನ್ನೊಂದು ಕಮಲವು ಜನಿಸಿದರೆ, ಆ ಕಮಲಕ್ಕೆ ಶ್ರೀಶಂಕರನ ಪಾದದ ಸಾದೃಶ್ಯವು ಬಂದೀತು !

ಟಿಪ್ಪಣಿ:-ಅದೆಲ್ಲವೂ ಹೇಗೆ ಅಸಂಭವವೋ ಹಾಗೆ ಕಮಲಕ್ಕೆ ಶ್ರೀಶಂಕರನ ಪಾದದ ಹೋಲಿಕೆ ಬರುವುದು ಅಸಂಭವ.

ಪಾದೌ ಪದ್ಮಸಮೌ ವದಂತಿ ಕತಿಚಿತ್ ಶ್ರೀಶಂಕರ ಸ್ಯಾನಘೌ
ವಕ್ತ್ರಂ ಚ ದ್ವಿಜರಾಜ ಮಂಡಲನಿಭಂ ನೈತದ್ದ್ವಯಂ ಸಾಂಪ್ರತಮ್ ।

ಪ್ರೇಷ್ಯಃ ಪದ್ಮಪದಃ ಕಿಲ ತ್ರಿಜಗತಿ ಖ್ಯಾತಃ ಪದಂ ದತ್ತವಾನ್
ಅಂಭೋಜೇ ದ್ವಿಜರಾಜಮಂಡಲಶತೈಃ ಪ್ರೇಷ್ಯೈರುಪಾಸ್ಯಂ ಮುಖಮ್||

ಶ್ರೀಶಂಕರನ ಪರಿಶುದ್ಧವಾದ ಪಾದಗಳು ಪದ್ಮಗಳಿಗೆ ಸದೃಶವಾದವುಗಳೆಂದೂ ಆತನ ಮುಖವು ದ್ವಿಜರಾಜಮಂಡಲಕ್ಕೆ (ಪೂರ್ಣಚಂದ್ರ ಮಂಡಲಕ್ಕೆ) ಸಮಾನವಾದದ್ದೆಂದೂ ಕೆಲವರು ಹೇಳುತ್ತಾರೆ. ಈ ಎರಡು ಹೋಲಿಕೆಗಳೂ ಸರಿಯಲ್ಲ. ಏಕೆಂದರೆ, ಶ್ರೀಶಂಕರನ ಸೇವಕನಾದ (ಶಿಷ್ಯನಾದ) ಪದ್ಮಪಾದನು ಪದ್ಮದ ತಲೆಯಮೇಲೆ ಕಾಲಿಟ್ಟನೆಂದು ಮೂರುಲೋಕಗಳಲ್ಲಿಯೂ ಪ್ರಸಿದ್ಧನಾಗಿದ್ದಾನೆ. ಶ್ರೀಶಂಕರನ ಮುಖವು ನೂರಾರು ದ್ವಿಜರಾಜಮಂಡಲಗಳಿಂದ (ಬ್ರಾಹ್ಮಣೋತ್ತಮರಿಂದ) ಸೇವಿಸಲ್ಪಟ್ಟಿತೆಂದೂ ಪ್ರಸಿದ್ಧಿ ಇದೆ!

ಮುಹುಃ ಸಂತೋ ನೈಜಂ ಹೃದಯಕಮಲಂ ನಿರ್ಮಲತರಂ
ವಿಧಾತುಂ ಯೋಗೀಂದ್ರಾಃ ಪದಕಮಲಮಸ್ಮಿನ್ನಿದಧತಿ |
ದುರಾಪಾಂ ಶಕ್ರಾದ್ಯೈರ್ವಮತಿ ವದನಂ ಯನ್ನವಸುಧಾಂ
ತತೋ ಮನ್ಯೇ ಪದ್ಮಾತ್ಪದಮಧಿಕಮಿಂದೋಶ್ಚ ವದನಮ್ || ೩೯

ವಿದ್ವಾಂಸರಾದ ಯೋಗೀಂದ್ರರು ತಮ್ಮ ಹೃದಯಕಮಲವನ್ನು ಇನ್ನಷ್ಟು ನಿರ್ಮಲವಾಗಿ ಮಾಡಿಕೊಳ್ಳಬೇಕೆಂದು ಶ್ರೀಶಂಕರನ ಚರಣಕಮಲವನ್ನು ತಮ್ಮ ಹೃದಯ ಕಮಲದಲ್ಲಿ ಸ್ಥಾಪಿಸಿಕೊಳ್ಳುತ್ತಾರೆ(ಧ್ಯಾನಿಸುತ್ತಾರೆ). ದೇವೇಂದ್ರನೇ ಮೊದಲಾದವರಿಗೂ ದುರ್ಲಭವಾದ ತತ್ತ್ವಜ್ಞಾನವೆಂಬ ನೂತನವಾದ ಅಮೃತವನ್ನು ಈತನ ಮುಖವು ಸ್ರವಿಸತಕ್ಕದ್ದಾಗಿದೆ. ಹೀಗಿರುವಾಗ ಕಮಲಕ್ಕಿಂತ ಚರಣವೂ ಚಂದ್ರನಿಗಿಂತ ಈತನ ಮುಖವೂ ಹೆಚ್ಚಿನದೆಂದು ತಿಳಿಯುತ್ತೇನೆ.

ಟಿಪ್ಪಣಿ:-ಚಂದ್ರನು ಅಮೃತವನ್ನು ಸ್ರವಿಸುತ್ತಾನಾದ್ದರಿಂದ ಅಮೃತಕಿರಣನೆಂದು ಪ್ರಸಿದ್ಧಿಯುಂಟು. ತತ್ತ್ವಜ್ಞಾನವೇ ನಿಜವಾದ ಅಮೃತ.

ತತ್ತ್ವಜ್ಞಾನಫಲೇಗ್ರಹಿರ್ಘನತರ ವ್ಯಾಮೋಹಮುಷ್ಟಿಂಧಯೋ
ನಿಃಶೇಷ ವ್ಯಸನೋದರಂಭರಿರಘಪ್ರಾಗ್ಭಾರ ಕೂಲಂಕಷಃ |
ಲುಂಟಾಕೋ ಮದಮತ್ಸರಾದಿ ವಿತತೇಸ್ತಾಪತ್ರಯಾರುಂತುದಃ
ಪಾದಃ ಸ್ಯಾದಮಿತಂಪಚಃ ಕರುಣಯಾ ಭದ್ರಂಕರಃ ಶಾಂಕರಃ || ೪೦

ಶ್ರೀಶಂಕರನ ಪಾದವು ತತ್ತ್ವಜ್ಞಾನವೆಂಬ ಫಲವನ್ನು ನೀಡತಕ್ಕದಾಗಿದೆ. ದೃಢವಾಗಿ ಆವರಿಸಿದ ಅಜ್ಞಾನವನ್ನು ಹಿಂಡಿಹಾಕತಕ್ಕದ್ದು. ಸಮಸ್ತ ವ್ಯಸನಗಳನ್ನೂ ನುಂಗಿಹಾಕುವುದು. ಪಾಪದ ಭಾರವನ್ನು ತೊಡೆದು ಹಾಕುವುದು. ಮದಮಾತ್ಸರ್ಯಾದಿಗಳನ್ನು ಲೂಟಿಹೊಡೆದು ನಾಶಮಾಡುವುದು. ತಾಪತ್ರಯಗಳನ್ನು ನಿರ್ಮೂಲಗೊಳಿಸುವುದು. ಈ ಪ್ರಕಾರವಾಗಿ

ಶುಭಂಕರವಾದ ಪಾದವು ಕಾರುಣ್ಯದಿಂದ ನಮ್ಮೆಲ್ಲರಿಗೂ ಉದಾರವಾಗಿ ಅಮಿತಫಲವನ್ನೀಯಲಿ!

ಟಿಪ್ಪಣಿ :- ಫಲೇಗ್ರಹಿ = 'ಫಲೇಗ್ರಹಿರಾತ್ಮಂಭರಿಶ್ಚ' ಎಂಬ ಸೂತ್ರದಿಂದ ಈ ಶಬ್ದವು ಸಿದ್ಧವಾಗುತ್ತದೆ. ಮುಷ್ಟಿಂಧಯಃ='ನಾಡೀ ಮುಷ್ಟ್ಯೋಶ್ಚ' 'ಅರುರ್ದ್ವಿಷದಜಂತಸ್ಯ ಮುಮ್'. ಕೂಲಂಕಷಃ = 'ಸರ್ವಕೂಲಾಭ್ರ ಕರೀಷೇಷು ಕಷಃ'. ಲುಂಟಾಕಃ= 'ಜಲ್ಪಭಿಕ್ಷ ಕುಟ್ಟಲುಂಟವೃಜಃ ಷಾಕನ್'. ಅರುಂತುದಃ = 'ವಿಧ್ವರುಷೋಸ್ತುದಃ'. ಅಮಿತಂಪಚಃ = ಮಿತನಖೇ ಚ. ಭದ್ರಂಕರಃ=ಕ್ಷೇಮ ಪ್ರಿಯಮದ್ರೇಽಣ್‌ಚ' ಎಂಬ ಸೂತ್ರದಿಂದ 'ಮದ್ರಂಕರ' ಶಬ್ದವು ಸಿದ್ಧವಾಗುತ್ತದೆ. ಎರಡು ಶಬ್ದಗಳ ಅರ್ಥವೂ ಒಂದೇ. 'ಭದ್ರಂಕರ' ಎಂದು ಕವಿಗಳ ಪ್ರಯೋಗ ಉಂಟು. ತಾಪತ್ರಯ= ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕ ತಾಪಗಳು. ಆಧ್ಯಾತ್ಮಿಕ = ದೇಹಕ್ಕೆ ಬರುವ ಜ್ವರ ಮೊದಲಾದದ್ದು. ಆಧಿಭೌತಿಕ = ಭೂತಗಳೆಂದರೆ ಪ್ರಾಣಿಗಳು. ಕಳ್ಳರು, ಇಲಿ, ಹುಲಿ, ಸೊಳ್ಳೆ ಮೊದಲಾದವುಗಳಿಂದಾಗುವ ಪೀಡೆ. ಆಧಿದೈವಿಕ = ಬರಗಾಲ, ಅತಿವೃಷ್ಟಿ, ಸಿಡಿಲು, ಭೂಕಂಪ ಮೊದಲಾದದದ್ದು.

ಪದಾಘಾತಸ್ಫೋಟವ್ರಣ ಕಿಣತ ಕಾರ್ತಾಂತಿಕ ಭುಜಂ
ಪ್ರಘಾಣವ್ಯಾಘಾತ ಪ್ರಣತವಿಮತದ್ರೋಹ ಬಿರುದಮ್ |
ಪರಂ ಬ್ರಹ್ಮೈವಾಸೌ ಭವತಿ ತತ ಏವಾಸ್ಯ ಸುಪದಂ
ಗತಾಪಸ್ಮಾರಾರ್ತೀನ್‌ಜಗತಿ ಮಹತೋಽದ್ಯಾಪಿ ತನುತೇ || ೪೧

ಶ್ರೀಶಂಕರನ ಮಹಿಮಾನ್ವಿತವಾದ ಪಾದವು ತನ್ನ ಒದೆತದಿಂದ ಯಮನ ಭುಜದಲ್ಲಿ ವ್ರಣವನ್ನುಂಟುಮಾಡಿ ಅದರ ಕಲೆಯನ್ನು ಆ ಭುಜದಲ್ಲಿ ಉಳಿಸಿತು. ದೊಡ್ಡ ಹಾರೆಯ ಬಡಿತಗಳಂತಿರುವ ಸಂಸಾರ ತಾಪಗಳಿಂದ ಬಗ್ಗಿ ಶರಣಾಗತರಾದವರಲ್ಲಿರುವ ಕಾಮಕ್ರೋಧಾದಿ ದುರ್ಗುಣಗಳನ್ನು ನಾಶಮಾಡುವ ಬಿರುದನ್ನು ಪಡೆದದ್ದು. ಈತನು ಪರಬ್ರಹ್ಮವೇ ಆಗಿದ್ದಾನೆ. ಆದ್ದರಿಂದಲೇ ಜಗತ್ತಿನಲ್ಲಿ ಅಪಸ್ಮಾರಗಳಂತಿರುವ ಅಜ್ಞಾನಾದಿಗಳಿಂದ ಬಳಲುವ ಮಹಾಜನರಲ್ಲಿ ಅವರಿಗಾಗುವ ಪೀಡೆಗಳನ್ನು ಈಗಲೂ ಪಾದವು ಪರಿಹರಿಸುತ್ತಲಿದೆ.

ಟಿಪ್ಪಣಿ:- ಭಕ್ತನಾದ ಮಾರ್ಕಂಡೇಯನು ಯಮನ ಭಯದಿಂದ ಶಿವಲಿಂಗವನ್ನು ಅಪ್ಪಿಕೊಂಡನು. ಆಗ ಶಿವನು ಪ್ರತ್ಯಕ್ಷನಾಗಿ ಯಮನನ್ನು ಎಡಗಾಲಿನಿಂದ ಒದ್ದನೆಂದು ಪೌರಾಣಿಕ ಕಥೆ ಇದೆ.

ಪ್ರಾಪ್ತಸ್ಯಾಭ್ಯುದಯಂ ನವಂ ಕಲಯತಃ ಸಾರಸ್ವತೋಜ್ಜೃಂಭಣಂ
ಸ್ವಾಲೋಕೇನ ವಿಧೂತವಿಶ್ವತಿಮಿರಸ್ಯಾಽಽಸನ್ನತಾರಸ್ಯ ಚ |
ತಾಪಂ ನಸ್ತ್ವರಿತಂ ಕ್ಷಿಪಂತಿ ಘನತಾಪನ್ನಂ ಪ್ರಸನ್ನಾ ಮುನೇ-
ರಾಹ್ಲಾದಂ ಚ ಕಲಾಧರಸ್ಯ ಮಧುರಾಃ ಕುರ್ವಂತಿ ಪಾದಕ್ರಮಾಃ ||

ಉದಯವನ್ನು ಹೊಂದಿದ ಪೂರ್ಣಚಂದ್ರನು ಮತ್ತೆ ಹೊಸದಾಗಿ ಸಮುದ್ರದಲ್ಲಿ ಉಬ್ಬರವನ್ನುಂಟುಮಾಡುತ್ತಾನೆ. ತಾರಾ ಸಹಿತನಾದ ಆತನು ತನ್ನ ಬೆಳದಿಂಗಳಿನಿಂದ ಜಗತ್ತಿನ ಕತ್ತಲೆಯನ್ನು ಪರಿಹರಿಸುತ್ತಾನೆ. ಪೂರ್ಣಕಲಾಧರನಾದ ಚಂದ್ರನ ಪ್ರಸನ್ನಮಧುರವಾದ ಕಿರಣಗಳ ವಿಸ್ತಾರಗಳು ನಮ್ಮ ಅಧಿಕವಾದ ತಾಪವನ್ನು ಹೋಗಲಾಡಿಸುತ್ತವೆ. ಹಾಗೆಯೇ ನವೋದಯವನ್ನು ಹೊಂದಿದ ಶ್ರೀಶಂಕರನು ಸರಸ್ವತೀ ಪ್ರತಿಪಾದಿತವಾದ ತತ್ತ್ವಜ್ಞಾನದ ಉಚ್ಛ್ರಾಯವನ್ನು ಎಸಗುತ್ತಿದ್ದನು. ತನ್ನ ಜ್ಞಾನದಿಂದ ಜನರ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸುತ್ತಿದ್ದನು. ಓಂಕಾರ ರೂಪವಾದ ತಾರಕಮಂತ್ರವನ್ನು ಜಪಿಸುತ್ತಾ ವಿದ್ಯಾವಂತನಾದ ಶ್ರೀಶಂಕರನ ಪ್ರಸನ್ನವೂ ಮನೋಹರವೂ ಆದ ಪಾದವಿನ್ಯಾಸಗಳು ದಟ್ಟವಾಗಿರುವ ನಮ್ಮ ಜನರ ಸಂಸಾರರೂಪವಾದ ಸಂತಾಪವನ್ನು ಪರಿಹರಿಸಲಿ.

ಟಿಪ್ಪಣಿ:-ಚಂದ್ರಪಕ್ಷದಲ್ಲಿ-ಸಾರಸ್ವತ=ಸಮುದ್ರ.ಆಲೋಕ = ಬೆಳದಿಂಗಳು, ತಾರಾ = ನಕ್ಷತ್ರ, ಕಲಾ = ಷೋಡಶ ಕಲೆಗಳು, ಪಾದ = ಕಿರಣ,

ಶ್ರೀಶಂಕರನ ಪಕ್ಷದಲ್ಲಿ- ಅಭ್ಯುದಯ = ಕೀರ್ತಿ, ಸಾರಸ್ವತ = ಸರಸ್ವತೀ ಪ್ರತಿಪಾದಿತ ವಾದ ತತ್ತ್ವಜ್ಞಾನ, ಆಲೋಕ = ಜ್ಞಾನ, ತಾರ = ತಾರಕ ಮಂತ್ರ, ಕಲಾ = ವಿದ್ಯೆ , ಪಾದ= ಕಾಲು.

ನತಿರ್ದತ್ತೇ ಮುಕ್ತಿಂ ನತಮುತ ಪದಂ ವೇತಿ ಭಗವ-
ತ್ಪದಸ್ಯ ಪ್ರಾಗಲ್ಭ್ಯಾಜ್ಜಗತಿ ವಿವದಂತೇ ಶ್ರುತಿವಿದಃ |
ವಯಂ ತು ಬ್ರೂಮಸ್ತ ದ್ಭಜನರತ ಪಾದಾಂಬುಜರಜಃ
ಪರೀರಂಭಾರಂಭಃ ಸಪದಿ ಹೃದಿ ನಿರ್ವಾಣಶರಣಮ್ || ೪೩

ಶ್ರುತ್ಯರ್ಥವನ್ನು ಬಲ್ಲ ವಿದ್ವಾಂಸರು ಶ್ರೀಶಂಕರನಿಗೆ ಮಾಡಿದ ನಮಸ್ಕಾರವು ಮುಕ್ತಿಯನ್ನು ಕೊಡುತ್ತದೆಯೋ ಅಥವಾ ನಮಸ್ಕೃತವಾದ ಆತನ ಪಾದವು ಮುಕ್ತಿಯನ್ನು ಕೊಡುತ್ತದೆಯೋ ಎಂದು ವಾದಮಾಡುತ್ತಿದ್ದಾರೆ. ಆದರೆ ಆತನ ಭಜನೆಯಲ್ಲಿ ನಿರತರಾದ ಭಕ್ತರ ಪಾದಕಮಲದ ಧೂಳಿಯ ಸ್ಪರ್ಶವು ಆದ ಕೂಡಲೇ ಹೃದಯದಲ್ಲಿ ಮುಕ್ತಿಯು ದೊರೆಯುವುದೆಂದು ನಾವು ಹೇಳುತ್ತೇವೆ!

ಧವಲಾಂಶುಕ ಪಲ್ಲವಾವೃತಂ ವಿಲಲಾಸೋರುಯುಗಂ ವಿಪಶ್ಚಿತಃ |
ಅಮೃತಾರ್ಣವಫೇನ ಮಂಜರೀಚ್ಛುರಿತೈರಾವತಹಸ್ತಶಸ್ತಿಭೃತ್ || ೪೪

ಚಿಗುರಿನಂತೆ ಮೃದವಾದ ಬಿಳಿಯವಸ್ತ್ರವನ್ನುಟ್ಟಿದ್ದ ಆ ವಿದ್ವಾಂಸನ ತೊಡೆಯು, ಕ್ಷೀರಸಮುದ್ರದ ನೊರೆಗಳಿಂದ ಆವೃತವಾದ ಐರಾವತವೆಂಬ ಗಜದ ಸುಂದರವಾದ ಸೊಂಡಿಲಂತೆ ವಿರಾಜಿಸುತ್ತಿತ್ತು.

ಯದಿ ಹಾಟಕವಲ್ಲರೀತ್ರಯೀ ಘಟಿತಾ ಸ್ಫಾಟಿಕಕೂಟಭೃತ್ತಟೀ |
ಸ್ಫುಟಮಸ್ಯ ತಯಾ ಕಟೀತಟೀ ತುಲಿತಾ ಸ್ಯಾತ್ ಕಲಿತತ್ರಿಮೇಖಲಾ || ೪೫

ಸ್ಫಟಿಕ ಶಿಲಾಮಯವಾದ ಬೆಟ್ಟದ ತಟಕ್ಕೆ ಚಿನ್ನದಿಂದ ಮಾಡಿದ ಮೂರು ಬಳ್ಳಿಗಳನ್ನು ಸುತ್ತಿದರೆ, ಆಗ ಮೂರು ಮೌಂಜೀದಾರಗಳಿಂದ ಸುತ್ತಲ್ಪಟ್ಟ ಶ್ರೀಶಂಕರನ ಸೊಂಟಕ್ಕೆ ಅದನ್ನು ಹೋಲಿಸಬಹುದಾಗಿತ್ತು.

ಆದಾಯ ಪುಸ್ತಕವಪುಃ ಶ್ರುತಿಸಾರಮೇಕ-
ಹಸ್ತೇನ ವಾದಿಕೃತತದ್ಗತಕಂಟಕಾನಾಮ್ |
ಉದ್ಧಾರಮಾರಚಯತೀವ ವಿಬೋಧ ಮುದ್ರಾ-
ಮುದ್ಬಿಭ್ರತಾ ನಿಜಕರೇಣ ಪರೇಣ ಯೋಗೀ || ೪೬

ಯೋಗಿಯಾದ ಶ್ರೀಶಂಕರನು ಪುಸ್ತಕ ರೂಪವಾಗಿದ್ದ ಶ್ರುತಿಸಾರವನ್ನು ಎಡಗೈಯಲ್ಲಿ ಹಿಡಿದು ಕೊಂಡಿರುತ್ತಿದ್ದನು. ಬಲಗೈಯನ್ನು ಜ್ಞಾನಮುದ್ರೆಯಲ್ಲಿ ಇರಿಸುತ್ತಿದ್ದನು. ಅದನ್ನು ನೋಡಿದರೆ ಪ್ರತಿವಾದಿಗಳು ಶ್ರುತಿಸಾರವಾದ ಉಪನಿಷತ್ತಿನಲ್ಲಿ ಉಂಟುಮಾಡಿದ ಮುಳ್ಳುಗಳನ್ನು ಕಿತ್ತುಹಾಕುತ್ತಿರುವನೋ ಎಂಬಂತೆ ಕಾಣಿಸುತ್ತಿತ್ತು.

ಸುಧೀರಾಜಃ ಕಲ್ಪದ್ರುಮಕಿಸಲಯಾಭೌ ಕರವರೌ
ಕರೋತ್ಯೇತೌ ಚೇತಸ್ಯಮಲಕಮಲಂ ಯತ್ ಸಹಚರಮ್ |
ರುಚೇಶ್ಚೋರಾವೇತಾವಹನಿ ಕಿಮು ರಾತ್ರಾವಿತಿ ಭಿಯಾ
ನಿಶಾದೇರಾಪ್ರಾತರ್ನಿಜದಲಕವಾಟಂ ಘಟಯತಿ || ೪೭

ಪಂಡಿತ ರಾಜನಾದ ಶ್ರೀಶಂಕರನ ಕೈಗಳು ಕಲ್ಪ ವೃಕ್ಷದ ಚಿಗುರೆಲೆಗಳಿಗೆ ಸಮವಾಗಿದ್ದವು. ಕೈಗೆ ಸಮವಾದ ಸುಂದರ ಕಮಲವು ತನ್ನ ಮನಸ್ಸಿನಲ್ಲಿ "ಈ ಕೈಗಳು ಇನ್ನೊಂದರ ಕಾಂತಿಯನ್ನು ಹಗಲಿನಲ್ಲಿಯೇ ಕದಿಯುತ್ತವೆ. ಇನ್ನು ರಾತ್ರಿಯಲ್ಲಿ ಕದಿಯದೆ ಬಿಡುತ್ತವೆಯೇ ?" ಎಂದು ಹೆದರಿ ರಾತ್ರಿಯಿಂದ ಬೆಳಗಿನವರೆಗೆ ತನ್ನ ದಳಗಳೆಂಬ ಬಾಗಿಲನ್ನು ಮುಚ್ಚಿಬಿಡುತ್ತದೆ!

ರುಚಿರಾ ತದುರಃಸ್ಥಲೀ ಬಭಾವರರ ಸ್ಫಾಲವಿಶಾಲಮಾಂಸಲಾ |
ಧರಣೀ ಭ್ರಮಣೋದಿತಶ್ರಮಾತ್ ಪೃಥುಶಯ್ಯೇವ
ಜಯಶ್ರಿಯಾಽಽಶ್ರಿತಾ || ೪೮

ಆತನ ಸುಂದರವಾದ ವಕ್ಷಃಸ್ಥಳವು ಬಾಗಿಲಿನ ಹಲಗೆಯಂತೆ ವಿಶಾಲವಾಗಿಯೂ ಪುಷ್ಟವಾಗಿಯೂ ಇತ್ತು. ಭೂಮಿಯಲ್ಲೆಲ್ಲಾ ಸಂಚರಿಸಿ ದಣಿದು ಜಯಲಕ್ಷ್ಮಿಯು ವಿಶ್ರಾಂತಿಗಾಗಿ ಆಶ್ರಯಿಸಿದ ಅಗಲವಾದ ಹಾಸಿಗೆಯೋ ಎಂಬಂತೆ ಅದು ರಂಜಿಸುತ್ತಿತ್ತು.

ಪರಿಘಪ್ರಥಿಮಾಪಹಾರಿಣೌ ಶುಶುಭಾತೇ ಶುಭಲಕ್ಷಣೌ ಭುಜೌ |
ಬಹಿರಂತರಶತ್ರುನಿಗ್ರಹೇ ವಿಜಯಸ್ತಂಭಯುಗೀಧುರಂಧರೌ || ೪೯

ಅವನ ಶುಭಲಕ್ಷಣಯುಕ್ತವಾದ ಬಾಹುಗಳು ಪರಿಘಾಯುಧಗಳಂತೆ ದೊಡ್ಡದಾಗಿ ನೀಳವಾಗಿದ್ದವು. ಅವುಗಳಲ್ಲೊಂದು ಬಾಹ್ಯಶತ್ರುಗಳಾದ ಪಾಷಂಡಾದಿಗಳನ್ನು ಗೆದ್ದುದಕ್ಕಾಗಿ ಸ್ಥಾಪಿಸಿದ ವಿಜಯಸ್ತಂಭಕ್ಕೆ ಸದೃಶವಾದದ್ದು. ಇನ್ನೊಂದು ಅಂತಃಶತ್ರುಗಳಾದ ಕಾಮಕ್ರೋಧಾದಿಗಳನ್ನು ಜಯಿಸಿದ್ದರ ಚಿಹ್ನೆಯಾದ ಜಯಸ್ತಂಭಕ್ಕೆ ಸಮಾನವಾದದ್ದು.

ಉಪವೀತಮಮುಷ್ಯ ದಿದ್ಯುತೇ ಬಿಸತಂತುಕ್ರಿಯಮಾಣ ಸೌಹೃದಮ್ |
ಶರದಿಂದುಮಯೂಖಪಾಂಡಿಮಾತಿಶಯೋಲ್ಲಂಘನ
ಜಾಂಘಿಕಪ್ರಭಮ್ || ೫೦

ಶ್ರೀಶಂಕರನ ಯಜ್ಞೋಪವೀತವು ತಾವರೆದಂಟುಗಳಲ್ಲಿರುವ ಎಳೆಗಳಂತೆ ಶುಭ್ರವಾಗಿತ್ತು. ಶರತ್ಕಾಲದ ಚಂದ್ರನ ಕಿರಣಗಳ ಬಿಳುಪನ್ನು ಮೀರಿಸುವ ಕಾಂತಿಯುಳ್ಳದ್ದಾಗಿ ಅದು ಶೋಭಿಸುತ್ತಿತ್ತು.

ಸಮರಾಜತ ಕಂಠಕಂಬುರಾಡ್ ಭಗವತ್ಪಾದ ಮುನೇರ್ಯದುದ್ಭವಃ |
ನಿನದಃ ಪ್ರತಿಪಕ್ಷನಿಗ್ರಹೇ ಜಯಶಂಖಧ್ವನಿತಾಮವಿಂದತ || ೫೧

ಆ ಭಗವತ್ಪಾದ ಮುನಿಯ ಕಂಠವು ಶಂಖದಂತೆ ಸುಂದರವಾಗಿ ಶೋಭಿಸಿತು. ಅದರಿಂದ ಹೊರಡುವ ಶಬ್ದವು ಪ್ರತಿಪಕ್ಷಿಗಳನ್ನು ಜಯಿಸಿದ್ದರಿಂದ ಮಾಡುವ ಜಯಶಂಖಧ್ವನಿಯಂತೆ ಪ್ರಕಾಶಿಸಿತು.

ಅರುಣಾಧರ ಸಂಗತಾಽಧಿಕಂ ಶುಶುಭೇ ತಸ್ಯ ಹಿ ದಂತಚಂದ್ರಿಕಾ |
ನವವಿದ್ರುಮವಲ್ಲರೀಗತಾ ತುಹಿನಾಂಶೋರಿವ ಶಾರದೀ ಛವಿಃ || ೫೨

ಆತನ ಕೆಂಪಾದ ತುಟಿಯಮೇಲೆ ಹರಡಿದ ಹಲ್ಲುಗಳ ಬೆಳದಿಂಗಳು ಹೊಸ ಹವಳದ ಬಳ್ಳಿಯಮೇಲೆ ಹರಡಿದ ಶರತ್ಕಾಲದ ಚಂದ್ರನ ಕಾಂತಿಯಂತೆ ತೋರುತ್ತಿತ್ತು.

ಸುಕಪೋಲತಲೇ ಯಶಸ್ವಿನಃ ಶುಶುಭಾತೇ ಸಿತಭಾನುವರ್ಚಸಃ |
ವದನಾಶ್ರಿತಭಾರತೀಕೃತೇ ವಿಧಿಸಂಕಲ್ಪಿತದರ್ಪಣಾವಿವ || ೫೩

ಚಂದ್ರನಂತೆ ಶೋಭಿಸುತ್ತಿದ್ದ ಶ್ರೀಶಂಕರನ ನುಣುಪಾದ ಕೆನ್ನೆಗಳು, ಆತನ ಬಾಯಿಯಲ್ಲಿ ನೆಲಸಿದ ಸರಸ್ವತೀ ದೇವಿಗೋಸ್ಕರ ಬ್ರಹ್ಮನು ನಿರ್ಮಿಸಿದ ಎರಡು ಕನ್ನಡಿಗಳೋ ಎಂಬಂತೆ ಶೋಭಿಸುತ್ತಿದ್ದವು.

ಸಮಾಸೀತ್ತಸ್ಯಾಸ್ಯಂ ಸುಕೃತಜಲಧೇಃ ಸರ್ವಜಗತಾಂ
ಪಯಃಪಾರಾವಾರಾದಜನಿ ರಜನೀಶೋ ಬಹುಮತಾತ್ |
ಸುಧಾಧಾರೋದ್ಗಾರಃ ಸುಸದೃಗನಯೋಃ ಕಿಂತು ಶಶಭೃತ್
ಸತಾಂ ತೇಜಃ ಪುಂಜಂ ಹರತಿ ವದನಂ ತಸ್ಯ ದಿಶತಿ || ೫೪

ಸಮಸ್ತಜೀವರಾಶಿಗಳ ಪುಣ್ಯರಾಶಿಯೆಂಬ ಮಾನ್ಯವಾದ ಸಮುದ್ರದಿಂದ ಆತನ ಸುಂದರವಾದ ಮುಖವು ಜನಿಸಿತು. ಮಾನ್ಯವಾದ ಕ್ಷೀರಸಮುದ್ರದಿಂದ ಪೂರ್ಣಚಂದ್ರನು ಜನಿಸಿದನು. ಈ ಮುಖ ಚಂದ್ರರಿಬ್ಬರಿಗೂ ಅಮೃತಧಾರೆಯನ್ನು ಸುರಿಸುವುದು ಸಮಾನವಾಗಿತ್ತು. ಆದರೆ ಚಂದ್ರನು ಸತಾಂ = ಆಕಾಶದಲ್ಲಿರತಕ್ಕ (ನಕ್ಷತ್ರಗಳ) ತೇಜಸ್ಸನ್ನು ಅಪಹರಿಸಿ ಬಿಡುತ್ತಾನೆ. ಶ್ರೀಶಂಕರನ ಮುಖವಾದರೋ ಸತಾಂ = ಸಜ್ಜನರಿಗೆ ತೇಜಸ್ಸನ್ನು ಒದಗಿಸುತ್ತದೆ.

ಪುರಾ ಕ್ಷೀರಾಂಭೋಧೇರಹಹ ತನಯಾ ಯದ್ವಿಷಯತಾ-
ಜುಷೋ ದೀನಸ್ಯಾಗ್ರೇ ಘನಕನಕಧಾರಾಃ ಸಮಕಿರತ್ |
ಇದಂ ನೇತ್ರಂ ಪಾತ್ರಂ ಕಮಲನಿಲಯಾಪ್ರೀತಿವಿತತೇ-
ರ್ಮುನೀಶಸ್ಯ ಸ್ತೋತುಂ ಕೃತಸುಕೃತ ಏವ ಪ್ರಭವತಿ || ೫೫

ಹಿಂದೆ ಕ್ಷೀರಸಾಗರತನಯೆಯಾದ ಲಕ್ಷ್ಮೀದೇವಿಯು ಶ್ರೀಶಂಕರನ ನೇತ್ರಕ್ಕೆ ಗೋಚರನಾದ ಒಬ್ಬ ದೀನವಿಪ್ರನ ಎದುರಿಗೆ ಸುವರ್ಣವೃಷ್ಟಿಯನ್ನೇ ಸುರಿಸಿದ್ದಳು. ಈ ಮುನೀಶ್ವರನಾದ ಶ್ರೀಶಂಕರನ ನೇತ್ರದ್ವಯವಾದರೋ ಲಕ್ಷ್ಮೀದೇವಿಯ ಪ್ರೀತಿರಾಶಿಗೆ ಪಾತ್ರವಾದದ್ದು. ಇಂತಹ ನೇತ್ರದ್ವಯವನ್ನು ವರ್ಣಿಸಲು ಪುಣ್ಯಶಾಲಿಗೆ ಮಾತ್ರ ಸಾಧ್ಯವಾದೀತು.

ದುರ್ವಾರ ಪ್ರತಿಪಕ್ಷದೂಷಣಸಮುನ್ಮೇಷಕ್ಷಿತೌ ಕಲ್ಪನೇ
ಸೇತೋರಪ್ಯನಘಸ್ಯ ತಾಪಸಕುಲೈಣಾಂಕಸ್ಯ ಲಂಕಾರಯಃ |
ಆಪನ್ನಾನತಿಕಾಯವಿಭ್ರಮಮುಷಃ ಸಂಸಾರಿಶಾಖಾಮೃಗಾನ್
ಪುಷ್ಣಂತ್ಯಚ್ಛಪಯೋಬ್ಧಿವೀಚಿವದಲಂಕಾರಾಃ ಕಟಾಕ್ಷಾಂಕುರಾಃ || ೫೬

(ಈ ೫೬ ನೆಯ ಶ್ಲೋಕದಲ್ಲಿ ಶ್ರೀಶಂಕರನ ಕಟಾಕ್ಷಗಳು ಶ್ರೀರಾಮನ ಕಟಾಕ್ಷಗಳಿಗೆ ಸಮಾನವಾದವುಗಳೆಂದು ಶ್ಲೇಷಮೂಲಕವಾದ ರೂಪಕಾಲಂಕಾರದಿಂದ ವರ್ಣಿಸಲಾಗಿದೆ). ಶ್ರೀರಾಮನ ಪಕ್ಷದಲ್ಲಿ - ಎದುರಿಸಲು ಅಶಕ್ಯನಾದ ದೂಷಣನೆಂಬ ವೈರಿ ರಾಕ್ಷಸನ ಅಬ್ಬರವು ನಾಶವಾದಮೇಲೆ, ಸಮುದ್ರಕ್ಕೆ ಸೇತುವೆಯನ್ನು ದುಃಖ ಶ್ರಮಗಳಿಲ್ಲದೆ ಕಟ್ಟಿದ ಮತ್ತು ಋಷಿಗಳಿಗೆ ಚಂದ್ರನಂತೆ ಆಹ್ಲಾದಕರನಾದ ಶ್ರೀರಾಮನ ಕಟಾಕ್ಷಗಳು ಕ್ಷೀರಸಮುದ್ರದ ಅಲೆಗಳಂತೆ ಸುಂದರವೂ ಸ್ವಚ್ಛವೂ ಆಗಿದ್ದವು. ಅವು ಅತಿಕಾಯನೆಂಬ ರಾಕ್ಷಸನಿಂದಾದ

ಭಯವನ್ನು ಹೋಗಲಾಡಿಸಿದವು. ಆಪತ್ತಿಗೆ ಸಿಕ್ಕಿ ಓಡಿಹೋಗುತ್ತಿದ್ದ ವಾನರರನ್ನು ರಕ್ಷಿಸಿ ಚೈತನ್ಯವನ್ನಿತ್ತವು.

ಶ್ರೀಶಂಕರರ ಪಕ್ಷದಲ್ಲಿ-ಅಜೇಯರಾಗಿದ್ದ ಪ್ರತಿಪಕ್ಷಿಗಳು ಹೊರಿಸುವ ದೋಷಗಳನ್ನು ವಾದದಲ್ಲಿ ಖಂಡಿಸುವದರಲ್ಲಿಯೂ, ಆದೋಷಗಳನ್ನು ದಾಟಿಹೋಗಲು ಸೇತುವೆಗಳಂತಿದ್ದ ಭಾಷ್ಯ ಗ್ರಂಥಗಳನ್ನು ರಚಿಸುವುದರಲ್ಲಿಯೂ, ದೋಷರಹಿತಸಾಮರ್ಥ್ಯವಿದ್ದ ಶ್ರೀಶಂಕರರ ಕಟಾಕ್ಷಗಳು ಕ್ಷೀರಸಾಗರದ ಅಲೆಗಳಂತೆ ರಮ್ಯವಾಗಿ ಸ್ವಚ್ಛವಾಗಿದ್ದವು. ಕಪಿಗಳಂತೆ ಆಡುವ ಸಂಸಾರಿಜನರಿಗೆ ತಮ್ಮ ದೇಹದಲ್ಲಿ ನೆಲೆಸಿರುವ ದೃಢವಾದ ವ್ಯಾಮೋಹವನ್ನು ಆ ಕಟಾಕ್ಷಗಳು ಹೋಗಲಾಡಿಸಿ ಆಶ್ರಿತರನ್ನು ಪಾಲಿಸತಕ್ಕವು.

ಟಿಪ್ಪಣಿ:-ಶ್ರೀ ಶಂಕರಾಚಾರ್ಯರು ಮುಂದೆ ಸಂನ್ಯಾಸವನ್ನು ಸ್ವೀಕರಿಸಿ ಪ್ರಸ್ಥಾನತ್ರಯ ಭಾಷ್ಯಗಳನ್ನು ಬರೆದು ವಿಖ್ಯಾತರಾದ ಮೇಲೆ ವರ್ಣಿಸಬೇಕಾದ ವಿಷಯಗಳನ್ನು, ಭಾವಾವಿಷ್ಟನಾದ ಕವಿಯು ಅವರ ವಿದ್ಯಾಭ್ಯಾಸ ಸಮಯದಲ್ಲಿಯೇ ವರ್ಣಿಸಿ ಬಿಟ್ಟಿದ್ದಾನೆಂದು ತಿಳಿಯಬೇಕು.

ನಿಃಶಂಕಕ್ಷತಿರೂಕ್ಷಕಂಟಕಕುಲಂ ಮೀನಾಂಕದಾವಾನಲ-
ಜ್ವಾಲಾಸಂಕುಲಮಾರ್ತಿಪಂಕಿಲತರಂ ವ್ಯಧ್ವಂ ಧೃತಿಧ್ವಂಸಿನಮ್ |
ಸಂಸಾರಾಕೃತಿಮಾಮಯಚ್ಛಲಚಲದ್ದುರ್ವಾರದುರ್ವಾರಣಮ್
ಮುಷ್ಣಂತಿ ಶ್ರಮಮಾಶ್ರಿತಾ ನವಸುಧಾವೃಷ್ಟ್ಯಾಯಿತಾ ದೃಷ್ಟಯಃ ||

ಸಂಸಾರವೆಂಬುದು ಶ್ರಮವನ್ನು ಕೊಡತಕ್ಕ ಒಂದು ಗೊಂಡಾರಣ್ಯ. ಇದರಲ್ಲಿ ತೀವ್ರವಾದ ಗಾಯಗಳನ್ನುಂಟುಮಾಡುವ ಮೊನಚಾದ ಮುಳ್ಳುಗಳಿವೆ. ಕಾಮವೆಂಬ ಕಾಳ್ಗಿಚ್ಚಿನ ಜ್ವಾಲೆಗಳು ಮುತ್ತಿಕೊಂಡಿವೆ. ನೋವೆಂಬ ಕೆಸರು ತುಂಬಿದೆ. ತಪ್ಪಿಸಿಕೊಳ್ಳಲು ದಾರಿಯಿಲ್ಲ. ಪ್ರತಿಯೊಬ್ಬನ ಧೃತಿಯನ್ನೂ ಕುಗ್ಗಿಸತಕ್ಕದ್ದು ಸಂಸಾರವೆಂಬ ಈ ಅರಣ್ಯ. ರೋಗಗಳೆಂಬ ತಡೆಯಲಶಕ್ಯಗಳಾದ ದುಷ್ಟಗಜಗಳು ಇಲ್ಲಿ ಸಂಚರಿಸುತ್ತವೆ. ಭಕ್ತಿಯಿಂದ ಆಶ್ರಯಿಸಿದರೆ ಶ್ರೀಶಂಕರರ ಕೃಪಾದೃಷ್ಟಿಗಳು ನವಸುಧೆಯನ್ನು ವರ್ಷಿಸಿ ಜನರನ್ನು ಈ ಸಂಸಾರದ ಗೊಂಡಾರಣ್ಯದಿಂದ ಪಾರುಮಾಡುತ್ತವೆ.

ಟಿಪ್ಪಣಿ:-ಅರಣ್ಯವೆಂಬ ಅರ್ಥವು ಶ್ಲೋಕದಲ್ಲಿ ವಾಚ್ಯವಾಗಿಲ್ಲ. ವಿಶೇಷಣಬಲದಿಂದ ಅದು ಗಮ್ಯವಾಗಿದೆ.

ತ್ರಿಪುಂಡ್ರಂ ತಸ್ಯಾಹುಃ ಸಿತಭಸಿತಶೋಭಿ ತ್ರಿಪಥಗಾಂ
ಕೃಪಾಪಾರಾವಾರಂ ಕತಿಚನ ಮುನಿಂ ತಂ ಶ್ರಿತವತೀಮ್ |
ವಯಂ ತ್ವೇತದ್ ಬ್ರೂಮೋ ಜಗತಿ ಕಿಲ ತಿಸ್ರಃ ಸುರುಚಿರಾ-
ಸ್ತ್ರಯೀಮೌಲಿವ್ಯಾಕೃತ್ಯುಪಕೃತಿಭವಾಃ ಕೀರ್ತಯ ಇತಿ || ೫೮

ಶ್ರೀಶಂಕರರನು ಹಣೆಯಲ್ಲಿ ಧರಿಸಿದ ಬಿಳಿಯ ಭಸ್ಮದಿಂದ ಶೋಭಿಸುವ ತ್ರಿಪುಂಡ್ರವನ್ನು ಹೀಗೆ ವರ್ಣಿಸುತ್ತಾರೆ-ಕೃಪಾಸಾಗರನಾದ ಆ ಮುನಿಯನ್ನು ಆಶ್ರಯಿಸಿದ ತ್ರಿವೇಣಿಯಾದ ಗಂಗೆಯೆಂದು ಅವರು ಹೇಳುತ್ತಾರೆ. ನಾವಾದರೋ ಈ ರೀತಿ ಹೇಳುತ್ತೇವೆ-ಋಗ್ಯಜುಸ್ಸಾಮಗಳೆಂಬ ಮೂರು ವೇದಗಳಿಗೆ ಸೇರಿದ ಯಾವ ಉಪನಿಷತ್ತುಗಳುಂಟೋ ಅವುಗಳಿಗೆ ವ್ಯಾಖ್ಯಾನ ಮಾಡಿದ್ದರಿಂದ ಶೋಭಿಸುತ್ತಿರುವ ಮೂರು ಶುಭ್ರ ಕೀರ್ತಿಗಳೆಂದು.

ಟಿಪ್ಪಣಿ:- ಕೀರ್ತಿಯು ಬೆಳ್ಳಗಿರುತ್ತದೆಂದು ಕವಿಸಮಯ.

ಅಸೌ ಶಂಭೋರ್ಲೀಲಾವಪುರಿತಿ ಭೃಶಂ ಸುಂದರ ಇತಿ
ದ್ವಯಂ ಸಂಪ್ರತ್ಯೇತಜ್ಜನಮನಸಿ ಸಿದ್ಧಂ ಚ ಸುಗಮಮ್ |
ಯದಂತಃ ಪಶ್ಯಂತಃ ಕರಣಮದಸೀಯಂ ನಿರುಪಮಂ
ತೃಣೀಕುರ್ವಂತ್ಯೇತೇ ಸುಷಮಮಪಿ ಕಾಮಂ ಸುಮತಯಃ || ೫೯

ಶ್ರೀಶಂಕರರನು ಶಂಭುವಿನ ಲೀಲಾಶರೀರಧಾರಿಯೆಂದೂ ಬಹಳ ಸುಂದರನೆಂದೂ ವಿಖ್ಯಾತವಾಗಿದೆ. ಈ ಎರಡು ವಿಷಯಗಳೂ ಈಗ ಜನರ ಮನಸ್ಸಿನಲ್ಲಿ ನೆಟ್ಟು ಸುಲಭವಾಗಿ ತಿಳಿದು ಬರುತ್ತವೆ. ಏಕೆಂದರೆ, ಬುದ್ಧಿಶಾಲಿಗಳು ಈತನ ಅಸದೃಶವಾದ ಶರೀರವನ್ನು ತಮ್ಮ ಅಂತರಂಗದಲ್ಲಿ ನೋಡುತ್ತಾ ಸುಂದರನಾದ ಮನ್ಮಥನನ್ನೂ ಸಹ ಹುಲ್ಲುಕಡ್ಡಿಯಂತೆ ಉಪೇಕ್ಷೆಯಿಂದ ಕಾಣುತ್ತಾರೆ.

ಅಜ್ಞಾನಾಂತರ್ಗಹನ ಪತಿತಾನಾತ್ಮವಿದ್ಯೋಪದೇಶೈ-
ಸ್ತ್ರಾತುಂ ಲೋಕಾನ್ಭವದವಶಿಖಾ ತಾಪಪಾಪಚ್ಯಮಾನಾನ್ |
ಮುಕ್ತ್ವಾ ಮೌನಂ ವಟವಿಟಪಿನೋ ಮೂಲತೋ ನಿಷ್ಪತಂತೀ
ಶಂಭೋರ್ಮೂರ್ತಿಶ್ಚರತಿ ಭುವನೇ ಶಂಕರಾಚಾರ್ಯರೂಪಾ || ೬೦

ಅಜ್ಞಾನವೆಂಬ ಅರಣ್ಯದಲ್ಲಿ ತೊಳಲುತ್ತಿರುವ ಜನರಿಗೆ ಮತ್ತು ಸಂಸಾರವೆಂಬ ಕಾಳ್ಗಿಚ್ಚಿನ ತಾಪದಲ್ಲಿ ಬೆಂದು ಬೆಂಡಾಗುತ್ತಿರುವ ಜನರಿಗೆ ಆತ್ಮವಿದ್ಯೆಯನ್ನು ಉಪದೇಶಿಸುವುದಕ್ಕಾಗಿ ಶಂಭುವಿನ ಅವತಾರವಾಗಿದೆ. ಈ ಉದ್ದೇಶದಿಂದಲೇ ಮೌನವನ್ನು ತ್ಯಜಿಸಿ ವಟವೃಕ್ಷದ ಬುಡದಿಂದ ಶ್ರೀಶಿವನ ಮೂರ್ತಿಯು ಹೊರಗೆ ಬಂದು ಲೋಕದಲ್ಲಿ ಶ್ರೀಶಂಕರಾಚಾರ್ಯರ ರೂಪದಿಂದ ಸಂಚರಿಸುತ್ತಿದೆ.

ಟಿಪ್ಪಣಿ:-ಶಿವನ ಲೀಲಾವತಾರವಾದ ದಕ್ಷಿಣಾಮೂರ್ತಿಯು ವಟವೃಕ್ಷದ ಬುಡದಲ್ಲಿ ಮೌನವಾಗಿ ಕುಳಿತಿರುತ್ತಾನೆಂದು ವರ್ಣನೆ ಇದೆ. ಅವನೇ ಈಗ ಸಂಚರಿಸುತ್ತಿದ್ದಾನೆ.

ಉಚ್ಚಂಡಾಹಿತವಾವದೂಕಕುಹನಾಪಾಂಡಿತ್ಯಪೈತಂಡಿಕಂ
ಜಾತೇ ದೇಶಿಕಶೇಖರೇ ಪದಜುಷಾಂ ಸಂತಾಪಚಿಂತಾಪಹೇ |

ಕಾತರ್ಯಂ ಹೃದಿ ಭೂಯಸಾಕೃತ ಪದಂ ವೈಭಾಷಿಕಾದೇಃ ಕಥಾ-
ಚಾತುರ್ಯಂ ಕಲುಷಾತ್ಮನೋ ಲಯಮಗಾದ್ ವೈಶೇಷಿಕಾದೇರಪಿ ||

ದೇಶಿಕೋತ್ತಮರಾದ ಶ್ರೀಶಂಕರಾಚಾರ್ಯರು ತಮ್ಮ ಆಶ್ರಿತರ ಸಂತಾಪದ ಚಿಂತೆಯನ್ನು ಪರಿಹರಿಸತಕ್ಕವರಾಗಿ ಅವತರಿಸಿದರು. ಕೋಪಿಷ್ಠರೂ, ಪ್ರತಿಪಕ್ಷದವರೂ, ವಾಚಾಳಿಗಳೂ, ಆದ ವಾದಿಗಳ ಕಪಟವಾದ ಪಾಂಡಿತ್ಯವು ವಿತಂಡಾವಾದವೆಂದು ಅವರು ಸಿದ್ಧಮಾಡಿದರು. ಆಗ ವೈಭಾಷಿಕರೇ ಮೊದಲಾದವರ ಹೃದಯದಲ್ಲಿ ಅಗಾಧವಾದ ನಡುಕವು ಉಂಟಾಯಿತು. ವೈಶೇಷಿಕರೇ ಮೊದಲಾದ ಕುತಾರ್ಕಿಕರ ವಾಕ್‌ಚಾತುರ್ಯವು ಲಯ ಹೊಂದಿತು.

ಟಿಪ್ಪಣಿ:- ವೈಭಾಷಿಕ, ಸೌತ್ರಾಂತಿಕ, ಯೋಗಾಚಾರ, ಮಾಧ್ಯಮಿಕ - ಈ ನಾಲ್ಕು ಬಗೆಯವರು ಬೌದ್ಧರಲ್ಲಿದ್ದಾರೆ.

ಅಮುನಾ ಕ್ರತವಃ ಪ್ರಸಾಧಿತಾಃ ಕ್ರತುವಿಭ್ರಂಶಕರಃ ಸ ಶಂಕರಃ |
ಇಯಮೇವ ಭಿದಾऽ ನಯೋರ್ಜಿತಸ್ಮರಯೋಃ
ಸರ್ವವಿದೋರ್ಬುಧೇಡ್ಯಯೋಃ || ೭೩

ಭಗವಾನ್ ಶಂಕರನೂ ಶ್ರೀಶಂಕರಾಚಾರ್ಯರೂ ಮನ್ಮಥನನ್ನು ಜಯಿಸಿದವರು. ಇಬ್ಬರೂ ಸರ್ವಜ್ಞರು. ದೇವತೆಗಳಿಂದಲೂ ವಿದ್ವಾಂಸರಿಂದಲೂ ಸ್ತುತ್ಯರಾದವರು. ಆದರೆ ಶ್ರೀಶಂಕರರು ಯಜ್ಞವಿಧಿಗಳನ್ನು ಕರ್ತವ್ಯಗಳೆಂದು ಸಾಧಿಸಿದರು. ಭಗವಾನ್ ಶಂಕರನಾದರೋ(ದಕ್ಷ) ಯಜ್ಞವನ್ನು ವಿಧ್ವಂಸ ಗೊಳಿಸಿದನು- ಎಂಬುದಿಷ್ಟೇ ಇವರಿಬ್ಬರಲ್ಲಿನ ಭೇದ!

ಕಲಯಾऽಪಿ ತುಲಾನುಕಾರಿಣಂ ಕಲಯಾಮೋ ನ ವಯಂ ಜಗತ್ತ್ರಯೇ |
ವಿದುಷಾಂ ಸ್ವಸಮೋ ಯದಿ ಸ್ವಯಂ ಭವಿತಾ ನೇತಿ ವದಂತಿ ತತ್ರ ಕೇ ||೭೩

ಈ ಮೂರು ಲೋಕದಲ್ಲಿಯೂ ಶ್ರೀಶಂಕರರಿಗೆ ಏಕಾಂಶದಲ್ಲಿಯಾದರೂ ಸಮನಾದವರು ಇದ್ದಾರೆಂದರೆ ನಾವು ಒಪ್ಪುವುದಿಲ್ಲ. ಹಾಗಾದರೆ ವಿದ್ವಾಂಸರಲ್ಲಿ ಆಚಾರ್ಯರು ತಮಗೆ ತಾವೇ ಸಮಾನರು ಎಂದು ಹೇಳಬಹುದಲ್ಲಾ ಎಂದರೆ "ಅಲ್ಲ" ಎಂದು ಹೇಳತಕ್ಕವರು ಯಾರು?

ದ್ಯುವನಾಂತ ಇವಾಮರದ್ರುಮಾ ಅಮರದ್ರುಷ್ವಿವ ಪುಷ್ಪಸಂಚಯಾಃ |
ಭ್ರಮರಾ ಇವ ಪುಷ್ಪಸಂಚಯೇಷ್ವತಿಸಂಖ್ಯಾಃ ಕಿಲ ಶಂಕರೇ ಗುಣಾಃ || ೭೪

ದೇವತೆಗಳ ನಂದನವನದಲ್ಲಿ ಕಲ್ಪವೃಕ್ಷಗಳಂತೆಯೂ, ಕಲ್ಪವೃಕ್ಷಗಳಲ್ಲಿ ಹೂವಿನರಾಶಿಗಳಂತೆಯೂ, ಹೂಗಳ ರಾಶಿಯಲ್ಲಿ ದುಂಬಿಗಳಂತೆಯೂ, ಶ್ರೀಶಂಕರರಲ್ಲಿ ಅಸಂಖ್ಯಾತವಾದ ಸದ್ಗುಣಗಳು ನೆಲೆಸಿದ್ದವು.

ಕಾಮಂ ವಸ್ತುವಿಚಾರತೋಽಚ್ಛಿನದಯಂ ಪಾರುಷ್ಯಹಿಂಸಾಕ್ರುಧಃ
ಕ್ಷಾಂತ್ಯಾ ದೈನ್ಯಪರಿಗ್ರಹಾನೃತ ಕಥಾಲೋಭಾಂಸ್ತು ಸಂತೋಷತಃ |
ಮಾತ್ಸರ್ಯಂ ತ್ವನಸೂಯಯಾ ಮದಮಹಾಮಾನೌ ಚಿರಂಭಾವಿತ-
ಸ್ವಾನ್ಯೋತ್ಕರ್ಷಗುಣೇನ ತೃಪ್ತಿಗುಣತಸ್ತೃಷ್ಣಾಂ ಪಿಶಾಚೀಮಪಿ || ೬೫

ಇವರು ವಿಷಯಾಭಿಲಾಷೆಯನ್ನು, ಅದರಲ್ಲಿರುವ ದೋಷಗಳನ್ನು ಚಿಂತಿಸುವ ವಸ್ತುವಿಚಾರದಿಂದ ಕತ್ತರಿಸಿಹಾಕಿದರು. ಕಠೋರಭಾಷಣ, ಹಿಂಸೆ, ಕ್ರೋಧಗಳನ್ನು ತಾಳ್ಮೆಯಿಂದ ಜಯಿಸಿದರು. ದೈನ್ಯ, ಧನಪರಿಗ್ರಹ, ಸುಳ್ಳು ಹೇಳುವುದು, ಲೋಭ-ಇವುಗಳನ್ನು ಸಂತೋಷದಿಂದ ಗೆದ್ದರು. ಹೊಟ್ಟೆಕಿಚ್ಚನ್ನು ಅಸೂಯಾರಾಹಿತ್ಯದಿಂದ ನಾಶಪಡಿಸಿದರು. ಮದ ಗರ್ವಗಳನ್ನು ತನಗಿಂತ ಅನ್ಯರಲ್ಲಿ ಉತ್ಕೃಷ್ಟ ಗುಣಗಳಿವೆ ಎಂಬ ಚಿಂತನೆಯಿಂದ ದೂರಮಾಡಿದರು. ಆಸೆ ಎಂಬ ಪಿಶಾಚಿಯನ್ನು ತೃಪ್ತಿಗುಣದಿಂದ ಜಯಿಸಿದರು.

ಟಿಪ್ಪಣಿ:- ಅಸೂಯಾ - ಪರರ ಗುಣಗಳಲ್ಲಿ ಹುಳುಕನ್ನು ಕಾಣುವುದು.

ಕಾಮಂ ಯಸ್ತು ಸಮೂಲಘಾತಮವಧೀತ್ ಸ್ವರ್ಗಾಪವರ್ಗಾಪಹಂ
ರೋಷಂ ಯಃ ಖಲು ಚೂರ್ಣಪೇಷಮಪಿಷನ್ನಿಃಶೇಷ
ದೋಷಾವಹಮ್ |
ಲೋಭಾದೀನಪಿ ಯಃ ಪರಾಂಸ್ತೃಣಸಮುಚ್ಛೇದಂ ಸಮುಚ್ಚಿಚ್ಛಿದೇ
ಸ್ವಸ್ಯಾಂತೇವಸತಾಂ ಸತಾಂ ಸ ಭಗವತ್ಪಾದಃ ಕಥಂ ವರ್ಣ್ಯತೇ || ೬೬

ಶ್ರೀ ಭಗವತ್ಪಾದರು ತಮ್ಮ ಶಿಷ್ಯರ ಸ್ವರ್ಗ ಮೋಕ್ಷಗಳಿಗೆ ವಿಘ್ನಕಾರಿಗಳಾದ ವಿಷಯಾಭಿಲಾಷೆಯನ್ನು ಬುಡಸಹಿತವಾಗಿ ಕಿತ್ತೊಗೆದರು. ಸಮಸ್ತ ದೋಷಗಳಿಗೂ ಕಾರಣವಾದ ಸಿಟ್ಟನ್ನು ಪೂರ್ತಿಯಾಗಿ ಹಿಸುಕಿಹಾಕಿದರು. ಆ ಶಿಷ್ಯರಲ್ಲಿರಬಹುದಾದ ಲೋಭಾದಿದೋಷಗಳನ್ನೂ ಸಹ ಹುಲ್ಲುಕಡ್ಡಿಯನ್ನು ಕೊಚ್ಚಿಹಾಕುವಂತೆ ಕೊಚ್ಚಿಹಾಕಿದರು. ಈ ಆಚಾರ್ಯರ ಮಹಿಮೆಯನ್ನು ಏನೆಂದು ವರ್ಣಿಸೋಣ?

ಕೋಽಘೀ ಕಾಂತ ದಿವಾ ನಿಶಾಕರಕರಾ ಘರ್ಮಸ್ಯ ಮರ್ಮಚ್ಛಿದೋ
ಮುಗ್ಧೇ ಶಂಭುನವಾವತಾರಸುಗುರೋರೇತೇ ಗುಣಾನಾಂ ಗಣಾಃ |
ಕಸ್ಮಾದುತ್ಪಲಸಂತತಿರ್ವಿಕಸಿತಾ ವಿಸ್ಮೇರದಿಗ್ಯೋಷಿತಾಂ
ವಿಷಾಪಾಂಗಝರೀತಿ ದಿಗ್ಗಜವಧೂಪ್ರಶ್ನೋತ್ತರೇ ರೇಜತುಃ || ೬೭

ಆ ಸಮಯದಲ್ಲಿ ಒಂದು ದಿಗ್ಗಜಕ್ಕೂ ಅದರ ಹೆಣ್ಣಾನೆಗೂ ಈ ರೀತಿ ಪ್ರಶ್ನೋತ್ತರಗಳು ಚೆಲುವಾದವು. ಹೆಣ್ಣು ಕೇಳುತ್ತದೆ; ಗಂಡು ಉತ್ತರಿಸುತ್ತದೆ.

ಪ್ರಶ್ನೆ :- ಕಾಂತ, ಈ ಉಷ್ಣತೆಯನ್ನು ನಾಶಮಾಡತಕ್ಕ ಚಂದ್ರನ ಕಿರಣಗಳು ಹಗಲಿನಲ್ಲಿಯೇ ಹೇಗೆ ಬಂದವು ?

ಉತ್ತರ:- ಮುಗ್ಧೆ, ಶಂಭುವಿನ ನವಾವತಾರವಾದ ಶ್ರೀಶಂಕರ ಗುರುವಿನ ಗುಣಗಣಗಳು ಇವು, ಚಂದ್ರ ಕಿರಣಗಳಲ್ಲ!

ಪ್ರಶ್ನೆ:-ಹಾಗಾದರೆ ಈ ನೈದಿಲೆಯ ಹೂಗಳು ಏಕೆ ಅರಳಿದವು?

ಉತ್ತರ:-ಮುಗ್ಧೆ, ಇವು ನೈದಿಲೆಗಳಲ್ಲ. ಶ್ರೀಶಂಕರನ ಗುಣಗಣಗಳನ್ನು ಕಂಡು ಆಶ್ಚರ್ಯ ಚಕಿತರಾದ ದಿಗಂಗನೆಯರ ಅಪಾಂಗಗಳು! (ಕುಡಿನೋಟಗಳು.)

ನಾಕ್ಷ್ಣಾ ಮಾಕ್ಷಿಕಮೀಕ್ಷಿತಂ ಕ್ಷಣಮಪಿ ದ್ರಾಕ್ಷಾ ಮುಹುಃ ಶಿಕ್ಷಿತಾ
ಕ್ಷೀರೇಕ್ಷೂ ಸಮುಪೇಕ್ಷಿತೌ ಭುವಿ ಯಯಾ ಸಾ ಶಂಕರಶ್ರೀಗುರೋಃ |
ಕಾಂತಾನಂತದಿಗಂತಲಂಘನ ಕಲಾಜಂಘಾಲ ತತ್ತದ್ಗುಣ-
ಶ್ರೇಣೀ ನಿರ್ಭರಮಾಧುರೀಮದಧುರಾ ಧನ್ಯೇತಿ ಮನ್ಯಾಮಹೇ || ೭೮

ಶ್ರೀಶಂಕರಗುರುಗಳ ಉತ್ತಮ ಗುಣಶ್ರೇಣಿಗಳ ಮಾಧುರ್ಯವು ದಿಗಂತ ವ್ಯಾಪಿಯಾಯಿತು. ಅದರ ಮಾಧುರ್ಯದಿಂದ ಸಂತೃಪ್ತರಾದ ಜನರು ಜೇನು ತುಪ್ಪವನ್ನು ಕಣ್ಣೆತ್ತಿನೋಡಲಿಲ್ಲ. ದ್ರಾಕ್ಷಿ ಹಣ್ಣನ್ನು ಮತ್ತೆ ಮತ್ತೆ ಹಳಿದರು. ಹಾಲನ್ನೂ ಕಬ್ಬನ್ನೂ ಉಪೇಕ್ಷಿಸಿ ಬಿಟ್ಟರು. ಆಹಾ! ಆಚಾರ್ಯರ ಕೀರ್ತಿಮಾಧುರ್ಯವೇ ಧನ್ಯ.

ಕ್ಷಾಂತಿಶ್ಚೇದ್ವಸುಧಾ ಜಹಾತು ಮಹತೀಂ ಸರ್ವಂಸಹತ್ವಪ್ರಥಾಂ
ವಿದ್ಯಾ ಚೇದ್ವಿರಹಂತು ಷಣ್ಮುಖಮುಖಾಃ ಸ್ವಾಖರ್ವಗರ್ವಾವಲೀಮ್ |
ವೈರಾಗ್ಯಂ ಯದಿ ಬಾದರಾಯಣಿಯಶಃ ಕಾರ್ಶ್ಯಂ ಪರಂ ಗಾಹತಾಂ
ಕಿಂ ಜಲ್ಪೈರ್ಮುನಿಶೇಖರಸ್ಯ ನ ತುಲಾಂ ಕುತ್ರಾಪಿ ವೀಕ್ಷಾಮಹೇ || ೭೯

ಮುನಿಶೇಖರರಾದ ಆಚಾರ್ಯರ ಕ್ಷಮಾಗುಣವನ್ನು ನೋಡಿದರೆ ಭೂದೇವಿಯು ತಾನು 'ಸರ್ವಂಸಹೆ' ಎಂಬ ಬಿರುದನ್ನು ತ್ಯಜಿಸಿ ಬಿಡಬೇಕು. ಅವರ ವಿದ್ಯೆಯ ಎದುರಿಗೆ ಸ್ಕಂದಸ್ವಾಮಿ ಮೊದಲಾದಲಾದವರು ತಾವು ವಿದ್ಯಾವಂತರೆಂಬ ಗರ್ವವನ್ನು ತೊರೆದು ಬಿಡಬೇಕು. ಅವರ ವೈರಾಗ್ಯವನ್ನು ಕಂಡರೆ ಶುಕಮಹರ್ಷಿಯ ಕೀರ್ತಿಯು ಒಣಗಿ ಕೃಶವಾಗಿ ಹೋಗಿ ಬಿಡಬೇಕು! ಎಷ್ಟು ಹೇಳುವುದರಿಂದೇನು ? ಆಚಾರ್ಯರಿಗೆ ಹೋಲುವ ಇನ್ನೊಬ್ಬನನ್ನು ನಾವು ಎಲ್ಲಿಯೂ ಕಾಣಲಾರೆವು.

ಯಾ ಮೂರ್ತಿಃ ಕ್ಷಮಯಾ ಮುನೀಶ್ವರ ಮಯೀ
ಗೋತ್ರಾಸಗೋತ್ರಾಯತೇ
ವಿದ್ಯಾಭಿರ್ನಿರವದ್ಯಕೀರ್ತಿಭಿರಲಂ ಭಾಷಾವಿಭಾಷಾಯತೇ |
ಭಕ್ತಾಭೀಪ್ಸಿತಕಲ್ಪನೇನ ನಿತರಾಂ ಕಲ್ಪಾದಿಕಲ್ಪಾಯತೇ
ಕಸ್ತಾಂ ನಾನ್ಯಪೃಥಗ್ಜನೈಸ್ತುಲಯಿತುಂ ಮಂದಾಕ್ಷಮಂದಾಯತೇ || ೭೦

ಶ್ರೀಶಂಕರರ ಮೂರ್ತಿಯು ಕ್ಷಮೆಯಲ್ಲಿ ಭೂಮಿಗೆ ಸಮಾನವಾಗಿದೆ. ಪರಿಶುದ್ಧ ಕೀರ್ತಿಯುಳ್ಳ ವಿದ್ಯೆಗಳು ಸರಸ್ವತಿಯ ರೂಪಾಂತರಗಳೋ ಎಂಬಂತೆ ಕಾಣುತ್ತವೆ ! ಭಕ್ತರ ಅಪೇಕ್ಷಿತಗಳನ್ನು ನೆರವೇರಿಸುವುದರಿಂದ ಮೂರ್ತಿಯು ಕಲ್ಪವೃಕ್ಷಗಳಿಗೆ ಸದೃಶವಾಗಿದೆ. ಪ್ರಾಕೃತರಾದ ಸಾಮಾನ್ಯ ಜನರೊಡನೆ ಅವರನ್ನು ಹೋಲಿಸುವುದಕ್ಕೆ ಯಾವನಿಗೆ ತಾನೆ ನಾಚಿಕೆಯಾಗದು?

ನ ಬಭೂವ ಪುರಾತನೇಷು ತತ್ಸದೃಶೋ ನಾದ್ಯತನೇಷು ದೃಶ್ಯತೇ |
ಭವಿತಾ ಕಿಮನಾಗತೇಷು ವಾ ನ ಸುಮೇರೋಃ ಸದೃಶೋ ಯಥಾ ಗಿರಿಃ ||

ಹಿಂದೆ ಗತಿಸಿಹೋದವರಲ್ಲಿ ಆಚಾರ್ಯರಿಗೆ ಸಮನಾದವನು ಯಾವನೂ ಇರಲಿಲ್ಲ. ಈ ಕಾಲದಲ್ಲಿ ಅವರಿಗೆ ಸಮಾನನಾದವನು ಒಬ್ಬನೂ ಕಾಣಿಸುವುದಿಲ್ಲ. ಮುಂದೆ ಹುಟ್ಟುವವರಲ್ಲಿ ಯಾರಾದರೂ ಸಮಾನರಾದಾರೇನು? ಇಲ್ಲ. ಮೇರುಪರ್ವತಕ್ಕೆ ಸಮಾನವಾದ ಇನ್ನೊಂದು ಪರ್ವತ ಮುಂದೆ ಹುಟ್ಟುವುದೆ?

ಸಮಶೋಭತ ತೇನ ತತ್ಕುಲ
ಸ ಚ ಶೀಲೇನ ಪರಂ ವ್ಯರೋಚತ |
ಅಪಿ ಶೀಲಮದೀಪಿ ವಿದ್ಯಯಾ
ಹ್ಯಪಿ ವಿದ್ಯಾ ವಿನಯೇನ ದಿದ್ಯುತೇ || ೭೨

ಆಚಾರ್ಯರಿಂದ ಅವರ ವಂಶವು ಶೋಭಿಸಿತು. ಆಚಾರ್ಯರು ಶುದ್ಧವಾದ ಚಾರಿತ್ರದಿಂದ ವಿರಾಜಿಸಿದರು. ಶುದ್ಧ ಚಾರಿತ್ರವು ವಿದ್ಯೆಯಿಂದಲೂ ವಿದ್ಯೆಯು ವಿನಯದಿಂದಲೂ ಶೋಭಿಸಿದವು.

ಸುಯಶಃಕುಸುಮೋಚ್ಚಯಃ ಶ್ರಿಯ-
ದ್ವಿಬುಧಾಲಿರ್ಗುಣ ಪಲ್ಲವೋದ್ಗಮಃ |
ಅವಬೋಧಫಲಃ ಕ್ಷಮಾರಸಃ
ಸುರಶಾಖೀವ ರರಾಜ ಸೂರಿರಾಟ್ || ೭೩

ಆ ವಿದ್ಯಾಧಿರಾಜರು ಕಲ್ಪವೃಕ್ಷದಂತೆ ವಿರಾಜಿಸಿದರು. ಶುಭ್ರ ಕೀರ್ತಿಯೇ ಕಲ್ಪವೃಕ್ಷದ ಹೂವಿನ ರಾಶಿ. ಅವರನ್ನು ಆಶ್ರಯಿಸುವುದಕ್ಕೆ ಬಂದ ಪಂಡಿತರು ದುಂಬಿಗಳು. ಗುಣಗಳೇ ಈ ಕಲ್ಪವೃಕ್ಷದ ಚಿಗುರು. ಜ್ಞಾನವೇ ಹಣ್ಣು. ಕ್ಷಮಾಗುಣವೇ ಹಣ್ಣಿನ ರಸ.

ನ ಚ ಶೇಷಭವೀ ನ ಕಾಪಿಲೀ
ಗಣಿತಾ ಕಾಣಭುಜೀ ನ ಗೀರಪಿ |
ಫಣಿತಿಷ್ಷಿತರಾಸು ಕಾ ಕಥಾ
ಕವಿರಾಜೋ ಗಿರಿ ಚಾತುರೀಜುಷಿ || ೭೪

ಪಂಡಿತರಾಜರಾದ ಅವರ ವಾಕ್‌ಚಾತುರ್ಯವನ್ನು ಅನುಭವಿಸಿದವನಿಗೆ ಶೇಷಾವತಾರಿಯಾದ ಪತಂಜಲಿಯ ಮಾತು ರುಚಿಸುವುದಿಲ್ಲ. ಕಪಿಲ ಮುನಿಯ ವಾಣಿಯೂ ಹಿಡಿಸುವುದಿಲ್ಲ. ಕಣಭುಜರ ವಾಕ್ಯವೂ ಬೇಕೆನಿಸುವುದಿಲ್ಲ. ಹೀಗಿರುವಾಗ ಉಳಿದವರ ಉಕ್ತಿಗಳಿಗೆ ಯಾವ ಗತಿಯಾಗಬಹುದು?

ಭಟ್ಟಭಾಸ್ಕರ ವಿಮರ್ದದುರ್ದಶಾ-
ಮಜ್ಜದಾಗಮಶಿರಃಕರಗ್ರಹಾಃ |
ಹಂತ ಶಂಕರಗುರೋರ್ಗಿರಃ ಕ್ಷರಂ-
ತ್ಯಕ್ಷರಂ ಕಿಮಪಿ ತದ್ರಸಾಯನಮ್ || ೭೫

ಭಟ್ಟಭಾಸ್ಕರನಿಂದಾದ ದುರ್ದಶೆಯಲ್ಲಿ ಮುಳುಗಿ ಹೋಗುತ್ತಿದ್ದ ಉಪನಿಷತ್ತುಗಳ ಕೈಗಳನ್ನು ಶ್ರೀಶಂಕರಗುರುಗಳ ವಾಣಿಗಳು ಹಿಡಿದೆತ್ತಿದವು. ಈ ವಾಣಿಗಳು ಉಪನಿಷತ್ತುಗಳಿಂದ ವರ್ಣನಾತೀತವಾದ ರಸಾಯನವನ್ನು ಸ್ರವಿಸುತ್ತಿವೆ.

ಟಿಪ್ಪಣಿ:-ಭಟ್ಟಭಾಸ್ಕರರ ವ್ಯಾಖ್ಯಾನದಿಂದ ಉಪನಿಷತ್ತುಗಳ ಅರ್ಥವು ಕೆಟ್ಟುಹೋಯಿತು. ಅದನ್ನು ಆಚಾರ್ಯರು ಸರಿಪಡಿಸಿ ಶ್ರೇಷ್ಠವಾದ ಆತ್ಮತತ್ತ್ವವನ್ನು ಹೊರತಂದರು ಎಂದು ಅಭಿಪ್ರಾಯ.

ಜಾಟಾಟಂಕಜಟಾಕುಟೀರವಿಹರನ್ನೈಲಿಂಪಕಲ್ಲೋಲಿನೀ-
ಕ್ಷೋಣೀಶಪ್ರಿಯಕೃನ್ನವಾವತರಣಾವಷ್ಟಂಭಗುಂಫಚ್ಛಿದಃ |
ಗರ್ಜಂತೋಽವತರಂತಿ ಶಂಕರಗುರುಕ್ಷೋಣೀಧರೇಂದ್ರೋದರಾದ್
ವಾಣೀನಿರ್ಝರಿಣೀಝರಾಃ ಕ್ವ ನು ಭಯಂ ದುರ್ಭಿಕ್ಷುದುರ್ಭಿಕ್ಷತಃ||೭೬

ದುಷ್ಟ ಸನ್ಯಾಸಿಗಳು ತತ್ತ್ವಚಿಂತನೆಗಳಿಗೆ ಬರಗಾಲವನ್ನೇ ತಂದು ಬಿಟ್ಟಿದ್ದರು. ಈಗಲಾದರೋ ಶ್ರೀ ಶಂಕರಗುರುವೆಂಬ ಪರ್ವತರಾಜನಿಂದ ವಾಕ್ಕುಗಳೆಂಬ ನದಿಗಳ ಪ್ರವಾಹಗಳು ಕೆಳಗೆ ಹರಿದು ಬರುತ್ತಿವೆ. ಇನ್ನು ಈ ಬರಗಾಲದ ಭಯವೆಲ್ಲಿರುತ್ತದೆ? ಈ

ಪ್ರವಾಹಗಳು ಯಾವ ರೀತಿಯಲ್ಲಿವೆಯೆಂದರೆ - ಹರನ ಜಟೆಯ ಕುಟೀರದಲ್ಲಿ ವಿಹರಿಸುತ್ತಿದ್ದ ದೇವನದಿಯಾದ ಗಂಗೆಯು ಭಗೀರಥರಾಜನಿಗೆ ಪ್ರೀತಿಯನ್ನುಂಟುಮಾಡಬೇಕೆಂದು ಪೃಥ್ವಿಗೆ ಹೊಸದಾಗಿ ಧುಮುಕುವಾಗ ಯಾವ ಗರ್ವಾತಿರೇಕವನ್ನು ತೋರಿದ್ದಳೋ ಅದನ್ನು ಕತ್ತರಿಸಿ ಹಾಕತಕ್ಕವು.

ಟಿಪ್ಪಣಿ:-ಜಟಾಟಂಕ=ಹರ, ಶಿವ (ತ್ರಿಕಾಂಡ ಶೇಷದಲ್ಲಿ ಈ ಅರ್ಥವನ್ನು ಹೇಳಿದೆ). ಆತನಿಗೆ ಸಂಬಂಧಿಸಿದ್ದು ಜಾಟಾಟಂಕ. ನಿಲಿಂಪ =ದೇವತೆ.

ವಾರೀ ಚಿತ್ತಮತಂಗಜಸ್ಯ ನಗರೀ ಬೋಧಾತ್ಮನೋ ಭೂಪತೇ-
ರ್ದೂರೀಭೂತದುರಂತದುರ್ವದಝರೀ ಹಾರೀಕೃತಾ ಸೂರಿಭಿಃ |
ಚಿಂತಾಸಂತತಿತೂಲವಾತಲಹರೀ ವೇದೋಲ್ಲಸಚ್ಚಾತುರೀ
ಸಂಸಾರಾಬ್ಧಿತರೀರುದೇತಿ ಭಗವತ್ಪಾದೀಯ ವಾಗ್ವೈಖರೀ || ೭೭

ಶ್ರೀಶಂಕರಭಗವತ್ಪಾದರಿಂದ ಉದಿಸುವ ವಾಗ್ವೈಖರಿಯು ಚಿತ್ತವೆಂಬ ಆನೆಯನ್ನು ಅಲ್ಲಿಯೇ ಕಟ್ಟಿಹಾಕುವ ಬಂಧನ ಶಾಲೆ. ತತ್ತ್ವ ಬೋಧವೆಂಬ ರಾಜನ ರಾಜಧಾನಿ. ದುರಂತವನ್ನುಂಟುಮಾಡುವ ದುರ್ವಾದಿಗಳ ವಾಕ್ ಪ್ರವಾಹವನ್ನು ದೂರಮಾಡತಕ್ಕದ್ದು. ವಿದ್ವಾಂಸರು ಹಾರದಂತೆ ಕೊರಳಲ್ಲಿ ಧರಿಸುವ ವಾಗ್ವೈಖರಿ ಇದು. ಚಿಂತಾಸಂತತಿಯೆಂಬ ಹತ್ತಿಯರಾಶಿಯನ್ನು ಹಾರಿಸಿ ಬಿಡುವ ಬಿರುಗಾಳಿ ಇದು. ವೇದ ರಹಸ್ಯವನ್ನು ಹೊರತರುವ ಜಾಣ್ಮೆ. ಈ ವಾಗ್ವೈಖರಿಯು ಸಂಸಾರಸಾಗರವನ್ನು ದಾಟಿಸುವ ನೌಕೆಯೇ ಆಗಿದೆ.

ಕಥಾದರ್ಪೋತ್ಸರ್ಪತ್ಕಥಕಬುಧಕಂಡೂಲರಸನಾ-
ಸನಾಲಾಧಃ ಪಾತೇ ಸ್ವಯಮುದಯಮಂತ್ರೋ ವ್ರತಿಪತೇಃ |
ನಿಗುಂಫಃ ಸೂಕ್ತೀನಾಂ ನಿಗಮಶಿಖರಾಂಭೋಜಸುರಭಿ-
ರ್ಜಯತ್ಯದ್ವೈತ ಶ್ರೀಜಯಬಿರುದಘಂಟಾಘಣಘಣಃ || ೭೮

ಯತಿಶ್ರೇಷ್ಠರಾದ ಶ್ರೀ ಶಂಕರಾಚಾರ್ಯರ ಸೂಕ್ತಿರಚನೆಯು ಅದ್ವೈತ ಲಕ್ಷ್ಮಿಯ ವಿಜಯವನ್ನು ಘೋಷಿಸುವ ಘಂಟೆಯ ಘಣಘಣಶಬ್ದವೇ ಆಗಿದೆ. ಅವರ ಸೂಕ್ತಿಯು ವಾದಕಥೆಯನ್ನು ನಡೆಸಲು ಗರ್ವದಿಂದ ಎದುರಾಗುವ ಪ್ರತಿವಾದಿಗಳ ನವೆತುಂಬಿದ ನಾಲಿಗೆಯನ್ನು ನಾಳಸಹಿತವಾಗಿ ಕೆಳಗೆ ಬೀಳಿಸುವ ಉದಯಮಂತ್ರ (ವಾದಿಗಳ ಜಿಹ್ವಾಬಂಧನಮಾಡುವ ಬಗಳಾ ವಿದ್ಯೆ). ಉಪನಿಷತ್ತುಗಳೆಂಬ ತಾವರೆಗಳಿಂದ ಸೂಸುವ ಪರಿಮಳ.

ಕಸ್ತೂರೀಘನಸಾರಸೌರಭಪರೀರಂಭಪ್ರಿಯಂಭಾವುಕಾಃ
ತಾಪೋನ್ಮೇಷಮುಷೋ ನಿಶಾಕರಕರಾಹಂಕಾರಕೂಲಂಕಷಾಃ |

ದ್ರಾಕ್ಷಾಮಾಕ್ಷಿಕಶರ್ಕರಾಮಧುರಿಮಗ್ರಾಮಾವಿಸಂವಾದಿನೋ
ವ್ಯಾಹಾರಾ ಮುನಿಶೇಖರಸ್ಯ ನ ಕಥಂಕಾರಂ ಮುದಂ ಕುರ್ವತೇ || ೭೯

ಆ ಮುನಿಶೇಖರರ ವಚನಗಳು ಕಸ್ತೂರಿ ಪಚ್ಚಕರ್ಪೂರಗಳನ್ನು ಮೂಸಿದಂತೆ ಪ್ರೀತಿಯನ್ನುಂಟುಮಾಡತಕ್ಕವು. ಸಂಸಾರಿಗಳ ತಾಪತ್ರಯಗಳನ್ನು ನಾಶಮಾಡಿ ಚಂದ್ರಕಿರಣಗಳ ಅಹಂಕಾರವನ್ನು ತೊಡೆದುಹಾಕುವಂತಹವು. ದ್ರಾಕ್ಷಿ ಜೇನು ತುಪ್ಪ ಸಕ್ಕರೆಗಳ ಸಂಮಿಶ್ರಣದ ಮಾಧುರ್ಯಕ್ಕೆ ಸಮಾನವಾದ ಮಾಧುರ್ಯವುಳ್ಳವು. ಇಂತಹ ವಚನಗಳು ಹೇಗೆತಾನೆ ಜನರಿಗೆ ಆನಂದವನ್ನುಂಟುಮಾಡದೆ ಇದ್ದಾವು?

ಅದ್ವೈತೇ ಪರಿಮುಕ್ತಕಂಟಕಪಥೇ ಕೈವಲ್ಯಘಂಟಾಪಥೇ
ಸ್ವಾಹಂಪೂರ್ವಕದುರ್ವಿಕಲ್ಪರಹಿತಪ್ರಾಜ್ಞಾಧ್ವನೀನಾಕುಲೇ |
ಪ್ರಸ್ಯಂದನ್ಮಕರಂದವೃಂದಕುಸುಮಸ್ರಕ್ತೋರಣಪ್ರಕ್ರಿಯಾಮ್
ಆಚಾರ್ಯಸ್ಯ ವಿತನ್ವತೇ ನವಸುಧಾಸಿಕ್ತಾಃ ಸ್ವಯಂ ಸೂಕ್ತಯಃ || ೮೦

ದುರ್ವಾದಗಳೆಂಬ ಮುಳ್ಳುಗಳಿಲ್ಲದ ಅದ್ವೈತ ಸಿದ್ಧಾಂತವು ಕೈವಲ್ಯಕ್ಕೆ ಕರೆದೊಯ್ಯುವ ರಾಜಮಾರ್ಗ ಅಹಂಕಾರಪೂರ್ಣವಾದ ದುರ್ವಿಕಲ್ಪಗಳಿಲ್ಲದ ಪ್ರಾಜ್ಞರಾದ ಪಥಿಕರು ಈ ಮಾರ್ಗದಲ್ಲಿ ಹೋಗುತ್ತಿದ್ದಾರೆ. ನವಸುಧೆಯಿಂದ ತುಂಬಿದ ಆಚಾರ್ಯರ ಸೂಕ್ತಿಗಳು ಈ ರಾಜಮಾರ್ಗಕ್ಕೆ ಮಕರಂದ ಭರಿತವಾದ ಹೂಮಾಲೆಗಳ ತೋರಣಗಳಾಗಿವೆ.

ದೂರೋತ್ಸಾರಿತದುಷ್ಟಪಾಂಸುಪಟಲೀದುರ್ನೀತಯೋಽನೀತಯೋ
ವಾತಾ ದೇಶಿಕವಾಙ್ಮಯಾಃ ಶುಭಗುಣಗ್ರಾಮಾಲಯಾ ಮಾಲಯಾಃ |
ಮುಷ್ಣಂತಿ ಶ್ರಮಮುಲ್ಲಸತ್- ಪರಿಮಲಶ್ರೀಮೇದುರಾ ಮೇ ದುರಾ-
ಯಾಸಸ್ಯಾಽಽಧಿಹವಿರ್ಭುಜೋ ಭವಮಯೇ
ಧೀಪ್ರಾಂತರೇ ಪ್ರಾಂತರೇ || ೮೧

ಸಂಸಾರರೂಪವಾದ ಬುದ್ಧಿವಿಕಾರದ ಅರಣ್ಯದಲ್ಲಿರುವ ದೂರದ ದಾರಿಯಲ್ಲಿ ಮನೋವ್ಯಥೆಗಳೆಂಬ ಬೆಂಕಿಯಿಂದ ಬಹಳ ಬಳಲಿದ ನನ್ನ ಕಷ್ಟವನ್ನು ಆಚಾರ್ಯರ ವಾಗ್ರೂಪಗಳಾದ ಮಲಯಮಾರುತಗಳು ನೀಗಿಸಬಲ್ಲವು. ವಾಙ್ಮಯವಾದ ಈ ಮಾರುತಗಳು ಕೆಟ್ಟಧೂಳಿನ ರಾಶಿಗಳೆಂಬ ವಾದಿಗಳ ದುರ್ನೀತಿಗಳನ್ನು ದೂರಮಾಡತಕ್ಕವು. ಉತ್ತಮ ಗುಣಸಮೂಹಗಳಿಗೆ ಆಶ್ರಯವಾಗಿ ಮಾ= ಶ್ರೇಯಸ್ಸಿಗೆ ಆಲಯಗಳಾಗಿರುತ್ತವೆ. ಶ್ರೇಷ್ಠವಾದ ಸುಗಂಧವೆಂಬ ಮೋಕ್ಷಲಕ್ಷ್ಮಿಯಿಂದ ಪರಿಪುಷ್ಟವಾಗಿವೆ.

ನೃತ್ಯಂತ್ಯಾ ರಸನಾಗ್ರಸೀಮನಿ ಗಿರಾಂ ದೇವ್ಯಾಃ ಕಿಮುಂಛ್ರಿಕ್ವಣ-
ನ್ಮಂಜೀರೋರ್ಜಿತಸಿಂಜಿತಾನ್ಯುತ ನಿತಂಬಾಲಂಬಕಾಂಚೀರವಾಃ |

ಕಿಂ ವಲ್ಗತ್-ಕರಪದ್ಮ ಕಂಕಣಝಣತ್ಕಾರಾ ಇತಿ ಶ್ರೀಮತಃ
ಶಂಕಾಮಂಕುರಯಂತಿ ಶಂಕರಕವೇಃ ಸದ್ಯುಕ್ತಯಃ ಸೂಕ್ತಯಃ || ೮೨

ವೇದಸಂಪದ್ಯುಕ್ತರಾದ ಶ್ರೀಶಂಕರಾಚಾರ್ಯರ ಯುಕ್ತಿಪೂರ್ವಕವಾದ ಸೂಕ್ತಿಗಳನ್ನು ಕೇಳತಕ್ಕವರಿಗೆ ಈ ರೀತಿಯ ಶಂಕೆಗಳು ಹುಟ್ಟುತ್ತವೆ-ಏನೆಂದರೆ, ಇವು ಸೂಕ್ತಿಗಳೋ ಅಥವಾ ಅವರ ನಾಲಗೆಯ ತುದಿಯಲ್ಲಿ ನರ್ತಿಸುವ ವಾಗ್ದೇವತೆಯಾದ ಸರಸ್ವತಿಯ ಪಾದನೂಪುರಗಳ ಮಧುರಧ್ವನಿಗಳೊ ? ಅವಳ ನಿತಂಬದ ಮೇಲಿರುವ ಕಾಂಚೀದಾಮದ ಕಿರುಗೆಜ್ಜೆಗಳ ಸದ್ದೊ? ಅಥವಾ ಆ ದೇವಿಯು ಅಲ್ಲಾಡಿಸುತ್ತಿರುವ ತನ್ನ ಪಾಣಿಪದ್ಮಗಳಲ್ಲಿರುವ ಬಳೆಗಳ ಝಣತ್ಕಾರವೊ ?-ಎಂದು.

ಟಿಪ್ಪಣಿ :-'ಋಚಃ ಸಾಮಾನಿ ಯಜೂಗ್‌ಂಷಿ|ಸಾ ಹಿ ಶ್ರೀರಮೃತಾ ಸತಾಮ್' ಎಂಬ ವಚನದಂತೆ ಇಲ್ಲಿ ಶ್ರೀ ಎಂದರೆ ಋಗಾದಿವೇದವೆಂದರ್ಥ.

ವರ್ಷಾರಂಭವಿಜೃಂಭಮಾಣಜಲಮುಗ್ಗಂಭೀರ ಘೋಷೋಪಮೇ
ವಾತ್ಯಾತೂರ್ಣವಿಘೂರ್ಣದರ್ಣವಪಯಃ ಕಲ್ಲೋಲದರ್ಪಾಪಹಃ |
ಉನ್ಮೀಲನ್ನವಮಲ್ಲಿಕಾ ಪರಿಮಲಾಹಂತಾನಿಹಂತಾ ನಿರಾ-
ತಂಕಃ ಶಂಕರಯೋಗಿದೇಶಿಕಗಿರಾಂ ಗುಂಫಃ ಸಮುಜ್ಜೃಂಭತೇ || ೮೩

ಶ್ರೀಶಂಕರಯೋಗಿಗಳ ವಾಗ್ವೈಖರಿಯು ಈ ಪ್ರಕಾರವಾಗಿದ್ದು ನಿರರ್ಗಳವಾಗಿ ವಿಜೃಂಭಿಸುತ್ತಿದೆ- ಮಳೆಗಾಲದ ಆರಂಭದಲ್ಲಿ ಮೇಲೇರಿಬರುವ ಮೋಡಗಳ ಗಂಭೀರವಾದ ಗುಡುಗಿನಂತೆ ಅದು. ಬಿರುಗಾಳಿಯ ಹೊಡೆತಕ್ಕೆ ಎದ್ದು ಬೀಳುವ ಸಮುದ್ರಜಲದ ದೊಡ್ಡದೊಡ್ಡ ಅಲೆಗಳ ದರ್ಪವನ್ನು ಅಳಿಸತಕ್ಕದ್ದು ಅದು. ಅರಳುವ ನವಮಲ್ಲಿಗೆಯ ಪರಿಮಳದ ಅಹಂಕಾರವನ್ನು ನೀಗಿಸತಕ್ಕದ್ದು ಆ ವಾಗ್ವೈಖರಿ.

ಹೃದ್ಯಾ ಪದ್ಯವಿನಾಕೃತಾ ಪ್ರಶಮಿತಾವಿದ್ಯಾಽಮೃಷೋದ್ಯಾ ಸುಧಾ-
ಸ್ವಾದ್ಯಾಮಾದ್ಯದರಾತಿಚೋದ್ಯಭಿದುರಾಽಭೇದ್ಯಾ ನಿಷದ್ಯಾಯಿತಾ |
ವಿದ್ಯಾನಾಮನ ಘೋದ್ಯಮಾ ಸುಚರಿತಾ ಽಽದ್ಯಾಪದುದ್ಯಾಪಿನೀ
ಪದ್ಯಾ ಮುಕ್ತಿಪದಸ್ಯ ಸಾಽದ್ಯ ಮುನಿವಾಙ್ನುದ್ಯಾದನಾದ್ಯಾ ರುಜಃ || ೮೪

ಶ್ರೀಶಂಕರಯತಿಗಳು ಪದ್ಯಗಳಿಲ್ಲದೆ ಗದ್ಯರೂಪವಾಗಿ ರಚಿಸಿರುವ ಮನೋಹರವಾದ ಭಾಷ್ಯವಾಕ್‌ಸರಣಿಯು ಅನಾದಿ ಯಾಗಿ ಬಂದ ಪ್ರಾರಬ್ಧ ಕರ್ಮಗಳ ರೋಗಗಳನ್ನು ಇಂದು ನಿವಾರಿಸತಕ್ಕದ್ದಾಗಲಿ. ಆ ಭಾಷ್ಯಪಂಕ್ತಿಯು ಹೇಗಿರುತ್ತದೆಯೆಂದರೆ, ಅದು ನಮ್ಮ ಅವಿದ್ಯೆಯನ್ನು ಹೋಗಲಾಡಿಸುವ ಯಥಾರ್ಥವಾದ ವಾಣಿಯಾಗಿದೆ . ಅಮೃತದಂತೆ ರುಚಿಕರವಾಗಿದೆ. ಮದಿಸಿದ ಪ್ರತಿಪಕ್ಷಿಗಳು ಮಾಡುವ ಆಕ್ಷೇಪಗಳನ್ನು

ಕತ್ತರಿಸಿಹಾಕುವಂತಹದು. ಪ್ರತಿಪಕ್ಷಿಗಳಿಗೆ ಅಭೇದ್ಯವಾದದ್ದು. ಸಮಸ್ತವಿದ್ಯೆಗಳ ಅಂಗಡಿ ಬೀದಿ ಅದು. ಸಂಪ್ರದಾಯ ಚಾರಿತ್ರವುಳ್ಳದ್ದಾಗಿ ಸಫಲವಾದ ಪ್ರಯತ್ನದಲ್ಲಿ ಉದ್ಯುಕ್ತವಾದದ್ದು. ಸಂಸಾರಿಗಳ ಆಪತ್ತನ್ನು ನಿವಾರಿಸುವ ಸೂಕ್ತಿಗಳ ಮಾರ್ಗ.

ಆಯಾಸಸ್ಯ ನವಾಂಕುರಂ ಘನಮನಸ್ತಾಪಸ್ಯ ಬೀಜಂ ನಿಜಂ
ಕ್ಲೇಶಾನಾಮಪಿ ಪೂರ್ವರಂಗಮಲಘುಪ್ರಸ್ತಾವನಾಡಿಂಡಿಮಮ್ |
ದೋಷಾಣಾಮನೃತಸ್ಯ ಕಾರ್ಮಣಮಸಚ್ಚಿಂತಾತತೇರ್ನಿಷ್ಕುಟಂ
ದೇಹಾದೌ ಮುನಿಶೇಖರೋಕ್ತಿರತುಲಾऽಹಂಕಾರಮುತ್ಕೃಂತತಿ || ೮೫

ದೇಹೇಂದ್ರಿಯಾದಿಗಳಲ್ಲಿ 'ನಾನು' ಎಂಬ ಅಹಂಕಾರವು ಸಂಸಾರದಲ್ಲಾಗುವ ಆಯಾಸಕ್ಕೆ ಮೊಳಕೆಯಾಗಿದೆ. ಈ ಅಹಂಬುದ್ಧಿಯೇ ಮನಸ್ಸಿನ ಸಂತಾಪಕ್ಕೆ ಬೀಜ. ಅವಿದ್ಯಾದಿಕ್ಲೇಶಗಳಿಗೆ ಪೂರ್ವರಂಗ. ರಾಗದ್ವೇಷಾದಿ ದೋಷಗಳು ಆರಂಭವಾಗುವುದಕ್ಕೆ, ನಾಟಕ ಕಥಾಪ್ರಸ್ತಾವನೆಯಲ್ಲಿ ಬರುವ ಭೇರೀನಾದ. ಸುಳ್ಳುಮಾತಿಗೆ ಹೇಳಿಮಾಡಿಸಿದ ಮೂಲಕ್ರಿಯೆ. ಕೆಟ್ಟ ಆಲೋಚನಗಳಿಗೆ ಉದ್ಯಾನವನ. ಇಂತಹ ಅನರ್ಥಕಾರಿಯಾದ ಅಹಂಕಾರವನ್ನು ಮುನಿಶ್ರೇಷ್ಠರಾದ ಶ್ರೀಶಂಕರರ ಅಸಾಧಾರಣವಾದ ಸೂಕ್ತಿಯು ಬುಡಸಹಿತವಾಗಿ ಕತ್ತರಿಸಿ ಎಸೆಯುತ್ತದೆ.

ಟಿಪ್ಪಣಿ:-ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ-ಇವು ಪಂಚಕ್ಲೇಶಗಳು. ಕಾರ್ಮಣ = 'ಮೂಲಕರ್ಮ ತು ಕಾರ್ಮಣಮ್'ಅಮರಕೋಶ. ನಿಷ್ಕುಟ=ಗೃಹೋದ್ಯಾನ.

ತಥಾಗತ ಪಥಾಹತಕ್ಷಪಣಕಪ್ರಥಾಲಕ್ಷಣ-
ಪ್ರತಾರಣರತಾನುವರ್ತ್ಯಖಿಲಜೀವಸಂಜೀವಿನೀ |
ಹರತ್ಯತಿದುರತ್ಯಯಂ ಭವಭಯಂ ಗುರೂಕ್ತಿರ್ನೃಣಾಮ್
ಅನಾಧುನಿಕಭಾರತೀಜರಠಶುಕ್ತಿಮುಕ್ತಾಮಣಿಃ || ೮೬

ಶ್ರೀಶಂಕರ ಗುರುಗಳ ವಾಣಿಯಾದರೋ ಅನಾದಿಯಾದ ವೇದವೆಂಬ ಪ್ರಾಚೀನ ಮುತ್ತಿನ ಚಿಪ್ಪಿನಲ್ಲಿಉದಿಸಿದ ಮುತ್ತು. ಅದು ಕಳೆಯಲಸಾಧ್ಯವಾದ ಜನರ ಸಂಸಾರಭೀತಿಯನ್ನು ನಿವಾರಿಸುತ್ತದೆ. ಬೌದ್ಧರ ದಾರಿಯನ್ನು ತುಳಿದು ಭ್ರಷ್ಟರಾಗಿಯೂ, ದಿಗಂಬರರ ಪ್ರಖ್ಯಾತವಂಚನೋಕ್ತಿಗಳಿಂದ ಹತರಾಗಿಯೂ ಆ ಮಾರ್ಗದಲ್ಲಿದ್ದು ಮೃತಪ್ರಾಯರಾದ ಸಮಸ್ತ ಜನರನ್ನು ಬದುಕಿಸುವ ಸಂಜೀವಿನಿ ಶ್ರೀಶಂಕರವಾಣಿಯೆಂಬ ಮುಕ್ತಾಮಣಿ.

ಝುಂಝಾಮಾರುತವೇಲ್ಲಿತಾಮರಧುನೀಕಲ್ಲೋಲಕೋಲಾಹಲ-
ಪ್ರಾಗ್ಭಾರೈಕಸಗರ್ಭ್ಯನಿರ್ಭರಜರೀಜೃಂಭದ್ವಚೋನಿರ್ಝರಾಃ |

ನೈಕಾಲೀಕಮತಾಲಿ ಧೂಲಿಪಟಲೀ ಮರ್ಮಚ್ಛಿದಃ ಸದ್ಗುರೋ-
ರುದ್ಯದ್ದುರ್ಮತಿಧರ್ಮದುರ್ಮತಿ ಕೃತಾಶಾಂತಿಂ ನಿಕೃಂತಂತಿ ನಃ || ೮೭

ದುರ್ಬುದ್ಧಿಯವರು ಧರ್ಮವೆಂದು ಹೇಳಿದ್ದರಲ್ಲಿ ನಂಬಿಕೆಯನ್ನಿಟ್ಟು ನಮ್ಮ ದುರ್ಬುದ್ಧಿಯಿಂದ ನಮಗಾಗಿರುವ ಚಿತ್ತದ ಅಶಾಂತಿಯನ್ನು ಈ ಸದ್ಗುರುಗಳ ವಾಕ್‌ಪ್ರವಾಹಗಳು ಹೋಗಲಾಡಿಸುತ್ತವೆ. ಇವು ಮಿಥ್ಯಾಮತಗಳೆಂಬ ಧೂಳಿನ ಸಂಚಯವನ್ನು ಶಾಂತ ಮಾಡುತ್ತವೆ. ಸದ್ಗುರುಗಳ ವಾಕ್ಪ್ರವಾಹಗಳಾದರೋ ಝುಂಝಾವಾತದಿಂದ ಉಕ್ಕೇರಿದ ಗಂಗಾನದಿಯ ಕಲ್ಲೋಲ ಕೋಲಾಹಲಗಳಿಗೆ ಸಮವಾಗಿ ವಿಜೃಂಭಿಸತಕ್ಕವು.

ಉನ್ಮೀಲನ್ನವ ಮಲ್ಲಿ ಸೌರಭ ಪರೀರಂಭ ಪ್ರಿಯಂಭಾವುಕಾಃ
ಮಂದಾರದ್ರುಮರಂದವೃಂದವಿಲುಠನ್ಮಾಧುರ್ಯಧುರ್ಯಾ ಗಿರಃ |
ಉದ್ಗೀರ್ಣಾ ಗುರುಣಾ ಅಪಾರಕರುಣಾವಾರಾಕರೇಣಾಽಽದರಾತ್
ಸಚ್ಚೇತೋ ರಮಯಂತಿ ಹಂತ ಮದಯಂತ್ಯಾ ಮೋದಯಂತಿ
ದ್ರುತಮ್ || ೮೮

ಅಪಾರಕರುಣಾಸಮುದ್ರರಾದ ಶ್ರೀಗುರಗಳು ವಾತ್ಸಲ್ಯದಿಂದ ನುಡಿಯುವ ವಾಕ್ಕುಗಳು ಅರಳಿದ ಹೊಸಮಲ್ಲಿಗೆಯ ಪರಿಮಳವನ್ನು ಮೂಸಿದಂತೆ ಪ್ರೀತಿಯನ್ನುಂಟುಮಾಡುತ್ತವೆ. ದೇವಲೋಕದ ಮಂದಾರವೃಕ್ಷದಿಂದ ಒಸರುವ ಮಕರಂದದಂತೆ ಮಧುರವಾಗಿರುತ್ತವೆ. ಆಹಾ! ಈ ನುಡಿಗಳು ಸಜ್ಜನರ ಅಂತಃಕರಣವನ್ನು ಒಡನೆಯೇ ಆನಂದಪಡಿಸುತ್ತವೆ-ಮದಿಸುವಂತೆ ಮಾಡುತ್ತವೆ-ಹರ್ಷಗೊಳಿಸುತ್ತವೆ.

ಧಾರಾವಾಹಿಸುಖಾನುಭೂತಿಮುನಿವಾಗ್ಧಾರಾಸುಧಾರಾಶಿಷು
ಕ್ರೀಡನ್‌ದ್ವೈತಿವಚಃಸು ಕಃ ಪುನರ ನುಕ್ರೀಡೇತ ಮೂಢೇತರಃ|
ಚಿತ್ರಂ ಕಾಂಚನ ಮಂಬರಂ ಪರಿದಧಚ್ಚಿತ್ತೇ ವಿಧತ್ತೇ ಮುಹುಃ
ಕಚ್ಚಿತ್ಕಚ್ಚರದುಷ್ಪಟಚ್ಚರಜರತ್ಕಂಥಾನುಬದ್ಧಾದರಮ್ || ೮೯

ಧಾರಾಜಲವು ಸುರಿದಂತೆ ಸಂತತವಾಗಿ ಜನಿಸುವ ಪರಮಾನಂದವನ್ನನುಭವಿಸುತ್ತ, ಶ್ರೀಶಂಕರ ಮುನಿಗಳ ವಾಗ್ಧಾರೆಯೆಂಬ ಅಮೃತರಾಶಿಯಲ್ಲಿ ತಾನು ಕ್ರೀಡಿಸುತ್ತಿರುವಾಗ, ಯಾವ ಬುದ್ಧಿಶಾಲಿಯು ದ್ವೈತಿಗಳ ಮಾತಿನಲ್ಲಿ ಆದರವನ್ನಿಟ್ಟು ಅದರಲ್ಲಿ ಕ್ರೀಡಿಸಲು ಹೋದಾನು? ಬಂಗಾರದ ಜರಿಯುಳ್ಳ ಚಿತ್ರಾಕಾರದ ಸುಂದರ ವಸ್ತ್ರವನ್ನುಟ್ಟವನು, ಕೊಳಯಾದ ಹರಕುಬಟ್ಟೆಯ ಹಳೆಯ ಕಂತೆಯನ್ನುಡಬೇಕೆಂದು ಮನಸ್ಸಿನಲ್ಲಿ ಎಲ್ಲಾದರೂ ಎಣಿಸುವುದುಂಟೆ?

ತತ್ತ್ವಾದೃಕ್ಷಮುನಿಕ್ಷಪಾಕರವಚಃಶಿಕ್ಷಾಸಪಕ್ಷಾಶಯಃ
ಕ್ಷಾರಂ ಕ್ಷೀರಮುದೀಕ್ಷತೇ ಬುಧಜನೋ ನ ಕ್ಷೌದ್ರಮಾಕಾಂಕ್ಷತಿ|
ರೂಕ್ಷಾಂ ಕ್ಷೇಪಯತಿ ಕ್ಷಿತೌ ಖಲು ಸಿತಾಂ ನೇಕ್ಷುಂ ಕ್ಷಣಂ ಪ್ರೇಕ್ಷತೇ
ದ್ರಾಕ್ಷಾಂ ನಾಪಿ ದಿದೃಕ್ಷತೇ ನ ಕದಲೀಂ ಕ್ಷುದ್ರಾಂ ಜಿಘೃಕ್ಷತ್ಯಲಮ್ ||

ಆ ಪ್ರಕಾರವಾಗಿ ಮುನಿಚಂದ್ರರಾಗಿದ್ದ ಶ್ರೀಶಂಕರರ ವಚನಗಳಿಂದಾದ ಶಿಕ್ಷಣದಿಂದ ಅದ್ವೈತಸಿದ್ಧಾಂತದಲ್ಲಿ ಆದರವನ್ನು ಪಡೆದ ವಿದ್ವಾಂಸನು ಹಾಲನ್ನು ಉಪ್ಪಾಗಿದೆ ಎಂದು ತಳ್ಳಿಬಿಡುತ್ತಾನೆ. ಜೇನನ್ನು ಬಯಸುವುದಿಲ್ಲ. ಸಕ್ಕರೆಯು ನೀರಸವೆಂದು ನೆಲದಮೇಲೆ ಎಸೆದುಬಿಡುತ್ತಾನೆ. ಕಬ್ಬನ್ನಂತೂ ಒಂದುಕ್ಷಣವೂ ನೋಡುವುದಿಲ್ಲ. ದ್ರಾಕ್ಷಿಯನ್ನು ನೋಡಲೂ ಬಯಸುವುದಿಲ್ಲ. ಬಾಳೆಯಹಣ್ಣನ್ನು ಕೀಳೆಂದು ಭಾವಿಸಿ ಮುಟ್ಟುವುದೇ ಇಲ್ಲ!

ವಿಕ್ರೀತಾ ಮಧುನಾ ನಿಜಾ ಮಧುರತಾ ದತ್ತಾ ಮುದಾ ದ್ರಾಕ್ಷಯಾ
ಕ್ಷೀರೈಃ ಪಾತ್ರಧಿಯಾಽರ್ಪಿತಾ ಯುಧಿ ಜಿತಾಲ್ಲಬ್ಧಾ ಬಲಾದಿಕ್ಷುತಃ |
ನ್ಯಸ್ತಾ ಚೋರಭಯೇನ ಹಂತ ಸುಧಯಾ ಯಸ್ಮಾದತಸ್ತದ್ಗಿರಾಂ
ಮಾಧುರ್ಯಸ್ಯ ಸಮೃದ್ಧಿರದ್ಭುತತರಾ ನಾನ್ಯತ್ರ ಸಾ ವೀಕ್ಷ್ಯತೇ || ೯೧

ಆಚಾರ್ಯರ ವಾಕ್ಕುಗಳಿಗೆ ಜೇನು ತುಪ್ಪವು ತನ್ನ ಮಾಧುರ್ಯವನ್ನು ಮಾರಿಕೊಂಡಿದೆ. ದ್ರಾಕ್ಷಿಯು ತನ್ನ ಸಿಹಿಯನ್ನು ಸಂತೋಷದಿಂದಲೇ ಕೊಟ್ಟು ಬಿಟ್ಟಿದೆ. ಈ ವಾಕ್ಕುಗಳು ಯೋಗ್ಯ ಪಾತ್ರವೆಂಬ ಬುದ್ಧಿಯಿಂದ ಹಾಲು ತನ್ನ ರುಚಿಯನ್ನು ದಾನಮಾಡಿದೆ. ಕಬ್ಬಿನೊಡನೆ ಯುದ್ಧಮಾಡಿ ಅದರ ಮಾಧುರ್ಯವನ್ನು ಈ ಸೂಕ್ತಿಗಳು ಗೆದ್ದು ಕೊಂಡಿವೆ. ಅಮೃತವಾದರೋ, ಅಬ್ಬಾ, ಕಳ್ಳರು ಕದ್ದಾರೆಂದು ತನ್ನ ಮಧುರತೆಯನ್ನು ಆಚಾರ್ಯರ ವಚನಗಳಲ್ಲಿ ನ್ಯಾಸವಾಗಿಟ್ಟಿದೆ. ಆದ್ದರಿಂದ ಆ ವಾಕ್ಕುಗಳ ರುಚಿಯ ಸಮೃದ್ಧಿಯು ಅದ್ಭುತವಾದದ್ದು. ಇನ್ನೊಂದು ಕಡೆ ಅದನ್ನು ಕಾಣಲಾಗುವುದಿಲ್ಲ.

ಕರ್ಪೂರೇಣ ಋಣೀಕೃತಂ ಮೃಗಮದೇನಾಧೀತ್ಯ ಸಂಪಾದಿತಂ
ಮಲ್ಲೀಭಿಶ್ಚಿರಸೇವನಾದುಪಗತಂ ಕ್ರೀತಂ ತು ಕಾಶ್ಮೀರಜೈಃ|
ಪ್ರಾಪ್ತಂ ಚೌರತಯಾ ಪಟೀರತರುಣಾ ಯತ್ಸೌರಭಂ ತದ್ಗಿರಾಮ್
ಅಕ್ಷಯ್ಯಂ ಮಹಿತಸ್ಯ ತಸ್ಯ ಮಹಿಮಾ ಧನ್ಯೋಽಯಮನ್ಯಾದೃಶಃ || ೯೨

ಆಚಾರ್ಯರ ವಚನಗಳ ಬಳಿ ಹೋಗಿ ಪಚ್ಚಕರ್ಪೂರವು ತನ್ನ ಗಂಧವನ್ನು ಸಾಲವಾಗಿ ತಂದಿದೆ. ಕಸ್ತೂರಿಯು ಶಿಷ್ಯವೃತ್ತಿಯನ್ನು ಮಾಡಿ ಸುವಾಸನೆಯನ್ನು ತಂದುಕೊಂಡಿದೆ. ಮಲ್ಲಿಗೆ ಹೂವುಗಳು ಬಹಳಕಾಲ ಸೇವೆಮಾಡಿ ತಮ್ಮ ಸೌಗಂಧ್ಯವನ್ನು ವೇತನವೆಂದು ಪಡೆದಿವೆ. ಕಾಶ್ಮೀರಕೇಸರಗಳು ಸುಗಂಧವನ್ನು ಸ್ವಲ್ಪ ಕೊಂಡು ಕೊಂಡು ಬಂದಿವೆ! ಶ್ರೀಗಂಧ ವೃಕ್ಷವು

ಶ್ರೀಶಂಕರವಾಣಿಗಳಲ್ಲಿದ್ದ ಸುಗಂಧವನ್ನು ಕಳ್ಳತನದಿಂದ ತಂದು ಕೊಂಡಿದೆ. ಪೂಜ್ಯರಾದ ಆಚಾರ್ಯರ ವಚನಗಳ ಮಹಿಮೆ ಅನ್ಯಾದೃಶವಾದದ್ದು, ಧನ್ಯವಾದದ್ದು. ಏಕೆಂದರೆ, ಅದರ ಸೌರಭವು ಕಡಿಮೆಯಾಗ ತಕ್ಕದ್ದೇ ಅಲ್ಲ.

ಅಪ್ಸಾಂ ದ್ರಪ್ಸಂ ಸುಲಿಪ್ಸಂ ಚಿರತರಮಚರಂ ಕ್ಷೀರಮದ್ರಾಕ್ಷಮಿಕ್ಷುಂ
ಸಾಕ್ಷಾದ್ದ್ರಾಕ್ಷಾಮಜಕ್ಷಂ ಮಧುರಸಮಧಯಂ ಪ್ರಾಗವಿಂದಂ ಮರಂದಮ್।
ಮೋಚಾಮಾಚಾಮಮನ್ಯೋ ಮಧುರಿಮಗರಿಮಾ ಶಂಕರಾಚಾರ್ಯವಾಚಾಂ
ಆಚಾಂತೋ ಹಂತ ಕಿಂ ತೈರಲಮಪಿ ಚ ಸುಧಾಸಾರಸೀಸಾರಸೀಮ್ನಾ ॥ ೯೩

ರುಚಿಕರವಾದ ತೆಳು ಮೊಸರನ್ನು ನಾನು ತಿಂದಿದ್ದೇನೆ. ಬಹಳ ಕಾಲ ಹಾಲನ್ನು ಕುಡಿದಿದ್ದೇನೆ. ಕಬ್ಬನ್ನೂ ರುಚಿನೋಡಿದ್ದೇನೆ. ದ್ರಾಕ್ಷಿ ಹಣ್ಣನ್ನು ಜಗಿದಿದ್ದೇನೆ. ಜೇನುತುಪ್ಪವನ್ನು ನೆಕ್ಕಿದ್ದೇನೆ. ಹೂವಿನ ರಸದ ಸವಿಯನ್ನು ಪಡೆದಿದ್ದೇನೆ. ಬಾಳೆಹಣ್ಣನ್ನೂ ಭಕ್ಷಿಸಿದ್ದೇನೆ. ಆಹಾ ! ಶ್ರೀಶಂಕರಾಚಾರ್ಯರ ವಚನಗಳಲ್ಲಿರುವ ಮಾಧುರ್ಯಾತಿಶಯವು ಅನ್ಯಾದೃಶ ವಾದದ್ದು. ಆ ಸವಿಯನ್ನೂ ಈಗ ನೋಡಿದೆನು. ಇನ್ನು ಕ್ಷೀರ ಮೊದಲಾದವುಗಳಿಂದ ಆಗ ಬೇಕಾದ್ದೇನು? ರಸವತ್ತಾದ ಅಮೃತದ ಸಾರವೂ ನನಗೆ ಬೇಡ!

ಸಂತಪ್ತಾನಾಂ ಭವದವಥುಭಿಃ ಸ್ಫಾರಕರ್ಪೂರವೃಷ್ಟಿ-
ರ್ಮುಕ್ತಾಯಷ್ಟಿಃ ಪ್ರಕೃತಿವಿಮಲಾ ಮೋಕ್ಷಲಕ್ಷ್ಮೀಮೃಗಾಕ್ಷ್ಯಾಃ।
ಅದ್ವೈತಾತ್ಮಾನವಧಿಕಸುಖಾಸಾರಕಾಸಾರಹಂಸೀ
ಬುದ್ಧೇಃ ಶುದ್ಧ್ಯೈ ಭವತು ಭಗವತ್ಪಾದದಿವ್ಯೋಕ್ತಿಧಾರಾ ॥ ೯೪

ಭಗವತ್ಪಾದರ ದಿವ್ಯವಾದ ಸೂಕ್ತಿಧಾರೆಯು ಸಂಸಾರ ಪರಿತಾಪಗಳಿಂದ ಸಂತಪ್ತ ರಾದವರಿಗೆ ಧಾರಾಳವಾದ ಪಚ್ಚಕರ್ಪೂರದ ವೃಷ್ಟಿಯಾಗಿದೆ. ಮೋಕ್ಷಲಕ್ಷ್ಮಿ ಎಂಬ ಅಂಗನೆಯು ಕೈಯಲ್ಲಿ ಹಿಡಿಯುವ ಸ್ವಚ್ಛವಾದ ಮೌಕ್ತಿಕ ದಂಡವಾಗಿದೆ. ಅದ್ವೈತವೆಂಬ ನಿರವಧಿಕ ಸುಖಪ್ರವಾಹವು ತುಂಬಿದ ಸರಸ್ಸಿನಲ್ಲಿ ವಿರಾಜಿಸುವ ಹಂಸಿ ಈ ಸೂಕ್ತಿಧಾರೆ. ಇದು ಭಕ್ತರ ಬುದ್ಧಿಯನ್ನು ಶುದ್ಧಪಡಿಸುವುದಕ್ಕೆ ಕಾರಣವಾಗಲಿ.

ಆಮ್ನಾಯಾಂತಾಲವಾಲಾ ವಿಮಲತರಸುರೇಶಾದಿಸೂಕ್ತ್ಯಂಬುಸಿಕ್ತಾ
ಕೈವಲ್ಯಾಶಾಪಲಾಶಾ ವಿಬುಧಜನಮನಃಸಾಲಜಾಲಾಧಿರೂಢಾ।
ತತ್ತ್ವಜ್ಞಾನಪ್ರಸೂನಾ ಸ್ಫುರದಮೃತಫಲಾ ಸೇವನೀಯಾ ದ್ವಿಜೈರ್ಯಾ
ಸಾ ಮೇ ಸೋಮಾವತಂಸಾವತರಗುರುವಚೋವಲ್ಲಿರಸ್ತು ಪ್ರಶಸ್ತ್ಯೈ ॥

ಸೋಮಶೇಖರನಾದ ಶಂಭುವಿನ ಅವತಾರವಾಗಿರುವ ಶ್ರೀ ಶಂಕರಗುರುಗಳ ವಾಗ್ರೂಪವಾದ ಲತೆಯು ನನ್ನ ಶ್ರೇಯಸ್ಸಿಗೆ ನಿಮಿತ್ತವಾಗಲಿ. ಈ ಲತೆಗೆ ಉಪನಿಷತ್ತುಗಳೇ ಪಾತಿಯಾಗಿದೆ. ಸುರೇಶ್ವರಾಚಾರ್ಯರೇ ಮೊದಲಾದವರ ವಿಮಲಸೂಕ್ತಿಗಳೆಂಬ ನೀರನ್ನು ಇದಕ್ಕೆ ಎರೆಯಲಾಗಿದೆ. ಮೋಕ್ಷದ ಆಸೆಯೆಂಬ ಎಲೆಗಳಿವೆ. ವಿದ್ವಾಂಸರ ಹೃದಯಗಳೆಂಬ ಸಾಲವೃಕ್ಷಗಳ ಮೇಲೆ ಈ ಲತೆಯು ಹಬ್ಬಿದೆ. ತತ್ತ್ವಜ್ಞಾನವೆಂಬ ಹೂವನ್ನುಬಿಡುತ್ತದೆ. ಸೊಗಸಾದ ಮೋಕ್ಷ ಎಂಬ ಇದರ ಅಮೃತಫಲವನ್ನುದ್ವಿಜರು ಸೇವಿಸುತ್ತಿದ್ದಾರೆ.

ಟಿಪ್ಪಣಿ:-ದ್ವಿಜ ಎಂದರೆ ಪಕ್ಷಿಎಂಬ ಅರ್ಥವೂ ಇಲ್ಲಿ ವಿವಕ್ಷಿತವಾಗಿದೆ.

ನೃತ್ಯದ್ಭೂತೇಶ ವಲ್ಗನ್ಮುಕುಟತಟರಟತ್ಸ್ವರ್ಧುನೀಸ್ಪರ್ಧಿನೀಭಿಃ
ವಾಗ್ಭಿರ್ನಿರ್ಭಿನ್ನಕೂಲೋಚ್ಚಲದಮೃತಸರಃಸಾರಿಣೀಧೋರಣೀಭಿಃ|
ಉದ್ವೇಲದ್ವೈತವಾದಿಸ್ವ ಮತ ಪರಿಣತಾಹಂಕ್ರಿಯಾ ಹುಂಕ್ರಿಯಾಭಿಃ
ಭಾತಿ ಶ್ರೀಶಂಕರಾರ್ಯಃ ಸತತಮುಪನಿಷದ್ವಾಹಿನೀ ಗಾಹಿನೀಭಿಃ* || ೯೬

ಶ್ರೀ ಶಂಕರಾಚಾರ್ಯರು ಉಪನಿಷತ್ತುಗಳೆಂಬ ಸೇನೆಗಳನ್ನುಳಗೊಂಡ ಶಾಸ್ತ್ರೋಕ್ತಿಗಳಿಂದ ಸತತವೂ ಶೋಭಿಸುತ್ತಾರೆ. ಈ ಸೇನಾರೂಪವಾದ ವಾಕ್ಕುಗಳು ಹೇಗಿವೆಯೆಂದರೆ-ತಾಂಡವ ನೃತ್ಯವನ್ನು ಮಾಡುವ ಈಶ್ವರನ ಶಿರಸ್ಸಿನಲ್ಲಿ ಗರ್ಜಿಸುವ ದೇವಗಂಗೆಗೆ ಸದೃಶವಾದವುಗಳು. ತೀರವನ್ನು ಭೇದಿಸಿಕೊಂಡು ಬರುವ ಅಮೃತರಸಮಯ ಸರಸ್ಸಿನ ಪ್ರವಾಹದಂತೆ ವಿಜೃಂಭಿಸ ತಕ್ಕವು. ವೇದಮರ್ಯಾದೆಯನ್ನು ಅತಿಕ್ರಮಿಸಿದ ದ್ವೈತವಾದಿಗಳು ತಮ್ಮ ಮತವನ್ನು ನಂಬಿ ಪ್ರಕಟಿಸುವ ಅಹಂಕಾರವನ್ನು ಹುಂಕಾರದಿಂದ ಓಡಿಸತಕ್ಕವು!

ಟಿಪ್ಪಣಿ:-*ಉಪನಿಷನ್ನದಿಗಳಲ್ಲಿ ಸ್ನಾನಮಾಡಿದ ಎಂದೂ ಅರ್ಥಮಾಡಬಹುದು.

ಸಾಹಂಕಾರಸುರಾಸುರಾವಲಿಕರಾಕೃಷ್ಟಭ್ರಮನ್ಮಂದರ-
ಕ್ಷುಬ್ಧಕ್ಷೀರಪಯೋಽಬ್ಧಿವೀಚಿ ಸಚಿವೈಃ ಸೂಕ್ತೈಃ ಸುಧಾವರ್ಷಣಾತ್|
ಜಂಘಾಲೈರ್ಭವ ದಾವಪಾವಕ ಶಿಖಾಜಾಲೈರ್ಜಟಾಲಾತ್ಮನಾಂ
ಜಂತೂನಾಂ ಜಲದಃ ಕಥಂ ಸ್ತುತಿಗಿರಾಂ ವೈದೇಶಿಕೋದೇಶಿಕಃ || ೯೭

ಸಂಸಾರದ ದಾವಾಗ್ನಿಜ್ವಾಲೆಗಳಿಂದ ಆವೃತರಾದ ಜನರಿಗೆ ಆಚಾರ್ಯರು ಮೇಘವಾಗಿ ಆ ಜ್ವಾಲೆಗಳನ್ನು ಆರಿಸುತ್ತಾರೆ. ಅಹಂಕಾರ ದೃಪ್ತರಾದ ದೇವಾಸುರರು ಕೈಗಳಿಂದ ಎಳೆದು ಕಡೆದಾಗ, ತಿರುಗುತ್ತಿದ್ದ ಮಂದರ ಪರ್ವತದಿಂದ ಕ್ಷೋಭೆಗೊಂಡ ಕ್ಷೀರಸಾಗರದ ಅಲೆಗಳಿಗೆ ಸದೃಶವಾದ ಸೂಕ್ತಿಗಳಿಂದ ಆಚಾರ್ಯರು ಅಮೃತವೃಷ್ಟಿಯನ್ನು ಸುರಿಸಲು ಈ ಸಂಸಾರದ ಜ್ವಾಲೆಗಳು ಓಡಿಹೋಗುತ್ತವೆ! ಇಂತಹ ಶ್ರೀಶಂಕರರು ಸ್ತುತಿಗಳಿಗೆ ದೂರವಾದಾರೆ? (ಅವರು ಸ್ತೋತ್ರಗಳಿಗೆ ಅರ್ಹರಾಗಿದ್ದಾರೆ ಎಂದು ಆಶಯ)

ಕಲಶಾಬ್ಧಿ ಕಚಾಕಚಿಕ್ಷಮಂ
ಕ್ಷಣದಾಧೀಶಗದಾಗದಿಪ್ರಿಯಮ್ |
ರಜತಾದ್ರಿಭುಜಾಭುಜಿಕ್ರಿಯಂ
ಚತುರಂ ತಸ್ಯ ಯಶಃ ಸ್ಮ ರಾಜತೇ || ೯೮

ಶ್ರೀ ಶಂಕರಾಚಾರ್ಯರ ಕೀರ್ತಿಯು ಕ್ಷೀರಸಮುದ್ರ, ಚಂದ್ರ, ಕೈಲಾಸ ಪರ್ವತಗಳೊಡನೆ ಸ್ಪರ್ಧಿಸುವುದಕ್ಕೆ ಸಮರ್ಥವಾಗಿ ವಿರಾಜಿಸುತ್ತಿತ್ತು.

ಟಿಪ್ಪಣಿ:-ಕಲಶಾಬ್ಧಿ = ಕ್ಷೀರಸಮುದ್ರ. ಇಲ್ಲಿ ಕಲಶವೆಂದರೆ ಕಲಶದಲ್ಲಿಡುವ ಕ್ಷೀರವೆಂದು ಲಕ್ಷಣಾ ವೃತ್ತಿಯಿಂದ ಅರ್ಥಮಾಡಬೇಕೆಂದು ಅದ್ವೈತ ರಾಜ್ಯಲಕ್ಷ್ಮೀ ವ್ಯಾಖ್ಯಾನದಲ್ಲಿ ಬರೆದಿದೆ. ಸಮುದ್ರ ಮಥನ ಸಂದರ್ಭದಲ್ಲಿ 'ಮಥ್ಯತಾಂ ಕಲಶೋದಧಿಃ' ಎಂಬ ವಾಕ್ಯವನ್ನು ಪ್ರಾಚೀನ ಗ್ರಂಥದಲ್ಲಿ ಓದಿದ್ದೇನೆ. ಮೊಸರು ಕಡೆಯಲು ಬಳಸುವ ಗಡಿಗೆಯಂತಿರುವ ಸಮುದ್ರ - ಎಂಬ ಅರ್ಥ ಸರಿಯೆನ್ನಿಸುತ್ತದೆ.

ಕಚಾಕಚಿ, ಗದಾಗದಿ, ಭುಜಾಭುಜಿ=ತಲೆಗೂದಲನ್ನೂ ಗದೆಯನ್ನೂ ಭುಜವನ್ನೂ ಹಿಡಿದು ಅನ್ಯೋನ್ಯವಾಗಿ ನಡೆಸುವ ಯುದ್ಧಗಳೆಂದು ಈ ಶಬ್ದಗಳಿಗೆ ಕ್ರಮವಾಗಿ ಅರ್ಥ. ಆಚಾರ್ಯರ ಶುಭ್ರಕೀರ್ತಿಯು ಎಲ್ಲೆಲ್ಲಿಯೂ ವ್ಯಾಪಿಸಿ ಸುಪ್ರಸಿದ್ಧವಾಯಿತೆಂದು ತಾತ್ಪರ್ಯ.

ಪರಿಶುದ್ಧ ಕಥಾಸು ನಿರ್ಜಿತೋ
ಯಶಸಾ ತಸ್ಯ ಕೃತಾಂಕನಃ ಶಶೀ |
ಸ್ವಕಲಂಕ ನಿವೃತ್ತಯೇಽಧುನಾಽ
ಪ್ಯುದಧೌ ಮಜ್ಜತಿ ಸೇವತೇ ಶಿವಮ್ || ೯೯

ಯಾರು ಪರಿಶುದ್ಧರು? -ಎಂಬ ವಿವಾದದಲ್ಲಿ ಆಚಾರ್ಯರ ಕೀರ್ತಿಯಿಂದ ಚಂದ್ರನು ಸೋತು ಹೋದನು. ಏಕೆಂದರೆ, ಅವನಲ್ಲಿ ಒಂದು ಕಪ್ಪು ಕಳಂಕವಿತ್ತು. ಆದ್ದರಿಂದ ಚಂದ್ರನು ಆ ಕಪ್ಪುಕಲೆಯನ್ನು ತೊಳೆದು ಕೊಳ್ಳುವುದಕ್ಕಾಗಿ ಈಗಲೂ ಸಮುದ್ರದಲ್ಲಿ ಮುಳುಗು ಹಾಕುತ್ತಲೇ ಇದ್ದಾನೆ! ಅದು ಸಾಲದೆಂದು ಈಶ್ವರನ ಸೇವೆ ಮಾಡುತ್ತಿದ್ದಾನೆ!

ಧಮ್ಮಿಲ್ಲೇ ನವಮಲ್ಲಿವಲ್ಲಿಕುಸುಮಸ್ರಕ್ಕಲ್ಪನಾಶಿಲ್ಪಿನೋ
ಭದ್ರಶ್ರೀರಸಚಿತ್ರಚಿತ್ರಿತಕೃತಃ ಕಾಂತೇ ಲಲಾಟಾಂತರೇ|
ತಾರಾವಲ್ಲ್ಯನುಹಾರಿಹಾರಲತಿಕಾನಿರ್ಮಾಣಕರ್ಮಾಣುಕಾಃ
ಕಂಠೇ ದಿಕ್ಸುದೃಶಾಂ ಮುನೀಶ್ವರಯಶಃ ಪೂರಾ ನಭಃಪೂರಕಾಃ || ೧೦೦

ಮುನೀಶ್ವರರಾದ ಶ್ರೀಶಂಕರಾಚಾರ್ಯರ ಯಶಸ್ಸುಗಳು ಗಗನವನ್ನು ವ್ಯಾಪಿಸಿಕೊಂಡಿವೆ. ಅವು ದಿಗಂಗನೆಯರ ತುರುಬುಗಳಲ್ಲಿ ಮಲ್ಲಿಗೆ ಬಳ್ಳಿಯ ಹೊಸಹೂಗಳ ಸರಗಳನ್ನು ನಿರ್ಮಿಸಿ ಮುಡಿಸಿವೆ. ಆ ದಿಗಂಗನೆಯರ ಸುಂದರವಾದ ಹಣೆಯಲ್ಲಿ ಬಿಳಿಯ ಚಂದನರಸದಿಂದ

ಚಿತ್ರಗಳನ್ನು ಬರೆದು ಅಲಂಕರಿಸಿವೆ. ಅವರ ಕಂಠದಲ್ಲಿ ನಕ್ಷತ್ರಮಾಲೆಯಂತಿರುವ ಮುತ್ತಿನಸರವನ್ನು ನಿರ್ಮಿಸುವ ಕಾರ್ಯದಲ್ಲಿ ನೈಪುಣ್ಯವನ್ನು ತೋರಿಸಿವೆ.

ಟಿಪ್ಪಣಿ:-ಭದ್ರಶ್ರೀ=ಶ್ರೀಗಂಧ. ಅಣುಕ =ನಿಪುಣ. 'ಅಣುಕೋ ನಿಪುಣಾಲ್ಪಯೋಃ' ಎಂದು ಮೇದಿನೀಕೋಶ. ತಾರಾವಲೀ=ನಕ್ಷತ್ರಮಾಲೆ. ಇಪ್ಪತ್ತೇಳು ಎಳೆಗಳಿರುವ ಮುತ್ತಿನ ಸರ.

ಉತ್ಸಂಗೇಷು ದಿಗಂಗನಾ ನಿದಧತೇ ತಾರಾಃ ಕರಾಕರ್ಷಿಕಾಃ
ರಾಗದ್ ದ್ಯೌರವಲಂಬ್ಯ ಚುಂಬತಿ ವಿಯದ್ಗಂಗಾ ಸಮಾಲಿಂಗತಿ|
ಲೋಕಾಲೋಕದರೀ ಪ್ರಸೀದತಿ ಫಣೀ ಶೇಷೋऽಸ್ಯ ದತ್ತೇ ರತಿಂ
ತ್ರೈಲೋಕ್ಯೇ ಗುರುರಾಜಕೀರ್ತಿಶಶಿನಃ ಸೌಂದರ್ಯಮತ್ಯದ್ಭುತಮ್ ||

ಶ್ರೀಶಂಕರಾಚಾರ್ಯಗುರುರಾಜರ ಕೀರ್ತಿಚಂದ್ರನ ಸೌಂದರ್ಯವು ಆಶ್ಚರ್ಯಕರವಾದದ್ದು. ಈ ಕೀರ್ತಿಚಂದ್ರನನ್ನು ದಿಗಂಗನೆಯರು ತಮ್ಮ ತೊಡೆಗಳ ಮೇಲೆ ಕುಳ್ಳಿರಿಸಿಕೊಳ್ಳುತ್ತಾರೆ. ತಾರೆಗಳು ಕರಗಳಿಂದ ಈ ಚಂದ್ರನನ್ನು ತಮ್ಮ ಬಳಿಗೆ ಎಳೆಯುತ್ತಾರೆ. ಗಗನಸ್ತ್ರೀಯು(ದ್ಯೌಃ=ಸ್ತ್ರೀಲಿಂಗ)ಪ್ರೇಮದಿಂದ ಈ ಕೀರ್ತಿಚಂದ್ರನನ್ನು ಚುಂಬಿಸುತ್ತಾಳೆ. ಆಕಾಶಗಂಗೆಯು ಆಲಿಂಗಿಸುತ್ತಾಳೆ. ಲೋಕಾಲೋಕಪರ್ವತದ ಗುಹೆ ಪ್ರಸನ್ನಳಾಗುತ್ತಾಳೆ. (ಪಾತಾಳದಲ್ಲಿರುವ) ಶೇಷನಾಗನು ಈ ಚಂದ್ರನನ್ನು ಪ್ರೀತಿಸುತ್ತಾನೆ. ಹೀಗೆ ತ್ರೈಲೋಕ್ಯವನ್ನು ಕೀರ್ತಿಯು ವ್ಯಾಪಿಸಿದೆ.

ಟಿಪ್ಪಣಿ:- ಲೋಕಾಲೋಕ=ಚಕ್ರವಾಲ ಪರ್ವತ, ಇದು ಭೂಮಿಯ ತುದಿಯಲ್ಲಿದೆಯೆಂದೂ ಭೂಮಿಯನ್ನು ಆವರಿಸಿ ಕೊಂಡಿದೆಯೆಂದೂ ವರ್ಣನೆ ಇದೆ. ಪ್ರಸಿದ್ಧ ಚಂದ್ರನಿಗಿಂತ ಈ ಕೀರ್ತಿಚಂದ್ರನ ವ್ಯಾಪ್ತಿ ಬಹು ದೊಡ್ಡದೆಂದು ಶ್ಲೋಕದ ತಾತ್ಪರ್ಯ.

ಸಂಪ್ರಾಪ್ತಾ ಮುನಿಶೇಖರಸ್ಯ ಹರಿತಾಮಂತೇಷು ಸಾಂಕಾಶಿನಮ್
ಕಲ್ಲೋಲಾ ಯಶಸಃ ಶಶಾಂಕಕಿರಣಾನಾಲಕ್ಷ್ಯ ಸಾಂಹಾಸಿನಮ್|
ಕುರ್ವಂತಿ ಪ್ರಥಯಂತಿ ದುರ್ಮದಸುಧಾವೈದಗ್ಧ್ಯಸಾಂಲೋಪಿನಮ್
ಸಮ್ಯಗ್ ಘ್ನಂತಿ ಚ ವಿಶ್ವಜಾಂಘಿಕತಮಃಸಂಘಾತಸಾಂಘಾತಿನಮ್ ||

ಮನನಶೀಲರಲ್ಲಿ ಅಗ್ರಗಣ್ಯರಾದ ಶ್ರೀಶಂಕರಾಚಾರ್ಯರ ಯಶಸ್ಸಿನ (ಯಶಃಸಮುದ್ರದ) ತರಂಗಗಳು ದಿಗಂತಗಳಲ್ಲಿ ವಿಶಾಲವಾಗಿ ಪ್ರಕಾಶಿಸುತ್ತ ಚಂದ್ರನ ಕಿರಣಗಳನ್ನು ನೋಡಿ ಗಟ್ಟಿಯಾಗಿ ನಗುತ್ತವೆ! ಮದಿಸಿದ ಅಮೃತದ ಮಾಧುರ್ಯಚಾತುರ್ಯವನ್ನು ತೊಡೆದು ಹಾಕುತ್ತವೆ. ವಿಶ್ವವನ್ನು ವ್ಯಾಪಿಸಿರುವ ಅಜ್ಞಾನದ ಕತ್ತಲೆಯನ್ನು ಸಮೂಲವಾಗಿ ಧ್ವಂಸ ಮಾಡುತ್ತವೆ

ಟಪ್ಪಣಿ:-ಸಾಂಕಾಶಿನ=ವಿಶಾಲವಾದ ಪ್ರಕಾಶ. ಸಾಂಹಾಸಿನ=ಗಟ್ಟಿಯಾಗಿ ನಗುವುದು. ಸಾಂಲೋಪಿನ =ಪೂರ್ತಿಯಾಗಿ ಲೋಪ ಗೊಳಿಸುವುದು. ಸಾಂಘಾತಿನ=ಸಮೂಲ ಧ್ವಂಸ. ಈ ನಾಲ್ಕು ಶಬ್ದಗಳಲ್ಲಿಯೂ

ಆಯಾಧಾತುಗಳ ಮೇಲೆ 'ಅಭಿವಿಧೌ ಭಾವ ಇನುಣ್' ಎಂಬ ಸೂತ್ರದಿಂದ ಇನುಣ್ ಪ್ರತ್ಯಯವು ಬಂದು, ಅದರ ಮೇಲೆ'ಅಣಿನುಣಃ' ಎಂಬ ಸೂತ್ರದಿಂದ ಅಣ್ ಪ್ರತ್ಯಯವು ಬಂದಿದೆ. ಇಲ್ಲಿ ಧಾತ್ವರ್ಥಕ್ರಿಯೆಯ ಅಭಿವ್ಯಾಪ್ತಿಯು(ವ್ಯಾಪಕತೆಯು) ತೋರುತ್ತದೆ.

ಸೋತ್ಕಂಠಾಕುಂಠಕಂಠೀರವನಖರವರಕ್ಷುಣ್ಣಮತ್ತೇಭಕುಂಭ-
ಪ್ರತ್ಯಗ್ರೋನ್ಮುಕ್ತ ಮುಕ್ತಾಮಣಿಗಣ
ಸುಷಮಾಬದ್ಧದೋರ್ಯುದ್ಧಲೀಲಾ|
ಮಂಥಾದ್ರಿಕ್ಷುಬ್ಧದುಗ್ಧಾರ್ಣವನಿಕಟಸಮುಲ್ಲೋಲ-
ಕಲ್ಲೋಲ ಮೈತ್ರೀ-
ಪಾತ್ರೀಭೂತಾ ಪ್ರಭೂತಾ ಜಯತಿ ಯತಿ-
ಪತೇಃ ಕೀರ್ತಿಮಾಲಾ ವಿಶಾಲಾ || ೧೦೩

ಶ್ರೀಶಂಕರಯತೀಶ್ವರರ ದೀರ್ಘವೂ ವಿಶಾಲವೂ ಆದ ಕೀರ್ತಿಮಾಲೆಯು ಸರ್ವೋತ್ಕೃಷ್ಟವಾಗಿ ವಿರಾಜಿಸುತ್ತದೆ. ಉತ್ಸಾಹಶಾಲಿಯೂ ಅಪ್ರತಿಹತಶಕ್ತಿಯುಳ್ಳದ್ದೂ ಆದ ಸಿಂಹದ ತೀಕ್ಷ್ಣವಾದ ಉಗುರುಗಳಿಂದ ಸೀಳಲ್ಪಟ್ಟು ಮತ್ತಗಜದ ಕುಂಭಸ್ಥಳದಿಂದ ಸುರಿಯುವ ಮುಕ್ತಾಮಣಿಗಳ ಸೌಂದರ್ಯದೊಡನೆ ಈ ಕೀರ್ತಿಯು ಕುಸ್ತಿಯಾಡುತ್ತದೆ! (ಮುತ್ತುಗಳ ಸೌಂದರ್ಯಶೋಭೆಗೆ ಸದೃಶವಾಗಿದೆಯೆಂದರ್ಥ). ಮಂದರಗಿರಿಯಿಂದ ಕಡೆಯಲ್ಪಟ್ಟ ಕ್ಷೀರ ಸಮುದ್ರದಿಂದೇಳುವ ಉಲ್ಲೋಲ ಕಲ್ಲೋಲಗಳ ಸ್ನೇಹಕ್ಕೆ ಇದು ಪಾತ್ರವಾಗಿದೆ. (ಕ್ಷೀರಸಮುದ್ರದ ಅಲೆಗಳಿಗೆ ಸಮಾನವಾಗಿದೆಯೆಂದರ್ಥ)

ಟಿಪ್ಪಣಿ:-ಆನೆಯ ಕುಂಭಸ್ಥಳದಲ್ಲಿ ಮುತ್ತುಗಳಿರುತ್ತವೆಯೆಂದು ಕವಿಪ್ರಸಿದ್ಧಿ ಇದೆ.

ಲೋಕಾಲೋಕದರಿ ಪ್ರಸೀದಸಿ ಚಿರಾತ್ ಕಿಂ ಶಂಕರಶ್ರೀಗುರು-
ಪ್ರೋದ್ಯತ್ಕೀರ್ತಿನಿಶಾಕರಂ ಪ್ರಿಯತಮಂ ಸಂಶ್ಲಿಷ್ಯ ಸಂತುಷ್ಯಸಿ|
ತ್ವಂ ಚಾಪ್ಯುತ್ಪಲಿನಿ ಪ್ರಹೃಷ್ಯಸಿ ಚಿರಾತ್ ಕಸ್ತತ್ರ ಹೇತುಸ್ತಯೋ-
ರಿತ್ಥಂ ಪ್ರಶ್ನಗಿರಾಂ ಪರಸ್ಪರಮಭೂತ್ ಸ್ಮೇರತ್ವಮೇವೋತ್ತರಮ್ ||

ಲೋಕಾಲೋಕ ಪರ್ವತದ ಗುಹೆಗೂ ನೈದಿಲೆಯ ಬಳ್ಳಿಗೂ ಹೀಗೆ ಸಂಭಾಷಣೆ ನಡೆಯಿತು. ನೈದಿಲೆಯ ಬಳ್ಳಿ - ಎಲೌ ಲೋಕಾಲೋಕದರಿಯೆ, ಬಹಳ ಕಾಲದಮೇಲೆ ಪ್ರಸನ್ನಚಿತ್ತಳಾಗಿ ಹಿಗ್ಗುತ್ತಿರುವೆಯಲ್ಲ, ಇದೇನು! ಶ್ರೀಶಂಕರಗುರುವಿನ ಕೀರ್ತಿಚಂದ್ರನೆಂಬ ಪ್ರಿಯತಮನನ್ನು ಆಲಿಂಗಿಸಿದ್ದರಿಂದ ಆನಂದಪಡುತ್ತಿರುವೆಯಾ? ಲೋಕಾಲೋಕಗುಹೆ- ಏ ಉತ್ಪಲಿನಿ, ನೀನೂ ಸಹ ಬಹಳಹೊತ್ತಿನಿಂದ ಸಂತೋಷದಲ್ಲಿ ಮುಳುಗಿ ಹೋಗಿದ್ದೀಯಲ್ಲ! ಕಾರಣವೇನು ?-ಈ ಪ್ರಕಾರವಾಗಿ ಅವರಿಬ್ಬರೂ ಪ್ರಶ್ನೆಗಳನ್ನುಮಾಡಿದಾಗ ಮುಗುಳ್ನಗೆಯೇ ಅವರಿಬ್ಬರ ಉತ್ತರವಾಯಿತು!

ಟಿಪ್ಪಣಿ:- ಗುಹೆಯಲ್ಲಿ ಬೆಳದಿಂಗಳು ಹರಡಿದೆ. ನೈದಿಲೆ ಅರಳಿದೆ.

ದುರ್ವಾರಾಖರ್ವಗರ್ವಾಹಿತಬುಧಜನತಾತೂಲವಾತೂಲವೇಗೋ
ನಿರ್ಬಾಧಾಗಾಧಬೋಧಾಮೃತಕಿರಣಸಮುನ್ಮೇಷ ದುಗ್ಧಾಂಬುರಾಶಿಃ |
ನಿಷ್ಪ್ರತ್ಯೂಹಂ ಪ್ರಸರ್ಪದ್ಭವದವದಹನೋದ್ಭೂತ ಸಂತಾಪ ಮೇಘೋ
ಜಾಗರ್ತಿ ಸ್ಫೀತಕೀರ್ತಿರ್ಜಗತಿ ಯತಿಪತಿಃ ಶಂಕರಾಚಾರ್ಯವರ್ಯಃ ||

ಯತೀಶ್ವರರಾದ ಶ್ರೀಶಂಕರಾಚಾರ್ಯರು ಮಹಾಕೀರ್ತಿಶಾಲಿಗಳಾಗಿ ಜಗತ್ತಿನಲ್ಲಿ ವಿರಾಜಿಸಿದರು. ಅವರು ದುರ್ವಾರವಾದ ಪರಮಗರ್ವದಿಂದ ಬೀಗುತ್ತಿದ್ದ ಪ್ರತಿವಾದಿ ಪಂಡಿತರೆಂಬ ಹತ್ತಿಯ ರಾಶಿಯನ್ನು ಹಾರಿಸಿಬಿಡುವ ವೇಗಶಾಲಿಯಾದ ಚಂಡಮಾರುತ! ನಿರಾತಂಕವೂ ಗಂಭೀರವೂ ಆದ ತತ್ತ್ವಭೋಧವೆಂಬ ಅಮೃತಕಿರಣನು(ಚಂದ್ರನು) ಉದಯಿಸುವುದಕ್ಕೆ ಕಾರಣವಾದ ಕ್ಷೀರ ಸಾಗರ! ತಡೆಯಿಲ್ಲದೆ ಹರಡುತ್ತಿರುವ ಸಂಸಾರದ ಕಾಳ್ಗಿಚ್ಚಿನಿಂದಾದ ತಾಪವನ್ನು ಆರಿಸುವ ಮೇಘ!

ಇತಿಹಾಸ ಪುರಾಣಭಾರತ ಸ್ಮೃತಿಶಾಸ್ತ್ರಾಣಿ ಪುನಃಪುನರ್ಮುದಾ |
ವಿಬುಧೈಃ ಸುಬುಧೋ ವಿಲೋಕಯನ್ ಸಕಲಜ್ಞತ್ವಪದಂ ಪ್ರಪೇದಿವಾನ್ ||

ಮೇಧಾವಿಗಳಾದ ಶ್ರೀಶಂಕರರು ರಾಮಾಯಣಾದಿಗಳಾದ ಇತಿಹಾಸಗಳು, ಪುರಾಣಗಳು, ಮಹಾಭಾರತ, ಧರ್ಮಶಾಸ್ತ್ರ, ಉತ್ತರಮೀಮಾಂಸೆಯೇ ಮೊದಲಾದ ಶಾಸ್ತ್ರಗಳು -ಇವುಗಳನ್ನು ಪಂಡಿತರ ಜೊತೆಗೆ ಮತ್ತೆ ಮತ್ತೆ ನೋಡುತ್ತ ವಿಮರ್ಶಿಸಿ, ಸರ್ವಜ್ಞರೇ ಆಗಿಬಿಟ್ಟರು.

ಟಿಪ್ಪಣಿ:-ಮಹಾಭಾರತವು ಇತಿಹಾಸವಾದರೂ ಬ್ರಾಹ್ಮಣ ವಸಿಷ್ಠ ನ್ಯಾಯದಂತೆ ಪ್ರಧಾನವಾದ್ದರಿಂದ ಮತ್ತೆ ಹೆಸರಿಸಿದೆ.

ಸ ಪುನಃ ಪುನರೈಕ್ಷತಾದರಾದ್ವ್ಯರ ವೈಯಾಸಿಕಶಾಂತಿವಾಕ್ತತೀಃ |
ಸಮಗಾದುಪಶಾಂತಿಸಂಭವಾಂ ಸಕಲಜ್ಞತ್ವವದೇವ ಶುದ್ಧತಾಮ್ || ೧೦೭

ಅವರು ಪರಮಶಾಂತಿಯನ್ನೀಯುವ ವ್ಯಾಸ ಪ್ರಣೀತಬ್ರಹ್ಮಸೂತ್ರಗಳನ್ನು ಆದರದಿಂದ ಮತ್ತೆ ಮತ್ತೆ ಅವಲೋಕಿಸಿದರು. ಆಗ ಶಾಂತಿಯಿಂದಾಗುವ ಚಿತ್ತಶುದ್ಧಿಯನ್ನು ಸರ್ವಜ್ಞತ್ವದಂತೆಯೇ ಪಡೆದುಕೊಂಡರು.

ಅಸತ್ಪ್ರಪಂಚಶ್ಚತುರಾನನೋಽಪಿ ಸನ್
ಅಭೋಗಯೋಗೀ ಪುರುಷೋತ್ತಮೋಽಪಿ ಸನ್ |
ಅನಂಗಜೇತಾಪ್ಯವಿರೂಪದರ್ಶನೋ
ಜಯತ್ಯಪೂರ್ವೋ ಜಗದದ್ವಯೀಗುರುಃ || ೧೦೮

(ಈ ಶ್ಲೋಕದಲ್ಲಿ ಶ್ಲೇಷಮೂಲಕವಾದ ವಿರೋಧಾಭಾಸಾಲಂಕಾರವಿದೆ. ಅನ್ಯಾರ್ಥದಲ್ಲಿ ವಿರೋಧವಿರುತ್ತದೆ. ವರ್ಣನೀಯರಾದ ಆಚಾರ್ಯರ ಪರವಾದ ಅರ್ಥದಲ್ಲಿ ವಿರೋಧ ಪರಿಹಾರವಿರುತ್ತದೆ.)

ಅದ್ವೈತ ಸಿದ್ಧಾಂತವನ್ನು ಬೋಧಿಸುವ ಜಗದ್ಗುರುಗಳಾದ ಆಚಾರ್ಯರು ಅಪೂರ್ವ ರೀತಿಯಲ್ಲಿ ಉತ್ಕರ್ಷವನ್ನು ಪಡೆದು ಶೋಭಿಸುತ್ತಿದ್ದರು. ಹೇಗೆಂದರೆ,

ವಿರೋಧ- ಆತನು ಚತುರಾನನನಾದರೂ - ನಾಲ್ಕುಮುಖಗಳುಳ್ಳ ಬ್ರಹ್ಮನಾದರೂ ಪ್ರಪಂಚರಹಿತನು. ಪ್ರಪಂಚವನ್ನು ಸೃಷ್ಟಿಸಿದವನು. ಪ್ರಪಂಚ ರಹಿತನೆಂದರೆ ವಿರೋಧ. ಪುರುಷೋತ್ತಮನಾದ ವಿಷ್ಣುವಾದರೂ ಭೋಗಯೋಗಿಯಲ್ಲ-ಆದಿಶೇಷನ ಭೋಗ(ಶರೀರ)ದ ಸಂಬಧವಿದ್ದವನಲ್ಲ. ವಿಷ್ಣುವು ಆದಿಶೇಷನ ಭೋಗದ ಮೇಲೆ ಶಾಯಿಯಾದ್ದರಿಂದ ವಿರೋಧ. ಕಾಮನನ್ನು ಜಯಸಿದವನಾದರೂ ವಿರೂಪದರ್ಶನನಲ್ಲ- ವಿರೂಪಾಕ್ಷನಾದ ಶಿವನಲ್ಲ. ಇಲ್ಲಿ ವಿರೋಧವು ಸ್ಪಷ್ಟವಾಗಿದೆ.

ವಿರೋಧ ಪರಿಹಾರ - ಆಚಾರ್ಯಪರವಾದ ಅರ್ಥ: ಆಚಾರ್ಯರು ಚತುರವಾದ= ವಾದಚಾತುರ್ಯವನ್ನು ಪ್ರಕಟಿಸುವ ಮುಖವುಳ್ಳವರು. ಪ್ರಪಂಚವು ಅಸತ್=ಅಸತ್ಯವೆಂದು ಹೇಳತಕ್ಕವರು. ಅವರು ಪುರುಷಶ್ರೇಷ್ಠರು. ಅಭೋಗರೂ=ವಿಷಯಭೋಗವನ್ನು ತ್ಯಜಿಸಿದವರೂ ಯೋಗಿಗಳೂ ಆಗಿದ್ದರು. ಕಾಮನನ್ನು ಜಯಿಸಿದವರು. ಆದರೆ ವಿರೂಪದರ್ಶನರು=ಕುರೂಪಿಗಳು ಅಲ್ಲ -ವಿರೂಪಾಕ್ಷನಾದ ಶಿವನಲ್ಲ. ಆದರೆ ಸುಂದರಾಕಾರದ ಶಿವ.

ಆಲೋಕ್ಯಾನನಪಂಕಜೇನ ದಧತಂ ವಾನೀಂ ಸರೋಜಾಸನಂ
ಶಶ್ವತ್ಸನ್ನಿಹಿತಕ್ಷಮಾಶ್ರಿಯಮಮುಂ ವಿಶ್ವಂಭರಂ ಪೂರುಷಮ್ |
ಆರ್ಯಾರಾಧಿತ ಕೋಮಲಾಂಘ್ರಿಕಮಲಂ ಕಾಮದ್ವಿಷಂ ಕೋವಿದಾಃ
ಶಂಕಂತೇ ಭುವಿ ಶಂಕರಂ ವ್ರತಿಕುಲಾಲಂಕಾರಮಂಕಾಗತಾಃ || ೧೯

ವ್ರತನಿಷ್ಠರಿಗೆ ಅಲಂಕಾರಸ್ವರೂಪರಾಗಿದ್ದ ಶ್ರೀಶಂಕರರನ್ನು ನೋಡಿ ಸಮೀಪದಲ್ಲಿದ್ದ ಕೋವಿದ ಜನರು ಈ ರೀತಿಯಲ್ಲಿ ಭಾವಿಸುತ್ತಿದ್ದರು- ಹೇಗೆಂದರೆ, ಮುಖಕಮಲದಲ್ಲಿ ಸರಸ್ವತಿಯನ್ನು ಧರಿಸಿದ ಇವರನ್ನು ಬ್ರಹ್ಮನೆಂದು, ಸದಾ ನೆಲಸಿರುವ ಕ್ಷಮಾಲಕ್ಷ್ಮಿಯನ್ನು ಕಂಡು ಇವರು ವಿಶ್ವಂಭರನಾದ ಮಹಾವಿಷ್ಣುವೆಂದೂ, ಆರ್ಯೆಯಿಂದ- ಪಾರ್ವತಿಯಿಂದ ಮತ್ತು ಪೂಜ್ಯರಾದ ವಿದ್ವಾಂಸರಿಂದ ಪೂಜಿತ ಪಾದಪದ್ಮ ಉಳ್ಳವರೂ ಕಾಮದ್ವೇಷಿಗಳೂ ಆದ ಇವರು ಭೂಮಿಗೆ ಬಂದ ಸಾಕ್ಷಾತ್ ಶಂಕರನೆಂದೂ ಊಹಿಸುತ್ತಿದ್ದರು.

ಏಕಸ್ಮಿನ್ ಪುರುಷೋತ್ತಮೇ ರತಿಮತೀಂ ಸೀತಾಮಯೋನ್ಯುದ್ಭವಾಂ
ಮಾಯಾಭಿಕ್ಷು ಹೃತಾಮನೇಕ ಪುರುಷಾಸಕ್ತಿ ಭ್ರಮಾನ್ನಿಷ್ಠುರಾಮ್|
ಜಿತ್ವಾ ತಾನ್ ಬುಧವೈರಿಣಃ ಪ್ರಿಯತಯಾ ಪ್ರತ್ಯಾಹರದ್ಯಶ್ಚಿರಾದ್
ಆಸ್ತೇ ತಾಪಸಕೈತವಾತ್ ತ್ರಿಜಗತಾಂ ತ್ರಾತಾ ಸ ನಃ ಶಂಕರಃ || ೧೧೦

(ಈ ಶ್ಲೋಕದಲ್ಲಿ ಶ್ರೀರಾಮಚರಿತವನ್ನೂ ಆಚಾರ್ಯಚರಿತವನ್ನೂ ಶ್ಲೇಷದಿಂದ ಏಕರೂಪವಾಗಿ ವರ್ಣಿಸಿ, ಶ್ಲೋಕದ ನಾಲ್ಕನೆಯ ಪಾದದಲ್ಲಿ ಶಿವನಿಗೂ ಶ್ರೀರಾಮನಿಗೂ ಆಚಾರ್ಯರಿಗೂ ಅಭೇದವನ್ನು ಹೇಳಲಾಗಿದೆ.)

ಶ್ರೀರಾಮನ ಪಕ್ಷದಲ್ಲಿ- ಅದ್ವಿತೀಯ ಪುರುಷೋತ್ತಮನಾದ ಶ್ರೀರಾಮನಲ್ಲಿ ಅಯೋನಿಜೆಯಾದ ಸೀತಾದೇವಿಯು ಪ್ರೇಮವುಳ್ಳವಳಾಗಿದ್ದಳು. ಅವಳನ್ನು ಮಾಯೆಯಿಂದ ಭಿಕ್ಷುವೇಷದಲ್ಲಿ ಬಂದ ರಾವಣನು ಅಪಹರಿಸಿದನು. ಏಕಪುರುಷನಲ್ಲದ- ಎಂದರೆ-ಕ್ಷುದ್ರನಾದ ರಾವಣನು ಸೀತಾದೇವಿಗೆ ತನ್ನಲ್ಲಿ ಆಸಕ್ತಿಯಿದೆಯೆಂಬ ಭ್ರಮೆಯನ್ನು ತಳೆದಿದ್ದರಿಂದ ಅವಳು ರಾವಣನಲ್ಲಿ ನಿಷ್ಠುರವಾಗಿ ವರ್ತಿಸಿದಳು. ಬಹಳ ಕಾಲವಾದ ಮೇಲೆ ಶ್ರೀರಾಮನು ಅವಳ ಮೇಲಿನ ಪ್ರೀತಿಯಿಂದ ಸುರವೈರಿಗಳಾದ ರಾಕ್ಷಸರನ್ನು ಜಯಿಸಿ ಸೀತಾದೇವಿಯನ್ನು ಬಿಡಿಸಿ ಕೊಂಡುಬಂದನು.

ಆಚಾರ್ಯರ ಪಕ್ಷದಲ್ಲಿ - ಅದ್ವಿತೀಯನಾದ ಪರಮಾತ್ಮನಲ್ಲಿ ಸೀತೆಯೆಂಬ ಮೋಕ್ಷಲಕ್ಷ್ಮಿಯು ರತಳಾಗಿರುತ್ತಾಳೆ. ಅವಳು ಅಯೋನ್ಯುದ್ಭವೆ-ಎಂದರೆ-ಜನ್ಮರಹಿತಳು, ನಿತ್ಯಳು. ಅವಳನ್ನು ವಂಚನೆಯಿಂದ ಬೌದ್ಧಭಿಕ್ಷುಗಳು ಅಪಹರಿಸಿದರು. ಆ ಮೋಕ್ಷಲಕ್ಷ್ಮಿಯು ಅನೇಕ ಜೀವಾತ್ಮರಿಗೆ ಸಂಬಂಧಿಸಿದವಳೆಂದು ಭ್ರಮಿಸಿ ದ್ವೈತವಾದಿಗಳು ನಿಂದಾಸ್ಪದಳನ್ನಾಗಿ ಮಾಡಿದರು. ಹೀಗಿರುವಾಗ ಬಹಳಕಾಲದ ಮೇಲೆ ಆಚಾರ್ಯರು ಮೋಕ್ಷಲಕ್ಷ್ಮಿಯಲ್ಲಿ ಪ್ರೀತಿಯನ್ನು ತಳೆದು ಜ್ಞಾನಿಗಳಿಗೆ ಪ್ರತಿಕಕ್ಷಿಗಳಾದ ಅವರೆಲ್ಲರನ್ನೂ ಜಯಿಸಿ ಅವಳನ್ನು ಬಿಡುಗಡೆ ಮಾಡಿ ಹಿಂದಿನ ಸ್ವಸ್ಥಾನದಲ್ಲಿ ನಿಲ್ಲಿಸಿದರು.

ನಾಲ್ಕನೆಯ ಪಾದದ ಅರ್ಥ - ತ್ರಿಲೋಕಗಳನ್ನು ರಕ್ಷಿಸುವ ಭಗವಾನ್ ಶಂಕರನು ಈ ಪ್ರಕಾರವಾಗಿ ಸೀತಾದೇವಿಯನ್ನೂ ಮೋಕ್ಷಲಕ್ಷ್ಮಿಯನ್ನೂ ಉದ್ಧರಿಸಿ, ನಮ್ಮ ಪಾಲಿಗೆ ಶಂಕರನೇ (ಸುಖಕರನೇ) ಆಗಿ, ಅರಣ್ಯದಲ್ಲಿ ತಾಪಸವೇಷ ಧಾರಿಯಾಗಿಯೂ ಈಗ ಯತಿವೇಷ ಧಾರಿಯಾಗಿಯೂ ಇದ್ದಾನೆ -ಇದ್ದನು.

ಟಿಪ್ಪಣಿ :- 'ಸೀತಾಂ' ಎಂಬುದಕ್ಕೆ ಬದಲಾಗಿ 'ಸತ್ತಾಂ'ಎಂದು ಪಾಠಾಂತರವಿದೆ. ಆ ಪಾಠದಲ್ಲಿ ಸತ್ತಾಸ್ವರೂಪಿಣಿಯಾದ ಸೀತಾದೇವಿಯೆಂದೂ ಸತ್ತಾಸ್ವರೂಪವಾದ ಆತ್ಮತತ್ತ್ವವೆಂದೂ ಅನುಕ್ರಮವಾಗಿ ಅರ್ಥ. ಶಿವನೇ ಶ್ರೀರಾಮನಾಗಿ ಅವತರಿಸಿದನೆಂದು ಸ್ಕಾಂದಪುರಾಣದಲ್ಲಿ ವರ್ಣನೆ ಇದೆ. ಕವೇರಜಾಖಂಡದಲ್ಲಿ ಶಿವನು ಋಷಿಗಳನ್ನು ಕುರಿತು ಹೇಳುತ್ತಾನೆ-

ಅಹಂ ದಾಶರಥೀ ರಾಮೋ ಭೂತ್ವಾ ವೈ ದಂಡಕಾವನೇ |
ರಾಕ್ಷಸಾನ್ ನಿಖಿಲಾನ್ ದುಷ್ಟಾನ್ ಹತ್ವಾ ಮೋಕ್ಷಂ ದದಾಮಿ ವಃ ||
ಏವಂ ತಪಸ್ವಿನೋ ವಿಪ್ರಾನ್ ಪ್ರೋವಾಚ ಸ ಮಹೇಶ್ವರಃ ||

ದೌರ್ವಾಸ ರಾಮಾಯಣದಲ್ಲಿ ಶ್ರೀರಾಮನು ಹೇಳುತ್ತಾನೆ -

ಶಿವಂ ಮಾಂ ಪ್ರತಿಜಾನೀಥ ನಾವಯೋರಂತರಂ ದ್ವಿಜಾಃ |
ಆವಯೋರಂತರ ಜ್ಞಾನಂ ತದೇವಾಜ್ಞಾನಮುಚ್ಯತೇ ||

ಹೀಗೆಯೇ ವಿಷ್ಣುಪುರಾಣ ಭಾಗವತಾದಿ ಗ್ರಂಥಗಳಲ್ಲಿ ಶಿವವಿಷ್ಣುಗಳಲ್ಲಿ ಭೇದವಿಲ್ಲವೆಂದು ಹೇಳುವ "ಶಿವಾಯ ವಿಷ್ಣುರೂಪಾಯ ವಿಷ್ಣವೇ ಶಿವರೂಪಿಣೇ" ಮುಂತಾದ ವಾಕ್ಯಗಳು ವಿಪುಲವಾಗಿ ದೊರಯುತ್ತವೆ.

ಇತಿ ಶ್ರೀಮಾಧವೀಯೇ ತದಾಶುದ್ಧಾಷ್ಟಮವೃತ್ತಗಃ|
ಸಂಕ್ಷೇಪ ಶಂಕರಜಯೇ ಚತುರ್ಥಃ ಸರ್ಗ ಅಭವತ್||

ಹೀಗೆ ಮಾಧವೀಯ ಸಂಕ್ಷೇಪ ಶಂಕರ ವಿಜಯದಲ್ಲಿ, ಶ್ರೀಶಂಕರನಿಗೆ ಎಂಟನೆಯ ವರ್ಷದ ವರೆಗಿನ ವೃತ್ತಾಂತವನ್ನು ವರ್ಣಿಸುವ ಚತುರ್ಥಸರ್ಗವು ಸಮಾಪ್ತವಾಯಿತು.

✤ ✤ ✤

ಪಂಚಮಃ ಸರ್ಗಃ
ಸಂನ್ಯಾಸ ಗ್ರಹಣಮ್

ಶ್ರೀಶಂಕರರು ಪೂರ್ಣಾನದಿಯನ್ನು ಮನೆಯ ಬಳಿ ಹರಿಯುವಂತೆ ಮಾಡುವುದು. ಕೇರಳರಾಜನ ದರ್ಶನ. ಅವರ ತಾಯಿಯಾದ ಆರ್ಯಾಂಬೆಯ ಬಳಿಗೆ ಅಗಸ್ತ್ಯಾದಿ ಮುನಿಗಳ ಆಗಮನ. ಶ್ರೀಶಂಕರರಿಂದ ಆತುರಸಂನ್ಯಾಸಸ್ವೀಕಾರ. ತಾಯಿಯ ಅನುಜ್ಞೆಯನ್ನು ಪಡೆದು ನರ್ಮದಾತೀರಕ್ಕೆ ಹೋಗಿ ಅಲ್ಲಿದ್ದ ಶ್ರೀಗೋವಿಂದ ಭಗವತ್ಪಾದರನ್ನು ಸಂದರ್ಶಿಸುವುದು. ಅವರ ಶಿಷ್ಯರಾಗಿ ಮಹಾವಾಕ್ಯಗಳ ಉಪದೇಶವನ್ನು ಪಡೆದು ಪರಮಹಂಸರಾಗುವುದು. ಶ್ರೀಗೋವಿಂದ ಭಗವತ್ಪಾದರ ಆಜ್ಞೆಯಂತೆ ಶ್ರೀಶಂಕರಾಚಾರ್ಯರು ಕಾಶೀನಗರಕ್ಕೆ ಪ್ರಯಾಣಮಾಡುವುದು.

ಇತಿ ಸಪ್ತಮಹಾಯನೇಽಖಿಲ
ಶ್ರುತಿ ಪಾರಂಗತತಾಂ ಗತೋ ವಟುಃ |
ಪರಿವೃತ್ಯ ಗುರೋಃ ಕುಲಾದ್ ಗೃಹೇ
ಜನನೀಂ ಪರ್ಯಚರನ್ಮಹಾಯಶಾಃ || ೧

ಈ ರೀತಿಯಾಗಿ ವಟುವಾದ ಶ್ರೀಶಂಕರನು ತನ್ನ ಏಳನೆಯ ವರ್ಷದಲ್ಲಿ ಸಮಸ್ತ ವೇದಗಳಲ್ಲಿಯೂ ಪಾರಂಗತನಾದನು. ಕೀರ್ತಿಶಾಲಿಯಾದ ಆತನು ಗುರುಕುಲದಿಂದ ಮನೆಗೆ ಬಂದು ತನ್ನ ತಾಯಿಯ ಸೇವೆಯಲ್ಲಿ ನಿರತನಾದನು.

ಪರಿಚರನ್ ಜನನೀಂ ನಿಗಮಂ ಪಠನ್
ಅಪಿ ಹುತಾಶರವೀ ಸವನದ್ವಯಮ್ |
ಮನುವರ್ಯೈರ್ನಿಯತಂ ಪರಿಪೂಜಯನ್
ಶಿಶುರವರ್ತತ ಸಂಸ್ತರಣಿರ್ಯಥಾ || ೨

ಅವನು ತಾಯಿಯ ಶುಶ್ರೂಷೆಯನ್ನು ಮಾಡುತ್ತ, ವೇದವನ್ನು ಪಠಿಸುತ್ತ, ಮನ್ವಾದಿಸ್ಮೃತಿಕಾರರಿಂದ ವಿಹಿತವಾದ (ಪ್ರಾತಃ ಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ಮಾಡಬೇಕಾದ) ಎರಡು ಹೋಮಗಳೆಂಬ ಅಗ್ನಿಕಾರ್ಯಗಳನ್ನು ಅಭಿಲಕ್ಷಿಸಿ, ಸೂರ್ಯಾಗ್ನಿಗಳನ್ನು ಅರ್ಚಿಸುತ್ತ ಸೂರ್ಯನಂತೆ ತೇಜಸ್ವಿಯಾಗಿ ವಿರಾಜಿಸುತ್ತಿದ್ದನು.

ಟಿಪ್ಪಣಿ:-ಶ್ಲೋಕದಲ್ಲಿರುವ 'ಸವನದ್ವಯಂ'ಎಂಬುದು ಅನನ್ವಿತವಾಗಿ ತೋರುತ್ತದೆ. ಆದ್ದರಿಂದ 'ಅಭಿ'(ಅಭಿಲಕ್ಷ್ಯ)ಎಂದು ಅಧ್ಯಾಹಾರಮಾಡಿ ಅನ್ವಯಿಸಬೇಕು.

ಶಿಶುಮುದೀಕ್ಷ್ಯ ಯುವಾಽಪಿ ನ ಮನ್ಯುಮಾನ್
ದಿಶತಿ ವೃದ್ಧ ತಮೋಽಪಿ ನಿಜಾಸನಮ್ |

ಅಪಿ ಕರೋತಿ ಜನಃ ಕರಯೋರ್ಯುಗಂ
ವಶಗತೋ ವಿಹಿತಾಂಜಲಿ ತತ್‌ಕ್ಷಣಾತ್ || ೩

ಶ್ರೀಶಂಕರನು ಬಾಲಕನಾಗಿದ್ದರೂ ಅವನನ್ನು ನೋಡಿ ಸಿಡುಕನಾದ ಯುವಕನಿಗೆ ಕೋಪವಿಳಿದು ಅವನು ಶಾಂತನಾಗುತ್ತಿದ್ದನು. ಮನೆಗೆ ಬಂದರೆ ವೃದ್ಧನೂ ಸಹ ಎದ್ದುನಿಂತು ಕುಳಿತುಕೊಳ್ಳಲು ಆಸನವನ್ನು ನೀಡುತ್ತಿದ್ದನು. ಅವನನ್ನು ನೋಡಿದವರೆಲ್ಲರೂ ಕೂಡಲೇ ಕೈಮುಗಿಯುತ್ತಿದ್ದರು.

ಮೃದು ವಚಶ್ಚರಿತಂ ಕುಶಲಾಂ ಮತಿಂ
ವಪುರನುತ್ತಮಮಾಸ್ಪದಮೋಜಸಾಮ್ |
ಸಕಲಮೇತದುದೀಕ್ಷ್ಯ ಸುತಸ್ಯ ಸಾ
ಸುಖಮವಾಪ ನಿರರ್ಗಲಮಂಬಿಕಾ || ೪

ತಾಯಿಯಾದ ಆರ್ಯಾಂಬೆಯು ಮಗನಾಡುವ ಮೃದುವಾದ ಮಾತನ್ನೂ ನಡತೆಯನ್ನೂ ಸೂಕ್ಷ್ಮ ಬುದ್ಧಿಯನ್ನೂ, ಓಜಸ್ವಿಯೂ ಸುಂದರವೂ ಆದ ಶರೀರವನ್ನೂ ನೋಡಿ ನೋಡಿ ಆನಂದದಿಂದ ಹಿಗ್ಗುತ್ತಿದ್ದಳು.

ಜಾತು ಮಂದಗಮನಾಽಸ್ಯ ಹಿ ಮಾತಾ
ಸ್ನಾತುಮಂಬುನಿಧಿಗಾಂ ಪ್ರತಿ ಯಾತಾ |
ಆತಪೋಗ್ರಕಿರಣೇ ರವಿಬಿಂಬೇ
ಸಾ ತಪಃ ಕೃಶತನುರ್ವಿಲಲಂಬೇ || ೫

ತಾಯಿಯು ವೃದ್ಧಳಾದ್ದರಿಂದ ಒಂದುಸಲ ಮೆಲ್ಲಗೆ ನಡೆಯುತ್ತಾ ಸ್ನಾನಮಾಡುವುದಕ್ಕಾಗಿ ಪೂರ್ಣಾನದಿಯ ಬಳಿಗೆ ಹೋಗಿದ್ದಳು. ಸೂರ್ಯಮಂಡಲವು ಸುಡುವ ಬಿಸಿಲನ್ನು ಹರಡಿದ್ದರಿಂದ ಅವಳು ಮನೆಗೆ ಬರುವುದು ತಡವಾಯಿತು. ಆಕೆಯ ದೇಹವು ತಪಸ್ಸಿನಿಂದ ಕೃಶವಾಗಿತ್ತು.

ಶಂಕರಸ್ತದನು ಶಂಕಿತಚಿತ್ತಃ
ಪಂಕಜೈರ್ವಿಗತಪಂಕಜಲಾರ್ದ್ರೈಃ |
ವೀಜಯನ್ನುಪಗತೋ ಗತಮೋಹಾಂ
ತಾಂ ಜನೇನ ಸದನಂ ಸಹ ನಿನ್ಯೇ || ೬

ಶ್ರೀಶಂಕರನು ತಾಯಿಯು ತಡಮಾಡಿದ್ದರಿಂದ ಶಂಕೆಗೊಂಡು ಅಲ್ಲಿಗೆ ಹೋಗಿ ತಣ್ಣನೆಯ ನೀರಿನಲ್ಲಿ ನೆನೆದ ತಾವರೆ ಹೂಗಳಿಂದ ಬೀಸಿ ಅವಳ ದೇಹಕ್ಕೆ ಚೈತನ್ಯವನ್ನುಂಟು ಮಾಡಿದನು. ಜನರ ಸಹಾಯದಿಂದ ಆಕೆಯನ್ನು ಮನೆಗೆ ಕರೆದು ಕೊಂಡು ಬಂದನು.

ಸೋಽಥ ನೇತುಮನವದ್ಯಚರಿತ್ರಃ
ಸದ್ಮನೋಽಂತಿಕಮೃಷೀಶ್ವರಪುತ್ರಃ ।
ಅಸ್ತವೀಜ್ಜಲಧಿಗಾಂ ಕವಿಹೃದ್ಯೈ-
ರ್ವಸ್ತುತಃ ಸ್ಫುರದಲಂಕೃತ ಪದ್ಯೈಃ॥ ೭

ಅನಂತರ ಶುದ್ಧಚಾರಿತ್ರನೂ ಋಷೀಶ್ವರನಾದ ಶಿವಗುರುವಿನ ಪುತ್ರನೂ ಆದ ಶ್ರೀಶಂಕರನು ಆ ನದಿಯನ್ನು ಮನೆಯ ಬಳಿಗೆ ಕರೆತರಲು ಆಶಿಸಿದನು. ಉತ್ತಮವಾದ ಅಲಂಕಾರಗಳಿಂದ ಯುಕ್ತವಾಗಿ ಕವಿಗಳಿಗೂ ಮನೋಹರವಾದ ಪದ್ಯಗಳಿಂದ ಆ ನದಿಯನ್ನು ಸ್ತೋತ್ರಮಾಡಿದನು.

ಟಿಪ್ಪಣಿ:- ಅಸ್ತವೀತ್=ಇದು ಅಸ್ತಾವೀತ್ ಎಂದಿರ ಬೇಕಾಗಿತ್ತು.

ಈಹಿತಂ ತವ ಭವಿಷ್ಯತಿ ಕಲ್ಯೇ
ಯೋ ಹಿತಂ ಜಗತ ಇಚ್ಛಸಿ ಬಾಲ್ಯೇ ।
ಇತ್ಯವಾಪ್ಯ ಸ ವರಂ ತಟಿನೀತಃ
ಸತ್ಯವಾಕ್ ಸದನಮಾಪ ವಿನೀತಃ ॥ ೮

ಅನಂತರ ನದಿಯು ಪ್ರಸನ್ನಳಾಗಿ "ಬಾಲ್ಯದಲ್ಲಿಯೇ ನೀನು ಜಗತ್ತಿಗೆ ಹಿತವನ್ನು ಬಯಸುತ್ತಿದ್ದೀಯೆ. ನಿನ್ನ ಇಷ್ಟವು ನಾಳೆ ಪ್ರಾತಃಕಾಲದಲ್ಲಿ ಸಿದ್ಧಿಸುವುದು" ಎಂದು ವರವನ್ನಿತ್ತಳು. ಸತ್ಯವಾಕ್ಯನಾದ ಆ ವಟುವು ವಿನೀತನಾಗಿ ಆ ವರವನ್ನು ಪಡೆದು ಮನೆಗೆ ಬಂದನು.

ಪ್ರಾತರೇವ ಸಮಲೋಕತ ಲೋಕಃ
ಶೀತವಾತ ಹೃತಶೀಕರ ಪೂತಃ ।
ನೂತನಾಮಿವ ಧುನೀಂ ಪ್ರವಹಂತೀಂ
ಮಾಧವಸ್ಯ ಸಮಯಾ ಸದನಂ ತಾಮ್ ॥ ೯

ಮಾರನೆಯ ದಿನ ಪ್ರಾತಃಕಾಲದಲ್ಲಿ ಜನರು ನೋಡುತ್ತಾರೆ -ತಂಗಾಳಿಯಿಂದ ತುಂತುರು ಹನಿಗಳನ್ನು ಚೆಲ್ಲುತ್ತಾ ಹೊಸದೊಂದು ನದಿಯೋ ಎಂಬಂತೆ ಮನೆಯ ಹತ್ತಿರವಿದ್ದ ವಿಷ್ಣುದೇವಾಲಯದ ಪಕ್ಕದಲ್ಲಿ ಆ ನದಿಯು ಹರಿಯುತ್ತಿದೆ !

ಏವಮೇನಮತಿಮರ್ತ್ಯಚರಿತ್ರಂ
ಸೇವಮಾನಜನದೈನ್ಯಲವಿತ್ರಮ್ ।

ಕೇರಲಕ್ಷಿತಿಪತಿರ್ಹಿ ದಿದೃಕ್ಷುಃ
ಪ್ರಾಹಿಣೋತ್ ಸಚಿವಮಾದೃತಭಿಕ್ಷುಃ || ೧೦

ಈ ರೀತಿಯಾಗಿ ಅಮಾನುಷವಾದ ಚರಿತ್ರೆಯನ್ನು ಬಿತ್ತರಿಸುತ್ತಾ, ತನ್ನನ್ನು ಆಶ್ರಯಿಸಿದ ಜನರ ಕಷ್ಟವನ್ನು ನೀಗಿಸುತ್ತಾ ಇದ್ದುದನ್ನು ಕೇಳಿ ಕೇರಳದ ರಾಜನು ಆ ಬಾಲಕನನ್ನು ನೋಡಲು ಬಯಸಿದನು. ಸಂನ್ಯಾಸಿಗಳನ್ನು ಆದರದಿಂದ ಕಾಣುತ್ತಿದ್ದ ಆ ರಾಜನು ತನ್ನ ಅಮಾತ್ಯನನ್ನು ಶ್ರೀಶಂಕರನ ಬಳಿಗೆ ಕಳುಹಿಸಿದನು.

ಸೋಽಪ್ಯತಂದ್ರಿತಮಭೀರುಪದಾಭಿಃ
ಪ್ರಾಪ್ಯ ತಂ ತದನು ಸದ್ವಿರದಾಭಿಃ |
ಉಕ್ತಿಭಿಃ ಸರಸಮಂಜುಪದಾಭಿಃ
ಶಕ್ತಿಭೃತ್ ಸಮಮಜೆಜ್ಞಪದಾಭಿಃ || ೧೧

ಸಮರ್ಥನಾದ ಆ ಅಮಾತ್ಯನು ಆನೆಯಿಂದ ಸಹಿತವಾದ ಕೆಲವು ಕಾಣಿಕೆಗಳನ್ನು ತೆಗೆದು ಕೊಂಡು ಶ್ರೀಶಂಕರನ ಬಳಿಗೆ ಬಂದು ಕುಮಾರ ಸ್ವಾಮಿಯಂತಿದ್ದ ಆತನನ್ನು ಕುರಿತು ರಸವತ್ತಾದ ಮಂಜುಳ ವಾಕ್ಯಗಳಿಂದ ಹೀಗೆಂದನು-

ಯಸ್ಯ ನೈವ ಸದೃಶೋ ಭುವಿ ಬೋದ್ಧಾ
ದೃಶ್ಯತೇ ರಣಶಿರಸ್ಸು ಚ ಯೋದ್ಧಾ |
ತಸ್ಯ ಕೇರಲನೃಪಸ್ಯ ನಿಯೋಗಾದ್
ದೃಶ್ಯಸೇ ಮಮ ಚ ಸತ್ಕೃತಿಯೋಗಾತ್ || ೧೨

"ಅಯ್ಯಾ ಬಾಲಕನೆ, ಕೇರಳ ಮಹಾರಾಜನ ಅಪ್ಪಣೆಯಂತೆ ನಾನು ಬಂದು ನನ್ನ ಪುಣ್ಯಬಲದಿಂದ ನಿನ್ನನ್ನು ನೋಡುತ್ತಿದ್ದೇನೆ. ಆ ಮಹಾರಾಜನಿಗೆ ಸದೃಶನಾದ ಬುದ್ಧಿ ಶಾಲಿಯಾಗಲಿ, ರಣರಂಗದಲ್ಲಿ ಹೋರಾಡತಕ್ಕ ವೀರನಾಗಲಿ, ಈ ಜಗತ್ತಿನಲ್ಲಿ ಇನ್ನೊಬ್ಬನಿಲ್ಲ.

ರಾಜಿತಾಭ್ರವಸನೈರ್ವಿಲಸಂತಃ
ಪೂಜಿತಾಃ ಸದಸಿ ಯಸ್ಯ ವಸಂತಃ |
ಪಂಡಿತಾಃ ಸರಸವಾದಕಥಾಭಿಃ
ಖಂಡಿತಾಪರಗಿರೋಽ ವಿತಥಾಭಿಃ || ೧೩

"ಆ ಮಹಾರಾಜನ ಆಸ್ಥಾನದಲ್ಲಿ ಹೊಳೆಯುವ ಚಿನ್ನದ ಜರಿಯುಳ್ಳ ವಸ್ತ್ರಗಳಿಂದ ಶೋಭಿಸುತ್ತಾ ಗೌರವಾರ್ಹರಾಗಿ ಅನೇಕ ಪಂಡಿತರಿದ್ದಾರೆ. ಅವರು ರಸಮಯವಾದ

ವಾದಕಥೆಗಳಿಂದ ಸಪ್ರಮಾಣವಾಗಿ ಎದುರಾಳಿಗಳ ವಾದಗಳನ್ನು ಖಂಡಿಸಲು ಸಮರ್ಥರಾಗಿದ್ದಾರೆ.

ಅಭ್ರ=ಚಿನ್ನ

ಸೋಽಯಮಾಜಿಜಿತಸರ್ವಮಹೀಪಃ
ಸ್ತೂಯಮಾನಜರಣಃ ಕುಲದೀಪಃ |
ಪಾದರೇಣುಮವನಂ ಭವಭಾಜಾ-
ಮಾದರೇಣ ತವ ವಿಂದತು ರಾಜಾ || ೧೪

"ಯುದ್ಧದಲ್ಲಿ ಸಕಲರಾಜರನ್ನೂ ಗೆದ್ದು ಸ್ತೋತ್ರಬಾಜನನೂ ಕುಲದೀಪಕನೂ ಆದ ಆ ರಾಜನು ನಿನ್ನ ಆಗಮನವನ್ನು ಬಯಸುತ್ತಾನೆ. ಸಂಸಾರಿಗಳನ್ನು ರಕ್ಷಿಸುವ ನಿನ್ನ ಪಾದಧೂಳಿಯನ್ನು ಆದರದಿಂದ ಪಡೆಯಲು ಅಪೇಕ್ಷಿಸುತ್ತಾನೆ

ಏಷ ಸಿಂಧುರಪರೋ ಮದ ಪೂರ್ಣೋ
ದೋಷಗಂಧರಹಿತಃ ಪ್ರವಿತೀರ್ಣಃ |
ಅಸ್ತು ತೇಽದ್ಯ ರಜಸಾ ಪರಿಪೂತಂ
ವಸ್ತುತೋ ನೃಪಗೃಹಂ ಶುಚಿಭೂತಮ್ || ೧೫

ಇದೋ, ಯಾವದೋಷವೂ ಇಲ್ಲದ ಈ ಮತ್ತಗಜವನ್ನು ನಿನಗೆ ಅರ್ಪಿಸಿದ್ದಾನೆ. ನಿನ್ನ ಪಾದಧೂಳಿಯಿಂದ ರಾಜಭವನವು ಈಗ ಪರಿಪೂತವಾಗಲಿ." ಎಂದನು.

ಇತ್ಯುದೀರ್ಯ ಪರಿಸಾಧಿತ ದೌತ್ಯಂ
ಪ್ರತ್ಯುದೀರಿತ ಸದುಕ್ತಿ ಮಮಾತ್ಯಮ್ |
ಅತ್ಯುದಾರಮೃಷಿಭಿಃ ಪರಿಶಸ್ತಂ
ಪ್ರತ್ಯುವಾಚ ವಚನಂ ಕ್ರಮಶಸ್ತಮ್ || ೧೬

ಹೀಗೆ ಅಮಾತ್ಯನು ವಿನಯೋಕ್ತಿಗಳನ್ನಾಡಿ ತನ್ನ ದೂತಕಾರ್ಯವನ್ನು ಮುಗಿಸಿದನು. ಆಗ ಶ್ರೀಶಂಕರನು ಮಹಾಜನರು ಮೆಚ್ಚುವ ಪ್ರಶಂಸನೀಯವಾದ ಮಾತನ್ನು ಕ್ರಮವರಿತು ಹೀಗೆ ಹೇಳಿದನು-

ಭೈಕ್ಷಮನ್ನಮಜಿನಂ ಪರಿಧಾನಂ
ರೂಕ್ಷಮೇವ ನಿಯಮೇನ ವಿಧಾನಮ್ |
ಕರ್ಮ ದಾತ್ರುವರ ಶಾಸ್ತಿ ವಟೂನಾಂ
ಶರ್ಮದಾಯಿನಿಗಮಾಪ್ತಿಪಟೂನಾಮ್ || ೧೭

"ಉದಾರ ಬುದ್ಧಿಯ ಅಮಾತ್ಯನೆ, ನಾವು ಬ್ರಹ್ಮಚಾರಿಗಳು. ನಮಗೆ ಭಿಕ್ಷಾನ್ನ, ಕೃಷ್ಣಾಜಿನ -ಈ ಕಷ್ಟಸಾಧ್ಯವಾದ ವಿಷಯವನ್ನೇ ವೇದವು ನಿಯಮದಿಂದ ವಿಧಿಸುತ್ತದೆ. ಶ್ರೇಯಸ್ಕರವಾದ ವೇದಗಳನ್ನು ಪಡೆದು ಕೊಳ್ಳಲು ಪಟುಗಳಾದ ವಟುಗಳಿಗೆ ಹೀಗಿರುವುದು ವೇದ ವಿಹಿತವಾದ ಕರ್ತವ್ಯ.

ಕರ್ಮ ನೈಜಮಪಹಾಯ ಕುಭೋಗ್ಯೈಃ
ಕುರ್ಮಹೇಽಹ ಕಿಮು ಕುಂಭಿಪುರೋಗ್ಯೈಃ |
ಇಚ್ಛಯಾ ಸುಖಮಮಾತ್ಯ ಯಥೇತಂ
ಗಚ್ಛ ನಾಥಮಸಕೃತ್ಕಥಯೇತ್ಥಮ್ || ೧೮

"ಆನೆಯೇ ಮೊದಲಾದ ಕುತ್ಸಿತ ಭೋಗವಸ್ತುಗಳಿಂದ ನಾವು ಏನುಮಾಡಬೇಕು? ನಮ್ಮ ನಿಜ ಕರ್ತವ್ಯಗಳನ್ನು ಬಿಡಬೇಕಾಗುತ್ತದೆ. ಅಯ್ಯಾ ಅಮಾತ್ಯನೇ, ನೀನು ಬಂದಂತೆ ಯಥೇಚ್ಛವಾಗಿ ಸುಖದಿಂದ ಹೋಗಬಹುದು. ನಿನ್ನ ರಾಜನ ಬಳಿಗೆ ಹೋಗಿ ಈ ಮಾತನ್ನು ತಿಳಿಸು.

ಪ್ರತ್ಯುತ ಕ್ಷಿತಿಭೃತಾಽಖಿಲವರ್ಣಾ
ವೃತ್ತ್ಯುಪಾಹರಣತೋ ವಿಗತರ್ಣಾಃ |
ಧರ್ಮವರ್ತ್ಮನಿರತಾ ರಚನೀಯಾಃ
ಕರ್ಮ ವರ್ಜ್ಯಮಿತಿ ನೋ ವಚನೀಯಾಃ || ೧೯

ಇದಕ್ಕೆ ಬದಲಾಗಿ ರಾಜನಾದವನು ಎಲ್ಲ ವರ್ಣದವರೂ ತಮ್ಮ ತಮ್ಮ ವೃತ್ತಿಗಳನ್ನು ಪರಿಪಾಲಿಸುತ್ತಾ ದೇವರ್ಷಿಪಿತೃಋಣಗಳನ್ನು ತೀರಿಸುವಂತೆಯೂ ಧರ್ಮ ಮಾರ್ಗದಲ್ಲಿ ನಿರತರಾಗಿರುವಂತೆಯೂ ನೋಡಿಕೊಳ್ಳಬೇಕು. ತಮ್ಮ ತಮ್ಮ ಕರ್ತವ್ಯ ಕರ್ಮವನ್ನು ತ್ಯಜಿಸುವಂತೆ ಎಂದಿಗೂ ಹೇಳಬಾರದು" ಎಂದು ಹೇಳು.

ಇತ್ಯಮುಷ್ಯ ವಚನಾದಕಲಂಕಃ
ಪ್ರತ್ಯಗಾತ್ ಪುನರಮಾತ್ಯಮೃಗಾಂಕಃ |
ವೃತ್ತಮಸ್ಯ ಸ ನಿಶಮ್ಯ ಧರಾಪಃ
ಸತ್ತಮಸ್ಯ ಸವಿಧಂ ಸ್ವಯಮಾಪ || ೨೦

ಹೀಗೆ ಶ್ರೀಶಂಕರರನು ಹೇಳಲಾಗಿ ದೋಷರಹಿತನೂ ಮಂತ್ರಿಶ್ರೇಷ್ಠನೂ ಆದ ಆತನು ರಾಜಧಾನಿಗೆ ಹಿಂತಿರುಗಿದನು. ರಾಜನು ಈ ವೃತ್ತಾಂತವನ್ನು ಕೇಳಿ ಈ ಮಹಾತ್ಮನ ಬಳಿಗೆ ತಾನೇ ಬಂದನು.

ಭೂಸುರಾರ್ಭಕವರ್ಯೈಃ ಪರಿವೀತಂ
ಭಾಸುರೋಡುಪಗಭಸ್ತ್ಯುಪವೀತಮ್ |
ಅಚ್ಛಜಹ್ನುಸುತಯಾ ವಿಲಸಂತಂ
ಸ್ವಚ್ಛವಿಂ ನಗಮಿವ ದ್ರುಮವಂತಮ್ || ೨೧

ರಾಜನು ಕಾಲಟಿಗೆ ಬಂದು ಈ ಬ್ರಹ್ಮಚಾರಿಯನ್ನು ಕಂಡನು. ಶ್ರೀಶಂಕರನು ಬ್ರಾಹ್ಮಣ ಬಾಲಕರೊಡನೆ ಕುಳಿತಿದ್ದನು. ಚಂದ್ರಕಿರಣದಂತೆ ಶುಭ್ರವಾದ ಯಜ್ಞೋಪವೀತವನ್ನು ಧರಿಸಿದ್ದನು. ಆತನನ್ನು ನೋಡಿದರೆ ಶುಭ್ರಜಲದಿಂದ ಕೂಡಿದ ಗಂಗಾನದಿಯಿಂದ ಪರಿವೀತನಾಗಿ ಶುಭ್ರಕಾಂತಿಯುಳ್ಳ ಮತ್ತು ವೃಕ್ಷಗಳಿಂದ ಸಹಿತನಾದ ಹಿಮಾಲಯಗಿರಿಯಂತೆ ವಿರಾಜಿಸುತ್ತಿದ್ದನು.

ಟಿಪ್ಪಣಿ:- ಬ್ರಾಹ್ಮಣಬಾಲಕರು ವೃಕ್ಷಗಳಿದ್ದಂತೆ.

ಚರ್ಮ ಕೃಷ್ಣಹರಿಣಸ್ಯ ದಧಾನಂ
ಕರ್ಮ ಕೃತ್ಸ್ನಮುಚಿತಂ ವಿದಧಾನಮ್ |
ನೂತನಾಂಬುದನಿಭಾಂಬರವಂತಂ
ಪೂತನಾರಿಸಹಜಂ ತುಲಯಂತಂ || ೨೨

ಕೃಷ್ಣಾಜಿನವನ್ನು ಧರಿಸಿ ಉಚಿತವಾದ ಕರ್ತವ್ಯವನ್ನು ನೆರವೇರಿಸುತ್ತಾ ಇದ್ದ ಆತನು ಹೊಸಮೋಡದಂತೆ ಕಪ್ಪಾದ ವಸ್ತ್ರವನ್ನುಟ್ಟು, ಶ್ರೀಕೃಷ್ಣಸೋದರನಾದ ಬಲರಾಮನಿಗೆ ಸದೃಶನಾಗಿ ಕಾಣುತ್ತಿದ್ದನು.

ಜಾತರೂಪರುಚಿಮುಂಜಸುಧಾಮ್ನಾ
ಭಾತರೂಪ ಕಟಿಮದ್ಭುತಧಾಮ್ನಾ |
ನಾಕಭೂಜಮಿವ ಸತ್ಕೃತಿಲಬ್ಧಂ
ಪಾಕಪೀತಲತಿಕಾಪರಿರಬ್ಧಮ್ || ೨೩

ಚಿನ್ನದಂತೆ ಹೊಳೆಯುತ್ತಿದ್ದ ಅದ್ಭುತವಾದ ಕಾಂತಿಯುಳ್ಳ ಮೌಂಜೀದಾರವನ್ನು ತನ್ನ ಸೊಂಟಕ್ಕೆ ಶ್ರೀಶಂಕರನು ಕಟ್ಟಿಕೊಂಡಿದ್ದನು. ಆದ್ದರಿಂದ ಒಣಗಿ ಹಳದಿಯಾದ ಬಳ್ಳಿಯಿಂದ ಸುತ್ತುವರಿಯಲ್ಪಟ್ಟು ಪುಣ್ಯಶಾಲಿಗಳಿಗೆ ದೊರಕುವ ಕಲ್ಪವೃಕ್ಷದಂತೆ ಆತನು ಕಾಣುತ್ತಿದ್ದನು.

ಸಸ್ಮಿತಂ ಮುನಿವರಸ್ಯ ಕುಮಾರಂ
ವಿಸ್ಮಿತೋ ನರಪತಿರ್ಬಹುವಾರಮ್ |
ಸಂವಿಧಾಯ ವಿನತಿಂ ವರದಾನೇ
ತಂ ವಿಧಾತೃಸದೃಶಂ ಭುವಿ ಮೇನೇ || ೨೪

ಕೇರಳರಾಜನು ಮುಗುಳ್ನಗೆ ಬೀರುತ್ತಿದ್ದ ಆ ಮುನಿಪುತ್ರನನ್ನು ನೋಡಿ ವಿಸ್ಮಿತನಾಗಿ ಆತನಿಗೆ ವಿನಯದಿಂದ ಅನೇಕಸಲ ನಮಸ್ಕಾರ ಮಾಡಿದನು. ವರವನ್ನೀಯಲು ಭೂಲೋಕಕ್ಕೆ ಬಂದ ಬ್ರಹ್ಮನಿಗೆ ಸಮಾನನು ಇವನೆಂದು ಮನಸ್ಸಿನಲ್ಲಿ ಅಂದುಕೊಂಡನು.

ತೇನ ಪೃಷ್ಟಕುಶಲಃ ಕ್ಷಿತಿಪಾಲಃ
ಸ್ವೇನ ಸೃಷ್ಟಮಥ ಶಾತ್ರವಕಾಲಃ |
ಹಾಟಕಾಯುತಸಮರ್ಪಣಪೂರ್ವಂ
ನಾಟಕತ್ರಯಮವೋಚದಪೂರ್ವಮ್ || ೨೫

ಅನಂತರ ಶ್ರೀಶಂಕರನು ಶತ್ರು ವಿಧ್ವಂಸಕನಾದ ಆ ರಾಜನನ್ನು ಕುರಿತು ಕುಶಲವನ್ನು ವಿಚಾರಿಸಿದನು. ಆಗ ರಾಜನು ಹತ್ತು ಸಾವಿರ ಚಿನ್ನದ ನಾಣ್ಯಗಳನ್ನು ಕಾಣಿಕೆಯಾಗಿ ಅರ್ಪಿಸಿ, ತಾನು ರಚಿಸಿದ್ದ ಅಪೂರ್ವವಾದ ಮೂರು ನಾಟಕಗಳನ್ನು ಓದಿ ಹೇಳಿದನು.

ತದ್ರಸಾರ್ದ್ರಗುಣರೀತಿವಿಶಿಷ್ಟಂ
ಭದ್ರಸಂಧಿರುಚಿರಂ ಸುಕವೀಷ್ಟಮ್ |
ಸಂಗ್ರಹೇಣ ಸ ನಿಶಮ್ಯ ಸುವಾಚಂ
ತಂ ಗೃಹಾಣ ವರಮಿತ್ಯಮುಮೂಚೇ || ೨೬

ಆ ನಾಟಕ ತ್ರಯವು ನವರಸಗಳಿಂದ ಆರ್ದ್ರವಾಗಿಯೂ, ಗುಣರೀತಿ ವಿಶಿಷ್ಟವಾಗಿಯೂ ಉತ್ತಮವಾದ ಮುಖಾದಿಸಂಧಿಗಳಿಂದ ಸುಂದರವಾಗಿಯೂ, ಉತ್ತಮ ಕವಿಗಳಿಗೆ ಪ್ರಿಯವಾಗಿಯೂ ಇದ್ದಿತು. ಅದನ್ನು ಶ್ರೀಶಂಕರನು ಸಂಗ್ರಹವಾಗಿ ಕೇಳಿ, ಚೆನ್ನಾಗಿ ವಾಚನಮಾಡಿದ ಆ ರಾಜನನ್ನು ಕುರಿತು " ನಿನಗೆ ಏನು ಬೇಕು? ವರವನ್ನು ಕೇಳಿಕೊ" ಎಂದನು.

ಟಿಪ್ಪಣಿ:- ರಸಗಳು-ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ, ರೌದ್ರ ಮತ್ತು ಶಾಂತ ಎಂಬ ಒಂಬತ್ತು ರಸಗಳು.
ಗುಣ- ಮಾಧುರ್ಯ, ಪ್ರಸಾದ, ಓಜಸ್ಸು ಎಂಬ ಮೂರು.
ರೀತಿ- ಗೌಡೀ, ವೈದರ್ಭೀ, ಪಾಂಚಾಲೀ ಎಂಬ ಮೂರು
ಸಂಧಿ- ಮುಖ, ಪ್ರತಿಮುಖ, ಗರ್ಭ, ಅವಮರ್ಶ, ಉಪಸಂಹೃತಿ ಎಂಬ ಐದು.

ತಾಂ ನಿತಾಂತಹೃದಯಂಗಮಸಾರಾಂ
ಗಾಂ ನಿಶಮ್ಯ ತುಲಿತಾಮೃತಧಾರಾಮ್ |
ಭೂಪತಿಃ ಸ ರಚಿತಾಂಜಲಿಬಂಧಃ
ಸ್ವೋಪಮಂ ಸುತಮಿಯೇಷ ಸುಸಂಧಃ || ೧೭

ಹೀಗೆ ಬಹಳ ಹೃದಯಂಗಮವಾಗಿಯೂ ಅಮೃತಧಾರೆಗೆ ಸಮಾನವಾಗಿಯೂ ಇದ್ದ ಆ ನುಡಿಯನ್ನು ಕೇಳಿ ರಾಜನು ಬದ್ಧಾಂಜಲಿಯಾಗಿ ಸರಿಯಾಗಿ ನಿಂತುಕೊಂಡು ತನಗೆ ಯೋಗ್ಯನಾದ ಒಬ್ಬ ಮಗನು ಬೇಕು ಎಂದು ಅಪೇಕ್ಷಿಸಿದನು.

ನೋ ಹಿತಾಯ ಮಮ ಹಾಟಕಮೇತ-
ದ್ದೇಹಿ ನಸ್ತು ಗೃಹವಾಸಿಜನಾಯ |
ಈಹಿತಂ ತವ ಭವಿಷ್ಯತಿ ಶೀಘ್ರಂ
ಯಾಹಿ ಪೂರ್ಣಮನಸೇತ್ಯವದತ್ ತಮ್ || ೨೮

ಆಗ ಶ್ರೀಶಂಕರನು ರಾಜನನ್ನು ಕುರಿತು "ಈ ಚಿನ್ನವು ನನಗೆ ಹಿತಕರವಾದದ್ದಲ್ಲ. ನಮ್ಮ ಮನೆಯಲ್ಲಿರುವ ಇತರ ಜನರಿಗೆ ಇದನ್ನು ಕೊಟ್ಟುಬಿಡು. ನಿನ್ನ ಇಷ್ಟಾರ್ಥವು ಶೀಘ್ರವಾಗಿ ನೆರವೇರುವುದು. ಮನಸ್ತೃಪ್ತಿಯಿಂದ ಹೋಗು" ಎಂದನು.

ರಾಜವರ್ಯಕುಲವೃದ್ಧಿನಿಮಿತ್ತಾಂ
ವ್ಯಾಜಹಾರ ರಹಸಿ ಶ್ರುತಿವಿತ್ತಾಮ್ |
ಇಷ್ಟಿಮಸ್ಯ ಸಕಲೇಷ್ಟವಿಧಾತು-
ಸ್ತುಷ್ಟಿಮಾಪ ಹಿ ತಯಾ ಕ್ಷಿತಿನೇತಾ || ೨೯

ಅನಂತರ ಏಕಾಂತಸ್ಥಳಕ್ಕೆ ರಾಜನನ್ನು ಕರೆದು ಕೊಡು ಹೋಗಿ ಆತನ ಕುಲವೃದ್ಧಿಗೋಸ್ಕರ ವೇದಪ್ರತಿಪಾದಿತವಾದ ಮತ್ತು ಸಕಲ ಇಷ್ಟಗಳನ್ನೂ ನೆರವೇರಿಸುವ ಪರಮಾತ್ಮನ ಪೂಜಾರೂಪವಾದ ಯಜ್ಞವಿಶೇಷವನ್ನು ತಿಳಿಸಿ ಕೊಟ್ಟನು. ಭೂಪಾಲನು ಅದರಿಂದ ಸಂತುಷ್ಟನಾದನು.

ಸ ವಿಶೇಷವಿದಾ ಸಭಾಜಿತಃ
ಕವಿಮುಖ್ಯೇನ ಕಲಾಭೃತಾಂ ವರಃ |
ಅಗಮತ್ಕೃತಕೃತ್ಯಧೀರ್ನಿಜಾಂ
ನಗರೀಮಸ್ಯ ಗುಣಾನುದೀರಯನ್ || ೩೦

ಆಮೇಲೆ ವಿಶೇಷಜ್ಞನೂ ಪಂಡಿತಾಗ್ರಣಿಯೂ ಆದ ಶ್ರೀಶಂಕರನು ಉತ್ತಮ ಕವಿಯಾದ ರಾಜನನ್ನು ಆದರದಿಂದ ಸತ್ಕರಿಸಲಾಗಿ ಆತನು ತಾನು ಕೃತಕೃತ್ಯನಾದೆನೆಂದು ಬಗೆದು ಈ ಬ್ರಹ್ಮಚಾರಿಯ ಶ್ರೇಷ್ಠಗುಣಗಳನ್ನು ಕೀರ್ತಿಸುತ್ತಾ ತನ್ನ ನಗರಕ್ಕೆ ಹೋದನು.

ಬಹವಃ ಶ್ರುತಿ ಪಾರದೃಶ್ವನಃ
ಕವಯೋಽಧ್ಯೈಷತ ಶಂಕರಾದ್ಗುರೋಃ |

ಮಹತಃ ಸುಮಹಾಂತಿ ದರ್ಶನಾ-
ನ್ಯಧಿಗಂತುಂ ಫಣಿರಾಜಕೌಶಲೀಮ್ || ೩೧

ಇತ್ತಲಾಗಿ ವೇದಪಾರಂಗತನೂ ಮಹಾತ್ಮನೂ ಆದ ಶ್ರೀಶಂಕರ ಗುರುವಿನಿಂದ ಬಹಳ ಮಂದಿ ವಿದ್ಯಾವಂತರು ದೊಡ್ಡ ದೊಡ್ಡ ಸಾಂಖ್ಯಾದಿ ದರ್ಶನಗಳನ್ನು ಅಭ್ಯಾಸಮಾಡಿದರು. ಫಣಿರಾಜನಾದ ಆದಿಶೇಷನ ವಾಕ್ಕೌಶಲವನ್ನು ಕಲಿತುಕೊಳ್ಳುವುದು ಅವರ ಉದ್ದೇಶವಾಗಿತ್ತು.

ಪಠಿತಂ ಶ್ರುತಮಾದರಾತ್ಪುನಃ
ಪುನರಾಲೋಕ್ಯ ರಹಸ್ಯನೂನಕಮ್ |
ಪ್ರವಿಭಜ್ಯ ನಿಮಜ್ಜತಃ ಸುಖೇ
ಸ ವಿಧೇಯಾನ್ ವಿದಧೇತಮಾಂ ಸುಧೀಃ || ೩೨

ಆ ಶಿಷ್ಯರು ತಾವು ಓದಿದ್ದನ್ನೂ ಶ್ರುತವಾದದ್ದನ್ನೂ ಆದರದಿಂದ ಮತ್ತೆ ಮತ್ತೆ ಆಲೋಚಿಸಿ ರಹಸ್ಯದಲ್ಲಿ ಪರಮಾನಂದದಲ್ಲಿ ಮುಳುಗುತ್ತಿದ್ದರು. ಈ ಮೇಧಾವಿಯು ಶಿಷ್ಯರನ್ನು ಆ ರೀತಿಯಲ್ಲಿ ತರಬೇತುಗೊಳಿಸಿದನು.

ಸರ್ವಾರ್ಥತತ್ತ್ವವಿದಪಿ ಪ್ರಕೃತೋಪಚಾರೈಃ
ಶಾಸ್ತ್ರೋಕ್ತಭಕ್ತ್ಯತಿಶಯೇನ ವಿನೀತಶಾಲೀ |
ಸಂತೋಷಯನ್ ಸ ಜನನೀಮನಯತ್ಕಿಯಂತಿ
ಸಂಮಾನಿತೋ ದ್ವಿಜವರೈರ್ದಿವಸಾನಿ ಧನ್ಯಃ || ೩೩

ಶ್ರೀಶಂಕರನು ಸರ್ವಶಾಸ್ತ್ರಗಳ ತತ್ತ್ವಜ್ಞನಾಗಿದ್ದರೂ ಶಾಸ್ತ್ರೋಕ್ತವಾದ ಮಾತೃಭಕ್ತಿಯಿಂದ ವಿನೀತನಾಗಿ ತಾಯಿಗೆ ಬೇಕಾದ ಸೇವಾಕಾರ್ಯಗಳನ್ನು ಮಾಡುತ್ತಾ ಅವಳನ್ನು ಸಂತೋಷ ಪಡಿಸುತ್ತಾ ಬ್ರಾಹ್ಮಣೋತ್ತಮರಿಂದ ಪ್ರಶಂಸಿತನಾಗಿ ಕೆಲವು ದಿನಗಳನ್ನು ಧನ್ಯತೆಯಿಂದ ಕಳೆದನು.

ಸಾ ಶಂಕರಸ್ಯ ಶರಣಂ ಸ ಚ ತಜ್ಜನನ್ಯಾ
ಅನ್ಯೋನ್ಯಯೋಗವಿರಹಸ್ತ್ವನಯೋರಸಹ್ಯಃ |
ನೋ ವೋಢುಮಿಚ್ಛತಿ ತಥಾಪ್ಯಮನುಷ್ಯಭಾವಾ-
ನ್ಮೇರುಂ ಗತಃ ಕಿಮಪಿ ವಾಂಛತಿ ದುಷ್ಪ್ರದೇಶಮ್ || ೩೪

ಆರ್ಯಾಂಬೆಯು ಶ್ರೀಶಂಕರನಿಗೆ ಹಿತಚಿಂತನೆ ಮಾಡತಕ್ಕ ಆಶ್ರಯದಾತ್ರಿಯಾಗಿದ್ದಳು. ಆತನು ತನ್ನ ತಾಯಿಗೆ ಶುಶ್ರೂಷೆ ಮಾಡುತ್ತ ಅವಳಿಗೆ ಗತಿಯಾಗಿದ್ದನು. ಹೀಗಿರುವಾಗ

ಅವರಿಬ್ಬರಿಗೆ ಪರಸ್ಪರ ವಿರಹವಾಗುವುದು ಸಹಿಸಲು ಶಕ್ಯವಾಗಿರಲಿಲ್ಲ. ಆದರೂ ಸಹ ಶ್ರೀಶಂಕರನು ಅಮಾನುಷ ಸ್ವರೂಪನಾದ್ದರಿಂದ ಮದುವೆಯಾಗಲು ಇಚ್ಛಿಸುತ್ತಿರಲಿಲ್ಲ. ಚಿನ್ನದ ಮೇರುಪರ್ವತವನ್ನೇರಿದವನು ಮರುಭೂಮಿಯಂತಹ ಒಂದು ಕೆಟ್ಟ ನೆಲವನ್ನು ಎಂದಿಗಾದರೂ ಬಯಸುತ್ತಾನೆಯೇ?

ಕೃತವಿದ್ಯಮಮುಂ ಚಿಕೀರ್ಷವಃ
ಶ್ರಿತಗಾರ್ಹಸ್ಥ್ಯಮಥಾಪ್ತಬಂಧವಃ |
ಅನುರೂಪಗುಣಾಮಚಿಂತಯ-
ನ್ನನವದ್ಯೇಷು ಕುಲೇಷು ಕನ್ಯಕಾಮ್ || ೩೫

ವಿದ್ಯಾವಂತನಾಗಿ ಬಂದಿರುವ ಆತನಿಗೆ ಗೃಹಸ್ಥಾಶ್ರಮವನ್ನು ಕೂಡಿಸಬೇಕೆಂದು ಆಪ್ತ ಬಂಧು ಜನರು ಆಲೋಚಿಸಿ ಯೋಗ್ಯವಾದ ವಂಶದಲ್ಲಿರುವ ಅನುರೂಪಳಾದ ಕನ್ಯೆಗೋಸ್ಕರ ವಿಚಾರಿಸುತ್ತಿದ್ದರು.

ಅಥ ಜಾತು ದಿದೃಕ್ಷವಃ ಕಲಾ-
ವವತೀರ್ಣಂ ಮುನಯಃ ಪುರದ್ವಿಷಮ್ |
ಉಪಮನ್ಯು ದಧೀಚಿಗೌತಮ-
ತ್ರಿತಲಾಗಸ್ತ್ಯಮುಖಾಃ ಸಮಾಯಯುಃ || ೩೬

ಹೀಗಿರುವಾಗ ಕಲಿಯುಗದಲ್ಲಿ ಅವತರಿಸಿ ಬಂದಿರುವ ಈ ಪರಮೇಶ್ವರನನ್ನು ನೋಡುವುದಕ್ಕಾಗಿ ಉಪಮನ್ಯು, ದಧೀಚಿ, ಗೌತಮ, ತ್ರಿತಲ, ಅಗಸ್ತ್ಯರೇ ಮೊದಲಾದ ಮುನಿಗಳು ಬಂದರು.

ಪ್ರಣಿಪತ್ಯ ಸ ಭಕ್ತಿಸಂನತಃ
ಪ್ರಸವಿತ್ರ್ಯಾ ಸಹ ತಾನ್ವಿಧಾನವಿತ್ |
ವಿಧಿವನ್ಮಧುಪರ್ಕಪೂರ್ವಯಾ
ಪ್ರತಿಜಗ್ರಾಹ ಸಪರ್ಯಯಾ ಮುನೀನ್ || ೩೭

ಶ್ರೀಶಂಕರನು ತನ್ನ ತಾಯಿಯೊಡನೆ ಬಂದು ಭಕ್ತಿಯಿಂದ ಬಾಗಿ ಅವರಿಗೆ ನಮಸ್ಕಾರಮಾಡಿದನು. ವಿಧಿಜ್ಞನಾದ ಆತನು ಮಧುಪರ್ಕವೇ ಮೊದಲಾದ ಕ್ರಿಯೆಗಳಿಂದ ಪೂಜಿಸಿ ವಿಧಿವತ್ತಾಗಿ ಆ ಮುನಿಗಳನ್ನು ಸ್ವಾಗತಿಸಿದನು.

ವಿಹಿತಾಂಜಲಿನಾ ವಿಪಶ್ಚಿತಾ
ವಿನಯೋಕ್ತ್ಯಾಽರ್ಪಿತ ವಿಷ್ಟರಾ ಅಮೀ |

ಋಷಯಃ ಪರಮಾರ್ಥಸಂಶ್ರಯಾ
ಅಮುನಾ ಸಾಕಮಚೀಕರನ್ ಕಥಾಃ || ೩೮

ವಿದ್ವಾಂಸನಾದ ಈತನು ಅಂಜಲಿಬದ್ಧನಾಗಿ ವಿನಯೋಕ್ತಿಗಳನ್ನು ನುಡಿದು ಆಸನಗಳನ್ನು ಇತ್ತು ಅವರನ್ನು ಕುಳ್ಳಿರಿಸಿದನು. ಆ ಋಷಿಗಳು ಈತನೊಡನೆ ಪರಮಾರ್ಥತತ್ತ್ವಕ್ಕೆ ಸಂಬಂಧಿಸಿದ ವಿಚಾರಗಳನ್ನು ಕುರಿತು ಮಾತನಾಡಿದರು.

ನಿಜಗಾದ ಕಥಾಂತರೇ ಮುನೀನ್
ಜನನೀ ತಸ್ಯ ಸಮಸ್ತದರ್ಶಿನಃ |
ವಯಮದ್ಯ ಕೃತಾರ್ಥತಾಂ ಗತಾ
ಭಗವಂತೋ ಯದುಪಾಗತಾ ಗೃಹಾನ್ || ೩೯

ಹೀಗೆ ಮಾತಾಡುತ್ತಿರುವಾಗ ಆತನ ತಾಯಿಯಾದ ಅರ್ಯಾಂಬೆಯು ಸರ್ವಜ್ಞರಾದ ಋಷಿಗಳನ್ನು ಕುರಿತು ಹೀಗೆಂದಳು. "ಪೂಜ್ಯರೇ, ನೀವು ನಮ್ಮ ಮನೆಗೆ ಬಂದದ್ದರಿಂದ ನಾವು ಕೃತಾರ್ಥರಾದೆವು.

ಕ್ವ ಕಲಿರ್ಬಹುದೋಷಭಾಜನಂ
ಕ್ವ ಚ ಯುಷ್ಮಚ್ಚರಣಾವಲೋಕನಮ್ |
ತದಲಭ್ಯತ ಚೇತ್ಪುರಾಕೃತಂ
ಸುಕೃತಂ ನಃ ಕಿಮಿತಿ ಪ್ರಪಂಚಯೇ || ೪೦

"ನಾನಾ ದೋಷಗಳಿಗೆ ಕಾರಣವಾದ ಈ ಕಲಿಯುಗವೆಲ್ಲಿ? ನಿಮ್ಮ ಚರಣಗಳನ್ನು ಅವಲೋಕಿಸುವ ಭಾಗ್ಯವೆಲ್ಲಿ? ನಾವು ಪೂರ್ವಜನ್ಮದಲ್ಲಿ ಮಾಡಿದ ಪುಣ್ಯವು ಫಲಿಸಿತು. ನಮ್ಮ ಭಾಗ್ಯವನ್ನು ಏನೆಂದು ಹೇಳಲಿ?

ಶಿಶುರೇಷ ಕಿಲಾತಿಶೈಶವೇ
ಯದಶೇಷಾಗಮಪಾರಗೋಽಭವತ್ |
ಮಹಿಮಾಽಪಿ ಯದದ್ಭುತೋಽಸ್ಯ ತದ್
ದ್ವಯಮೇತತ್ ಕುರುತೇ ಕುತೂಹಲಮ್ || ೪೧

"ಈ ಬಾಲಕನು ಚಿಕ್ಕವಯಸ್ಸಿನಲ್ಲಿಯೇ ಸಮಸ್ತಶಾಸ್ತ್ರಗಳಲ್ಲಿಯೂ ಪಾರಂಗತನಾಗಿ ಬಿಟ್ಟಿದ್ದಾನೆ. ಈತನು ತೋರಿದ ಕೆಲವು ಮಹಿಮೆಗಳು ಅತಿಶಯವಾದವು. ಇವೆರಡೂ ನನಗೆ ತುಂಬ ಕೌತುಕವನ್ನುಂಟುಮಾಡಿವೆ.

ಕರುಣಾರ್ದ್ರದೃಶಾಽನುಗೃಹ್ಯತೇ ಸ್ವಯ-
ಮಾಗತ್ಯ ಭವದ್ಭಿರಪ್ಯಯಮ್ |
ವದತಾಸ್ಯ ಪುರಾಕೃತಂ ತಪಃ
ಕ್ಷಮಮಾಕರ್ಣಯಿತುಂ ಮಯಾ ಯದಿ || ೪೨

ಅಲ್ಲದೆ ಮಹಾತ್ಮರಾದ ನೀವೂ ಸಹ ನೀವಾಗಿಯೇ ಇಲ್ಲಿಗೆ ಬಂದು ಕೃಪಾದೃಷ್ಟಿಯಿಂದ ಈತನನ್ನು ನೋಡುತ್ತಿದ್ದೀರಿ. ಈತನು ಹಿಂದೆ ಯಾವ ತಪಸ್ಸನ್ನು ಆಚರಿಸಿದ್ದನು ? ನಾನು ಕೇಳುಬಹುದಾದರೆ ಅದನ್ನು ಹೇಳಿರಿ" ಎಂದಳು.

ಇತಿ ಸಾದರಮೀರಿತಾಂ ತಯಾ
ಗಿರಮಾಕರ್ಣ್ಯ ಮಹರ್ಷಿಸಂಸದಿ |
ಪ್ರತಿವಕ್ತುಮಭಿಪ್ರಚೋದಿತೋ
ಘಟಜನ್ಮಾ ಪ್ರವಯಾಃ ಪ್ರಚಕ್ರಮೇ || ೪೩

ಹೀಗೆ ಆದರದಿಂದ ಆರ್ಯಾಂಬೆಯು ಹೇಳಿದ್ದನ್ನು ಕೇಳಿ ಆ ಮಹರ್ಷಿಗಳ ಗುಂಪಿನಲ್ಲಿ ಉತ್ತರ ಹೇಳಬೇಕೆಂದು ಪ್ರೇರಿತನೂ ಹಿರಿಯನೂ ಆದ ಅಗಸ್ತ್ಯ ಮುನಿಯು ಹೀಗೆ ಉತ್ತರವನ್ನು ಹೇಳಲಾರಂಭಿಸಿದನು.

ತನಯಾಯ ಪುರಾ ಪತಿವ್ರತೇ
ತವ ಪತ್ಯಾ ತಪಸಾ ಪ್ರಸಾದಿತಃ |
ಸ್ಮಿತ ಪೂರ್ವಮುಪಾದದೇ ವಚೋ
ರಜನೀವಲ್ಲಭಖಂಡಮಂಡನಃ || ೪೪

"ಎಲೌ ಪತಿವ್ರತೇ, ಹಿಂದೆ ನಿನ್ನ ಪತಿಯು ಪುತ್ರಾರ್ಥಿಯಾಗಿ ತಪಸ್ಸು ಮಾಡಿ ಶಿವನನ್ನು ಪ್ರಸನ್ನಗೊಳಿಸಿದನಷ್ಟೆ. ಆಗ ಚಂದ್ರಮೌಳಿಯು ಮುಗುಳ್ನಗೆ ಬೀರುತ್ತಾ ಹೀಗೆಂದನು.

ವರಯಸ್ವ ಶತಾಯುಷಃ ಸುತಾ-
ನಪಿ ವಾ ಸರ್ವವಿದಂ ಮಿತಾಯುಷಮ್ |
ಸುತಮೇಕಮಿತೀರಿತಃ ಶಿವಂ
ಸತಿ ಸರ್ವಜ್ಞಮಯಾಚತಾತ್ಮಜಮ್ || ೪೫

'ಅಯ್ಯಾ ಬ್ರಾಹ್ಮಣ, ಶತಾಯುಷಿಗಳಾದ ಅನೇಕ ಪುತ್ರರನ್ನಾದರೂ ಕೇಳಿಕೋ ಅಥವಾ ಸರ್ವಜ್ಞನೂ ಅಲ್ಪಾಯುವೂ ಆದ ಒಬ್ಬ ಮಗನನ್ನು ಕೇಳಿಕೋ. ಇವುಗಳಲ್ಲಿ ಯಾವ ವರ ಬೇಕು?'

ಎಂದು ಕೇಳಿದನು. ಆಗ, ಎಲೌ ಸಾಧ್ವಿ, ನಿನ್ನ ಪತಿಯು ಸರ್ವಜ್ಞನಾದ ಪುತ್ರನು ಬೇಕೆಂದು ಶಿವನನ್ನು ಕೇಳಿ ಕೊಂಡನು.

ತದಭೀಪ್ಸಿತಸಿದ್ಧಯೇ ಶಿವ-
ಸ್ತವ ಭಾಗ್ಯಾತ್ತನಯೋ ಯಶಸ್ವಿನಿ |
ಸ್ವಯಮೇವ ಬಭೂವ ಸರ್ವವಿತ್
ನ ತತೋಽನ್ಯೋಽಸ್ತಿ ಯತಃ ಸುರೇಷ್ವಪಿ || ೪೬

ಆ ಇಷ್ಟಾರ್ಥವನ್ನು ಪೂರೈಸುವುದಕ್ಕಾಗಿ, ಎಲೌ ಯಶಸ್ವಿನಿ, ನಿನ್ನ ಭಾಗ್ಯದಿಂದ ಪರಮಶಿವನೇ ನಿನಗೆ ಪುತ್ರನಾಗಿ ಹುಟ್ಟಿದ್ದಾನೆ. ಅವನೊಬ್ಬನೇ ಸರ್ವಜ್ಞ. ಇನ್ನು ದೇವತೆಗಳಲ್ಲಿಯೂ ಸಹ ಇನ್ನೊಬ್ಬ ಸರ್ವಜ್ಞನಾದವನು ಇಲ್ಲ ". ಎಂದನು.

ಇತಿ ತದ್ವಚನಂ ನಿಶಮ್ಯ ಸಾ
ಮುನಿವರ್ಯಂ ಪುನರಪ್ಯವೋಚತ |
ಕಿಯದಾಯುರಮುಷ್ಯ ಭೋ ಮುನೇ
ಸಕಲಜ್ಞೋಽಸ್ಯನುಕಂಪಯಾ ವದ || ೪೭

ಈ ಮಾತನ್ನು ಕೇಳಿ ಆ ತಾಯಿಯು ಮುನಿವರೇಣ್ಯನಾದ ಅಗಸ್ತ್ಯನನ್ನು ಕುರಿತು ಮತ್ತೆ "ಮಹರ್ಷಿಗಳೇ, ಹಾಗಾದರೆ ಈತನ ಆಯುಸ್ಸು ಎಷ್ಟು? ನೀವು ಸಕಲವನ್ನೂ ಬಲ್ಲವರು. ಕೃಪೆಯಿಟ್ಟು ನನಗೆ ಹೇಳಬೇಕು". ಎಂದು ಪ್ರಾರ್ಥಿಸಿದಳು.

ಶರದೋಽಷ್ಟ ಪುನಸ್ತಥಾಽಷ್ಟ ತೇ
ತನಯಸ್ಯಾಸ್ಯ ತಥಾಽಪ್ಯಸೌ ಪುನಃ |
ನಿವಸಿಷ್ಯತಿ ಕಾರಣಾಂತರಾದ್
ಭುವನೇಽಸ್ಮಿನ್ ದಶಷಟ್ ಚ ವತ್ಸರಾನ್ || ೪೮

ಆಗ ಅಗಸ್ತ್ಯರು "ನಿನ್ನ ಮಗನಿಗೆ ಮೊದಲು ಎಂಟು ವರ್ಷಗಳು. ಆಮೇಲೆ ಎಂಟು ವರ್ಷ ಆಯುಸ್ಸು. ಪುನಃ ಕಾರಣಾಂತರದಿಂದ ಅನಂತರವೂ ಹದಿನಾರು ವರ್ಷಗಳ ಕಾಲ ಭೂಲೋಕದಲ್ಲಿ ವಾಸಿಸುವನು." ಎಂದರು.

ಇತಿ ವಾದಿನಿ ಭಾವಿನೀಂ ಕಥಾ-
ಮೃಷಿಮುಖ್ಯೇ ಘಟಜೇ ನಿವಾರ್ಯ ತಮ್ |
ಋಷಯಃ ಸಹ ತೇನ ಶಂಕರಂ
ಸಮುಪಾಮಂತ್ರ್ಯ ಯಯುರ್ಯಥಾಗತಮ್ || ೪೯

ಹೀಗೆ ಋಷಿಮುಖ್ಯನಾದ ಅಗಸ್ತ್ಯನು ಭವಿಷ್ಯತ್ತಿನ ಕಥೆಯನ್ನು ಹೇಳುತ್ತಿರಲಾಗಿ ಇತರ ಋಷಿಗಳು ಆತನ ಮಾತನ್ನು ತಡೆದರು. ಆಮೇಲೆ ಅವರೆಲ್ಲರೂ ಶ್ರೀಶಂಕರನನ್ನು ಬೀಳ್ಕೊಂಡು ಅಗಸ್ತ್ಯ ಮುನಿಯೊಡನೆ ತಾವು ಬಂದಂತೆ ಹೊರಟುಹೋದರು.

ಸೃಣಿನಾ ಕರಿಣೀವ ಸಾಽರ್ದಿತಾ
ಶುಚಿನಾ ಶೈವಲಿನೀವ ಶೋಷಿತಾ |
ಮರುತಾ ಕದಲೀವ ಕಂಪಿತಾ
ಮುನಿವಾಚಾ ಸುತವತ್ಸಲಾಽಭವತ್ || ೫೦

ಅಗಸ್ತ್ಯಮುನಿಯ ಮಾತನ್ನು ಕೇಳಿ ಪುತ್ರವತ್ಸಲೆಯಾದ ಆರ್ಯಾಂಬೆಯು ದಃಖಿತಳಾದಳು. ಅಂಕುಶದಿಂದ ತಿವಿಯಲ್ಪಟ್ಟ ಹೆಣ್ಣಾನೆಯಂತೆಯೂ, ಬೇಸಿಗೆಯ ಝಳದಿಂದ ಅಥವಾ ಆಷಾಢ ಮಾಸದಿಂದ ಒಣಗಿದ ಸರಸ್ಸಿನಂತೆಯೂ, ಬಿರುಗಾಳಿಯಿಂದ ಅಲ್ಲಾಡಿದ ಬಾಳೆಯ ಗಿಡದಂತೆಯೂ ಮುನಿಯ ಮಾತಿನಿಂದ ನೊಂದು ಹೋದಳು.

ಟಿಪ್ಪಣಿ :-ಶುಚಿಶಬ್ದಕ್ಕೆ ಬೆಂಕಿ ಎಂದೂ ಆಷಾಢಮಾಸವೆಂದೂ ಅರ್ಥವಿದೆ. ಬೆಂಕಿ ಎಂಬುದಕ್ಕೆ ಬದಲಾಗಿ ಔಚಿತ್ಯದಿಂದ ಬಿಸಿಲಿನ ಝಳ ಎಂದು ಅರ್ಥಮಾಡಿಕೊಳ್ಳಬೇಕು. ಅಥವಾ ಆಷಾಢದಲ್ಲಿ ಮಳೆ ಬರುತ್ತಿದ್ದರೂ ಅದು ಗ್ರೀಷ್ಮ ಋತುವೆಂದೂ ಬೇಸಿಗೆ ಎಂದೂ ಪರಿಗಣಿತವಾಗಿದೆ. ಆದ್ದರಿಂದ ಬೇಸಿಗೆ ಎಂಬ ಅರ್ಥವು ಯುಕ್ತವಾಗುತ್ತದೆ.

ಅಥ ಶೋಕಪರೀತಚೇತನಾಂ
ದ್ವಿಜರಾಡಿತ್ಥಮುವಾಚ ಮಾತರಮ್ |
ಅವಗಮ್ಯ ಚ ಸಂಸೃತಿಸ್ಥಿತಿಂ
ಕಿಮಕಾಂಡೇ ಪರಿದೇವನಾ ತವ || ೫೧

ಹೀಗೆ ಶೋಕಸಂತಪ್ತಳಾದ ತಾಯಿಯನ್ನು ನೋಡಿ ದ್ವಿಜೋತ್ತಮನಾದ ಶ್ರೀಶಂಕರನು "ಅಮ್ಮಾ, ಸಂಸಾರಸ್ಥಿತಿಯು ಕ್ಷಣಭಂಗುರವೆಂಬುದನ್ನು ತಿಳಿದೂ ಸಹ ಈ ಸಮಯದಲ್ಲಿ ಅನಾವಶ್ಯಕವಾಗಿ ನೀನೇಕೆ ದುಃಖಿಸುತ್ತೀಯೆ?

ಪ್ರಬಲಾನಿಲವೇಗವೇಲ್ಲಿತ-
ಧ್ವಜಚೀನಾಂಶುಕಕೋಟಿಚಂಚಲೇ |
ಅಪಿ ಮೂಢಮತಿಃ ಕಲೇವರೇ
ಕುರುತೇ ಕಃ ಸ್ಥಿರಬುದ್ಧಿಮಂಬಿಕೇ || ೫೨

"ಪ್ರಬಲವಾದ ಗಾಳಿಯ ಹೊಡೆತಕ್ಕೆ ಹೊಯ್ದಾಡುವ ಧ್ವಜಪಟದ ಅಂಚಿನಂತೆ ಚಂಚಲವಾದದ್ದು ಈ ಶರೀರ. ಅಮ್ಮ, ಇಂತಹ ದೇಹವು ಸ್ಥಿರವಾದದ್ದೆಂದು ಯಾವ ಮೂಢನು ವಿಶ್ವಾಸವನ್ನಿಟ್ಟಾನು?

ಟಿಪ್ಪಣಿ :- ಚೀನಾಂಶುಕ =ರೇಶ್ಮೆಯ ಬಟ್ಟೆ (ಬಹುಶಃ ಚೀನ ದೇಶದಿಂದ ಸೂಕ್ಷ್ಮವಾದ ರೇಶ್ಮೆಬಟ್ಟೆ ಆಮದಾಗುತ್ತಿದ್ದರಿಂದ ಈ ಪೆಸರು ಬಂದಿರಬಹುದು)

ಕತಿ ನಾಮ ಸುತಾ ನ ಲಾಲಿತಾಃ
ಕತಿ ವಾ ನೇಹ ವಧೂರಭುಂಜಿ ಹಿ |
ಕ್ವನು ತೇ ಕ್ವಚ ತಾಃ ಕ್ವವಾ ವಯಂ
ಭವಸಂಗಃ ಖಲು ಪಾಂಥಸಂಗಮಃ || ೫೩

"ಜನ್ಮಾಂತರಗಳಲ್ಲಿ ಎಷ್ಟುಜನ ಮಕ್ಕಳನ್ನು ಲಾಲಿಸಿದ್ದಾಯಿತೋ! ಎಷ್ಟು ಜನ ಸ್ತ್ರೀಯರನ್ನು ಪುರುಷರು ಅನುಭವಿಸಿದ್ದಾಯಿತೋ! ಈಗ ಆ ಮಕ್ಕಳೆಲ್ಲಿದ್ದಾರೆ ? ಆ ಸ್ತ್ರೀಯರೆಲ್ಲಿದ್ದಾರೆ ? ನಾವೆಲ್ಲಿದ್ದೇವೆ ? ಸಂಸಾರದಲ್ಲಿ ಇವರು ಸೇರಿಕೊಳ್ಳುವುದೆಂಬುದು ಬೇರೆ ಬೇರೆ ಕಡೆ ಹೊರಟ ಪ್ರಯಾಣಿಕರು ಅಕಸ್ಮಾತ್ ಒಂದು ಕಡೆ ಸೇರಿದಂತೆಯೇ ಸರಿ

ಭ್ರಮತಾಂ ಭವವರ್ತ್ಮನಿ ಭ್ರಮಾತ್
ನ ಹಿ ಕಿಂಚಿತ್ಸುಖಮಂಬ ಲಕ್ಷಯೇ |
ತದವಾಪ್ಯ ಚತುರ್ಥಮಾಶ್ರ ಮಂ
ಪ್ರಯತಿಷ್ಯೇ ಭವಬಂಧ ಮುಕ್ತಯೇ || ೫೪

ಸಂಸಾರಮಾರ್ಗದಲ್ಲಿ ಅಲೆಯತಕ್ಕವರಿಗೆ ಈ ಅಲೆತದಿಂದ ಸುಖಲೇಶವಿರುವುದೂ ನನಗೆ ಕಾಣುವುದಿಲ್ಲ. ಆದ್ದರಿಂದ, ಅಮ್ಮ, ನಾನು ಚತುರ್ಥಾಶ್ರಮವನ್ನು ಸ್ವೀಕರಿಸಿ ಈ ಭವಪಾಶದಿಂದ ಬಿಡುಗಡೆ ಹೊಂದಲು ಪ್ರಯತ್ನಿಸವೆನು!" ಎಂದನು.

ಇತಿ ಕರ್ಣಕಠೋರಭಾಷಣ-
ಶ್ರವಣಾದ್ಬಾಷ್ಪಪಿನದ್ಧಕಂಠಯಾ |
ದ್ವಿಗುಣೀಕೃತ ಶೋಕಯಾ ತಯಾ
ಜಗದೇ ಗದ್ಗದ ವಾಕ್ಯಯಾ ಮುನಿಃ || ೫೫

ತ್ಯಜ ಬುದ್ಧಿಮಿಮಾಂ ಶೃಣುಷ್ವ ಮೇ
ಗೃಹಮೇಧೀ ಭವ ಪುತ್ರಮಾಪ್ನುಹಿ |

ಯಜ ಚ ಕ್ರತುಭಿಸ್ತತೋ ಯತಿ-
ರ್ಭವಿತಾಸ್ಯಂಗ ಸತಾಮಯಂ ಕ್ರಮಃ || ೫೬

ಕರ್ಣಕಠೋರವಾದ ಈ ಮಾತನ್ನು ಕೇಳಿದೊಡನೆ ಆರ್ಯಾಂಬೆಯ ದುಃಖವು ಇಮ್ಮಡಿಸಿತು. ಮಾತಾಡಲಾಗದೆ ಗಂಟಲು ಕಟ್ಟಿತು. ಅವಳು ಕಣ್ಣೀರು ಸುರಿಸುತ್ತ ಗದ್ಗದಧ್ವನಿಯಿಂದ " ಅಯ್ಯೊ ಮಗನೆ, ಈ ಬುದ್ಧಿ ನಿನಗೆ ಬೇಡ. ನನ್ನ ಮಾತನ್ನು ಕೇಳು. ಮದುವೆಯಾಗಿ ಗೃಹಸ್ಥನಾಗು. ಪುತ್ರಸಂತಾನವನ್ನು ಪಡೆದು ಯಜ್ಞಗಳನ್ನು ಮಾಡಿ ಕಾಲಾಂತರದಲ್ಲಿ ಸಂನ್ಯಾಸಿಯಾಗಬಹುದು. ಸಜ್ಜನರು ಆಚರಿಸುವ ಕ್ರಮವೇ ಇದು.

ಕಥಮೇಕತನೂಭವಾ ತ್ವಯಾ
ರಹಿತಾ ಜೀವಿತುಮುತ್ಸಹೇಽಬಲಾ |
ಅನಯೈವ ಶುಚೌರ್ಧ್ವದೈಹಿಕಂ
ಪ್ರಮೃತಾಯಾಂ ಮಯಿ ಕಃ ಕರಿಷ್ಯತಿ || ೫೭

"ನನಗಿರತಕ್ಕ ಪುತ್ರನು ನೀನೊಬ್ಬನೇ. ನಿನ್ನನ್ನು ಬಿಟ್ಟುಕೊಟ್ಟು ಅಬಲೆಯಾದ ನಾನು ಹೇಗೆ ಬದುಕಿರಲಿ? ನಿನ್ನ ವಿರಹ ದುಃಖದಿಂದಲೇ ಕೊರಗುತ್ತ ನಾನು ಸತ್ತುಹೋದ ಮೇಲೆ ನನ್ನ ಉತ್ತರಕ್ರಿಯೆಯನ್ನು ಯಾರು ಮಾಡುತ್ತಾರೆ ?

ತ್ವಮಶೇಷವಿದಪ್ಯಪಾಸ್ಯ ಮಾಂ
ಜರಠಾಂ ವತ್ಸ ಕಥಂ ಗಮಿಷ್ಯಸಿ |
ದ್ರವತೇ ಹೃದಯಂ ಕಥಂ ನ ತೇ
ನ ಕಥಂಕಾರಮುಪೈತಿ ವಾ ದಯಾಮ್ || ೫೮

ವತ್ಸ, ಇದೆಲ್ಲವನ್ನೂ ನೀನು ಬಲ್ಲವನಾದರೂ ಮುದುಕಿಯಾದ ನನ್ನನ್ನು ಬಿಟ್ಟು ಹೇಗೆ ತಾನೆ ಹೊರಟು ಹೋಗುವೆ ? ನನ್ನನ್ನು ನೋಡಿ ನಿನ್ನ ಹೃದಯವು ಕರಗುವುದಿಲ್ಲವೆ? ನಿನಗೆ ದಯೆಯೇ ಬರುವುದಿಲ್ಲವೇ?" ಎಂದು ಪರಿತಪಿಸಿದಳು.

ಏವಂ ವ್ಯಥಾಂ ತಾಂ ಬಹುಧಾಽಽಶ್ರಯಂತೀ-
ಮಪಾಸ್ತ ಮೋಹೈರ್ಬಹುಭಿರ್ವಚೋಭಿಃ |
ಅಂಬಾಮಶೋಕಾಂ ವ್ಯದಧಾದ್ವಿಧಿಜ್ಞಃ-
ಶುದ್ಧಾಷ್ಟಮೇಽಚಿಂತಯದೇತದಂತಃ || ೫೯

ಹೀಗೆ ವ್ಯಥೆಪಡುತ್ತ ಗೋಳಾಡುತ್ತಿದ್ದ ತಾಯಿಗೆ ಕಾರ್ಯಜ್ಞನಾದ ಶ್ರೀಶಂಕರನು ಮೋಹವನ್ನು ಹೋಗಲಾಡಿಸುವ ಬಹಳ ಮಾತುಗಳನ್ನು ಹೇಳಿ ಸಮಾಧಾನಪಡಿಸಿದನು. ಅಲ್ಲದೆ ತನ್ನ ಎಂಟನೆಯ ವಯಸ್ಸಿನಲ್ಲಿ ಈ ರೀತಿ ಆಲೋಚಿಸಿದನು.

ಮಮ ನ ಮಾನಸಮಿಚ್ಛತಿ ಸಂಸೃತಿಂ
ನ ಚ ಪುನರ್ಜನನೀ ವಿಜಿಹಾಸತಿ |
ನ ಚ ಗುರುರ್ಜನನೀ ತದುದೀಕ್ಷತೇ
ತದನುಶಾಸನಮೀಷದಪೇಕ್ಷಿತಮ್ || ೬೦

"ನನ್ನ ಮನಸ್ಸು ಸಂಸಾರವನ್ನು ಬಯಸುವುದಿಲ್ಲ. ನನ್ನ ತಾಯಿಯಾದರೋ ನನ್ನನ್ನು ಬಿಟ್ಟುಕೊಡಲು ಇಚ್ಛಿಸುವುದಿಲ್ಲ. ಅವಳು ಇದೆಲ್ಲವನ್ನು ವಿಮರ್ಶಿಸಿ ತಿಳಿಯಲಾರಳು. ಎಷ್ಟಾದರೂ ನನ್ನ ತಾಯಿ ಗುರುಸ್ಥಾನದಲ್ಲಿರತಕ್ಕವಳು. ಅವಳ ಸಂಮತಿಯ ಆಜ್ಞೆ ಸ್ವಲ್ಪ ಬೇಕಾಗಿದೆ!"

ಇತಿ ವಿಚಿಂತ್ಯ ಸ ಜಾತು ಮಿಮಂಕ್ಷಯಾ
ಬಹುಜಲಾಂ ಸರಿತಂ ಸಮುಪಾಯಯೌ |
ಜಲಮಗಾಹತ ತತ್ರ ಸಮಗ್ರಹೀತ್
ಜಲಚರಶ್ಚರಣೇ ಜಲಮೀಯುಷಃ || ೬೧

ಈ ರೀತಿಯಲ್ಲಿ ಆಲೋಚಿಸುತ್ತ ಆತನು ಒಂದು ಸಲ ನೀರಿನಿಂದ ತುಂಬಿದ್ದ ಪೂರ್ಣಾನದಿಗೆ ಸ್ನಾನಕ್ಕಾಗಿ ಬಂದನು. ನೀರಿನಲ್ಲಿಳಿದನು. ಒಂದು ಮೊಸಳೆ ಬಂದು ಈತನ ಕಾಲನ್ನು ಹಿಡಿದು ಕೊಂಡಿತು!

ಸ ಚ ರುರೋದ ಜಲೇ ಜಲಚಾರಿಣಾ
ಧೃತಪದೋ ಹ್ರಿಯತೇಽಂಬ ಕರೋಮಿ ಕಿಮ್ |
ಚಲಿತುಮೇಕಪದಂ ನ ಚ ಪಾರಯೇ
ಬಲವತಾ ವಿವೃತೋರುಮುಖೇನ ಹ || ೬೨

"ಅಯ್ಯೊ! ಅಮ್ಮಾ! ಒಂದು ಮೊಸಳೆ ನೀರಲ್ಲಿ ನನ್ನ ಕಾಲನ್ನು ಹಿಡಿದು ಕೊಂಡಿದೆ. ಬಾಯ್ದೆರದು ಬಂದು ಕಾಲನ್ನು ಹಿಡಿದು ಎಳೆಯುತ್ತಿದೆ. ಬಹಳ ಬಲಶಾಲಿಯಾದ ಮೊಸಳೆ. ಅಯ್ಯೊ! ಏನು ಮಾಡಲಿ? ಕಾಲನ್ನು ಎಳೆಯಲಾಗುವುದಿಲ್ಲ" ಎಂದು ಗಟ್ಟಿಯಾಗಿ ಅಳುತ್ತ ಕೂಗಿದನು.

ಗೃಹಗತಾ ಜನನೀ ತದುಪಾಶೃಣೋತ್
ಪರವಶಾ ದ್ರುತಮಾಪ ಸರಿತ್ತಟಮ್ |
ಮಮ ಮೃತೇಃ ಪ್ರಥಮಂ ಶರಣಂ ಧವ-
ಸ್ತದನು ಮೇ ಶರಣಂ ತನಯೋಽಭವತ್ || ೬೩

ಸ ಚ ಮರಿಷ್ಯತಿ ನಕ್ರವಶಂ ಗತಃ
ಶಿವ ನ ಮೇಽಜನಿ ಹಂತ ಪುರಾ ಮೃತಿಃ |
ಇತಿ ಶುಶೋಚ ಜನನ್ಯಪಿ ತೀರಗಾ
ಜಲಗತಾತ್ಮಜವಕ್ತ್ರಗತೇಕ್ಷಣಾ || ೬೪

ಮನೆಯಲ್ಲಿದ್ದ ತಾಯಿಯಾದ ಆರ್ಯಾಂಬೆಯು ಶ್ರೀಶಂಕರನ ರೋದನ ಧ್ವನಿಯನ್ನು ಕೇಳಿ ಸಂಭ್ರಾಂತಳಾಗಿ ದಿಕ್ಕುತೋರದೆ ನದಿಯ ಬಳಿಗೆ ಓಡಿಬಂದಳು. "ಅವರಿಗೆ ಸಾವು ಬರುವ ತನಕ ಪತಿಯು ನನಗೆ ದಿಕ್ಕಾಗಿದ್ದರು. ಆ ಮೇಲೆ ಮಗನು ನನಗೆ ದಿಕ್ಕಾದನು. ಅವನೀಗ ಮೊಸಳೆಯ ಬಾಯಿಗೆ ಸಿಕ್ಕಿ ಸಾವನ್ನಪ್ಪುವನು. ಶಿವ ಶಿವ ! ಅಯ್ಯೊ ! ನನಗೇಕೆ ಮೊದಲೇ ಸಾವು ಬರಲಿಲ್ಲ!" ಎಂದು ಪರಿತಪಿಸುತ್ತ ಪುತ್ರನನ್ನೇ ನೋಡುತ್ತ ಹೊಳೆಯ ದಡದಲ್ಲಿ ನಿಂತಳು.

ತ್ಯಜತಿ ನೂನಮಯಂ ಚರಣಂ ಚಲೋ
ಜಲಚರೋಽಂಬ ತವಾನುಮತೇನ ಮೇ |
ಸಕಲ ಸಂನ್ಯಸನೇ ಪರಿಕಲ್ಪಿತೇ
ಯದಿ ತವಾನುಮತಿಃ ಪರಿಕಲ್ಪಯೇ || ೬೫

"ಅಮ್ಮ, ನೀನೀಗ ಸಕಲವನ್ನೂ ಬಿಟ್ಟು ಸಂನ್ಯಾಸವನ್ನು ತೆಗೆದು ಕೊಳ್ಳಲು ಅನುಮತಿಯನ್ನು ನೀಡಿದರೆ, ಮೊಸಳೆಯು ನನ್ನ ಕಾಲನ್ನು ಖಂಡಿತವಾಗಿ ಬಿಡುವುದು. ನೀನು ಆಜ್ಞೆಯನ್ನಿತ್ತರೆ ಸಂನ್ಯಾಸ ದೀಕ್ಷೆಯನ್ನು ಸಂಕಲ್ಪಿಸಿಕೊಳ್ಳುತ್ತೇನೆ" ಎಂದು ಶ್ರೀಶಂಕರನು ನುಡಿದನು.

ಇತಿ ಶಿಶೌ ಚಕಿತಾ ವದತಿ ಸ್ಫುಟಂ
ವ್ಯಧಿತ ಸಾಽನುಮತಿಂ ದ್ರುತಮಂಬಿಕಾ |
ಸತಿ ಸುತೇ ಭವಿತಾ ಮಮ ದರ್ಶನಂ
ಮೃತವತಸ್ತದು ನೇತಿ ವಿನಿಶ್ಚಯಃ || ೬೬

ಹೀಗೆ ಬಾಲಕನು ಸ್ಪಷ್ಟವಾಗಿ ನುಡಿಯಲು, ಆರ್ಯಾಂಬೆಯು ಅಚ್ಚರಿಗೊಂಡು ಬೇರೆ ದಿಕ್ಕುಕಾಣದೆ ಒಡನೆಯೇ ಸಂನ್ಯಾಸಕ್ಕೆ ಅನುಮತಿಯನ್ನಿತ್ತಳು. "ಮಗನು ಬದುಕಿದ್ದರೆ ಅವನ ದರ್ಶನವಾದರೂ ದೊರೆಯುವುದು. ಅವನು ಗತಿಸಿಹೋದರೆ ಅದೂ ಇಲ್ಲದಾಗುವುದು" ಎಂದು ನಿಶ್ಚಯಿಸಿಕೊಂಡಳು.

ತದನು ಸಂನ್ಯಸನಂ ಮನಸಾ ವ್ಯಧಾ-
ದಥ ಮುಮೋಚ ಶಿಶುಂ ಖಲನಕ್ರಕಃ |
ಶಿಶುರುಪೇತ್ಯ ಸರಿತ್ ತಟಮತ್ರಸನ್
ಪ್ರಸುವಮೇತದುವಾಚ ಶುಚಾಽಽವೃತಾಮ್ || ೬೭

ಅನಂತರ ಶ್ರೀಶಂಕರನು ಮನಸ್ಸಿನಲ್ಲಿಯೇ "ನಾನು ಸಂನ್ಯಸ್ತನಾದೆನು" ಎಂದು ಸಂಕಲ್ಪಿಸಿದನು. ಕೂಡಲೇ ಆ ಕೆಟ್ಟಮೊಸಳೆಯು ಅವನನ್ನು ತ್ಯಜಿಸಿತು ! ಬಾಲಕನು ಸ್ವಲ್ಪವೂ ಹೆದರದೆ ಹೊಳೆಯ ದಡಕ್ಕೆ ಬಂದು ಶೋಕಸಂತಪ್ತಳಾಗಿದ್ದ ತಾಯಿಯನ್ನು ಕುರಿತು ಇಂತೆಂದನು:

ಮಾತರ್ವಿಧೇಯಮನುಶಾಧಿ ಯದತ್ರ ಕಾರ್ಯಮ್
ಸಂನ್ಯಾಸಿನಾ ತದು ಕರೋಮಿ ನ ಸಂದಿಹೇಽಹಮ್ |
ವಸ್ತ್ರಾಶನೇ ತವ ಯಥೇಷ್ಟಮಮೀ ಪ್ರದದ್ಯು -
ರ್ಗೃಹ್ಣಂತಿ ಯೇ ಧನಮಿದಂ ಮಮ ಪೈತೃಕಂ ಯತ್ || ೬೮

"ತಾಯಿ, ಸಂನ್ಯಾಸಿಯಾದ ನಾನು ನಿನಗಾಗಿ ಮಾಡಬೇಕಾದದ್ದೇನೆಂಬುದನ್ನು ಹೇಳು. ಯಾವ ಸಂಕೋಚವೂ ಇಲ್ಲದೆ ನೆರವೇರಿಸುವನು. ನಿನಗೆ ಅನ್ನ ಬಟ್ಟೆಗಳನ್ನು ನಮ್ಮದಾಯಾದಿಗಳು ಕೊಡಲೇಬೇಕಾಗುವುದು. ನಮ್ಮ ತಂದೆಯ ಆಸ್ತಿಯನ್ನು ಅವರು ತೆಗೆದು ಕೊಳ್ಳುತ್ತಾರಲ್ಲವೆ?

ದೇಹೇಽಂಬ ರೋಗವಶಗೇ ಚ ಸನಾಭಯೋಽಮೀ
ದ್ರಕ್ಷ್ಯಂತಿ ಶಕ್ತಿಮನುಸೃತ್ಯ ಮೃತಿಪ್ರಸಂಗೇ |
ಅರ್ಥಗ್ರಹಾಜ್ಜನಭಯಾಚ್ಚ ಯಥಾ ವಿಧಾನಮ್
ಕುರ್ಯುಶ್ಚ ಸಂಸ್ಕೃತಿಮಮೀ ನ ವಿಭೇಯಮೀಷತ್ || ೬೯

ಅಮ್ಮ, ನಿನ್ನ ದೇಹಕ್ಕೆ ರೋಗುಜಿನಗಳಾದಾಗ ಈ ಬಂಧುಗಳು ಯಥಾಯೋಗ್ಯವಾಗಿ ನಿನ್ನನ್ನು ನೋಡಿಕೊಳ್ಳುವರು. ಇನ್ನು ಮರಣಪ್ರಸಂಗವು ಬಂದಾಗ ಶಾಸ್ತ್ರೋಕ್ತವಾಗಿ ನಿನಗೆ ಸಂಸ್ಕಾರವನ್ನು ಮಾಡಿಯೇ ಮಾಡುತ್ತಾರೆ. ಏಕೆಂದರೆ, ನಿನ್ನ ಧನವನ್ನು ಅವರು ತೆಗೆದು ಕೊಳ್ಳುತ್ತಾರೆ. ಅಲ್ಲದೆ ಜನರು ಏನು ಹೇಳುವರೋ ಎಂದು ಅವರು ಹೆದರಬೇಕಾಗುತ್ತದೆ. ಆದ್ದರಿಂದ ನೀನು ಸ್ವಲ್ಪವೂ ಅಂಜಬೇಕಾದ್ದಿಲ್ಲ"ಎಂದು ಹೇಳಿದನು.

ಯಜ್ಜೀವಿತಂ ಜಲಚರಸ್ಯ ಮುಖಾತ್ತದಿಷ್ಟಂ
ಸಂನ್ಯಾಸ ಸಂಗರ ವಶಾನ್ಮಮ ದೇಹಪಾತೇ |

ಸಂಸ್ಕಾರಮೇತ್ಯ ವಿಧಿವತ್ ಕುರು ಶಂಕರ ತ್ವಮ್
ನೋ ಚೇತ್ಪ್ರಸೂಯ ಮಮ ಕಿಂ ಫಲಮೀರಯ ತ್ವಮ್ || ೨೦

ಆರ್ಯಾಂಬೆಯು "ಮಗನೆ, ನೀನು ಸಂನ್ಯಾಸವನ್ನು ಅಂಗೀಕರಿಸಿದ ನಿಮಿತ್ತವಾಗಿ ಮೊಸಳೆಯ ಬಾಯಿಂದ ಬದುಕಿಬಂದೆಯಲ್ಲ. ಅದು ನನಗೆ ಬೇಕಾಗಿತ್ತು. ನಾನು ದೇಹವನ್ನು ಬಿಟ್ಟಾಗ, ಶಂಕರ, ನೀನೇ ಬಂದು ವಿಧಿವತ್ತಾಗಿ ನನಗೆ ಸಂಸ್ಕಾರವನ್ನು ಮಾಡು. ಇಲ್ಲದಿದ್ದರೆ ನಿನ್ನನ್ನು ಹಡೆದದ್ದಕ್ಕೆ ನನಗೇನು ಫಲವಾಯಿತು? ನೀನೇ ಹೇಳು" ಎಂದಳು.

ಟಿಪ್ಪಣಿ :- ಸಂಗರ = ಅಂಗೀಕಾರ

ಅಹ್ನ್ಯಂಬ ರಾತ್ರಿಸಮಯೇ ಸಮಯಾಂತರೇ ವಾ
ಸಂಚಿಂತಯ ಸ್ವಶಗಾಽವಶಗಾಽ ಥವಾ ಮಾಮ್ |
ಏಷ್ಯಾಮಿ ತತ್ರ ಸಮಯಂ ಸಕಲಂ ವಿಹಾಯ
ವಿಶ್ವಾಸಮಾಪ್ನುಹಿ ಮೃತಾವಪಿ ಸಂಸ್ಕರಿಷ್ಯೇ || ೨೧

ಶ್ರೀಶಂಕರನು "ಅಮ್ಮಾ, ಹಾಗೆಯೇ ಆಗಲಿ. ಹಗಲಿನಲ್ಲೋ ರಾತ್ರಿಯಲ್ಲಿಯೋ ಅಥವಾ ಇನ್ನೊಂದು ಸಮಯದಲ್ಲಿಯೋ ನೀನು ನನ್ನನ್ನು ಸ್ಮರಿಸಿಕೊಂಡರೆ ಸಾಕು, ನಾನು ಬರುವೆನು. ನೀನು ಗಟ್ಟಿಯಾಗಿ ಸ್ವತಂತ್ರಳಾಗಿದ್ದರೂ ಅಥವಾ ಪರಾಧೀನ ಸ್ಥಿತಿಯಲ್ಲಿದ್ದರೂ ನನ್ನನ್ನು ನೆನೆಸಿಕೊಂಡರೆ, ಸಕಲಕಾರ್ಯಗಳನ್ನೂ ಅಲ್ಲಿಯೇ ಬಿಟ್ಟು ನಿನ್ನ ಬಳಿಗೆ ಬರುತ್ತೇನೆ. ನೀನು ಮೃತಳಾದರೆ ಉತ್ತರ ಕ್ರಿಯೆಯನ್ನು ನಾನು ಮಾಡುವೆನು. ಪೂರ್ತಿಯಾಗಿ ನಂಬು.

ಸಂನ್ಯಸ್ತವಾನ್‌ಶಿಶುರಯಂ ವಿಧವಾಮನಾಥಾಂ
ಕ್ಷಿಪ್ತ್ವೇತಿ ಮಾಂ ಪ್ರತಿ ಕದಾಽಪಿ ನ ಚಿಂತನೀಯಮ್ |
ಯಾವನ್ಮಯಾ ಸ್ಥಿತವತಾ ಫಲಮಾಪನೀಯಂ
ಮಾತಸ್ತತಃ ಶತಗುಣಂ ಫಲಮಾಪಯಿಷ್ಯೇ || ೨೨

'ವಿದವೆಯಾದ ನಿನ್ನನ್ನು ಅನಾಥಳನ್ನಾಗಿ ಕೈ ಬಿಟ್ಟು ಈ ಹುಡುಗನು ಸಂನ್ಯಾಸವನ್ನು ತೆಗೆದು ಕೊಂಡಿದ್ದಾನೆ' ಎಂದು ನನ್ನ ವಿಷಯವಾಗಿ ನೀನು ಎಂದಿಗೂ ಚಿಂತಿಸಬಾರದು. ನಾನು ಮನೆಯಲ್ಲಿದ್ದರೆ ಯಾವ ಪ್ರಯೋಜನವಾಗುತ್ತಿತ್ತೋ, ಅಮ್ಮಾ! ಅದಕ್ಕೆ ನೂರರಷ್ಟು ಪ್ರಯೋಜನವನ್ನು ನಿನಗೆ ದೊರಕಿಸಿ ಕೊಡುವೆನು"ಎಂದು ಹೇಳಿದನು.

ಇತ್ಥಂ ಸ್ವಮಾತರಮನುಗ್ರಹಣೇಚ್ಛುರುಕ್ತ್ವಾ
ಪ್ರೋಚೇ ಸನಾಭಿಜನಮೇಷ ವಿಚಕ್ಷಣಾಗ್ರ್ಯಃ |

ಸಂನ್ಯಾಸ ಕಲ್ಪಿತಮನಾ ವ್ರಜಿತೋಽಸ್ಮಿ ದೂರಂ
ತಾಂ ನಿಕ್ಷಿಪಾಮಿ ಜನನೀಮಧವಾಂ ಭವತ್ಸು ॥ ೭೩

ಶ್ರೀಶಂಕರನು ತಾಯಿಯನ್ನು ಅನುಗ್ರಹಿಸುವುದಕ್ಕಾಗಿ ಈ ರೀತಿಯಲ್ಲಿ ತಿಳಿಸಿದನು. ಅನಂತರ ವಾಗ್ಮಿಗಳಲ್ಲಿ ಶ್ರೇಷ್ಠನಾದ ಆತನು ಬಂಧುಗಳನ್ನು ಕಂಡು "ನಾನು ಈಗ ಸಂನ್ಯಾಸವನ್ನು ತೆಗೆದುಕೊಳ್ಳಬೇಕೆಂದು ಸಂಕಲ್ಪಿಸಿದ್ದೇನೆ. ಆದ್ದರಿಂದ ದೂರ ಹೊರಟುಹೋಗುತ್ತಿರುವೆನು. ನನ್ನ ತಾಯಿಯನ್ನು ಸಂರಕ್ಷಣೆಗಾಗಿ ನಿಮಗೆ ಒಪ್ಪಿಸುತ್ತಿದ್ದೇನೆ. ಪತಿಯನ್ನು ಕಳೆದು ಕೊಂಡಿರುವ ಈಕೆಯನ್ನು ಇನ್ನುಮುಂದೆ ನೀವು ನೋಡಿಕೊಳ್ಳಬೇಕು" ಎಂದನು.

ಏವಂ ಸನಾಭಿಜನಮುತ್ತಮಮುತ್ತಮಾಗ್ರ್ಯಃ
ಶ್ರೀಮಾತೃಕಾರ್ಯಮಭಿಭಾಷ್ಯ ಕರದ್ವಯೇನ ।
ಸಂಪ್ರಾರ್ಥಯನ್ ಸ್ವಜನನೀಂ ವಿನಯೇನ ತೇಷು
ನ್ಯಕ್ಷೇಪಯನ್ನಯನಜಾಂಬು ನಿಷಿಂಚಮಾನಾಮ್ ॥ ೭೪

ಹೀಗೆ ಆ ಮಹಾತ್ಮನು ಬಂಧುಗಳಿಗೆ ತನ್ನ ಮಾತೃಕಾರ್ಯವನ್ನು ನಿವೇದಿಸಿ ಕೈಮುಗಿದನು. ತನ್ನ ತಾಯಿಗೆ ಅವರ ಸಂರಕ್ಷಣೆಯಲ್ಲಿರಬೇಕೆಂದು ವಿನಯದಿಂದ ನಿವೇದಿಸಿಕೊಂಡನು. ಆರ್ಯಾಂಬೆಯಾದರೋ ಕಣ್ಣುಗಳಿಂದ ಬಳಬಳನೆ ನೀರನ್ನು ಸುರಿಸುತ್ತಿದ್ದಳು.

ಆತ್ಮೀಯ ಮಂದಿರಸಮೀಪಗತಾಮಥಾಸೌ
ಚಕ್ರೇ ವಿದೂರಗನದೀಂ ಜನನೀಹಿತಾಯ ।
ತತ್ತೀರಸಂಶ್ರಿತಯದೂದ್ವಹಧಾಮ ಕಿಂಚಿತ್
ಸಾ ನಿಮ್ನಗಾಽಽರಭತ ತಾಡಯಿತುಂ ತರಂಗೈಃ ॥ ೭೫

ಹಿಂದೆ ತನ್ನ ತಾಯಿಯ ಹಿತಕ್ಕಾಗಿ ಪೂರ್ಣಾನದಿಯನ್ನು ತನ್ನ ಮನೆಯಬಳಿಗೆ ಕರೆತಂದಿದ್ದನಷ್ಟೆ. ಮನೆಯ ಸಮೀಪದಲ್ಲಿದ್ದ ಶ್ರೀಕೃಷ್ಣನ ದೇವಸ್ಥಾನಕ್ಕೆ ನದಿಯ ಅಲೆಗಳು ಬಂದು ಬಡಿಯುತ್ತಿದ್ದವು.

ವರ್ಷಾಸು ವರ್ಷತಿ ಹರೌ ಜಲಮೇತ್ಯ ಕಿಂಚಿ-
ದಂತಃಪುರಂ ಭಗವತೋಽಪನುನೋದ ಮೃತ್ಸ್ನಾಮ್ ।
ಆರಬ್ಧ ಮೂರ್ತಿರನಘಾ ಚಲಿತುಂ ಕ್ರಮೇಣ
ದೇವೋಽಬಿಭೇದಿವ ನ ಮುಂಚತಿ ಭೀರುಹಿಂಸಾಮ್ ॥ ೭೬

ಮಳೆಗಾಲದಲ್ಲಿ ದೇವೇಂದ್ರನು ಮಳೆ ಸುರಿಸುತ್ತಿದ್ದಾಗ ನದಿಯು ದೇವಸ್ಥಾನದೊಳಗೆ ನುಗ್ಗಿ ಭಗವಂತನ ಗರ್ಭಗುಡಿಯ ಮಣ್ಣನ್ನು ಸವೆಸುತ್ತಿದ್ದಿತು. ಆಗ ನೀರಿಗೆ ಹೆದರಿ ಶ್ರೀಕೃಷ್ಣನ ಮೂರ್ತಿಯೇ ಚಲಿಸುತ್ತಿದೆಯೋ ಎಂಬಂತೆ ಕಾಣಿಸುತ್ತಿತ್ತು. ಹೆದರಿದವರನ್ನು ಮತ್ತಷ್ಟು ಹೆದರಿಸಲು ಯಾರು ಹಿಂಜರಿಯುತ್ತಾರೆ ?(ನದಿಯ ನೀರು ಗರ್ಭಗುಡಿಯನ್ನು ಕೊರೆಯುತ್ತಲೇ ಇತ್ತು.)

ಟಿಪ್ಪಣಿ:- ಆರಬ್ಧ = ರಭ-ರಾಭಸ್ಯೇ. ಲುಜ್. ಪ್ರ. ಪು. ಏಕವಚನ.

ಪ್ರಸ್ಥಾತುಕಾಮಮನಘಂ ಭಗವಾನನಂಗ-
ವಾಚಾಽವದತ್ ಕಥಮಪಿ ಪ್ರಣಿಪತ್ಯ ಮಾತುಃ |
ಪಾದಾರವಿಂದಯುಗಲಂ ಪರಿಗೃಹ್ಯ ಚಾಜ್ಞಾಂ
ಶ್ರೀಶಂಕರಂ ಜನಹಿತೈಕರಸಂ ಸ ಕೃಷ್ಣಃ || ೭೭

ಆಗ ತಾಯಿಯ ಪಾದಕಮಲಯುಗಳಕ್ಕೆ ನಮಸ್ಕರಿಸಿ ಅವಳ ಆಜ್ಞೆಯನ್ನು ಪಡೆದು ಲೋಕ ಹಿತಕ್ಕೋಸ್ಕರ ಪ್ರಯಾಣಮಾಡಲು ಸಿದ್ಧನಾದ ಶ್ರೀಶಂಕರನನ್ನು ಕುರಿತು ಭಗವಾನ್ ಶ್ರೀಕೃಷ್ಣನು ಅಶರೀರ ವಾಣಿಯಿಂದ ಹೀಗೆಂದನು:

ಆನೇಷ್ಟ ದೂರಗನದೀಂ ಕೃಪಯಾ ಭವಾನ್ ಯಾಂ
ಸಾ ಮಾಽತಿಮಾತ್ರಮನಿಶಂ ಬಹುಲೋರ್ಮಿಹಸ್ತೈಃ |
ಕ್ಲಿಶ್ನಾತಿ ತಾಡನಪರಾ ವದ ಕೋಽಭ್ಯುಪಾಯೋ
ವಸ್ತುಂ ಕ್ಷಮೇ ನ ನಿತರಾಂ ದ್ವಿಜಪುತ್ರ ಯಾಸಿ || ೭೮

"ಶಂಕರ, ದೂರದಲ್ಲಿ ಹರಿಯುತ್ತಿದ್ದ ನದಿಯನ್ನು ತಾಯಿಯ ಮೇಲೆ ಕೃಪೆದೋರಿ ಬಹಳ ಹತ್ತಿರಕ್ಕೆ ತಂದು ಬಿಟ್ಟೆ. ಈ ನದಿಯಾದರೋ ಅಲೆಗಳೆಂಬ ಕೈಗಳಿಂದ ನನ್ನನ್ನು ಹೊಡೆಯಲು ಉದ್ಯುಕ್ತಳಾಗಿ ಕ್ಲೇಶಪಡಿಸುತ್ತಿದ್ದಾಳೆ. ಇದಕ್ಕೆ ಪರಿಹಾರವೇನು ? ಹೇಳು. ಎಲೈ ದ್ವಿಜಪುತ್ರನೇ, ಇಲ್ಲಿರಲು ನನಗೆ ಸರ್ವಥಾ ಸಾಧ್ಯವಾಗದು. ನೀನಾದರೋ ಹೊರಟು ಬಿಟ್ಟಿದ್ದೀಯೆ" ಎಂದನು.

ಆಕರ್ಣ್ಯ ವಾಚಮಿತಿ ತಾಮತನುಂ ಗುರುರ್ನಃ
ಪ್ರೋದ್ಧೃತ್ಯ ಕೃಷ್ಣಮಚಲಂ ಶನಕೈರ್ಭುಜಾಭ್ಯಾಮ್ |
ಪ್ರಾತಿಷ್ಠಿಪತ್ಸನ್ನಿಕಟ ಏವ ನ ಯತ್ರ ಬಾಧಾ
ನದ್ಯೇತ್ಯುದೀರ್ಯ ಸುಖಮಾಸ್ಸ್ವ ಚಿರಾಯ ಚೇತಿ || ೭೯

ಆಗ ನಮ್ಮ ಗುರುವರ್ಯನಾದ ಶ್ರೀಶಂಕರನು ಈ ಅಶರೀರವಾಣಿಯನ್ನು ಕೇಳಿ ಸ್ಥಾವರವಾದ ಶ್ರೀಕೃಷ್ಣ ವಿಗ್ರಹವನ್ನು ತನ್ನ ಬಾಹುಗಳಿಂದ ಮೆಲ್ಲಗೆ ಎತ್ತಿ ದೇವಸ್ಥಾನಕ್ಕೆ

ಸಮೀಪದಲ್ಲಿಯೇ ಇನ್ನೊಂದು ಕಡೆ ಅದನ್ನು ಸ್ಥಾಪಿಸಿದನು. "ಇನ್ನು ಮೇಲೆ ನದಿಯಿಂದ ಬಾಧೆ ಇಲ್ಲ. ಶಾಶ್ವತವಾಗಿ ಇಲ್ಲಿಯೇ ನೆಲೆಸಿರು" ಎಂದು ನುಡಿದನು.

ತಸ್ಮಾತ್ ಸ್ವಮಾತುರಪಿ ಭಕ್ತಿವಶಾದನುಜ್ಞಾಮ್
ಆದಾಯ ಸಂಸೃತಿಮಹಾಬ್ಧಿವಿರಕ್ತಿಮಾನ್ ಸಃ |
ಗಂತುಂ ಮನೋ ವ್ಯಧಿತ ಸಂನ್ಯಸನಾಯ ದೂರಂ
ಕಿಂ ನೌಸ್ಥಿತಃ ಪತಿತುಮಿಚ್ಛತಿ ವಾರಿರಾಶೌ || ೮೦

ಆಮೇಲೆ ಭಕ್ತಿಯಿಂದ ನಿವೇದಿಸಿ ಶ್ರೀಕೃಷ್ಣನಿಂದಲೂ ತನ್ನ ತಾಯಿಯಿಂದಲೂ ಅನುಮತಿಯನ್ನು ಪಡೆದು, ಶ್ರೀಶಂಕರನು ಅಲ್ಲಿಂದ ಹೊರಡಲು ಮನಸ್ಸುಮಾಡಿದನು. ಸಂಸಾರವೆಂಬ ಮಹಾಸಾಗರದಲ್ಲಿ ವೈರಾಗ್ಯವನ್ನು ತಳೆದ ಆತನು, ಸಂನ್ಯಾಸ ಸ್ವೀಕಾರಕ್ಕಾಗಿ ತನ್ನ ಊರಿಂದ ದೂರ ಹೋಗಲು ನಿಶ್ಚಯಿಸಿದನು. ಹಡಗಿನಲ್ಲಿರತಕ್ಕವನು ಸಮುದ್ರದಲ್ಲಿ ಬೀಳಲು ಎಂದಿಗಾದರೂ ಬಯಸುತ್ತಾನೆಯೆ?

ಇತ್ಥಂ ಸುಧೀಃ ಸ ನಿರವಗ್ರಹಮಾತೃಲಕ್ಷ್ಮೀ-
ಶಾನುಗ್ರಹೋ ಘಟಜಬೋಧಿತಭಾವಿವೇದೀ |
ಏಕಾಂತತೋ ವಿಗತಭೋಗ್ಯಪದಾರ್ಥತೃಷ್ಣಃ
ಕೃಷ್ಣೇ ಪ್ರತೀಚಿ ನಿರತೋ ನಿರಗಾನ್ನಿಶಾಂತಾತ್ || ೮೧

ಈ ರೀತಿಯಲ್ಲಿ ಆ ಬುದ್ಧಿಶಾಲಿಯು ತನ್ನ ತಾಯಿಯ ಮತ್ತು ಶ್ರೀಕೃಷ್ಣನ ಅನುಗ್ರಹವನ್ನು ಪಡೆದುಕೊಂಡನು. ಅಗಸ್ತ್ಯಮುನಿಯು ತಿಳಿಸಿದ ಭವಿಷ್ಯತ್ತಿನ ವಿಚಾರ ಅವನ ಸ್ಮರಣೆಯಲ್ಲಿತ್ತು. ಭೋಗ್ಯವಸ್ತುಗಳಲ್ಲಿ ಆಸೆಯನ್ನು ಸಂಪೂರ್ಣವಾಗಿ ಪರಿತ್ಯಜಿಸಿ, ಪ್ರತ್ಯಗಾತ್ಮನಾದ ಶ್ರೀಕೃಷ್ಣನನ್ನೇ ಧ್ಯಾನಿಸುತ್ತಾ ಮನೆಯಿಂದ ನಿರ್ಗಮಿಸಿದನು.

ಯಸ್ಯ ತ್ರಿನೇತ್ರಾಪರವಿಗ್ರಹಸ್ಯ
ಕಾಮೇನ ನಾಸ್ಥೀಯತ ದೃಕ್ಪಥೇಽಪಿ |
ತನ್ಮೂಲಕಃ ಸಂಸೃತಿಪಾಶಬಂಧಃ
ಕಥಂ ಪ್ರಸಜ್ಯೇತ ಮಹಾನುಭಾವೇ || ೮೨

ತ್ರಿಯಂಬಕನಾದ ಶಿವನೇ ಶ್ರೀಶಂಕರನಲ್ಲವೇ? ಆತನ ಕಣ್ಣೆದುರಿಗೆ ಸಹ ಕಾಮನು ನಿಲ್ಲಲಾರದೇ ಹೋದನು. (ಸುಟ್ಟು ಬೂದಿಯಾದನು). ಸಂಸಾರ ಪಾಶದ ಬಂಧನವಾದರೋ ಕಾಮನಿಂದ ಆಗತಕ್ಕದ್ದು. ಹೀಗಿರುವಾಗ ಆ ಮಹಾನುಭಾವನಲ್ಲಿ (ಕಾಮಪ್ರೇರಿತವಾದ) ಸಂಸಾರ ಬಂಧವು ಹೇಗೆತಾನೇ ಸೇರಿಕೊಂಡೀತು?

ಸ್ಮರೇಣ ಕಿಲ ಮೋಹಿತೌ ವಿಧಿವಿಧೂ ಚ ಜಾತೂತ್ಪಥೌ
ತಥಾಽಹಮಪಿ ಮೋಹಿನೀಕಚಕುಚಾದಿವೀಕ್ಷಾಪರಃ |
ಅಗಾಮಹಹ ಮೋಹಿನೀಮಿತಿ ವಿಮೃಶ್ಯ ಸೋಽಜಾಗರೀತ್
ಯತೀಶವಪುಷಾ ಶಿವಃ ಸ್ಮರಕೃತಾರ್ತಿವಾರ್ತೋಽಜ್ಝಿತಃ || ೮೩

'ಒಂದು ಸಲ ಬ್ರಹ್ಮನೂ ಚಂದ್ರನೂ ಮನ್ಮಥನಿಂದಲೇ ಮೋಹಗೊಂಡು ತಪ್ಪುದಾರಿಗೆ ಹೋಗಿದ್ದರು. ಹಾಗೆ ನಾನೂ ಸಹ ಮೋಹಿನಿಯ ಕಚಕುಚಾದಿಗಳನ್ನು ನೋಡುವುದರಲ್ಲಿ ತೊಡಗಿದ್ದೆನು. ಆಮೇಲೆ, ಅಯ್ಯೊ! ಮೋಹಿನಿಯನ್ನು ಕೂಡಿದೆನು.' ಹೀಗೆಂದು ವಿಚಾರ ಮಾಡಿ ಶಿವನು ಮನ್ಮಥನ ಪೀಡೆಯ ಸುದ್ದಿಯೂ ಇಲ್ಲದಂತೆ ಯತೀಶ್ವರನ ವೇಷದಲ್ಲಿ ಈಗ ಎಚ್ಚೆತ್ತಿರುವನೋ ಎಂಬಂತೆ ಕಾಣಿಸಿತು.!

ಟಿಪ್ಪಣಿ:- ಬ್ರಹ್ಮನು ತನ್ನ ಮಗಳಾದ ಸರಸ್ವತಿಯನ್ನು ಕಾಮಿಸಿ ಮದುವೆಯಾದನೆಂದೂ, ಚಂದ್ರನು ಬೃಹಸ್ಪತಿಯ ಪತ್ನಿಯಾದ ತಾರೆಯಲ್ಲಿ ಬುಧನೆಂಬ ಮಗನನ್ನು ಪಡೆದನೆಂದೂ ಕಥೆ ಇದೆ. ಸಮುದ್ರ ಮಥನಕಾಲದಲ್ಲಿ ಶಿವನು ಮೋಹಿನಿಯನ್ನು ಕಾಮಿಸಿದನೆಂದೂ ಆಗ ಮೋಹಿನಿಯಲ್ಲಿ ಶಾಸ್ತನು (ಅಯ್ಯಪ್ಪ) ಹುಟ್ಟಿದನೆಂದೂ ಕಥೆ ಇದೆ.

ನಿಷ್ಪತ್ರಾಕುರುತಾಸುರಾನಪಿ ಸುರಾನ್ ಮಾರಃ ಸಪತ್ರಾಽಕರೋದ್
ಅಪ್ಯನ್ಯಾನಿಹ ನಿಷ್ಕುಲಾಽಕೃತತರಾಂ ಗಂಧರ್ವವಿದ್ಯಾಧರಾನ್ |
ಯೋ ಧಾನುಷ್ಕವರೋ ನರಾನನಲಸಾತ್ಪತ್ಯೋದಲಾಸೀದಲಂ
ಯಸ್ತಸ್ಮಿನ್ನಶುಶೂರತೈಷ ಮುನಿಭಿರ್ವರ್ಣ್ಯಃ ಕಥಂ ಶಂಕರಃ || ೮೪

ಮನ್ಮಥನೇನು ಸಾಮಾನ್ಯನೇ? ರಾಕ್ಷಸರ ದೇಹದಲ್ಲಿ ಅವನು ತನ್ನ ಬಾಣವನ್ನು ತೂರಿಸಿದವನು. ದೇವತೆಗಳ ಮೈಯಲ್ಲಿ ಬಾಣವನ್ನು ನೆಟ್ಟವನು. ಗಂಧರ್ವ ವಿದ್ಯಾಧರ ಮೊದಲಾದವರನ್ನೂ ಸಹ ಬಿಡದೆ ಅವರ ಮರ್ಮಗಳನ್ನು ಹೀರಿ ಕಿತ್ತೆಳೆದವನು. ಆ ಮಹಾಧನುರ್ಧಾರಿಯು ಮನುಷ್ಯರನ್ನು ಬೆಂಕಿಗೆ ಆಹುತಿಯನ್ನಾಗಿತ್ತು ಮೆರೆದವನು. ಅಂತಹ ಧನುರ್ಧಾರಿಯಾದ ಮನ್ಮಥನನ್ನೂ ಕೂಡ ಶ್ರೀಶಂಕರನು ನಿಗ್ರಹಿಸಿ ಗೆದ್ದನು. ಮುನಿಗಳಿಂದ ಸ್ತೋತ್ರಾರ್ಹನಾದ ಈತನನ್ನು ಏನೆಂದು ವರ್ಣಿಸುವುದು?

ಟಿಪ್ಪಣಿ :-೧. ನಿಷ್ಪತ್ರಾಕುರುತ, ಸಪತ್ರಾಽಕರೋತ್ = ಸಪತ್ರನಿಷ್ಪತ್ರಾದತಿವ್ಯಥನೇ ಎಂಬ ಸೂತ್ರದಿಂದ ಡಾಚ್ ಪ್ರತ್ಯಯ.
೨. ನಿಷ್ಕುಲಾಽಕೃತತರಾಮ್ - ನಿಷ್ಕುಲಾ ನ್ನಿಷ್ಕೋಷಣೇ - ಎಂಬ ಸೂತ್ರದಿಂದ ಡಾಚ್ ಪ್ರತ್ಯಯ.
ಅಶುಶೂರತ = ಶೂರ ವಿಕ್ರಾಂತೌ - ಎಂಬ ಧಾತುವಿನ ಲುಙ್‌ರೂಪ.

ಶಾಂತಿಶ್ಚಾವಶಯನ್ಮನೋ ಗತಿಮುಖಾ ದಾಂತಿರ್ನ್ಯರುದ್ಧ ಕ್ರಿಯಾಃ
ಆಧಾತ್ತಾ ವಿಷಯಾಂತರಾದುಪರತಿಃ ಕ್ಷಾಂತಿರ್ಮೃದುತ್ವಂ ವ್ಯಧಾತ್ |

ಧ್ಯಾನೈಕೋತ್ಸುಕತಾಂ ಸಮಾಧಿವಿತತಿಶ್ಚಕ್ರೇ ತಥಾಽಸ ಪ್ರಿಯಾ
ಶ್ರದ್ಧಾ ಹಂತ ವಸುಪ್ರಥಾಽಸ್ಯ ತು ಕುತೋವೈರಾಗ್ಯತೋ ವೇದ್ಮಿ ನೋ ||

ಶ್ರೀಶಂಕರನ ಮನಸ್ಸನ್ನು ಶಾಂತಿಯು ವಶಪಡಿಸಿಕೊಂಡಿತು. ದಾಂತಿಯು (ದಮವು) ಈತನ ಗಮನವೇ ಮೊದಲಾದ ಕ್ರಿಯೆಗಳನ್ನು ಅಡ್ಡಿ ಪಡಿಸಿತು. ಉಪರತಿಯು ಆ ಕ್ರಿಯೆಗಳನ್ನು ವಿಷಯಾಂತರದಿಂದ ತನ್ನಕಡೆಗೆ ಎಳೆದು ಕೊಂಡಿತು. ಕ್ಷಾಂತಿಯು (ತಾಳ್ಮೆಯು) ಶ್ರೀಶಂಕರನಿಗೆ ಮೃದುತ್ವವನ್ನುಂಟು ಮಾಡಿತು. ಸಮಾಧಿ ವಿತತಿಯು (ಧೀರ್ಘವಾದಸಮಾಧಿಯು) ಧ್ಯಾನದಲ್ಲಿ ಉತ್ಸುಕನನ್ನಾಗಿ ಮಾಡಿತು. ಶ್ರದ್ಧೆಯು ಈತನಿಗೆ ಪ್ರೀತಿಪಾತ್ರಳಾದಳು. ಹೀಗಿರುವಾಗ, ಅಬ್ಬಾ! ಈತನು ಮಹಾವೈರಾಗ್ಯಶಾಲಿಯೆಂಬ ಕೀರ್ತಿಯು ಭೂಲೋಕದಲ್ಲಿ ಹರಡಿ ಬಿಟ್ಟಿತಲ್ಲಾ! ಇದೇಕೆಂಬುದು ನನಗೆ ತಿಳಿಯದು!

ಟಿಪ್ಪಣಿ :-ಈ ಶ್ಲೋಕದಲ್ಲಿರುವ ಶಾಂತಿ, ದಾಂತಿ, ಉಪರತಿ - ಮುಂತಾದ ಶಬ್ದಗಳು ಸ್ತ್ರೀಲಿಂಗದಲ್ಲಿವೆ. ಆದ್ದರಿಂದ ಶಾಂತಿ ಮೊದಲಾದ ಸ್ತ್ರೀಯರೊಡನೆ ಸಂಪರ್ಕವಿಟ್ಟುಕೊಂಡಿದ್ದ ಶ್ರೀಶಂಕರನು ವೈರಾಗ್ಯ ಶಾಲಿಯೆಂದು ಹೇಗೆ ಹೇಳುವುದು ?- ಎಂದು ಅಭಿಪ್ರಾಯ. ಇದೊಂದು ಕವಿಚಮತ್ಕಾರ. ಶಾಂತಿ ದಾಂತಿ ಮೊದಲಾದ ವಿರಕ್ತನ ಗುಣಗಳು ಶ್ರೀಶಂಕರನಲ್ಲಿ ಎದ್ದು ಕಾಣಿಸುತ್ತಿದ್ದವು - ಎಂದು ತಾತ್ಪರ್ಯ.

ವಿಜನತಾವನಿತಾಪರಿತೋಷಿತೋ
ವಿಧಿವಿತೀರ್ಣಕೃತಾತ್ಮತನುಸ್ಥಿತಿಃ |
ಪರಿಹರನ್ ಮಮತಾಂ ಗೃಹಗೋಚರಾಂ
ಹೃದಯಗೇನ ಶಿವೇನ ಸಮಂ ಯಯೌ || ೮೬

ಶ್ರೀಶಂಕರನಿಗೆ ವಿಜನತೆ ಎಂಬ ವನಿತೆಯು ಸಂತೋಷವನ್ನಿತ್ತಳು. ದೈವ ವಶದಿಂದ ಒದಗಿದ ಆಹಾರದಿಂದ ದೇಹಯಾತ್ರೆ ನಡೆಯಿತು. ಗೃಹದ ವಿಷಯವಾಗಿ ಎಲ್ಲ ಮಮತೆಯನ್ನೂ ದೂರಮಾಡಿದನು. ಹೃದಯಸ್ಥಿತನಾದ ಪರಶಿವನೊಡನೆ ಆತನು ಪ್ರಯಾಣಮಾಡಿದನು.

ಟಿಪ್ಪಣಿ :-ವಿಜನತಾ - ಏಕಾಂತ ಸ್ಥಿತಿ.

ಗಚ್ಛನ್ ವನಾನಿ ಸರಿತೋ ನಗರಾಣಿ ಶೈಲಾನ್
ಗ್ರಾಮಾನ್‌ಜನಾನಪಿ ಪಶೂನ್ ಪಥಿ ಸೋಽಪಿ ಪಶ್ಯನ್ |
ನನ್ವೈಂದ್ರಜಾಲಿಕ ಇವಾದ್ಭುತಮಿಂದ್ರಜಾಲಂ
ಬ್ರಹ್ಮೈವಮೇವ ಪರಿದರ್ಶಯತೀತಿ ಮೇನೇ || ೮೭

ಆತನು ಹೋಗುತ್ತಿರುವಾಗ ದಾರಿಯಲ್ಲಿ ವನಗಳನ್ನೂ ನದಿಗಳನ್ನೂ ನಗರಗಳನ್ನೂ ಬೆಟ್ಟಗಳನ್ನೂ ಗ್ರಾಮಗಳನ್ನೂ ಜನರನ್ನೂ ಪಶುಪ್ರಾಣಿಗಳನ್ನೂ ನೋಡುತ್ತಿದ್ದನು.

ಐಂದ್ರಜಾಲಿಕನು ಅದ್ಭುತವಾದ ಇಂದ್ರಜಾಲವನ್ನು ತೋರಿಸುವಂತೆ ಬ್ರಹ್ಮವು ಇವೆಲ್ಲವನ್ನೂ ಇಂದ್ರಜಾಲದಂತೆ ತೋರಿಸುತ್ತಿದೆ ಎಂದು ಭಾವಿಸಿದನು.

ವಾದಿಭಿರ್ನಿಜನಿಜಾಧ್ವಕರ್ಶಿತಾಂ
ವರ್ತಯನ್ ಪಥಿ ಜರದ್ಗವೀಂ ನಿಜೇ |
ದಂಡಮೇಕಮವಹಜ್ಜಗದ್ಗುರು-
ರ್ದಂಡಿತಾಖಿಲಕದಧ್ವಮಂಡಲಃ || ೮೮

ವಾದಿಗಳು ತಮಗೆ ತೋರಿದ ತಮ್ಮ ತಮ್ಮ ದಾರಿಗಳಿಗೆ ಎಳೆದು ಕೊಂಡು ಹೋಗಿ ಆಯಾಸಗೊಳಿಸಿದ್ದ ಮುದಿಹಸುವೆಂಬ ಪ್ರಾಚೀನ ವಾಣಿಯಾದ ಶ್ರುತಿಯನ್ನು ಶ್ರೀಶಂಕರನು ಅದ್ವೈತವೆಂಬ ಸ್ವಚ್ಛವಾದ ತನ್ನ ಮಾರ್ಗಕ್ಕೆ ಕರೆತಂದು ದಾರಿಗೂಡಿಸಿದನು. ಸಮಸ್ತಕುತ್ಸಿತ ಮಾರ್ಗಗಳ ಮಂಡಲವನ್ನೂ ದಂಡಿಸುವುದಕ್ಕಾಗಿ ಕೈಯಲ್ಲಿ ದಂಡವನ್ನು ಹಿಡಿದು ಜಗದ್ಗುರುವೆನಿಸಿದನು.

ಟಿಪ್ಪಣಿ :-'ಜಗದ್ಗುರು'ಎಂಬ ಶಬ್ದವು ಪ್ರಪ್ರಥಮವಾಗಿ ಶ್ರೀಶಂಕರಾಚಾರ್ಯರಿಗೆ ಅನ್ವಿತವಾಯಿತು. 'ಈಶಾನಃ ಸರ್ವವಿದ್ಯಾನಾಂ'ಇತ್ಯಾದಿಶ್ರುತಿ ವಾಕ್ಯದಿಂದಲೂ 'ಈಶಾನಾತ್ ಜ್ಞಾನಮನ್ವಿಚ್ಛೇತ್' ಇತ್ಯಾದಿ ಸ್ಮೃತಿವಾಕ್ಯದಿಂದಲೂ ಅಧ್ಯಾತ್ಮವಿದ್ಯೆಗೆ ಶ್ರೀಪರಮಶಿವನೇ ಆದಿಗುರು.ಅವನೇ ಶ್ರೀಶಂಕರಾಚಾರ್ಯ ರೂಪದಿಂದ ಅವತರಿಸಿದ ನಿಮಿತ್ತವಾಗಿ ಜಗದ್ಗುರು ಶಬ್ದವು ಅನ್ವರ್ಥವಾಗಿದೆಯೆಂದು ತಿಳಿಯಬೇಕು. ಕದಧ್ವಾ=ಕುತ್ಸಿತೋಽಧ್ವಾ ಕದಧ್ವಾ.'ಕೋಃ ಕತ್ತತ್ಪುರುಷೇಽಚಿ' ಎಂಬ ಸೂತ್ರದಿಂದ ಕುಶಬ್ದಕ್ಕೆ 'ಕತ್'ಎಂಬ ಆದೇಶ ಬಂದಿದೆ. ಸಂನ್ಯಾಸವನ್ನು ಸ್ವೀಕರಿಸಿದ್ದರಿಂದ ಶ್ರೀಶಂಕರನು ದಂಡವನ್ನು ಧರಿಸಿದ್ದನು.

ಸಾರಂಗಾ ಇವ ವಿಶ್ವಕದ್ರುಭಿರಹಂಕುರ್ವದ್‌ಭಿರುಚ್ಛೃಂಖಲೈ-
ರ್ಜಲ್ಪಾಕೈಃ ಪರಮರ್ಮಭೇದನ ಕಲಾಕಂಡೂಲಜಿಹ್ವಾಂಚಲೈಃ |
ಪಾಖಂಡೈರಿಹ ಕಾಂದಿಶೀಕಮನಸಃ ಕಂ ನಾಪ್ನುಯುರ್ವೈದಿಕಾಃ
ಕ್ಲೇಶಂ ದಂಡಧರೋ ಯದಿ ಸ್ಮ ನ ಮುನಿಸ್ತ್ರಾತಾ ಜಗದ್ದೇಶಿಕಃ || ೮೯

ಜಗದ್ಗುರುವಾದ ಶ್ರೀಶಂಕರಮುನಿಯು ನಮ್ಮನ್ನು ಸಂರಕ್ಷಿಸುವುದಕ್ಕೋಸ್ಕರ ದಂಡಧರನಾಗಿ ಬರದೇ ಹೋಗಿದ್ದರೆ, ವೈದಿಕರು ಯಾವ ಯಾವ ಕಷ್ಟವನ್ನು ಅನುಭವಿಸದೆ ಇರುತ್ತಿದ್ದರು? ಈ ವೈದಿಕರು ಪಾಖಂಡಿಗಳ ಪೀಡೆಗೆ ಹೆದರಿ ಎಲ್ಲಿಗಾದರೂ ಓಡಿಹೋಗ ಬೇಕೆಂದಿದ್ದರು. ಅಹಂಕಾರಿಗಳೂ ಉಚ್ಛೃಂಖಲರೂ ಬಾಯಿಗೆಬಂದಂತೆ ಬಗುಳತಕ್ಕವರೂ ಪರರ ಮರ್ಮಸ್ಥಳವನ್ನು ಕಡಿಯಲು ಚಡಪಡಿಸುವ ನಾಲಗೆಯುಳ್ಳವರೂ ಆದ ಈ ಪಾಖಂಡಿಗಳು, ಬೇಟೆನಾಯಿಗಳು ಜಿಂಕೆಗಳನ್ನು ಬೆನ್ನಟ್ಟುವಂತೆ ವೈದಿಕರನ್ನು ಬೆನ್ನಟ್ಟಿ ಭಯಪಡಿಸುತ್ತಿದ್ದರು.

ಟಿಪ್ಪಣಿ:- ವಿಶ್ವಕದ್ರು = ಬೇಟೆನಾಯಿ, ಕಾಂದಿಶೀಕ = ಹೆದರಿಓಡತಕ್ಕವನು.

ದಂಡಾನ್ವಿತೇನ ಧೃತರಾಗನವಾಂಬರೇಣ
ಗೋವಿಂದನಾಥ ವನಮಿಂದುಭವಾತಟಸ್ಥಮ್ |
ತೇನ ಪ್ರವಿಷ್ಟಮಜನಿಷ್ಟ ದಿನಾವಸಾನೇ
ಚಂಡತ್ವಿಷಾ ಚ ಶಿಖರಂ ಚರಮಾಚಲಸ್ಯ || ೯೦

ದಂಡಧರನೂ ನೂತನ ಕಾಷಾಯವಸ್ತ್ರವನ್ನು ಧರಿಸಿದವನೂ ತೇಜಸ್ವಿಯೂ ಆದ ಶ್ರೀಶಂಕರಯತಿಯು ನರ್ಮದಾನದೀತೀರದಲ್ಲಿದ್ದ ಶ್ರೀಗೋವಿಂದ ಭಗವತ್ಪಾದಾಶ್ರಮ ವನ್ನು ಸಂಜೆಯ ಸಮಯದಲ್ಲಿ ಪ್ರವೇಶಿಸಿದನು. ಹಾಗೆಯೇ ದಂಡನೆಂಬ ಸಹಚರ ಸಮೇತನೂ ಅಂಬರತಳದಲ್ಲಿ ಕೆಂಪುಬಣ್ಣವನ್ನು ಧರಿಸಿದವನೂ ಚಂಡಕಿರಣನೂ ಆದ ಸೂರ್ಯನು ಆ ಸಮಯದಲ್ಲಿ ಅಸ್ತಾದ್ರಿಯ ಶಿಖರವನ್ನು ಪ್ರವೇಶಿಸಿದನು.

ಟಿಪ್ಪಣಿ :- ಸೂರ್ಯಸಾದೃಶ್ಯವು ಶ್ರೀಶಂಕರಯತಿಯಲ್ಲಿ ಅಭಿವ್ಯಕ್ತವಾಗಿದೆ. ಇಂದುಭವಾ = ಚಂದ್ರನಿಂದ ಹುಟ್ಟಿದವಳು -ನರ್ಮದಾ ನದೀ. "ರೇವಾ ತು ನರ್ಮದಾ ಸೋಮೋದ್ಭವಾ ಮೇಕಲಕನ್ಯಕಾ" ಎಂದು ಅಮರಕೋಶ. ಇಂದು ಭವಾ ಎಂದರೆ ಇಂದು ಧರನಾದ ಶಿವನ ಜಟೆಯಿಂದ ಉದ್ಭವಿಸಿದ ಗಂಗಾನದಿ ಎಂದು ಕೆಲವರು ಬರೆದಿದ್ದಾರೆ. ಪ್ರಾಚೀನ ಶಂಕರ ಜಯದಲ್ಲಿ ಗಂಗಾತೀರಕ್ಕೆ ಆಚಾರ್ಯರು ಬಂದರು ಎಂದು ವರ್ಣನೆ ಇದೆಯಂತೆ.

ತೀರದ್ರುಮಾಗತಮರುದ್ವಿಗತಶ್ರಮಃ ಸನ್
ಗೋವಿಂದನಾಥ ವನ ಮಧ್ಯತಲಂ ಲುಲೋಕೇ |
ಶಂಸಂತಿ ಯತ್ರ ತರವೋ ವಸತಿಂ ಮುನೀನಾಂ
ಶಾಖಾಭಿರುಜ್ಜ್ವಲಮೃಗಾಜಿನವಲ್ಕಲಾಭಿಃ || ೯೧

ನರ್ಮದಾನದೀ ತೀರದಲ್ಲಿದ್ದ ಮರಗಳಿಂದ ಬೀಸುತ್ತಿದ್ದ ಗಾಳಿ ಆತನ ಮಾರ್ಗಾಯಾಸವನ್ನು ನೀಗಿಸಿತು. ಆತನು ಶ್ರೀಗೋವಿಂದ ಭಗವತ್ಪಾದರ ಆಶ್ರಮದ ಕಡೆಗೆ ತನ್ನ ದೃಷ್ಟಿಯನ್ನು ಹರಿಸಿದನು. ಆಶ್ರಮದ ಮರದ ಕೊಂಬೆಗಳಿಗೆ ತೂಗುಹಾಕಿದ ಕೃಷ್ಣಾಜಿನ ಮತ್ತು ನಾರುಬಟ್ಟೆಗಳಿಂದ ಅಲ್ಲಿದ್ದ ಮರಗಳು 'ಇದು ಮುನಿಗಳ ವಾಸಸ್ಥಾನ' ಎಂಬುದನ್ನು ಪ್ರಕಟಿಸುತ್ತಿದ್ದವು.

ಆದೇಶಮೇಕಮನುಯೋಕ್ತುಮಯಂ ವ್ಯವಸ್ಯನ್
ಪ್ರಾದೇಶಮಾತ್ರವಿವರ ಪ್ರತಿಹಾರಭಾಜಮ್ |
ತತ್ರ ಸ್ಥಿತೇನ ಕಥಿತಾಂ ಯಮಿನಾಂ ಗಣೇನ
ಗೋವಿಂದದೇಶಿಕಗುಹಾಂ ಕುತುಕೀ ದದರ್ಶ || ೯೨

ಶ್ರೀಶಂಕರನು ಒಂದು ಉಪದೇಶವನ್ನು ಗುರುಗಳಿಂದ ಪಡೆಯಬೇಕೆಂದು ಮನಸ್ಸಿನಲ್ಲಿ ನಿರ್ಧರಿಸಿ ಅಲ್ಲಿದ್ದ ಯತಿಗಳನ್ನು ಕುರಿತು ಪ್ರಶ್ನೆಮಾಡಿದನು. ಅವರು ಗೋವಿಂದ ಭಗವತ್ಪಾದರಿದ್ದ ಗುಹೆಯನ್ನು ತೋರಿಸಿದರು. ಒಂದು ಚೋಟಿನಷ್ಟು ಪ್ರಮಾಣದ ರಂಧ್ರವೆಂಬ ದ್ವಾರಪಾಲನಿಂದ ಕೂಡಿದ ಆ ಗುಹೆಯನ್ನು ಶ್ರೀಶಂಕರನು ಕೌತುಕದಿಂದ ನೋಡಿದನು.

ತಸ್ಯ ಪ್ರಪನ್ನಪರಿತೋಷದುಹೋ ಗುಹಾಯಾಃ
ಸ ತ್ರಿಃ ಪ್ರದಕ್ಷಿಣಪರಿಕ್ರಮಣಂ ವಿಧಾಯ |
ದ್ವಾರಂ ಪ್ರತಿ ಪ್ರಣಿಪತನ್ಜನತಾಪುರೋಗಂ
ತುಷ್ಟಾವ ತುಷ್ಟಹೃದಯಸ್ತಮಪಾಸ್ತಶೋಕಮ್ || ೯೩

ಶರಣಾಗತರಾದ ಭಕ್ತರಿಗೆ ಸಂತೋಷವನ್ನುಂಟು ಮಾಡತಕ್ಕ ಆ ಗುಹೆಗೆ ಆತನು ಮೂರುಸಲ ಪ್ರದಕ್ಷಿಣೆ ಮಾಡಿಬಂದು ಆ ದ್ವಾರಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿದನು. ಅನಂತರ ಸಂತುಷ್ಟ ಚಿತ್ತನಾಗಿ ಭಕ್ತರ ಶೋಕವನ್ನು ನಿವಾರಿಸುವ ಶ್ರೀಗೋವಿಂದ ಭಗವತ್ಪಾದರನ್ನು ಕುರಿತು ಜನತೆಯು ಮೆಚ್ಚುವಂತೆ ಹೀಗೆ ಸ್ತೋತ್ರಮಾಡಿದನು.

ಪರ್ಯಂಕತಾಂ ಭಜತಿ ಯಃ ಪತಗೇಂದ್ರಕೇತೋಃ
ಪಾದಾಂಗದತ್ವಮಥವಾ ಪರಮೇಶ್ವರಸ್ಯ |
ತಸ್ಯೈವ ಮೂರ್ಧ್ನಿ ಧೃತ ಸಾಬ್ಧಿಮಹೀಧ್ರಭೂಮೇಃ
ಶೇಷಸ್ಯ ವಿಗ್ರಹಮಶೇಷಮಹಂ ಭಜೇ ತ್ವಾಮ್ || ೯೪

"ಯಾವಾತನು ಮಹಾವಿಷ್ಣುವಿನ ಪರ್ಯಂಕವಾಗಿದ್ದಾನೋ ಅಥವಾ ಪರಮೇಶ್ವರನ ಚರಣನೂಪುರವಾಗಿದ್ದಾನೋ ಅಂತಹ ಆದಿಶೇಷನ ಅವತಾರವೂ ಪೂರ್ಣಸ್ವರೂಪರೂ ಆದ ನಿಮ್ಮನ್ನು ಭಜಿಸುತ್ತೇನೆ. ಆದಿಶೇಷನಾದರೋ ಸಮುದ್ರ ಪರ್ವತಗಳಿಂದ ಸಹಿತವಾದ ಪೃಥ್ವಿಯನ್ನು ಹೊತ್ತು ನಿಂತವನು.

ದೃಷ್ಟ್ವಾ ಪುರಾ ನಿಜಸಹಸ್ರಮುಖೀಮಭೈಷು-
ರಂತೇವಸಂತ ಇತಿ ತಾಮಪಹಾಯ ಶಾಂತಃ |
ಏಕಾನನೇನ ಭುವಿ ಯಸ್ತ್ವವತೀರ್ಯ ಶಿಷ್ಯಾ -
ನನ್ವಗ್ರಹೀನ್ನನು ಸ ಏವ ಪತಂಜಲಿಸ್ತ್ವಮ್ || ೯೫

"ಯಾವಾತನು ಪೂರ್ವದಲ್ಲಿ ತನ್ನ ಸಾವಿರ ಮುಖಗಳನ್ನು ನೋಡಿ ಶಿಷ್ಯರು ಭೀತರಾದರೆಂದು ಚಿಂತಿಸಿ ಆ ಸ್ವರೂಪವನ್ನು ಪರತ್ಯಜಿಸಿ ಶಾಂತನಾಗಿ ಭೂಮಿಯಲ್ಲಿ ಅವತರಿಸಿ ಒಂದೇ

ಮುಖದಿಂದ ಶಿಷ್ಯರಿಗೆ ಶಾಸ್ತ್ರವನ್ನು ಬೋಧಿಸಿ ಅನುಗ್ರಹಿಸಿದನೋ ಆ ಪತಂಜಲಿಮಹರ್ಷಿಯೇ ನೀವಾಗಿದ್ದೀರಿ.

ಉರಗಪತಿಮುಖಾದಧೀತ್ಯ ಸಾಕ್ಷಾತ್
ಸ್ವಯಮವನೇರ್ವಿವರಂ ಪ್ರವಿಶ್ಯ ಯೇನ ।
ಪ್ರಕಟಿತಮಚಲಾತಲೇ ಸಯೋಗಂ
ಜಗದುಪಕಾರಪರೇಣ ಶಬ್ದಭಾಷ್ಯಮ್ ॥ ೯೬

"ಹೀಗೆ ಭೂಮಿಯಲ್ಲಿ ಅವತರಿಸಿ ಭೂಮಿಯ ವಿವರವನ್ನು ಪ್ರವೇಶಿಸಿ ಪಾತಾಳಕ್ಕೆ ಹೋಗಿ ನಾಗರಾಜನಾದ ಆದಿಶೇಷನ ಮುಖದಿಂದಲೇ ಉಪದೇಶವನ್ನು ಪಡೆದು ಯೋಗಶಾಸ್ತ್ರವನ್ನೂ ವ್ಯಾಕರಣ ಭಾಷ್ಯವನ್ನೂ ಜಗತ್ತಿನ ಉಪಕಾರಕ್ಕಾಗಿ ಭೂಮಿಯಲ್ಲಿ ಪ್ರಕಟಿಸಿದ್ದೀರಿ.

ತಮಖಿಲಗುಣಪೂರ್ಣಂ ವ್ಯಾಸಪುತ್ರಸ್ಯ ಶಿಷ್ಯಾ-
ದಧಿಗತಪರಮಾರ್ಥಂ ಗೌಡಪಾದಾನ್ಮಹರ್ಷೇಃ ।
ಅಧಿಜಿಗಮಿಷುರೇಷ ಬ್ರಹ್ಮಸಂಸ್ಥಾಮಹಂ ತ್ವಾಂ
ಪ್ರಸೃಮರಮಹಿಮಾನಂ ಪ್ರಾಪಮೇಕಾಂತಭಕ್ತ್ಯಾ ॥ ೯೭

ಅಂತಹ ಸಮಸ್ತಗುಣಪರಿಪೂರ್ಣರೂ ವ್ಯಾಸಪುತ್ರರಾದ ಶುಕಮುನಿಗಳ ಶಿಷ್ಯರೂ ಮಹರ್ಷಿಗಳಾದ ಗೌಡಪಾದರಿಂದ ಪರಮಾರ್ಥವನ್ನು ತಿಳಿದವರೂ, ಮಹಾಮಹಿಮ ಶಾಲಿಗಳೂ ಆದ ನಿಮ್ಮ ಬಳಿಗೆ ಬ್ರಹ್ಮತತ್ತ್ವವನ್ನು ತಿಳಿಯುವ ಇಚ್ಛೆಯಿಂದ ನಾನು ಏಕಾಂತ ಭಕ್ತಿಯುಕ್ತನಾಗಿ ಬಂದಿದ್ದೇನೆ" ಎಂದರು.

ತಸ್ಮಿನ್ನಿತಿ ಸ್ತುವತಿ ಕಸ್ತ್ವಮಿತಿ ಬ್ರುವಂತಂ
ದಿಷ್ಟ್ಯಾ ಸಮಾಧಿಪದರುದ್ಧವಿಸೃಷ್ಟಚಿತ್ತಮ್ ।
ಗೋವಿಂದ ದೇಶಿಕಮುವಾಚ ತದಾ ವಚೋಭಿಃ
ಪ್ರಾಚೀನಪುಣ್ಯಜನಿತಾತ್ಮವಿಬೋಧಚಿಹ್ನೈಃ ॥ ೯೮

ಶ್ರೀಶಂಕರನು ಹೀಗೆ ಸ್ತೋತ್ರ ಮಾಡುವಾಗ ದೈವಯೋಗದಿಂದ ಶ್ರೀಗೋವಿಂದ ಭಗವತ್ಪಾದರು ಸಮಾಧಿಯಿಂದ ವ್ಯುತ್ಥಿತರಾಗಿ ಬಾಹ್ಯಸ್ಥಿತಿಗೆ ಬಂದಿದ್ದರು. ಆಗ ನೀನು ಯಾರು?- ಎಂದು ಆ ಗುರುಗಳು ಪ್ರಶ್ನೆಮಾಡಿದರು. ಆಗ ಶ್ರೀಶಂಕರನು ಪ್ರಾಚೀನ ಪುಣ್ಯಗಳಿಂದ ಉಂಟಾದ ಆತ್ಮಜ್ಞಾನದ ಚಿಹ್ನೆಗಳುಳ್ಳ ಈ ವಾಕ್ಯಗಳಿಂದ ಈ ರೀತಿಯಾಗಿ ಉತ್ತರಿಸಿದನು.

ಸ್ವಾಮಿನ್ನಹಂ ನ ಪೃಥಿವೀ ನ ಜಲಂ ನ ತೇಜೋ
ನ ಸ್ಪರ್ಶನೋ ನ ಗಗನಂ ನ ಚ ತದ್ಗುಣಾ ವಾ ।

ನಾಪೀಂದ್ರಿಯಾಣ್ಯಪಿ ತು ವಿದ್ಧಿ ತತೋಽವಶಿಷ್ಟೋ
ಯಃ ಕೇವಲೋಽಸ್ತಿ ಪರಮಃ ಸ ಶಿವೋಽಹಮಸ್ಮಿ || ೯೯

"ಓ ಆಚಾರ್ಯವರ್ಯರೇ, ನಾನು ಭೂಮಿಯಲ್ಲ, ಜಲವಲ್ಲ, ಅಗ್ನಿಯಲ್ಲ, ವಾಯುವಲ್ಲ, ಆಕಾಶವಲ್ಲ, ಅಥವಾ ಈ ಪಂಚಭೂತಗಳಲ್ಲಿರುವ ಶಬ್ದಾದಿ ಗುಣಗಳಲ್ಲಿ ಒಂದೂ ಅಲ್ಲ. ನಾನು ಇಂದ್ರಿಯವೂ ಅಲ್ಲ. ಆದರೆ ಅವೆಲ್ಲವನ್ನೂ ಮೀರಿದ ಅದ್ವಿತೀಯನಾದ ಯಾವ ಪರಶಿವನಿದ್ದಾನೋ ಆತನೇ ನಾನಾಗಿದ್ದೇನೆ" ಎಂದನು.

ಆಕರ್ಣ್ಯ ಶಂಕರ ಮುನೇರ್ವಚನಂ ತದಿತ್ಥ-
ಮದ್ವೈತದರ್ಶನ ಸಮುತ್ಥಮುಪಾತ್ತಹರ್ಷಃ |
ಸ ಪ್ರಾಹ ಶಂಕರ ಸ ಶಂಕರ ಏವ ಸಾಕ್ಷಾ -
ಜ್ಜಾತಸ್ತ್ವಮಿತ್ಯಹಮವೈಮಿ ಸಮಾಧಿದೃಷ್ಟ್ಯಾ || ೧೦೦

ಹೀಗೆ ಶಂಕರ ಮುನಿಯ ಅದ್ವೈತ ದರ್ಶನವನ್ನು ಪ್ರತಿಬಿಂಬಿಸುವ ಉತ್ತರವನ್ನು ಕೇಳಿ ಗೋವಿಂದಭಗವತ್ಪಾದರಿಗೆ ಹರ್ಷವಾಯಿತು. ಅವರು "ಓ ಶಂಕರ, ಆ ಶಂಕರನೇ ನೀನಾಗಿ ಅವತರಿಸಿದ್ದೀಯೆ ಎಂದು ನನಗೆ ಸಮಾಧಿ ದೃಷ್ಟಿಯಿಂದ ಗೊತ್ತಾಗಿದೆ"- ಎಂದರು.

ತಸ್ಯೋಪದರ್ಶಿತವತಶ್ಚರಣೌ ಗುಹಾಯಾ
ದ್ವಾರೇ ನ್ಯಪೂಜಯದುಪೇತ್ಯ ಸ ಶಂಕರಾರ್ಯಃ |
ಆಚಾರ ಇತ್ಯುಪದಿದೇಶ ಸ ತತ್ರ ತಸ್ಮೈ
ಗೋವಿಂದಪಾದಗುರವೇ ಸ ಗುರುರ್ಮುನೀನಾಮ್ || ೧೦೧

ಆಮೇಲೆ ಆ ಗುಹೆಯ ರಂಧ್ರದ ಮೂಲಕ ತಮ್ಮ ಎರಡು ಪಾದಗಳನ್ನೂ ಗೋವಿಂದ ಭಗವತ್ಪಾದರು ಹೊರಗೆ ಚಾಚಿದರು. ಆ ಪಾದಗಳನ್ನು ಕಂಡು ಶ್ರೀಶಂಕರನು ವಿಧಿವತ್ತಾಗಿ ಅವುಗಳನ್ನು ಪೂಜಿಸಿದನು. ಆಗ ಶ್ರೀಗೋವಿಂದ ಪಾದರನ್ನು ಗುರುವಾಗಿ ಸ್ವೀಕರಿಸಿದ ಶ್ರೀಶಂಕರನಿಗೆ ಯತಿಗಳಿಗೇ ಗುರುವಾಗ ಆ ಆಚಾರ್ಯರು ಇದೊಂದು ಆಚಾರ ಎಂಬ ಬುದ್ಧಿಯಿಂದ ಬ್ರಹ್ಮ ತತ್ತ್ವವನ್ನು ಉಪದೇಶಿಸಿದರು.

ಶಂಕರಃ ಸವಿನಯೈರುಪಚಾರೈ-
ರಭ್ಯತೋಷಯದಸೌ ಗುರುಮೇನಮ್ |
ಬ್ರಹ್ಮ ತದ್ವಿದಿತಮಪ್ಯುಪಲಿಪ್ಸುಃ
ಸಂಪ್ರದಾಯ ಪರಿಪಾಲನಬುದ್ಧ್ಯಾ || ೧೦೨

ಆಮೇಲೆ ಶ್ರೀಶಂಕರನು ವಿನಯಪೂರ್ವಕವಾದ ಸೇವೆಗಳಿಂದ ಈ ಗುರುಗಳನ್ನು ಸಂತೋಷಪಡಿಸಿದನು. ಬ್ರಹ್ಮತತ್ತ್ವವು ತನಗೆ ಗೊತ್ತೇ ಇದ್ದರೂ ಗುರುಶಿಷ್ಯ ಸಂಪ್ರದಾಯವನ್ನು ಪಾಲಿಸಬೇಕೆಂಬ ಬುದ್ಧಿಯಿಂದ ಬ್ರಹ್ಮತತ್ತ್ವವನ್ನರಿಯುವುದಕ್ಕಾಗಿ ಗುರುಸೇವೆ ಮಾಡುತ್ತಿದ್ದನು.

ಭಕ್ತಿಪೂರ್ವಕೃತ ತತ್ಪರಿಚರ್ಯಾ-
ತೋಷಿತೋಽಧಿಕತರಂ ಯತಿವರ್ಯಃ |
ಬ್ರಹ್ಮತಾಮುಪದಿದೇಶ ಚತುರ್ಭಿ-
ರ್ವೇದಶೇಖರ ವಚೋಭಿರಮುಷ್ಮೈ || ೧೦೩

ಭಕ್ತಿ ಪೂರ್ವಕವಾಗಿ ಮಾಡುತ್ತಿದ್ದ ಈ ಪರಿಚರ್ಯೆಗಳಿಂದ ಸಂತುಷ್ಟರಾದ ಆ ಯತಿ ಶ್ರೇಷ್ಠರು ಉಪನಿಷತ್ತುಗಳಲ್ಲಿರುವ ನಾಲ್ಕು ಮಹಾವಾಕ್ಯಗಳಿಂದ ಆತನಿಗೆ ಬ್ರಹ್ಮೋಪದೇಶವನ್ನು ಮಾಡಿದರು.

ಟಿಪ್ಪಣಿ:-ಪ್ರಜ್ಞಾನಂ ಬ್ರಹ್ಮ, ಅಹಂ ಬ್ರಹ್ಮಾಸ್ಮಿ, ತತ್ತ್ವಮಸಿ, ಅಯಮಾತ್ಮಾ ಬ್ರಹ್ಮ-ಇವು ನಾಲ್ಕು ಮಹಾವಾಕ್ಯಗಳು.

ಸಾಂಪ್ರದಾಯಿಕ ಪರಾಶರ ಪುತ್ರ-
ಪ್ರೋಕ್ತಸೂತ್ರಮತಗತ್ಯನುರೋಧಾತ್ |
ಶಾಸ್ತ್ರಗೂಢಹೃದಯಂ ಹಿ ದಯಾಲೋಃ
ಕೃತ್ಸ್ನಮಪ್ಯಯಮಬುದ್ಧ ಸುಬುದ್ಧಿಃ || ೧೦೪

ಅಲ್ಲದೆ ಬುದ್ಧಿಶಾಲಿಯಾದ ಶ್ರೀಶಂಕರನು ಸಂಪ್ರದಾಯಕ್ರಮದಿಂದ ಬಂದ ವ್ಯಾಸಮುನಿಗಳಿಂದ ಪ್ರೋಕ್ತವಾದ ಬ್ರಹ್ಮಸೂತ್ರವನ್ನು (ಶಾರೀರಕ ಸೂತ್ರವನ್ನು) ಪೂರ್ವಸಮ್ಮತವಾದ ಅದ್ವೈತ ಬ್ರಹ್ಮಮಾರ್ಗದ ಪ್ರಕ್ರಿಯೆಗೆ ಅನುಗುಣವಾಗಿ ಸಮಸ್ತ ಶಾಸ್ತ್ರರಹಸ್ಯ ಸಹಿತವಾಗಿ ದಯಾಳುವಾದ ಆ ಗುರುವಿನಿಂದ ತಿಳಿದುಕೊಂಡನು.

ವ್ಯಾಸಃ ಪರಾಶರಸುತಃ ಕಿಲ ಸತ್ಯವತ್ಯಾಂ
ತಸ್ಯಾತ್ಮಜಃ ಶುಕಮುನಿಃ ಪ್ರಥಿತಾನುಭಾವಃ |
ತಚ್ಛಿಷ್ಯತಾಮುಪಗತಃ ಕಿಲ ಗೌಡಪಾದೋ
ಗೋವಿಂದನಾಥ ಮುನಿರಸ್ಯ ಚ ಶಿಷ್ಯಭೂತಃ || ೧೦೫

(ಆ ಸಂಪ್ರದಾಯ ಹೇಗೆಂದರೆ) ಪರಾಶರಪುತ್ರರಾದ ವ್ಯಾಸರು ಸತ್ಯವತಿಯಲ್ಲಿ ಜನಿಸಿದರಷ್ಟೆ. ಅವರ ಪುತ್ರರೇ ಮಹಾಮಹಿಮೆಯುಳ್ಳ ಶುಕಮಹರ್ಷಿ. ಗೌಡಪಾದರು ಶುಕಮಹರ್ಷಿಗಳ ಶಿಷ್ಯರು. ಗೋವಿಂದ ಭಗವತ್ಪಾದರು ಗೌಡಪಾದರ ಶಿಷ್ಯರು.

ಟಿಪ್ಪಣಿ:- ಇದು ಬ್ರಹ್ಮಸೂತ್ರಕ್ಕೆ ಮುಂದಿನ ಸಂಪ್ರದಾಯವನ್ನು ತಿಳಿಸತಕ್ಕದ್ದಾಗಿದೆ. ಒಟ್ಟುಅದ್ವೈತಶಾಸ್ತ್ರದ ಮೂಲಪುರುಷ ಶ್ರೀಮನ್ನಾರಾಯಣ. ಅನಂತರ ಬ್ರಹ್ಮ, ವಸಿಷ್ಠ, ಶಕ್ತಿ, ಪರಾಶರ, ವ್ಯಾಸ - ಇದು ಹಿಂದಿನ ಅನಾದಿ ಪರಂಪರೆ.

ಶುಶ್ರಾವ ತಸ್ಯ ನಿಕಟೇ ಕಿಲ ಶಾಸ್ತ್ರಜಾಲಂ
ಯಶ್ಚಾಶೃಣೋದ್ಭುಜಗಸದ್ಮಗತಸ್ತ್ವನಂತಾತ್ |
ಶಬ್ದಾಂಬುರಾಶಿಮಖಿಲಂ ಸಮಯಂ ವಿಧಾಯ
ಯಶ್ಚಾಖಿಲಾನಿ ಭುವನಾನಿ ಬಿಭರ್ತಿ ಮೂರ್ಧ್ನಾ || ೧೦೭

ಯಾವಾತನು ಸರ್ಪಲೋಕಕ್ಕೆ ಹೋಗಿ, ವ್ಯಾಕರಣ ಶಾಸ್ತ್ರವನ್ನು ಭೂಲೋಕದಲ್ಲಿ ವಿಸ್ತರಿಸುವೆನು ಎಂದು ಮಾತುಕೊಟ್ಟು, ಸಾಕ್ಷಾತ್ ಅನಂತನ (ಆದಿಶೇಷ) ಮುಖದಿಂದಲೇ ಸಮುದ್ರದಂತಿರುವ ಶಬ್ದಶಾಸ್ತ್ರವನ್ನು ಅಧ್ಯಯನ ಮಾಡಿಬಂದನೋ, ಯಾವಾತನು ಆದಿಶೇಷನ ರೂಪದಿಂದ ಸಮಸ್ತ ಲೋಕಗಳನ್ನೂ ತನ್ನ ಶಿರಸ್ಸಿನಲ್ಲಿ ಧರಿಸಿರುವನೋ ಅಂತಹ ಪತಂಜಲಿಯ ಅವತಾರವಾದ ಶ್ರೀಗೋವಿಂದ ಭಗವತ್ಪಾದರಿಂದ ಶ್ರೀಶಂಕರನು ಸಮಸ್ತ ಶಾಸ್ತ್ರರಾಶಿಯನ್ನು ಅಭ್ಯಾಸಮಾಡಿದನು.

ಟಿಪ್ಪಣಿ:- ಆದಿಶೇಷನು ಪತಂಜಲಿಯಾಗಿಯೂ ಅನಂತರ ಗೋವಿಂದಭಗವತ್ಪಾದರಾಗಿಯೂ ಅವತರಿಸಿದರೆಂದು ಪೂರ್ವಕಥೆ ಇದೆ. ಪತಂಜಲಿಯೇ ಸ್ವತಃ ಆದಿಶೇಷನಾಗಿದ್ದರೂ ಶಾಸ್ತ್ರಸಂಪ್ರದಾಯ ವನ್ನು ಪಾಲಿಸುವುದಕ್ಕಾಗಿ ತನ್ನ ಮೂಲರೂಪನಾದ ಆದಿಶೇಷನನ್ನೇ ಗುರುವನ್ನಾಗಿ ಸ್ವೀಕರಿಸಿದನೆಂದು ತಿಳಿಯತಕ್ಕದ್ದು.

ಸೋಽಧಿಗಮ್ಯ ಚರಮಾಶ್ರಮಮಾರ್ಯಃ
ಪೂರ್ವಪುಣ್ಯನಿಚಯೈರಧಿಗಮ್ಯಮ್ |
ಸ್ಥಾನಮರ್ಚ್ಯಮಪಿ ಹಂಸಪುರೋಗೈ-
ರುನ್ನತಂ ಧ್ರುವ ಇವೈತ್ಯ ಚಕಾಶೇ || ೧೦೭

ಅನಂತರ ಆರ್ಯನಾದ ಶ್ರೀಶಂಕರನು ಪೂರ್ವಜನ್ಮದ ಪುಣ್ಯ ರಾಶಿಗಳಿಂದ ಲಭ್ಯವಾಗತಕ್ಕ ಸಂನ್ಯಾಸಾಶ್ರಮವನ್ನು ವಿಧಿವತ್ತಾಗಿ ಶ್ರೀಗೋವಿಂದ ಭಗವತ್ಪಾದರಿಂದ ಸ್ವೀಕರಿಸಿದನು. ಪರಮಹಂಸರೇ ಮೊದಲಾದ ಸರ್ವರಿಂದಲೂ ಮತ್ತು ಸೂರ್ಯನೇ ಮೊದಲಾದ ಗ್ರಹದೇವತೆ ಗಳಿಂದಲೂ ಪೂಜನೀಯವಾದ ಚತುರ್ಥಾಶ್ರಮವನ್ನು ಮತ್ತು ಉನ್ನತವಾದ ಧ್ರುವಲೋಕವನ್ನು ಪಡೆದು ಧ್ರುವನಕ್ಷತ್ರದಂತೆ ವಿರಾಜಿಸಿದರು.

ಟಿಪ್ಪಣಿ:-ಹಂಸ = ಪರಮಹಂಸನೆಂದೂ ಸೂರ್ಯನೆಂದೂ ಎರಡು ಅರ್ಥವುಂಟು.

ಛನ್ನಮೂರ್ತಿರತಿಪಾಟಲಶಾಟೀ-
ಪಲ್ಲವೇನ ರುರುಚೇ ಯತಿರಾಜಃ |
ವಾಸರೋಪರಮರಕ್ತಪಯೋದಾ-
ಚ್ಛಾದಿತೋ ಹಿಮಗಿರೇರಿವ ಕೂಟಃ || ೧೦೮

ಶ್ರೀಶಂಕರಯತೀಶ್ವರರು ಕೆಂಪಾದ ಕಾಷಾಯವಸ್ತ್ರದ ಸೆರಗನ್ನು ತಮ್ಮ ದೇಹಕ್ಕೆ ಹೊದೆದು ಕೊಂಡಿದ್ದರು. ಆದ್ದರಿಂದ ಸಂಜೆಯ ಹೊತ್ತು ಕೆಂಪಾದ ಮೋಡದಿಂದ ಆವೃತವಾದ ಹಿಮಾಲಯ ಶಿಖರದಂತೆ ಶೋಭಿಸಿದರು.

ಏಷ ಧೂರ್ಜಟಿರಬೋಧಮಹೇಭಂ
ಸಂನಿಹತ್ಯ ರುಧಿರಾಪ್ಲುತಚರ್ಮ |
ಉದ್ಯದುಷ್ಣಕಿರಣಾರುಣ ಶಾಟೀ-
ಪಲ್ಲವಸ್ಯ ಕಪಟೇನ ಬಿಭರ್ತಿ || ೧೦೯

ಇವರು ಸಾಕ್ಷಾತ್ ಪರಮೇಶ್ವರನೇ ಸರಿ. ಅಜ್ಞಾನವೆಂಬ ಮಹಾಗಜವನ್ನು ಕೊಂದು ಅದರ ರಕ್ತದಿಂದ ನೆನೆದ ಚರ್ಮವನ್ನು ಉದಯ ಕಾಲದ ಸೂರ್ಯನ ಕಿರಣದಂತೆ ಶೋಭಿಸುವ ಕಾಷಾಯವಸ್ತ್ರದ ನೆವದಿಂದ ಧರಿಸಿದ್ದಾರೆ -ಎನ್ನಬಹುದಾಗಿತ್ತು.

ಶ್ರುತೀನಾಮಾಕ್ರೀಡಃ ಪ್ರಥಿತಪರಹಂಸೋಚಿತಗತಿ-
ರ್ನಿಜೇ ಸತ್ಯೇ ಧಾಮ್ನಿ ತ್ರಿಜಗದತಿವರ್ತಿನ್ಯಭಿರತಃ |
ಅಸೌ ಬ್ರಹ್ಮೈವಾಸ್ಮಿನ್ನ ಖಲು ವಿಶಯೇ ಕಿಂತು ಕಲಯೇ
ಬೃಹೇರರ್ಥಂ ಸಾಕ್ಷಾದನುಪಚರಿತಂ ಕೇವಲತಯಾ || ೧೧೦

ಶ್ರೀಶಂಕರಾಚಾರ್ಯರು ಶ್ರುತಿಗಳ ಮಧ್ಯದಲ್ಲಿ ಕ್ರೀಡಿಸತಕ್ಕವರು. ವಿಖ್ಯಾತರಾದ ಪರಮಹಂಸರೊಡನೆ ಬೆರೆಯತಕ್ಕವರು. ಸ್ವಸ್ವರೂಪವಾದ ಮತ್ತು ಸತ್ಯವಾದ ಮತ್ತು ಲೋಕ ತ್ರಯಾತಿಶಾಯಿಯಾದ ಬ್ರಹ್ಮಚೈತನ್ಯದಲ್ಲಿ ಸದಾ ಮುಳುಗಿದವರು. ಇವರು ಬ್ರಹ್ಮವೇ ಸರಿ. ಈ ವಿಷಯದಲ್ಲಿ ನಾನು ಸಂದೇಹ ಪಡುವುದಿಲ್ಲ. ಆದರೆ, ಬೃಹ್‌ಧಾತುವಿನ ಅರ್ಥವು ಉಪಚರಿತವಾಗದೆ ಸಾಕ್ಷಾತ್ತಾಗಿ ನಿರ್ಣೀತವಾಗಿದೆ ಎಂದು ತಿಳಿಯುತ್ತೇನೆ.

ಟಿಪ್ಪಣಿ:- ತ್ರಿಮೂರ್ತಿಗಳಲ್ಲೊಬ್ಬನಾದ ಬ್ರಹ್ಮನು ವೇದಾಭ್ಯಾಸ ನಿರತನೂ ಹಂಸವಾಹನನೂ ಸತ್ಯಲೋಕವಾಸಿಯೂ ಆಗಿದ್ದಾನೆ. ಆತನ ಹೆಸರಿನಲ್ಲಿರುವ ಬೃಹ್‌ಧಾತು ದೊಡ್ಡದು ಎಂಬ ಅರ್ಥವನ್ನು ಕೊಡುತ್ತದೆ. ಅಲ್ಲಿ ದೊಡ್ಡದು' ಎಂಬುದಕ್ಕೆ ಉಳಿದ ವ್ಯಕ್ತಿಗಳಿಗಿಂತ ಬ್ರಹ್ಮನು ದೊಡ್ಡವನು ಎಂದು ಉಪಚರಿತವಾದ ಅರ್ಥವನ್ನಿಟ್ಟುಕೊಳ್ಳಬೇಕು. ಆಚಾರ್ಯರಲ್ಲಾದರೋ ಸಹಜವಾಗಿಯೇ ಸರ್ವವ್ಯಾಪಿ

ಎಂಬ ಅರ್ಥ ಹೊಂದುತ್ತದೆ - ಎಂದು ಅಭಿಪ್ರಾಯ. ಬ್ರಹ್ಮೈವ ಎಂಬಲ್ಲಿ ಬ್ರಹ್ಮ ಶಬ್ದವು ನಪುಂಸಕವೂ ಮತ್ತು ಪುಲ್ಲಿಂಗವೂ ಆಗಿದೆ. ಸಂಧಿಯಾದಾಗ ರೂಪ ಒಂದೇ ಆಗುತ್ತದೆ. ಆಚಾರ್ಯರು ಸೃಷ್ಟಿಕರ್ತನಾದ ಬ್ರಹ್ಮನಿಗಿಂತ ಅಧಿಕ ಎಂದು ತಾತ್ಪರ್ಯ.

ಮಿತಂ ಪಾದೇನೈವ ತ್ರಿಭುವನಮಿಹೈಕೇನ ಮಹಸಾ
ವಿಶುದ್ಧಂ ಯತ್ಸತ್ತ್ವಂ ಸ್ಥಿತಿಜನಿಲಯೇಷ್ವಪ್ಯನುಗತಮ್ |
ದಶಾಕಾರಾತೀತಂ ಸ್ವಮಹಿಮನಿ ನಿರ್ವೇದರಮಣಂ
ತತಸ್ತಂ ತದ್ವಿಷ್ಣೋಃ ಪರಮಪದಮಾಖ್ಯಾತಿ ನಿಗಮಃ || ೧೧೧

ಯಾವ ಪರಬ್ರಹ್ಮವು ತನ್ನ ಒಂದು ಪಾದವಾದ ತೇಜಸ್ಸಿನಿಂದ ಮೂರು ಲೋಕವನ್ನೂ ಅಳೆಯಿತೋ, ವಿಶುದ್ಧವಾದ ಯಾವ ಸತ್ತ್ವವು ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಲ್ಲಿ ಅನುಗತವಾಗಿದೆಯೋ, ಯಾವುದು ಬಾಲ್ಯಾದಿ ದಶೆಯನ್ನೂ ಆಕೃತಿಯನ್ನೂ ಮೀರಿದೆಯೋ, ಯಾವುದು ತನ್ನ ಮಹಿಮೆಯಲ್ಲಿಯೇ ಸರ್ವಕಾಮನಾತೀತವಾಗಿ ರಮಿಸುತ್ತಿದೆಯೋ ಅಂತಹ ಬ್ರಹ್ಮವೇ ಆದ ಶ್ರೀಶಂಕರಾಚಾರ್ಯರು ವಿಷ್ಣುವಿನ ಪರಮಸ್ಥಾನವೆಂದು ವೇದವು ಘೋಷಿಸುತ್ತಿದೆ.

ಟಿಪ್ಪಣಿ:- "ಪಾದೋಽಸ್ಯ ವಿಶ್ವಾ ಭೂತಾನಿ," ಇತ್ಯಾದಿ ಶ್ರುತಿಯು ಈ ವಿಶ್ವವು ಪರಬ್ರಹ್ಮದ ಒಂದು ಪಾದ ಎನ್ನುತ್ತದೆ. ಈ ಶ್ಲೋಕದಲ್ಲಿ ವಿಷ್ಣುವಿಗಿಂತ ಬ್ರಹ್ಮಸ್ವರೂಪರಾದ ಆಚಾರ್ಯರು ಅಧಿಕರೆಂದು ವರ್ಣಿಸಲಾಗಿದೆ. ವಿಷ್ಣುವು ವಾಮನಾವತಾರದಲ್ಲಿ ವಿಶ್ವವನ್ನಳೆಯಲು ಮೂರು ಹೆಜ್ಜೆಗಳನ್ನು ಬಳಸಬೇಕಾಯಿತು. ಅವನ ಸತ್ವವು ಜಗತ್ತಿನ ಸ್ಥಿತಿಯನ್ನು ಮಾತ್ರ ನಡೆಸುತ್ತದೆ. ಅಲ್ಲದೆ ಆತನು ದಶಾಕಾರಗಳನ್ನು ಎಂದರೆ ದಶಾವತಾರಗಳನ್ನು ಮಾಡಿದನು. ಈ ಕಾರಣಗಳಿಂದ ಅವನಿಗಿಂತ ಬ್ರಹ್ಮವು ಅಧಿಕವೆಂದು ಅಭಿಪ್ರಾಯ. ಬ್ರಹ್ಮವೇ ಆಚಾರ್ಯರು.

ನ ಭೂತೇಷ್ವಾಸಂಗಃ ಕ್ವಚನ ನ ಗವಾ ವಾ ವಿಹರಣಂ
ನ ಭೂತ್ಯಾ ಸಂಸರ್ಗೋ ನ ಪರಿಚಿತತಾ ಭೋಗಿಭಿರಪಿ |
ತದಪ್ಯಾಮ್ನಾಯಾಂತಸ್ತ್ರಿಪುರದಹನಾತ್ಕೇವಲದೃಶಾ
ತುರೀಯಂ ನಿರ್ದ್ವಂದ್ವಂ ಶಿವಮತಿತರಾಂ ವರ್ಣಯತಿ ತಮ್ || ೧೧೨

ಭೂತಗಳ ಸಂಪರ್ಕವಿಲ್ಲ. ಎತ್ತಿನ ಮೇಲೆ ಸಂಚಾರಮಾಡತಕ್ಕದ್ದೂ ಇಲ್ಲ. ವಿಭೂತಿಯ ಸಂಬಂಧವೂ ಇಲ್ಲ. ಸರ್ಪಗಳ ಸಹವಾಸವೂ ಇಲ್ಲ. ಇದಿಷ್ಟು ಶಿವನಿಗೆ ಸಂಬಂಧಿಸಿದ ವ್ಯತಿರೇಕವನ್ನು ತೋರಿಸುವ ಅರ್ಥ. ಆಚಾರ್ಯರ ಪರದಲ್ಲಿ ಹೀಗೆ - ಇವರಿಗೆ ಪಂಚಭೂತಗಳಲ್ಲಿ ಆಸಕ್ತಿ ಇಲ್ಲ. ಹಾಗೆಯೇ ಗೋವಿನೊಡನೆ ಎಂದರೆ ಇಂದ್ರಿಯಗಳೊಡನೆ ವಿಹಾರವಿಲ್ಲ. ಐಶ್ವರ್ಯದೊಡನೆಯೂ ಸಂಪರ್ಕವಿಲ್ಲ. ಭೋಗಿಗಳಾದ ಜನರ ಪರಿಚಯವಿಲ್ಲ. ಆದರೂ ಸಹ ಕೇವಲ ದೃಷ್ಟಿಯಿಂದ ತ್ರಿಪುರದಹನವನ್ನು ಮಾಡಿದ ಪ್ರಯುಕ್ತ

ಅದ್ವಿತೀಯವಾದ ಮತ್ತು ಚತುರ್ಥವಾದ ಶಿವನೆಂದೇ ಈ ಬ್ರಹ್ಮವನ್ನು ಶೃತಿಯು ವಿಶೇಷವಾಗಿ ವರ್ಣಿಸುತ್ತದೆ.

ಟಿಪ್ಪಣಿ:-ಪ್ರಸಿದ್ಧನಾದ ಶಿವನು ತ್ರಿಪುರಾಸುರ ಸಂಹಾರ ಮಾಡಿದನೆಂದು ಕಥೆ ಇದೆ. ಆಚಾರ್ಯರ ಪರವಾಗಿ ತ್ರಿಪುರ ಎಂದರೆ ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಶರೀರ ತ್ರಯವೆಂದರ್ಥ
ಕೇವಲದೃಶಾ= ಶಿವನ ಪರವಾಗಿ ತೃತೀಯನೇತ್ರದಿಂದ ಎಂದರ್ಥ. ಆಚಾರ್ಯರ ಪರವಾಗಿ ಅದ್ವಿತೀಯವಾದ ಬ್ರಹ್ಮಜ್ಞಾನದಿಂದ ಎಂದರ್ಥ. 'ಶಿವಮದ್ವೈತಂ ಚತುರ್ಥಂ ಮನ್ಯಂತೇ' ಎಂದು ಉಪನಿಷತ್ತಿನಲ್ಲಿದೆ.

ನ ಧರ್ಮಃ ಸೌವರ್ಣೋ ನ ಪುರುಷಫಲೇಷು ಪ್ರವಣತಾ
ನ ಚೈವಾಹೋರಾತ್ರ ಸ್ಫುರದರಿಯುತಃ ಪಾರ್ಥಿವರಥಃ |
ಅಸಾಹಾಯ್ಯೇನೈವಂ ಸತಿ ವಿತತಪುರ್ಯಷ್ಟಕಜಯೇ
ಕಥಂ ತಂ ನ ಬ್ರೂಯಾನ್ನಿಗಮನಿಕುರಂಬಂ ಪರಶಿವಂ || ೧೧೩

(ಪ್ರಸಿದ್ಧ ಶಿವನು ಧನುರ್ಬಾಣಗಳೆ ಮೊದಲಾದ ಸಹಾಯಗಳಿಂದ ತ್ರಿಪುರವನ್ನು ಜಯಿಸಿದನು. ಆಚಾರ್ಯರಾದರೋ ಯಾವ ಸಹಾಯವೂ ಇಲ್ಲದೆ ಅಷ್ಟಪುರಗಳನ್ನು ಜಯಿಸಿದರೆಂದು ಈಗ ವರ್ಣಿಸಲಾಗುತ್ತದೆ.)

ಪ್ರಸಿದ್ಧ ಶಿವನಿಗಿರುವಂತೆ ಸುವರ್ಣಮಯವಾದ ಮೇರುವೆಂಬ ಧನಸ್ಸು ಇವರಿಗಿಲ್ಲ. ವಿಷ್ಣುವೆಂಬ ನಿಶಿತ ಬಾಣಾಗ್ರವೂ ಇಲ್ಲ. ಹಗಲುರಾತ್ರಿಗಳಲ್ಲಿ ಪ್ರಕಾಶಿಸುವ ಸೂರ್ಯಚಂದ್ರರೆಂಬ ಚಕ್ರಗಳುಳ್ಳ ಭೂಮಿಯ ರಥವೂ ಇಲ್ಲ.
ಆಚಾರ್ಯರ ಪರವಾಗಿ ಹೀಗೆ ಅರ್ಥ-

ಇವರು ಸಂನ್ಯಾಸಿಗಳಾದ್ದರಿಂದ ದ್ವಿಜ ವರ್ಣಕ್ಕೆ ಸಂಬಂಧಿಸಿದ ಯಜ್ಞೋಪವೀತಾದಿ ಧಾರಣ ಮುಂತಾದ ಧರ್ಮವಿಲ್ಲ. ಪುರುಷಾರ್ಥಗಳಲ್ಲಿ ಆಸಕ್ತಿ ಇಲ್ಲ. ಹಗಲೂರಾತ್ರಿಯೂ ಬಾಧಿಸುವ ಕಾಮ ಕ್ರೋಧಾದಿ ವೈರಿಗಳ ಸಂಬಂಧವಿರುವ ದೇಹರಥವಿಲ್ಲ. ಹೀಗೆ ಯಾರ ಸಹಾಯವೂ ಇಲ್ಲದೆ ಪುರ್ಯಷ್ಟಕವನ್ನು ಇವರು ಜಯಿಸಿದ್ದರಿಂದ ವೇದವು ಇವರನ್ನು ಪರಶಿವನೆಂದು ಹೇಗೆತಾನೇ ಹೇಳದೇ ಇದ್ದೀತು?

ಟಿಪ್ಪಣಿ:-ಪುರ್ಯಷ್ಟಕ- ಪ್ರಾಣಪಂಚಕ, ಜ್ಞಾನೇಂದ್ರಿಯ ಪಂಚಕ, ಕರ್ಮೇಂದ್ರಿಯ ಪಂಚಕ, ಅಂತಃಕರಣ, ಅವಿದ್ಯಾ, ಕಾಮ, ಕರ್ಮ ಮತ್ತು ಪೂರ್ವ ಸಂಸ್ಕಾರ.

ಧರ್ಮ =ಧನುಸ್ಸು ಮತ್ತು ವೈದಿಕ ಧರ್ಮ
ಪುರುಷ = ವಿಷ್ಣು ಮತ್ತು ಮನುಷ್ಯ
ಫಲ = ಬಾಣಾಗ್ರ ಮತ್ತು ಪ್ರಯೋಜನ
ಅರಿ = ಚಕ್ರ ಮತ್ತು ವೈರಿ.
ಪರಶಿವ = ಶಿವನಿಗಿಂತ ಉತ್ಕೃಷ್ಟನಾದವನು.

ದುಃಖಾಸಾರದುರಂತದುಷ್ಕೃತ ಘನಾಂ ದುಃಸಂಸೃತಿಪ್ರಾವೃಷಂ
ದುರ್ವಾರಾಮಿಹ ದಾರುಣಾಂ ಪರಿಹರನ್ದೂರಾದುದಾರಾಶಯಃ|
ಉಚ್ಚಂಡಪ್ರತಿಪಕ್ಷಪಂಡಿತಯಶೋನಾಲೀಕನಾಲಾಂಕುರ-
ಗ್ರಾಸೋ ಹಂಸಕುಲಾವತಂಸಪದಭಾಕ್ ಸನ್ಮಾನಸೇ ಕ್ರೀಡತಿ || ೧೧೪

ಹಂಸಕುಲದಲ್ಲಿ ಉತ್ತಮವಾದ ರಾಜಹಂಸವು ಶುದ್ಧವಾದ ಮಾನಸಸರಸ್ಸಿನಲ್ಲಿ ಕ್ರೀಡಿಸುವಂತೆ, ಹಂಸರೆಂಬ ಯತಿಗಳಲ್ಲಿ ಶ್ರೇಷ್ಠವಾದ ಪರಮಹಂಸ ಪದವಿಯಲ್ಲಿದ್ದ ಆಚಾರ್ಯರು ಸಜ್ಜನರಾದ ವಿದ್ವಾಂಸರ ಮನಸ್ಸಿನಲ್ಲಿ ಕ್ರೀಡಿಸುತ್ತಿದ್ದರು. ಆಚಾರ್ಯರೆಂಬ ಈ ರಾಜಹಂಸವು, ದುಃಖದ ಮಳೆಯನ್ನು ಸುರಿಸುತ್ತ ದುರಂತವಾದ ಪಾಪ ಕಾರ್ಯಗಳಿಂದ ನಿಬಿಡವೂ ಪಾಪಗಳೆಂಬ ಮೋಡವುಳ್ಳದ್ದೂ ದುರ್ವಾರವೂ ಭೀಕರವೂ ಆದ ಕೆಟ್ಟಸಂಸಾರ ವೆಂಬ ಮಳೆಗಾಲವನ್ನು ದೂರದಿಂದಲೇ ಪರಿಹರಿಸಿಕೊಂಡಿದ್ದಿತು. ಪ್ರತಿಪಕ್ಷಿಗಳಾದ ಉದ್ದಾಮಪಂಡಿತರ ಯಶಸ್ಸೆಂಬ ಕಮಲದ ಎಳೆಯದಂಟನ್ನು ತಿಂದುಹಾಕುತ್ತಿತ್ತು. (ಶಿಷ್ಯರ ಅಜ್ಞಾನವನ್ನು ಹೋಗಲಾಡಿಸ ಬೇಕೆಂಬ) ಉದಾರವಾದ ಆಶಯವುಳ್ಳದ್ದಾಗಿ, ಪ್ರಸಿದ್ಧ ಹಂಸವು ವಿಶಾಲವಾದ ಜಲಾಶಯವನ್ನು ಪ್ರೀತಿಸುವುದರಿಂದ ಉದಾರಾಶಯವಾದಂತೆ ಈ ರಾಜಹಂಸವೂ ಉದಾರಾಶಯವಾಗಿತ್ತು.

ಕ್ಷೀರಂ ಬ್ರಹ್ಮ ಜಗಚ್ಚ ನೀರಮುಭಯಂ ತದ್ಯೋಗಮಭ್ಯಾಗತಂ
ದುರ್ಭೇದಂ ತ್ವಿತರೇತರಂ ಚಿರತರಂ ಸಮ್ಯಗ್ವಿಭಕ್ತೀಕೃತಮ್ |
ಯೇನಾಶೇಷ ವಿಶೇಷದೋಷಲಹರೀಮಾಸೇದುಷೀಂ ಶೇಮುಷೀಂ
ಸೋಽಯಂ ಶೀಲವತಾಂ ಪುನಾತಿ ಪರಮೋ ಹಂಸೋ ದ್ವಿಜಾತ್ಯಗ್ರಣೀಃ ||

ಬ್ರಹ್ಮವೆಂಬ ಕ್ಷೀರವೂ ಜಗತ್ತೆಂಬ ನೀರೂ ಬಹು ಕಾಲದಿಂದ ಒಂದಕ್ಕೊಂದು ಕಲಬೆರಕೆಯಾಗಿ, ಯಾವುದು ಹಾಲು? ಯಾವುದು ನೀರು? ಎಂಬುದು ಜನರಿಗೆ ದುರ್ಬೋಧವಾಗಿತ್ತು. ದ್ವಿಜಾಗ್ರಣಿಗಳಾದ (ಪಕ್ಷಿಗಳಲ್ಲಿ ಉತ್ತಮವಾದ) ಶ್ರೀಶಂಕರಾಚಾರ್ಯರೆಂಬ ಪರಮಹಂಸವು (ರಾಜಹಂಸವು) ಹಾಲನ್ನೂ ನೀರನ್ನೂ ಸ್ಪಷ್ಟವಾಗಿ ವಿಭಾಗಮಾಡಿ ತೋರಿಸಿತು! (ಈ ನೀರಕ್ಷೀರವಿಭಾಗವು ಗೊತ್ತಾಗದೆ) ನಾನಾಕಲ್ಪನಾ ದೋಷಗಳಿಂದ ಕೂಡಿದ್ದ ಸಜ್ಜನರ ಬುದ್ಧಿಯನ್ನು ಈ ಪರಮಹಂಸವು ಸ್ವಚ್ಛಗೊಳಿಸಿತು.

ಟಿಪ್ಪಣಿ :-ಆತ್ಮ-ಅನಾತ್ಮ ಎಂಬುದನ್ನು ಚೆನ್ನಾಗಿ ವಿವೇಚಿಸಿ ಆತ್ಮಸ್ವರೂಪವನ್ನು ಆಚಾರ್ಯರು ಸ್ಫುಟವಾಗಿ ತಿಳಿಸಿ ಕೊಟ್ಟರೆಂದು ಅಭಿಪ್ರಾಯ.

ನೀರಕ್ಷೀರನಯೇನ ತಥ್ಯವಿತಥೇ ಸಂಪಿಂಡಿತೇ ಪಂಡಿತೈ-
ರ್ದುರ್ಬೋಧೇ ಸಕಲೈರ್ವಿವೇಚಯತಿ ಯಃ ಶ್ರೀಶಂಕರಾಖ್ಯೋ ಮುನಿಃ |

ಹಂಸೋಽಯಂ ಪರಮೋಽಸ್ತು ಯೇ ಪುನರಿಹಾಶಕ್ತಾಃ ಸಮಸ್ತಾಃ ಸ್ಥಿತಾಃ
ಜೃಂಭಾನ್ನಿಂಬಫಲಾಶನೈಕರಸಿಕಾನ್ ಕಾಕಾನಮೂನ್ಮನ್ಮಹೇ || ೧೧೬

ಲೋಕದಲ್ಲಿ ಸತ್ಯ-ಅನೃತಗಳು ಸಂಮಿಶ್ರವಾಗಿ ಯಾವುದು ಸತ್ಯ? ಯಾವುದು ಅನೃತ?-ಎಂಬುದು ಸಕಲ ಪಂಡಿತರಿಗೂ ತಿಳಿಯದೆ ಹೋಗಿತ್ತು. ಹೀಗಿರುವಾಗ ಇದು ಸತ್ಯ, ಇದು ಅನೃತ-ಎಂದು ನೀರಕ್ಷೀರನ್ಯಾಯದಿಂದ ಪ್ರತ್ಯೇಕಿಸಿ ತೋರಿಸಿ ಕೊಟ್ಟ ಶ್ರೀಶಂಕರಾಚಾರ್ಯರೆಂಬ ಯತಿಗಳೇ ಶ್ರೇಷ್ಠವಾದ ಪರಮಹಂಸವೆಂಬುದು ನಿಶ್ಚಿತ. ಹೀಗೆ ಪ್ರತ್ಯೇಕಿಸಲು ಅಸಮರ್ಥರಾದ ಪಂಡಿತರಿದ್ದಾರಲ್ಲ, ಅವರೆಲ್ಲರೂ ದೊಡ್ಡದಾಗಿ ಬಾಯ್ದೆರದು ಕಹಿಬೇವಿನ ಹಣ್ಣುಗಳನ್ನು ತಿಂದು ಆನಂದಿಸುವ ಕಾಗೆಗಳೆಂದು ನಾವು ತಿಳಿಯುತ್ತೇವೆ!

ದೃಷ್ಟಿಂ ಯಃ ಪ್ರಗುಣೀಕರೋತಿ ತಮಸಾ ಬಾಹ್ಯೇನ ಮಂದೀಕೃತಾಂ
ನಾಲೀಕಪ್ರಿಯತಾಂ ಪ್ರಯಾತಿ ಭಜತೇ ಮಿತ್ರತ್ವಮವ್ಯಾಹತಮ್ |
ವಿಶ್ವಸ್ಯೋಪಕೃತೇರ್ವಿಲುಂಪತಿ ಸುಹೃಚ್ಚಕ್ರಸ್ಯ ಚಾರ್ತಿಂ ಘನಾಂ
ಹಂಸಃ ಸೋಽಯಮಭಿವ್ಯನಕ್ತಿ ಮಹತಾಂ ಜಿಜ್ಞಾಸ್ಯಮರ್ಥಂ ಮುಹುಃ ||

ಪರಮಹಂಸರಾದ ಶ್ರೀಶಂಕರರು ನಿಜವಾಗಿ ಹಂಸವೇ-ಸೂರ್ಯನೇ-ಸೂರ್ಯನಂತೆಯೇ ಇದ್ದಾರೆ. ಹೇಗೆಂದರೆ, ಸೂರ್ಯನು ಬಾಹ್ಯವಾದ ಕತ್ತಲೆಯಿಂದ ಮಂಕಾಗಿರುವ ದೃಷ್ಟಿಶಕ್ತಿಯನ್ನು, ಕತ್ತಲೆಯನ್ನು ಹೋಗಲಾಡಿಸುವುದರ ಮೂಲಕ ಸರಿಯಾಗಿ ಕಾಣುವಂತೆ ಮಾಡುತ್ತಾನೆ. ಶ್ರೀಶಂಕರರು ಅಬಾಹ್ಯವಾದ ಎಂದರೆ ಆಂತರಿಕವಾದ ಲೋಭಮೋಹಾದಿಗಳಿಂದ ಮಂದವಾದ ವಿಚಾರಶಕ್ತಿಯನ್ನು ಆತ್ಮಬೋಧದಿಂದ ಉತ್ತಮಪಡಿಸುತ್ತಾರೆ. ಸೂರ್ಯನು ನಾಲೀಕಕ್ಕೆ-ಕಮಲಕ್ಕೆ ಪ್ರಿಯನಾಗಿದ್ದಾನೆ. ಆಚಾರ್ಯರು ನಾಲೀಕಕ್ಕೆ (ನ+ಅಲೀಕ) ಸತ್ಯಕ್ಕೆ ಪ್ರಿಯರಾಗಿದ್ದಾರೆ (ಸತ್ಯವನ್ನು ಪ್ರೀತಿಸುತ್ತಾರೆ). ಸೂರ್ಯನು ಮಿತ್ರನೆನಿಸಿದ್ದಾನೆ(ಮಿತ್ರ = ಸೂರ್ಯ). ಆಚಾರ್ಯರು ಲೋಕೋಪಕಾರವನ್ನು ಮಾಡಿ ಜಗತ್ತಿಗೆ ಮಿತ್ರರಾಗಿದ್ದಾರೆ. ಸೂರ್ಯನು ಗುಣಶಾಲಿಗಳಾದ ಚಕ್ರವಾಕಪಕ್ಷಿಗಳ ತೀವ್ರವಾದ ವಿರಹ ದುಃಖವನ್ನು ಹೋಗಲಾಡಿಸುತ್ತಾನೆ. ಭಗವತ್ಪಾದರಾದರೋ ಸುಹೃಚ್ಚಕ್ರಸ್ಯ = ಸಜ್ಜನಸಮೂಹದ ಸಂಸಾರದುಃಖವನ್ನು ಪರಿಹರಿಸುತ್ತಾರೆ. ಅಲ್ಲದೆ ಸೂರ್ಯನು ತಿಳಿಯಬೇಕಾದ ವಸ್ತುವನ್ನು ತನ್ನ ಬೆಳಕಿನಿಂದ ತೋರಿದರೆ, ಆಚಾರ್ಯರು ಜಿಜ್ಞಾಸ್ಯವಾದ ಬ್ರಹ್ಮಸ್ವರೂಪವನ್ನು ತಮ್ಮ ಉಪದೇಶವಾಣಿಯಿಂದ ತಿಳಿಸಿಕೊಡುತ್ತಾರೆ.

ಹಂಸಭಾವಮಧಿಗಮ್ಯ ಸುಧೀಂದ್ರೋ
ತಂ ಸಮರ್ಚತಿ ಚ ಸಂಸೃತಿಮುಕ್ತ್ಯೈ |

ಸಂಚಚಾಲ ಕಥಯನ್ನಿವ ಮೇಘ-
ಶ್ಚಂಚಲಾಚಪಲತಾಂ ವಿಷಯೇಷು || ೧೧೮

ಹೀಗೆ ಮಹಾಮೇಧಾವಿಗಳಾದ ಶ್ರೀಶಂಕರಾಚಾರ್ಯರು ಸಂನ್ಯಾಸವನ್ನು ಸ್ವೀಕರಿಸಿ ಪರಮಹಂಸರಾಗಿ ಸಂಸಾರದ ಬಿಡುಗಡೆಗೋಸ್ಕರ ಪರಮಾತ್ಮನ ಧ್ಯಾನದಲ್ಲಿ ತೊಡಗಲಾಗಿ, (ಮಳೆಗಾಲವು ಪ್ರಾರಂಭಿಸಿದ್ದರಿಂದ) ಮೋಡವು "ಇದೊ! ಮಿಂಚಿನಂತೆ ಈ ವಿಷಯ ಸುಖಗಳು ಕ್ಷಣಿಕವಾದವು!" ಎಂದು ಹೇಳುವುದಕ್ಕೋ ಎಂಬಂತೆ ಮೇಲೆದ್ದಿತು!

ಏಷ ನಃ ಸ್ಪೃಶತಿ ನಿಷ್ಠುರ ಪಾದೈ-
ಸ್ತತ್ತು ತಿಷ್ಠತು ವಿತೀರ್ಣಮವನ್ಯೈ |
ಅಸ್ಮದೀಯಮಪಿ ಪುಷ್ಪಮನೈಷೀ-
ದಿತ್ಯರೋಧಿ ನಲಿನೀಪತಿರಬ್ದೈಃ || ೧೧೯

ನಳಿನೀಪತಿಯಾದ ಸೂರ್ಯನನ್ನು ಮೇಘಗಳು ಆಕ್ರಮಿಸಿ ಮುತ್ತಿದವು. ಏಕೆಂದರೆ, ಈ ಸೂರ್ಯನು ತನ್ನ ನಿಷ್ಠುರವಾದ ಕಿರಣಗಳಿಂದ ಮತ್ತು ಪಾದಗಳಿಂದ ನಮ್ಮನ್ನು ಸ್ಪರ್ಶಿಸುತ್ತಿದ್ದಾನೆ. ಅದು ಹೇಗಾದರೂ ಇರಲಿ. ನಾವು ನಮ್ಮ (ಕಾಂತೆಯಾದ)ಭೂದೇವಿಗೆ ಕೊಡುವ ಪುಷ್ಪವನ್ನು(ಜಲವನ್ನು) ಈತನು ಹೀರಿಬಿಡುತ್ತಿದ್ದಾನೆ-ಎಂಬ ಕೋಪದಿಂದ ಮುತ್ತಿದವು!

ಟಿಪ್ಪಣಿ:- ಮೇಘವು ಸುರಿಸುವ ಜಲಕ್ಕೆ 'ಮೇಘಪುಷ್ಪ' ಎಂದು ಹೆಸರು. ನಮ್ಮ ಪ್ರಿಯೆಯಾದ ಭೂಮಿಗೆ ಕೊಟ್ಟ ಹೂವನ್ನು ಸೂರ್ಯನು ಹೀರಿ ಒಣಗಿಸಿಬಿಡುತ್ತಾನೆ -ಎಂಬ ಸಿಟ್ಟಿನಿಂದ ಆತನ ಮೇಲೆ ಆಕ್ರಮಣ ನಡೆಸಿದವೆಂದು ಉತ್ಪ್ರೇಕ್ಷೆ. ಸೂರ್ಯನಿಗೂ ಕಾಂತಾವಿಯೋಗವಾಗಲಿ - ಎಂಬ ಅಭಿಪ್ರಾಯವು 'ನಳಿನೀಪತಿ' ಶಬ್ದದಿಂದ ವ್ಯಂಗ್ಯವಾಗುತ್ತದೆ. ಪಾದ=ಕಿರಣ, ಕಾಲು.

ವಾರಿವಾಹನಿವಹೇ ಕ್ಷಣಲಕ್ಷ್ಯ-
ಶ್ರೀರರೋಚತ ಕಿಲಾಚಿರರೋಚಿಃ |
ಅಂತರಂಗಗತಬೋಧಕಲೇವ
ವ್ಯಾಪೃತಸ್ಯ ವಿದುಷೋ ವಿಷಯೇಷು || ೧೨೦

ಶಬ್ದಸ್ಪರ್ಶಾದಿವಿಷಯಗಳ ಚಿಂತನೆಯಲ್ಲಿ ತೊಡಗಿರುವ ವಿದ್ವಾಂಸನ ಹೃದಯದಲ್ಲಿ ಶಾಸ್ತ್ರವಿಚಾರದ ಜ್ಞಾನಕಲೆಯು ಥಟ್ಟನೆ ಸ್ಫುರಿಸುವಂತೆ, ಕ್ಷಣಕಾಲ ಶೋಭಿಸುವ ಮಿಂಚು ಮೇಘಮಂಡಲದಲ್ಲಿ ಆಗಾಗ ಹೊಳೆಯುತ್ತಿತ್ತು.

ಟಿಪ್ಪಣಿ: ಲೌಕಿಕ ವಿಷಯಗಳ ಚಿಂತನೆಯು ಮನಸ್ಸಿಗೆ ಮೋಡಕವಿದಂತೆ ಇರುತ್ತದೆ. ವಿದ್ವಾಂಸನಾದವನಿಗೆ ಆ ಸಮಯದಲ್ಲಿ ಯಾವುದಾದರೊಂದು ಶಾಸ್ತ್ರವಿಚಾರವು ಥಕ್ಕನೆ ಹೊಳೆಯುವುದುಂಟು. ಈ ಶ್ಲೋಕದಲ್ಲಿ ಸುಂದರವಾದ ಉಪಮಾನವಿದೆ.

ಕಿಂ ನು ವಿಷ್ಣುಪದಸಂಶ್ರಯತೋಽಬ್ದಾ
ಬ್ರಹ್ಮತಾಮುಪದಿಶಂತಿ ಸುಹೃದ್ಭ್ಯಃ |
ಯನ್ನಿಶಮ್ಯ ನಿಖಿಲಾಃ ಸ್ವನಮೇಷಾಂ
ಬಿಭ್ರತಿ ಸ್ಮ ಕಿಲ ನಿರ್ಭರಮೋದಾನ್ || ೧೨೧

ಮೋಡಗಳು ವಿಷ್ಣುಪದವನ್ನು = ಆಕಾಶವನ್ನು ಅಡರಿ ಗುಡುಗಿದಾಗ ಆ ಶಬ್ದವನ್ನು ಕೇಳಿ ಜನರು ಪರಮಾನಂದವನ್ನು ಹೊಂದಿದರು. ಇದೇಕಿರಬಹುದು? ಮೋಡಗಳು ವಿಷ್ಣುಪದವನ್ನು = ವಿಷ್ಣುವಿನ ಪದವನ್ನು ಎಂದರೆ ಪಾರಮಾರ್ಥಿಕವಾದ ಬ್ರಹ್ಮತ್ವವನ್ನು ಹೊಂದಿ ಬ್ರಹ್ಮತತ್ತ್ವವನ್ನು ಜನರಿಗೆ ಉಪದೇಶಿಸುತ್ತಿರಬಹುದೆ!

ಟಿಪ್ಪಣಿ:-'ವಿಷ್ಣುಪದ' ಶಬ್ದಕ್ಕಿರುವ ಎರಡನೆಯ ಅರ್ಥವನ್ನು ಶ್ಲೇಷದಿಂದ ಆಶ್ರಯಿಸಿ ಹೀಗೆ ವರ್ಣಿಸಲಾಗಿದೆ. ಗುಡುಗನ್ನು ಕೇಳಿ ಜನರು ಮಳೆಗಾಲ ಬಂದಿತೆಂದು ಹರ್ಷಿಸುವುದು ಸ್ವಾಭಾವಿಕ.

ದೇವರಾಜಮಪಿ ಮಾಂ ನ ಯಜಂತಿ
ಜ್ಞಾನಗರ್ವಭರಿತಾ ಯತಯೋಽಮೀ |
ಇತ್ಯಮರ್ಷವಶಗೇನ ಪಯೋದ-
ಸ್ಯಂದನೇನ ಧನುರಾವಿರಕಾರಿ || ೧೨೨

"ಈ ಯತಿಗಳು ಜ್ಞಾನವನ್ನು ಪಡೆದು ಗರ್ವಿಷ್ಠರಾದ್ದರಿಂದ ದೇವರಾಜನಾದ ನನ್ನನ್ನು ಪೂಜಿಸುವುದಿಲ್ಲ" ಎಂದು ಕುಪಿತನಾಗಿ ಮೇಘವಾಹನನಾದ ದೇವೇಂದ್ರನು ತನ್ನ ಧನುಸ್ಸನ್ನು ಹಿಡಿದೆತ್ತಿದನು.!

ಟಿಪ್ಪಣಿ :- ಯತಿಗಳಿಗೆ ಯಾವ ಮೂರ್ತಿಪೂಜೆಯೂ ವಿಹಿತವಾಗಿಲ್ಲ. ಮಳೆಗಾಲವಾದ್ದರಿಂದ ಕಾಮನಬಿಲ್ಲು ಕಾಣಿಸಿಕೊಂಡಿತು. ಕಾಮನ ಬಿಲ್ಲಿಗೆ ಇಂದ್ರಧನುಸ್ಸೆಂದು ಹೆಸರಿದೆ.

ಆವವುಃ ಕುಟಜಕಂದಲಬಾಣಾ-
ಸ್ಫೀತರೇಣುಕಲಿತಾ ವನವಾತ್ಯಾಃ |
ಸತ್ತ್ವಮಧ್ಯಮ ತಮೋಗುಣಮಿಶ್ರಾ
ಮಾಯಿಕಾ ಇವ ಜಗತ್ಸು ವಿಲಾಸಾಃ || ೧೨೩

ಕೊಡಸಿನ ಹೂ, ಚಿಗುರೆಲೆ, ನೀಲವರ್ಣದ ಗೋರಂಟಿಹೂ - ಇವುಗಳ ಪರಾಗಗಳಿಂದ ತುಂಬಿ ಅರಣ್ಯದಮೇಲೆ ಬೀಸಿಬಂದ ವಾಯುಗಳು, ಸತ್ತ್ವರಜಸ್ತಮೋಗುಣಮಿಶ್ರವಾದ ಮಾಯಾವಿಲಾಸಗಳೋ ಎಂಬಂತೆ ಜಗತ್ತಿನಲ್ಲಿ ಬೀಸಿದವು.

ಟಿಪ್ಪಣಿ :- ಕುಟಜ =ಕೊಡಸಿನ ಹೂ. ಇದು ಬೆಳ್ಳಗಿರುತ್ತದೆ. ಚಿಗುರೆಲೆಯು ಕೆಂಪಗಿರುತ್ತದೆ. ಬಾಣವೆಂಬ ಗೋರಂಟಿ ಹೂ ಕಪ್ಪು. ಸತ್ತ್ವಗುಣವು ಬಿಳುಪೆಂದೂ ರಜೋಗುಣವು ಕೆಂಪೆಂದೂ ತಮೋಗುಣವು ಕಪ್ಪೆಂದೂ ವರ್ಣನೆ ಇದೆ.

ಬಭ್ರುಮುಸ್ತಿಮಿರ ಸಚ್ಛವಿಗಾತ್ರಾ-
ಶ್ಚಿತ್ರಕಾರ್ಮುಕಭೃತಃ ಸ್ವರಘೋಷಾಃ |
ಧ್ಯಾನಯಜ್ಞಮಥನಾಯ ಯತೀನಾಂ
ವಿದ್ಯುದುಜ್ಜ್ವಲದೃಶೋ ಘನದೈತ್ಯಾಃ || ೧೨೪

ಯತಿಗಳ ಧ್ಯಾನಯಜ್ಞವನ್ನು ಕೆಡಿಸಬೇಕೆಂದು ಮೇಘಗಳೆಂಬ ದೈತ್ಯರು ಎಲ್ಲೆಲ್ಲಿಯೂ ಸುಳಿದಾಡಲಾರಂಭಿಸಿದರು! ಈ ದೈತ್ಯರಿಗೆ ಕತ್ತಲೆಯಂತೆ ಕಪ್ಪಾದ ದೇಹಗಳು! ಚಿತ್ರವರ್ಣದ ಇಂದ್ರಧನುಸ್ಸನ್ನು ಇವರು ಧರಿಸಿ ಗುಡುಗುಗಳೆಂಬ ಕಠೋರಶಬ್ದಗಳಿಂದ ಕೂಗುತ್ತಿದ್ದರು! ಈ ದೈತ್ಯರಿಗೆ ಮಿಂಚುಗಳೆಂಬ ಕೆಂಗಣ್ಣುಗಳಿದ್ದವು!

ಉತ್ಸಸರ್ಜುರಸಕೃಜ್ಜಲಧಾರಾ
ವಾರಿದಾ ಗಗನಧಾಮ ಪಿಧಾಯ |
ಶಂಕರೋ ಹೃದಯಮಾತ್ಮನಿ ಕೃತ್ವಾ
ಸಂಜಹಾರ ಸಕಲೇಂದ್ರಿಯವೃತ್ತೀಃ || ೧೨೫

ಈ ಪ್ರಕಾರವಾಗಿ ಮೋಡಗಳು ಗಗನ ತಳವನ್ನು ಆಚ್ಛಾದಿಸಿ ಜಲಧಾರೆಗಳನ್ನು ಮತ್ತೆ ಮತ್ತೆ ಸುರಿಸತೊಡಗಿದವು. ಧ್ಯಾನಸ್ಥರಾದ ಶ್ರೀಶಂಕರರು ತಮ್ಮ ಚಿತ್ತವನ್ನು ಆತ್ಮನಲ್ಲಿ ನೆಲೆನಿಲ್ಲಿಸಿ ಸಕಲೇಂದ್ರಿಯ ವ್ಯಾಪಾರಗಳನ್ನೂ ಬಿಗಿಹಿಡಿದರು.

ಮುಂದಿನ ಮೂರು ಶ್ಲೋಕಗಳಲ್ಲಿ ಆಚಾರ್ಯರ ಅಸಂಪ್ರಜ್ಞಾತ ಸಮಾಧಿಯನ್ನು ವರ್ಣಿಸಲಾಗಿದೆ-

ಶನೈಃ ಸಾಂತ್ವಾಲಾಪೈಃ ಸನಯಮುಪನೀತೋಪನಿಷದಾಂ
ಚಿರಾಯತ್ತಂ ತ್ಯಕ್ತ್ವಾ ಸಹಜಮಭಿಮಾನಂ ದೃಢತರಮ್ |
ತಮೇತ್ಯ ಪ್ರೇಯಾಂಸಂ ಸಪದಿ ಪರಹಂಸಂ ಪುನರಸಾ-
ವಧೀರಾ ಸಂಸ್ಪ್ರಷ್ಟುಂ ಕ್ವನು ಸಪದಿ ತದ್ಧೀರ್ಲಯಮಗಾತ್ || ೧೨೬

ಚಿರಕಾಲದಿಂದ ಬಂದು ತನ್ನಲ್ಲಿ ದೃಢವಾಗಿ ನೆಲೆಸಿದ್ದ ಸಹಜವಾದ ಲೋಕಾಭಿಮಾನವನ್ನು ಆಚಾರ್ಯರ ಧೀವೃತ್ತಿಯು ಪರಿತ್ಯಜಿಸಿತು. ಆಮೇಲೆ ಬ್ರಹ್ಮಸೂತ್ರಗಳಿಂದ ಯುಕ್ತಿಪೂರ್ವಕವಾಗಿ ಹೇಳಿದ ಉಪನಿಷತ್ತುಗಳ ಮಧುರೋಕ್ತಿಗಳಿಂದ ಸಂತೈಸಲ್ಪಟ್ಟು, ಉಪನಿಷತ್ಪ್ರತಿಪಾದ್ಯವೂ ತನಗೆ ಅತ್ಯಂತ ಪ್ರಿಯವೂ ಪರಹಂಸ ಸ್ವರೂಪವೂ ಆದ ಆತ್ಮನ ಬಳಿಗೆ ಹೋಯಿತು, ಆತ್ಮನನ್ನು ಸ್ಪರ್ಶಿಸಲು ಅಸಮರ್ಥವಾಗಿ ಧೀವೃತ್ತಿಯು ಎಲ್ಲಿಯೋ ಲಯವಾಯಿತು!

ಟಿಪ್ಪಣಿ :- ಅಸಂಪ್ರಜ್ಞಾತ ಸಮಾಧಿಯಲ್ಲಿ ಯಾವ ಚಿತ್ತವೃತ್ತಿಯೂ ಇರುವುದಿಲ್ಲ. ಅಲ್ಲದೆ ಯಾವ ಚಿತ್ತವೃತ್ತಿಯೂ ಆತ್ಮನನ್ನು ವಿಷಯೀಕರಿಸಲಾರದು. ಆತ್ಮನು ಮನಸ್ಸಿಗೆ ವಿಷಯನಲ್ಲ. ಅವನು ಯಾವಾಗಲೂ ವಿಷಯಿ. ಆತ್ಮನು ದೃಕ್ ಆಗಿರುತ್ತಾನೆಯೇ ಹೊರತು ದೃಶ್ಯನಾಗುವುದಿಲ್ಲ.

ಈ ಶ್ಲೋಕದಲ್ಲಿ ಒಂದು ಚಮತ್ಕಾರವುಂಟು. ಯಾವುದೋ ಕಾರಣದಿಂದ ಕಾಂತನ ವಿಷಯದಲ್ಲಿ ಬಿಗುಮಾನವನ್ನು ತಾಳಿದ ಕಾಂತೆಯು ಸಖಿಯರ ಸಾಂತ್ವನೋಕ್ತಿಗಳಿಂದ ಅನುನೀತಳಾಗಿ ತನ್ನ ಪ್ರಿಯನ ಬಳಿಗೆ ಬರುತ್ತಾಳೆ. ಕಡೆಯ ನಿಮಿಷದಲ್ಲಿ ಲಜ್ಜೆಯಿಂದ ಅವನನ್ನು ಆಲಂಗಿಸಲಾರದೆ ಮತ್ತೆ ಮರೆಯಾಗುತ್ತಾಳೆ - ಎಂಬ ಕಾಂತಾವೃತ್ತಾಂತವು ಇಲ್ಲಿ ವ್ಯಂಗ್ಯವಾಗಿ ತೋರುತ್ತದೆ. ಇದು ಸಮಾಸೋಕ್ತಿ ಎಂಬ ಅಲಂಕಾರ

ನ ಸೂರ್ಯೋ ನೈವೇಂದುಃ ಸ್ಫುರತಿ ನ ಚ ತಾರಾತತಿರಿಯಂ
ಕುತೋ ವಿದ್ಯುಲ್ಲೇಖಾ ಕಿಯದಿಹ ಕೃಶಾನೋರ್ವಿಲಸಿತಮ್ |
ನ ವಿದ್ಮೋ ರೋದಸ್ಯೌ ನ ಚ ಸಮಯಮಸ್ಮಿನ್ನಜಲದೇ
ಚಿದಾಕಾಶೇ ಸಾಂದ್ರಸ್ಸ್ವಸುಖರಸ ವರ್ಷ್ಮಣ್ಯವಿರತಮ್ || ೧೨೭

(ಮಳೆಗಾಲದ ಮೋಡತುಂಬಿದ ಆಕಾಶದಲ್ಲಿ ಸೂರ್ಯಚಂದ್ರಾದಿಗಳು ಪ್ರಕಾಶಿಸುತ್ತಿರಲಿಲ್ಲ) ಆದರೆ ಆಚಾರ್ಯರು ಸಾಕ್ಷಾತ್ಕರಿಸಿದ ಚಿದಾಕಾಶದಲ್ಲಿ ಮೋಡವೇನೋ ಇರಲಿಲ್ಲ. ಆದರೆ ಅಲ್ಲಿ ಸೂರ್ಯನಾಗಲಿ ಚಂದ್ರನಾಗಲಿ ಪ್ರಕಾಶಿಸುತ್ತಿರಲಿಲ್ಲ. ನಕ್ಷತ್ರ ಸಮೂಹವೂ ಇರಲಿಲ್ಲ. ಮಿಂಚಿನ ರೇಖೆಯೂ ಇರಲಿಲ್ಲ. ಇನ್ನು ಅಗ್ನಿಯ ಪ್ರಕಾಶವಿರುವುದುಂಟೆ? ಭೂಮಿ ಆಕಾಶಗಳೆಂಬುದು ಅಲ್ಲಿ ತೋರಲಿಲ್ಲ. ಕಾಲದ ಗಣನೆಯೂ ಇಲ್ಲ. ಆ ಚಿದಾಕಾಶವು ಘನವಾದ ಆತ್ಮನಂದವೆಂಬ ರಸಶರೀರ ವಾಗಿತ್ತು.

ತಾತ್ಪರ್ಯ :- ಅಸಂಪ್ರಜ್ಞಾತ ಸಮಾಧಿಯಲ್ಲಿ ಜಗತ್ತಿನ ಜ್ಞಾನವೇ ಇರುವುದಿಲ್ಲ ಎಂದು ಅಭಿಪ್ರಾಯ. ಅಜಲದೇ = ಮೋಡವಿಲ್ಲದ – ಅಜ್ಞಾನಲೇಶವೂ ಇಲ್ಲದ.

ಕಿಮಾದೇಯಂ ಹೇಯಂ ಕಿಮಿತಿ ಸಹಜಾನಂದಜಲಧಾ –
ವತಿಸ್ವಚ್ಛೇ ತುಚ್ಛೀಕೃತಸಕಲಮಾಯೇ ಪರಶಿವೇ |
ತದೇತಸ್ಮಿನ್ನೇವ ಸ್ವಮಹಿಮನಿ ವಿಶ್ರಾಮಪನಪದೇ
ಸ್ವತಃ ಸತ್ಯೇ ನಿತ್ಯೇ ರಹಸಿ ಪರಮೇ ಸೋಽಕೃತ ಕೃತೀ || ೧೨೮

ಸಹಜವಾದ ಆನಂದ ಸಾಗರವೂ ಅತಿಸ್ವಚ್ಛವೂ ಸಕಲ ಮಾಯಾ ರಹಿತವೂ ಆದ ಪರಶಿವನಲ್ಲಿ ತೆಗೆದುಕೊಳ್ಳಬೇಕಾದ್ದು ಯಾವುದು ? ತ್ಯಜಿಸ ಬೇಕಾದದ್ದು ಯಾವುದು ? (ಅದ್ವಿತೀಯ ವಸ್ತುವಿನಲ್ಲಿ ಅದಾವುದೂ ಇರುವುದಿಲ್ಲ). ಇಂತಹ ತನ್ನ ಮಹಿಮೆಯೂ ಆಶ್ಚರ್ಯಕಾರಿಯೂ ಸತ್ಯವೂ ನಿತ್ಯವೂ ಪರಮ ಜ್ಯೋತಿಯೂ ಆದ ತನ್ನಲ್ಲಿಯೇ ಧನ್ಯರಾದ ಆಚಾರ್ಯರು ಏಕಾಂತದಲ್ಲಿ ಗ್ರಾಹ್ಯವೂ ತ್ಯಾಜ್ಯವೂ ಇಲ್ಲವೆಂಬ ಅನುಸಂಧಾನವನ್ನು ಮಾಡಿಕೊಂಡರು.

ಟಿಪ್ಪಣಿ :- ತದೇತಸ್ಮಿನ್ ಎಂಬಲ್ಲಿರುವ 'ತತ್' ಎಂಬುದು 'ಅಕೃತ' ಎಂಬ ಕ್ರಿಯೆಗೆ ಕರ್ಮವಾಗಿದೆ.

ಪ್ರಾಪ ವಿಷ್ಣುಪದಭಾಗಪಿ ಮೇಘಃ
ಪ್ರಾವೃಡಾಗಮನತೋ ಮಲಿನತ್ವಮ್ ।
ವಿದ್ಯುದುಜ್ಜ್ವಲರುಚಾಽನುಸೃತಶ್ಚ
ಕೋಽಧ್ಯವನ್ಯಪಿ ಭಜೇನ್ನ ವಿರಾಗಮ್ ॥ ೧೨೯

ಆ ಮಳೆಗಾಲವು ಬಂದದ್ದರಿಂದ ಮೋಡವು ವಿಷ್ಣುಪದದಲ್ಲಿದ್ದರೂ (ಆಕಾಶದಲ್ಲಿದ್ದರೂ) ಮಲಿನತ್ವವನ್ನು - ಕಪ್ಪುಬಣ್ಣವನ್ನು ಹೊಂದಿತು. ಅಲ್ಲದೆ ವಿದ್ಯುತ್ ಎಂಬ ಸ್ತ್ರೀಯ ಉಜ್ಜ್ವಲಕಾಂತಿಯಿಂದ ಅನುಸೃತವಾಯಿತು. ಹೀಗಿರುವಾಗ ಭೂಮಿಯಲ್ಲಿರತಕ್ಕ ಯಾವನಾದರೂ ವೈರಾಗ್ಯವನ್ನು ಪಡೆದಾನೇ?

ಟಿಪ್ಪಣಿ:-ವಿಷ್ಣುಪದ = ವಿಷ್ಣುಲೋಕ ಮತ್ತು ಆಕಾಶ. ಅಧ್ಯವನಿ = ಭೂಮಿಯಲ್ಲಿ ಎಂದು ಅರ್ಥ. ಶ್ಲೋಕದ ಕಡೆಯ ಸಾಲಿನಲ್ಲಿ 'ಭಜೇತ' ಎಂದಿರ ಬೇಕು.

ಆಶಯೇ ಕಲುಷಿತೇ ಸಲಿಲಾನಾಂ
ಮಾನಸೋತ್ಕಹೃದಯಾಃ ಕಲಹಂಸಾಃ ।
ಕೋಽನ್ಯಥಾ ಭವತಿ ಜೀವನಲಿಪ್ಸು-
ರ್ನಾಶ್ರಯೇ ಭಜತಿ ಮಾನಸಚಿಂತಾಮ್ ॥ ೧೩೦

ನೀರಿಗೆ ಆಶ್ರಯವಾದ ಸರೋವರವು ಕಲುಷಿತವಾಗಲಾಗಿ ರಾಜಹಂಸಗಳು ಮಾನಸ ಸರೋವರಕ್ಕೆ ಹೋಗಲು ಉತ್ಸಾಹಯುಕ್ತವಾದವು. ಆಶ್ರಯಸ್ಥಾನವು ರೂಪಾಂತರವನ್ನು ಪಡೆದಾಗ ಜೀವನಕ್ಕಾಗಿ ಆಸೆಪಡತಕ್ಕ ಯಾವನು ತಾನೇ ಮಾನಸದಲ್ಲಿ ಚಿಂತೆಯನ್ನು ಪಡೆಯದಿದ್ದಾನು?

ಟಿಪ್ಪಣಿ :- ಮಾನಸ - ಮಾನಸ ಸರೋವರ ಮತ್ತು ಮನಸ್ಸು. ಜೀವನ - ಬದುಕು ಮತ್ತು ನೀರು.

ಅಭ್ರವರ್ತ್ಮನಿ ಪರಿಭ್ರಮಮಿಚ್ಛನ್
ಶುಭ್ರದೀಧಿತಿರದಭ್ರ ಪಯೋದೇ ।

ನ ಪ್ರಕಾಶನಮವಾಪ ಕಲಾವಾನ್
ಕಶ್ಚಕಾಸ್ತಿ ಮಲಿನಾಂಬರವಾಸೀ || ೧೩೧

ಬಹಳ ಮೋಡಗಳಿಂದ ತುಂಬಿದ ಆಕಾಶಮಾರ್ಗದಲ್ಲಿ ಸಂಚರಿಸಲು ಬಯಸಿದರೂ ಕಲಾವಂತನಾದ ಚಂದ್ರನಿಗೂ ಪ್ರಕಾಶವು ಪ್ರಾಪ್ತವಾಗಲಿಲ್ಲ. ಮಲಿನವಾದ ಅಂಬರವನ್ನು ಧರಿಸಿದ ಯಾವ ವಿದ್ಯಾವಂತನು ಪ್ರಕಾಶಪಡೆದಾನು?

ಟಿಪ್ಪಣಿ :- ಕಲಾ - ಚಂದ್ರನ ಕಲೆ ಮತ್ತು ವಿದ್ಯೆ. ಅಂಬರ - ಆಕಾಶ ಮತ್ತು ಬಟ್ಟೆ.

ಚಾತಕಾವಲಿರನಲ್ಪಪಿಪಾಸಾ
ಪ್ರಾಪ ತೃಪ್ತಿಮುದಕಸ್ಯ ಚಿರಾಯ |
ಪ್ರಾಪ್ನುಯಾದಮೃತಮಪ್ಯಭಿವಾಂಛನ್
ಕಾಲತೋ ಬತ ಘನಾಶ್ರಯಕಾರೀ || ೧೩೨

ಬಹಳ ಬಯಾರಿಕೆಯಿಂದ ತೊಳಲುತ್ತಿದ್ದ ಚಾತಕಪಕ್ಷಿಗಳ ಗುಂಪು ಬಹಳ ಕಾಲದಮೇಲೆ ನೀರಿನಿಂದ ತೃಪ್ತಿಯನ್ನು ಪಡೆಯಿತು. ಘನವನ್ನು - ಮೋಡವನ್ನು ಮತ್ತು ಘನನಾದ-ಮಹಾತ್ಮನನ್ನು ಆಶ್ರಯಿಸಿದವನು ಬಯಸಿದರೆ ಒಂದು ಕಾಲದಲ್ಲಿ ಅಮೃತವನ್ನು ಪಡೆದೇ ಪಡೆಯುತ್ತಾನೆ.

ಟಿಪ್ಪಣಿ :- ಘನ = ಮೋಡ; ಮಹಾತ್ಮ. ಅಮೃತ = ನೀರು; ದೇವಲೋಕದ ಅಮೃತ; ಮೋಕ್ಷ.

ಇತ್ಯುದೀರ್ಣಜಲವಾಹವಿನೀಲೇ
ಸ್ಫೀತವಾತ ಪರಿಧೂತತಮಾಲೇ |
ಪ್ರಾಣಭೃತ್ಪ್ರಚರಣ ಪ್ರತಿಕೂಲೇ
ನೀಡನೀಲಘನಶಾಲಿನಿ ಕಾಲೇ || ೧೩೩

ಅಗ್ರಹಾರಶತ ಸಂಭೃತ ಶೋಭೇ
ಸುಗ್ರಹಾಕ್ಷತುರಗಃ ಸ ಮಹಾತ್ಮಾ |
ಅಧ್ಯುವಾಸ ತಟಮಿಂದುಭವಾಯಾಃ
ಸುಧ್ಯುಪಾಸ್ಯಚರಣಂ ಗುರುಮರ್ಚನ್ || ೧೩೪

ಹೀಗೆ ಆ ಮಳೆಗಾಲವು ಮೇಲೆದ್ದ ಮೋಡಗಳಿಂದ ಕಪ್ಪಾಯಿತು. ಬಿರುಗಾಳಿಯು ತಮಾಲವೃಕ್ಷಗಳನ್ನು ಅಲ್ಲಾಡಿಸುತ್ತಿತ್ತು. ಪ್ರಾಣಿಗಳ ಸಂಚಾರಕ್ಕೆ ಆ ಕಾಲವು ತುಂಬ ಪ್ರತಿಕೂಲವಾಗಿತ್ತು. ಹಕ್ಕಿಯ ಗೂಡಿನ ಕತ್ತಲೆಯಂತೆ ನೀಲವರ್ಣದ ಮೋಡವು ತುಂಬಿ ಕೊಂಡಿತ್ತು. ಆಗ ನೂರಾರು ಅಗ್ರಹಾರಗಳಲ್ಲಿ (ವೇದಶಾಸ್ತ್ರಾಧ್ಯಯನಗಳಿಂದ) ಒಂದು

ವಿಶಿಷ್ಟವಾದ ಶೋಭೆಯುಂಟಾಗಿತ್ತು. ಆ ಸಮಯದಲ್ಲಿ ಮಹಾತ್ಮರಾದ ಶ್ರೀಶಂಕರರು ಇಂದ್ರಿಯಗಳೆಂಬ ಅಶ್ವಗಳನ್ನು ನಿಗ್ರಹಿಸಿದವರಾಗಿ, ನರ್ಮದಾನದಿಯ ದಡದಲ್ಲಿ ವಾಸಮಾಡುತ್ತಾ, ವಿದ್ವಜ್ಜನರು ಯಾರ ಪಾದಗಳನ್ನು ಸೇವಿಸುತ್ತಾರೋ ಅಂತಹ ಗುರುಗಳಾದ ಶ್ರೀಗೋವಿಂದ ಭಗವತ್ಪಾದರ ಸೇವೆಯಲ್ಲಿ ನಿರತರಾಗಿದ್ದರು.

ಟಿಪ್ಪಣಿ:- ಶ್ಲೋಕದಲ್ಲಿರುವ ಇಂದುಭವಾ ಶಬ್ದಕ್ಕೆ ಕೆಲವರು ನರ್ಮದಾನದಿಯೆಂದೂ ಕೆಲವರು ಅಲಕನಂದಾನದಿಯೆಂದೂ ಅರ್ಥಮಾಡಿದ್ದಾರೆ.

ತ್ರಸ್ತಮರ್ತ್ಯಗಣಮಸ್ತಮಿತಾಶಂ
ಹಸ್ತಿಹಸ್ತಪೃಥುಲೋದಕಧಾರಾಃ |
ಮುಂಚತಿ ಸ್ಮ ಸಮುದಂಚಿತ ವಿದ್ಯುತ್
ಪಂಚರಾತ್ರಮಹಿಶತ್ರುರಜಸ್ರಮ್ || ೧೩೫

ಆ ಸಮಯದಲ್ಲಿ ದೇವೇಂದ್ರನು ಒಂದು ಸಲ ಐದು ರಾತ್ರಿಗಳವರೆಗೂ ಸತತವಾಗಿ ಜಡಿಮಳೆಯನ್ನು ಸುರಿಸಿದನು. ಆನೆಯ ಸೊಂಡಲಿನ ಗಾತ್ರದ ವೃಷ್ಟಿಧಾರೆಗಳನ್ನು ಸುರಿಸುತ್ತಿರಲು, ದಿಕ್ಕುಗಳು ಯಾವುವೆಂಬುದೇ ತೋರುತ್ತಿರಲಿಲ್ಲ. ಜನರೆಲ್ಲರೂ ಹೆದರಿ ತತ್ತರಿಸಿ ಹೋದರು. ಮಿಂಚುಗಳು ಮಿಂಚುತ್ತಿದ್ದವು.

ತೀರಭೂರುಹತತೀರಪಕರ್ಷ-
ನ್ನಗ್ರಹಾರನಿಕರೈಃ ಸಹ ಪೂರಃ |
ಆಯಯಾವಧಿಕಘೋಷಮನಲ್ಪಃ
ಕಲ್ಪವಾರ್ಧಿಲಹರೀವ ತಟಿನ್ಯಾಃ || ೧೩೬

ನದಿಯ ಮಹಾಪೂರವು ತೀರದಲ್ಲಿದ್ದ ಅಗ್ರಹಾರದ ವಸ್ತುಗಳನ್ನು ತೇಲಿಸಿ ಕೊಂಡು, ದಡದ ವೃಕ್ಷಗಳನ್ನುರುಳಿಸಿ ಸೆಳೆದುಕೊಂಡು ಭೋರ್ಗರೆಯುತ್ತ ಪ್ರಳಯಕಾಲದ ಸಮುದ್ರವೋ ಎಂಬಂತೆ ರಭಸದಿಂದ ಉಕ್ಕಿಹರಿಯುತ್ತ ಬಂದಿತು.

ಘೋಷವಾರಿಭರಭೀರುನರಾಣಾಂ
ಘೋಷಮೇಷ ಕಲುಷಂ ಸ ನಿಶಮ್ಯ |
ದೈಶಿಕಂ ಧ್ರುವಸಮಾಧಿವಿಧಾನಂ
ವೀಕ್ಷ್ಯ ಚ ಕ್ಷಣಮಭೂದವಿವಕ್ಷುಃ || ೧೩೭

ಭೋರ್ಗರೆಯುವ ಪ್ರವಾಹದಿಂದ ಹೆದರಿಹೋದ ಜನರು ಗೋಳಿಡುವ ಹಾಹಾಕಾರವನ್ನು ಶ್ರೀಶಂಕರರು ಆಲಿಸಿದರು. ಇತ್ತಲಾಗಿ ಅವರ ಗುರುಗಳಾದ ಗೋವಿಂದ ಭಗವತ್ಪಾದರು

ನಿಶ್ಚಲವಾಗಿ ಸಮಾಧಿಮಗ್ನರಾಗಿರುವುದನ್ನೂ ನೋಡಿ ಮಾತನಾಡಲಾರಗೆ ಸ್ವಲ್ಪ ಹೊತ್ತು ಸುಮ್ಮನಿದ್ದರು.

ಸೋಽಭಿಮಂತ್ರ್ಯ ಕರಕಂ ತ್ವರಮಾಣ-
ಸ್ತತ್ಪ್ರವಾಹ ಪುರತಃ ಪ್ರಣಿಧಾಯ |
ಕೃತ್ಸ್ನಮತ್ರ ಸಮವೇಶಯದಂಭಃ
ಕುಂಭಸಂಭವ ಇವ ಸ್ವಕರೇಽಬ್ಧಿಮ್ || ೧೩೮

ಅನಂತರ ತ್ವರೆಯಿಂದ ತಮ್ಮ ಕಮಂಡಲುವನ್ನು ಅಭಿಮಂತ್ರಿಸಿ, ನದೀಪ್ರವಾಹದೆದುರಿಗೆ ತಂದಿಟ್ಟರು. ನದಿಯ ಜಲವೆಲ್ಲವೂ ಕಮಂಡಲುವಿನೊಳಗೆ ಸೇರಿ ಅಡಗಿಹೋಯಿತು! ಅಗಸ್ತ್ಯಮುನಿಗಳು ಸಮುದ್ರವನ್ನು ತಮ್ಮ ಬೊಗಸೆಯಿಂದ ಕುಡಿದಂತಾಯಿತು!

ತಂ ನಿಶಮ್ಯ ನಿಖಿಲೈರಪಿ ಲೋಕೈ-
ರುತ್ಥಿತೋಽಸ್ಯ ಗುರುರುಕ್ತಮುದಂತಮ್ |
ಯೋಗಸಿದ್ಧಿಮಚಿರಾದಯಮಾಪೇ-
ತ್ಯಭ್ಯಪದ್ಯತತರಾಂ ಪರಿತೋಷಮ್ || ೧೩೯

ಗುರುಗಳಾದ ಶ್ರೀಗೋವಿಂದಭಗವತ್ಪಾದರು ಸಮಾಧಿಯಿಂದ ಎಚ್ಚೆತ್ತಮೇಲೆ, ಸಮಸ್ತ ಜನರೂ ಬಂದು ಈ ವೃತ್ತಾಂತವನ್ನು ಅವರಿಗೆ ನಿವೇದಿಸಿದರು. ಅದನ್ನು ಕೇಳಿ, ಶ್ರೀಶಂಕರರು ಬಹುಬೇಗನೆ ಯೋಗ ಸಿದ್ಧಿಯನ್ನು ಪಡೆದರೆಂದು ಅವರಿಗೆ ಪರಮಾನಂದ ವಾಯಿತು.

ಧಾತ್ರಮುಖ್ಯಮಮುಮಾಹ ಕಿಯದ್ಭಿ-
ರ್ವಾಸರೈರ್ಗತಘನೇ ಗಗನೇ ಸಃ |
ಪಶ್ಯ ಸೌಮ್ಯ ಶರದಾ ವಿಮಲಂ ಖಂ
ವಿದ್ಯಯೇವ ವಿಶದಂ ಪರತತ್ತ್ವಮ್ || ೧೪೦

ಕೆಲವು ದಿನಗಳು ಕಳೆದಮೇಲೆ ಮೋಡಗಳು ಸರಿದವು. ಆಕಾಶವು ಸ್ವಚ್ಛವಾಯಿತು. ಆಚಾರ್ಯರು ತಮ್ಮ ಶಿಷ್ಯೋತ್ತಮರಾದ ಶ್ರೀಶಂಕರರನ್ನು ಕರೆದು ಹೀಗೆಂದರು. "ಸೌಮ್ಯ, ಶರತ್ಕಾಲವು ಬಂದದ್ದರಿಂದ ಆಕಾಶವು ಎಷ್ಟು ನಿರ್ಮಲವಾಗಿದೆ ನೋಡು! ಜ್ಞಾನದಿಂದ ವಿಶದವಾಗಿ ಸ್ಫುರಿಸುವ ಪರತತ್ತ್ವದಂತಿದೆ!

ವಾರಿದಾ ಯತಿವರಾಶ್ಚ ಸುಪಾಥೋ-
ಧಾರಯಾ ಸದುಪದೇಶಗಿರಾ ಚ |

ಓಷಧೀರನುಚರಾಂಶ್ಚ ಕೃತಾರ್ಥೀ-
ಕೃತ್ಯ ಸಂಪ್ರತಿ ಹಿ ಯಾಂತಿ ಯಥೇಚ್ಛಮ್ ॥ ೧೪೧

ಈಗ ಮೇಘಗಳು ಒಳ್ಳೆಯ ವೃಷ್ಟಿಧಾರೆಗಳಿಂದ ಸಸ್ಯಗಳನ್ನು ತೃಪ್ತಿಗೊಳಿಸಿ ಯಥೇಚ್ಛೆಯಂತೆ ಹೊರಟು ಹೋಗುತ್ತಿವೆ. ಹಾಗೆಯೇ ಯತೀಶ್ವರರು ತತ್ತ್ವೋಪದೇಶದಿಂದ ಶಿಷ್ಯರನ್ನು ಕೃತಾರ್ಥರನ್ನಾಗಿ ಮಾಡಿ ಇಚ್ಛೆಬಂದ ಕಡೆಗೆ ಹೊರಟು ಹೋಗುತ್ತಾರೆ.

ಟಿಪ್ಪಣಿ:-ಚಾತುರ್ಮಾಸ್ಯದಲ್ಲಿ ಯತಿಗಳು ಒಂದೇ ಸ್ಥಳದಲ್ಲಿದ್ದು ಅಲ್ಲಿರುವ ಜನರಿಗೆ ಉಪದೇಶಮಾಡಿ, ಅನಂತರ ಪರಿವ್ರಾಜಕರಾಗಿ ಹೊರಟುಹೋಗುತ್ತಾರೆ ಎಂಬುದನ್ನು ಈ ಮಾತು ಸೂಚಿಸುತ್ತದೆ.

ಶೀತದೀಧಿತಿರಸೌ ಜಲಮುಗ್ಭಿ-
ರ್ಮುಕ್ತಪದ್ಧತಿರತಿಸ್ಫುಟಕಾಂತಿಃ ।
ಭಾತಿ ತತ್ತ್ವವಿದುಷಾಮಿವ ಬೋಧೋ
ಮಾಯಿಕಾವರಣ ನಿರ್ಗಮಶುಭ್ರಃ ॥ ೧೪೨

ಮೋಡಗಳಿಂದ ಬಿಡುಗಡೆಹೊಂದಿದ ಆ ಚಂದ್ರನು ಶುಭ್ರಕಾಂತಿಯನ್ನು ಬೀರುತ್ತ ಬೆಳಗುತ್ತಿದ್ದಾನೆ. ಅಜ್ಞಾನದ ಆವರಣವು ಹೋದಮೇಲೆ ತತ್ತ್ವಜ್ಞಾನಿಗಳ ಬೋಧದಂತೆ ಶುಭ್ರನಾಗಿದ್ದಾನೆ!

ವಾರಿವಾಹನಿವಹೇ ಪ್ರತಿಯಾತೇ
ಭಾಂತಿ ಭಾನಿ ಶುಚಿಭಾನಿ ಶುಭಾನಿ ।
ಮತ್ಸರಾದಿವಿಗಮೇ ಸತಿ ಮೈತ್ರೀ-
ಪೂರ್ವಕಾ ಇವ ಗುಣಾಃ ಪರಿಶುದ್ಧಾಃ ॥ ೧೪೩

ಮೇಘರಾಶಿಯು ಚದರಿಹೋದ್ದರಿಂದ ಶುಭಕರನಕ್ಷತ್ರಗಳು ಶುಭ್ರಕಾಂತಿಯಿಂದ ಹೊಳೆಯುತ್ತಿವೆ. ಮಾತ್ಸರ್ಯಾದಿದುರ್ಗುಣಗಳು ನಾಶವಾದಮೆಲೆ ಮೈತ್ರಿಯೇ ಮೊದಲಾದ ಸದ್ಗುಣಗಳು ಎದ್ದುತೋರುವಂತೆ ಈ ನಕ್ಷತ್ರಗಳಿವೆ!

ಮತ್ಸ್ಯಕಚ್ಛಪಮಯೀ ಧೃತಚಕ್ರಾ
ಗರ್ಭವರ್ತಿಭುವನಾ ನಲಿನಾಢ್ಯಾ ।
ಶ್ರೀಯುತಾಽದ್ಯ ತಟಿನೀ ಪರಹಂಸೈಃ
ಸೇವ್ಯತೇ ಮಧುರಿಪೋರಿವ ಮೂರ್ತಿಃ ॥ ೧೪೪

(ನದಿಯಲ್ಲಿ ಪ್ರವಾಹವು ಇಳಿದುಹೋದ್ದರಿಂದ) ಮೀನು ಆಮೆಗಳಿಂದ ಕೂಡಿರುವುದು ಕಾಣುತ್ತಿದೆ. ಅಲ್ಲಲ್ಲಿ ನೀರಿನ ಸುಳಿ ಇದೆ. ನದಿಯು ತಳದಲ್ಲಿ ನೀರಿನಿಂದ ಕೂಡಿ ಕಮಲಗಳಿಂದ

ರಂಜಿಸುತ್ತಿದೆ. ಶೋಭಾಯುಕ್ತವಾಗಿ ಶ್ರೇಷ್ಠ ಹಂಸ ಪಕ್ಷಿಗಳಿಂದ ಸೇವಿತವಾದ ಈ ನದಿಯು ಶ್ರೀಮನ್ನಾರಾಯಣನ ಮೂರ್ತಿಯಂತೆ ಕಂಗೊಳಿಸುತ್ತಿದೆ! ಹೇಗೆಂದರೆ, ಶ್ರೀಮನ್ನಾರಾಯಣನ ಮೂರ್ತಿಯೂ ಮತ್ಸ್ಯಕೂರ್ಮಾವತಾರಗಳನ್ನು ತಾಳಿದ್ದು. ಚಕ್ರಧಾರಿಯಾಗಿ ತನ್ನ ಉದರದಲ್ಲಿ(ಚತುರ್ದಶ) ಭುವನಗಳನ್ನು ಅಡಗಿಸಿಕೊಂಡು ನಾಭಿಕಮಲದಿಂದ ಸಹಿತವಾಗಿರುತ್ತದೆ. ಅದು ಲಕ್ಷ್ಮೀದೇವಿಯಿಂದ ಸಹಿತವೂ ಪರಮಹಂಸರಿಂದ ಸೇವಿತವೂ ಆದದ್ದು.

ಟಿಪ್ಪಣಿ:-ಚಕ್ರ = ನೀರಿನ ಸುಳಿ, ಸುದರ್ಶನ ಚಕ್ರ. ಭುವನ = ನೀರು, ಲೋಕ. ಶ್ರೀ = ಶೋಭೆ, ಲಕ್ಷ್ಮೀದೇವಿ. ಪರಹಂಸ = ಉತ್ತಮ ಹಂಸಪಕ್ಷಿ, ಪರಮಹಂಸ.

ನೀರದಾಃ ಸುಚಿರ ಸಂಭೃತಮೇತೇ
ಜೀವನಂ ದ್ವಿಜಗಣಾಯ ವಿತೀರ್ಯ |
ತ್ಯಕ್ತವಿದ್ಯುದಬಲಾಃ ಪರಿಶುದ್ಧಾಃ
ಪ್ರವ್ರಜಂತಿ ಘನವೀಥಿಗೃಹೇಭ್ಯಃ || ೧೪೫

ಮೋಡಗಳು ಬಹಳ ಕಾಲದಿಂದ ಸಂಗ್ರಹಿಸಿಕೊಂಡಿದ್ದ ಜಲವನ್ನು ಪಕ್ಷಿಸಮೂಹಗಳಿಗೆ ಮತ್ತು ದ್ವಿಜರಿಗೆ ಅರ್ಪಿಸಿ, ಮಿಂಚುಗಳೆಂಬ ಸ್ತ್ರೀಯರನ್ನುಪರಿತ್ಯಜಿಸಿ, (ನೀರಿಲ್ಲದ್ದರಿಂದ) ಬಿಳಿಯ ಬಣ್ಣವುಳ್ಳವುಗಳಾಗಿ, ಮೇಘಗಳು ಸಂಚರಿಸುವ ಆಕಾಶಮಾರ್ಗಗಳಿಂದ ಹೊರಟುಹೋಗುತ್ತಿವೆ. (ಇಲ್ಲಿಉಪಮಾರೂಪಕಾದಿಗಳಿಂದ ಅರ್ಥಾಂತರವು ತೋರುತ್ತದೆ. ಹೇಗೆಂದರೆ). ನೀರದಾಃ = ಹಲ್ಲುಗಳಿಲ್ಲದ ವೃದ್ಧರು ಬಹಳಕಾಲದಿಂದ ಸಂಗ್ರಹಿಸಿದ ಜೀವನೋಪಯುಕ್ತವಾದ ಧನಧಾನ್ಯವನ್ನು ಅರ್ಹರಾದ ದ್ವಿಜರಿಗೆ ದಾನಮಾಡಿ ಮಿಂಚಿನಂತೆ ಹೊಳೆಯುವ ಚಂಚಲ ಸ್ವಭಾವದ ಹೆಂಡಿರನ್ನು ಪರಿತ್ಯಜಿಸಿ, ಕಾಮಕ್ರೋಧಾದಿಗಳಿಲ್ಲದೆ ಚಿತ್ತಶುದ್ಧಿಯನ್ನು ಪಡೆದು ದಟ್ಟವಾದ ಸಾಲುಗಳಲ್ಲಿರುವ ಮನೆಗಳಿಂದ ಹೊರಟು ಪರಿವ್ರಾಜಕರಾಗುತ್ತಾರೆ.

ಟಿಪ್ಪಣಿ:- ನೀರದ = ಮೋಡ, ಹಲ್ಲುಗಳಿಲ್ಲದ ವೃದ್ಧ. ದ್ವಿಜ = ಪಕ್ಷಿ, ಬ್ರಾಹ್ಮಣ.

ಚಂದ್ರಿಕಾಭಸಿತ ಚರ್ಚಿತಗಾತ್ರ-
ಶ್ಚಂದ್ರಮಂಡಲ ಕಮಂಡಲು ಶೋಭೀ |
ಬಂಧುಜೀವ ಕುಸುಮೋತ್ಕರ ಶಾಟೀ-
ಸಂವೃತೋ ಯತಿರಿವಾಯಮನೇಹಾಃ || ೧೪೬

ಈ ಶರತ್ಕಾಲವು ಬೆಳದಿಂಗಳೆಂಬ ಭಸ್ಮವನ್ನು ದೇಹಕ್ಕೆ ಬಳಿದುಕೊಂಡು, ಚಂದ್ರಮಂಡಲವೆಂಬ ಕಮಂಡಲುವಿನಿಂದ ಶೋಭಿಸುತ್ತ ಕೆಂಪು ಬಿಂದಿಗೆ ಹೂವುಗಳ ರಾಶಿಯೆಂಬ ಕಾವೀ ಶಾಟಿಯನ್ನು ಸುತ್ತಿಕೊಂಡು ಸಂನ್ಯಾಸಿಯಂತೆ ಕಾಣುತ್ತದೆ!

ಹಂಸಸಂಗವಿಲಸದ್ವಿರಜಸ್ಕಂ
ಕ್ಷೋಭವರ್ಜಿತಮಪಹ್ನುತಪಂಕಮ್ |
ವಾರಿ ಸಾರಸಮತೀವ ಗಭೀರಂ
ತಾವಕಂ ಮನ ಇವ ಪ್ರತಿಭಾತಿ || ೧೪೭

ಸೌಮ್ಯ - ಶಂಕರ, ಈ ಸರೋವರದ ಆಳವಾದ ನೀರು ಹಂಸಗಳ ಸಂಘದಿಂದ ಪ್ರಕಾಶಿಸುತ್ತ ರಜೋರಹಿತವಾಗಿದೆ. ಏರಿಳಿತವಿಲ್ಲದೆ ಕೆಸರಿನಿಂದ ರಹಿತವಾಗಿದೆ. ಗಭೀರವಾದ ಈ ಜಗತ್ತು ನಿನ್ನ ಮನಸ್ಸಿನಂತಿದೆ. ಹೇಗೆಂದರೆ, ಯತಿಗಳ ಸಹವಾಸದಿಂದ ನಿನ್ನ ಮನಸ್ಸು ರಜೋಗುಣ ರಹಿತವಾಗಿದೆ. ಉದ್ವೇಗ ರಹಿತವಾಗಿ ಕಾಮ ಕ್ರೋಧಾದಿಗಳ ಕೊಳೆಯಿಂದ ಮುಕ್ತವಾಗಿದೆ. ಬ್ರಹ್ಮ ಚಿಂತನೆಯಲ್ಲಿ ಗಭೀರವಾಗಿ ನೆಲೆಸಿದೆ.

ಶಾರದಾಂಬುಧರಜಾಲಪರೀತಂ
ಭ್ರಾಜತೇ ಗಗನಮುಜ್ವಲಭಾನು |
ಲಿಪ್ತಚಂದನರಜಃ ಸಮುದಂಚ-
ತ್ಕೌಸ್ತುಭಂ ಮುರರಿಪೋರಿವ ವಕ್ಷಃ || ೧೪೮

ಶರತ್ಕಾಲದ ಮೋಡಗಳಿಂದ ಕೂಡಿ ಪ್ರಕಾಶಮಾನನಾದ ಸೂರ್ಯನಿಂದ ಸಹಿತವಾದ ಗಗನ ತಳವು, ಶ್ರೀಗಂಧದಿಂದ ಲಿಪ್ತವಾಗಿ ಕೌಸ್ತುಭಮಣಿಯಿಂದ ಸಹಿತವಾದ ವಿಷ್ಣುವಿನ ವಕ್ಷಃಸ್ಥಳದಂತಿದೆ.

ಪಂಕಜಾನಿ ಸಮುದೂಢ ಹರೀಣಿ
ಪ್ರೋದ್ಗತಾನಿ ವಿಕಚಾನಿ ಕನಂತಿ |
ಸೌಮ್ಯ ಯೋಗಕಲಯೇವ ವಿಫುಲ್ಲಾ-
ನ್ಯುನ್ಮುಖಾನಿ ಹೃದಯಾನಿ ಮುನೀನಾಮ್ || ೧೪೯

ಸೌಮ್ಯ, ಸೂರ್ಯರಶ್ಮಿಗಳಿಂದ ಊರ್ಧ್ವ ಮುಖವಾಗಿ ಅರಳಿ ಮೇಲೆದ್ದ ಕಮಲಗಳು ಯೋಗವಿದ್ಯೆಯಿಂದ ಅರಳಿದ ಮುನಿಗಳ ಹೃದಯಗಳಂತೆ ಶೋಭಿಸುತ್ತಿವೆ. (ಹರಿ=ಕಿರಣ)

ರೇಣುಭಸ್ಮಕಲಿತೈರ್ದಲಶಾಟೀ-
ಸಂವೃತೈಃ ಕುಸುಮಲಿಡ್ಜಪಮಾಲೈಃ |
ವೃಂತ ಕುಡ್ಮಲಕಮಂಡಲುಯುಕ್ತೈ-
ರ್ಧಾರ್ಯತೇ ಕ್ಷಿತಿರುಹೈರ್ಯತಿ ತೌಲ್ಯಮ್ || ೧೫೦

ಈ ಮರಗಳಾದರೋ ಪುಷ್ಪರೇಣುಗಳೆಂಬ ಭಸ್ಮಗಳನ್ನು ಧರಿಸಿ ಎಲೆಗಳೆಂಬ ಶಾಟೀವಸ್ತ್ರಗಳನ್ನು ಹೊದೆದು ದುಂಬಿಗಳೆಂಬ ಜಪಮಾಲೆಗಳನ್ನು ಹಿಡಿದು ತೊಟ್ಟುಗಳಲ್ಲಿ ಮೊಗ್ಗುಗಳೆಂಬ ಕಮಂಡಲುಗಳಿಂದ ಸಹಿತವಾಗಿವೆ. ಇವುಗಳಲ್ಲಿ ಸಂನ್ಯಾಸಿಗಳ ಸಾದೃಶ್ಯವು ಇದೆ.

ಧಾರಣಾದಿಭಿರಪಿ ಶ್ರವಣಾದ್ಯೈ-
ರ್ವಾರ್ಷಿಕಾಣಿ ದಿವಸಾನ್ಯಪನೀಯ |
ಪಾದ ಪದ್ಮರಜಸಾದ್ಯ ಪುನಂತಃ
ಸಂಚರಂತಿ ಹಿ ಜಗಂತಿ ಮಹಾಂತಃ || ೧೫೧

ಈಗ ಮಹಾತ್ಮರು ಧಾರಣ ಧ್ಯಾನಾದಿಗಳಿಂದಲೂ, ಶ್ರವಣ ಮನನಾದಿಗಳಿಂದಲೂ ಮಳೆಗಾಲದ ದಿನಗಳನ್ನು ಕಳೆದು ತಮ್ಮ ಪಾದಪದ್ಮಗಳ ರಜಸ್ಸಿನಿಂದ ಭೂಮಿಯನ್ನು ಪವಿತ್ರಗೊಳಿಸುತ್ತ ಸಂಚರಿಸುತ್ತಿದ್ದಾರಲ್ಲವೆ ?

ತದ್ಭವಾನ್ ವ್ರಜತು ವೇದಕದಂಬಾ-
ದುದ್ಭವಾಂ ಭವದವಾಂಬುದಮಾಲಾಮ್ |
ತತ್ತ್ವಪದ್ಧತಿಮಭಿಜ್ಞ ವಿವೇಕ್ತುಂ
ಸತ್ವರಂ ಹರಪುರೀಮವಿವಿಕ್ತಾಮ್ || ೧೫೨

ಹೇ ವೇದಸಾರಜ್ಞ - ಶಂಕರ, ವೇದರಾಶಿಯಿಂದ ಉದ್ಭವಿಸಿದ ತತ್ತ್ವಜ್ಞಾನ ಪದ್ಧತಿಯು ಸಂಸಾರವೆಂಬ ಕಾಳ್ಗಿಚ್ಚನ್ನು ಆರಿಸತಕ್ಕ ಮೇಘ ಪಂಕ್ತಿಯಾಗಿದೆ. ಅದು (ಕರ್ಮಕಾಂಡದೊಡನೆ) ಸಂಮಿಶ್ರವಾಗಿಬಿಟ್ಟದೆ. ಆದ್ದರಿಂದ ಆ ಪದ್ಧತಿಯನ್ನು ಕರ್ಮಕಾಂಡದಿಂದ ಪೃಥಕ್ಕರಿಸುವುದಕ್ಕಾಗಿ ಅವಿವಿಕ್ತವೆನಿಸಿರುವ ಕಾಶೀನಗರಕ್ಕೆ ಶೀಘ್ರವಾಗಿ ಪ್ರಯಾಣ ಮಾಡು.

ಅತ್ರ ಕೃಷ್ಣಮುನಿನಾ ಕಥಿತಂ ಮೇ
ಪುತ್ರ ತಚ್ಛೃಣು ಪುರಾ ತುಹಿನಾದ್ರೌ |
ವೃತ್ರಶತ್ರುಮುಖದೈವತಜುಷ್ಟಂ
ಸತ್ರಮತ್ರಿಮುನಿಕರ್ತೃಕಮಾಸ || ೧೫೩

ಸಂಸದಿ ಶ್ರುತಿಶಿರೋಽರ್ಥಮುದಾರಂ
ಶಂಸತಿ ಸ್ಮ ಸ ಪರಾಶರಸೂನುಃ |
ಇತ್ಯಪೃಚ್ಛಮಹಮತ್ರಭವಂತಂ
ಸತ್ಯವಾಚಮಭಿಯುಕ್ತತಮಂ ತಮ್ || ೧೫೪

ವತ್ಸ - ಶಂಕರ, ಈ ವಿಷಯವಾಗಿ ಕೃಷ್ಣದ್ವೈಪಾಯನ ಮುನಿಗಳು ನನಗೆ ಒಂದು ಮಾತನ್ನು ಹೇಳಿದ್ದಾರೆ. ಅದನ್ನು ಕೇಳು. ಹಿಂದೆ ಹಿಮಾಲಯದ ತಪ್ಪಲಿನಲ್ಲಿ ಅತ್ರಿಮುನಿಗಳು ಒಂದು ಯಾಗವನ್ನು ನಡೆಸಿದರು. ಅಲ್ಲಿ ದೇವೇಂದ್ರನೇ ಮೊದಲಾದ ದೇವತೆಗಳು ಉಪಸ್ಥಿತರಾಗಿದ್ದರು. ಆಗ ಪರಾಶರಪುತ್ರರಾದ ಆ ವೇದವ್ಯಾಸರು ಸಭೆಯಲ್ಲಿ ಉದಾತ್ತವಾದ ಉಪನಿಷದರ್ಥವನ್ನು ವಿವರಿಸಿ ಹೇಳಿದರು. ಆಗ ನಾನು ಪ್ರಾಮಾಣಿಕರೂ ಸತ್ಯವನ್ನೇ ಆಡತಕ್ಕವರೂ ಆದ ಆ ಪೂಜ್ಯರನ್ನು ಕುರಿತು ಈ ರೀತಿ ಕೇಳಿದೆನು.

ಆರ್ಯ ವೇದನಿಕರಃ ಪ್ರವಿಭಕ್ತೋ
ಭಾರತಂ ಕೃತಮಕಾರಿ ಪುರಾಣಮ್ ।
ಯೋಗಶಾಸ್ತ್ರಮಪಿ ಸಮ್ಯಗಭಾಷಿ
ಬ್ರಹ್ಮಸೂತ್ರಮಪಿ ಸೂತ್ರಿತಮಾಸೀತ್ ॥ ೧೫೫

ಏನೆಂದರೆ, "ಪೂಜ್ಯರೆ, ನೀವು ವೇದರಾಶಿಯನ್ನು ವಿಭಾಗಮಾಡಿದ್ದೀರಿ. ಭಾರತವನ್ನು ರಚಿಸಿದಿರಿ. ಪುರಾಣವನ್ನು ಬರೆದಿರಿ. ಯೋಗಶಾಸ್ತ್ರಕ್ಕೆ ಸೊಗಸಾದ ಭಾಷ್ಯವನ್ನು ರಚಿಸಿದಿರಿ. ಮತ್ತು ಬ್ರಹ್ಮಸೂತ್ರಗಳನ್ನೂ ಸೂತ್ರಿಸಿದ್ದೀರಿ.

ಅತ್ರ ಕೇಚಿದಿಹ ವಿಪ್ರತಿಪನ್ನಾಃ
ಕಲ್ಪಯಂತಿ ಹಿ ಯಥಾಯಥಮರ್ಥಾನ್ ।
ಅನ್ಯಥಾಗ್ರಹಣನಿಗ್ರಹದಕ್ಷಂ
ಭಾಷ್ಯಮಸ್ಯ ಭಗವನ್ ಕರಣೀಯಮ್ ॥ ೧೫೬

ಆದರೆ ಈ ಬ್ರಹ್ಮಸೂತ್ರದ ವಿಷಯದಲ್ಲಿ ಕೆಲವರು ವಿಭಿನ್ನ ಅಭಿಪ್ರಾಯಗಳನ್ನು ತಳೆದು ತಮಗೆ ತೋರಿದಂತೆ ಅರ್ಥಗಳನ್ನು ಕಲ್ಪಿಸುತ್ತಿದ್ದಾರೆ. ಆದ್ದರಿಂದ, ಹೇ ಭಗವನ್, ತಪ್ಪಾಗಿ ತಿಳಿದುಕೊಂಡವರ ಅಜ್ಞಾನವನ್ನು ನಿಗ್ರಹಿಸಲು ಸಮರ್ಥವಾದ ಸೂತ್ರಭಾಷ್ಯವನ್ನು ನೀವು ರಚಿಸ ಬೇಕು." ಎಂದೆನು.

ಮದ್ವಚಃ ಸ ಚ ನಿಶಮ್ಯ ಸಭಾಯಾಂ
ವಿದ್ವದಗ್ರಸರ ವಾಚಮವೋಚತ್ ।
ಪೂರ್ವಮೇವ ದಿವಿಷದ್ಭಿರುದೀರ್ಣಃ
ಪಾರ್ವತೀಪತಿಸದಸ್ಯಯಮರ್ಥಃ ॥ ೧೫೭

ವಿದ್ವದ್ವರೇಣ್ಯ - ಶಂಕರ, ನನ್ನ ಈ ಮಾತನ್ನು ಕೇಳಿ ಅವರು ಸಭಾಮಧ್ಯದಲ್ಲಿ ಹೀಗೆಂದರು. "ಈ ವಿಷಯವನ್ನು ದೇವತೆಗಳು ಪರಮೇಶ್ವರನ ಸಭೆಯಲ್ಲಿ ಹಿಂದೆಯೇ ಹೇಳಿದ್ದರು.

ವತ್ಸಂ ತಂ ಶೃಣು ಸಮಸ್ತವಿದೇಕೋ
ಮತ್ಸಮಸ್ತವ ಭವಿಷ್ಯತಿ ಶಿಷ್ಯಃ |
ಕುಂಭ ಏವ ಸರಿತಃ ಸಕಲಂ ಯಃ
ಸಂಹರಿಷ್ಯತಿ ಮಹೋಲ್ಬಣಮಂಭಃ || ೧೫೮

"ವತ್ಸ- ಆ ಮಾತನ್ನು ಕೇಳು. "ನನಗೆ ಸಮಾನನೂ ಸರ್ವಜ್ಞನೂ ಆದ ಒಬ್ಬನು ನಿನಗೆ ಶಿಶ್ಯನಾಗುವನು. ಉಗ್ರವಾಗಿ ಹರಿದು ಬರುವ ಸಮಸ್ತ ನದೀ ಜಲವನ್ನೂ ಆತನು ತನ್ನ ಕಮಂಡಲುವಿನಲ್ಲೇ ಅಡಗಿಸಿ ಬಿಡುವನು. (ಅವನು ಯರೆಂಬುದಕ್ಕೆ ಅದೇ ಗುರುತು.)

ದುರ್ಮತಾನಿ ನಿರಸಿಷ್ಯತಿ ಸೋಽಯಂ
ಶರ್ಮದಾಯಿ ಚ ಕರಿಷ್ಯತಿ ಭಾಷ್ಯಮ್ |
ಕೀರ್ತಯಿಷ್ಯತಿ ಯಶಸ್ತವ ಲೋಕಃ
ಕಾರ್ತಿಕೇಂದುಕರ ಕೌತುಕಿ ಯೇನ || ೧೫೯

ಆತನು ದುರ್ಮತಗಳೆಲ್ಲವನ್ನೂ ಖಂಡಿಸುವನು. ಸುಖಪ್ರದವಾದ ಭಾಷ್ಯವನ್ನು ರಚಿಸುವನು. ಆತನು ದೆಸೆಯಿಂದ ಕಾರ್ತಿಕ ಮಾಸದ ಶರಚ್ಚಂದ್ರನ ಕಿರಣದಂತೆ ಶುಭ್ರವಾದ ನಿನ್ನ ಕೀರ್ತಿಯನ್ನು ಹಾಡಿ ಹೊಗಳುವರು."

ಇತ್ಯುದೀರ್ಯ ಮುನಿರಾಟ್ ಸ ವನಾಂತೇ
ಪತ್ಯುರಾಪ ಸುಗಿರಿಂ ಗಿರಿಜಾಯಾಃ |
ತನ್ಮುಖಾಚ್ಛ್ರುತಮಶೇಷಮಿದಾನೀಂ
ಸನ್ಮುನಿಪ್ರಿಯ ಮಯಾ ತ್ವಯಿ ದೃಷ್ಟಮ್ || ೧೬೦

ಹೀಗೆ ಆ ಮುನೀಶ್ವರರು ವನಮಧ್ಯದಲ್ಲಿ ತಿಳಿಸಿ ಪಾರ್ವತೀ ಪತಿಯ ಕೈಲಾಸ ಪರ್ವತಕ್ಕೆ ಹೊರಟು ಹೋದರು. ವ್ಯಾಸಾದಿಮುನಿಗಳಿಗೆ ಪ್ರಿಯನಾದ ಶಂಕರ, ಅವರ ಬಾಯಿಂದ ಏನೇನನ್ನು ಕೇಳಿದ್ದೆನೋ ಅದೆಲ್ಲವೂ ನಿನ್ನಲ್ಲಿ ಕಂಡುಬಂದಿದೆ.

ಸ ತ್ವಮುತ್ತಮಪುಮಾನಸಿ ಕಶ್ಚಿತ್
ತತ್ತ್ವವಿತ್ಪ್ರವರ ನಾನ್ಯಸಮಾನಃ |
ತದ್ ಯತಸ್ವ ನಿರವದ್ಯ ನಿಬಂಧೈಃ
ಸದ್ಯ ಏವ ಜಗದುದ್ಧರಣಾಯ || ೧೬೧

ತತ್ತ್ವಜ್ಞಾನಿಗಳಲ್ಲಿ ಶ್ರೇಷ್ಠನಾದ ನೀನು ಉತ್ತಮಪುರುಷನಾಗಿದ್ದೀಯೆ. ನಿನಗೆ ಸಮಾನನಾದವನು ಇನ್ನು ಯಾವನೂ ಇಲ್ಲ. ಆದ್ದರಿಂದ ಪರಿಶುದ್ಧವಾದ ಗ್ರಂಥಗಳನ್ನು ರಚಿಸಿ ಜಗತ್ತಿನ ಉದ್ಧಾರಕ್ಕಾಗಿ ಕೊಡಲೇ ಉದ್ಯುಕ್ತನಾಗು.

ಗಚ್ಛ ವತ್ಸ ನಗರಂ ಶಶಿಮೌಲೇಃ
ಸ್ವಚ್ಛ ದೇವತಟಿನೀಕಮನೀಯಮ್ ।
ತಾವತಾ ಪರಮನುಗ್ರಹಮಾದ್ಯಾ
ದೇವತಾ ತವ ಕರಿಷ್ಯತಿ ತಸ್ಮಿನ್ ॥ ೧೬೨

ವತ್ಸ, ಪರಮೇಶ್ವರನ ನಗರವೆಂದು ಪ್ರಸಿದ್ಧವಾದ ಕಾಶಿಗೆ ಹೋಗು. ಸ್ವಚ್ಛವಾದ ದೇವಗಂಗಾನದಿಯಿಂದ ಪವಿತ್ರವಾದ ನಗರವದು. ನೀನು ಹೋದರೆ ಸಾಕು. ಜಗದಾದಿ ದೇವನಾದ ಪರಶಿವನು ನಿನಗೆ ಪರಮಾನುಗ್ರಹವನ್ನು ಮಾಡುವನು."

ಏವಮೇನಮನುಶಾಸ್ಯ ದಯಾಲುಃ
ಪಾವಯನ್ನಿಜದೃಶಾ ವಿಸಸರ್ಜ ।
ಭಾವತಃ ಸ್ವಚರಣಾಂಬುಜ ಸೇವಾ-
ಮೇವ ಶಶ್ವದಭಿಕಾಮಯಮಾನಮ್ ॥ ೧೬೩

ಹೀಗೆ ಹೇಳಿ ದಯಾಳುಗಳಾದ ಗೋವಿಂದ ಭಗವತ್ಪಾದರು ತಮ್ಮ ಕರುಣಾದೃಷ್ಟಿಯಿಂದ ಶ್ರೀಶಂಕರರನ್ನು ಪಾವನಗೊಳಿಸುತ್ತಾ ಬೀಳ್ಕೊಂಡರು. ಶ್ರೀಶಂಕರರಿಗಾದರೋ ಗುರುಗಳ ಪಾದಕಮಲವನ್ನು ಸೇವಿಸುತ್ತ ಅಲ್ಲಿಯೇ ಇರಬೇಕೆಂದು ಮನಸ್ಸಿತ್ತು.

ಪಂಕಜಪ್ರತಿಭಟಂ ಪದಯುಗ್ಮಂ
ಶಂಕರೋಽಸ್ಯ ನಿರಗಾದಸಹಿಷ್ಣುಃ ।
ತದ್ವಿಯೋಗಮಭಿವಂದ್ಯ ಕಥಂಚಿ-
ತ್ತದ್ವಿಲೋಕನಮಯನ್ ಹೃದಯಾಬ್ಜೇ ॥ ೧೬೪

ಶ್ರೀಗೋವಿಂದ ಗುರುಗಳ ಪದ್ಮ ಸದೃಶವಾದ ಚರಣಯುಗಳಕ್ಕೆ ಅಭಿವಂದಿಸಿ, ಅವರ ವಿರಹವನ್ನು ಸಹಿಸಲಾಗದಿದ್ದರೂ ತಮ್ಮ ಹೃದಯಕಮಲದಲ್ಲಿ ಅವರನ್ನೇ ಕಾಣುತ್ತ ಶ್ರೀಶಂಕರರು ಹೇಗೋ ಆಶ್ರಮದಿಂದ ತೆರಳಿದರು.

ಪ್ರಾಪ ತಾಪಸವರಃ ಸ ಹಿ ಕಾಶೀಂ
ನೀಪಕಾನನ ಪರೀತಸಮೀಪಾಮ್ ।

ಆಪಗಾನಿಕಟಹಾಟಕಚಂಚ-
ದ್ಯೂಪಪಂಕ್ತಿಸಮುದಂಚಿತ ಶೋಭಾಮ್ || ೧೬೫

ಸಮೀಪದಲ್ಲಿದ್ದ ಕದಂಬ ವೃಕ್ಷಗಳ ಕಾನನದಿಂದ ಸುಂದರವಾಗಿಯೂ ಗಂಗಾನದಿಯ ದಡದಲ್ಲಿದ್ದ ಸುವರ್ಣಮಯಯೂಪಸ್ತಂಭಗಳಿಂದ ಶೋಭಿಸುತ್ತಲೂ ಇದ್ದ ಕಾಶೀನಗರಕ್ಕೆ ತಾಪಸೋತ್ತಮರಾದ ಶ್ರೀಶಂಕರರು ಹೋಗಿ ಸೇರಿದರು.

ಸಂದದರ್ಶ ಸ ಭಗೀರಥ ತಪ್ತಾ-
ಮಂದತೀವ್ರತಪಸಃ ಫಲಭೂತಾಮ್ |
ಯೋಗಿರಾಡುಚಿತ ತೀರನಿಕುಂಜಾಂ
ಭೋಗಿಭೂಷಣ ಜಟಾತಟ ಭೂಷಾಮ್ || ೧೬೬

ಅಲ್ಲಿ ಆ ಯೋಗೀಶ್ವರರು ಭಾಗೀರಥೀನದಿಯನ್ನು ವೀಕ್ಷಿಸಿದರು. ಭಗೀರಥನ ಕಠೋರತಪಸ್ಸಿಗೆ ಫಲರೂಪವಾಗಿ ಹರಿದು ಬಂದ ನದಿಯದು. ಅದರ ತೀರದಲ್ಲಿ ಮನೋಹರವಾಗಿ ಗಿಡದ ಪೊದೆಗಳು ಬೆಳೆದಿದ್ದವು. ಸರ್ಪಭೂಷಣನಾದ ಪರಮೇಶ್ವರನ ಜಟಾತಟಕ್ಕೆ ಭೂಷಣವಾದದ್ದು ಆ ಗಂಗಾನದಿ.

ವಿಷ್ಣುಪಾದನಖರಾಜ್ಯನನಾದ್ವಾ
ಶಂಭು ಮೌಲಿ ಶಶಿಸಂಗಮನಾದ್ವಾ |
ಯಾ ಹಿಮಾದ್ರಿ ಶಿಖರಾತ್ಪತನಾದ್ವಾ
ಸ್ಫಾಟಿಕೋಪಮಜಲಾ ಪ್ರತಿಭಾತಿ || ೧೬೭

ಸ್ಫಟಿಕೋಪಮವಾದ ತಿಳಿನೀರಿನಿಂದ ಶೋಭಿಸುತ್ತಿದ್ದ ಗಂಗಾನದಿಯ ಜಲದ ಶುಭ್ರತೆಯು ಆ ನದಿಯು ವಿಷ್ಣುಪಾದಾಂಗುಷ್ಠದಿಂದ ಜನಿಸಿದ್ದರಿಂದ ಬಂದಿರಬಹುದು! ಅಥವಾ ಶಿವಶಿರಸ್ಸಿನಲ್ಲಿದ್ದ ಶಶಿಯ ಸಹವಾಸದಿಂದ ಬಂದಿರಬೇಕು! (ಧವಳ) ಹಿಮಗಿರಿಯ ಶಿಖರದಿಂದ ಹರಿದುಬಂದ ನಿಮಿತ್ತವಾಗಿಯಾದರೂ ಇರಬಹುದು!

ಗಾಯತೀವ ಕಲಷಟ್ಪದ ನಾದೈ-
ರ್ನೃತ್ಯತೀವ ಪವನೋಚ್ಚಲಿತಾಬ್ಜೈಃ |
ಮುಂಚತೀವ ಹಸಿತಂ ಸಿತಫೇನೈಃ
ಶ್ಲಿಷ್ಯತೀವ ಚಪಲೋರ್ಮಿಕರೈರ್ಯಾ || ೧೬೮

(ಅಲ್ಲಿಹಾರಾಡುತ್ತಿದ್ದ) ದುಂಬಿಗಳ ಇಂಚರವನ್ನು ಕೇಳಿದಾಗ ಗಂಗಾನದಿಯು ಹಾಡುತ್ತಿರುವಂತೆಯೂ ತಂಗಾಳಿಯಿಂದ ತಾವರೆಗಳು ಅಲ್ಲಾಡುವುದನ್ನು ಕಂಡಾಗ ಆ ನದಿಯು

ನರ್ತಿಸುತ್ತಿರುವಂತೆಯೂ ಬಿಳಿಯ ನೊರೆಗಳನ್ನು ವೀಕ್ಷಿಸಿದರೆ ನದಿಯು ನಗುತ್ತಿರುವಂತೆಯೂ ಹರಡುತ್ತಿರುವ ತೆರೆಗಳೆಂಬ ಕೈಗಳಿಂದ ಅಲಂಗಿಸಿ ಕೊಳ್ಳುತ್ತಿರುವಂತೆಯೂ ಕಾಣಿಸುತ್ತಿತ್ತು!

ಶ್ಯಾಮಲಾ ಕ್ವಚಿದಪಾಂಗಮಯೂಖೈ
ಶ್ಚಿತ್ರಿತಾ ಕ್ವಚನ ಭೂಷಣಭಾಭಿಃ |
ಪಾಟಲಾ ಕುಚತಟೀಗಲಿತೈರ್ಯಾ
ಕುಂಕುಮೈಃ ಕ್ವಚನ ದಿವ್ಯವಧೂನಾಮ್ || ೧೬೯

(ಸ್ನಾನ ಮಾಡುತ್ತಿದ್ದ)ದೇವತಾಸ್ತ್ರೀಯರ ಕಟಾಕ್ಷವೀಕ್ಷಣೆಗಳಿಂದ ಭಾಗಿರಥಿಯು ಕೆಲವೆಡೆ ಶ್ಯಾಮಲವರ್ಣೆಯಾಗಿಯೂ ಅವರ ಭೂಷಣಗಳ ಕಾಂತಿಯಿಂದ ಕೆಲವೆಡೆ ಚಿತ್ರವರ್ಣೆಯಾಗಿಯೂ ಆ ಸ್ತ್ರೀಯರ ಕುಚತಟಗಳಿಂದುದುರಿತ ಕುಂಕುಮಗಳಿಂದ ಕೆಲವೆಡೆ ರಕ್ತವರ್ಣೆಯಾಗಿಯೂ ರಂಜಿಸುತ್ತಿದ್ದಳು!

ಸೋಽವಗಾಹ್ಯ ಸಲಿಲಂ ಸುರಸಿಂಧೋ
ರುತ್ತತಾರ ಶಿತಿಕಂಠಜಟಾಭ್ಯಃ |
ಜಾಹ್ನವೀಸಲಿಲ ವೇಗಹೃತಸ್ತ-
ದ್ಯೋಗ ಪುಣ್ಯ ಪರಿಪೂರ್ಣ ಇವೇಂದುಃ || ೧೭೦

ಗಂಗೆಯು ಶಿವಜಟೆಯಿಂದ ಹೊರಟು ವೇಗವಾಗಿ ಹರಿದುಬರುವಾಗ ಜಟೆಯಲ್ಲಿದ್ದ ಚಂದ್ರನು ಪ್ರವಾಹದಲ್ಲಿ ಸಿಕ್ಕಿತೇಲಿಬಂದಿರಬೇಕು! ಶಿವನ ಮತ್ತು ಗಂಗೆಯ ಸ್ಪರ್ಶದಿಂದ ಅವನು ಪೂರ್ಣತೆಯನ್ನು ಪಡೆದಿರಬೇಕು. ಶ್ರೀಶಂಕರರು ನದಿಯಲ್ಲಿ ಮುಳುಗಿ ಸ್ನಾನಮಾಡಿ ಮೇಲೆದ್ದಾಗ ಆ ಪೂರ್ಣಚಂದ್ರನೇ ಮೇಲಕ್ಕೆ ಎದ್ದನೋ ಎಂಬಂತೆ ಕಾಣಿಸಿದರು !

ಸ್ವರ್ಣದೀಜಲಕಣಾಹಿತಶೋಭಾ
ಮೂರ್ತಿರಸ್ಯ ಸುತರಾಂ ವಿಲಲಾಸ |
ಚಂದ್ರಪಾದಗಲದಂಬುಕಣಾಂಕಾ
ಪುತ್ರಿಕಾ ಶಶಿಶಿಲಾರಚಿತೇವ || ೧೭೧

(ನದಿಯಲ್ಲಿ ಮುಳುಗಿ ಮೇಲೆದ್ದ) ಶ್ರೀಶಂಕರರ ಮೂರ್ತಿಯು ಆ ದೇವನದಿಯ ಜಲಬಿಂದುಗಳಿಂದ ರಂಜಿತವಾಗಿತ್ತು. ಆ ಮೂರ್ತಿಯು ಚಂದ್ರಕಿರಣಗಳಿಂದ ಸ್ರವಿಸುವ ಜಲಕಣಗಳಿಂದ ಕೂಡಿದ ಚಂದ್ರಕಾಂತ ಶಿಲೆಯ ಪ್ರತಿಮಯೋ ಎಂಬಂತೆ ರಮಣೀಯವಾಗಿ ಶೋಭಿಸಿತು. !

ವಿಶ್ವೇಶಶ್ಚರಣಯುಗಂ ಪ್ರಣಮ್ಯ ಭಕ್ತ್ಯಾ
ಹರ್ಯಾದ್ಯೈಸ್ತ್ರಿದಶವರ್ಯೈಃ ಸಮರ್ಚಿತಸ್ಯ |
ಸೋಽನ್ಯೈಷೀತ್ಪ್ರಯತಮನಾ ಜಗತ್ಪವಿತ್ರೇ
ಕ್ಷೇತ್ರೇಽ ಸಾವಿಹ ಸಮಯಂ ಕಿಯಂತಮಾರ್ಯಃ || ೧೭೨

ಅನಂತರ ಪೂಜ್ಯರಾದ ಶ್ರೀಶಂಕರರು ವಿಷ್ಣುವೇ ಮೊದಲಾದ ದೇವಶ್ರೇಷ್ಠರಿಂದ ಪೂಜಿತನಾದ ಶ್ರೀವಿಶ್ವನಾಥನನ್ನು ಸಂದರ್ಶಿಸಿ ಆತನ ಚರಣಯುಗಳಕ್ಕೆ ಭಕ್ತಿಯಿಂದ ನಮಸ್ಕರಿಸಿ, ಜಿತೇಂದ್ರಿಯರಾಗಿ ಜಗತ್ಪವಿತ್ರವಾದ ಆ ಕಾಶೀಕ್ಷೇತ್ರದಲ್ಲಿ ನೆಲೆಸಿ ಕೆಲವು ಸಮಯವನ್ನು ಕಳೆದರು.

ಇತಿ ಶ್ರೀಮಾಧವೀಯೇ ತತ್ಸುಖಾಶ್ರಮನಿವಾಸಗಃ |
ಸಂಕ್ಷೇಪಶಂಕರಜಯೇ ಸರ್ಗೋಽಯಂ ಪಂಚಮೋಽಭವತ್ ||

ಇಲ್ಲಿಗೆ ಶ್ರೀಮಾಧವೀಯ ಸಂಕ್ಷೇಪ ಶಂಕರ ವಿಜಯದಲ್ಲಿ ಶ್ರೀಶಂಕರರಿಗೆ ಆನಂದ ಪ್ರದವಾದ ಸಂನ್ಯಾಸಾಶ್ರಮದ ಸ್ಥಿತಿಯನ್ನು ವರ್ಣಿಸುವ ಐದನೆಯ ಸರ್ಗವು ಸಮಾಪ್ತವಾಯಿತು.

ಷಷ್ಠಃ ಸರ್ಗಃ
ಆತ್ಮ ವಿದ್ಯಾಪ್ರತಿಷ್ಠಾ

ಸನಂದನನೇ ಮೊದಲಾದ ಶಿಷ್ಯರ ಸಂಗ್ರಹ. ಪರಶಿವನು ಚಂಡಾಲ ವೇಷದಲ್ಲಿ ಬಂದು ಆಚಾರ್ಯರಿಗೆ ದರ್ಶನವನ್ನೀಯುವುದು. ಆಚಾರ್ಯರಿಂದ ಪ್ರಸ್ಥಾನತ್ರಯಭಾಷ್ಯ, ಉಪದೇಶ ಸಾಹಸ್ರಿ-ಮುಂತಾದ ಗ್ರಂಥಗಳ ರಚನೆ. ಸನಂದನನಿಗೆ ಪದ್ಮಪಾದನೆಂದು ನಾಮಕರಣ. ಪಾಶುಪತಾದಿ ಮತಗಳ ಖಂಡನೆ. ಭಗವತ್ಪಾದರಚಿತ ಗ್ರಂಥಗಳ ಸ್ತುತಿ.

ಅಥಾಽಽಗಮದ್ಬ್ರಾಹ್ಮಣಸೂನುರಾದರಾ-
ದಧೀತವೇದೋ ದಲಯನ್ ಸ್ವಭಾಸಾ |
ತೇಜಾಂಸಿ ಕಶ್ಚಿತ್ಸರಸೀರುಹಾಕ್ಷೋ
ದಿದೃಕ್ಷಮಾಣೋ ಕಿಲ ದೇಶಿಕೇಂದ್ರಮ್ || ೧

ಹೀಗಿರುವಾಗ ಒಂದು ದಿನ ವೇದಾಧ್ಯಯನ ಸಂಪನ್ನನಾದ ಒಬ್ಬ ಬ್ರಾಹ್ಮಣ ಪುತ್ರನು ತನ್ನ ತೇಜಸ್ಸಿನಿಂದ ಇತರ ತೇಜಸ್ಸುಗಳನ್ನು ಮಲಿನಗೊಳಿಸುವನೋ ಎಂಬಂತೆ ಪ್ರಕಾಶಿಸುತ್ತ ಬಂದನು. ಕಮಲನೇತ್ರನಾದ ಆ ದ್ವಿಜಪುತ್ರನು ಶ್ರೀ ಶಂಕರ ದೇಶಿಕೇಂದ್ರರನ್ನು ಕಾಣುವ ಇಚ್ಛೆಯಿಂದ ಆದರ ಪೂರ್ವಕವಾಗಿ ಬಂದಿದ್ದನು.

ಆಗತ್ಯ ದೇಶಿಕಪದಾಂಬುಜಯೋರಪಪ್ತ-
ತ್ಸಂಸಾರವಾರಿಧಿಮನುತ್ತರಮುತ್ತಿತೀರ್ಷುಃ |
ವೈರಾಗ್ಯವಾನಕೃತದಾರಪರಿಗ್ರಹಶ್ಚ
ಕಾರುಣ್ಯನಾವಮಧಿರುಹ್ಯ ದೃಢಾಂ ದುರಾಪಾಮ್ || ೨

ಆತನು ಆಚಾರ್ಯರ ಬಳಿಗೆ ಬಂದು ಅವರ ಪಾದ ಕಮಲಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿದನು. ಆತನು ವಿವಾಹ ಮಾಡಿಕೊಂಡಿರಲಿಲ್ಲ. ವೈರಾಗ್ಯಶಾಲಿಯಾಗಿದ್ದನು. ಅನ್ಯ ದುರ್ಲಭವೂ ದೃಢವೂ ಆದ ಶ್ರೀ ಶಂಕರರ ಕಾರುಣ್ಯ ನಾವೆಯನ್ನೇರಿ ಅಗಾಧವಾದ ಸಂಸಾರ ಸಮುದ್ರವನ್ನು ದಾಟುವ ಇಚ್ಛೆಯುಳ್ಳವನಾಗಿದ್ದನು.

ಉತ್ಥಾಪ್ಯ ತಂ ಗುರುರುವಾಚ ಗುರುರ್ದ್ವಿಜಾನಾಂ
ಕಸ್ತ್ವಂ ಕ್ವ ಧಾಮ ಕುತ ಆಗತ ಆತ್ತಧೈರ್ಯಃ |
ಬಾಲೋಽಪ್ಯಬಾಲಧಿಷಣಃ ಪ್ರತಿಭಾಸಿ ಮೇ ತ್ವಂ
ಏಕೋಽಪ್ಯನೇಕ ಇವ ನೈಕಶರೀರಭಾವಃ || ೩

ದ್ವಿಜರಿಗೆ ಗುರುಗಳಾದ ಶ್ರೀ ಶಂಕರಗುರುಗಳು ನಮಸ್ಕರಿಸಿದ ಆತನನ್ನು ಮೇಲೆತ್ತಿ "ಅಯ್ಯಾ, ನೀನು ಯಾರು? ನಿನ್ನ ವಾಸಸ್ಥಳ ಎಲ್ಲಿದೆ? ಧೀರತನದಿಂದ ಇಲ್ಲಿಗೇಕೆ ಬಂದೆ? ಏಕಾತ್ಮನಾದರೂ

ಅನೇಕ ಶರೀರಗಳಲ್ಲಿ ನೆಲೆಸಿ ಅನೇಕಾತ್ಮನಾಗಿ ತೋರುವಂತೆ, ನೀನು ಬಾಲಕನಾಗಿದ್ದರೂ ಬಾಲಕನಂತಲ್ಲದೆ ಮಹಾಬುದ್ಧಿಶಾಲಿಯಾಗಿ ನನಗೆ ತೋರುತ್ತಿದ್ದೀಯೆ."

ಟಿಪ್ಪಣಿ:- ಈ ಶ್ಲೋಕದ ದ್ವಿತೀಯಾರ್ಧಕ್ಕೆ ನಾನು ಬರೆದಿರುವ ಅರ್ಥವು ಸರಿಯೆ?ಅಲ್ಲವೆ-ಎಂಬುದನ್ನು ವಿದ್ವಾಂಸರು ಪರಿಶೀಲಿಸಬೇಕು. ವ್ಯಾಖ್ಯಾನಕಾರರು 'ಅನೇಕ ದೇಹಾಂತರ್ಯಾಮಿಯಾಗಿ ದೇಹಾತ್ಮಭಾವ ವಿಲ್ಲದವನಂತೆ' ಎಂದು ಅರ್ಥ ಮಾಡಿದ್ದಾರೆ.

ಪೃಷ್ಟೋ ಬಭಾಣ ಗುರುಮುತ್ತರಮುತ್ತರಜ್ಞೋ
ವಿಪ್ರೋ ಗುರೋ ಮಮ ಗೃಹಂ ಬುಧ ಚೋಲದೇಶೇ |
ಯತ್ರಾಽಽಪಗಾ ವಹತಿ ತತ್ರ ಕವೇರಕನ್ಯಾ
ಯಸ್ಯಾಃ ಪಯೋ ಹರಿಪದಾಂಬುಜಭಕ್ತಿಮೂಲಮ್ || ೪

ಹೀಗೆ ಪ್ರಶ್ನೆಮಾಡಲಾಗಿ ಉತ್ತರ ಹೇಳುವುದರಲ್ಲಿ ಕುಶಲನಾದ ಆ ವಿಪ್ರಕುಮಾರನು ಹೀಗೆಂದನು -"ಜ್ಞಾನಿಗಳಾದ ಗುರುಗಳೇ, ನನ್ನ ವಾಸಸ್ಥಾನವು ಚೋಳದೇಶದಲ್ಲಿದೆ. ಅಲ್ಲಿ ಕಾವೇರೀ ನದಿಯು ಹರಿಯುತ್ತಾಳೆ. ಅದರ ಜಲವು ಶ್ರೀ ಹರಿಯ ಪಾದಕಮಲಗಳಲ್ಲಿ ಭಕ್ತಿಯನ್ನುಂಟು ಮಾಡುತ್ತದೆ."

ಅಟಾಟ್ಯಮಾನೋ ಮಹತೋ ದಿದೃಕ್ಷುಃ
ಕ್ರಮಾದಿಮಂ ದೇಶಮುಪಾಗತೋಽಸ್ಮಿ |
ಬಿಭೇಮಿ ಮಜ್ಜನ್ ಭವವಾರಿರಾಶೌ
ತತ್ಪಾರಗಂ ಮಾಂ ಕೃಪಯಾ ವಿಧೇಹಿ || ೫

ನಾನು ಮಹಾತ್ಮರನ್ನು ಕಾಣಬೇಕೆಂಬ ಇಚ್ಛೆಯಿಂದ ಅನೇಕ ಕಡೆಗಳಲ್ಲಿ ಅಲೆಯುತ್ತಾ ಕ್ರಮವಾಗಿ ಈ ದೇಶಕ್ಕೆ ಬಂದೆನು. ಈ ಸಂಸಾರ ಸಾಗರದಲ್ಲಿ ಮುಳುಗಲು ಹೆದರಿದ್ದೇನೆ. ನೀವು ಕೃಪೆ ಇಟ್ಟು ನನ್ನನ್ನು ದಡಕ್ಕೆ ತಲ್ಪಿಸಿರಿ.

ಅಪಾಂಗೈರುತ್ತುಂಗೈರಮೃತಝುರಭಂಗೈಃ ಪರಗುರೋ
ಶುಚಾ ದೂನಂ ದೀನಂ ಕಲಯ ದಯಯಾ ಮಾಮವಿಮೃಶನ್ |
ಗುಣಂ ವಾ ದೋಷಂ ವಾ ಮಮ ಕಿಮಪಿ ಸಂಚಿಂತಯಸಿ ಚೇತ್
ತದಾ ಕ್ವೈವ ಶ್ಲಾಘಾ ನಿರವಧಿಕೃಪಾನೀರಧಿರಿತಿ || ೬

"ಹೇ ಪರಮಗುರುಗಳೇ, ಅಮೃತದ ಲಹರಿಗಳನ್ನು ಸುರಿಸುವ ನಿಮ್ಮ ಕಟಾಕ್ಷಗಳಿಂದ ನನ್ನನ್ನು ನೋಡಿರಿ. ಶೋಕದಿಂದ ಖಿನ್ನನೂ ದೀನನೂ ಆದ ನನ್ನನ್ನು ಇನ್ನೇನೂ ವಿಚಾರಿಸದೆ ದಯೆದಿಂದ ಕಾಣಿರಿ. ನನ್ನಲ್ಲಿ ಇರಬಹುದಾದ ಗುಣವನ್ನೋ ದೋಷವನ್ನೋ ಕುರಿತು ನೀವು ವಿಚಾರಿಸುವುದಾದರೆ ನಿರ್ವ್ಯಾಜ ಕೃಪಾಸಮುದ್ರರೆಂಬ ಪ್ರಶಂಸೆ ನಿಮಗೆ ಹೇಗೆ ಬಂದೀತು?

ಖ್ಯಾತ್ತೇ ದೀನದಯಾಲುತಾಕೃತಯಶೋರಾಶಿಸ್ತ್ರಿಲೋಕೀಗುರೋ
ತೂರ್ಣಂ ಚೇದ್ದಯಸೇ ಮಮಾದ್ಯ ನ ತಥಾ ಕಾರುಣ್ಯತಃ ಶ್ರೀಮತಿ |
ವರ್ಷನ್ ಭೂರಿ ಮರುಸ್ಥಲೀಷು ಜಲಭೃತ್ಸದ್ಭಿರ್ಯಥಾ ಪೂಜ್ಯತೇ
ನೈವಂ ವರ್ಷಶತಂ ಪಯೋನಿಧಿಜಲೇ ವರ್ಷನ್ನಪಿ ಸ್ತೂಯತೇ || ೭

"ಲೋಕತ್ರಯಕ್ಕೂ ಗುರುಗಳಾದವರು ನೀವು (ಗುಣಹೀನನಾದ) ನನ್ನ ಮೇಲೆ ಕೂಡಲೇ ದಯೆಯನ್ನು ತೋರಿಸಿದರೆ ಆಗ ದೀನ ದಯಾಳುಗಳೆಂಬ ಕೀರ್ತಿ ರಾಶಿಯು ನಿಮಗೆ ಸಲ್ಲುತ್ತದೆ. ಆದರೆ ಗುಣಶಾಲಿಯಾದ ಶ್ರೀಮಂತನಲ್ಲಿ ತೋರಿಸಿದ ದಯೆಯಿಂದ ಅಂತಹ ಕೀರ್ತಿ ಬರಲಾರದು. ಬಂಜರು ಭೂಮಿಗಳಲ್ಲಿ ಮೋಡವು ಮಳೆಸುರಿಸಿದರೆ ಸಜ್ಜನರು ಅದನ್ನು ಶ್ಲಾಘಿಸುತ್ತಾರೆ. ಸಮುದ್ರದ ನೀರಿನ ಮೇಲೆ ನೂರು ವರ್ಷ ಮಳೆಸುರಿಸಿದರೂ ಆ ಮೋಡವನ್ನು ಯಾರೂ ಹೊಗಳುವುದಿಲ್ಲ.

ತ್ವತ್ಸಾರಸ್ವತಸಾರಸಾರಸಸುಧಾಕೂಪಾರ ಸತ್ಸಾರಸ-
ಸ್ರೋತಃ ಸಂಭೃತ ಸಂತತೋಜ್ಜ್ವಲಜಲಕ್ರೀಡಾ ಮತಿರ್ಮೇ ಮುನೇ |
ಚಂಚತ್ಪಂಚಶರಾದಿವಂಚನಹತಂ ನ್ಯಂಚಂ ಪ್ರಪಂಚಂ ಹಿತ-
ಜ್ಞಾನಾಕಿಂಚನಮಾವಿರಿಂಚಮಖಿಲಂ ಚಾಲೋಚಯನ್ತ್ಯಂಚತು || ೮

"ಪೂಜ್ಯರಾದ ಮುನಿಗಳೆ, ನಿಮ್ಮ ವಾಕ್ಕುಗಳ ಸಾರವೆಂಬ ತಾವರೆಯ ಮಕರಂದ ಸಮುದ್ರದ ಅಮೃತಮಯವಾದ ಸಂತತ ಪ್ರವಾಹದಲ್ಲಿ ಜಲಕ್ರೀಡೆಯನ್ನಾಡಲು ನನಗೆ ಬುದ್ಧಿಯುಂಟಾಗಿದೆ. ಪಂಚಶರನಾದ ಮನ್ಮಥನಿಂದ ಹಾಳಾಗಿರುವ ಈ ಪ್ರಪಂಚವು ತುಚ್ಛವಾದುದು. ಬ್ರಹ್ಮಲೋಕ ಪರ್ಯಂತವಾದ ಈ ಜಗತ್ತೆಲ್ಲವೂ ಸಮ್ಯಕ್‌ಜ್ಞಾನದಿಂದ ನೋಡಿದಾಗ ಏನೇನೂ ಅಲ್ಲ-ಏನೂ ಇಲ್ಲ ಎಂದು ನನ್ನ ಬುದ್ಧಿಯು ಚಿಂತಿಸುತ್ತಾ ವಿಹರಿಸಲಿ.

ಟಿಪ್ಪಣಿ:- ಸಾರಸ-ಮಕರಂದ, ನ್ಯಂಚಂ ಎಂಬ ಶಬ್ದ ನ್ಯಕ್ ಶಬ್ದದ ದ್ವಿತೀಯೈಕವಚನ. ತುಚ್ಛವಾದದ್ದು ಎಂದರ್ಥ.

ಸೌರಂ ಧಾಮ ಸುಧಾಮರೀಚಿನಗರಂ ಪೌರಂದರಂ ಮಂದಿರಂ
ಕೌಬೇರಂ ಶಿಬಿರಂ ಹುತಾಶನಪುರಂ ಸಾಮೀರಸದ್ಮೋತ್ತರಮ್ |
ವೈಧಂ ಚಾಽವಸಥಂ ತ್ವದೀಯಫಣಿತಿಶ್ರದ್ಧಾಸಮಿದ್ಧಾತ್ಮನಃ
ಶುದ್ಧಾದ್ವೈತವಿದೋ ನ ದೋಗ್ಧಿ ವಿರತಿಶ್ರೀಘಾತುಕಂ ಕೌತುಕಮ್ || ೯

"ಸೂರ್ಯಲೋಕ, ಚಂದ್ರನ ನಗರ, ದೇವೇಂದ್ರನ ಮಂದಿರ, ಕುಬೇರನ ಅರಮನೆ, ಅಗ್ನಿಯಪಟ್ಟಣ, ವಾಯುವಿನ ಶ್ರೇಷ್ಠವಾದ ಗೃಹ, ಬ್ರಹ್ಮನ ಆವಾಸವಾದ ಸತ್ಯಲೋಕ-ಇವೆಲ್ಲವೂ ನನಗೆ ಯಾವ ಆಸೆಯನ್ನೂ ಉಂಟುಮಾಡುವುದಿಲ್ಲ. ನಿಮ್ಮ ಉಪದೇಶದಲ್ಲಿ

ಶ್ರದ್ಧೆಯಿಟ್ಟ ಮನಸ್ಸುಳ್ಳವನು ಶುದ್ಧವಾದ ಅದ್ವೈತ ಬ್ರಹ್ಮವನ್ನು ಅರಿತುಕೊಳ್ಳುತ್ತಾನೆ. ಅವನಿಗೆ ಸೂರ್ಯಲೋಕಾದಿಗಳು ಯಾವುವೂ ವೈರಾಗ್ಯ ಲಕ್ಷ್ಮಿಯನ್ನು ಹೋಗಲಾಡಿಸಬಲ್ಲ ಕೌತುಕವನ್ನು ಉಂಟುಮಾಡುವುದಿಲ್ಲ.

ನ ಭೌಮಾ ರಾಮಾದ್ಯಾಃ ಸುಷಮವಿಷವಲ್ಲೀಫಲಸಮಾಃ
ಸಮಾರಂಭಂತೇ ನಃ ಕಿಮಪಿ ಕುತುಕಂ ಜಾತು ವಿಷಯಾಃ |
ನ ಗಣ್ಯಂ ನಃ ಪುಣ್ಯಂ ರುಚಿರತರರಂಭಾಕುಚತಟೀ-
ಪರೀರಂಭಾರಂಭೋಜ್ಜ್ವಲಮಪಿ ಚ ಪೌರಂದರಪದಮ್ || ೧೦

"ಈ ಭೂಮಿಯಲ್ಲಿರುವ ಸುಂದರ ಸ್ತ್ರೀಯರೇ ಮೊದಲಾದವರು ರಮ್ಯವಾದ ವಿಷದಬಳ್ಳಿಯ ಹಣ್ಣುಗಳಿದ್ದಂತೆ. ಈ ವಿಷಯಗಳು ನಮ್ಮಂತಹವರಿಗೆ ಎಂದಿಗೂ ಆಸೆಯನ್ನು ಹುಟ್ಟಿಸಲಾರವು. (ಕರ್ಮದಿಂದಾಗುವ) ಪುಣ್ಯವೂ ಕೂಡ ಗಣ್ಯವಾದದ್ದಲ್ಲ. ಇಂದ್ರಲೋಕವು ಪರಮ ಸುಂದರಿಯರಾದ ರಂಭೆ ಮೊದಲಾದವರ ಕುಚತಟಗಳ ಆಲಿಂಗನದಿಂದ ಉಜ್ವಲವಾಗಿದ್ದರೂ ಸಹ ನಮಗೆ ಬೇಕಾಗಿಲ್ಲ.

ಟಿಪ್ಪಣಿ:- 'ಸಮಾರಭಂತೇ'ಎಂಬುದು ಸಾಧು ಶಬ್ದ.

ನ ಚಂಚದ್ವೈರಿಂಚಂ ಪದಮಪಿ ಭವೇದಾದರಪದಂ
ವಚೋ ಭವ್ಯಂ ನವ್ಯಂ ಯದಕೃತ ಕೃತೀ ಶಂಕರಗುರುಃ |
ಚಕೋರಾಲೀಚಂಚೂ ಪುಟದಲಿತ ಪೂರ್ಣೇಂದು ವಿಗಲ-
ತ್ಸುಧಾಧಾರಾಕಾರಂ ತದಿಹ ವಯಮೀಹೇಮಹಿ ಮುಹುಃ || ೧೧

"ಪ್ರಶಸ್ತವೆನಿಸಿದ ಬ್ರಹ್ಮಲೋಕದಲ್ಲಿಯೂ ಸಹ ನನಗೆ ಆದರವಿಲ್ಲ. ಶ್ರೀಶಂಕರದೇಶಿ ಕೇಂದ್ರರು ಹೇಳಿದ ಭವ್ಯವೂ ನವ್ಯವೂ ಆದ ವಾಣಿಯು ನಮಗೆ ಬೇಕಾಗಿದೆ. ಚಕೋರ ಪಕ್ಷಿಗಳು ತಮ್ಮ ಕೊಕ್ಕುಗಳಿಂದ ಕುಡಿಯತಕ್ಕದ್ದೂ ಪೂರ್ಣಚಂದ್ರನಿಂದ ಸುರಿಯತಕ್ಕದ್ದೂ ಆದ ಯಾವ ಅಮೃತಧಾರೆಯುಂಟೋ ಅಂತಹ ಧಾರಾಕಾರವಾದ ಗುರುವಾಣಿಯನ್ನು ನಾವು ಮತ್ತೆ ಮತ್ತೆ ಬಯಸುತ್ತಿದ್ದೇವೆ.

ದ್ಯಾವಾಭೂಮಿಶಿವಂಕರೈರ್ನವಯಶಃ ಪ್ರಸ್ತಾವಸೌವಸ್ತಿಕೈಃ
ಪೂರ್ವಾಖರ್ವತಪಃ ಪಚೇಲಿಮಫಲೈಃ ಸರ್ವಾಧಿಮುಷ್ಟಿಂಧಯೈಃ |
ದೀನಾಢ್ಯಂಕರಣೈರ್ಭವಾಯ ನಿತರಾಂ ವೈರಾಯಮಾಣೈರಲಂ-
ಕರ್ಮೀಣಂ ಪ್ರಸಿತಂ ತ್ವದೀಯಭಜನೈಃ ಸ್ಯಾನ್ಮಾಮಕೀನಂ ಮನಃ || ೧೨

"ಸ್ವರ್ಗದಲ್ಲಿಯೂ ಭೂಮಿಯಲ್ಲಿಯೂ ಇರತಕ್ಕವರಿಗೆ ಸಹ ಶುಭವನ್ನುಂಟು ಮಾಡತಕ್ಕವೂ ಅಸಾಧಾರಣವಾದ ನೂತನಯಶಸ್ಸಿನ ಪ್ರಾಪ್ತಿಗೆ ಸ್ವಸ್ತಿವಾಚನವನ್ನು ಮಾಡತಕ್ಕವೂ ಪೂರ್ವಜನ್ಮಗಳಲ್ಲಿ ಮಾಡಿದ ಅಪಾರವಾದ ತಪಸ್ಸಿಗೆ ಫಲವಾಗಿ ದೊರೆಯತಕ್ಕವೂ ಸಮಸ್ತಮನೋವ್ಯಥೆಗಳನ್ನು ನುಂಗಿಹಾಕತಕ್ಕವೂ ಜ್ಞಾನವಿಲ್ಲದ ದೀನರಿಗೆ ಜ್ಞಾನಧನವನ್ನು ಕೊಡತಕ್ಕವೂ ಸಂಸಾರವನ್ನು ತೀವ್ರವಾಗಿ ದ್ವೇಷಿಸತಕ್ಕವೂ ಆದ ನಿಮ್ಮ ಪಾದಸೇವೆಗಳಿಂದ ನನ್ನ ಮನಸ್ಸು ಕಾರ್ಯದಕ್ಷವೂ (ಸದ್ವಿಚಾರಗಳಲ್ಲಿ) ಸದಾ ಆಸಕ್ತವೂ ಆಗಿರಲಿ.

(ನಿಮ್ಮ ಸೇವೆಯನ್ನು ನಾನು ಶ್ರದ್ಧೆಯಿಂದ ಮಾಡಲು ಆಶಿಸುತ್ತೇನೆ-ಎಂದು ತಾತ್ಪರ್ಯ)

ಟಿಪ್ಪಣಿ:- ದ್ಯಾವಾಭೂಮೀ = 'ದಿವೋ ದ್ಯಾವಾ' ಎಂಬ ಸೂತ್ರದಿಂದ ದ್ಯಾವಾದೇಶ. ಶಿವಂಕರ = ಇದನ್ನು ಸಾಧಿಸುವ ಪಾಣಿನಿಸೂತ್ರವು ಇಲ್ಲ.' ಕ್ಷೇಮಂಕರೋಽರಿಷ್ಟತಾತಿಃ ಶಿವಂಕರಃ'ಎಂದು ಅಮರಕೋಶದಲ್ಲಿ ಪಾಠಾಂತರವಿದೆ. ಪಚೇಲಿಮ = 'ಕೇಲಿಮರ ಉಪಸಂಖ್ಯಾನಮ್' ಎಂಬ ವಾರ್ತಿಕದಿಂದ ಕರ್ಮಾರ್ಥದಲ್ಲಿ ಕೇಲಿಮರ್‌ಪ್ರತ್ಯಯ. ಸೌವಸ್ತಿಕ = 'ತದಾಹೇತಿ ಮಾ ಶಬ್ದಾದಿಭ್ಯ ಉಪಸಂಖ್ಯಾನಮ್' ಇತಿ ಸ್ವಸ್ತಿಶಬ್ದಾತ್ ಠಕ್. ಮುಷ್ಟಿಂಧಯ = ' ನಾಡೀಮುಷ್ಟ್ಯೋಶ್ಚೇ'ತಿ ಖಶ್. ಮುಮಾಗಮಶ್ಚ. ಅಲಂಕರ್ಮೀಣ = ಕರ್ಮಣಿ ಅಲಂ. 'ಅಷಡಕ್ಷಾಶಿತಂಗು........'ಇತ್ಯಾದಿನಾ ಸ್ವಾರ್ಥೇ ಖಃ.

ಸಂಸಾರಬಂಧಾಮಯದುಃಖ ಶಾಂತ್ಯೈ
ಸ ಏವ ನಸ್ತ್ವಂ ಭಗವಾನುಪಾಸ್ಯಃ |
ಭಿಷಕ್ತಮಂ ತ್ವಾ ಭಿಷಜಾಂ ಶೃಣೋಮೀ-
ತ್ಯುಕ್ತಸ್ಯ ಯೋಽಭೂದುದಿತಾವತಾರಃ || ೧೩

ಪರಶಿವನು ವೈದ್ಯರಲ್ಲಿ ಮಹಾವೈದ್ಯನೆಂದು 'ಭಿಷಕ್ತಮಂ ತ್ವಾ ಭಿಷಜಾಂ ಶೃಣೋಮಿ' ಎಂದು ಶ್ರುತಿಯು ಹೇಳುತ್ತದೆ. ಆ ಪರಶಿವನ ಅವತಾರವೇ ನೀವಾಗಿದ್ದೀರಿ. ಸಂಸಾರಬಂಧವೆಂಬ ಮಹಾರೋಗದಿಂದಾದ ದುಃಖವನ್ನು ಹೋಗಲಾಡಿಸಿಕೊಳ್ಳುವುದಕ್ಕೆ ಆ ಭಗವಂತನೇ ಆದ ನೀವು ನಮಗೆ ಉಪಾಸ್ಯದೇವತೆಯಾಗಿದ್ದೀರಿ."

ಇತ್ಯುಕ್ತವಂತಂ ಕೃಪಯಾ ಮಹಾತ್ಮಾ
ವ್ಯದೀಪಯತ್ಸಂನ್ಯಸನಂ ಯಥಾವತ್ |
ಪ್ರಾಹುರ್ಮಹಾಂತಃ ಪ್ರಥಮಂ ವಿನೇಯಂ
ತಂ ದೇಶಿಕೇಂದ್ರಸ್ಯ ಸನಂದನಾಖ್ಯಮ್ || ೧೪

ಹೀಗೆ ಹೇಳಿದ ಆ ಬ್ರಾಹ್ಮಣಪುತ್ರನಿಗೆ ಮಹಾತ್ಮರಾದ ಆಚಾರ್ಯರು ಕೃಪೆಯಿಂದ ವಿಧಿವತ್ತಾಗಿ ಸಂನ್ಯಾಸದೀಕ್ಷೆಯನ್ನು ಕೊಟ್ಟರು. ಆತನೇ ಸನಂದನನೆಂದೂ ದೇಶಿಕೇಂದ್ರರ ಪ್ರಥಮ ಶಿಷ್ಯನೆಂದೂ ಮಹಾಜನರು ಹೇಳುತ್ತಾರೆ.

ಸಂಸಾರಘೋರಜಲಧೇಸ್ತರಣಾಯ ಶಶ್ವತ್
ಸಾಂಯಾತ್ರಿಕೀಭವನಮರ್ಥಯಮಾನಮೇನಮ್ |
ಹಂತೋತ್ತಮಾಶ್ರಮತರೀಮಧಿರೋಪ್ಯ ಪಾರಂ
ನಿನ್ಯೇ ನಿಪಾತಿತಕೃಪಾರಸಕೇನಿಪಾತಃ || ೧೫

ಸಂಸಾರವೆಂಬ ಭಯಂಕರವಾದ ಸಮುದ್ರವನ್ನು ದಾಟುವುದಕ್ಕೆ ಸದಾ ನಾವಿಕನಾಗಿರಬೇಕೆಂದು ಪ್ರಾರ್ಥಿಸುತ್ತಿದ್ದ ಆ ಸನಂದನನನ್ನು, ಆಹಾ, ಉತ್ತಮವಾದ ಸಂನ್ಯಾಸಾಶ್ರಮವೆಂಬ ದೋಣಿಯಲ್ಲಿ ಕುಳ್ಳಿರಿಸಿ ದಯಾರಸವೆಂಬ ದೋಣಿಯ ಹುಟ್ಟಿನಿಂದ ಆಚಾರ್ಯರು ಆತನನ್ನು ಸಮುದ್ರದ ಇನ್ನೊಂದು ತೀರಕ್ಕೆ ಕರೆದೊಯ್ದರು.

ಟಿಪ್ಪಣಿ:- ಕೇನಿಪಾತ-ದೋಣಿಯನ್ನು ಸಾಗಿಸುವ ಅಂಬಿಗರ ಹುಟ್ಟು.

ಯೇಽಪ್ಯನ್ಯೇಽಮುಂ ಸೇವಿತುಂ ದೇವತಾಂಶಾ
ಯಾತಾಸ್ತೇಽಪಿ ಪ್ರಾಯ ಏವಂ ವಿರಕ್ತಾಃ |
ಕ್ಷೇತ್ರೇ ತಸ್ಮಿನ್ನೇವ ಶಿಷ್ಯತ್ವಮಸ್ಯ
ಪ್ರಾಪುಃ ಸ್ಪಷ್ಟಂ ಲೋಕರೀತ್ಯಾಽಪಿ ಗಂತುಮ್ || ೧೬

ಈ ಪ್ರಕಾರವಾಗಿ ದೇವತಾಂಶದಿಂದ ಹುಟ್ಟಿದ ಇನ್ನು ಯಾರಾರು ಇದ್ದರೋ ಅವರೆಲ್ಲರೂ ವಿಶೇಷವಾಗಿ ವೈರಾಗ್ಯವನ್ನು ಹೊಂದಿ ಆ ಕಾಶೀ ಕ್ಷೇತ್ರದಲ್ಲಿ ಆಚಾರ್ಯರ ಶಿಷ್ಯರಾದರು. ಲೋಕ ರೀತಿಯಿಂದಲೂ ಅವರು ಶ್ರೀಶಂಕರನ ಸೇವಕರೆಂದು ತೋರಿಸಿಕೊಳ್ಳುವುದಕ್ಕಾಗಿ ಹಾಗೆ ಮಾಡಿದರು.

ವ್ಯಾಖ್ಯಾಮೌನಮನುತ್ತರಾಃ ಪರಿದಲಚ್ಛಂಕಾಕಲಂಕಾಂಕುರಾ-
ಶ್ಛಾತ್ರಾ ವಿಶ್ವಪವಿತ್ರಚಿತ್ರಚರಿತಾಸ್ತೇ ವಾಮದೇವಾದಯಃ |
ತಸ್ಯೈತಸ್ಯ ವಿನೀತಲೋಕತತಿಮುದ್ಧರ್ತುಂ ಧರಿತ್ರೀತಲಂ
ಪ್ರಾಪ್ತಸ್ಯಾದ್ಯ ವಿನೇಯತಾಮುಪಗತಾ ಧನ್ಯಾಃ ಕಿಲಾನ್ಯಾದೃಶಾಃ || ೧೭

ವ್ಯಾಖ್ಯಾನವೆಂದರೆ ಮೌನವೇ. ಶಿಷ್ಯರಾದರೋ ಉತ್ತರವನ್ನು ಕೇಳದೆ ಎಲ್ಲಾ ಶಂಕಾ ಕಳಂಕವನ್ನು ಕಳೆದುಕೊಳ್ಳತಕ್ಕವರು. ಜಗತ್ಪಾವನ ಚರಿತೆಯುಳ್ಳ ವಾಮದೇವ, ಶುಕ ಮೊದಲಾದವರು ಶಿಷ್ಯರು. ಇಂತಹ ದಕ್ಷಿಣಾಮೂರ್ತಿಯು ಶಿಷ್ಯರನ್ನು ಉದ್ಧರಿಸುವುದಕ್ಕಾಗಿ ಭೂತಳಕ್ಕೆ ಬಂದಿರುವಾಗ ಶ್ರೀ ಶಂಕರರ ಸೇವೆಗಾಗಿ ಬಂದವರೆಲ್ಲರೂ ಧನ್ಯರೇ ಆದರು.

ವಿವರಣೆ:-ಚಿತ್ರಂ ವಟತರೋರ್ಮೂಲೇ, ವೃದ್ಧಾಃ ಶಿಷ್ಯಾ ಗುರುರ್ಯುವಾ |
ಗುರೋಸ್ತು ಮೌನಂ ವ್ಯಾಖ್ಯಾನಂ, ಶಿಷ್ಯಾಸ್ತು ಛಿನ್ನ ಸಂಶಯಾಃ || ಎಂಬ ದಕ್ಷಿಣಾಮೂರ್ತಿ ಸ್ತುತಿ ಶ್ಲೋಕವನ್ನು ಇಲ್ಲಿ ಸ್ಮರಿಸಿ ಕೊಳ್ಳಬೇಕು.

ಶೇಷಃ ಸಾಧುಭಿರೇವ ತೋಷಯತಿ ನೄನ್ ಶಬ್ದೈಃ ಪುಮರ್ಥಾರ್ಥಿನೋ
ವಾಲ್ಮೀಕಿಃ ಕವಿರಾಜ ಏಷ ವಿತಥೈರರ್ಥೈರ್ಮುಹುಃ ಕಲ್ಪಿತೈಃ |
ವ್ಯಾಚಷ್ಟೇ ಕಿಲ ದೀರ್ಘಸೂತ್ರಸರಣಿರ್ವಾಚಂ ಚಿರಾದರ್ಥದಾಂ
ವ್ಯಾಸಃ ಶಂಕರದೇಶಿಕಸ್ತು ಕುರುತೇ ಸದ್ಯಃ ಕೃತಾರ್ಥಾನಹೋ || ೧೮

ಪುರುಷಾರ್ಥಗಳನ್ನು ಬಯಸುವ ಜನರನ್ನು (ವ್ಯಾಕರಣ ಭಾಷ್ಯಕಾರನಾದ) ಆದಿಶೇಷನು ಸಾಧು ಶಬ್ದಗಳಿಂದ ಮಾತ್ರವೇ ಸಂತೋಷಪಡಿಸಬಲ್ಲನು. ಕವಿರಾಜನೆನಿಸಿದ ವಾಲ್ಮೀಕಿ ಮುನಿಯು ಕಲ್ಪಿತವಾದ ಮತ್ತು ಲೋಕದಲ್ಲಿಲ್ಲದ ಅರ್ಥಗಳಿಂದ ಆನಂದ ಪಡಿಸುತ್ತಾನೆ. ವ್ಯಾಸಮುನಿಯು ಧೀರ್ಘ ಸೂತ್ರಗಳನ್ನು ರಚಿಸಿ ಅರ್ಥವನ್ನರಿಯಲು ಕಠಿಣವಾದ ರೀತಿಯಲ್ಲಿ ತನ್ನ ಮಾತನ್ನು ತಿಳಿಸುತ್ತಾನೆ. ಆಹಾ!ಶ್ರೀ ಶಂಕರಾಚಾರ್ಯರಾದರೋ ಶೀಘ್ರವಾಗಿ ಶಿಷ್ಯರನ್ನು ಕೃತಾರ್ಥರನ್ನಾಗಿ ಮಾಡಿಬಿಡುತ್ತಾರೆ!

ಚಕ್ರಿತುಲ್ಯಮಹಿಮಾನಮುಪಾಸಾಂ-
ಚಕ್ರಿರೇ ತಮವಿಮುಕ್ತನಿವಾಸಾಃ |
ವಕ್ರಸೃತ್ಯನುಸೃತಾಮಪಿ ಸಾಧ್ವೀಂ
ಚಕ್ರುರಾತ್ಮಧಿಷಣಾಂ ತದುಪಾಸ್ತ್ಯಾ || ೧೯

ಆ ಶಿಷ್ಯರು ಅವಿಮುಕ್ತ ಕ್ಷೇತ್ರವೆನಿಸಿದ ಕಾಶಿಯಲ್ಲಿ ವಾಸವಾಗಿದ್ದು ವಿಷ್ಣುವಿಗೆ ಸದೃಶವಾದ ಮಹಿಮೆಯುಳ್ಳ ಆಚಾರ್ಯರನ್ನು ಶುಶ್ರೂಷೆ ಮಾಡಿದರು. ಅವರ ಶುಶ್ರೂಷೆಯಿಂದ ಆ ಶಿಷ್ಯರು ವಕ್ರಮಾರ್ಗದಲ್ಲಿ ಹೋಗುತ್ತಿದ್ದ ತಮ್ಮ ಬುದ್ಧಿಯನ್ನು ಋಜುಮಾರ್ಗಕ್ಕೆ ತಂದುಕೊಂಡರು.

ಚಂಡಭಾನುರಿವ ಭಾನುಮಂಡಲೈಃ
ಪಾರಿಜಾತ ಇವ ಪುಷ್ಪಜಾತತಃ |
ವೃತ್ರಶತ್ರುರಿವ ನೇತ್ರವಾರಿಜೈ-
ಶ್ಛಾತ್ರ ಪಂಕ್ತಿಭಿರಲಂ ಲಲಾಸ ಸಃ || ೨೦

ಕಿರಣರಾಶಿಗಳಿಂದ ಸೂರ್ಯನಂತೆಯೂ ಪುಷ್ಪರಾಶಿಯಿಂದ ಪಾರಿಜಾತವೃಕ್ಷದಂತೆಯೂ ನೇತ್ರಕಮಲಗಳಿಂದ ದೇವೇಂದ್ರನಂತೆಯೂ ಶ್ರೀಶಂಕರಾಚಾರ್ಯರು ಶಿಷ್ಯಗಣದಿಂದ ಪರಿವೃತರಾಗಿ ಶೋಭಿಸುತ್ತಿದ್ದರು.

ಟಿಪ್ಪಣಿ:- ಇಂದ್ರನಿಗೆ ಸಾವಿರಕಣ್ಣುಗಳಿದ್ದವೆಂದು ಪುರಾಣಕಥೆಇದೆ. ನೇತ್ರಗಳೇ ಕಮಲಗಳು.

ಏಕದಾ ಖಲು ವಿಯತ್ತ್ರಿಪುರದ್ವಿಡ್-
ಭಾಲಲೋಚನ ಹುತಾಶನಭಾನೋಃ |

ವಿಸ್ಫುಲಿಂಗಪದವೀಂ ದಧತೀಷು
ಪ್ರಜ್ವಲತ್ತಪನಕಾಂತಶಿಲಾಸು || ೨೧

ಹೀಗಿರಲು ಬಿಸಿಲುಕಾಲದಲ್ಲಿ ಸೂರ್ಯಕಾಂತಶಿಲೆಗಳು ಸೂರ್ಯಕಿರಣದಿಂದ ಕಾದು ಹೋಗಿದ್ದವು. ಆಕಾಶದಲ್ಲಿದ್ದ ತ್ರಿಪುರರನ್ನು ಸಂಹಾರಮಾಡಿದ ಈಶ್ವರನ ಹಣೆಗಣ್ಣಿನ ಅಗ್ನಿಜ್ವಾಲೆಯಿಂದ ಹೊರಟಕಿಡಿಗಳೋ ಎಂಬಂತೆ ಆ ಶಿಲೆಗಳು ಕಾಣಿಸುತ್ತಿದ್ದವು.

ದರ್ಶಯತ್ಯುರುಮರೀಚಿಸರಸ್ವತ್-
ಪೂರಸೃಜ್ಯಪರಮಾಯಿನಿ ಭಾನೌ |
ಸಾಧುನೈಕಮಣಿ ಕುಟ್ಟಿಮಮೂರ್ಛತ್
ರಶ್ಮಿಜಾಲಕಶಿಖಾವಲ ಪಿಚ್ಛಮ್ || ೨೨

ಇನ್ನೊಬ್ಬ ಐಂದ್ರಜಾಲಿಕನೋ ಎಂಬಂತೆ ಸೂರ್ಯನು ತನ್ನ ಉಗ್ರಕಿರಣಗಳಿಂದ ಒಂದು ಸಮುದ್ರವನ್ನು ರಚಿಸಿದನೋ ಎಂಬಂತೆ ಕಾಣುತ್ತಿತ್ತು. ಅನೇಕ ಮಣಿಖಚಿತವಾದ ಕುಟ್ಟಿಮಭೂಮಿಯಲ್ಲಿ ಹರಡಿದ ಸೂರ್ಯ ರಶ್ಮಿಗಳು ನವಿಲಿನ ಪಿಚ್ಛಗಳಂತೆ ರಂಜಿಸುತ್ತಿದ್ದವು.

ಟಿಪ್ಪಣಿ:- ಕುಟ್ಟಿಮ = ನೆಲವನ್ನು ಕುಟ್ಟಿಮಾಡಿದ ಸಮಸ್ಥಳ. (floor)

ಪಂಕಜಾವಲಿವಿಲೀನ ಮರಾಲೇ
ಪುಷ್ಕರಾಂತರಭಿಗತ್ವರಮೀನೇ |
ಶಾಖಿಕೋಟರಶಯಾಲು ಶಕುಂತೇ
ಶೈಲಕಂದರ ಶರಣ್ಯ ಮಯೂರೇ || ೨೩

ಆ ಬಿಸಿಲಿನ ತಾಪಕ್ಕೆ ಹಂಸಗಳು ಕಮಲಗಳ ಸಂದುಗಳಲ್ಲಿ ಸೇರಿಕೊಂಡಿದ್ದವು. ಮೀನುಗಳು ನೀರಿನೊಳಗೆ ನುಸುಳುತ್ತಿದ್ದವು. ಹಕ್ಕಿಗಳು ಮರದ ಪೊಟರೆಗಳಲ್ಲಿ ಮಲಗಿದ್ದವು. ನವಿಲುಗಳು ಬೆಟ್ಟದ ಕಂದರಗಳಲ್ಲಿ ಅಡಗಿದ್ದವು.

ಶಂಕರೋ ದಿವಸಮಧ್ಯಮಭಾಗೇ
ಪಂಕಜೋತ್ಪಲ ಪರಾಗಕಷಾಯಾಮ್ |
ಜಾಹ್ನವೀಮಭಿಯಯೌ ಸಹ ಶಿಷ್ಯೈ-
ರಾಹ್ನಿಕಂ ವಿಧಿವದೇಷ ವಿಧಿತ್ಸುಃ || ೨೪

ಆಗ ಒಂದು ದಿನ ಮಧ್ಯಾಹ್ನದ ಸಮಯದಲ್ಲಿ ಶ್ರೀ ಶಂಕರರು ವಿಧಿವತ್ತಾಗಿ ಆಹ್ನಿಕವನ್ನು ಆಚರಿಸುವುದಕ್ಕೋಸ್ಕರ ಶಿಷ್ಯರೊಡನೆ ತಾವರೆ ನೈದಿಲೆ ಹೂಗಳ ಪರಾಗಗಳಿಂದ ಚಿತ್ರವರ್ಣವಾದ ಗಂಗಾನದಿಯ ಕಡೆಗೆ ಹೊರಟರು.

ಸೋಽಂತ್ಯಜಂ ಪಥಿ ನಿರೀಕ್ಷ್ಯ ಚತುರ್ಭಿಃ
ಭೀಷಣೈಃ ಶ್ವಭಿರನುದ್ರುತಮಾರಾತ್ |
ಗಚ್ಛ ದೂರಮಿತಿ ತಂ ನಿಜಗಾದ
ಪ್ರತ್ಯುವಾಚ ಚ ಸ ಶಂಕರಮೇನಮ್ || ೨೫

ದಾರಿಯಲ್ಲಿ ಆಚಾರ್ಯರು ಒಬ್ಬ ಅಂತ್ಯಜನನ್ನು ಕಂಡರು. ಆತನು ಭಯಂಕರವಾದ ನಾಲ್ಕುನಾಯಿಗಳನ್ನು ಜೊತೆಗೆ ಕರೆತರುತ್ತಿದ್ದನು. ಆಚಾರ್ಯರು ಅವನನ್ನು ನೋಡಿ "ದೂರ ಸರಿ" ಎಂದರು. ಆಗ ಅಂತ್ಯಜನು ಶಂಕರಾಚಾರ್ಯರಿಗೆ ಹೀಗೆಂದನು-

ಅದ್ವಿತೀಯಮನವದ್ಯಮಸಂಗಂ
ಸತ್ಯಬೋಧಸುಖರೂಪಮಖಂಡಮ್ |
ಆಮನಂತಿ ಶತಶೋ ನಿಗಮಾಂತಾ-
ಸ್ತತ್ರ ಭೇದಕಲನಾ ತವ ಚಿತ್ರಮ್ || ೨೬

"ಉಪನಿಷತ್ತುಗಳು ಆತ್ಮನನ್ನು ಅದ್ವಿತೀಯನೆಂದೂ ಸಂಗರಹಿತನೆಂದೂ ನಿರ್ದೋಷನೆಂದೂ ಸತ್ಯಜ್ಞಾನಾನಂದಸ್ವರೂಪನೂ ಅಖಂಡನೂ ಆಗಿರುವನೆಂದೂ ನೂರಾರುಕಡೆಗಳಲ್ಲಿ ಘೋಷಿಸುತ್ತಿವೆ. ಹೀಗಿರುವಾಗ (ವೇದಾಂತಿಗಳಾದ ನೀವು) ದೂರ ಹೋಗೆಂದು ಆತ್ಮನಲ್ಲಿ ಭೇದವನ್ನು ಕಲ್ಪಿಸುತ್ತಿದ್ದೀರಲ್ಲ, ಇದು ಆಶ್ಚರ್ಯಕರ!

ದಂಡಮಂಡಿತಕರಾ ಧೃತಕುಂಡಾಃ
ಪಾಟಲಾಭವಸನಾಃ ಪಟುವಾಚಃ |
ಜ್ಞಾನಗಂಧರಹಿತಾ ಗೃಹಸಂಸ್ಥಾನ್
ವಂಚಯಂತಿ ಕಿಲ ಕೇಚನ ವೇಷೈಃ || ೨೭

"ಕೆಲವರು ದಂಡವನ್ನು ಕೈಯಲ್ಲಿ ಹಿಡಿದು ಕಮಂಡಲುವನ್ನು ಧರಿಸಿ, ಕೆಂಪುಬಟ್ಟೆಯನ್ನು ಮೈಗೆ ಸುತ್ತಿಕೊಂಡಿರುತ್ತಾರೆ. ಜ್ಞಾನಗಂಧವಿಲ್ಲದಿದ್ದರೂ ಸೊಗಸಾಗಿ ಮಾತಾಡುತ್ತ ತಮ್ಮ ಬರಿಯ ವೇಷಗಳಿಂದಲೇ ಗೃಹಸ್ಥರನ್ನು ವಂಚಿಸುತ್ತಾರೆ!

ಗಚ್ಛ ದೂರಮಿತಿ ದೇಹ ಮುತಾಹೋ
ದೇಹಿನಂ ಪರಿಜಿಹೀರ್ಷಸಿ ವಿದ್ವನ್ |
ಭಿದ್ಯತೇಽನ್ನಮಯತೋಽನ್ನಮಯುಂ ಕಿಂ
ಸಾಕ್ಷಿಣಶ್ಚ ಯತಿಪುಂಗವ ಸಾಕ್ಷೀ || ೨೮

"ವಿದ್ವಾಂಸರೆ, 'ದೂರ ಹೋಗು'ಎಂದು ಹೇಳುತ್ತೀರಲ್ಲ, ದೇಹವನ್ನು ದೂರವಿಡಬೇಕೆಂದು ನಿಮ್ಮ ಇಚ್ಛೆಯೊ?ಅಥವಾ ಆತ್ಮನನ್ನು ದೂರವಿಡಬೇಕೆಂದೊ? ಅನ್ನಮಯವಾದ ದೇಹದಲ್ಲಿ ಯಾವ ಭೇದವೂ ಇಲ್ಲ. ಯತಿಪುಂಗವರೆ, ದೇಹದಲ್ಲಿ ಸಾಕ್ಷಿಯಾಗಿರುವ ಆತ್ಮನೂ ಸಹ ಇನ್ನೊಂದರಲ್ಲಿ ಸಾಕ್ಷಿಯಾಗಿರುವ ಆತ್ಮನಿಗಿಂತ ಭಿನ್ನನೇ ಅಲ್ಲ!

ಬ್ರಾಹ್ಮಣಶ್ವಪಚ ಭೇದವಿಚಾರಃ
ಪ್ರತ್ಯಗಾತ್ಮನಿ ಕಥಂ ತವ ಯುಕ್ತಃ |
ಬಿಂಬಿತೇಽಂಬರಮಣೌ ಸುರನದ್ಯಾ-
ಮಂತರಂ ಕಿಮಪಿ ನಾಸ್ತಿ ಸುರಾಯಾಮ್ || ೨೯

"(ಅದ್ವಿತೀಯನಾದ)ಪ್ರತ್ಯಗಾತ್ಮನಲ್ಲಿ ಬ್ರಾಹ್ಮಣ-ಶ್ವಪಚ ಎಂಬ ಭೇದ ಕಲ್ಪನೆಯೇ ನಿಮಗೆ ಯೋಗ್ಯವಾದ್ದಲ್ಲ. ಸೂರ್ಯನು ಗಂಗಾನದಿಯಲ್ಲಿ ಪ್ರತಿಬಿಂಬಿಸಲಿ ಅಥವಾ ಹೆಂಡದಲ್ಲಿ ಪ್ರತಿಬಿಂಬಿಸಲಿ, ಸೂರ್ಯನಲ್ಲಿ ಯಾವ ಭೇದವೂ ಆಗುವುದಿಲ್ಲ.

ಶುಚಿರ್ದ್ವಿಜೋಽಹಂ ಶ್ವಪಚ ವ್ರಜೇತಿ
ಮಿಥ್ಯಾಗ್ರಹಸ್ತೇ ಮುನಿವರ್ಯ ಕೋಽಯಮ್ |
ಸಂತಂ ಶರೀರೇಷ್ವಶರೀರಮೇಕ-
ಮುಪೇಕ್ಷ್ಯ ಪೂರ್ಣಂ ಪುರುಷಂ ಪುರಾಣಮ್ || ೩೦

"ನಾನು ಶುಚಿಯಾದ ಬ್ರಾಹ್ಮಣ, ನೀನು ಶ್ವಪಚ-ದೂರಹೋಗು ಎಂದು, ಎಲೈ ಮುನಿವರ್ಯರೆ, ನೀವು ತಪ್ಪಾಗಿ ತಿಳಿದುಕೊಂಡಿದ್ದೀರಲ್ಲ, ಇದೇನು? ಈ ಶರೀರಗಳಲ್ಲಿ ಒಬ್ಬನೇ ಆದ ಪುರುಷನು (ಆತ್ಮನು) ಸತ್‌ಸ್ವರೂಪನೂ ಪೂರ್ಣನೂ ಪುರಾತನನೂ ಆಗಿದ್ದಾನೆಂಬುದನ್ನು ಉಪೇಕ್ಷಿಸಿಬಿಟ್ಟಿರಲ್ಲ?

ಅಚಿಂತ್ಯಮವ್ಯಕ್ತಮನಂತಮಾದ್ಯಂ
ವಿಸ್ಮೃತ್ಯ ರೂಪಂ ವಿಮಲಂ ವಿಮೋಹಾತ್ |
ಕಲೇವರೇಽಸ್ಮಿನ್ ಕರಿಕರ್ಣಲೋಲಾ-
ಕೃತಿನ್ಯಹಂತಾ ಕಥಮಾವಿರಾಸ್ತೇ || ೩೧

"ಅಚಿಂತ್ಯನೂ, ಅವ್ಯಕ್ತನೂ ಅನಂತನೂ ಆದ್ಯನೂ ಪರಿಶುದ್ಧನೂ ಆದ ಆತ್ಮನ ಸ್ವರೂಪವನ್ನು ಅಜ್ಞಾನದಿಂದ ಮರೆತು, ಆನೆಯ ಕಿವಿಯಂತೆ ಚಂಚಲವಾದ ಈ ದೇಹದಲ್ಲಿ ನಾನು ಎಂಬ ಬುದ್ಧಿಯು ನಿಮಗೆ ಉಂಟಾದದ್ದು ಹೇಗೆ?

ವಿದ್ಯಾಮವಾಪ್ಯಾಪಿ ವಿಮುಕ್ತಿಪದ್ಯಾಂ
ಜಾಗರ್ತಿ ತುಚ್ಛಾ ಜನಸಂಗ್ರಹೇಚ್ಛಾ |
ಅಹೋ ಮಹಾಂತೋಽಪಿ ಮಹೇಂದ್ರಜಾಲೇ
ಮಜ್ಜಂತಿ ಮಾಯಾವಿವರಸ್ಯ ತಸ್ಯ || ೩೨

ಮುಕ್ತಿಗೆ ಮಾರ್ಗವಾಗಿರುವ ಬ್ರಹ್ಮವಿದ್ಯೆಯನ್ನು ಪಡೆದಿದ್ದರೂ ಜನಸಂಗ್ರಹ ಮಾಡಬೇಕೆಂಬ ತುಚ್ಛವಾದ ಇಚ್ಛೆ ಇದ್ದೇ ಇರುವುದಲ್ಲ. ಆಶ್ಚರ್ಯ!ಮಹಾ ಮಾಯಾವಿಯಾದ ಪರಮೇಶ್ವರನ ಮಹೇಂದ್ರಜಾಲದಲ್ಲಿ ದೊಡ್ಡವರೂ ಸಹ ಮುಳುಗಿಹೋಗುತ್ತಾರೆ!"

ಇತ್ಯುದೀರ್ಯ ವಚನಂ ವಿರತೇಽಸ್ಮಿನ್
ಸತ್ಯವಾಕ್ತದನು ವಿಪ್ರತಿಪನ್ನಃ |
ಅತ್ಯುದಾರಚರಿತೋಽಂತ್ಯಜಮೇನಂ
ಪ್ರತ್ಯುವಾಚ ಸ ಚ ವಿಸ್ಮಿತಚೇತಾಃ || ೩೩

ಈ ಪ್ರಕಾರವಾಗಿ ಹೇಳಿ ಆ ಅಂತ್ಯಜನು ಸುಮ್ಮನಾದನು. ಆಗ ಈತನು ಅಂತ್ಯಜನು ಹೌದೇ-ಎಂದು ಆಚಾರ್ಯರು ಸಂಶಯಗ್ರಸ್ತರಾದರು. ಸತ್ಯವನ್ನು ನುಡಿಯತಕ್ಕವರೂ ಅತ್ಯಂತ ಉದಾರಚರಿತರೂ ಆದ ಶ್ರೀ ಶಂಕರರು ವಿಸ್ಮಿತಚಿತ್ತರಾಗಿ ಇಂತೆಂದರು.

ಸತ್ಯಮೇವ ಭವತಾ ಯದಿದಾನೀಂ
ಪ್ರತ್ಯವಾದಿ ತನುಭೃತ್ಪ್ರವರೈತತ್ |
ಅಂತ್ಯಜೋಽಯಮಿತಿ ಸಂಪ್ರತಿ ಬುದ್ಧಿಂ
ಸಂತ್ಯಜಾಮಿ ವಚಸಾಽಽತ್ಮವಿದಸ್ತೇ || ೩೪

"ಎಲೈ ಮನುಷ್ಯೋತ್ತಮ, ಈಗ ನೀನು ಹೇಳಿರುವುದು ಸತ್ಯವಾದ ನುಡಿಯೇ ಹೌದು. ನೀನು ಆತ್ಮಜ್ಞಾನಿಯಾಗಿರುವೆ. ಆದ್ದರಿಂದ ಇವನು ಅಂತ್ಯಜನೆಂಬ ಬುದ್ಧಿಯನ್ನು ಈಗ ಪರಿತ್ಯಜಿಸುತ್ತೇನೆ.

ಜಾನತೇ ಶ್ರುತಿಶಿರಾಂಸ್ಯಪಿ ಸರ್ವೇ
ಮನ್ವತೇ ಚ ವಿಜಿತೇಂದ್ರಿಯವರ್ಗಾಃ |
ಯುಂಜತೇ ಹೃದಯಮಾತ್ಮನಿ ನಿತ್ಯಂ
ಕುರ್ವತೇ ನ ಧಿಷಣಾಮಪಭೇದಾಮ್ || ೩೫

“ಲೋಕದಲ್ಲಿ ಉಪನಿಷತ್ತುಗಳನ್ನು ಬಲ್ಲವರು ಇರುತ್ತಾರೆ. ಇಂದ್ರಿಯಗಳನ್ನು ಜಯಿಸಿ ಎಲ್ಲರೂ ಮನನವನ್ನೂ ಮಾಡುತ್ತಾರೆ. ಆತ್ಮನಲ್ಲಿ ಮನಸ್ಸನ್ನು ನಿಲ್ಲಿಸಿ ಧ್ಯಾನಯೋಗವನ್ನೂ ಆಚರಿಸುತ್ತಾರೆ. ಆದರೂ ಭೇದರಹಿತವಾದ ಅದ್ವೈತಬುದ್ಧಿಯನ್ನು ಮಾತ್ರ ತಳೆಯುವುದಿಲ್ಲ.

ವಿವರಣೆ:-ಆತ್ಮಜ್ಞಾನಿಯಾದವನೂ ಸಹ ಲೋಕವ್ಯವಹಾರದಲ್ಲಿ ದ್ವೈತಬುದ್ಧಿಯನ್ನಿಟ್ಟೇ ವ್ಯವಹರಿಸಬೇಕಾಗುತ್ತದೆ. ವರ್ಣಾಶ್ರಮ ಧರ್ಮಗಳನ್ನು ಪಾಲಿಸಬೇಕಾಗುತ್ತದೆ. ಇಲ್ಲದಿದ್ದರೆ ಲೋಕಸಂಸ್ಥೆಯು ಕೆಡುತ್ತದೆ. ಅಜ್ಞಾನಿಗಳಿಗೆ ಬುದ್ಧಿಭೇದವನ್ನುಂಟು ಮಾಡಬಾರದು.

ಕೃಷ್ಣೋ ಭೋಗೀ ಶುಕಸ್ತ್ಯಾಗೀ, ನೃಪೌ ಜನಕರಾಘವೌ |
ವಸಿಷ್ಠಃ ಕರ್ಮನಿರತಃ, ಪಂಚೈತೇ ಜ್ಞಾನಸಮ್ಮತಾಃ ||

ಎಂಬ ವಚನವು ಪ್ರಸಿದ್ಧವಾಗಿದೆ. ವಸಿಷ್ಠರು ಜ್ಞಾನಿಗಳಾಗಿದ್ದರೂ ಕರ್ಮನಿರತರಾಗಿದ್ದರು. ಆದ್ದರಿಂದ ಲೋಕ ಸಂಗ್ರಹಕ್ಕಾಗಿ ನಾನು ವರ್ಣಾಶ್ರಮ ಧರ್ಮವನ್ನು ಪಾಲಿಸುತ್ತಿದ್ದೇನೆ ಎಂದು ಆಚಾರ್ಯರ ಅಭಿಪ್ರಾಯ. ಅಲ್ಲದೆ ಹೀಗೆ ಆಕ್ಷೇಪಿಸಿದವನು ಆತ್ಮಜ್ಞಾನಿಯಾಗಿದ್ದರೂ ನಾಯಿಗಳನ್ನು ಕಟ್ಟಿಕೊಂಡು ಚಂಡಾಲನಂತಿರುವುದೇಕೆ?ಭೇದ ಬುದ್ಧಿಯಿಂದಲೇ ಅಲ್ಲವೇ ಆಕ್ಷೇಪಿಸಿದ್ದು-ಎಂದು ಅಭಿಪ್ರಾಯ.

ಭಾತಿ ಯಸ್ಯ ತು ಜಗದ್ದೃಢಬುದ್ಧೇಃ
ಸರ್ವಮಪ್ಯನಿಶಮಾತ್ಮತಯೈವ |
ಸ ದ್ವಿಜೋಽಸ್ತು ಭವತು ಶ್ವಪಚೋ ವಾ
ವಂದನೀಯ ಇತಿ ಮೇ ದೃಢನಿಷ್ಠಾ || ೩೬

“ಸ್ಥಿರವಾದ ಬುದ್ಧಿಯುಳ್ಳ ಯಾವ ಜ್ಞಾನಿಗೆ ಸಮಸ್ತ ಜಗತ್ತೂ ಸದಾ ಆತ್ಮಸ್ವರೂಪವಾಗಿಯೇ ತೋರುತ್ತದೆಯೋ ಆತನು ಬ್ರಾಹ್ಮಣನಾಗಿರಲಿ ಅಥವಾ ಶ್ವಪಚನಾಗಿರಲಿ ಅವನು ನಮಸ್ಕಾರಯೋಗ್ಯನೆಂದು ನನ್ನ ದೃಢವಾದ ನಿಶ್ಚಯ.

ಯಾ ಚಿತಿಃ ಸ್ಫುರತಿ ವಿಷ್ಣುಮುಖೇ ಸಾ
ಪುತ್ತಿಕಾವಧಿಷು ಸೈವ ಸದಾಽಹಮ್ |
ನೈವ ದೃಶ್ಯಮಿತಿ ಯಸ್ಯ ಮನೀಷಾ
ಪುಲ್ಕಸೋ ಭವತು ವಾ ಸ ಗುರುರ್ಮೇ || ೩೭

“ವಿಷ್ಣು ಶಿವ ಮೊದಲಾದ ದೇವಪ್ರಮುಖರಲ್ಲಿ ಯಾವ ಚೈತನ್ಯವು ಸ್ಫುರಿಸುತ್ತಿರುವುದೋ ಅದೇ ಗೆದ್ದಲು ಹುಳುವಿನ ಪರ್ಯಂತ ಸರ್ವವಸ್ತುವಿನಲ್ಲಿಯೂ ಸ್ಫುರಿಸುತ್ತದೆ. ಆ ಚೈತನ್ಯವೇ ನಾನು. ನಾನು ಎಂದಿಗೂ ಜ್ಞಾನಕ್ಕೆ ವಿಷಯನಾಗಿ ದೃಶ್ಯನಾಗುವುದೇ ಇಲ್ಲ-ಎಂದು ಯಾರಿಗೆ ದೃಢ ಬುದ್ಧಿ ಇರುವುದೊ ಆತನು ಚಂಡಾಲನಾಗಿದ್ದರೂ ನನಗೆ ಗುರುವೇ ಸರಿ.

ಯತ್ರ ಯತ್ರ ಚ ಭವೇದಿಹಬೋಧ-
ಸ್ತತ್ತದರ್ಥಸಮವೇಕ್ಷಣಕಾಲೇ |
ಬೋಧಮಾತ್ರಮವಶಿಷ್ಟಮಹಂ ತದ್
ಯಸ್ಯ ಧೀರಿತಿ ಗುರುಃ ಸ ನರೋ ಮೇ || ೩೮

ಲೋಕದಲ್ಲಿ ಯಾವಯಾವ ಪದಾರ್ಥವನ್ನು ತಿಳಿದಾಗಲೂ-ಎಂದರೆ ಯಾವಯಾವುದು ದೃಶ್ಯವಾಗುವುದೋ ಅವೆಲ್ಲವೂ ಮಿಥ್ಯೆಎಂದು ಅದನ್ನು ಗುರುತಿಸುವ ಜ್ಞಾನ ಸ್ವರೂಪನಾದ ದೃಕ್ ಎಂಬುದೇ ನಾನೆಂದು ಯಾರು ತಿಳಿದುಕೊಂಡಿದ್ದಾರೋ ಆ ಮನುಷ್ಯನು ನನಗೆ ಗುರುವೆಂದು ತಿಳಿಯುತ್ತೇನೆ"ಎಂದರು.

ಭಾಷಮಾಣ ಇತಿ ತೇನ ಕಲಾವಾ-
ನೇಷ ನೈಕ್ಷತ ತಮಂತ್ಯಜಮಗ್ರೇ |
ಧೂರ್ಜಟಿಂ ತು ಸಮುದೈಕ್ಷತ ಮೌಲಿ-
ಸ್ಫೂರ್ಜದೈಂದವಕಲಂ ಸಹ ವೇದೈಃ || ೩೯

ಹೀಗೆ ಮಾತನಾಡುತ್ತಿರುವಾಗಲೇ ವಿದ್ವಾಂಸರಾದ ಆಚಾರ್ಯರು ಎದುರುಗಡೆ ಆ ಅಂತ್ಯಜನನ್ನು ಕಾಣದೆ ಹೋದರು. ಅವನಿಗೆ ಬದಲಾಗಿ ಚತುರ್ವೇದಗಳಿಂದ ಸಹಿತನೂ ಶಿರಸ್ಸಿನಲ್ಲಿ ಚಂದ್ರಕಲೆಯನ್ನು ಧರಿಸಿದವನೂ ಆದ ಪರಮೇಶ್ವರನನ್ನು ಕಂಡರು!

ಭಯೇನ ಭಕ್ತ್ಯಾ ವಿನಯೇನ ಧೃತ್ಯಾ
ಯುಕ್ತಃ ಸ ಹರ್ಷೇಣ ಚ ವಿಸ್ಮಯೇನ |
ತುಷ್ಟಾವ ಶಿಷ್ಟಾನುಮತಃ ಸ್ತವೈಸ್ತಂ
ದೃಷ್ಟ್ವಾ ದೃಶೋರ್ಗೋಚರಮಷ್ಟಮೂರ್ತಿಮ್ || ೪೦

ಪರಮೇಶ್ವರನನ್ನು ನೋಡಿದೊಡನೆಯೇ ಆಚಾರ್ಯರಿಗೆ ಭಯ, ಭಕ್ತಿ, ವಿನಯ, ತೃಪ್ತಿ, ಹರ್ಷ, ವಿಸ್ಮಯ ಇವು-ಏಕಕಾಲದಲ್ಲುಂಟಾದವು. ಶಿಷ್ಟರಿಗೆ ಸಮ್ಮತವಾದ ಮಾರ್ಗದಲ್ಲಿ ನಡೆಯತಕ್ಕ ಆಚಾರ್ಯರು ಕಣ್ಣುಗಳಿಗೆ ಕಾಣಿಸಿಕೊಂಡ ಆ ಅಷ್ಟಮೂರ್ತಿಯನ್ನು ನೋಡುತ್ತ ನಾನಾ ಸ್ತೊತ್ರಗಳಿಂದ ಸ್ತುತಿಸಿದರು.

ದಾಸಸ್ತೇಽಹಂ ದೇಹದೃಷ್ಟ್ಯಾಽಸ್ಮಿ ಶಂಭೋ
ಜಾತಸ್ತೇಽಂಶೋ ಜೀವದೃಷ್ಟ್ಯಾ ತ್ರಿದೃಷ್ಟೇ |
ಸರ್ವಸ್ಯಾತ್ಮನ್ನಾತ್ಮದೃಷ್ಟ್ಯಾ ತ್ವಮೇವೇ -
ತ್ಯೇವಂ ಮೇ ಧೀರ್ನಿಶ್ಚಿತಾ ಸರ್ವಶಾಸ್ತ್ರೈಃ || ೪೧

"ಓ ಶಂಭುವೆ, ದೇಹದೃಷ್ಟಿಯಿಂದ ನಿನಗೆ ನಾನು ದಾಸನಾಗಿದ್ದನೆ. ಹೇ ತ್ರಿಲೋಚನ, ಜೀವದೃಷ್ಟಿಯಿಂದ ನೋಡಿದಾಗ ನಿನ್ನ ಅಂಶವಾಗಿದ್ದೇನೆ. ಹೇ ಸರ್ವಾತ್ಮ, ಆತ್ಮದೃಷ್ಟಿಯಿಂದಾದರೋ ನೀನೇ ನಾನಾಗಿದ್ದೇನೆ. ಸರ್ವಶಾಸ್ತ್ರಗಳನ್ನು ಪರಿಶೀಲಿಸಿ ನನ್ನ ಬುದ್ಧಿಯು ಈ ನಿಶ್ಚಯವನ್ನು ತಳೆದಿದೆ.

ಟಿಪ್ಪಣಿ:- ಪ್ರಸಿದ್ಧವಾದ ಈ ಶ್ಲೋಕವನ್ನಿಲ್ಲಿ ಸ್ಮರಿಸಿಕೊಳ್ಳಬಹುದು-
ದೇಹಬುದ್ಧ್ಯಾತು ದಾಸೋಽಹಂ ಜೀವಬುದ್ಧ್ಯಾ ತ್ವದಂಶಕಃ|
ಆತ್ಮಬುದ್ಧ್ಯಾ ತ್ವಮೇವಾಹಮಿತಿ ಮೇ ನಿಶ್ಚಿತಾ ಮತಿಃ||

ಯದಾಲೋಕಾದಂತರ್ಬಹಿರಪಿ ಚ ಲೋಕೋ ವಿತಿಮಿರೋ
ನ ಮಂಜೂಷಾ ಯಸ್ಯ ತ್ರಿಜಗತಿ ನ ಶಾಣೋ ನ ಚ ಖನಿಃ |
ಯತಂತೇ ಚೈಕಾಂತಂ ರಹಸಿ ಯತಯೋ ಯತ್ಪ್ರಣಯಿನಃ
ನಮಸ್ತಸ್ಮೈ ಸ್ವಸ್ಮೈ ನಿಖಿಲನಿಗಮೋತ್ತಂಸಮಣಯೇ || ೪೨

"ಹೇ ಸ್ವಾಮಿ, ನಿಖಿಲವೇದಶಿರೋಭೂಷಣ ಮಣಿಯಾಗಿದ್ದೀಯೆ. ಶ್ರೇಷ್ಠ ರತ್ನವಾದ ನಿನ್ನ ಪ್ರಭೆಯಿಂದ ವಿಶ್ವದ ಒಳಗೆ ಹೊರಗೆ ಸಹ ಕತ್ತಲು ಹೋಗಿ ಬೆಳಕು ಹರಡಿದೆ. ಈ ರತ್ನವನ್ನು ಮುಚ್ಚಿಡುವ ಪೆಟ್ಟಿಗೆ ಮೂರು ಲೋಕದಲ್ಲಿಯೂ ಇಲ್ಲ. ಇದನ್ನು ಒರೆಹಚ್ಚುವ ಸಾಣೆಯೂ ಇಲ್ಲ. ಇದು ಹುಟ್ಟುವ ಗಣಿಯೂ ಇಲ್ಲ! (ವಿರಕ್ತರಾದ) ಯತಿಗಳು ಈ ರತ್ನವನ್ನು ಪ್ರೀತಿಸಿ ಪಡೆಯುವುದಕ್ಕಾಗಿ ಏಕಾಂತಸ್ಥಳದಲ್ಲಿ ವಿಪುಲವಾಗಿ ಪ್ರಯತ್ನಿಸುತ್ತಾರೆ. ಅಂತಹ ರತ್ನವಾಗಿ ನಾನೇ ಆದ ನಿನಗೆ ನಮಸ್ಕಾರ!

ವಿವರಣೆ:- 'ಯಸ್ಯ ಭಾಸಾ ಸರ್ವಮಿದಂ ವಿಭಾತಿ'ಎಂಬ ಶ್ರುತಿವಾಕ್ಯವನ್ನಿಲ್ಲಿ ಸ್ಮರಿಸಿಕೊಳ್ಳಬೇಕು. ಸ್ವಸ್ಮೈ = ಪ್ರತ್ಯಕ್ ಚೈತನ್ಯವಾದ ನನ್ನ ನಿಜಸ್ವರೂಪಕ್ಕೆ ಎಂದರ್ಥ. 'ತತ್ತ್ವಮಸಿ'ಎಂಬ ಮಹಾವಾಕ್ಯದಲ್ಲಿ ತ್ವಂಪದ ಲಕ್ಷ್ಯವಾದ ಚೈತನ್ಯವಿದು.

ಅಹೋ ಶಾಸ್ತ್ರಂ ಶಾಸ್ತ್ರಾತ್ಕಿಮಿಹ ಯದಿ ನ ಶ್ರೀಗುರುಕೃಪಾ
ಚಿತಾ ಸಾ ಕಿಂ ಕುರ್ಯಾನ್ನನು ಯದಿ ನ ಬೋಧಸ್ಯ ವಿಭವಃ |
ಕಿಮಾಲಂಬಶ್ಚಾಸೌ ನ ಯದಿ ಪರತತ್ತ್ವಂ ಮಮ ತಥಾ
ನಮಃ ಸ್ವಸ್ಮೈ ತಸ್ಮೈ ಯದವಧಿರಿಹಾಶ್ಚರ್ಯಧಿಷಣಾ || ೪೩

ಆಹಾ! ಶಾಸ್ತ್ರವೇ (ವೇದವೇ) ಧನ್ಯತಮ! ಶ್ರೀಗುರುವಿನ ಕೃಪೆಯು ಲಭಿಸದಿದ್ದರೆ ಬರಿಯ ಶಾಸ್ತ್ರದಿಂದೇನಾಗುವುದು?ಗುರುಕೃಪೆಯು ಲಭಿಸಿದರೂ ತತ್ತ್ವಜ್ಞಾನವೇ ಉದಿಸದಿದ್ದರೆ ಗುರುಕೃಪೆಯಿಂದ ಏನು ಪ್ರಾಪ್ತವಾದಂತಾಯಿತು?ಹಾಗೆಯೇ ನನ್ನ ನಿಜಸ್ವರೂಪವು ಪರತತ್ತ್ವವಾಗದಿದ್ದಲ್ಲಿ ಆ ತತ್ತ್ವಜ್ಞಾನಕ್ಕೆ ವಿಷಯವಾದರೂ ಯಾವುದು?ಅಂತಹ ಪರತತ್ತ್ವವೇ ಆದ ನನ್ನ ನಿಜಸ್ವರೂಪಕ್ಕೆ ನಮಸ್ಕಾರ. ಈ ತತ್ತ್ವವು ಆಶ್ಚರ್ಯದ ಪರಮಾವಧಿ!"

ಇತ್ಯುದಾರ ವಚನೈರ್ಭಗವಂತಂ
ಸಂಸ್ತುವಂತಮಥ ಚ ಪ್ರಣಮಂತಮ್ ।
ಬಾಷ್ಪ ಪೂರ್ಣನಯನಂ ಮುನಿವರ್ಯಂ
ಶಂಕರಃ ಸಬಹುಮಾನಮುವಾಚ ॥ ೪೪

ಈ ಪ್ರಕಾರವಾಗಿ ಉದಾತ್ತತತ್ತ್ವಗರ್ಭಿತವಾದ ಉಕ್ತಿಗಳಿಂದ ಸ್ತುತಿಸುತ್ತ, ನಮಸ್ಕರಿಸುತ್ತ, ಆನಂದಬಾಷ್ಪಗಳನ್ನು ಸುರಿಸುತ್ತಿದ್ದ ಮುನಿಶ್ರೇಷ್ಠರಾದ ಶ್ರೀಶಂಕರರನ್ನು ನೋಡಿ ಮೆಚ್ಚಿ ಪರಮೇಶ್ವರನು ಹೀಗೆಂದನು-

ಅಸ್ಮದಾದಿಪದವೀಮಭಜಸ್ತ್ವಂ
ಶೋಧಿತಾ ತವ ತಪೋಧನ ನಿಷ್ಠಾ ।
ಬಾದರಾಯಣ ಇವ ತ್ವಮಪಿ ಸ್ಯಾಃ
ಸದ್ವರೇಣ್ಯ ಮದನುಗ್ರಹಪಾತ್ರಮ್ ॥ ೪೫

"ವಿದ್ವದ್ವರೇಣ್ಯನೆ, ನಮ್ಮಂತೆಯೇ ನೀನು ಪರಮಾತ್ಮಭಾವವನ್ನು ಪಡೆದಿದ್ದೀಯೆ. ಹೇ ತಪೋಧನ, ನಿನ್ನ ಜ್ಞಾನನಿಷ್ಠೆಯನ್ನು ಪರೀಕ್ಷಿಸಿದೆನು. ಬಾದರಾಯಣಾಚಾರ್ಯನಂತೆ ನೀನೂ ನನ್ನ ಅನುಗ್ರಹಕ್ಕೆ ಪಾತ್ರನಾಗಿರು!

ಸಂವಿಭಜ್ಯ ಸಕಲಶ್ರುತಿಜಾಲಂ
ಬ್ರಹ್ಮಸೂತ್ರಮಕರೋದನುಶಿಷ್ಟಃ ।
ಯತ್ರ ಕಾಣಭುಜ ಸಾಂಖ್ಯಪುರೋಗಾ-
ಣ್ಯುದ್ಧೃತಾನಿ ಕುಮತಾನಿ ಸಮೂಲಮ್ ॥ ೪೬

"ಬಾದರಾಯಣನು ನನ್ನ ಆಜ್ಞೆಯಂತೆ ಸಕಲವೇದರಾಶಿಯನ್ನೂ ಒಳಹೊಕ್ಕು ವಿವೇಚಿಸಿ ಬ್ರಹ್ಮಸೂತ್ರವನ್ನು ರಚಿಸಿದ್ದಾನೆ. ಅದರಲ್ಲಿ ಕಣಾದಮತ, ಸಾಂಖ್ಯಮತ-ಮೊದಲಾದ ಕುತ್ಸಿತಮತಗಳನ್ನು ಬುಡಸಹಿತವಾಗಿ ನಿರ್ಮೂಲ ಮಾಡಿದ್ದಾನೆ.

ತತ್ರ ಮೂಢಮತಯಃ ಕಲಿದೋಷಾತ್
ದ್ವಿತ್ರವೇದವಚನೋದ್ಬಲಿತಾನಿ ।
ಭಾಷ್ಯಕಾಣ್ಯರಚಯನ್ ಬಹುಬುದ್ಧ್ಯೈಃ
ದೂಷ್ಯತಾಮುಪಗತಾನಿ ಚ ಕೈಶ್ಚಿತ್ ॥ ೪೭

"ಕಲಿದೋಷದಿಂದ ಕೆಲವು ಮೂಢಬುದ್ಧಿಯವರು ಯಾವುದೋ ಎರಡುಮೂರು ವೇದವಚನಗಳನ್ನು ಆಧರಿಸಿ ಆ ಬ್ರಹ್ಮಸೂತ್ರಗಳಿಗೆ ಕುತ್ಸಿತವಾದ ಭಾಷ್ಯಗಳನ್ನು ರಚಿಸಿದ್ದಾರೆ. ಪ್ರಾಜ್ಞರಾದ ಕೆಲವರು ಆ ವ್ಯಾಖ್ಯಾನಗಳನ್ನು ಖಂಡಿಸಿಯೂ ಇದ್ದಾರೆ.

ತದ್ಭವಾನ್ವಿದಿತವೇದಶಿಖಾರ್ಥ-
ಸ್ತಾನಿ ದುರ್ಮತಿಮತಾನಿ ನಿರಸ್ಯ |
ಸೂತ್ರಭಾಷ್ಯಮಧುನಾ ವಿದಧಾತು
ಶ್ರುತ್ಯುಪೋದ್ಬಲಿತ ಯುಕ್ತ್ಯಭಿಯುಕ್ತಮ್ || ೪೮

"ನೀನಾದರೋ ಉಪನಿಷತ್ತುಗಳ ಅರ್ಥವನ್ನು ಚೆನ್ನಾಗಿ ಬಲ್ಲವನಾಗಿದ್ದೀಯೆ. ನೀನು ಆ ದುರ್ಬುದ್ಧಿಯವರ ಮತಗಳೆಲ್ಲವನ್ನೂ ಖಂಡಿಸಿ ಈಗ ಒಂದು ಸೂತ್ರಭಾಷ್ಯವನ್ನು ವಿರಚಿಸು. ಶ್ರುತಿಸಂಮತವಾದ ಯುಕ್ತಿಗಳನ್ನೇ ಸೂತ್ರಭಾಷ್ಯದಲ್ಲಿ ಬಳಸಿ ಅವರೆಲ್ಲರ ಮತಗಳನ್ನು ನಿರಾಕರಿಸು.

ಏತದೇವ ವಿಬುಧೈರಪಿ ಸೇಂದ್ರೈ-
ರರ್ಚನೀಯಮನವದ್ಯಮುದಾರಮ್ |
ತಾವಕಂ ಕಮಲಯೋನಿಸಭಾಯಾ-
ಮಪ್ಯವಾಪ್ಸ್ಯತಿ ವರಾಂ ವರಿವಸ್ಯಾಮ್ || ೪೯

"ಉದಾತ್ತವಿಚಾರಗಳಿಂದ ಕೂಡಿ ದೋಷರಹಿತವಾದ ನಿನ್ನ ಸೂತ್ರಭಾಷ್ಯವೇ ಇಂದ್ರಾದಿದೇವತೆಗಳಿಗೂ ಪೂಜ್ಯವಾದ ಸ್ಥಾನವನ್ನು ಪಡೆಯುವುದು. ಬ್ರಹ್ಮನ ಸಭೆಯಲ್ಲಿಯೂ ಸರ್ವೋತ್ತಮವಾದ ಭಾಷ್ಯವೆಂದು ಗೌರವವನ್ನು ಪಡೆಯುವುದು.

ಟಿಪ್ಪಣಿ:- ಭಾಷ್ಯಲಕ್ಷಣವನ್ನು ಪರಾಶರಪುರಾಣದಲ್ಲಿ ಹೀಗೆ ಹೇಳಿದ್ದಾರೆ-
ಸೂತ್ರಾರ್ಥೋ ವರ್ಣ್ಯತೇ ಯತ್ರ ವಾಕ್ಯೈಃ ಸೂತ್ರಾನುಸಾರಿಭಿಃ|
ಸ್ವಪದಾನಿ ಚ ವರ್ಣ್ಯಂತೇ ಭಾಷ್ಯಂ ಭಾಷ್ಯವಿದೋ ವಿದುಃ||

ಭಾಸ್ಕರಾಭಿನವಗುಪ್ತ ಪುರೋಗಾನ್
ನೀಲಕಂಠಗುರುಮಂಡನಮುಖ್ಯಾನ್ |
ಪಂಡಿತಾನಥ ವಿಜಿತ್ಯ ಜಗತ್ಯಾಂ
ಖ್ಯಾಪಯಾದ್ವಯಮತೇ ಪರತತ್ತ್ವಮ್ || ೫೦

"ಅನಂತರ ಭಾಸ್ಕರ, ಅಭಿನವಗುಪ್ತ, ನೀಲಕಂಠ, ಪ್ರಭಾಕರಗುರು, ಮಂಡನಮಿಶ್ರ-ಮೊದಲಾದ ಪಂಡಿತರನ್ನು ವಾದದಲ್ಲಿ ಪರಾಭವಗೊಳಿಸಿ, ಅದ್ವೈತಸಿದ್ಧಾಂತದಲ್ಲಿ ಪ್ರತಿಪಾದಿತವಾದ ಪರತತ್ತ್ವವನ್ನು ಜಗತ್ತಿನಲ್ಲಿ ಪ್ರಚಾರಮಾಡು.

ಟಿಪ್ಪಣಿ:- ಭಾಸ್ಕರ, ಅಭಿನವಗುಪ್ತ-ಮೊದಲಾದವರೆಲ್ಲರೂ ಆಚಾರ್ಯರಿಗಿಂತ ಬಹಳ ಈಚಿನವರೆಂದು ಇತಿಹಾಸವು ಹೇಳುತ್ತಿದೆ. ಇದೇ ಹೆಸರಿನ ಬೇರೆ ಪಂಡಿತರು ಇದ್ದರೂ ಇರಬಹುದು.

ಮೋಹಸಂತಮಸವಾಸರನಾಥಾಂ-
ಸ್ತತ್ರ ತತ್ರ ವಿನಿವೇಶ್ಯ ವಿನೇಯಾನ್ |
ಪಾಲನಾಯ ಪರತತ್ತ್ವಸರಣ್ಯಾ
ಮಾಮುಪೈಷ್ಯಸಿ ತತಃ ಕೃತಕೃತ್ಯಃ || ೫೧

ಅದ್ವೈತದ ಈ ಪರತತ್ತ್ವದ ಮಾರ್ಗವನ್ನು ಸಂರಕ್ಷಿಸಿಕೊಂಡು ಹೋಗುವುದಕ್ಕಾಗಿ, ಅಜ್ಞಾನದ ಕತ್ತಲೆಗೆ ಸೂರ್ಯಸದೃಶರಾದ ನಿನ್ನ ಶಿಷ್ಯರನ್ನು ಅಲ್ಲಲ್ಲಿ ಸ್ಥಾಪಿಸು. ಹೀಗೆ ಕರ್ತವ್ಯವೆಲ್ಲವನ್ನೂ ನೆರವೇರಿಸಿ ಕೃತಕೃತ್ಯನಾದ ಬಳಿಕ ನನ್ನನ್ನು ಸೇರಿಕೊಳ್ಳುವೆ"ಎಂದು ನುಡಿದನು.

ಏವಮೇನಮನುಗೃಹ್ಯ ಕೃಪಾವಾ-
ನಾಗಮೈಃ ಸಹ ಶಿವೋಽಂತರಧತ್ತ |
ವಿಸ್ಮಿತೇನ ಮನಸಾ ಸಹ ಶಿಷ್ಯೈಃ
ಶಂಕರೋಽಪಿ ಸುರಸಿಂಧುಮಯಾಸೀತ್ || ೫೨

ಕೃಪಾಳುವಾದ ಪರಶಿವನು ಈ ಪ್ರಕಾರವಾಗಿ ಶ್ರೀಶಂಕರಾಚಾರ್ಯರನ್ನು ಅನುಗ್ರಹಿಸಿ, (ನಾಲ್ಕು ನಾಯಿಗಳಂತಿದ್ದ) ನಾಲ್ಕುವೇದಗಳೊಡನೆ ಅಂತರ್ಧಾನವನ್ನೈದಿದನು. ವಿಸ್ಮಿತಚಿತ್ತರಾಗಿ ಶ್ರೀಶಂಕರರು ತಮ್ಮ ಶಿಷ್ಯರೊಡನೆ ಗಂಗಾನದಿಯ ಕಡೆಗೆ ಹೊರಟರು.

ಸನ್ನಿವರ್ತ್ಯ ವಿಧಿಮಾಹ್ನಿಕಮೀಶಂ
ಧ್ಯಾಯತೋ ಗುರುಮಥಾಽಖಿಲಭಾಷ್ಯಮ್ |
ಕರ್ತುಮುದ್ಯತಮಭೂದ್ಗುಣಸಿಂಧೋ-
ರ್ಮಾನಸಂ ನಿಖಿಲಲೋಕಹಿತಾಯ || ೫೩

ಅಲ್ಲಿ ಆಹ್ನಿಕವಿಧಿಯನ್ನು ಮುಗಿಸಿ ಹಿಂದಿರುಗಿ, ಜಗದ್ಗುರುವಾದ ಪರಶಿವನನ್ನು ಧ್ಯಾನಿಸುತ್ತಿದ್ದ ಗುಣಸಮುದ್ರರಾದ ಆಚಾರ್ಯರಿಗೆ ಎಲ್ಲ ಪ್ರಸ್ಥಾನತ್ರಯಗಳಿಗೂ ಭಾಷ್ಯವನ್ನು ರಚಿಸಬೇಕೆಂದು ಮನಸ್ಸಾಯಿತು. ಅವರಿಗೆ ಈ ರೀತಿಯಲ್ಲಿ ಮನಃಪ್ರವೃತ್ತಿಯಾದದ್ದು ಸಮಸ್ತಜನರ ಕಲ್ಯಾಣಕ್ಕಾಗಿಯೇ ಸರಿ.

ಕರ್ತೃತ್ವಶಕ್ತಿಮಧಿಗಮ್ಯ ಸ ವಿಶ್ವನಾಥಾತ್
ಕಾಶೀಪುರಾನ್ನಿರಗಮತ್ತ್ವವಿಕಾಸಭಾಜಃ |

ಪ್ರೀತಃ ಸರೋಜಮುಕುಲಾದಿವ ಚಂಚರೀಕೋ-
ನಿರ್ಬಂಧತಃ ಸುಖಮವಾಪ ಯಥಾ ದ್ವಿಜೇಂದ್ರಃ || ೫೪

ಶ್ರೀವಿಶ್ವನಾಥನ ಪ್ರಸಾದದಿಂದ ಭಾಷ್ಯಕರ್ತೃತ್ವಸಾಮರ್ಥ್ಯವನ್ನು ಪಡೆದು ಸಂಪ್ರೀತರಾಗಿ ಕಾಶೀನಗರದಿಂದ ಆಚಾರ್ಯರು ನಿರ್ಗಮಿಸಿದರು. ಇನ್ನೂ ಅರಳದಿರುವ ತಾವರೆಯ ಮೊಗ್ಗಿನಿಂದ ಹೊರಟ ದುಂಬಿಯಂತೆಯೂ ಬಂಧನದಿಂದ ಮುಕ್ತವಾದ ಪಕ್ಷಿರಾಜನಂತೆಯೂ ಅವರಿಗೆ ಆನಂದವಾಯಿತು.

ವಿವರಣೆ:-ಸಂಜೆ ತಾವರೆಯ ಹೂ ಮುಚ್ಚಿಕೊಂಡಾಗ ಅದರಲ್ಲಿ ದುಂಬಿಯು ಸಿಕ್ಕಿಕೊಂಡಿರುತ್ತದೆಯೆಂದೂ ಬೆಳಿಗ್ಗೆ ಅದು ಅರಳುತ್ತಿರುವಾಗಲೇ ಮಧುಸಂಚಯಕ್ಕಾಗಿ ದುಂಬಿಯು ಹೊರಗೆ ಹಾರಿ ಹೋಗುತ್ತದೆಯೆಂದೂ ಕವಿಸಮಯವಿದೆ. ನಿರ್ಬಂಧತಃ = ಬಂಧವಿಮುಕ್ತಿಯಿಂದ. 'ಅವಿಕಾಸಭಾಜಃ' ಎಂಬುದನ್ನು ಕಾಶೀಪುರಕ್ಕೆ ವಿಶೇಷಣವೆಂದೂ ಅರ್ಥಹೇಳಬಹುದು. 'ಪಾಂಡಿತ್ಯವಿಕಾಸವಿಲ್ಲದ ಕಾಶೀಪುರದಿಂದ ' ಎಂದು ಅರ್ಥ. ಆಗ ಕಾಶಿಯಲ್ಲಿ ವಿದ್ವಜ್ಜನರಿಲ್ಲದ್ದರಿಂದ ತಮ್ಮ ಕಾರ್ಯವ್ಯಾಪ್ತಿ ಸಂಕುಚಿತವಾದ ಪ್ರಯುಕ್ತ, ಅಲ್ಲಿಂದ ಹೋಗುವುದು ಆಚಾರ್ಯರಿಗೆ ಪ್ರಿಯವಾಯಿತೆಂದು ತಾತ್ಪರ್ಯ.

ಅದ್ವೈತದರ್ಶನವಿದಾಂ ಭುವಿ ಸಾರ್ವಭೌಮೋ
ಯಾತ್ಯೇಷ ಇತ್ಯುಡುಪಬಿಂಬಸಿತಾತಪತ್ರಮ್ |
ಅಸ್ತಾಚಲೇ ವಹತಿ ಚಾರು ಪುರಃ ಪ್ರಕಾಶ-
ವ್ಯಾಜೇನ ಚಾಮರಮಧಾದಿವ ದಿಕ್ಸುಕಾಂತಾ || ೫೫

ಜಗತ್ತಿನಲ್ಲಿಯೇ ಅದ್ವೈತದರ್ಶನವಿದರಲ್ಲಿ ಸಾರ್ವಭೌಮರಾದ ಆಚಾರ್ಯರು ಪ್ರಯಾಣ ಮಾಡುತ್ತಿದ್ದಾರೆಂದು ಅಸ್ತಪರ್ವತವು ಚಂದ್ರಮಂಡಲವೆಂಬ ಸುಂದರವಾದ ಶ್ವೇತಚ್ಛತ್ರವನ್ನು ಎತ್ತಿಹಿಡಿಯಿತು. ಪೂರ್ವದಿಕ್ಕೆಂಬ ಅಂಗನೆಯು ಪ್ರಾತಃಕಾಲದ ಮುಂಬೆಳಗೆಂಬ ವ್ಯಾಜದಿಂದ ಚಾಮರವನ್ನು ಬೀಸುತ್ತಿರುವಳೋ ಎಂಬಂತೆ ಕಾಣಿಸಿತು!

ವಿವರಣೆ:-ಉಷಃಕಾಲದಲ್ಲಿ ಆಚಾರ್ಯರು ಕಾಶಿಯಿಂದ ಹೊರಟರು. ಆಗ ಚಂದ್ರಮಂಡಲವು ಪಶ್ಚಿಮದಲ್ಲಿತ್ತು. ಅರುಣೋದಯವಾದ್ದರಿಂದ ಬೆಳಕು ಪೂರ್ವದಿಕ್ಕಿನಲ್ಲಿ ಹರಡಿತ್ತು- ಎಂದು ಅಭಿಪ್ರಾಯ. 'ದಿಕ್‌ಸುಕಾಂತಾ' ಎಂಬಲ್ಲಿ 'ದಿಙ್ಮುಖೇನಃ' ಎಂದು ಪಾಠಾಂತರವಿದೆ. ಪೂರ್ವದಿಕ್ಕಿನ ಮುಖದಂತಿರುವ, ಇನಃ = ಸೂರ್ಯನೆಂದರ್ಥ.

ಶಾಂತಾಂ ದಿಶಂ ದೇವನೃಣಾಂ ವಿಹಾಯ
ನಾನ್ಯಾ ದಿಗಸ್ಮೈ ಸಮರೋಚತಾದ್ಧಾ |
ತತ್ರತ್ಯತೀರ್ಥಾನಿ ನಿಷೇವಮಾಣೋ
ಗಂತುಂ ಮನೋಽಧಾದ್ಬದರೀಂ ಕ್ರಮಾತ್ಸಃ || ೫೬

ದೇವತೆಗಳಿಗೂ ಮಾನವರಿಗೂ ಶಾಂತಿಕರವಾದ ಉತ್ತರದಿಕ್ಕನ್ನು ಬಿಟ್ಟು ಇನ್ನಾವದಿಕ್ಕೂ ಆಚಾರ್ಯರಿಗೆ ರುಚಿಸಲೇ ಇಲ್ಲ. ಆದ್ದರಿಂದ ಅವರು ಉತ್ತರದಲ್ಲಿರುವ ತೀರ್ಥಕ್ಷೇತ್ರಗಳನ್ನು ಸೇವಿಸುತ್ತ ಕ್ರಮವಾಗಿ ಬದರೀಕ್ಷೇತ್ರಕ್ಕೆ ಹೋಗಬೇಕೆಂದು ಮನಸ್ಸು ಮಾಡಿದರು.

ಟಿಪ್ಪಣಿ: 'ಉದೀಚ ಉತ್ಸೃಜತ್ಯೇಷಾ ವೈ ದೇವಮನುಷ್ಯಾಣಾಂ ಶಾಂತಾ ದಿಕ್' ಎಂದು ಶ್ರುತಿವಾಕ್ಯವಿದೆ.

ತೇನಾನ್ವವರ್ತಿ ಮಹತಾ ಕ್ವಚಿದುಷ್ಣಶಾಲಿ
ಶೀತಂ ಕ್ವಚಿತ್ ಕ್ವಚಿದ್‌ಋಜು ಕ್ವಚಿದಪ್ಯರಾಲಮ್ |
ಉತ್ಕಂಟಕಂ ಕ್ವಚಿದಕಂಟಕವತ್‌ಕ್ವಚಿಚ್ಚ
ತದ್ವರ್ತ್ಮ ಮೂರ್ಖಜನಚಿತ್ತಮಿವಾವ್ಯವಸ್ಥಮ್ || ೫೭

ಆ ಮಹಾತ್ಮರು ಹೋಗುತ್ತಿದ್ದ ದಾರಿಯಲ್ಲಿ ಕೆಲವೆಡೆ ಬಹಳ ಸೆಕೆ; ಕೆಲವೆಡೆ ಬಹಳ ಚಳಿ ; ಒಂದು ಕಡೆ ಸರಳವಾದ ಮಾರ್ಗ, ಇನ್ನೊಂದು ಕಡೆ ಸೊಟ್ಟ ಸೊಟ್ಟವಾದದ್ದು, ಕೆಲವು ದೂರ ಮುಳ್ಳಿನ ದಾರಿ, ಕೆಲವು ದೂರ ಮುಳ್ಳಿಲ್ಲದ್ದು, ಹೀಗೆ ಆ ದಾರಿಯು ಮೂರ್ಖಜನರ ಚಿತ್ತದಂತೆ ಅವ್ಯವಸ್ಥಿತವಾಗಿತ್ತು!

ಆತ್ಮಾನಮಕ್ರಿಯಮಪವ್ಯಯಮೀಕ್ಷಿತಾಪಿ
ಪಾಂಥೈಃ ಸಮಂ ವಿಚಲಿತಃ ಪಥಿ ಲೋಕರೀತ್ಯಾ |
ಆದತ್ಫಲಾನಿ ಮಧುರಾಣ್ಯಪಿಬತ್ಪಯಾಂಸಿ
ಪ್ರಾಯಾದುಪಾವಿಶದಶೇತ ತಥೋದತಿಷ್ಠತ್ || ೫೮

ಆತ್ಮನು ಅಕ್ರಿಯನೆಂದೂ ವಿಕಾರರಹಿತನೆಂದೂ ಬಲ್ಲವರಾದರೂ ಆಚಾರ್ಯರು ಪಾಂಥರೊಡನೆ ಪ್ರಯಾಣಮಾಡಿದರು. ಲೋಕವ್ಯವಹಾರವನ್ನನುಸರಿಸಿ ಮಾರ್ಗದಲ್ಲಿ ಮಧುರವಾದ ಹಣ್ಣುಗಳನ್ನು ತಿಂದರು, ನೀರನ್ನು ಕುಡಿದರು, ಹಾಗೆಯೇ ಕುಳಿತುಕೊಳ್ಳುತ್ತಿದ್ದರು, ಮಲಗುತ್ತಿದ್ದರು, ಏಳುತ್ತಲೂ ಇದ್ದರು!

ತೇನ ವ್ಯನೀಯತ ತದಾ ಪದವೀ ದವೀಯ-
ಸ್ಯಾಸಾದಿತಾ ಚ ಬದರೀ ವನಪುಣ್ಯಭೂಮಿಃ |
ಗೌರೀಗುರುಪ್ರವದಮಂದಝರೀಪರೀತಾ
ಖೇಲತ್ಸುರೀಯುತದರೀ ಪರಿಭಾತಿ ಯಸ್ಯಾಮ್ || ೫೯

ಹೀಗೆ ಬಹುದೂರ ಪ್ರಯಾಣಮಾಡಿದಮೇಲೆ ಬದರೀಕ್ಷೇತ್ರದ ಪುಣ್ಯಾರಣ್ಯ ಭೂಮಿಗೆ ಬಂದು ಸೇರಿದರು. ಆ ಅರಣ್ಯಭೂಮಿಯಲ್ಲಿ ಗೌರೀಗುರುವಾದ ಹಿಮಾಲಯ ಗಿರಿಯಿಂದ

ವೇಗವಾಗಿ ಹರಿದು ಬರುವ ಝರಿಗಳಿದ್ದವು. ಕ್ರೀಡಿಸುತ್ತಿದ್ದ ಅಪ್ಸರೆಯರಿಂದ ಕೂಡಿದ ಗಿರಿಕಂದರಗಳು ಶೋಭಿಸುತ್ತಿದ್ದವು.

ಸ ದ್ವಾದಶೇ ವಯಸಿ ತತ್ರ ಸಮಾಧಿನಿಷ್ಠೈ-
ರ್ಬ್ರಹ್ಮರ್ಷಿಭಿಃ ಶ್ರುತಿಶಿರೋ ಬಹುಧಾ ವಿಚಾರ್ಯ |
ಷಡ್ಭಿಶ್ಚ ಸಪ್ತಭಿರಥೋ ನವಭಿಶ್ಚ ಖಿನ್ನೈ -
ರ್ಭವ್ಯಂ ಗಭೀರಮಧುರಂ ಫಣತಿ ಸ್ಮ ಭಾಷ್ಯಮ್ || ೬೦

ಆಗ ಶ್ರೀಶಂಕರಾಚಾರ್ಯರಿಗೆ ಕೇವಲ ಹನ್ನೆರಡು ವರ್ಷವಯಸ್ಸು. ಅವರು ಬದರೀಕ್ಷೇತ್ರದಲ್ಲಿ ಸಮಾಧಿನಿಷ್ಠರಾಗುತ್ತಿದ್ದ ಬ್ರಹ್ಮರ್ಷಿಗಳೊಡನೆ ಉಪನಿಷತ್ತುಗಳ ಅರ್ಥವನ್ನು ಬಹುವಿಧವಾಗಿ ವಿಮರ್ಶೆಮಾಡಿದರು. ಆ ಬ್ರಹ್ಮರ್ಷಿಗಳು ಹಿಂದೆ ಆರು ಏಳು ಒಂಬತ್ತರ ಹಾವಳಿಯಿಂದ ಖಿನ್ನರಾಗಿ ವೈರಾಗ್ಯದಿಂದ ಸಮಾಧಿನಿಷ್ಠರಾಗಿದ್ದರು. ಅನಂತರ ಆಚಾರ್ಯರು ಭವ್ಯವೂ ಗಂಭೀರವೂ ಮಧುರವೂ ಆದ ಸೂತ್ರ ಭಾಷ್ಯವನ್ನು ವಿರಚಿಸಿದರು.

ವಿವರಣೆ:-ವಿವೇಕಿಗಳಾದ ಜನರನ್ನು ಪೀಡಿಸತಕ್ಕವು ಇವು-
೧. ಹಸಿವು, ಬಾಯಾರಿಕೆ, ಮುಪ್ಪು, ಮರಣ, ಶೋಕ, ಮೋಹ-ಎಂಬ ಷಡೂರ್ಮಿಗಳು
೨. ತ್ವಕ್, ರಕ್ತ, ಮಾಂಸ, ಅಸ್ಥಿ, ಮೇದಸ್(ಕೊಬ್ಬು), ಮಜ್ಜಾ(ಎಲುಬಿನ ಸಾರ), ರೇತಸ್ -ಎಂಬ ಏಳುಧಾತುಗಳು.
೩. ಐದು ಜ್ಞಾನೇಂದ್ರಿಯಗಳು, ಮನೋಬುದ್ಧ್ಯಹಂಕಾರ ಚಿತ್ತಗಳೆಂಬ ನಾಲ್ಕು ಅಂತಃಕರಣಗಳು ಸೇರಿ ಒಂಬತ್ತು.

ಕರತಲಕಲಿತಾದ್ವಯಾತ್ಮತತ್ತ್ವಂ
ಕ್ಷಪಿತ ದುರಂತ ಚಿರಂತನಪ್ರಮೋಹಮ್ |
ಉಪಚಿತಮುದಿತೋದಿತೈರ್ಗುಣೌಘೈ-
ರುಪನಿಷದಾಮಯಮುಜ್ಜಹಾರ ಭಾಷ್ಯಮ್ || ೬೧

ಅನಂತರ ಅದ್ವಿತೀಯವಾದ ಆತ್ಮತತ್ತ್ವವನ್ನು ಅಂಗೈಯಲ್ಲಿರುವಂತೆ ಸ್ಪಷ್ಟವಾಗಿ ತೋರಿಸತಕ್ಕದ್ದೂ ದುರಂತವೂ ಚಿರಂತನವೂ ಆದ ಅಜ್ಞಾನವನ್ನು ನಾಶಗೊಳಿಸತಕ್ಕದ್ದೂ ಸಮಸ್ತಗುಣಗಳಿಂದ ಭೂಷಿತವೂ ಆದ ಉಪನಿಷತ್ತುಗಳ ಭಾಷ್ಯವನ್ನು ರಚಿಸಿದರು.

ವಿವರಣೆ:-ಭಾಷ್ಯದಲ್ಲಿರುವ ಗುಣಗಳು-
ಉಪಕ್ರಮೋಪಸಂಹಾರೌ ಅಭ್ಯಾಸೋಽಪೂರ್ವತಾ ಫಲಮ್ |
ಅರ್ಥವಾದೋಪಪತ್ತೀ ಚ ಲಿಂಗಂ ತಾತ್ಪರ್ಯನಿರ್ಣಯೇ ||
ಎಂಬಂತೆ ತಾತ್ಪರ್ಯವನ್ನು ನಿರ್ಣಯಿಸಲು ಬೇಕಾದ ಉಪಕ್ರಮಾದಿ ಆರು ಲಿಂಗಗಳು, ಯುಕ್ತಿಗಳು, ದೃಷ್ಟಾಂತ, ಪ್ರಸನ್ನ ಶೈಲಿ -ಮುಂತಾದವು

ಈ ಶ್ಲೋಕದಲ್ಲಿ ವಿವಕ್ಷಿತವಾದ ಉಪನಿಷತ್ತುಗಳು ಇವು-
ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ ಮತ್ತು ಬೃಹದಾರಣ್ಯಕ. ಇವೇ ದಶೋಪನಿಷತ್ತುಗಳು.

ತತೋ ಮಹಾಭಾರತಸಾರಭೂತಾಃ
ಸ ವ್ಯಾಕರೋದ್ಭಾಗವತೀಶ್ಚ ಗೀತಾಃ |
ಸನತ್ಸುಜಾತೀಯಮಸತ್ಸುದೂರಂ
ತತೋ ನೃಸಿಂಹಸ್ಯ ಚ ತಾಪಿನೀಯಮ್ || ೬೨

ಆಮೇಲೆ ಮಹಾಭಾರತದಲ್ಲಿ ಸಾರಭೂತವಾದ ಮತ್ತು ಭಗವಂತನಿಂದ ಗೀತವಾದ ಭಗವದ್ಗೀತೆಗೆ ವ್ಯಾಖ್ಯಾನರೂಪವಾದ ಭಾಷ್ಯವನ್ನೂ ವಿದ್ವಾಂಸರಲ್ಲದವರಿಗೆ ಅರ್ಥವಾಗದೆ ಬಹುದೂರದಲ್ಲಿರುವ ಸನತ್ಸುಜಾತೀಯಕ್ಕೆ ಭಾಷ್ಯವನ್ನೂ ವಿರಚಿಸಿ ನೃಸಿಂಹತಾಪನೀಯ ವೆಂಬ ಉಪನಿಷತ್ತಿಗೂ ಭಾಷ್ಯವನ್ನು ಬರೆದರು.

ಟಿಪ್ಪಣಿ:- 'ಭಾಗವತೀಃ ಗೀತಾಃ'ಎಂಬುದಕ್ಕೆ 'ಭಗವಂತನನ್ನು ಪ್ರತಿಪಾದಿಸುವ (ಭೀಷ್ಮಾದಿಗಳಿಂದ) ಗೀತವಾದ ವಿಷ್ಣುಸಹಸ್ರನಾಮಗಳಿಗೆ ' ಭಾಷ್ಯವನ್ನು ರಚಿಸಿದರು-ಎಂಬ ಅರ್ಥವನ್ನೂ ವ್ಯಾಖ್ಯಾನಕಾರರು ಹೇಳಿದ್ದಾರೆ.

ಗ್ರಂಥಾನಸಂಖ್ಯಾಂಸ್ತದನೂಪದೇಶ
ಸಾಹಸ್ರಿಕಾದೀನ್ ವ್ಯದಧಾತ್ಸುಧೀಡ್ಯಃ |
ಶ್ರುತ್ವಾರ್ಥವಿದ್ಯಾನವಿವೇಕಪಾಶಾ-
ನ್ಮುಕ್ತಾ ವಿರಕ್ತಾ ಯತಯೋ ಭವಂತಿ || ೬೩

ವಿದ್ವಾಂಸರಿಂದ ಸ್ತುತ್ಯರೂ ತತ್ತ್ವಾರ್ಥವಿದರೂ ಆದ ಆಚಾರ್ಯರು ಉಪದೇಶಸಾಹಸ್ರಿಯೇ ಮೊದಲಾದ ಗ್ರಂಥಗಳನ್ನೂ ಅಸಂಖ್ಯಾತವಾಗಿ ಬರೆದರು. ವಿರಕ್ತರಾದ ಯತಿಗಳು ಈ ಗ್ರಂಥಗಳನ್ನು ಶ್ರವಣಮಾಡಿದರೆ ಅಜ್ಞಾನಪಾಶದಿಂದ ಬಿಡುಗಡೆ ಹೊಂದುತ್ತಾರೆ.

ಶ್ರೀಶಂಕರಾಚಾರ್ಯರವಾವುದೇತ್ಯ
ಪ್ರಕಾಶಮಾನೇ ಕುಮತಿಪ್ರಣೀತಾಃ |
ವ್ಯಾಖ್ಯಾಂಧಕಾರಾಃ ಪ್ರಲಯಂ ಸಮೀಯು-
ರ್ದುರ್ವಾದಿಚಂದ್ರಪ್ರಭಯಾऽವಿಯುಕ್ತಾಃ || ೬೪

(ಆಚಾರ್ಯರು ಈ ಗ್ರಂಥಗಳನ್ನು ರಚಿಸುವುದಕ್ಕೆ ಮೊದಲು) ಬುದ್ಧಿಹೀನರು ಬರೆದಿದ್ದ ವ್ಯಾಖ್ಯಾನಗಳೆಂಬ ಅಂಧಕಾರಗಳು ಬಹಳ ಸಂಖ್ಯೆಯಲ್ಲಿದ್ದವು. ದುರ್ವಾದಿಗಳ ವಾದವೆಂಬ

ಬೆಳದಿಂಗಳು ಸ್ವಲ್ಪ ಇತ್ತು. ಶ್ರೀಶಂಕರಾಚಾರ್ಯರೆಂಬ ಚಂಡಭಾಸ್ಕರನು ಉದಯಿಸಲಾಗಿ (ಆ ಬೆಳದಿಂಗಳು ಸಹಿತ)ಸಮಸ್ತ ಅಂಧಕಾರಗಳೂ ಹೇಳ ಹೆಸರಿಲ್ಲದಂತೆ ಸರ್ವನಾಶವಾದವು.

ಅಥ ವ್ರತೀಂದುರ್ವಿಧಿವದ್ವಿನೇಯಾ-
ನಧ್ಯಾಪಯಾಮಾಸ ಸ ನೈಜಭಾಷ್ಯಮ್ |
ತರ್ಕೈಃ ಪರೇಷಾಂ ತರುಣೈರ್ವಿವಸ್ವನ್-
ಮರೀಚಿಭಿಃ ಸಿಂಧುವದಪ್ರಶೋಷ್ಯಮ್ || ೬೫

ಅನಂತರ ಯತಿಶ್ರೇಷ್ಠರಾದ ಆಚಾರ್ಯರು ತಮ್ಮ ಭಾಷ್ಯವನ್ನು ವಿಧಿ ಪೂರ್ವಕವಾಗಿ ಶಿಷ್ಯರಿಗೆ ಬೋಧಿಸಿದರು. ಸೂರ್ಯನ ಎಳೆಯ ಕಿರಣಗಳಿಗೆ ಸಮುದ್ರವನ್ನು ಹೇಗೆ ಒಣಗಿಸಲು ಅಶಕ್ಯವೋ ಹಾಗೆ ಪರವಾದಿಗಳ ತರ್ಕಗಳಿಗೆ ಶ್ರೀಶಾಂಕರಭಾಷ್ಯವು ದುರ್ಭೇದ್ಯವಾದದ್ದು.

ನಿಜಶಿಷ್ಯಹೃದಬ್ಜ ಭಾಸ್ವತೋ
ಗುರುವರ್ಯಸ್ಯ ಸನಂದನಾದಯಃ |
ಶಮಪೂರ್ವಗುಣೈರಶುಶ್ರುವನ್
ಕತಿಚಿಚ್ಛಿಷ್ಯಗಣೇಷು ಮುಖ್ಯತಾಮ್ || ೬೬

ಶಿಷ್ಯರ ಹೃದಯಕಮಲಗಳಿಗೆ ಆನಂದವನ್ನುಂಟು ಮಾಡುವ ಸೂರ್ಯಸ್ವರೂಪರಾಗಿದ್ದ ಆ ಗುರುಶ್ರೇಷ್ಠರ ಶಿಷ್ಯಗಣಗಳಲ್ಲಿ ಸನಂದನನೇ ಮೊದಲಾದ ಕೆಲವರು ಶಮದಮಾದಿ ಗುಣಗಳಿಂದ ಪ್ರಮುಖ ಶಿಷ್ಯರೆನಿಸಿ ಗುರುಸೇವೆ ಮಾಡುತ್ತಿದ್ದರು.

ಟಿಪ್ಪಣಿ:- ಈ ಶ್ಲೋಕದಲ್ಲಿ 'ಅಶುಶ್ರುವನ್'ಎಂಬ ಶಬ್ದ ಸರಿಯಾದ್ದಲ್ಲ. ಅರ್ಥವೂ ಹೊಂದುವುದಿಲ್ಲ. 'ಅಶಿಶ್ರಿಯನ್'ಎಂದಿರಬೇಕು. 'ಶ್ರಿಞ್ - ಸೇವಾಯಾಮ್'. 'ಣಿಶ್ರಿದ್ರುಸ್ರುಭ್ಯಃ ಕರ್ತರಿ ಚಙ್'. ಭೂತಕಾಲ ದಲ್ಲಿ ಲುಙ್.

ಸ ನಿತರಾಮಿತರಾಶ್ರವತೋ ಲಸನ್
ನಿಯಮಮದ್ಭುತಮಾಪ್ಯ ಸನಂದನಃ |
ಶ್ರುತನಿಜಶ್ರುತಿಕೋಽಪ್ಯಭವತ್ಪುನಃ
ಪಿಪಠಿಷುರ್ಗಹನಾರ್ಥವಿವಿತ್ಸಯಾ || ೬೭

ವಿಧೇಯರಾಗಿದ್ದ ಆ ಶಿಷ್ಯರಲ್ಲಿ ಸನಂದನನು ಇತರರಿಗಿಂತ ವಿಶೇಷವಾದ ನಿಯಮವನ್ನು ಪಾಲಿಸತಕ್ಕವನಾಗಿ ಶ್ರೇಷ್ಠನೆನಿಸಿದ್ದನು. ಅವನು ತನ್ನ ಶಾಖೆಯ ವೇದದ ಅರ್ಥವನ್ನು ಚೆನ್ನಾಗಿ ತಿಳಿದಿದ್ದರೂ ಗೂಢವಾದ ಅರ್ಥವಿಶೇಷವನ್ನು ಅರಿಯಬೇಕೆಂದು ಅದೇ ವಿಷಯವನ್ನು ಮತ್ತೆ ಅಧ್ಯಯನಮಾಡಲು ಅಪೇಕ್ಷಿಸಿದನು.

ಟಿಪ್ಪಣಿ:- ಆಶ್ರವ= ಹೇಳಿದ್ದನ್ನು ಪಾಲಿಸತಕ್ಕ ವಿಧೇಯ. 'ಆಶ್ರವೋಽಂಗೀಕೃತೌ ಕ್ಲೇಶೇನಾನ್ಯವದ್ಯ ಚನಸ್ಥಿತೇ' ಎಂದು ಮೇದಿನೀಕೋಶ.

ಅದ್ವಂದ್ವಭಕ್ತಿಮಮುಮಾತ್ಮಪದಾರವಿಂದ-
ದ್ವಂದ್ವೇ ನಿತಾಂತದಯಮಾನಮನಾ ಮುನೀಂದ್ರಃ |
ಆಮ್ನಾಯಶೇಖರ ರಹಸ್ಯ ನಿಧಾನಕೋಶ-
ಮಾತ್ಮೀಯಕೋಶಮಖಿಲಂ ತ್ರಿರಪಾಠಯತ್ತಮ್ || ೬೮

ಮುನೀಂದ್ರರಾದ ಶ್ರೀಶಂಕರರು ತಮ್ಮ ಪಾದಪದ್ಮಯುಗಳದಲ್ಲಿ ಅಸಾಧಾರಣ ಭಕ್ತಿಯನ್ನಿಟ್ಟಿದ್ದ ಆ ಶಿಷ್ಯನಲ್ಲಿ ಅಪಾರದಯಾಶಾಲಿಯಾದ ಅಂತಃಕರಣವನ್ನಿರಿಸಿದ್ದರು. ಆದ್ದರಿಂದ ವೇದಾಂತರಹಸ್ಯಗಳ ಭಂಡಾರವಾದ ತಮ್ಮ ಗ್ರಂಥವೆಲ್ಲವನ್ನೂ ಸನಂದನನಿಗೆ ಮೂರು ಸಲ ಪಾಠಮಾಡಿದರು!

ಈರ್ಷ್ಯಾಭರಾಕುಲಹೃದಾಮಿತರಾಶ್ರವಾಣಾಂ
ಪ್ರಖ್ಯಾಪಯನ್ನನುಪಮಾಮದಸೀಯಭಕ್ತಿಮ್ |
ಅಭ್ರಾಪಗಾಪರತಟಸ್ಥಮಮುಂ ಕದಾಚಿತ್
ಆಕಾರಯನ್ನಿಗಮಶೇಖರದೇಶಿಕೇಂದ್ರಃ || ೬೯

ಇದರಿಂದ ಉಳಿದ ಶಿಷ್ಯರ ಹೃದಯದಲ್ಲಿ ಹೊಟ್ಟೆಕಿಚ್ಚು ಉಂಟಾಯಿತು! ವೇದಾಂತದೇಶಿಕೇಂದ್ರರಾದ ಆಚಾರ್ಯರು ಒಂದು ದಿನ ಸನಂದನನ ಅಸದೃಶಭಕ್ತಿಯನ್ನು ಉಳಿದವರಿಗೆ ತೋರಿಸಿಕೊಡಬೇಕೆಂದು ಬಯಸಿ, ನದಿಯ ಆಚೆಯ ದಡದಲ್ಲಿದ್ದ ಆತನನ್ನು ಕೂಡಲೇ ಬರಬೇಕೆಂದು ಕರೆದರು.

ಸಂತಾರಿಕಾಽನವಧಿ ಸಂಸೃತಿಸಾಗರಸ್ಯ
ಕಿಂ ತಾರಯೇನ್ನ ಸರಿತಂ ಗುರುಪಾದಭಕ್ತಿಃ |
ಇತ್ಯಂಜಸಾ ಪ್ರವಿಶತಃ ಸಲಿಲಂ ದ್ಯುಸಿಂಧುಃ
ಪದ್ಮಾನ್ಯುದಂಚಯತಿ ತಸ್ಯ ಪದೇ ಪದೇ ಸ್ಮ || ೭೦

ಆಗ ಸನಂದನನನು"ಶ್ರೀಗುರುಭಕ್ತಿಯು ಅಪಾರವಾದ ಸಂಸಾರಸಾಗರವನ್ನೇ ದಾಟಿಸಬಲ್ಲದು. ಈ ಹೊಳೆಯನ್ನು ದಾಟಿಸಲಾರದೆ?" ಎಂದುಕೊಳ್ಳುತ್ತ ಗಂಗಾನದಿಯ ನೀರಿನಲ್ಲಿ ಒಡನೆಯೇ ಕಾಲಿಟ್ಟು ಹೊರಟೇಬಿಟ್ಟನು! ಗಂಗೆಯು (ಆತನ ಗುರುಭಕ್ತಿಗೆ ಮೆಚ್ಚಿ)ಅವನ ಪಾದದ ಕೆಳಗೆ ಒಂದೊಂದು ಕಮಲವನ್ನು ಆಸರೆಯಾಗಿ ಇಡುತ್ತಿದ್ದಳು!

ಪಾಥೋರುಹೇಷು ವಿನಿವೇಶ್ಯ ಪದಂ ಕ್ರಮೇಣ
ಪ್ರಾಪ್ತೋಪಕಂಠಮಮುಮಪ್ರತಿಮಾನಭಕ್ತಿಮ್ |
ಆನಂದವಿಸ್ಮಯನಿರಂತನಿರಂತರೋಽಸಾ -
ವಾಶ್ಲಿಷ್ಯ ಪದ್ಮಪದನಾಮಪದಂ ವ್ಯತಾನೀತ್ || ೭೧

ಈ ಪ್ರಕಾರವಾಗಿ ಕಮಲಗಳ ಮೇಲೆ ಪಾದವನ್ನಿಡುತ್ತ ತಮ್ಮ ಬಳಿಗೆ ಸನಂದನನು ಬಂದುದನ್ನು ನೋಡಿ, ಅವನ ಅಸದೃಶವಾದ ಭಕ್ತಿಗೆ ಮೆಚ್ಚಿ, ಆನಂದವಿಸ್ಮಯಗಳಿಂದ ತುಂಬಿತುಳುಕಿದ ಶ್ರೀಶಂಕರರು ಆ ಶಿಷ್ಯನಿಗೆ ಪದ್ಮಪಾದ-ಎಂದು ಹೆಸರಿಟ್ಟರು!

ತಂ ಪಾಠಯಂತಮನವದ್ಯತಮಾತ್ಮವಿದ್ಯಾಂ
ಯೇ ತು ಸ್ಥಿತಾಃ ಸದಸಿ ತತ್ತ್ವವಿದಾಂ ಸಗರ್ವಾಃ |
ಆಚಿಕ್ಷಿಪುಃ ಕುಮತಪಾಶುಪತಾಭಿಮಾನಾಃ
ಕೇಚಿದ್ವಿವೇಕವಿಟಪೋಗ್ರದವಾಯಮಾನಾಃ || ೭೨

ಆಗ ಕುತ್ಸಿತವಾದ ಪಾಶುಪತಮತದಲ್ಲಿ ಅಭಿಮಾನವಿಟ್ಟುಕೊಂಡು ತತ್ತ್ವಜ್ಞರ ಸಭೆಯಲ್ಲಿ ಸೇರಿಕೊಂಡಿದ್ದ ಕೆಲವು ಗರ್ವಿಷ್ಠರಾದ ಪಂಡಿತರು, ಪರಿಶುದ್ಧವಾದ ಆತ್ಮವಿದ್ಯೆಯನ್ನು ಶಿಷ್ಯರಿಗೆ ಬೋಧಿಸುತ್ತಿದ್ದ ಆಚಾರ್ಯರನ್ನು ಕುರಿತು ಕೆಲವು ಆಕ್ಷೇಪಗಳನ್ನೆತ್ತಿದರು. ಆ ಪಂಡಿತರು ವಿವೇಕವೆಂಬ ವೃಕ್ಷಕ್ಕೆ ಉಗ್ರವಾದ ಕಾಳ್ಗಿಚ್ಚಿನಂತೆ ನಡೆದುಕೊಳ್ಳುತ್ತಿದ್ದರು.

ತದ್ವಿಕಲ್ಪನಮನಲ್ಪಮನೀಷಃ
ಶ್ರುತ್ಯುದಾಹರಣತಃ ಸ ನಿರಸ್ಯ |
ಈಷದಸ್ತಮಿತಗರ್ವಭರಾಣಾ-
ಮಾಗಮಾನಪಿ ಮಮಂಥ ಪರೇಷಾಮ್ || ೭೩

ಮಹಾಮೇಧಾವಿಗಳಾದ ಶ್ರೀಶಂಕರರು ಪಾಶುಪತರ ಆಕ್ಷೇಪಗಳನ್ನು ವೇದಾಧಾರಗಳಿಂದ ನಿರಾಕರಿಸಲಾಗಿ, ಆ ಪಂಡಿತರ ಗರ್ವವು ಕೊಂಚ ಇಳಿಯಿತು. ಅನಂತರ ಪಾಶುಪತರ ಗ್ರಂಥಗಳನ್ನು ಖಂಡಿಸಿದರು.

ವಿವರಣೆ:-ಪಾಶುಪತಮತದ ಸಾರಾಂಶ-ಈ ಮತದಲ್ಲಿ ಕಾರಣ, ಕಾರ್ಯ, ಯೋಗ, ವಿಧಿ, ದುಃಖಾಂತ-ಎಂದು ಐದು ಪದಾರ್ಥಗಳಿವೆ. ಸಮಸ್ತ ವಸ್ತುಗಳಿಗೂ ಕಾರಣನಾದವನು ಈಶ್ವರ. ಇವನೇ ಶಿವ. ಜೀವರೆಂಬ ಪಶುಗಳಿಗೆ ಒಡೆಯನಾದ್ದರಿಂದ ಇವನು ಪಶುಪತಿ. ಕಾರ್ಯದಲ್ಲಿ ಜೀವರೂ ಜಗತ್ತೂ ಸೇರುತ್ತವೆ. ಜೀವರು ಕರ್ಮಪಾಶದಿಂದಲೂ ಅಜ್ಞಾನದಿಂದಲೂ ಬದ್ಧರಾದ್ದರಿಂದ ಪಶುಗಳೆನಿಸುತ್ತಾರೆ. ಜಗತ್ತಿನ ಮೂಲರೂಪವೇ ಪ್ರಕೃತಿ. ಕುಂಬಾರನು ಮಣ್ಣಿನಿಂದ ಗಡಿಗೆಯನ್ನು ನಿರ್ಮಿಸುವಂತೆ, ಶಿವನು ಈ ಪ್ರಕೃತಿಯಿಂದ ಜಗತ್ತನ್ನು ನಿರ್ಮಿಸಿದ್ದಾನೆ. ಆದ್ದರಿಂದ ಶಿವನು ನಿಮಿತ್ತಕಾರಣ. ಪ್ರಕೃತಿಯು ಉಪಾದಾನಕಾರಣ. ಜಪ, ಧ್ಯಾನ, ಭಕ್ತಿ, ಶರಣಾಗತಿಗಳಿಂದ ಜೀವನು ಶಿವನೊಡನೆ ಚಿತ್ತದ ಮೂಲಕ

ಮಾಡುವ ಸಂಬಂಧವೇ ಯೋಗ. ದುಃಖಾಂತವಾಗಲೆಂದೂ ಶಿವನ ಪ್ರಾಪ್ತಿಯಾಗಲೆಂದೂ ಜೀವನು ಆಚರಿಸಬೇಕಾದ ಜ್ಞಾನ ಸಾಧನಗಳೇ ವಿಧಿ. ದುಃಖವೂ ಪೂರ್ಣವಾಗಿ ನಿವೃತ್ತಿಗೊಂಡು ಶಿವನೊಡನೆ ಪರಮಸಾಮ್ಯವನ್ನು ಪಡೆಯುವುದು ದುಃಖಾಂತ. ಇದೇ ಮೋಕ್ಷ.

ಈ ಮತದ ಖಂಡನೆಯ ಸಾರಾಂಶ- 'ಏಕಮೇವಾದ್ವಿತೀಯಂ ಬ್ರಹ್ಮ' ಇತ್ಯಾದಿ ಶ್ರುತಿಗಳಿಂದ ಇರತಕ್ಕ ಪದಾರ್ಥವೆಂದರೆ ಪರಮಾತ್ಮನೊಬ್ಬನೇ. ಜೀವ, ಜಗತ್ತು-ಇವೆಲ್ಲವೂ ಅವಿದ್ಯೆಯಿಂದ ತೋರುತ್ತವೆ.'ಬಹು ಸ್ಯಾಂ ಪ್ರಜಾಯೇಯ' ಇತ್ಯಾದಿ ಶ್ರುತಿಗಳಿಂದ ಪರಮಾತ್ಮನೇ ಬಹುರೂಪನಾಗಿ ಜೀವ, ಜಗತ್ತುಗಳಾದನೆಂದು ಸ್ಪಷ್ಟವಾಗುತ್ತದೆ. ಅವನು ಜಗತ್ತಿಗೆ ನಿಮಿತ್ತಕಾರಣನೂ ಹೌದು, ಉಪಾದಾನಕಾರಣವೂ ಹೌದು, ಕುಂಬಾರನಿಗೆ ಮಣ್ಣು ಪ್ರತ್ಯೇಕವಾಗಿರುವಂತೆ ಈಶ್ವರನಿಗೆ ಇನ್ನೊಂದು ಪ್ರಕೃತಿಯೆಂಬ ಪದಾರ್ಥವೇ ಇಲ್ಲ.'ಯೇನಾಶ್ರುತಂ ಶ್ರುತಂ ಭವತಿ, ಅಮತಂ ಮತಂ, ಅವಿಜ್ಞಾತಂ ವಿಜ್ಞಾತಂ' ಎಂಬ ಶ್ರುತಿಯು ಆತ್ಮನನ್ನರಿತರೆ ಸಕಲವೂ ತಿಳಿದು ಹೋಗುತ್ತದೆಯೆಂದು ಸಾರುತ್ತದೆ. ಕುಂಬಾರನನ್ನು -ಎಂದರೆ ನಿಮಿತ್ತ ಕಾರಣವನ್ನು-ತಿಳಿದರೆ ಗಡಿಗೆಗಳ ಸ್ವರೂಪವೇನೂ ತಿಳಿಯುವುದಿಲ್ಲ. ಮಣ್ಣೆಂಬ ಉಪಾದಾನ ಕಾರಣವನ್ನರಿತರೆ ಮಣ್ಣಿನ ಎಲ್ಲ ವಿಕಾರವೂ ತಿಳಿದು ಬಂದಂತೆಯೇ ಆಗುತ್ತದೆ. ಆದ್ದರಿಂದ ಈಶ್ವರನು ಜಗತ್ತಿಗೆ ಉಪಾದಾನಕಾರಣವೂ ಹೌದು, ನಿಮಿತ್ತಕಾರಣವೂ ಹೌದು. ಜಗತ್ತು ಇಂದ್ರಜಾಲದಂತೆ ಮಾಯಿಕವಾದ್ದರಿಂದ ಜಗತ್ತಿನ ಕಶ್ಮಲವು ಶುದ್ಧಾತ್ಮನಿಗೆ ಸಂಬಂಧಿಸುವುದೇ ಇಲ್ಲ. ಭ್ರಾಂತಿಯಿಂಧ ತೋರುವ ಬಿಸಿಲ್ಗುದುರೆಯಿಂದ ನೆಲವು ಒದ್ದೆಯಾಗುವುದಿಲ್ಲವಷ್ಟೆ.

ಪಾಶುಪತಮತದವರು ಹೇಳುವ ಮೋಕ್ಷಸ್ವರೂಪವನ್ನು ಮುಂದಿನಶ್ಲೋಕಗಳಲ್ಲಿ ಖಂಡಿಸಲಾಗುತ್ತದೆ-

ಅದ್ವಿತೀಯನಿರತಾ ಸತಿ ಭೇದೇ
ಮುಕ್ತಿರೀಶಸಮತೈವ ಕಥಂ ಸ್ಯಾತ್ |
ಧ್ಯಾನಜಾ ಕಿಮಿತಿ ಸಾ ನ ವಿನಶ್ಯೇತ್
ಭಾವಕಾರ್ಯಮಖಿಲಂ ಹಿ ನ ನಿತ್ಯಮ್ || ೭೪

"ಎಲೈ ಪಾಶುಪತರೆ, ಶಿವನೊಡನೆ ಪರಮಸಾಮ್ಯವೇ ಮುಕ್ತಿಯೆನ್ನುತ್ತೀರಿ. ಪರಮಸಾಮ್ಯವೆಂದರೆ ಸರ್ವಪ್ರಕಾರದಲ್ಲಿಯೂ ಸಾದೃಶ್ಯ. ಎರಡು ವಸ್ತುಗಳಿದ್ದಾಗ ಇದು ಸಂಭವಿಸುವುದೇ ಇಲ್ಲ. ಯಾವುದಾದರೊಂದು ವ್ಯತ್ಯಾಸವಿದ್ದೇ ಇರುತ್ತದೆ. ಆದ್ದರಿಂದ ಪರಮ ಸಾಮ್ಯವೆಂದರೆ ಅದ್ವೈತವಾಗಿ ಅದರಲ್ಲಿಯೇ ಕೂಡಿಹೋಗುವುದೆಂದು ಪರ್ಯವಸನ್ನ ವಾಗುತ್ತದೆ. ಜೀವನು ಪ್ರತ್ಯೇಕ ವಸ್ತುವಾದರೆ ಶಿವನಲ್ಲಿ ಕೂಡಿ ಹೇಗೆ ಒಂದಾಗುತ್ತಾನೆ? ಧ್ಯಾನಯೋಗದಿಂದ ಈ ಘಟನೆ ಸಂಭವಿಸುತ್ತದೆ ಎಂದು ಹೇಳಿದರೆ ಅದು ಸರಿಯಲ್ಲ. ಯಾವುದು ಹೊಸದಾಗಿ ಹುಟ್ಟುತ್ತದೆಯೋ ಅದು ನಾಶವಾಗಲೇ ಬೇಕು-ಎಂದು ನಿಯಮವಿದೆ. ಹೊಸದಾಗಿ ಮೋಕ್ಷವು ಹುಟ್ಟಿದರೆ ಅದಕ್ಕೂ ನಾಶವಿದೆಯೆಂದು ಹೇಳಬೇಕಾಗುತ್ತದೆ (ಮೋಕ್ಷವು ಶಾಶ್ವತವೆಂದು ನೀವು ಒಪ್ಪಿದ್ದೀರಿ)

ಕಿಂ ಚ ಸಂಕ್ರಮಣಮೀಶಗುಣಾನಾ-
ಮಿಷ್ಯತೇ ಪಶುಷು ಮೋಕ್ಷದಶಾಯಾಮ್ ।
ತನ್ನ ಸಾಧ್ವವಯವೈರ್ವಿಧುರಾಣಾಂ
ಸಂಕ್ರಮೋ ನ ಘಟತೇ ಹಿ ಗುಣಾನಾಮ್ ॥ ೭೫

"ಅಲ್ಲದೆ ಮೋಕ್ಷದಶೆಯಲ್ಲಿ ಈಶ್ವರನ ಸರ್ವಜ್ಞತ್ವಾದಿಗುಣಗಳು ಪಶುಗಳಾದ ಜೀವರಲ್ಲಿ ಸೇರಿಕೊಳ್ಳುತ್ತವೆಯೆಂದು ನೀವು ಹೇಳಬೇಕಾಗುತ್ತದೆ (ಇಲ್ಲದಿದ್ದರೆ ಪರಮಸಾಮ್ಯವೇ ಬರುವುದಿಲ್ಲ).ಈ ಗುಣಗಳು (ಮಣ್ಣಿನಂತೆ)ಅವಯವ ಸಹಿತವಸ್ತುಗಳಲ್ಲ. ಅವು ಬಂದು ಜೀವರಲ್ಲಿ ಸೇರಿಕೊಳ್ಳಲಾರವು.

ಟಿಪ್ಪಣಿ:- ವಸ್ತುವಿನಲ್ಲಿ ಅವಯವಗಳಿಲ್ಲದಿದ್ದರೆ ಕ್ರಿಯೆ ಹುಟ್ಟುವುದಿಲ್ಲ. ಕ್ರಿಯೆಯಿಲ್ಲದೆ ಚಲನೆಯಾಗದು. ಧೂಳಿ ಹಾರಿಬಂದಂತೆ ಗುಣಗಳು ಹಾರಿಬರಲಾರವು.

ಪದ್ಮಗಂಧ ಇವ ಗಂಧವಹೇಽಸ್ಮಿ-
ನ್ನಾತ್ಮನೀಶ್ವರಗುಣೋಽಸ್ತ್ವಿತಿ ಚೇನ್ನ ।
ತತ್ರ ಗಂಧಸಮವಾಯಿ ನಭಸ್ವತ್
ಸಂಯುತಂ ದಿಶತಿ ಗಂಧಧಿಯಂ ಯತ್ ॥ ೭೬

"ತಾವರೆಹೂವಿನಲ್ಲಿರುವ ಗಂಧಗುಣವು ಗಾಳಿಯಲ್ಲಿ ಬಂದು ಸೇರಿಕೊಳ್ಳುವುದಿಲ್ಲವೆ?ಹಾಗೆಯೇ ಈಶ್ವರನಲ್ಲಿರುವ ಸರ್ವಜ್ಞತ್ವಾದಿಗುಣವು ಜೀವನಲ್ಲಿ ಸಂಕ್ರಮಿಸಲಿ ಎಂದು ಆಕ್ಷೇಪಿಸುವುದೂ ಸರಿಯಲ್ಲ. ಗಂಧವು ತಾವರೆಯಲ್ಲಿ ಸಮವಾಯಸಂಬಂಧದಿಂದ ಇರುತ್ತದೆ. ಅದು ಬೇರೆಯಾಗುವುದಿಲ್ಲ. ಗಂಧಸಮವಾಯಿಯಾದ ತಾವರೆಯ ಸೂಕ್ಷ್ಮಪರಾಗವು ಗಾಳಿಯಲ್ಲಿ ಸೇರಿಕೊಳ್ಳುತ್ತದೆ. ಆಗ ಗಾಳಿಯು ಸುಗಂಧಿಯೆಂಬ ಬುದ್ಧಿ ನಮಗೆ ಹುಟ್ಟುತ್ತದೆ."

ವಿವರಣೆ:-ತಾವರೆಯ ಗಂಧಗುಣವೇ ಗಾಳಿಯಲ್ಲಿ ಸೇರುವುದಿಲ್ಲ. ತಾವರೆಯ ಸೂಕ್ಷ್ಮ ಪರಾಗಗಳಲ್ಲಿ ಗಂಧವಿರುತ್ತದೆ. ಆ ಪರಾಗಗಳು ಗಾಳಿಯ ಜೊತೆಗೆ ಹಾರಿಬರುತ್ತವೆ. ಗಂಧವು ಪರಾಗದ್ದೇ ಹೊರತು ಗಾಳಿಯದಲ್ಲ.

ಕಿಂ ಚೈಕದೇಶೇನ ಸಮಾಶ್ರಯಂತೇ
ಕಾರ್ತ್ಸ್ನ್ಯೇನ ವಾ ಶಂಭುಗುಣಾ ವಿಮುಕ್ತಾನ್ ।
ಪೂರ್ವೇ ತು ಪೂರ್ವೋದಿತದೋಷಸಂಗ-
ಸ್ತ್ವಂತೇಽಜ್ಞತಾದಿಃ ಪರಮೇಶ್ವರೇ ಸ್ಯಾತ್ ॥ ೭೭

ಮತ್ತು ಶಿವನಲ್ಲಿರುವ ಅಸಂಖ್ಯಾತಗುಣಗಳಲ್ಲಿ ಕೆಲವು ಮಾತ್ರ ಮುಕ್ತಜೀವರಲ್ಲಿ ಬಂದು ಸೇರಿಕೊಳ್ಳುತ್ತವೆಯೊ?ಅಥವಾ ಎಲ್ಲವೂ ಬಂದು ಸೇರಿಕೊಳ್ಳುತ್ತವೆಯೊ? ಕೆಲವು ಮಾತ್ರ ಬಂದು ಸೇರುತ್ತವೆಯೆಂಬ ಮೊದಲನೆಯ ಪಕ್ಷದಲ್ಲಿ ಹಿಂದೆ ಹೇಳಿದಂತೆ ಶಿವನಿಗೂ ಮುಕ್ತಜೀವನಿಗೂ ಪರಮಸಾಮ್ಯ ಬರುವುದೇ ಇಲ್ಲ. ಎಲ್ಲವೂ ಹಾರಿಬಂದು ಸೇರಿಕೊಳ್ಳುತ್ತವೆಯೆಂಬ ಎರಡನೆಯ ಪಕ್ಷದಲ್ಲಿ ಪರಮೇಶ್ವರನಲ್ಲಿ ಯಾವ ಗುಣವೂ ಉಳಿಯದೆ ಆತನು ಅಜ್ಞಾನಿಯೂ ಆಗಿಬಿಡುತ್ತಾನೆ"

ಟಿಪ್ಪಣಿ:- ಎರಡನೆಯ ಪಕ್ಷದಲ್ಲಿ ಶಿವನಿಗೂ ಜೀವನಿಗೂ ಹೋಲಿಕೆಯೂ ಬರುವುದಿಲ್ಲ. ಇನ್ನೊಬ್ಬ ಜೀವನು ಮುಕ್ತನೆಂದಾದರೆ, ಅವನಲ್ಲಿ ಬಂದು ಸೇರಿಕೊಳ್ಳಲು ಶಿವನಲ್ಲಿ ಗುಣಗಳೇ ಇರುವುದಿಲ್ಲ.

ಇತ್ಥಂ ತರ್ಕೈಃ ಕುಲಿಶಕಠಿನೈಃ ಪಂಡಿತಂಮನ್ಯಮಾನಾ
ಭಿದ್ಯತ್ಸ್ವಾರ್ಥಾಃ ಸ್ಮಯಭರಪದಂ ತತ್ಯಜುಸ್ತಾಂತ್ರಿಕಾಸ್ತೇ ।
ಪಕ್ಷಾಘಾತೈರಿವ ರಯಭರೈಸ್ತಾಡ್ಯಮಾನಾಃ ಫಣಾಸು
ಕ್ಷ್ವೇಡಜ್ವಾಲಾಂ ಖಗಕುಲಪತೇಃ ಪನ್ನಗಾಃ ಸಾಭಿಮಾನಾಃ ॥ ೭೮

ಈ ಪ್ರಕಾರವಾಗಿ ಆಚಾರ್ಯರು ವಜ್ರಕಠೋರವಾದ ತರ್ಕಗಳಿಂದ ಪಾಶುಪತಸಂಮತ ವಿಷಯಗಳನ್ನು ನುಚ್ಚುನೂರು ಮಾಡಲಾಗಿ, ಪಂಡಿತಂಮನ್ಯರಾಗಿದ್ದ ಆ ತಾಂತ್ರಿಕರು ಗರ್ವಾತಿಶಯದಿಂದಾದ ಮದವನ್ನು ತ್ಯಜಿಸಿದರು. ಸೊಕ್ಕಿದ ಸರ್ಪಗಳ ಹೆಡೆಗಳ ಮೇಲೆ ಪಕ್ಷಿರಾಜನಾದ ಗರುಡನು ರಭಸದಿಂದ ತನ್ನ ರೆಕ್ಕೆಗಳನ್ನು ಅಪ್ಪಳಿಸಿದಾಗ, ಆ ಸರ್ಪಗಳು ವಿಷಜ್ವಾಲೆಯನ್ನು ಕಕ್ಕುವಂತೆ ಪಾಶುಪತರ ಪರಿಸ್ಥಿತಿಯಾಯಿತು.

ವ್ಯಾಖ್ಯಾಜೃಂಭಿತ ಪಾಟವಾತ್ಫಣಿಪತೇರ್ಮಂದಾಕ್ಷಮುದ್ದೀಪಯನ್
ಸಂಖ್ಯಾಲಂಘಿತ ಶಿಷ್ಯಹೃದ್ವನರುಹೇಷ್ವಾದಿತ್ಯತಾಮುದ್ವಹನ್ ।
ಉದ್ವೇಲಸ್ವಯಶಃಸುಮೈಃ ಸ ಭಗವತ್ಪಾದೋ ಜಗದ್ಭೂಷಯನ್
ಕುರ್ವನ್ ವಾದಿಮೃಗೇಷು ನಿರ್ಭರಮಭಾಚ್ಛಾರ್ದೂಲವಿಕ್ರೀಡಿತಮ್ ॥

ಶ್ರೀಶಂಕರಭಗವತ್ಪಾದರು ತಮ್ಮ ಭಾಷ್ಯಗಳಲ್ಲಿ ಪ್ರಕಟಿಸಿದ ವ್ಯಾಖ್ಯಾನ ಕೌಶಲದಿಂದ, ಆದಿಶೇಷನ ಅವತಾರವಾದ (ವ್ಯಾಕರಣಮಹಾಭಾಷ್ಯಕಾರ) ಪತಂಜಲಿಗೆ ಲಜ್ಜೆಯನ್ನು ಹೆಚ್ಚಿಸುತ್ತ, ಅಸಂಖ್ಯಾತರಾದ ಶಿಷ್ಯರ ಹೃದಯಕಮಲಗಳಲ್ಲಿ ಸೂರ್ಯನಂತೆ ವಿಕಾಸವನ್ನುಂಟುಮಾಡುತ್ತ, ಮೇರೆಮೀರಿ ಹರಡಿದ ತಮ್ಮ ಕೀರ್ತಿಕುಸುಮಗಳಿಂದ ಜಗತ್ತನ್ನೇ ಭೂಷಿಸುತ್ತ, ಪ್ರತಿವಾದಿಗಳೆಂಬ ಮೃಗಗಳಿಗೆ ಭಯವನ್ನುಂಟುಮಾಡುವ ದೃಢವಾದ ಶಾರ್ದೂಲಕ್ರೀಡೆಯನ್ನಾಡುತ್ತ ವಿಜೃಂಭಿಸಿದರು.

ಟಿಪ್ಪಣಿ:- ಶಾರ್ದೂಲವಿಕ್ರೀಡಿತಶಬ್ದವು ಈ ಪದ್ಯದ ಶಾರ್ದೂಲವಿಕ್ರೀಡಿತವೆಂಬ ವೃತ್ತದ ಹೆಸರನ್ನೂ ಸೂಚಿಸುತ್ತದೆಯಾದ್ದರಿಂದ ಇಲ್ಲಿ ಮುದ್ರಾಲಂಕಾರ.

ವೇದಾಂತಕಾಂತಾರಕೃತ ಪ್ರಚಾರಃ
ಸುತೀಕ್ಷ್ಣಸದ್ಯುಕ್ತಿನಖಾಗ್ರದಂಷ್ಟ್ರಃ |
ಭಯಂಕರೋ ವಾದಿಮತಂಗಜಾನಾಂ
ಮಹರ್ಷಿಕಂಠೀರವ ಉಲ್ಲಲಾಸ || ೮೦

ವೇದಾಂತವೆಂಬ ಅಡವಿಯಲ್ಲಿ ಸಂಚರಿಸುತ್ತ, ಅತಿತೀಕ್ಷ್ಣಗಳೂ ಸಮಂಜಸಗಳೂ ಆದ ಯುಕ್ತಿಗಳೆಂಬ ಪಂಜುಗಳಿಂದಲೂ ಕೋರೆಹಲ್ಲುಗಳಿಂದಲೂ ಸಹಿತವಾಗಿ, ಪ್ರತಿವಾದಿಗಳೆಂಬ ಮದ್ದಾನೆಗಳಿಗೆ ಭೀಕರವಾದ, ಮಹರ್ಷಿಶ್ರೀಶಂಕರ ಕಂಠೀರವವು ಮೆರೆಯಿತು.

ಟಿಪ್ಪಣಿ:- ವೇದಾಂತ = ಉಪನಿಷತ್ತು. ಕಂಠೀರವ = ಸಿಂಹ.

ಅಮಾನುಷಂ ತಸ್ಯ ಯತೀಶ್ವರಸ್ಯ
ವಿಲೋಕ್ಯ ಬಾಲಸ್ಯ ಸತಃ ಪ್ರಭಾವಮ್ |
ಅತ್ಯಂತಮಾಶ್ಚರ್ಯಯುತಾಂತರಂಗಾಃ
ಕಾಶೀಪುರಸ್ಥಾ ಜಗದುಸ್ತದೇತ್ಥಮ್ || ೮೧

ವಯಸ್ಸಿನಲ್ಲಿ ಬಾಲಕರಾದರೂ ವಿದ್ವಾಂಸರೂ ಯತೀಶ್ವರರೂ ಆದ ಶ್ರೀಶಂಕರರ ಅಮಾನುಷವಾದ ಮಹಿಮೆಯನ್ನು ನೋಡಿ ಕಾಶೀನಗರದಲ್ಲಿದ್ದ ವಿದ್ವಜ್ಜನರು ಅತ್ಯಂತ ಆಶ್ಚರ್ಯದಲ್ಲಿ ಮುಳುಗಿ ಹೋದರು. ಅವರು ಪರಸ್ಪರ ಈ ರೀತಿ ಮಾತನಾಡಿಕೊಳ್ಳುತ್ತಿದ್ದರು-

ಟಿಪ್ಪಣಿ: ಆ ಸಮಯದಲ್ಲಿ ಆಚಾರ್ಯರು ಕಾಶಿಗೆ ಬಂದಿದ್ದರೆಂದು ಕಾಣುತ್ತದೆ.

ಅಸ್ಮಾನ್ಮಹುರ್ದ್ಯೋತಿತ ಸರ್ವತಂತ್ರಾತ್
ಪರಾಭವಂ ಪಂಡಿತಪುಂಡರೀಕಾಃ |
ಪ್ರಪೇದಿರೇ ಭಾಸ್ಕರಗುಪ್ತಮಿಶ್ರ-
ಮುರಾರಿವಿದ್ಯೇಂದ್ರಗುರುಪ್ರಧಾನಾಃ || ೮೨

"ಪಂಡಿತ ಪ್ರಕಾಂಡರಾದ ಭಾಸ್ಕರಾಚಾರ್ಯ, ಅಭಿನವಗುಪ್ತ, ಮುರಾರಿಮಿಶ್ರ, ವಿದ್ಯಾಧಿರಾಜನೆಂದು ಹೆಸರಾದ ಮಿಶ್ರ, ಪ್ರಭಾಕರಗುರು ಮೊದಲಾದವರೇ ಇವರಿಂದ ಸೋತುಹೋದರು. ಈ ಯತೀಶ್ವರರು ಸರ್ವತಂತ್ರ ಸ್ವತಂತ್ರರೇ ಹೌದು.

ಅಸ್ಯಾಽಽತ್ಮನಿಷ್ಠಾತಿಶಯೇನ ತುಷ್ಟಃ
ಪ್ರಾದುರ್ಭವನ್ ಕಾಮರಿಪುಃ ಪುರಸ್ತಾತ್ |

ಪ್ರಚೋದಯಾಮಾಸ ಕಿಲ ಪ್ರಣೇತುಂ
ವೇದಾಂತಶಾರೀರಕಸೂತ್ರಭಾಷ್ಯಮ್ || ೮೩

ಇವರ ಆತ್ಮನಿಷ್ಠೆಯ ಅತಿಶಯವನ್ನು ಕಂಡು ಸಂತುಷ್ಟನಾದ ಪರಮೇಶ್ವರನೇ ವೇದಾಂತಶಾಸ್ತ್ರವಾದ ಶಾರೀರಕ ಸೂತ್ರಕ್ಕೆ ಭಾಷ್ಯವನ್ನು ರಚಿಸಿಬೇಕೆಂದು ಹಿಂದೆ ಇವರಿಗೆ ಸೂಚಿಸಿದ್ದನಲ್ಲವೇ?"

ಕುದೃಷ್ಟಿತಿಮಿರಸ್ಫುರತ್ಕುಮತಪಂಕಮಗ್ನಾಂ ಪುರಾ
ಪರಾಶರಭುವಾ ಚಿರಾದ್ಬುಧಮುದೇ ಬುಧೇನೋದ್ಧೃತಾಮ್ |
ಅಹೋಬತ ಜರದ್ಗವೀಮನಘಭಾಷ್ಯ ಸೂಕ್ತ್ಯಾಮೃತೈ-
ರಪಂಕಯತಿ ಶಂಕರಃ ಪ್ರಣತಶಂಕರಃ ಸಾದರಮ್ || ೮೪

"ಜರದ್ಗವಿಯು ಎಂದರೆ ಪ್ರಾಚೀನವೇದವಾಣಿಯೆಂಬ ಮುದಿಹಸು ಕುತ್ಸಿತ ದೃಷ್ಟಿಯವರ ಅಜ್ಞಾನದಿಂದ ಹುಟ್ಟಿದ ಕುಮತಗಳೆಂಬ ಕೆಸರಿನಲ್ಲಿ ಸಿಕ್ಕಿ ಹೋಗಿದ್ದಿತು. ಅದನ್ನು ಹಿಂದೆ ಪರಾಶರ ಪುತ್ರರೂ ವಿದ್ವಾಂಸರೂ ಆದ ವ್ಯಾಸರು ಸಜ್ಜನರ ಸಂತೋಷಕ್ಕಾಗಿ ಕೆಸರಿನಿಂದ ಮೇಲಕ್ಕೆ ಎತ್ತಿದ್ದರು. ಆಹಾ, ಮತ್ತೆ ಕೆಸರಿನಲ್ಲಿ ಮುಳುಗಿದ ಆ ವೇದವಾಣಿಯೆಂಬ ಹಸುವನ್ನು ಶಿಷ್ಯರಿಗೆ ಸುಖವನ್ನುಂಟುಮಾಡುವ ಶ್ರೀ ಶಂಕರಾಚಾರ್ಯರು ಭಾಷ್ಯ ಸೂಕ್ತಿಗಳೆಂಬ ಅಮೃತ ಜಲದಿಂದ ಆದರ ಪೂರ್ವಕವಾಗಿ ತೊಳೆದು ಶುದ್ಧಿ ಪಡಿಸಿದ್ದಾರೆ.

ತ್ರೈಲೋಕ್ಯಂ ಸಸುಖಂ ಕ್ರಿಯಾಫಲಪಯೋ ಭುಂಕ್ತೇ ಯಯಾಽವಿಷ್ಕೃತಂ
ಯಸ್ಯಾ ವೃದ್ಧತರೇ ಮಹೀಸುರಗೃಹೇ ವಾಸಃ ಪ್ರವೃದ್ಧಾಧ್ವರೇ |
ತಾಂ ಪಂಕಪ್ರಸೃತೇ ಕುತರ್ಕಕುಹರೇ ಘೋರೈಃ ಖರೈಃ ಪಾತಿತಾಂ
ನಿಷ್ಪಂಕಾಮಕರೋತ್ಸ ಭಾಷ್ಯಜಲಧೇಃ ಪ್ರಕ್ಷಾಲ್ಯ ಸೂಕ್ತ್ಯಾಮೃತೈಃ || ೮೫

"ಆ ಜರದ್ಗವಿಯು ಹೊರಸೂಸುವ ಕರ್ಮಫಲವೆಂಬ ಹಾಲನ್ನು ಮೂರು ಲೋಕದವರೂ ಕುಡಿದು ಆನಂದಿಸುತ್ತಿದ್ದಾರೆ. ಯಾಗಗಳು ನಡೆಯುವ ಪ್ರಾಚೀನವಾದ ಬ್ರಾಹ್ಮಣ ಗೃಹದಲ್ಲಿ ಅದು ವಾಸವಾಗಿತ್ತು. ಆ ಜರದ್ಗವಿಯನ್ನು ಪಾಪಿಗಳಾದ ಖಳಜನರು ಕುತ್ಸಿತತರ್ಕವೆಂಬ ಆಳವಾದ ಕೆಸರಿನಲ್ಲಿ ತಳ್ಳಿ ಬಿಟ್ಟಿದ್ದರು. ಈಗ ಆಚಾರ್ಯರು ಆ ಜರದ್ಗವಿಯನ್ನು ಮೇಲೆತ್ತಿ ತಮ್ಮ ಭಾಷ್ಯಸಮುದ್ರದ ಸೂಕ್ತಿಗಳೆಂಬ ಅಮೃತಜಲದಿಂದ ಕೆಸರನ್ನು ತೊಡೆದು ಹಾಕಿ ಸ್ವಚ್ಛಗೊಳಿಸಿದರು.

ಟಿಪ್ಪಣಿ: 'ವೃದ್ಧತರೇ ಮಹೀಸುರಗೃಹೇ' ಎಂಬುದಕ್ಕೆ ಡಿಂಡಿಮ ವ್ಯಾಖ್ಯಾನದಲ್ಲಿ ಪ್ರಜಾಪತಿ ಎಂಬ ಹೆಸರಿನ ಬ್ರಾಹ್ಮಣನ ಪ್ರಯಾಗವೆಂಬ ಗೃಹದಲ್ಲಿ ಎಂದು ಅರ್ಥವನ್ನು ಬರೆದಿದ್ದಾರೆ. ಇದಕ್ಕೆ ಆಧಾರವು ತಿಳಿಯದು.

ಮಿಥ್ಯಾ ವಕ್ತೀತಿ ಕೈಶ್ಚಿತ್ಪುರುಷಮುಪನಿಷದ್ದೂರಮುತ್ಸಾರಿತಾಽಭೂ-
ದನ್ಯೈರಸ್ಮಿನ್ನಿಯೋಜ್ಯಂ ಪರಿಚರಿತುಮಸಾವರ್ಹತೀತಿ ಪ್ರಣುನ್ನಾ |
ಅರ್ಥಾಭಾಸಂ ದಧಾನೈರ್ಮೃದುಭಿರಿವ ಪದೈರ್ವಂಚಿತಾ ಚೋರಿತಾರ್ಥೈ-
ರ್ವಿಂದತ್ಯಾನಂದಮೇಷಾ ಸುಚಿರಮಶರಣಾ ಶಂಕರಾರ್ಯಂ ಪ್ರಪನ್ನಾ ||

ಈ ಜರದ್ಗವಿಯೆಂಬ ಉಪನಿಷತ್ತು ಸುಳ್ಳು ಹೇಳುತ್ತದೆ - ಎಂದು ವೇದಭಾಷ್ಯಕಾರರಾದ ಕೆಲವರು ದೂರಕ್ಕೆ ಓಡಿಸಿದ್ದರು. ಭಟ್ಟ ಭಾಸ್ಕರರೇ ಮೊದಲಾದ ಇನ್ನು ಕೆಲವರು ವೇದೋದಿತ ಕರ್ಮಗಳಲ್ಲಿ ನಿಯೋಜ್ಯನಾದವನನ್ನು ಸೇವಿಸುವುದಕ್ಕೆ ಅರ್ಹವಾಗಿದೆ ಎಂದು ಅದನ್ನು ಎಳೆದರು. ಇನ್ನು ಕೆಲವರು ಅರ್ಥಾಭಾಸವನ್ನು ಕೊಡುವ ಮೃದು ಪದಗಳಿಂದಲೇ ಅದನ್ನು ವಂಚಿಸಿದರು. ಹೀಗೆ ಜರದ್ಗವಿಯ ಅರ್ಥಗಳನ್ನು ಕೊಳ್ಳೆ ಹೊಡೆದರು. ಈ ರೀತಿಯಾಗಿ ಬಹುಕಾಲದಿಂದ ದಿಕ್ಕಿಲ್ಲದೆ ಹೋಗಿದ್ದ ವೇದವಾಣಿಯು ಶ್ರೀಶಂಕರಾಚಾರ್ಯರನ್ನು ಆಶ್ರಯಿಸಿ ಆನಂದಿಸುತ್ತಿದ್ದಾಳೆ.

ವಿವರಣೆ:-ಅವೈದಿಕರಾದ ಬೌದ್ಧ ಜೈನಾದಿಗಳು ವೇದವನ್ನು ನಂಬುವುದಿಲ್ಲ. ಮೀಮಾಂಸಕರಾದ ಪ್ರಭಾಕರರು ವೇದವಿಹಿತಕರ್ಮವನ್ನೇ ಆಚರಿಸಬೇಕೆಂದೂ ಉಪನಿಷತ್ತು ಅರ್ಥವಾದವಾಗಿ ಕರ್ಮಸಿದ್ಧಾಂತವನ್ನೇ ಪೋಷಿಸುತ್ತದೆ ಎಂದೂ ಹೇಳುತ್ತಾರೆ. ಇನ್ನು ತಾರ್ಕಿಕರೇ ಮೊದಲಾದವರು ತತ್ತ್ವಮಸಿ ಮುಂತಾದ ವಾಕ್ಯಗಳಿಗೆ ಅರ್ಥಾಂತರವನ್ನು ಹೇಳಿ ಪಾರಾಗುತ್ತಾರೆ.

ಹಂತುಂ ಬೌದ್ಧೋಽನ್ವಧಾವತ್ತದನು ಕಥಮಪಿ ಸ್ವಾತ್ಮಲಾಭಃ ಕಣಾದಾ-
ಜ್ಜಾತಃ ಕೌಮಾರಿಲಾರ್ಯೈರ್ನಿಜಪದಗಮನೇ ದರ್ಶಿತಂ
ಮಾರ್ಗಮಾತ್ರಮ್ |
ಸಾಂಖ್ಯೈರ್ದುಃಖಂ ವಿನೀತಂ ಪರಮಥ ರಚಿತಾ ಪ್ರಾಣಧೃತ್ಯರ್ಹತಾಽನ್ಯೈ-
ರಿತ್ಥಂ ಖಿನ್ನಂ ಪುಮಾಂಸಂ ವ್ಯಧಿತ ಕರುಣಯಾ
ಶಂಕರಾರ್ಯಃ ಪರೇಶಮ್ || ೮೭

ವೇದ ಬೋಧಿತನಾದ ಪರಮಪುರುಷನನ್ನು ಕೊಲ್ಲುವುದಕ್ಕೆ ಶೂನ್ಯವಾದಿಯಾದ ಬೌದ್ಧನು ಧಾವಿಸಿದನು. ಅನಂತರ ಕಣಾದ ಮುನಿಯಿಂದ ಆತ್ಮಲಾಭವಾಗಿ ಪುರುಷನು ಉಳಿದುಕೊಂಡನು. ಕುಮಾರಿಲಭಟ್ಟರು ಆ ಪುರುಷನಿಗೆ ಹೋಗಲು ಯೋಗ್ಯವಾದ ದಾರಿಯನ್ನು ಮಾತ್ರ ತೋರಿಸಿಕೊಟ್ಟರು. ಆಮೇಲೆ ಸಾಂಖ್ಯರು ಆತನನ್ನು ಸಂತೈಸಿ ದುಃಖವನ್ನು ಹೋಗಲಾಡಿಸಿದರು. ಯೋಗಿಗಳು ಪ್ರಾಣಧಾರಣೆಗೆ-ಪ್ರಾಣಾಯಾಮಕ್ಕೆ ಅರ್ಹತೆಯನ್ನೊದಗಿಸಿದರು. ಹೀಗೆ ಖಿನ್ನನಾದ ಆತ್ಮನನ್ನು ಶ್ರೀ ಶಂಕರರು ಕಾರುಣ್ಯದಿಂದ ಪರಮಾತ್ಮನನ್ನಾಗಿಯೇ ಮಾಡಿಬಿಟ್ಟರು.

ವಿವರಣೆ:-ಬೌದ್ಧರು ನೈರಾತ್ಮ್ಯವಾದಿಗಳು. ಕಣಾದರು ಆತ್ಮನಿದ್ದಾನೆಂದು ಸ್ಥಾಪಿಸಿದರು. ಕುಮಾರಿಲ ಭಟ್ಟರು ಕರ್ಮವನ್ನು ಮಾಡಿ ಚಿತ್ತಶುದ್ಧಿಯನ್ನು ತಂದುಕೊಳ್ಳಬೇಕೆಂದು ದಾರಿ ತೋರಿಸಿದರು. ಸುಖದುಃಖಾದಿಗಳು ಆತ್ಮಧರ್ಮವಲ್ಲವೆಂದು ಸಾಂಖ್ಯರು ಸ್ಥಾಪಿಸಿದರು. ಯೋಗಿಗಳು ಪ್ರಾಣಾಯಾಮದಿಂದ ಧ್ಯಾನಯೋಗವನ್ನು ಬೋಧಿಸಿದರು. ಶಂಕರಾಚಾರ್ಯರು ಜೀವಾತ್ಮನು ಪರಮಾತ್ಮನೇ ಎಂದು ಸ್ಥಾಪಿಸಿದರು.

ಗ್ರಸ್ತಂ ಭೂತೈರ್ನ ದೇವಂ ಕತಿಚನ ದದೃಶುಃ ಕೇ ಚ ದೃಷ್ಟ್ವಾಽಪ್ಯಧೀರಾಃ
ಕೇಚಿದ್ಭೂತೈರ್ವಿಯುಕ್ತಂ ವ್ಯಧುರಥ ಕೃತಿನಃ ಕೇಽಪಿ
ಸರ್ವೈರ್ವಿಮುಕ್ತಮ್ ।
ಕಿಂತ್ವೇತೇಷಾಮಸತ್ತ್ವಂ ನ ವಿದಧುರಜಹಾನ್ನೈವ ಭೀತಿಂ ತತೋಽಸೌ
ತೇಷಾಮುಚ್ಛಿದ್ಯ ಸತ್ತಾಮಭಯಮಕೃತ ತಂ ಶಂಕರಃ ಶಂಕರಾಂಶಃ ॥ ೮೮

ಭೂತಗಳಿಂದ ನುಂಗಲ್ಪಟ್ಟ ದೇವಾತ್ಮನನ್ನು ಕೆಲವರು ಕಾಣಲೇ ಇಲ್ಲ. ಕೆಲವರು ಕಂಡರೂ ಇದ್ದಾನೆಂದು ಹೇಳಲು ಧೈರ್ಯವನ್ನೇ ತಳೆಯಲಿಲ್ಲ. ಇನ್ನು ಕೆಲವು ಪುಣ್ಯಾತ್ಮರು ಆತ್ಮನನ್ನು ಭೂತಗಳಿಂದ ಬಿಡಿಸಿದರು. ಇನ್ನು ಕೆಲವರು ಸರ್ವಭೂತ ಬಾಧೆಗಳಿಂದಲೂ ಅವನನ್ನು ದೂರಮಾಡಿದರು. ಆದರೆ ಈ ಭೂತಗಳೇ ಇಲ್ಲದಂತೆ ಯಾರೂ ಮಾಡಲಿಲ್ಲ. ಆದಕಾರಣ ಜನರಿಗೆ ಭಯವು ತಪ್ಪಲಿಲ್ಲ. ಅನಂತರ ಶ್ರೀ ಶಂಕರಾಂಶ ಸಂಭೂತರಾದ ಆಚಾರ್ಯರು ಆ ಭೂತಗಳ ಅಸ್ತಿತ್ವವನ್ನೇ ನಿರ್ಮೂಲ ಮಾಡಿದರು!

ವಿವರಣೆ:-ಭೂತಗಳೆಂದರೆ ದೆವ್ವಗಳೆಂದು ಒಂದರ್ಥ. ಪಂಚಭೂತಗಳೆಂದು ಇನ್ನೊಂದರ್ಥ. ಪಂಚಭೂತಾತ್ಮಕವಾದ ದೇಹವೇ ಆತ್ಮವೆಂದು ಚಾರ್ವಾಕರು ಭಾವಿಸಿ ಅಂತರಾತ್ಮನು ಇಲ್ಲವೆಂದು ತಿಳಿದರು. ಬೌದ್ಧರು ಪಂಚಭೂತಾರಿಕ್ತವಾದ ವಿಜ್ಞಾನಾತ್ಮನನ್ನು ಒಪ್ಪಿದರೂ ಅವನು ನಿತ್ಯನೆಂಬುದನ್ನು ಸ್ಥಾಪಿಸಲಾರದೇ ಹೋದರು. ನೈಯಾಯಿಕಾದಿಗಳು ಆತ್ಮನು ಪಂಚಾಭೂತಾತಿರಿಕ್ತನೆಂದು ಸ್ಥಾಪಿಸಿದರು. ಆದರೆ ಆತ್ಮನು ಸಗುಣನೆಂದು ಹೇಳಿದರು. ಸಾಂಖ್ಯರು ಗುಣಗಳೂ ಅವನಲ್ಲಿಲ್ಲವೆಂದು ತಿಳಿಸಿದರು. ಆದರೆ ಪಂಚಭೂತಗಳ ಅಸ್ತಿತ್ವವನ್ನು ಒಪ್ಪಿದರು. ಆಚಾರ್ಯರು ಜಗತ್ತೇ ಮಿಥ್ಯೆಎಂದು ಸಾರಿ ಪರಮಾರ್ಥದಲ್ಲಿ ಆತ್ಮಾತಿರಿಕ್ತ ವಸ್ತುವೇ ಇಲ್ಲವೆಂದು ಸ್ಥಾಪಿಸಿದರು. ಈ ಅಭಿಪ್ರಾಯಗಳನ್ನು ಶ್ಲೋಕದಲ್ಲಿ ಚಮತ್ಕಾರದಿಂದ ಕ್ರಮವಾಗಿ ವರ್ಣಿಸಿದ್ದಾರೆ.

ಚಾರ್ವಾಕೈರ್ನಿಹ್ನುತಃ ಪ್ರಾಗ್ಬಲಿಭಿರಥ ಮೃಷಾ ರೂಪಮಾಪಾದ್ಯ ಗುಪ್ತಃ
ಕಾಣಾದ್ಯೈರ್ಹಾ ನಿಯೋಜ್ಯೋ ವ್ಯರಚಿ ಬಲವತಾಽಽಕೃಷ್ಯ ಕೌಮಾರಿಲೇನ ।
ಸಾಂಖ್ಯೈರಾಕೃಷ್ಯ ಹೃತ್ವಾ ಮಲಮಪಿ ರಚಿತೋ ಯಃ ಪ್ರಧಾನೈಕತಂತ್ರಃ
ಕೃಷ್ಟ್ವಾ ಸರ್ವೇಶ್ವರಂ ತಂ ವ್ಯತನುತ ಪುರುಷಂ ಶಂಕರಃ ಶಂಕರಾಂಶಃ ॥

ಬಲಶಾಲಿಗಳಾದ ಚಾರ್ವಾಕರು ಮೊದಲು ಆತ್ಮನು ಇಲ್ಲವೇ ಇಲ್ಲವೆಂದು ಅಪಲಾಪಮಾಡಿದ್ದರು. ಅನಂತರ ಕಾಣಾದರಾದ ತಾರ್ಕಿಕರು ಆತ್ಮನಿಗೆ ಇಲ್ಲದ ಕರ್ತೃತ್ವಾದಿ

ಧರ್ಮವನ್ನೂ ಗುಣವನ್ನೂ ತೊಡಿಸಿ ಆತ್ಮನನ್ನು ರಕ್ಷಿಸಿದ್ದರು. ಆಮೇಲೆ ಬಲಶಾಲಿಗಳಾದ ಕುಮಾರಿಲಭಟ್ಟರು ಆತ್ಮನನ್ನು ಭೂತಗ್ರಾಮಗಳಿಂದ ಬಿಡಿಸಿ ತಂದು "ಸ್ವರ್ಗ ಕಾಮೋ ಯಜೇತ" ಇತ್ಯಾದಿ ವಿಧಿಗಳಿಗೆ ದಾಸನನ್ನಾಗಿ ಮಾಡಿಬಿಟ್ಟರು. ತರುವಾಯ ಸಾಂಖ್ಯರು ಆತ್ಮನನ್ನು ಎಳೆದುತಂದು ಅವನಲ್ಲಿ ಆರೋಪಿತವಾದ ಕರ್ತೃತ್ವಾದಿ ಕಶ್ಮಲವನ್ನು ತೊಳೆದರು. ಆದರೆ ಪ್ರಕೃತಿಗೆ ಪರತಂತ್ರನನ್ನಾಗಿ ಮಾಡಿಬಿಟ್ಟರು. ಶಂಕರಾಂಶ ಸಂಭೂತರಾದ ಶ್ರೀಶಂಕರಾಚಾರ್ಯರು ಆ ಪುರುಷನನ್ನು ಸರ್ವೇಶ್ವರನನ್ನಾಗಿ ಮಾಡಿಬಿಟ್ಟರು.

ವಾಚಃ ಕಲ್ಪಲತಾಃ ಪ್ರಸೂನಸುಮನಃ ಸಂದೋಹ ಸಂದೋಹನಾಃ
ಭಾಷ್ಯೇ ಭೂಷ್ಯತಮೇ ಸಮೀಕ್ಷಿತವತಾಂ ಶ್ರೇಯಸ್ಕರೇ ಶಾಂಕರೇ |
ಭಾಷ್ಯಾಭಾಸಗಿರೋ ದುರನ್ವಯಗಿರಾಽಽಶ್ಲಿಷ್ಟಾ ವಿಸೃಷ್ಟಾ ಗುಣೈ-
ರಿಷ್ಟಾಃ ಸ್ಯುಃ ಕಥಮಂಬುಜಾಸನವಧೂದೌರ್ಭಾಗ್ಯಗರ್ಭೀಕೃತಾಃ || ೬೦

ಶ್ರೀಶಂಕರ ಪ್ರಣೀತವಾದ ಶ್ರೇಯಸ್ಕರವೂ ರಮಣೀಯವೂ ಆದ ಭಾಷ್ಯದಲ್ಲಿ ಇರುವ, ಫಲಪುಷ್ಪ ಸಂದೋಹವನ್ನು ಸುರಿಸುವ ಕಲ್ಪಲತೆಗಳಂತಿರುವ ವಾಣಿಗಳನ್ನು ಯಾರು ನೋಡಿದ್ದಾರೋ ಅವರಿಗೆ ಅನ್ಯರು ಬರೆದ ದುರನ್ವಯ ಪೂರ್ಣವಾದ ಮತ್ತು ಪ್ರಸಾದಾದಿ ಗುಣಗಳಿಂದ ರಹಿತವಾದ ಭಾಷ್ಯವೆಂಬ ಹೆಸರಿನ ಗ್ರಂಥಗಳು ಹೇಗೆ ಇಷ್ಟವಾದಾವು?ಆ ಗ್ರಂಥಗಳಲ್ಲಿರುವ ಮಾತುಗಳು ಬ್ರಹ್ಮನರಾಣಿಯಾದ ವಾಗ್ದೇವಿಯ ದೌರ್ಭಾಗ್ಯದಿಂದ ಬಂದವುಗಳು.

ಕಾಮಂ ಕಾಮಕಿರಾತಕಾರ್ಮುಕಲತಾಪರ್ಯಾಯನಿರ್ಯಾತಯಾ
ನಾರಾಚಚ್ಛಟಯಾ ವಿಪಾಟಿತಮನೋಧೈರ್ಯೈರ್ಧಿಯಾ ಕಲ್ಪಿತಾನ್ |
ಆಚಾರ್ಯಾನನವರ್ಯನಿರ್ಯದಭಿದಾಸಿದ್ಧಾಂತ ಶುದ್ಧಾಂತರೋ
ಧೀರೋ ನಾನುಸರೀಸರೀತಿ ವಿರಸಾನ್ ಗ್ರಂಥಾನಬಂಧಾಪಹಾನ್ ||೬೧

ಆಚಾರ್ಯರ ಸ್ತುತ್ಯ ಮುಖದಿಂದ ಹೊರಬಂದ ಅದ್ವೈತ ಸಿದ್ಧಾಂತದಿಂದ ಶುದ್ಧಚಿತ್ತನಾದ ಧೀರನು ಸಂಸಾರ ಬಂಧವನ್ನು ಪರಿಹರಿಸಲಾರದ ನೀರಸವಾದ ಅನ್ಯರ ಗ್ರಂಥಗಳನ್ನು ಎಂದಿಗೂ ಅನುಸರಿಸಲಾರನು. ಆ ಗ್ರಂಥಗಳು ಕಾಮನೆಂಬ ಕಿರಾತನ ಧನುಸ್ಸಿನಿಂದ ಕ್ರಮವಾಗಿ ಸಿಡಿದ ಬಾಣಸಮೂಹದಿಂದ ಯಾರ ಮನಸ್ಸಿನ ಧೀರತೆಯು ಸೀಳಿಹೋಗಿದೆಯೋ ಅಂತಹವರು ಸ್ವಬುದ್ಧಿಯಿಂದ ಯಥೇಷ್ಟವಾಗಿ ಕಲ್ಪಿಸಿ ಬರೆದವುಗಳು.

ಸುಧಾಸ್ಯಂದಾಹಂತಾವಿಜಯಿಭಗವತ್ಪಾದರಚನಾ-
ಸಮಸ್ಕಂಧಾನ್ ಗ್ರಂಥಾನ್ ರಚಯತಿ ನಿಬದ್ಧಾ ಯದಿ ತದಾ |

ವಿಶಂಕಾಂ ಭಂಗಾನಾಂ ಮೃಡಮುಕುಟ ಶೃಂಗಾಟ ಸರಿತಃ
ಕೃತೌ ತುಲ್ಯಾ ಕುಲ್ಯಾ ನಿಯತಮುಪಶಲ್ಯಾದೃತಗತಿಃ || ೬೨

(ಮಧುರವಾದ) ಅಮೃತರಸದ ಅಹಂಕಾರವನ್ನೂ ಗೆಲ್ಲುವ ಭಗವತ್ಪಾದರಚಿತ ಗ್ರಂಥಕ್ಕೆ ಸರಿದೂಗಬಲ್ಲ ಗ್ರಂಥಗಳನ್ನು ಯಾವನಾದರೂ ಪ್ರಬಂಧ ಕರ್ತನು ಬರೆಯುತ್ತಾನೆಂದಾದರೆ, ಆಗ ಹಳ್ಳಿಯ ಬಳಿ ಹರಿಯುವ ನೀರಿನ ಕಾಲುವೆಯು ಶಿವಶಿರಸ್ಸೆಂಬ ಚೌಕದಿಂದ ಹೊಮ್ಮಿದ ದೇವಗಂಗೆಯ ತರಂಗಗಳ ಶಂಕೆಯನ್ನು ತನ್ನಲ್ಲಿ ಹುಟ್ಟಿಸಿತು ಎಂದು ಹೇಳಬಹುದು!

ಯಯಾ ದೀನಾಧೀನಾ ಘನಕನಕಧಾರಾ ಸಮರಚಿ
ಪ್ರತೀತಿಂ ನೀತಾಽಸೌ ಶಿವಯುವತಿ ಸೌಂದರ್ಯಲಹರೀ |
ಭುಜಂಗೋ ರೌದ್ರೋಽಪಿ ಶ್ರುತಭಯಹೃದಾಧಾಯಿ ಸುಗುರೋ-
ರ್ಗಿರಾಂ ಧಾರಾ ಸೇಯಂ ಕಲಯತಿ ಕವೇಃ ಕಸ್ಯ ನ ಮುದಮ್ || ೬೩

ಶ್ರೀ ಶಂಕರಗುರುಗಳ ಯಾವ ವಾಗ್ಧಾರೆಯು ಸುವರ್ಣ ವೃಷ್ಟಿಧಾರೆಯನ್ನೇ ದೀನಳಾದ ಬ್ರಾಹ್ಮಣಿಗೆ ಅಧೀನಳನ್ನಾಗಿ ಮಾಡಿತೋ, ಯಾವುದು ಶಿವಪತ್ನಿಯಾದ ದೇವಿಯ ಸೌಂದರ್ಯಲಹರಿಯೆಂದೇ ಪ್ರಖ್ಯಾತಿಯನ್ನು ಪಡೆಯಿತೋ, ಭಯಂಕರವಾದ ಯಾವ ಭುಜಂಗವು (ಭುಜಂಗ ಪ್ರಯಾತ ವೃತ್ತದಿಂದ ಬರೆದ ಶಿವಭುಜಂಗಸ್ತೋತ್ರವು) ಕೇಳಿದವರ ಭಯವನ್ನೇ ಪರಿಹರಿಸತಕ್ಕ ವಾಣಿಯಾಯಿತೋ ಅಂತಹ ಮಹಾಕವಿವಾಣಿಯು ಯಾರಿಗೆ ತಾನೇ ಆನಂದವನ್ನುಂಟು ಮಾಡಲಾರದು?

ಗಿರಾಂ ಧಾರಾಕಲ್ಪದ್ರುಮಕುಸುಮಧಾರಾ ಪರಗುರೋ-
ಸ್ತದರ್ಥಾಲೀ ಚಿಂತಾಮಣಿ ಕಿರಣವೇಣ್ಯಾ ಗುಣನಿಕಾ |
ಅಭಂಗವ್ಯಂಗ್ಯೌಘಃ ಸುರಸುರಭಿದುಗ್ಧೋರ್ಮಿಸಹಭೂ-
ರ್ದಿವಂ ಭವ್ಯೈಃ ಕಾವ್ಯೈಃ ಸೃಜತಿ ವಿದುಷಾಂ ಶಂಕರಗುರುಃ || ೬೪

ಶ್ರೀ ಶಂಕರಗುರುಗಳು ತಮ್ಮ ಭವ್ಯ ಕಾವ್ಯಗಳಿಂದ ಭೂಮಿಯಲ್ಲೊಂದು ಸ್ವರ್ಗವನ್ನೇ ಸೃಷ್ಟಿಸುತ್ತಾರೆ. ಅವರ ವಾಗ್ಧಾರೆಯು ಕಲ್ಪವೃಕ್ಷದ ಹೂಗಳ ಸುರಿಮಳೆ. ಅರ್ಥವು ಚಿಂತಾಮಣಿಯ ಕಿರಣಸಮೂಹದಿಂದಾದ ರತ್ನಮಾಲೆ. ಆ ಕಾವ್ಯದಲ್ಲಿ ತೋರುವ ಉತ್ತಮವಾದ ವ್ಯಂಗ್ಯವು ಕಾಮಧೇನುವಿನ ಹಾಲಿನ ನೊರೆಗೆ ಸದೃಶವಾದದ್ದು.

ಟಿಪ್ಪಣಿ: ಗುಣನಿಕಾ ಶಬ್ದಕ್ಕೆ ನೃತ್ಯ, ಮಾಲೆ ಎಂಬ ಅರ್ಥಗಳಿವೆ. ವ್ಯಾಖ್ಯಾನಕಾರರು ನೃತ್ಯವೆಂಬ ಅರ್ಥವನ್ನು ಬರೆದಿದ್ದಾರೆ.

ವಾಚಾ ಮೋಚಾಫಲಾಭಾಃ ಶ್ರಮಶಮನವಿಧೌ ತೇ ಸಮರ್ಥಾಸ್ತದರ್ಥಾಃ
ವ್ಯಂಗ್ಯಂ ಭಂಗ್ಯಂತರಂ ತತ್ ಖಲು ಕಿಮಪಿ ಸುಧಾಮಾಧುರೀಸಾಧುರೀತಿಃ |
ಮನ್ಯೇ ಧನ್ಯಾನಿ ಗಾಢಂ ಪ್ರಶಮಿಕುಲಪತೇಃ ಕಾವ್ಯಗವ್ಯಾನಿ ಭವ್ಯಾ-
ನ್ಯೇಕಶ್ಲೋಕೋಽಪಿ ಯೇಷು ಪ್ರಥಿತಕವಿಜನಾನಂದಸಂದೋಹಕಂದಃ ||

ಯತಿಶ್ರೇಷ್ಠರಾದ ಆಚಾರ್ಯರ ಕಾವ್ಯಗಳು ಧನ್ಯವಾದವು. ಅವು ಹಾಲಿನಂತೆ ಭವ್ಯವಾದವು. ಆ ಕಾವ್ಯದಲ್ಲಿರುವ ವಾಣಿಗಳು ರಸಬಾಳೆಯ ಹಣ್ಣುಗಳಂತಿವೆ. ಅವುಗಳ ಅರ್ಥಗಳು ಆಯಾಸವನ್ನು ಪರಿಹರಿಸಲು ಸಮರ್ಥವಾದವುಗಳು. ಕಾವ್ಯದಲ್ಲಿರುವ ವ್ಯಂಗ್ಯವಾದರೋ ರಮಣೀಯವಾದ ನೂತನ ರೀತಿಯನ್ನು ಪಡೆದಿರುತ್ತದೆ. ಆ ವ್ಯಂಗ್ಯಗಳಲ್ಲಿ ಅಮೃತದಂತೆ ಮಾಧುರ್ಯವನ್ನು ಬೀರುವ ಉತ್ತಮ ರೀತಿಯುಂಟು. ಅವುಗಳಲ್ಲಿರುವ ಒಂದು ಶ್ಲೋಕವೂ ಕೂಡ ವಿಖ್ಯಾತರಾದ ಮಹಾಕವಿಗಳಿಗೆ ಆನಂದಸಂದೋಹವನ್ನೇ ಉಂಟುಮಾಡುವುದೆಂದು ನಾನು ಭಾವಿಸುತ್ತೇನೆ.

ವಾಗ್ಗುಂಭೈಃ ಕುರುವಿಂದಕಂದಲನಿಭೈರಾನಂದಕಂದೈಃ ಸತಾ-
ಮರ್ಥೌಘೈರರವಿಂದಬೃಂದಕುಹರಸ್ಯಂದನ್ಮರಂದೋಜ್ಜ್ವಲೈಃ |
ವ್ಯಂಗ್ಯೈಃ ಕಲ್ಪತರುಪ್ರಫುಲ್ಲಸುಮನಃ ಸೌರಭ್ಯಗರ್ಭೀಕೃತೈ-
ರ್ದತ್ತೇ ಕಸ್ಯ ಮುದಂ ನ ಶಂಕರಗುರೋರ್ಭವ್ಯಾರ್ಥಕಾವ್ಯಾವಲಿಃ || ೯೬

ರಮಣೀಯಾರ್ಥಗಳಿಂದ ತುಂಬಿದ ಶ್ರೀಶಂಕರಗುರುಗಳ ಕಾವ್ಯಾವಳಿಯು ಯಾರಿಗೆ ಆನಂದವನ್ನುಂಟುಮಾಡದೆ ಇದ್ದೀತು?ಅವರು ಕಾವ್ಯಗಳಲ್ಲಿ ಬಳಸಿದ ಪದಗುಂಫನಗಳು ಪದ್ಮರಾಗಮಣಿಗಳ ಅಂಕುರಗಳಂತಿರುವ ಕಾಂತಿಗಳಿಂದ ಉಜ್ಜ್ವಲವಾದವು. ಅರ್ಥಗಳು ಅರವಿಂದದಿಂದ ಸುರಿಯುವ ಮಕರಂದದಂತೆ ಚೇತೋಹಾರಿಯಾದವು. ವ್ಯಂಗ್ಯಾರ್ಥಗಳು ಕಲ್ಪಲತೆಗಳ ಅರಳಿದ ಹೂಗಳ ಪರಿಮಳವನ್ನು ಬೀರತಕ್ಕವು.

ಟಿಪ್ಪಣಿ: ಆಚಾರ್ಯರ ಕಾವ್ಯಗಳೆಂದರೆ ಸೌಂದರ್ಯಲಹರಿಯೇ ಮೊದಲಾದ ಸ್ತೋತ್ರ ಕಾವ್ಯಗಳು.

ತತ್ರಾದ್ಯಗ್ಯತಿಶೇಖರೋದ್ಧೃತ ನಿಷದ್ಭಾಷ್ಯಂ ನಿಶಮ್ಯೇರ್ಷ್ಯಯಾ
ಕೇಚಿದ್ದೇವನದೀ ತಟಸ್ಥ ವಿದುಷಾಮಕ್ಷಾಂಘ್ರಿಪಕ್ಷಶ್ರಿತಾಃ |
ಮೌರ್ಖ್ಯಾತ್ ಖಂಡಯಿತುಂ ಪ್ರಯತ್ನಮನುಮಾನೈಕೇಕ್ಷಣಾ ವಿಕ್ಷಮಾ-
ಶ್ಚಕ್ರುರ್ಭಾವ್ಯವಿಚಾರ್ಯ ಚಿತ್ರಕಿರಣಂ ಚಿತ್ರಾಃ ಪತಂಗಾ ಇವ || ೯೭

ಗಂಗಾನದೀತಟದಲ್ಲಿದ್ದ ವಿದ್ವಾಂಸರಲ್ಲಿ ಗೌತಮಪಕ್ಷವನ್ನಾಶ್ರಯಿಸಿದ ಕೆಲವು ನೈಯಾಯಿಕರು ಆ ಯತೀವರೇಣ್ಯರಿಂದ ರಚಿತವಾದ ಉಪನಿಷದಾದಿಭಾಷ್ಯವನ್ನು ಕೇಳಿ ಹೊಟ್ಟೆಕಿಚ್ಚಿನಿಂದ ಕುದಿಯತೊಡಗಿದರು. ಅವರು ಮೂರ್ಖತನದಿಂದ ತಾಳ್ಮೆಗೆಟ್ಟು

ಅನುಮಾನಪ್ರಮಾಣವನ್ನಾಶ್ರಯಿಸಿ ಯುಕ್ತಿಗಳಿಂದ ಆ ಭಾಷ್ಯಗಳನ್ನು ಖಂಡಿಸಲು ಪ್ರಯತ್ನಿಸಿದರು. ಅವರು ಮುಂದೇನಾಗುವುದೆಂದು ತಿಳಿಯದೆ, ಉಜ್ಜ್ವಲದೀಪವನ್ನು ಆರಿಸಲು ಪ್ರಯತ್ನಿಸುವ ಚಿತ್ರವರ್ಣದ ಪತಂಗಹುಳುಗಳಂತೆ ಆಗಿಹೋದರು!

ವಿವರಣೆ:-ಅಕ್ಷಾಂಘ್ರಿ = ಅಕ್ಷಪಾದ. ನ್ಯಾಯಸೂತ್ರಗಳನ್ನು ಬರೆದ ಗೌತಮ ಮುನಿ. ನಿಷತ್ = ಉಪನಿಷತ್. ಸತ್ಯಭಾಮೆಯನ್ನು ಭಾಮೆಯೆಂದಂತೆ, ಭೀಮಸೇನನನ್ನು ಭೀಮ ಎಂದಂತೆ ಈ ಪ್ರಯೋಗ. 'ನಾಮ್ನೈಕದೇಶೇ ನಾಮಗ್ರಹಣಮ್.' ಚಿತ್ರಕಿರಣ = ಚಿತ್ರಭಾನು, ಅಗ್ನಿ. ಪ್ರಕೃತದಲ್ಲಿ ದೀಪ. ಪತಂಗಗಳು ದೀಪದಲ್ಲಿ ಸುಟ್ಟು ಹೋಗುವಂತೆ ನೈಯಾಯಿಕರು ವಾದದಲ್ಲಿ ಸೋತರು-ಎಂದು ಅಭಿಪ್ರಾಯ.

ನಿರ್ಘರ್ಷಣಚ್ಛೇದನತಾಪನಾದ್ಯೈರ್ಯಥಾ ಸುವರ್ಣಂ ಪರಭಾಗಮೇತಿ |
ವಿವಾದಿಭಿಃ ಸಾಧು ವಿಮಥ್ಯಮಾನಂ ತಥಾ ಮುನೇರ್ಭಾಷ್ಯಮದೀಪಿ
ಭೂಯಃ || ೯೮

ಒರೆಹಚ್ಚಿ ಉಜ್ಜುವುದು, ಕತ್ತರಿಸುವುದು, ಬೆಂಕಿಯಲ್ಲಿ ಸುಡುವುದು-ಮೊದಲಾದ್ದನ್ನು ಮಾಡಿದಷ್ಟು ಚಿನ್ನವು ಹೇಗೆ ಉತ್ತಮವಾದ ಮೆರುಗನ್ನು ಪಡೆದು ಹೊಳೆಯವುದೋ ಹಾಗೆ ಪ್ರತಿವಾದಿಗಳಿಂದ ಮತ್ತೆ ಮತ್ತೆ ಚೆನ್ನಾಗಿ ಮಥನವಾದಷ್ಟೂ ಶ್ರೀಶಂಕರಮುನಿಗಳ ಭಾಷ್ಯವು ಉಜ್ಜ್ವಲವಾಗಿ ಬೆಳಗತೊಡಗಿತು.

ಸ ಭಾಷ್ಯಚಂದ್ರೋ ಯತಿದುಗ್ಧ ಸಿಂಧೋ-
ರುತ್ಥಾಯ ದಾಸ್ಯನ್ನಮೃತಂ ಬುಧೇಭ್ಯಃ|
ವಿಧೂಯ ಗೋಭಿಃ ಕುಮತಾಂಧಕಾರಾ-
ನತರ್ಪಯದ್ವಿಪ್ರಮನಶ್ಚಕೋರಾನ್ || ೯೯

ಶ್ರೀಶಂಕರಮುನಿಗಳೆಂಬ ಕ್ಷೀರಸಮುದ್ರದಿಂದ ಮೇಲೆದ್ದ ಆ ಭಾಷ್ಯವೆಂಬ ಚಂದ್ರನು ವಿದ್ವಾಂಸರಿಗೆ ಮತ್ತು ದೇವತೆಗಳಿಗೆ ಮೋಕ್ಷವನ್ನು ಮತ್ತು ಅಮೃತವನ್ನು ಕೊಡುತ್ತ, ತನ್ನ ವಾಕ್ಕುಗಳೆಂಬ ಕಿರಣಗಳಿಂದ ಕುತ್ಸಿತಮತಗಳೆಂಬ ಕತ್ತಲೆಗಳನ್ನು ಧ್ವಂಸಮಾಡಿ ದ್ವಿಜರ ಅಂತಃ ಕರಣಗಳೆಂಬ ಚಕೋರಪಕ್ಷಿಗಳನ್ನು ತೃಪ್ತಿಪಡಿಸಿದನು.

ಟಿಪ್ಪಣಿ: ಬುಧ = ವಿದ್ವಾಂಸ; ದೇವತೆ. ಗೋ = ವಾಕ್; ಅಮೃತ.

ಅನಾದಿವಾಕ್ಸಾಗರ ಮಂಥನೋತ್ಥಾ
ಸೇವ್ಯಾ ಬುಧೈರ್ಧಿಕ್ಕೃತ ದುಃಸಪತ್ನೈಃ |
ವಿಶ್ರಾಣಯಂತೀ ವಿಜರಾಮರತ್ವಂ
ವಿದಿದ್ಯುತೇ ಭಾಷ್ಯಸುಧಾ ಯತೀಂದೋಃ || ೧೦೦

ಯತೀಶ್ವರರೆಂಬ ಈ ಚಂದ್ರನಿಂದ ಉದಿಸಿದ ಭಾಷ್ಯಾಮೃತವು ಅನಾದಿವಾಕ್ ಎಂಬ ವೇದರೂಪವಾದ ಸಮುದ್ರವನ್ನು ಮಥಿಸಿದ್ದರಿಂದ ಉದ್ಭವಿಸಿತು. ದುರ್ವಾದಿಗಳಾದ ಪ್ರತಿಪಕ್ಷದವರೆಂಬ ದೈತ್ಯರನ್ನು ಧಿಕ್ಕರಿಸಿ ನಿಂತು, ವಿದ್ವಾಂಸರೆಂಬ ದೇವತೆಗಳಿಗೆ ಸೇವನೀಯವಾದದ್ದು. ಮುಪ್ಪುಸಾವುಗಳನ್ನು ಕೊನೆಗಾಣಿಸತಕ್ಕದ್ದು ಈ ಭಾಷ್ಯಾಮೃತ.

ಸತಾಂ ಹೃದಬ್ಜಾನಿ ವಿಕಾಸಯಂತೀ
ತಮಾಂಸಿ ಗಾಢಾನಿ ವಿದಾರಯಂತೀ |
ಪ್ರತ್ಯರ್ಥ್ಯುಲೂಕಾನ್ ಪ್ರವಿಲಾಪಯಂತೀ
ಭಾಷ್ಯಪ್ರಭಾಭಾದ್ಯತಿವರ್ಯಭಾನೋಃ || ೧೦೧

ಯತಿವರ್ಯರೆಂಬ ಈ ಸೂರ್ಯನ ಭಾಷ್ಯಪ್ರಭೆಯು ಸಜ್ಜನರ ಹೃದಯಕಮಲಗಳನ್ನು ಅರಳಿಸುತ್ತದೆ. ಗಾಢವಾದ ಅಜ್ಞಾನವೆಂಬ ಕತ್ತಲೆಯನ್ನು ನಾಶಪಡಿಸುತ್ತದೆ. ಪ್ರತಿವಾದಿಗಳೆಂಬ ಗೂಬೆಗಳನ್ನು ಅಡಗಿಸಿಬಿಡುತ್ತದೆ. ಈ ಭಾಷ್ಯಪ್ರಭೆಯು ಎಲ್ಲೆಲ್ಲಿಯೂ ಪ್ರಕಾಶಿಸಿತು.

ನ್ಯಾಯಮಂದರವಿಮಂಥನಜಾತಾ
ಭಾಷ್ಯನೂತನಸುಧಾ ಶ್ರುತಿಸಿಂಧೋಃ |
ಕೇವಲಶ್ರವಣತೋ ವಿಬುಧೇಭ್ಯ-
ಶ್ಚಿತ್ರಮತ್ರ ವಿತರತ್ಯಮೃತತ್ವಮ್ || ೧೦೨

ಬ್ರಹ್ಮಸೂತ್ರಗಳಲ್ಲಿರುವ ನ್ಯಾಯಗಳೆಂಬ ಮಂದರ ಪರ್ವತದ ಮಥನದಿಂದ, ವೇದವೆಂಬ ಸಮುದ್ರದಿಂದ ಹುಟ್ಟಿದ ಶ್ರೀ ಶಾಂಕರ ಭಾಷ್ಯದಲ್ಲಿರುವ ನೂತನ ಅಮೃತವು ಶ್ರವಣಮಾತ್ರದಿಂದಲೇ ವಿದ್ವಾಂಸರಿಗೆ ಮತ್ತು ದೇವತೆಗಳಿಗೆ ಅಮೃತತ್ವವನ್ನೇ ತಂದುಕೊಡುತ್ತದೆ. ಇದೊಂದು ಅಚ್ಚರಿ!

ಟಿಪ್ಪಣಿ: ದೇವತೆಗಳು ಕಡೆದ ಅಮೃತವು ಪಾನಮಾಡಿದವರಿಗೆ ಮಾತ್ರ ಅಮೃತತ್ವವನ್ನು ಕೊಡುತ್ತದೆ.

ಪಾದಾದಾಸೀತ್ಪದ್ಮನಾಭಸ್ಯ ಗಂಗಾ
ಶಂಭೋರ್ವಕ್ತ್ರಾಚ್ಛಾಂಕರೀ ಭಾಷ್ಯಸೂಕ್ತಿಃ |
ಆದ್ಯಾ ಲೋಕಾನ್ ದೃಶ್ಯತೇ ಮಜ್ಜಯಂತೀ-
ತ್ಯನ್ಯಾ ಮಗ್ನಾನುದ್ಧರತ್ಯೇಷ ಭೇದಃ || ೧೦೩

ಪದ್ಮನಾಭನಾದ ವಿಷ್ಣುವಿನ ಪಾದದಿಂದ ಗಂಗಾನದಿ ಉದ್ಭವಿಸಿತು. ಶಂಭುವಿನ ಮುಖದಿಂದ ಶಾಂಕರ ಭಾಷ್ಯ ಸೂಕ್ತಿಯು ಹೊರಟಿತು. ಮೊದಲನೆಯದಾದ ಗಂಗೆಯು

ಜನರನ್ನು ಮುಳುಗಿಸುವುದು ಕಂಡುಬರುತ್ತದೆ. ಈ ಎರಡನೆಯ ಭಾಷ್ಯಸೂಕ್ತಿಯು ಮುಳುಗಿದವರನ್ನು ಮೇಲೆತ್ತುತ್ತದೆ- ಎಂಬುದೇ ಇವುಗಳಲ್ಲಿರುವ ಭೇದ!

ಟಿಪ್ಪಣಿ: ಸಂಸಾರದಲ್ಲಿ ಮುಳುಗಿದವರನ್ನು ಭಾಷ್ಯಸೂಕ್ತಿಯು ಉದ್ಧರಿಸಿ ಮೋಕ್ಷವನ್ನೀಯುತ್ತದೆ ಎಂದು ಅಭಿಪ್ರಾಯ.

ವ್ಯಾಸೋ ದರ್ಶಯತಿ ಸ್ಮ ಸೂತ್ರಕಲಿತನ್ಯಾಯೌಘರತ್ನಾವಲೀ-
ರರ್ಥಾಲಾಭವಶಾನ್ನ ಕೈರಪಿ ಬುಧೈರೇತಾ ಗೃಹೀತಾಶ್ಚಿರಮ್ |
ಅರ್ಥಾಪ್ತ್ಯಾ ಸುಲಭಾಭಿರಾಭಿರಧುನಾ ತೇ ಮಂಡಿತಾಃ ಪಂಡಿತಾ
ವ್ಯಾಸಶ್ಚಾಽಽಪ ಕೃತಾರ್ಥತಾಂ ಯತಿಪತೇರೌದಾರ್ಯಮಾಶ್ಚರ್ಯಕೃತ್ ||

ವ್ಯಾಸಮುನಿಗಳು ಶಾರೀರಕ ಮೀಮಾಂಸೆಯಲ್ಲಿ ಸೂತ್ರದಿಂದ ಪೋಣಿಸಲ್ಪಟ್ಟ ನ್ಯಾಯರತ್ನಾವಳಿಗಳನ್ನು ಪ್ರಕಟಿಸಿದರು. ಅರ್ಥಲಾಭವಿಲ್ಲದ್ದರಿಂದ ಯಾವ ವಿದ್ವಾಂಸರೂ ಇದುವರೆಗೆ ಬಹುಕಾಲದಿಂದ ಈ ರತ್ನಾವಳಿಗಳನ್ನು ಕೊಂಡಿರಲಿಲ್ಲ-ತಿಳಿದು ಕೊಂಡಿರಲಿಲ್ಲ. ಈಗಲಾದರೋ ಆಚಾರ್ಯರು ಅರ್ಥವನ್ನು ದೊರಕಿಸಿ ಸುಲಭವಾದ ಈ ರತ್ನಾವಳಿಗಳಿಂದ ಪಂಡಿತರನ್ನು ಅಲಂಕರಿಸಿದರು. ಈಗ ವ್ಯಾಸರು ಕೃತಾರ್ಥರಾದರು. ನಮ್ಮ ಯತಿಪತಿಗಳ ಔದಾರ್ಯವು ಆಶ್ಚರ್ಯಕರವಾದುದು!

ವಿವರಣೆ:-ಸೂತ್ರ = ಬ್ರಹ್ಮಸೂತ್ರ, ದಾರ. ಅರ್ಥ = ಸೂತ್ರಾರ್ಥ, ಹಣ.

ವಿದ್ವಜ್ಜಾಲತಪಃ ಫಲಂ ಶ್ರುತಿವಧೂಧಮ್ಮಿಲ್ಲಮಲ್ಲೀಸ್ರಜಂ
ಸದ್ವೈಯಾಸಿಕಸೂತ್ರಮುಗ್ಧಮಧುರಾಗಣ್ಯಾತಿ ಪುಣ್ಯೋದಯಮ್ |
ವಾಗ್ದೇವೀಚಿರಭೋಗ್ಯಭಾಗ್ಯವಿಭವ ಪ್ರಾಗ್ಭಾರಕೋಶಾಲಯಂ
ಭಾಷ್ಯಂ ತೇ ನಿಪಿಬಂತಿ ಹಂತ ನ ಪುನರ್ಯೇಷಾಂ ಭವೇ ಸಂಭವಃ ||

ಆಚಾರ್ಯ ರಚಿತವಾದ ಸೂತ್ರಭಾಷ್ಯವು ಬಹುಕಾಲದಿಂದ ವಿದ್ವಾಂಸರು ಮಾಡಿದ ತಪಸ್ಸಿನ ಫಲ. ವೇದವೆಂಬ ವಧುವಿನ ತುರುಬಿನಲ್ಲಿ ಮುಡಿಯಬೇಕಾದ ಮಲ್ಲಿಗೆಯ ಮಾಲೆ. ವ್ಯಾಸಸೂತ್ರಗಳು ಸಂಪಾದಿಸಿದ ಸುಂದರವೂ ಮಧುರವೂ ಅಪಾರವೂ ಆದ ಪುಣ್ಯದಿಂದ ಉದಯಿಸಿತು. ವಾಗ್ದೇವಿಯು ಚಿರಕಾಲದ ವರೆಗೆ ಅನುಭವಿಸಬಹುದಾದ ಭಾಗ್ಯಾತಿಶಯದ ವಿದ್ಯಾಭಾಂಡಾಗಾರವೇ ಇದು. ಯಾರಿಗೆ ಮತ್ತೆ ಸಂಸಾರದಲ್ಲಿ ಜನ್ಮವಿಲ್ಲವೋ ಅಂತಹ ಧನ್ಯರು, ಆಹಾ!ಇದನ್ನು ಕುಡಿಯುತ್ತಾರೆ.

ಮಂಥಾನಾದ್ರಿಧುರಂಧರಾ ಶ್ರುತಿಸುಧಾಸಿಂಧೋರ್ಯತಿಕ್ಷ್ಮಾಪತೇ-
ರ್ಗ್ರಂಥಾನಾಂ ಫಣಿತಿಃ ಪರಾವರವಿದಾಮಾನಂದಸಂಧಾಯಿನೀ |

ಇಂಧಾನ್ಯೈಃ ಕುಮತಾಂಧಕಾರ ಪಟಲೈರಂಧೀಭವಚ್ಚಕ್ಷುಷಾಂ
ಪಂಥಾನಂ ಸ್ಫುಟಯಂತ್ಯಕಾಂಡಕಮಭಾತ್ತರ್ಕಾರ್ಕವಿದ್ಯೋತಿತೈಃ ||೧೦೬

ಶ್ರೀಶಂಕರ ಭಗವತ್ಪಾದರ ಗ್ರಂಥಗಳಲ್ಲಿರುವ ಸೂಕ್ತಿಯು ಶ್ರುತಿಯೆಂಬ ಕ್ಷೀರ ಸಮುದ್ರಕ್ಕೆ ಮಂದರ ಪರ್ವತದಂತಿದೆ. (ಶ್ರುತಿ ಸಾರವನ್ನು ತೆಗೆದು ತೋರಿಸುತ್ತದೆ)ಪರಾತ್ಪರ ಪುರುಷನನ್ನು ಬಲ್ಲ ಜ್ಞಾನಿಗಳಿಗೆ ಆನಂದವನ್ನುಂಟುಮಾಡತಕ್ಕದ್ದು. ದೀಪ್ತಿಯನ್ನುಂಟು ಮಾಡುವ ತರ್ಕವೆಂಬ ಸೂರ್ಯನ ಕಿರಣಗಳಿಂದ, ಕಣ್ಣು ಕಾಣಿಸದ ಜನರಿಗೆ ದಾರಿಯನ್ನು ಸ್ಪಷ್ಟವಾಗಿ ತೋರಿಸುತ್ತಾ ವಿರಾಜಿಸಿತು.

ಟಿಪ್ಪಣಿ: ಅಕಾಂಡಕಂ = ಕಾಂಡ ಶಬ್ದಕ್ಕೆ ಕುತ್ಸಿತ, ರಹಸ್ಯ ಎಂಬ ಎರಡು ಅರ್ಥಗಳಿವೆ. ಇಲ್ಲಿ ರಹಸ್ಯವೆಂಬ ಅರ್ಥವನ್ನಿಟ್ಟುಕೊಂಡು ಅಕಾಂಡಕಂ ಎಂದರೆ ಸ್ಪಷ್ಟವಾಗಿ -ಪ್ರಕಟವಾಗಿ ಎಂದು ಅರ್ಥಮಾಡಲಾಗಿದೆ.

ಆ ಸೀತಾನಾಥಸೇತು ಸ್ಥಲಕೃತಸಲಿಲದ್ವೈತಮುದ್ರಾತ್ಸಮುದ್ರಾ-
ದಾ ರುದ್ರಾಕರ್ಷಣಾದ್ರ್ಪಾಗವನತ ಶಿಖರಾದ್ಭೋಗ
ಸಾಂದ್ರಾನ್ನಗೇಂದ್ರಾತ್ |
ಆ ಚ ಪ್ರಾಚೀನ ಭೂಮೀಧರಮುಕುಟತಟಾದಾ ತಟಾತ್ಪಶ್ಚಿಮಾದ್ರೇ -
ರದ್ವೈತಾದ್ಯಾಪವರ್ಗಾ ಜಯತಿ ಯತಿಧರಾಪೋದ್ಧೃತಾ ಬ್ರಹ್ಮವಿದ್ಯಾ ||

ಶ್ರೀ ರಾಮನು ನಿರ್ಮಿಸಿದ ಸೇತುವೆಯ ಕೆಳಗಿರುವ ನೀರಿನ ವಿಭಾಗಾವಧಿಯುಳ್ಳ ದಕ್ಷಿಣಸಮುದ್ರದಿಂದ ಹಿಡಿದು ರುದ್ರನು ಎಳೆದದ್ದರಿಂದ ಬಗ್ಗಿದ ಶಿಖರಗಳುಳ್ಳ ಮತ್ತು ದೇವಭೋಗದಿಂದ ತುಂಬಿದ ಉತ್ತರದ ಮೇರು ಪರ್ವತದ ವರೆಗೂ ಉದಯಾಚಲ ಶಿಖರದಿಂದ ಹಿಡಿದು ಅಸ್ತಾಚಲದ ವರೆಗೂ ಇರುವ ಪೃಥ್ವಿಯಲ್ಲಿ ಅದ್ವೈತಜ್ಞಾನದಿಂದ ಮುಕ್ತಿಯನ್ನುಂಟುಮಾಡತಕ್ಕ, ಈ ಯತಿರಾಜರಿಂದ ಪ್ರಕಟವಾದ ಬ್ರಹ್ಮವಿದ್ಯೆಯು ವಿಜಯಶಾಲಿಯಾಗಿರುತ್ತದೆ.

ಟಿಪ್ಪಣಿ:ತ್ರಿಪುರದಹನದ ಕಾಲದಲ್ಲಿ ಶಿವನಿಗೆ ಮೇರು ಪರ್ವತವು ಧನುಸ್ಸಾಗಿತ್ತೆಂದು ಪುರಾಣಕಥೆ ಇದೆ. ಆಗ ಹೆದೆಯನ್ನು ಜಗ್ಗಿದಾಗ ಮೇರುವಿನ ಶಿಖರಗಳು ಬಾಗಿದವು-ಎಂದು ಅಭಿಪ್ರಾಯ.

ಇತಿ ಶ್ರೀ ಮಾಧವೀಯೇ ತದ್ಬ್ರಹ್ಮವಿದ್ಯಾಪ್ರತಿಷ್ಠಿತಿಃ |
ಸಂಕ್ಷೇಪ ಶಂಕರಜಯೇ ಷಷ್ಠಃ ಸರ್ಗ ಉಪಾರಮತ್ ||

ಇಲ್ಲಿಗೆ ಶ್ರೀ ಮಾಧವೀಯ ಸಂಕ್ಷೇಪಶಂಕರ ವಿಜಯದಲ್ಲಿ ಬ್ರಹ್ಮವಿದ್ಯೆಯನ್ನು ಪ್ರತಿಷ್ಠಾಪಿಸಿದ ವಿಷಯವನ್ನು ತಿಳಿಸುವ ಆರನೆಯ ಸರ್ಗವು ಸಮಾಪ್ತವಾಯಿತು.

✤ ✤ ✤

ಸಪ್ತಮಃ ಸರ್ಗಃ
ವ್ಯಾಸದರ್ಶನಾದಿ ಚರಿತವರ್ಣನಮ್

ವೇದವ್ಯಾಸರು ಪ್ರತ್ಯಕ್ಷರಾಗಿ ಆಚಾರ್ಯರ ಸೂತ್ರಭಾಷ್ಯವನ್ನು ಶ್ಲಾಘಿಸುವುದು. ಪರಶಿವನ ಆಜ್ಞೆಯಂತೆ ಮತ್ತೆ ಹದಿನಾರು ವರ್ಷಗಳ ಆಯುಸ್ಸಿನ ಪ್ರಾಪ್ತಿ. ತುಷಾಗ್ನಿಯಲ್ಲಿ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದ ಕುಮಾರಿಲಭಟ್ಟರ ಸಂದರ್ಶನ. ಭಾಷ್ಯಗಳಿಗೆ ವಾರ್ತಿಕಗಳನ್ನು ಬರೆಯಲು ವಿಶ್ವರೂಪನು ಸಮರ್ಥನೆಂದೂ ಅವನ ಬಳಿಗೆ ಹೋಗಬೇಕೆಂದೂ ಕುಮಾರಿಲರು ಹೇಳುವುದು. ಆಚಾರ್ಯರಿಂದ ಕುಮಾರಿಲರಿಗೆ ಬ್ರಹ್ಮತತ್ತ್ವೋಪದೇಶ.

ಸ ಜಾತು ಶಾರೀರಕಸೂತ್ರಭಾಷ್ಯ-
ಮಧ್ಯಾಪಯನ್ನಭ್ರಸರಿತ್ಸಮೀಪೇ ।
ಶಿಷ್ಯಾಲಿಶಂಕಾಃ ಶಮಯನ್ನುವಾಸ
ಯಾವನ್ನಭೋಮಧ್ಯಮಿತೋ ವಿವಸ್ವಾನ್ ॥ ೧

ಹೀಗಿರುತ್ತಿರಲು ಆಚಾರ್ಯರು ಒಮ್ಮೆ ಗಂಗಾನದೀಸಮೀಪದಲ್ಲಿ ಶಾರೀರಕ ಸೂತ್ರ ಭಾಷ್ಯವನ್ನು ಶಿಷ್ಯರಿಗೆ ಬೋಧಿಸುತ್ತಾ ಅವರ ಶಂಕೆಗಳನ್ನು ಪರಿಹರಿಸುತ್ತಾ ಕುಳಿತಿದ್ದರು. ಆಗ ಸೂರ್ಯನು ಆಕಾಶದ ಮಧ್ಯಕ್ಕೆ ಏರಿದನು.

ಶ್ರಾಂತೇಷ್ವಥಾಧೀತ್ಯ ಶನೈರ್ವಿನೇಯೇ-
ಷ್ವಾಚಾರ್ಯ ಉತ್ತಿಷ್ಠತಿ ಯಾವದೇಷಃ ।
ತಾವದ್ ದ್ವಿಜಃ ಕಶ್ಚನ ವೃದ್ಧರೂಪಃ
ಕಸ್ತ್ವಂ ಕಿಮಧ್ಯಾಪಯಸೀತ್ಯಪೃಚ್ಛತ್ ॥ ೨

ಶಿಷ್ಯರು ಅಧ್ಯಯನಮಾಡಿ ಬಳಲಿದ್ದರಿಂದ ಆಚಾರ್ಯರು ಅಂದಿನ ಪಾಠವನ್ನು ಮುಗಿಸಿ ಮೆಲ್ಲಗೆ ಏಳುತ್ತಿದ್ದರು. ಅಷ್ಟು ಹೊತ್ತಿಗೆ ಒಬ್ಬ ವೃದ್ಧ ಬ್ರಾಹ್ಮಣನು ಬಂದು "ನೀನು ಯಾರು? ಯಾವುದನ್ನು ಅಧ್ಯಾಪನಮಾಡುತ್ತಿದ್ದೀಯೆ?"ಎಂದು ಕೇಳಿದನು.

ಶಿಷ್ಯಾಸ್ತಮೂಚುರ್ಭಗವಾನಸೌ ನೋ
ಗುರುಃ ಸಮಸ್ತೋಪನಿಷತ್ ಸ್ವತಂತ್ರಃ ।
ಅನೇನ ದೂರೀಕೃತಭೇದವಾದ-
ಮಕಾರಿ ಶಾರೀರಕಸೂತ್ರಭಾಷ್ಯಮ್ ॥ ೩

ಆಗ ಆಚಾರ್ಯರ ಶಿಷ್ಯರು ಆ ಬ್ರಾಹ್ಮಣನನ್ನು ಕುರಿತು "ಇವರು ನಮ್ಮ ಗುರುಗಳಾದ ಭಗವಾನ್ ಆಚಾರ್ಯರು. ಸಮಸ್ತ ಉಪನಿಷತ್ತುಗಳೂ ಇವರಿಗೆ ಸ್ವಾಧೀನವಾಗಿವೆ. ಇವರು ದ್ವೈತವಾದವನ್ನು ನಿರಾಕರಿಸಿ ಶಾರೀರಕ ಸೂತ್ರಗಳಿಗೆ ಭಾಷ್ಯವನ್ನು ರಚಿಸಿದ್ದಾರೆ"ಎಂದರು.

ಸ ಚಾಬ್ರವೀದ್ಭಾಷ್ಯಕೃತಂ ಭವಂತ-
ಮೇತೇ ವದಂತ್ಯದ್ಭುತಮೇತದಾಸ್ತಾಮ್ ।
ಅಥೈಕಮುಚ್ಚಾರಯ ಪಾರಮರ್ಷಂ
ಯತೇಽರ್ಥತಸ್ತ್ವಂ ಯದಿ ವೇತ್ಥ ಸೂತ್ರಮ್ ॥ ೪

ಆಗ ಬ್ರಾಹ್ಮಣನು ಆಚಾರ್ಯರನ್ನು ನೋಡಿ "ಓ ಸಂನ್ಯಾಸಿ, ನೀನು ಭಾಷ್ಯಕಾರನೆಂದು ಇವರು ಹೇಳುತ್ತಾರೆ. ಇದೊಂದು ಅಚ್ಚರಿ. ಇರಲಿ, ಪರಮರ್ಷಿಗಳಾದ ಬಾದರಾಯಣರು ಬರೆದ ಶಾರೀರಕ ಸೂತ್ರಗಳ ಅರ್ಥವನ್ನು ನೀನು ಬಲ್ಲವನಾದರೆ, ಎಲ್ಲಿ, ಅವುಗಳಲ್ಲೊಂದು ಸೂತ್ರವನ್ನು ಹೇಳು"ಎಂದು ಕೇಳಿದನು.

ತಮಬ್ರವೀದ್ಭಾಷ್ಯಕೃದಗ್ರ್ಯವಾಚಂ
ಸೂತ್ರಾರ್ಥವಿದ್ಭ್ಯೋಽಸ್ತು ನಮೋ ಗುರುಭ್ಯಃ ।
ಸೂತ್ರಜ್ಞತಾಹಂಕೃತಿರಸ್ತಿ ನೋ ಮೇ
ತಥಾಽಪಿ ಯತ್ಪೃಚ್ಛಸಿ ತದ್ ಬ್ರವೀಮಿ ॥ ೫

ಆಗ ಭಾಷ್ಯಕಾರರು ಶ್ರೇಷ್ಠವಾದ ಈ ನುಡಿಯನ್ನು ಹೇಳಿದರು. "ಸೂತ್ರಾರ್ಥವಿದರಾದ ಗುರುಗಳಿಗೆ ನಮಸ್ಕಾರ. ಸೂತ್ರಾರ್ಥವನ್ನು ತಿಳಿದಿದ್ದೇನೆಂಬ ಅಹಂಕಾರ ನನಗಿಲ್ಲ. ಆದರೂ ನೀವು ಏನನ್ನು ಕೇಳುತ್ತೀರೋ ಅದನ್ನು ಹೇಳುತ್ತೇನೆ"ಎಂದರು.

ಪಪ್ರಚ್ಛ ಸೋಽಧ್ಯಾಯಮಥಾಧಿಕೃತ್ಯ
ತೃತೀಯಮಾರಂಭಗತಂ ಯತೀಶಮ್ ।
'ತದಂತರೇ'ತ್ಯಾದಿಕಮಸ್ತಿ ಸೂತ್ರಂ
ಬ್ರೂಹ್ಯೇತದರ್ಥಂ ಯದಿ ವೇತ್ಥ ಕಿಂಚಿತ್ ॥ ೬

ವೃದ್ಧ ಬ್ರಾಹ್ಮಣನು "ಮೂರನೆಯ ಅಧ್ಯಾಯದ ಆರಂಭದಲ್ಲಿ ಬರುವ 'ತದಂತರ ಪ್ರತಿಪತ್ತೌ'ಎಂಬ ಸೂತ್ರವಿದೆಯಲ್ಲ, ಅದರ ಅರ್ಥವೇನಾದರೂ ನಿನಗೆ ಗೊತ್ತಿದ್ದರೆ ಹೇಳುನೋಡೋಣ"ಎಂದು ಆ ಯತೀಶ್ವರರನ್ನು ಕೇಳಿದನು.

ಟಿಪ್ಪಣಿ: 'ತದಂತರ ಪ್ರತಿಪತ್ತೌ ರಂಹತಿ ಸಂಪರಿಷ್ವಕ್ತಃ ಪ್ರಶ್ನನಿರೂಪಣಾಭ್ಯಾಮ್'ಎಂಬುದೇ ಆ ಸೂತ್ರ.

ಸ ಪ್ರಾಹ ಜೀವಃ ಕರಣಾವಸಾದೇ
ಸಂವೇಷ್ಟಿತೋಽಗಚ್ಛತಿ ಭೂತಸೂಕ್ಷ್ಮೈಃ ।
ತಾಂಡಿಶ್ರುತೌ ಗೌತಮಜೈವಲೀಯ
ಪ್ರಶ್ನೋತ್ತರಾಭ್ಯಾಂ ಪ್ರಥಿತೋಽಯಮರ್ಥಃ ॥ ೭

ಅದಕ್ಕೆ ಆಚಾರ್ಯರು "ಇಂದ್ರಿಯಗಳು ಕ್ಷೀಣವಾಗಿ ಮರಣಕಾಲವು ಬಂದಾಗ ದೇಹಾಂತರವನ್ನು ಪಡೆಯುವುದಕ್ಕಾಗಿ ಜೀವನು ಸೂಕ್ಷ್ಮಭೂತಗಳಿಂದ ಸಂವೇಷ್ಟಿತನಾಗಿ ಹೊರಟು ಹೋಗುತ್ತಾನೆ. ತಾಂಡಿಶ್ರುತಿಯಲ್ಲಿ ಬರುವ ಗೌತಮ-ಜೈವಲಿಗಳ ಪ್ರಶ್ನಪ್ರತ್ಯುತ್ತರಗಳಿಂದ ಇದು ಪ್ರಸಿದ್ಧವಾಗಿರುವುದು" ಎಂದರು.

ವಿವರಣೆ:-ತಾಂಡಿಶ್ರುತಿ=ಛಾಂದೋಗ್ಯೋಪನಿಷತ್ (೫-೯-೧) ಗೌತಮಗೋತ್ರದವನಾದ ಶ್ವೇತಕೇತುವಿಗೂ ಪಾಂಚಾಲರಾಜನಾದ ಜೈವಲಿಗೂ ನಡೆದ ಸಂವಾದವು ಇಲ್ಲಿ ಸೂಚಿತವಾಗಿದೆ. ಜೈವಲಿ=ಜೀವಲಿಯ ಮಗನಾದ ಪ್ರವಾಹಣನೆಂಬ ರಾಜ. ಜೈವಲಿಯೇ ಪ್ರಶ್ನೆಮಾಡಿ ಉತ್ತರವನ್ನೂ ಹೇಳಿದ್ದಾನೆ.

ಇತ್ಯುಕ್ತಮರ್ಥಂ ನಿಶಮಯ್ಯ ತೇನ
ಸ ವಾವದೂಕಃ ಶತಧಾ ವಿಕಲ್ಪ್ಯ |
ಅಖಂಡಯತ್ಪಂಡಿತ ಕುಂಜರಾಣಾಂ
ಮಧ್ಯೇ ಮಹಾವಿಸ್ಮಯಮಾದಧಾನಃ || ೮

ಹೀಗೆ ಹೇಳಿದ ಅರ್ಥವನ್ನು ಕೇಳಿ ವಾಚಾಟನಾದ ಆ ಬ್ರಾಹ್ಮಣನು ಆ ಅರ್ಥವನ್ನು ನೂರಾರು ವಿಕಲ್ಪಗಳಿಂದ ದೂಷಿಸಿ ಖಂಡಿಸಿದನು. ಅಲ್ಲಿ ನೆರೆದಿದ್ದ ಪಂಡಿತಶ್ರೇಷ್ಠರ ನಡುವೆ ಈ ರೀತಿಯಾದ ಖಂಡನೆಯು ಅವರಿಗೆ ಅತ್ಯಂತ ವಿಸ್ಮಯವನ್ನುಂಟು ಮಾಡಿತು.

ಅನೂದ್ಯ ಸರ್ವಂ ಭಣಿತಂ ತದೀಯಂ
ಸಹಸ್ರಧಾ ತೀರ್ಥಕರಶ್ಚಖಂಡ |
ತಯೋಃ ಸುರಾಚಾರ್ಯ ಫಣೀಂದ್ರವಾಚೋ -
ರ್ದಿನಾಷ್ಟಕಂ ವಾಕ್ಕಲಹೋ ಜಜೃಂಭೇ || ೯

ಆಗ ತೀರ್ಥಕರರಾದ ಆಚಾರ್ಯರು ವೃದ್ಧಬ್ರಾಹ್ಮಣನು ಹೇಳಿದ್ದೆಲ್ಲವನ್ನೂ ಅನುವಾದಿಸಿ ಅದನ್ನು ಸಾವಿರಾರು ವಿಧದಲ್ಲಿ ಖಂಡಿಸಿದರು. ಏನು ಹೇಳೋಣ?ಬೃಹಸ್ಪತಿಗೂ ಆದಿಶೇಷನ ಅವತಾರವಾದ ಪತಂಜಲಿಗೂ ಸದೃಶರಾದ ಅವರಿಬ್ಬರ ನಡುವೆ ಈ ವಾಗ್ವಾದವು ಎಂಟು ದಿನಗಳವರೆಗೆ ನಡೆಯಿತು!

ಏವಂ ವದಂತೌ ಯತಿರಾಡ್ದ್ವಿಜೇಂದ್ರೌ
ವಿಲೋಕ್ಯ ಪಾರ್ಶ್ವಸ್ಥಿತ ಪದ್ಮಪಾದಃ |
ಆಚಾರ್ಯಮಾಹೇತಿ ಮಹೀಸುರೋಽಯಂ
ವ್ಯಾಸೋ ಹಿ ವೇದಾಂತರಹಸ್ಯವೇತ್ತಾ || ೧೦

ಈ ಪ್ರಕಾರವಾಗಿ ಯತೀಶ್ವರರೂ ಆ ದ್ವಿಜೋತ್ತಮನೂ ವಾದ ಮಾಡುತ್ತಲೇ ಇದ್ದುದನ್ನು ನೋಡಿ ಬಳಿಯಲ್ಲಿ ಕುಳಿತಿದ್ದ ಪದ್ಮಪಾದಾಚಾರ್ಯನು ಆಚಾರ್ಯರನ್ನು ಕುರಿತು ವೇದಾಂತ ರಹಸ್ಯವನ್ನೆಲ್ಲಾ ಬಲ್ಲ ಈ ಬ್ರಾಹ್ಮಣನು ವೇದವ್ಯಾಸ ಮಹರ್ಷಿಯೇ ಸರಿ.

ತ್ವಂ ಶಂಕರಃ ಶಂಕರ ಏವ ಸಾಕ್ಷಾತ್
ವ್ಯಾಸಸ್ತು ನಾರಾಯಣ ಏವ ನೂನಮ್ |
ತಯೋರ್ವಿವಾದೇ ಸತತಂ ಪ್ರಸಕ್ತೇ
ಕಿಂ ಕಿಂಕರೋऽಹಂ ಕರವಾಣಿ ಸದ್ಯಃ || ೧೧

"ಗುರುಗಳೇ, ನೀವಾದರೋ ಭಗವಾನ್ ಶಂಕರಸ್ವಾಮಿಯೇ ಆಗಿದ್ದೀರಿ. ವ್ಯಾಸ ಮಹರ್ಷಿಯು ಸಾಕ್ಷತ್ ನಾರಾಯಣನೇ ಸರಿ. ನಿಮ್ಮಿಬ್ಬರಿಗೆ ಈ ರೀತಿ ವಿವಾದವು ನಡೆಯುತ್ತ ಹೋದರೆ ಕಿಂಕರನಾದ ನಾನು ಏನು ತಾನೆ ಮಾಡಬಲ್ಲೆನು?" ಎಂದು ನುಡಿದನು.

ಇತೀದಮಾಕರ್ಣ್ಯ ವಚೋ ವಿಚಿತ್ರಂ
ಸ ಭಾಷ್ಯಕೃತ್ ಸೂತ್ರಕೃತಂ ದಿದೃಕ್ಷುಃ |
ಕೃತಾಂಜಲಿಸ್ತಂ ಪ್ರಯತಃ ಪ್ರಣಮ್ಯ
ಬಭಾಣ ವಾಣೀಂ ನವಪದ್ಯರೂಪಾಮ್ || ೧೨

ಈ ಪ್ರಕಾರವಾದ ವಿಸ್ಮಯದ ಮಾತನ್ನು ಕೇಳಿದ ಭಾಷ್ಯಕಾರರು ಸೂತ್ರಕಾರರನ್ನು ನಿಜಸ್ವರೂಪದಿಂದ ನೋಡಬೇಕೆಂದು ಕೈಯನ್ನು ಮುಗಿದುಕೊಂಡು ವಿನಯದಿಂದ ನಮಸ್ಕರಿಸಿ ನೂತನ ಪದ್ಯರೂಪವಾದ ಈ ವಾಣಿಯನ್ನು ಉದ್ಗರಿಸಿದರು.

ಭವಾಂಸ್ತಡಿಚ್ಚಾರು ಜಟಾಕಿರೀಟ-
ಪ್ರವರ್ಷುಕಾಂಭೋಧರ ಕಾಂತಿಕಾಂತಃ |
ಶುಭ್ರೋಪವೀತೀ ಧೃತಕೃಷ್ಣಚರ್ಮಾ
ಕೃಷ್ಣೋ ಹಿ ಸಾಕ್ಷಾತ್ಕಲಿದೋಷಹಂತಾ || ೧೩

ಏನೆಂದರೆ, "ಮಿಂಚಿನಂತೆ ಹೊಳೆಯುವ ಸುಂದರವಾದ ಜಟೆಯನ್ನೂ ಕಿರೀಟವನ್ನೂ ಧರಿಸಿರುವ ನೀವು ಮಳೆಸುರಿಸುವ ಮೇಘದ ಕಾಂತಿಯಿಂದ ಸುಂದರರಾಗಿದ್ದೀರಿ. ಶುಭ್ರವಾದ ಉಪವೀತವನ್ನು ಧರಿಸಿ ಕೃಷ್ಣಮೃಗ ಚರ್ಮವನ್ನುಟ್ಟು ಕಲಿದೋಷವನ್ನು ಶಮನ ಮಾಡುವ ಸಾಕ್ಷಾತ್ ಕೃಷ್ಣನೇ ಆಗಿದ್ದೀರಿ.

ಭಾವತ್ಕ ಸೂತ್ರಪ್ರತಿಪಾದ್ಯ ತಾದೃಕ್
ಪರಾಪರಾರ್ಥಪ್ರತಿಪಾದಕಂ ಸತ್ |

ಅದ್ವೈತಭಾಷ್ಯಂ ತವ ಸಂಮತಂ ಚೇತ್
ಸೋಢ್ವಾ ಮಮಾಽಽಗಃ ಪುರತೋ ಭವಾಽಽಶು || ೧೪

ನೀವು ಬರೆದ ಶಾರೀರಕಸೂತ್ರಕ್ಕೆ ಪಾರಮಾರ್ಥಿಕವಾಗಿ ಅದ್ವೈತಬ್ರಹ್ಮವನ್ನು ಪ್ರತಿಪಾದಿಸತಕ್ಕ ಅರ್ಥವುಳ್ಳದ್ದೂ, ದೃಶ್ಯವೆಂಬ ಅಪರಾರ್ಥವನ್ನು ಮಿಥ್ಯಾಭೂತವೆಂದು ಪ್ರತಿಪಾದಿಸತಕ್ಕದ್ದೂ ಆಗಿರುವ ನನ್ನ ಅದ್ವೈತಭಾಷ್ಯವು ನಿಮಗೆ ಸಮ್ಮತವಾದರೆ (ನಿಮ್ಮೊಡನೆ ವಾದ ಮಾಡಿದ) ನನ್ನ ಅಪರಾಧವನ್ನು ಮನ್ನಿಸಿ ನನಗೆ ಪ್ರತ್ಯಕ್ಷವಾಗಿ ದರ್ಶನವನ್ನು ಅನುಗ್ರಹಿಸಿರಿ" ಎಂದು ಸ್ತುತಿಸಿದರು.

ಏವಂ ವದನ್ನಯಮಥೈಕ್ಷತ ಕೃಷ್ಣಮಾರಾತ್
ಚಾಮೀಕರವ್ರತತಿಚಾರು ಜಟಾಕಲಾಪಮ್ |
ವಿದ್ಯುಲ್ಲತಾ ವಲಯವೇಷ್ಟಿತವಾರಿದಾಭಂ
ಚಿನ್ಮುದ್ರಯಾ ಪ್ರಕಟಯಂತಮಭೀಷ್ಟಮರ್ಥಮ್ || ೧೫

ಹೀಗೆ ಹೇಳುತ್ತಿರುವಾಗಲೇ ತಮ್ಮೆದುರಿಗೆ ಚಿನ್ನದ ಬಳ್ಳಿಯಂತೆ ಸುಂದರವಾದ ಜಟಾಕಲಾಪವುಳ್ಳ ಕೃಷ್ಣದ್ವೈಪಾಯನ ವ್ಯಾಸರನ್ನು ಆಚಾರ್ಯರು ಕಂಡರು. ವಿದ್ಯುಲ್ಲತೆಯಿಂದ ಪರಿವೇಷ್ಟಿತವಾದ ಮೋಡದಂತೆ ಕಾಣುತ್ತಿದ್ದ ವ್ಯಾಸರು ಚಿನ್ಮುದ್ರೆಯಿಂದ ಇಷ್ಟಾರ್ಥದ ಅನುಗ್ರಹವನ್ನು ಪ್ರಕಟಿಸುತ್ತಿದ್ದರು.

ಗಾಢೋಪಗೂಢಮನುರಾಗಜುಷಾ ರಜನ್ಯಾ
ಗರ್ಹಾಪದಂ ವಿದಧತಂ ಶರದಿಂದುಬಿಂಬಮ್ |
ತಾಪಿಚ್ಛರೀತಿತನುಕಾಂತಿಝರೀ ಪರೀತಂ
ಕಾಂತೇಂದುಕಾಂತಘಟಿತಂ ಕರಕಂ ದಧಾನಮ್ || ೧೬

ವ್ಯಾಸ ಮುನಿಗಳು ಸುಂದರವಾದ ಚಂದ್ರಕಾಂತ ಶಿಲೆಯಿಂದ ರಚಿತವಾದ ಕಮಂಡಲುವನ್ನು ಹಿಡಿದಿದ್ದರು. ತಮಾಲನೀಲವಾದ ಆ ಮುನಿಗಳ ಕಾಂತಿಯಿಂದ ಅದು ಆವೃತವಾಗಿತ್ತು. ಆದ್ದರಿಂದ ಅನುರಾಗವತಿಯಾದ ರಜನಿಯಿಂದ ಗಾಢವಾಗಿ ಆಲಂಗಿಸಲ್ಪಟ್ಟ ಶರತ್ಕಾಲದ ಚಂದ್ರ ಬಿಂಬವನ್ನು ತಿರಸ್ಕರಿಸುವಂತೆ ಆ ಕಮಂಡಲು ಕಾಣುತಿತ್ತು.(ಆಚಾರ್ಯರು ಆ ವ್ಯಾಸಮುನಿಗಳನ್ನು ನೋಡಿದರು)

ಸಪ್ತಾಧಿಕಾಚ್ಛದರ ವಿಂಶತಿ ಮೌಕ್ತಿಕಾಢ್ಯಾಂ
ಸತ್ಯಸ್ಯ ಮೂರ್ತಿಮಿವ ಬಿಭ್ರತಮಕ್ಷಮಾಲಾಮ್ |
ತತ್ತಾದೃಶಸ್ವಪತಿವಂಶವಿವರ್ಧನಾತ್ಪ್ರಾಕ್
ತಾರಾವಲೀಮುಪಗತಾಮಿವ ಚಾನುನೇತುಮ್ || ೧೭

ಅವರ ಕೈಯಲ್ಲಿ ರಂಧ್ರಗಳಿಂದ ಕೂಡಿದ ಸುಂದರವಾದ ಇಪ್ಪತ್ತೇಳು ಮುತ್ತುಗಳಿಂದ ರಚಿತವಾದ ಅಕ್ಷಮಾಲೆ ಇತ್ತು. ಅದು ಸತ್ಯದ ಮೂರ್ತಿಯೋ ಎಂಬಂತೆಯೂ ತಮ್ಮ ಪತಿಯಾದ ಚಂದ್ರನ ವಂಶವನ್ನು ವರ್ಧಿಸಬೇಕೆಂದು ಪ್ರಾರ್ಥಿಸಿಕೊಳ್ಳಲು ಬಂದಿದ್ದ ಹಿಂದಿನ ಅಶ್ವಿನ್ಯಾದಿ ನಕ್ಷತ್ರ ಪಂಕ್ತಿಯೋ ಎಂಬಂತೆಯೂ ಕಾಣುತ್ತಿತ್ತು.

ವಿವರಣೆ:-ಚಂದ್ರನು ಅಶ್ವಿನೀ ಮೊದಲಾದ ಇಪ್ಪತ್ತೇಳು ನಕ್ಷತ್ರಗಳಿಗೆ ಪತಿ ಎಂದು ಪ್ರಸಿದ್ಧಿ ಉಂಟು. ಮಹಾಭಾರತದಲ್ಲಿ ವ್ಯಾಸರು ನಿಯೋಗ ವಿಧಿಯಿಂದ ಧೃತರಾಷ್ಟ್ರ ಮೊದಲಾದವರಿಗೆ ಜನ್ಮವಿತ್ತರೆಂಬ ಕಥೆಇದೆ. ಧೃತರಾಷ್ಟ್ರಾದಿಗಳು ಚಂದ್ರವಂಶದವರು. ಧೃತರಾಷ್ಟ್ರಾದಿಗಳು ಹುಟ್ಟುವುದಕ್ಕೆ ಮೊದಲು ತಮ್ಮ ಪತಿಯಾದ ಚಂದ್ರನ ಈ ವಂಶವನ್ನು ಬೆಳೆಸಬೇಕೆಂದು ಅಶ್ವಿನ್ಯಾದಿ ನಕ್ಷತ್ರಗಳು ವ್ಯಾಸರನ್ನು ಬೇಡಿಕೊಳ್ಳಲು ಬಂದಿವೆಯೋ ಎಂಬಂತೆ ಕಾಣುತ್ತಿತ್ತು - ಎಂದು ಉತ್ಪ್ರೇಕ್ಷೆ ಇದೆ.

ಶಾರ್ದೂಲಚರ್ಮೋದ್ವಹನೇನ ಭೂತೇ-
ರುದ್ಧೂಲನೇನಾಪಿ ಜಟಾಚ್ಛಟಾಭಿಃ |
ರುದ್ರಾಕ್ಷಮಾಲಾವಲಯೇನ ಶಂಭೋ-
ರರ್ಧಾಸನಾಧ್ಯಾಸನ ಸಖ್ಯಪಾತ್ರಮ್ || ೧೮

ವ್ಯಾಘ್ರಚರ್ಮವನ್ನು ಧರಿಸಿದ್ದರಿಂದಲೂ ವಿಭೂತಿಯನ್ನು ಹಚ್ಚಿಕೊಂಡದ್ದರಿಂದಲೂ ಜಟಾಧಾರಿಗಳಾಗಿ ರುದ್ರಾಕ್ಷಮಾಲೆಯನ್ನು ಕೈಗೆ ಸುತ್ತಿಕೊಂಡದ್ದರಿಂದಲೂ ಆ ವ್ಯಾಸಮುನಿಗಳು ಶಂಭುವಿನ ಅರ್ಧಾಸನದಲ್ಲಿ ಕುಳಿತುಕೊಳ್ಳುವ ಅರ್ಹತೆಯನ್ನು ಪಡೆದಿದ್ದರು. (ಶಂಭುವಿನಂತೆ ಕಾಣುತ್ತಿದ್ದರು)

ಅದ್ವೈತ ವಿದ್ಯಾಸೃಣಿ ತೀಕ್ಷ್ಣಧಾರಾ
ವಶೀಕೃತಾಹಂಕೃತಿ ಕುಂಜರೇಂದ್ರಮ್ |
ಸ್ವಶಾಸ್ತ್ರಶಂಕೂಜ್ವಲ ಸೂತ್ರದಾಮ
ನಿಯಂತ್ರಿತಾಕೃತ್ರಿಮಗೋಸಹಸ್ರಮ್ || ೧೯

ಅದ್ವೈತವಿದ್ಯೆಯೆಂಬ ಅಂಕುಶದ ಹರಿತವಾದ ತುದಿಯಿಂದ ಅಹಂಕಾರವೆಂಬ ಮದ್ದಾನೆಯನ್ನು ವಶಪಡಿಸಿಕೊಂಡವರು ವ್ಯಾಸಮುನಿಗಳು. ತಮ್ಮ ಅದ್ವೈತ ಸಿದ್ಧಾಂತವೆಂಬ ಕಂಭಕ್ಕೆ ಉಜ್ವಲವಾದ ಸೂತ್ರಗಳೆಂಬ ಹಗ್ಗಗಳಿಂದ ನಿತ್ಯವಾದ ಸಾವಿರಾರು ಉಪನಿಷದ್ವಾಕ್ಯಗಳೆಂಬ ಗೋವುಗಳನ್ನು ಕಟ್ಟಿಹಾಕಿದವರು.

ವಿವರಣೆ:-ಶಾರೀರಕಸೂತ್ರಗಳಲ್ಲಿ ಉಪನಿಷತ್ತುಗಳೆಲ್ಲವೂ ಅದ್ವೈತಪರವೆಂದು ಸ್ಥಾಪಿಸಿದವರು ವ್ಯಾಸರು.

ತತ್ತಾದೃಗತ್ಯುಜ್ಜ್ವಲಕೀರ್ತಿಶಾಲಿ
ಶಿಷ್ಯಾಲಿಸಂಶೋಭಿತ ಪಾರ್ಶ್ವಭಾಗಮ್ |

ಕಟಾಕ್ಷವೀಕ್ಷಾಮೃತ ವರ್ಷಧಾರಾ
ನಿವಾರಿತಾಶೇಷ ಜನಾನುತಾಪಮ್ ॥ ೨೦

ಅತ್ಯಂತಕೀರ್ತಿಶಾಲಿಗಳಾದ ಸುಮಂತು ಮೊದಲಾದ ಶಿಷ್ಯರು ವ್ಯಾಸರ ಪಾರ್ಶ್ವಗಳಲ್ಲಿ ನಿಂತಿದ್ದರು. ತಮ್ಮ ಕಟಾಕ್ಷವೀಕ್ಷಣೆಯೆಂಬ ಅಮೃತಧಾರೆಯಿಂದ ಸರ್ವಜನರ ಸಂಸಾರತಾಪವನ್ನು ನಿವಾರಿಸತಕ್ಕವರು ವ್ಯಾಸರು. (ಅಂತಹ ವ್ಯಾಸರನ್ನು ಆಚಾರ್ಯರು ನೋಡಿದರು)

ವಿಲೋಕ್ಯ ವಾಚಂಯಮ ಸಾರ್ವಭೌಮಂ
ಸ ಶಂಕರೋಽಶಂಕಿತದರ್ಶನಂ ತಮ್ |
ಗುರುಂ ಗುರೂಣಾಮಪಿ ಹೃಷ್ಟಚೇತಾಃ
ಪ್ರತ್ಯುದ್ಯಯೌ ಶಿಷ್ಯಗಣೈಃ ಸಮೇತಃ ॥ ೨೧

ವಾಗಾದಿ ಇಂದ್ರಿಯಗಳನ್ನು ಜಯಸಿದ ಮುನಿಗಳ ಚಕ್ರವರ್ತಿಗಳೂ ಗೋವಿಂದ ಭಗವತ್ಪಾದಾದಿಗುರುಗಳ ಗುರುಗಳೂ ಆದ ಆ ವೇದವ್ಯಾಸರನ್ನು ಸ್ಪಷ್ಟವಾಗಿ ನೋಡಿ ಶ್ರೀಶಂಕರರು ಅತ್ಯಂತ ಹರ್ಷದಿಂದ ಶಿಷ್ಯರೊಡನೆ ಎದ್ದು ನಿಂತು ಸ್ವಾಗತಿಸಿದರು.

ಅತ್ಯಾದರಾಚ್ಛಾತ್ರಗಣೈಃ ಸಹಾಸೌ
ಪ್ರತ್ಯುದ್ಗತಸ್ತಚ್ಚರಣೌ ಪ್ರಣಮ್ಯ |
ಯತ್ಯಗ್ರಗಾಮೀ ವಿನಯೀ ಪ್ರಹೃಷ್ಯನ್
ಇತ್ಯಬ್ರವೀತ್ಸತ್ಯವತೀಸುತಂ ಸಃ ॥ ೨೨

ಆಚಾರ್ಯರು ತಮ್ಮ ಶಿಷ್ಯರೊಡನೆ ಅತ್ಯಂತ ಭಕ್ತಿಯಿಂದ ಅವರನ್ನು ಸ್ವಾಗತಿಸಿ ನಮಸ್ಕರಿಸಿದರು. ಆ ಯತಿಶ್ರೇಷ್ಠರು ಆನಂದಿಸುತ್ತಾ ವಿನಯದಿಂದ ಸತ್ಯವತೀಸುತರಾದ ವ್ಯಾಸರನ್ನು ಕುರಿತು ಹೀಗೆಂದರು:.

ದ್ವೈಪಾಯನ ಸ್ವಾಗತಮಸ್ತು ತುಭ್ಯಂ
ದೃಷ್ಟ್ವಾ ಭವಂತಂ ಚರಿತಾ ಮಯಾಽರ್ಥಾಃ |
ಯುಕ್ತಂ ತದೇತತ್ತ್ವಯಿ ಸರ್ವಕಾಲಂ
ಪರೋಪಕಾರ ವ್ರತದೀಕ್ಷಿತತ್ವಾತ್ ॥ ೨೩

"ಹೇ ದ್ವೈಪಾಯನರೇ, ತಮಗೆ ಸ್ವಾಗತ. ತಮ್ಮನ್ನು ನೋಡಿದ್ದರಿಂದ ನನ್ನ ಪುರುಷಾರ್ಥಗಳೆಲ್ಲವೂ ಸಿದ್ಧಿಸಿದವು. ಸರ್ವಕಾಲದಲ್ಲಿಯೂ ಪರೋಪಕಾರದಲ್ಲಿ ದೀಕ್ಷಿತರಾದ ತಮಗೆ ಈ ರೀತಿ ನನ್ನನ್ನು ಅನುಗ್ರಹಿಸುವುದು ಯುಕ್ತವಾಗಿಯೇ ಇದೆ.

ಮುನೇ ಪುರಾಣಾನಿ ದಶಾಷ್ಟ ಸಾಕ್ಷಾತ್
ಶ್ರುತ್ಯರ್ಥಗರ್ಭಾಣಿ ಸುದುಷ್ಕರಾಣಿ |
ಕೃತಾನಿ ಪದ್ಯದ್ವಯಮತ್ರ ಕರ್ತುಂ
ಕೋ ನಾಮ ಶಕ್ನೋತಿ ಸುಸಂಗತಾರ್ಥಮ್ || ೨೪

"ಓ ಮುನಿಗಳೇ, ವೇದಾರ್ಥಗರ್ಭಿತವೂ ದುಷ್ಕರವೂ ಆದ ಹದಿನೆಂಟು ಪುರಾಣಗಳನ್ನು ಸ್ವಯಂ ರಚಿಸಿದ್ದೀರಿ. ಅಷ್ಟು ಸಂಗತಾರ್ಥವಾದ ಎರಡು ಪದ್ಯಗಳನ್ನಾದರೂ ಇನ್ನು ಯಾವನು ಬರೆದಾನು?

ಟಿಪ್ಪಣಿ: ಹದಿನೆಂಟು ಪುರಾಣಗಳು-

ಬ್ರಾಹ್ಮ, ಪಾದ್ಮ, ವೈಷ್ಣವ, ಶೈವ, ಲೈಂಗ, ಗಾರುಡ, ನಾರದೀಯ, ಭಾಗವತ, ಆಗ್ನೇಯ, ಸ್ಕಾಂದ, ಭವಿಷ್ಯತ್, ಬ್ರಹ್ಮವೈವರ್ತ, ಮಾರ್ಕಂಡೇಯ, ವಾಮನ, ವಾರಾಹ, ಮಾತ್ಸ್ಯ, ಕೂರ್ಮ ಮತ್ತು ಬ್ರಹ್ಮಾಂಡ.

ವೇದಾರ್ಣವಂ ವ್ಯತಿಯುತಂ ವ್ಯದಧಾಶ್ಚತುರ್ಧಾ
ಶಾಖಾಪ್ರಭೇದನವಶಾದಪಿ ತಾನ್ ವಿಭಕ್ತಾನ್ |
ಮಂದಾಃ ಕಲೌ ಕ್ಷಿತಿಸುರಾ ಜನಿತಾರ ಏತೇ
ವೇದಾನ್ ಗ್ರಹೀತುಮಲಸಾ ಇತಿ ಚಿಂತಯಿತ್ವಾ || ೨೫

"ಸಮುದ್ರದಂತೆ ವಿಶಾಲವಾದ, ಸಂಮಿಶ್ರವಾಗಿದ್ದ ವೇದರಾಶಿಯನ್ನು ನಾಲ್ಕು ವಿಭಾಗಗಳನ್ನಾಗಿ ಮಾಡಿದ್ದೀರಿ. ತೈತ್ತರೀಯಾದಿ ಶಾಖೆಗಳನ್ನೂ ಸಹ ವಿಂಗಡಿಸಿ ಕೊಟ್ಟಿದ್ದೀರಿ. ಕಲಿಯುಗದಲ್ಲಿ ಈ ಬ್ರಾಹ್ಮಣರು ಮಂದಬುದ್ಧಿಗಳಾಗಿ ಹುಟ್ಟುತ್ತಾರೆ. ಇವರು ವೇದರಾಶಿಯನ್ನು ಕಲಿಯಲಾರರು ಎಂಬ ಕಾರುಣ್ಯದಿಂದ ಚಿಂತಿಸಿ ಹೀಗೆ ಮಾಡಿದ್ದೀರಿ.

ವಿಷ್ಯದ್ವಿಜಾನಾಸಿ ಭವಂತಮರ್ಥಂ
ಗತಂ ಚ ಸರ್ವಂ ನ ನ ವೇತ್ಸಿ ಯತ್ತತ್ |
ನೋ ಚೇತ್ಕಥಂ ಭೂತ ಭವದ್ಭವಿಷ್ಯತ್-
ಕಥಾ ಪ್ರಬಂಧಾನ್ ರಚಯೇರಜಾನನ್ || ೨೬

"ನೀವು ಭವಿಷ್ಯತ್ತನ್ನೂ ವರ್ತಮಾನವನ್ನೂ ಹಿಂದೆ ಗತಿಸಿ ಹೋದದ್ದನ್ನೂ-ಹೀಗೆ ಸರ್ವವನ್ನೂ ನಿಶ್ಚಯವಾಗಿ ತಿಳಿದಿರುತ್ತೀರಿ. ಹಾಗಿಲ್ಲದಿದ್ದರೆ ವರ್ತಮಾನ, ಭೂತ, ಭವಿಷ್ಯತ್ತುಗಳಿಗೆ ಸಂಬಂಧಿಸಿದ ವಿಷಯಗಳನ್ನು ನಿಮ್ಮ ಗ್ರಂಥಗಳಲ್ಲಿ ಹೇಗೆ ರಚಿಸುತ್ತಿದ್ದಿರಿ?

ಆಭಾಸಯನ್ನಂತರಮಂಗಮಾಂಧ್ಯಂ
ಸ್ಥೂಲಂ ಚ ಸೂಕ್ಷ್ಮಂ ಬಹಿರಂತರಂ ಚ |
ಅಪಾನುದನ್ ಭಾರತಶೀತರಶ್ಮಿ-
ರಭೂದಪೂರ್ವೋ ಭಗವತ್ಪಯೋಧೇಃ || ೨೭

"ಭಗವಂತರಾದ ತಾವೇ ಕ್ಷೀರಸಮುದ್ರವಿದ್ದಂತೆ. ಈ ಕ್ಷೀರಸಮುದ್ರದಿಂದ ಭಾರತವೆಂಬ ಆಶ್ಚರ್ಯಕರನಾದ ಚಂದ್ರನು ಉದಯಿಸಿದನು. ಈ ಚಂದ್ರನು ದೇಹದಲ್ಲಿ ಸರ್ವಾಂತರವಾದ ಹೃದಯವೆಂಬ ಅಂಗದಲ್ಲಿರುವ ಆತ್ಮನನ್ನು ಪ್ರಕಾಶಪಡಿಸುವನು. ಸ್ಥೂಲ, ಸೂಕ್ಷ್ಮ, ಬಾಹ್ಯ ಮತ್ತು ಆಂತರ ಎಂಬ ಕತ್ತಲೆಯನ್ನು ನಿವಾರಿಸುವನು.

ಟಿಪ್ಪಣಿ: ಸ್ಥೂಲ=ಜಗತ್ತಿನ ವಿಷಯದಲ್ಲಿರುವ ಅಜ್ಞಾನ. ಸೂಕ್ಷ= ದೇಹೇಂದ್ರಿಯ ಚಿತ್ತಗಳಿಗೆ ಸಂಬಂಧಿಸಿದ ಅಜ್ಞಾನ. ಬಾಹ್ಯ=ಕಾರ್ಯವಸ್ತುಗಳಿಗೆ ಸಂಬಂಧಿಸಿದ ಅಜ್ಞಾನ. ಆಂತರ=ಕಾರಣಗಳಿಗೆ ಸಂಬಂಧಿಸಿದ ಅಜ್ಞಾನ. ಈ ಅಜ್ಞಾನಗಳೇ ಕತ್ತಲೆ.

ವೇದಾಃ ಷಡಂಗಂ ನಿಖಿಲಂ ಚ ಶಾಸ್ತ್ರಂ
ಮಹಾನ್ ಮಹಾಭಾರತ ವಾರಿರಾಶಿಃ |
ತ್ವತ್ತಃ ಪುರಾಣಾನಿ ಚ ಸಂಬಭೂವುಃ
ಸರ್ವಂ ತ್ವದೀಯಂ ಖಲು ವಾಙ್ಮಯಾಖ್ಯಮ್ || ೨೮

"ನಿಖಿಲವೇದಗಳೂ ಶಿಕ್ಷಾದಿ ಷಡಂಗಗಳೂ, ನಿಖಿಲ ಶಾಸ್ತ್ರಗಳೂ ಮಹತ್ತರವಾದ ಮಹಾಭಾರತವೆಂಬ ಸಮುದ್ರವೂ ಅಷ್ಟಾದಶ ಪುರಾಣಗಳೂ ನಿಮ್ಮಿಂದ ಪ್ರಕಾಶಗೊಂಡವು. ಸಮಸ್ತ ವಾಙ್ಮಯವೂ ನಿಮ್ಮದೇ ಆಗಿದೆ.

ಟಿಪ್ಪಣಿ:ವೇದಗಳನ್ನು ವಿಭಾಗಮಾಡಿದ್ದರಿಂದಲೂ, ಶಿಕ್ಷಾದಿಶಾಸ್ತ್ರಗಳನ್ನು ಅಧ್ಯಾಪನದಿಂದ ಬೆಳೆಸಿದ್ದರಿಂದಲೂ, ಮಹಾಭಾರತ, ಪುರಾಣಗಳನ್ನು ಸ್ವತಃ ರಚಿಸಿದ್ದರಿಂದಲೂ, ಇವೆಲ್ಲವೂ ವ್ಯಾಸರಿಂದ ಪ್ರಕಾಶಿತವಾದವೆಂದು ಸ್ತುತಿಯನ್ನು ಮಾಡಲಾಗಿದೆ.

ದ್ವೀಪೇ ಕ್ವಚಿತ್ ಸಮುದಯನ್ನೃತಮೇವ ಧಾಮ
ಶಾಖಾಸಹಸ್ರಸಚಿವಃ ಶುಕಸೇವ್ಯಮಾನಃ |
ಉಲ್ಲಾಸಯತ್ಯಹಹ ಯಸ್ತಿಲಕೋ ಮುನೀನಾ -
ಮುಚ್ಚೈಃ ಫಲಾನಿ ಸುದೃಶಾಂ ನಿಜಪಾದಭಾಜಾಮ್ || ೨೯

"ಸತ್ಯರೂಪವಾದ ಪರಬ್ರಹ್ಮವೇ ಒಂದು ದ್ವೀಪದಲ್ಲಿ ಜನಿಸಿತು. ಅದೊಂದು ಮಹಾವೃಕ್ಷವಾಗಿ ಸಾವಿರಾರು (ವೇದ) ಶಾಖೆಗಳಿಂದ ಕೂಡಿ ಶುಕನಿಂದ- ಗಿಳಿಗಳಿಂದ ಸೇವಿತವಾಯಿತು. ಮುನಿಗಳ ನಡುವೆ ತಿಲಕಪ್ರಾಯವಾದ ಈ ತಿಲಕ ವೃಕ್ಷವು ಉತ್ಕೃಷ್ಟವಾದ

ಹಣ್ಣುಗಳನ್ನು ಒಳ್ಳೆಯ ದೃಷ್ಟಿಯಿಂದ ತನ್ನ ಬಳಿಗೆ ಬಂದವರಿಗೆ ನೀಡುತ್ತದೆ. ಆಹಾ! ಏನಾಶ್ಚರ್ಯ!

ಟಿಪ್ಪಣಿ:ಯಮುನಾ ದ್ವೀಪದಲ್ಲಿ ಜನಿಸಿದ್ದರಿಂದ ವ್ಯಾಸರು ದ್ವೈಪಾಯನರೆನಿಸಿದರು. ಅವರು ಭಗವಂತನ ಅವತಾರವೆಂದು ಪ್ರಸಿದ್ಧಿಯಿದೆ. ಈ ಶ್ಲೋಕದಲ್ಲಿ ವ್ಯಾಸರನ್ನು ತಿಲಕವೃಕ್ಷವೆಂದು ರೂಪಿಸಿ ವರ್ಣಿಸಲಾಗಿದೆ.

ಧತ್ಸೇ ಸದಾಽಽರ್ತಿಶಮನಾಯ ಹೃದಾ ಗಿರೀಶಂ
ಗೋಪಾಯಸೇಽಧಿವದನಂ ಚ ಚಿರಂತನೀರ್ಗಾಃ |
ದೂರೀಕರೋಷಿ ನರಕಂ ಚ ದಯಾರ್ದ್ರ ದೃಷ್ಟ್ಯಾ
ಕಸ್ತೇ ಗುಣಾನ್ ಗದಿತುಮದ್ಭುತಕೃಷ್ಣ ಶಕ್ತಃ || ೩೦

"ಓ ವ್ಯಾಸ ಮುನಿಗಳೇ, ನೀವು ಅದ್ಭುತ ಕೃಷ್ಣನೇ ಆಗಿದ್ದೀರಿ. ಸಜ್ಜನರ ಕಷ್ಟವನ್ನು ಪರಿಹರಿಸುವುದಕ್ಕಾಗಿ ಸದಾ ಹೃದಯದಲ್ಲಿ ಗಿರೀಶನಾದ ಶಂಭುವನ್ನು ಧರಿಸಿದ್ದೀರಿ. ಬಾಯಲ್ಲಿ ಚಿರಂತನ ವಾಣಿಗಳಾದ ಶ್ರುತಿಗಳನ್ನು ಪಾಲಿಸುತ್ತಿದ್ದೀರಿ. ಕಾರುಣ್ಯ ದೃಷ್ಟಿಯಿಂದ ನರಕವನ್ನು ಹೋಗಲಾಡಿಸುತ್ತೀರಿ. (ಶ್ರೀ ಕೃಷ್ಣನು ಗೋವರ್ಧನನೆಂಬ ಗಿರಿರಾಜನನ್ನು ಧರಿಸಿದನು. ಗಾಃ ಎಂದರೆ ಗೋವುಗಳನ್ನು ಪಾಲಿಸಿದನು. ನರಕಾಸುರನನ್ನು ಭಂಜಿಸಿದನು. ವ್ಯಾಸರಿಗೂ ಕೃಷ್ಣನೆಂಬ ಹೆಸರಿದೆ).

ಯಮಾಮನಂತಿ ಶ್ರುತಯಃ ಪದಾರ್ಥಂ
ನ ಸನ್ನ ಚಾಸನ್ನ ಬಹಿರ್ನ ಚಾಂತಃ |
ಸ ಸಚ್ಚಿದಾನಂದಘನಃ ಪರಾತ್ಮಾ
ನಾರಾಯಣಸ್ತ್ವಂ ಪುರುಷಃ ಪುರಾಣಃ || ೩೧

ಶ್ರುತಿಗಳು ಯಾವ ವಸ್ತುವನ್ನು ಸತ್ ಅಲ್ಲ, ಅಸತ್ ಅಲ್ಲ, ಹೊರಗೆ ಇಲ್ಲ, ಒಳಗೆ ಇಲ್ಲ-ಎಂಬುದಾಗಿ ಬಣ್ಣಿಸುತ್ತವೆಯೋ ಅಂತಹ ಸಚ್ಚಿದಾನಂದಘನನೂ ಪರಮಾತ್ಮನೂ ಪುರಾಣಪುರುಷನೂ ಆದ ಶ್ರೀಮನ್ನಾರಾಯಣನೇ ನೀವಾಗಿದ್ದೀರಿ" ಎಂದು ಸ್ತುತಿಸಿದರು.

ಇತಿ ಸ್ತುತಸ್ತೇನ ಯಥಾವಿಧಾನ-
ಮಾಸೇದಿವಾನ್ ವಿಷ್ಟರಮಾತ್ಮನಿಷ್ಠಃ |
ದ್ವೈಪಾಯನಃ ಪ್ರಶ್ರಯನಮ್ರ ಪೂರ್ವ-
ಕಾಯಂ ಯತೀಶಾನಮಿದಂ ಬಭಾಷೇ || ೩೨

ಈ ಪ್ರಕಾರವಾಗಿ ಸ್ತುತರಾಗಿ ಆತ್ಮನಿಷ್ಠರಾದ ವ್ಯಾಸರು ವಿಧಿಪೂರ್ವಕವಾಗಿ ಅರ್ಪಿಸಿದ ಪೀಠದಮೇಲೆ ಕುಳಿತರು. ಅನಂತರ ವಿನಯದಿಂದ ದೇಹವನ್ನು ಬಾಗಿಸಿ ನಿಂತ ಯತೀಶ್ವರರಾದ ಆಚಾರ್ಯರನ್ನು ಕುರಿತು ದ್ವೈಪಾಯನರು ಇಂತೆಂದರು.

ತ್ವಮಸ್ಮದಾದೇಃ ಪದವೀಂ ಗತೋಽಭೂ-
ರಖಂಡಪಾಂಡಿತ್ಯಮಬೋಧಯಂ ತೇ |
ಶುಕರ್ಷಿವತ್ ಪ್ರೀತಿಕರೋಽಸಿ ವಿದ್ವನ್
ಪುರೇವ ಶಿಷ್ಯೈಃ ಸಹ ಮಾ ಭ್ರಮೀಸ್ತ್ವಮ್ || ೩೩

"ನೀನು ನಮ್ಮಂತಹವರ ಸ್ಥಾನವನ್ನು (ಆಚಾರ್ಯಸ್ಥಾನವನ್ನು) ಪಡೆದಿರುತ್ತೀಯೆ. ನಿನ್ನ ಅಖಂಡವಾದ ಪಾಂಡಿತ್ಯವನ್ನು ತಿಳಿದುಕೊಂಡೆನು. (ನನ್ನ ಪುತ್ರನಾದ) ಶುಕಮುನಿಯಂತೆ ನನಗೆ ಆನಂದಕರನಾಗಿದ್ದೀಯೆ. ಆರಂಭದಲ್ಲಿ ನಿನ್ನನ್ನು ಪರೀಕ್ಷಿಸಲು ಬಂದೆನೆಂದು ಶಿಷ್ಯರೊಡನೆ ನೀನು ಹೇಗೆ ಭ್ರಮಿಸಿದೆಯೋ ಹಾಗೆ ಮತ್ತೆ ಭ್ರಮಿಸಬೇಡ.

ಕೃತಂ ತ್ವಯಾ ಭಾಷ್ಯಮಿತೀಂದುಮೌಲೇಃ
ಸಭಾಂಗಣೇ ಸಿದ್ಧಮುಖಾನ್ನಿಶಮ್ಯ |
ಹೃದಾ ಪ್ರಹೃಷ್ಟೇನ ದಿದೃಕ್ಷಯಾ ತೇ
ದೃಗಧ್ವನೀನಃ ಪ್ರಶಮಿನ್ನಭೂವಮ್ || ೩೪

ನನ್ನ ಶಾರೀರಕಸೂತ್ರಗಳಿಗೆ ನೀನು ಭಾಷ್ಯವನ್ನು ಬರೆದಿದ್ದೀಯೆಂದು ಪರಮೇಶ್ವರನ ಸಭೆಯಲ್ಲಿ ಸಿದ್ಧಪುರುಷರು ಹೇಳಿದ್ದನ್ನು ಕೇಳಿ ನನ್ನ ಹೃದಯಕ್ಕೆ ಹರ್ಷವಾಯಿತು. ಆಗ ನಿನ್ನನ್ನು ನೋಡಬೇಕೆಂಬ ಇಚ್ಛೆಯುಂಟಾಗಿ, ಓ ಸಂನ್ಯಾಸಿಯೇ, ಪ್ರತ್ಯಕ್ಷವಾಗಿ ಇಲ್ಲಿಗೆ ಬಂದೆನು"ಎಂದು ನುಡಿದರು.

ಇತ್ಥಂ ಮುನೀಂದ್ರ ವಚನ ಶ್ರವಣೋತ್ಥಹರ್ಷಂ
ರೋಮಾಂಚಪೂರಮಿಷತೋ ಬಹಿರುತ್‌ಪ್ಲವಂತಮ್ |
ಬಿಭ್ರತ್ತಮಭ್ರರುಚಿಮಾಖ್ಯದದಭ್ರಶಕ್ತಿಂ
ಶ್ರೀಶಂಕರಃ ಶುಕಮತಾರ್ಣವ ಪೂರ್ಣಚಂದ್ರಃ || ೩೫

ಹೀಗೆ ನುಡಿದ ಆ ಮುನೀಂದ್ರರ ಮಾತನ್ನು ಕೇಳಿ ಆಚಾರ್ಯರಿಗೆ ರೋಮಾಂಚವಾಯಿತು. ಅವರಿಗಾದ ಪರಮಹರ್ಷವು ರೋಮಾಂಚದ ನೆವದಲ್ಲಿ ಹೊರಗೆ ಉಕ್ಕಿ ಹರಿಯಿತೋ ಎಂಬಂತೆ ಕಾಣಿಸಿತು. ಶ್ರೀ ಶುಕಮುನಿಗಳ ಸಿದ್ಧಾಂತ ಸಾಗರಕ್ಕೆ ಪೂರ್ಣಚಂದ್ರನಂತಿದ್ದ ಶ್ರೀಶಂಕರರು ಮೇಘಶ್ಯಾಮಲಮೂರ್ತಿಗಳೂ ಮಹಾಮಹಿಮರೂ ಆದ ವ್ಯಾಸರನ್ನು ಕುರಿತು ಇಂತೆಂದರು.

ಸುಮಂತುಪೈಲ ಪ್ರಥಮಾ ಮುನೀಂದ್ರಾ
ಮಹಾನುಭಾವಾ ನನು ಯಸ್ಯ ಶಿಷ್ಯಾಃ |
ತೃಣಾಲ್ಲಘೀಯಾನಪಿ ತತ್ರ ಕೋಽಹಂ
ತಥಾಽಪಿ ಕಾರುಣ್ಯಮದರ್ಶಿ ದೀನೇ || ೩೬

"ಮಹಾನುಭಾವರಾದ ಸುಮಂತು, ಪೈಲ-ಮೊದಲಾದ ಮುನೀಂದ್ರರು ತಮ್ಮ ಶಿಷ್ಯರಾಗಿರುವಾಗ, ಹುಲ್ಲುಕಡ್ಡಿಗಿಂತ ಹಗುರನಾದ ನಾನು ಯಾವನು? ಆದರೂ ಈ ದೀನನಲ್ಲಿ ಕಾರುಣ್ಯವನ್ನು ತೋರಿಸಿದಿರಿ.

ಸೋऽಹಂ ಸಮಸ್ತಾರ್ಥವಿವೇಚಕಸ್ಯ
ಕೃತ್ವಾ ಭವತ್ಸೂತ್ರ ಸಹಸ್ರರಶ್ಮೇಃ |
ಭಾಷ್ಯ ಪ್ರದೀಪೇನ ಮಹರ್ಷಿಮಾನ್ಯ
ನೀರಾಜನಂ ಧೃಷ್ಟತಯಾ ನ ಲಜ್ಜೇ || ೩೭

"ಮಹರ್ಷಿಗಳಿಗೂ ಮಾನ್ಯರಾದ ಮುನೀಂದ್ರರೆ, ಸಮಸ್ತವೇದಾರ್ಥಗಳನ್ನೂ ವಿವೇಚಿಸಿ ತೋರಿಸಿಕೊಟ್ಟಿರುವ ನಿಮ್ಮ ಶಾರೀರಕಸೂತ್ರವು ಸಹಸ್ರಕಿರಣನಾದ ಸೂರ್ಯನಂತೆ ಪ್ರಜ್ವಲಿಸುತ್ತಿದೆ. ಆ ಸೂರ್ಯನಿಗೆ ನಾನು ಭಾಷ್ಯವೆಂಬ ದೀಪದಿಂದ ಆರತಿಯೆತ್ತಿದೆನು! ಅಹಂಕಾರದಿಂದ ಹೀಗೆ ಮಾಡಿದ ನನಗೆ ನಾಚಿಕೆಯಾಗದೆ ಹೋಯಿತು!

ಅಕಾರಿ ಯತ್ಸಾಹಸ ಮಾತ್ಮಬುದ್ಧ್ಯಾ
ಭವತ್ಪ್ರಶಿಷ್ಯವ್ಯಪದೇಶ ಭಾಜಾ |
ವಿಚಾರ್ಯ ತತ್ಸೂಕ್ತಿ ದುರುಕ್ತಿಜಾಲ-
ಮರ್ಹಃ ಸಮೀಕರ್ತುಮಿದಂ ಕೃಪಾಲುಃ || ೩೮

ನಿಮ್ಮ ಪ್ರಶಿಷ್ಯನೆಂಬ ಗಣನೆಗೆ ಬಂದಿರುವ ನಾನು ನನಗೆ ತೋರಿದಂತೆ ಈ ದುಡುಕಿದ ಕಾರ್ಯವನ್ನು ಮಾಡಿಬಿಟ್ಟೆನು. ಕೃಪಾಳುಗಳಾದ ನೀವು ಈ ಗ್ರಂಥದಲ್ಲಿರುವ ಸರಿ- ತಪ್ಪುಗಳನ್ನು ಪರಿಶೀಲಿಸಿ ಶೋಧಿಸಿಕೊಡಬೇಕೆಂದು ಬೇಡುತ್ತೇನೆ"ಎಂದರು.

ಇತ್ಥಂ ನಿಗದ್ಯೋಪರತಸ್ಯ ಹಸ್ತಾತ್
ಹಸ್ತದ್ವಯೇನಾऽऽದರತಃ ಸ ಭಾಷ್ಯಮ್ |
ಆದಾಯ ಸರ್ವತ್ರ ನಿರೈಕ್ಷತಾಸೌ
ಪ್ರಸಾದಗಾಂಭೀರ್ಯಗುಣಾಭಿರಾಮಮ್ || ೩೯

ಹೀಗೆ ನುಡಿದು ಸುಮ್ಮನಾಗಲು ಅವರ ಕೈಯಲ್ಲಿದ್ದ ಭಾಷ್ಯಗ್ರಂಥವನ್ನು ವ್ಯಾಸಮುನಿಗಳು ತಮ್ಮ ಎರಡು ಕೈಗಳಿಂದಲೂ ಆದರದಿಂದ ತೆಗೆದುಕೊಂಡರು. ಪ್ರಸನ್ನಗಂಭೀರವಾದ ರಮಣೀಯಶೈಲಿಯ ಆ ಭಾಷ್ಯದ ಎಲ್ಲಭಾಗವನ್ನೂ ಅವಲೋಕಿಸಿದರು.

ಸೂತ್ರಾನುಕಾರಿ ಮೃದುವಾಕ್ಯನಿವೇದಿತಾರ್ಥಂ
ಸ್ವೀಯೈಃ ಪದ್ಯೈಃ ಸಹ ನಿರಾಕೃತಪೂರ್ವಪಕ್ಷಮ್ |

ಸಿದ್ಧಾಂತಯುಕ್ತಿ ವಿನಿವೇಶಿತ ತತ್ಸ್ವರೂಪಂ
ದೃಷ್ಟ್ವಾಽಭಿನಂದ್ಯ ಪರಿತೋಷವಶಾದವೋಚತ್ || ೪೦

ಆ ಭಾಷ್ಯದಲ್ಲಿ ಸೂತ್ರಾನುಸಾರವಾಗಿ ಸರಳವಾಕ್ಯಗಳಿಂದ ಸೂತ್ರಾರ್ಥವನ್ನು ಬರೆದು ಅದರ ಮೇಲೆ ಪೂರ್ವಪಕ್ಷವನ್ನು ಮಾಡಿ ಸ್ವೀಯ ವಾಕ್ಯಗಳಿಂದ ಆ ಪೂರ್ವಪಕ್ಷವನ್ನು ನಿರಾಕರಿಸಿದ್ದರು. ಅನಂತರ ಯುಕ್ತಿಗಳಿಂದ ಸಿದ್ಧಾಂತವನ್ನು ಸ್ಥಾಪಿಸಿದ್ದರು. ಅದನ್ನೆಲ್ಲ ನೋಡಿ ವ್ಯಾಸರು ಸಂತೋಷಪಟ್ಟು ಹೀಗೆಂದರು.

ನ ಸಾಹಸಂ ತಾತ ಭವಾನಕಾರ್ಷೀತ್
ಯತ್ಸೂತ್ರಭಾಷ್ಯಂ ಗುರುಣಾ ವಿನೀತಃ |
ವಿಚಾರ್ಯತಾಂ ಸೂತ್ರದುರುಕ್ತಮತ್ರೇ-
ತ್ಯೇತನ್ಮಹತ್ಸಾಹಸ ಮಿತ್ಯವೈಮಿ || ೪೧

"ವತ್ಸ, ನೀನು ಯಾವ ದುಡುಕನ್ನೂ ಮಾಡಿಲ್ಲ. ಗುರುಗಳಿಂದ ಶಿಕ್ಷಣವನ್ನು ಪಡೆದ ನೀನು ಸೂತ್ರಭಾಷ್ಯವನ್ನು ಸರಿಯಾಗಿಯೇ ರಚಿಸಿದ್ದೀಯೆ. ಇದರಲ್ಲಿ ಸರಿ-ತಪ್ಪುಗಳನ್ನು ವಿಚಾರಿಸಲು ಹೊರಡುವುದೇ ದೊಡ್ಡ ಸಾಹಸದ ಕೃತ್ಯವಾದೀತೆಂದು ಭಾವಿಸುತ್ತೇನೆ!

ಮೀಮಾಂಸಕಾನಾಮಪಿ ಮುಖ್ಯಭೂತೋ
ವೇತ್ಥಾಖಿಲ ವ್ಯಾಕರಣಾನಿ ವಿದ್ವನ್ |
ವಿನಿಃಸರೇತ್ತೇ ವದನಾದ್ಯತೀಂದೋ
ಗೋವಿಂದಶಿಷ್ಯಸ್ಯ ಕಥಂ ದುರುಕ್ತಮ್ || ೪೨

"ನೀನು ಮೀಮಾಂಸಕರಲ್ಲಿ ಸಹ ಶ್ರೇಷ್ಠನಾಗಿದ್ದೀಯೆ. ಸಮಸ್ತ ವ್ಯಾಕರಣ ಶಾಸ್ತ್ರಗಳನ್ನು ಬಲ್ಲವನಾಗಿದ್ದೀಯೆ. ವಿದ್ವಾಂಸನಾದ ಯತಿಶ್ರೇಷ್ಠನೆ, ಗೋವಿಂದಭಗವತ್ಪಾದ ಶಿಷ್ಯನಾದ ನಿನ್ನ ಬಾಯಿಯಿಂದ ತಪ್ಪಾದ ಮಾತು ಹೇಗೆ ತಾನೇ ಬಂದೀತು?

ನ ಪ್ರಾಕೃತಸ್ತ್ವಂ ಸಕಲಾರ್ಥದರ್ಶೀ
ಮಹಾನುಭಾವಃ ಪುರುಷೋಽಸಿ ಕಶ್ಚಿತ್ |
ಯೋ ಬ್ರಹ್ಮಚರ್ಯಾದ್ವಿಷಯಾನ್ನಿವಾರ್ಯ
ಪರ್ಯವ್ರಜಃ ಸೂರ್ಯ ಇವಾಂಧಕಾರಾನ್ || ೪೩

"ನೀನು ಸಾಮಾನ್ಯಮನುಷ್ಯನಲ್ಲ! ಸಕಲಾರ್ಥಗಳನ್ನೂ ಬಲ್ಲ ಒಬ್ಬ ಮಹಾನುಭಾವ ಪುರುಷನಾಗಿದ್ದೀಯೆ!ಸೂರ್ಯನು ಅಂಧಕಾರವನ್ನು ತಳ್ಳಿ ಎದ್ದು ಬರುವಂತೆ, ನೀನು

ವಿಷಯಾಭಿಲಾಷೆಯನ್ನು ಕಿತ್ತೊಗೆದು ಬ್ರಹ್ಮಚರ್ಯಾಶ್ರಮದಿಂದಲೇ ಪರಿವ್ರಾಜಕನಾಗಿದ್ದೀಯೆ.

ಬಹ್ವರ್ಥಗರ್ಭಾಣಿ ಲಘೂನಿ ಯಾನಿ
ನಿಗೂಢಭಾವಾನಿ ಚ ಮತ್ಕೃತಾನಿ |
ತ್ವಾಮೇವಮಿತ್ಥಂ ವಿರಹಯ್ಯ ನಾಸ್ತಿ
ಯಸ್ತಾನಿ ಸಮ್ಯಗ್ವಿವರೀತುಮೀಷ್ಟೇ || ೪೪

"ಬಹ್ವರ್ಥಗಳನ್ನು ಗರ್ಭೀಕರಿಸಿ ಅತಿಸಂಕ್ಷಿಪ್ತಗಳೂ ನಿಗೂಢ ತಾತ್ಪರ್ಯವುಳ್ಳವೂ ಆದ ನನ್ನ ಶಾರೀರಕಸೂತ್ರಗಳಿಗೆ, ಈ ಪ್ರಕಾರದಲ್ಲಿ ಸೊಗಸಾಗಿ ಅರ್ಥವನ್ನು ವಿವರಿಸಲು ನಿನ್ನನ್ನು ಬಿಟ್ಟರೆ ಇನ್ನೊಬ್ಬನು ಇಲ್ಲ.

ಟಿಪ್ಪಣಿ:ಸೂತ್ರಲಕ್ಷಣ-
ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋಮುಖಂ|
ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ||
ಭಾಷ್ಯಲಕ್ಷಣ-
ಸೂತ್ರಾರ್ಥೋ ವರ್ಣ್ಯತೇ ಯತ್ರ ಪದೈಃ ಸೂತ್ರಾನುಸಾರಿಭಿಃ|
ಸ್ವಪದಾನಿ ಚ ವರ್ಣ್ಯಂತೇ ಭಾಷ್ಯಂ ಭಾಷ್ಯವಿದೋ ವಿದುಃ||

ನಿಸರ್ಗದುರ್ಜ್ಞಾನ ತಮಾನಿ ಕೋ ವಾ
ಸೂತ್ರಾಣ್ಯಲಂ ವೇದಿತುಮರ್ಥತಃ ಸನ್ |
ಕ್ಲೇಶಸ್ತು ತಾವಾನ್ ವಿವರೀತುರೇಷಾಂ
ಯಾವಾನ್ ಪ್ರಣೇತುರ್ವಿಬುಧಾ ವದಂತಿ || ೪೫

"ಸಹಜವಾಗಿ ಅತ್ಯಂತದುರ್ಬೋಧಗಳಾದ ಸೂತ್ರಗಳನ್ನು ಅರ್ಥಪುರಃಸರವಾಗಿ ಅರಿತುಕೊಳ್ಳಲು ಯಾವ ವಿದ್ವಾಂಸನಿಗೆ ಸಾಧ್ಯ?ಸೂತ್ರಗಳನ್ನು ರಚಿಸತಕ್ಕವರಿಗೆ ಎಷ್ಟು ಕ್ಲೇಶವಾಗುತ್ತದೆಯೋ ಅಷ್ಟು ಕ್ಲೇಶವು ವಿವರಣಕಾರರಿಗೂ ಆಗುತ್ತದೆಯೆಂದು ವಿದ್ವಜ್ಜನರು ಹೇಳುತ್ತಾರೆ.

ಭಾವಂ ಮದೀಯಮವಬುಧ್ಯ ಯಥಾವದೇವಂ
ಭಾಷ್ಯಂ ಪ್ರಣೇತುಮನಲಂ ಭಗವಾನಪೀಶಃ |
ಸಾಂಖ್ಯಾದಿನಾನ್ಯಥಯಿತುಂ ಶ್ರುತಿಮೂರ್ಧವರ್ತ್ಮೋ-
ದ್ಧರ್ತುಂ ಕಥಂ ಪರಶಿವಾಂಶಮೃತೇ ಪ್ರಭುಃ ಸ್ಯಾತ್ || ೪೬

"ನನ್ನ ಹೃದ್ಗತವಾದ ಅಭಿಪ್ರಾಯವನ್ನರಿತು ಹೀಗೆ ಯಥಾರ್ಥವಾದ ಭಾಷ್ಯವನ್ನು ರಚಿಸುವುದಕ್ಕೆ ಒಬ್ಬ ಸಮರ್ಥನಾದ ಷಡ್ಗುಣೈಶ್ವರ್ಯಸಂಪನ್ನನಿಗೂ ಶಕ್ಯವಲ್ಲ. ಸಾಂಖ್ಯಾದಿದರ್ಶನಕಾರರು ಉಪನಿಷನ್ಮಾರ್ಗವನ್ನು ಕೆಡಿಸಿ ದಾರಿತಪ್ಪಿಸಿದ್ದಾರೆ. ಪರಶಿವನ ಅಂಶದಿಂದ ಹುಟ್ಟಿದವನನ್ನು ಹೊರತಾಗಿ ಇನ್ನೊಬ್ಬನು ಇದನ್ನು ಸರಿಪಡಿಸಲು ಶಕ್ತನಲ್ಲ!

ಟಿಪ್ಪಣಿ: ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ|
ಜ್ಞಾನವಿಜ್ಞಾನಯೋಶ್ಚೈವ ಷಣ್ಣಾಂ ಭಗ ಇತೀರಣಾ||

ಈ ಆರು ಗುಣಗಳುಳ್ಳವನು ಭಗವಂತ.

ರೋಷಾನುಷಂಗಕಲಯಾಽಪಿ ಸುದೂರಮುಕ್ತೋ
ಧತ್ಸೇಽಧಿಮಾನಸಮಹೋ ಸಕಲಾಃ ಕಲಾಶ್ಚ |
ಸರ್ವಾತ್ಮನಾ ಗಿರಿಜಯೋಪಹಿತ ಸ್ವರೂಪಃ
ಶಕ್ಯೋ ನ ವರ್ಣಯಿತುಮದ್ಭುತ ಶಂಕರಸ್ತ್ವಮ್ || ೪೭

"ಆಹಾ!ರೋಷದ ಸಂಬಂಧಲೇಶವೂ ಇಲ್ಲದ ನೀನು ಹೃದಯದಲ್ಲಿ ಸಕಲಕಲೆಗಳನ್ನು (ವಿದ್ಯೆಗಳನ್ನೂ) ಧರಿಸಿದ್ದೀಯೆ. ಸರ್ವವಿಧದಲ್ಲಿಯೂ ವೇದವಾಗ್‌ಜನ್ಯವಾದ ಬ್ರಹ್ಮವಿದ್ಯೆಯಿಂದ ಕೂಡಿದ ಸ್ವರೂಪವುಳ್ಳವನಾಗಿದ್ದೀಯೆ. ನಿನ್ನನ್ನು ವರ್ಣಿಸಲು ಶಕ್ಯವಾದ್ದಲ್ಲ. ನೀನು ಅದ್ಭುತಶಂಕರನೇ ಸರಿ!

ವಿವರಣೆ:-ಪ್ರಸಿದ್ಧನಾದ ಶಿವನು ರೋಷಸ್ವಭಾವದವನು. ಆತನು ಶಿರಸ್ಸಿನಲ್ಲಿ ಒಂದು ಚಂದ್ರಕಲೆಯನ್ನು ಮಾತ್ರ ಧರಿಸಿದ್ದಾನೆ. ದೇಹಾರ್ಧದಲ್ಲಿ ಗಿರಿಜೆಯಿಂದ- ಪಾರ್ವತಿಯಿಂದ ಸಹಿತನಾದವನು. ನೀನಾದರೋ ಗಿರಿ = ವೇದವಾಕ್ಕಿನಲ್ಲಿ, ಜಯಾ = ಹುಟ್ಟುವ ಬ್ರಹ್ಮವಿದ್ಯೆಯಿಂದ ಪೂರ್ಣನಾಗಿದ್ದೀಯೆ. ಆದ್ದರಿಂದ ಪ್ರಸಿದ್ಧಶಂಕರನಿಗಿಂತ ಉತ್ಕರ್ಷಶಾಲಿಯಾದ ಶಂಕರನು ನೀನು -ಎಂದು ಅಭಿಪ್ರಾಯ.

ವ್ಯಾಖ್ಯಾಪ್ಯಸಂಖ್ಯೈಃ ಕವಿಭಿಃ ಪುರೈತತ್
ವ್ಯಾಖ್ಯಾಸ್ಯತೇ ಕೈಶ್ಚಿದಿತಃ ಪರಂ ಚ |
ಭವಾನಿವಾಸ್ಮದ್ ಹೃದಯಂ ಕಿಮೇತೇ
ಸರ್ವಜ್ಞ ವಿಜ್ಞಾತುಮಲಂ ನಿಗೂಢಮ್ || ೪೮

ಅಸಂಖ್ಯಾತರಾದ ಎಷ್ಟೋ ವಿದ್ವಾಂಸರು ನನ್ನ ಬ್ರಹ್ಮಸೂತ್ರಗಳಿಗೆ ಹಿಂದೆ ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಇನ್ನು ಮುಂದೆಯೂ ಎಷ್ಟೋ ಜನರು ವ್ಯಾಖ್ಯಾನಗಳನ್ನು ಬರೆಯಬಹುದು. ಆದರೆ ಗೂಢವಾದ ನನ್ನ ಅಭಿಪ್ರಾಯವೇನೆಂಬುದನ್ನು ಇವರು, ಹೇ ಸರ್ವಜ್ಞ, ನಿನ್ನಂತೆ ತಿಳಿಯ ಬಲ್ಲರೆ?"

ವ್ಯಾಖ್ಯಾಹಿ ಭೂಯೋ ನಿಗಮಾಂತವಿದ್ಯಾಂ
ವಿಭೇದವಾದಾನ್ ವಿದುಷೋ ವಿಜಿತ್ಯ |
ಗ್ರಂಥಾನ್ ಭುವಿ ಖ್ಯಾಪಯ ಸಾನುಬಂಧಾ-
ನಹಂ ಗಮಿಷ್ಯಾಮಿ ಯಥಾಭಿಲಾಷಮ್ || ೪೯

ಬ್ರಹ್ಮವಿದ್ಯೆಯನ್ನು ಬೋಧಿಸುವ ಉಪನಿಷತ್ತುಗಳಿಗೂ ಹೀಗೆಯೇ ಭಾಷ್ಯವನ್ನು ರಚಿಸು. ದ್ವೈತವಾದಿಗಳಾದ ವಿದ್ವಾಂಸರೆಲ್ಲರನ್ನೂ ಜಯಿಸು. ಅನುಬಂಧ (ಚತುಷ್ಟಯ) ಯುಕ್ತವಾದ ನಿನ್ನ ಆ ಗ್ರಂಥಗಳನ್ನು ಭೂಮಂಡಲದಲ್ಲಿ ಸ್ಥಾಪಿಸು. ಈಗ ನಾನು ನನ್ನ ಇಚ್ಛಾನುಸಾರ ಹೊರಟುಹೋಗುತ್ತೇನೆ"ಎಂದರು.

ಟಿಪ್ಪಣಿ: ಅನುಬಂಧಗಳು ನಾಲ್ಕು-ವಿಷಯ, ಸಂಬಂಧ, ಪ್ರಯೋಜನ ಮತ್ತು ಅಧಿಕಾರಿ.

ಇತ್ಯುಕ್ತವಂತಂ ತಮಸಾವವೋಚತ್
ಕೃತಾನಿ ಭಾಷ್ಯಾಣ್ಯಪಿ ಪಾಠಿತಾನಿ |
ಧ್ವಸ್ತಾನಿ ಸಮ್ಯಕ್ಕುಮತಾನಿ ಧೈರ್ಯಾತ್
ಇತಃ ಪರಂ ಕಿಂ ಕರಣೀಯಮಸ್ತಿ || ೫೦

ಹೀಗೆ ನುಡಿದ ವ್ಯಾಸಮುನಿಗಳನ್ನು ಕುರಿತು ಶ್ರೀಶಂಕರರು ಇಂತೆಂದರು-"ಈಗಾಗಲೇ ಉಪನಿಷದ್ ಭಾಷ್ಯಗಳನ್ನೂ ರಚಿಸಿಬಿಟ್ಟಿದ್ದೇನೆ. ಶಿಷ್ಯರಿಗೆ ಅಧ್ಯಾಪನವನ್ನು ಮಾಡಿಸಿದ್ದೇನೆ. ದುರ್ಮತಗಳೆಲ್ಲವನ್ನೂ ಧೈರ್ಯದಿಂದ ನಿರ್ಮೂಲಗೊಳಿಸಿದ್ದೇನೆ. ಇನ್ನು ನಾನು ಮಾಡಬೇಕಾದ್ದಾದರೂ ಏನಿದೆ?"

ಮುಹೂರ್ತಮಾತ್ರಂ ಮಣಿಕರ್ಣಿಕಾಯಾಂ
ವಿಧೇಹಿ ಸದ್ವತ್ಸಲ ಸನ್ನಿಧಾನಮ್ |
ಚಿರಾದ್ಯತೇಽಹಂ ಪರಮಾಯುಷೋಽಂತೇ
ತ್ಯಜಾಮಿ ಯಾವದ್ವಪುರದ್ಯ ಹೇಯಮ್ || ೫೧

ವಾತ್ಸಲ್ಯಪೂರ್ಣರಾದ ಮಹರ್ಷಿಗಳೆ, ಈ ಮಣಿಕರ್ಣಿಕಾತೀರ್ಥದ ಬಳಿಯಲ್ಲಿ ಒಂದು ಮುಹೂರ್ತಕಾಲ ನಿಮ್ಮ ಸಂನಿಧಾನವನ್ನು ಅನುಗ್ರಹಿಸಿರಿ. ನನ್ನ ಪರಮಾಯುಸ್ಸಾದ (ಹದಿನಾರು) ವರ್ಷಗಳು ಮುಗಿದೊಡನೆ, ಹೇಯವಾದ ಈ ದೇಹವನ್ನು ತ್ಯಜಿಸಬೇಕೆಂದು ಬಹಳ ಕಾಲದಿಂದ ಕಾದು ಕೊಂಡಿದ್ದೆನು. ಈಗ ಇದನ್ನು ತ್ಯಜಿಸುವೆನು. (ಅಲ್ಲಿಯವರೆಗೆ ನೀವು ಸಂನಿಹಿತರಾಗಿರಿ)"ಎಂದು ಹೇಳಿದರು.

ಇತೀದಮಾಕರ್ಣ್ಯ ವಚೋ ವಿಚಿಂತ್ಯ
ಸ ಶಂಕರಂ ಪ್ರಾಹ ಕುರುಷ್ವ ಮೈವಮ್ ।
ಅನಿರ್ಜಿತಾಃ ಸಂತಿ ವಸುಂಧರಾಯಾಂ
ತ್ವಯಾ ಬುಧಾಃ ಕೇಚಿದುದಾರವಿದ್ಯಾಃ ॥ ೫೨

ಈ ಮಾತನ್ನು ಕೇಳಿ ವ್ಯಾಸಮುನಿಗಳು ಸ್ವಲ್ಪ ಆಲೋಚಿಸಿ ಶ್ರೀಶಂಕರರನ್ನು ಕುರಿತು ಹೀಗೆಂದರು- “ಹಾಗೆ ಮಾಡಬೇಡ, ಈ ಭೂಮಿಯಲ್ಲಿ ದೊಡ್ಡ ವಿದ್ಯಾವಂತರಾದ ಕೆಲವು ಪಂಡಿತರಿದ್ದಾರೆ. ಅವರನ್ನು ನೀನು ಇನ್ನೂ ಜಯಿಸಿಲ್ಲ.

ಜಯಾಯ ತೇಷಾಂ ಕತಿ ಹಾಯನಾನಿ
ವಸ್ತವ್ಯಮೇವ ಸ್ಥಿರಧೀಸ್ತ್ವಯಾಽಪಿ ।
ನೋ ಚೇನ್ಮುಮುಕ್ಷಾ ಭುವಿ ದುರ್ಲಭಾ ಸ್ಯಾತ್
ಸ್ಥಿತಿರ್ಯಥಾ ಮಾತೃಧುತಸ್ಯ ಬಾಲ್ಯೇ ॥ ೫೩

“ಹೇ ಸ್ಥಿತಪ್ರಜ್ಞ, ಆ ಪಂಡಿತರನ್ನು ಜಯಿಸುವುದಕ್ಕಾಗಿ ಕೆಲವು ವರ್ಷಗಳ ವರೆಗೆ ನೀನು ಇರಲೇಬೇಕು. ಇಲ್ಲದಿದ್ದರೆ ಲೋಕದಲ್ಲಿ ಮೋಕ್ಷೇಚ್ಛೆ ಎಂಬುದೇ ದುರ್ಲಭವಾದೀತು. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡವನ ಸ್ಥಿತಿ ಈ ಶಾಸ್ತ್ರಕ್ಕೆ ಆಗಿಹೋದೀತು.

ಟಿಪ್ಪಣಿ: ಈ ಶ್ಲೋಕದಲ್ಲಿ ‘ಸ್ಥಿರಧೀ’ಎಂಬ ಶಬ್ದವನ್ನು ಸಂಬೋಧನಪದವೆಂದು ಸ್ವೀಕರಿಸಿದೆ. ಅದ್ವೈತಸಿದ್ಧಾಂತವು ಪ್ರತಿಷ್ಠಿತವಾಗಿ ನಿಲ್ಲದಿದ್ದರೆ ಮೋಕ್ಷಾಪೇಕ್ಷಿಗಳಿಗೆ ಸರಿಯಾದ ಮಾರ್ಗದರ್ಶನವಿಲ್ಲದೇ ಹೋದೀತು ಎಂದು ಅಭಿಪ್ರಾಯ.

ಪ್ರಸನ್ನ ಗಂಭೀರಭವತ್ಪ್ರಣೀತ
ಪ್ರಬಂಧಸಂದರ್ಭಭವಃ ಪ್ರಹರ್ಷಃ ।
ಪ್ರೋತ್ಸಾಹಯತ್ಯಾತ್ಮವಿದಾಮೃಷೀಣಾಂ
ವರೇಣ್ಯ ವಿಶ್ರಾಣಯಿತುಂ ವರಂ ತೇ ॥ ೫೪

“ಆತ್ಮವಿದರಾದ ಋಷಿಗಳಲ್ಲಿ ಅಗ್ರಗಣ್ಯನಾದವನು ನೀನು. ನೀನು ನಿರ್ಮಿಸಿದ ಪ್ರಸನ್ನ ಗಂಭೀರವಾದ ಈ ಪ್ರಬಂಧವನ್ನು ನೋಡಿ ನನಗೆ ಪರಮಾನಂದವಾಗಿದೆ. ಈ ಆನಂದವೇ ನಿನಗೊಂದು ವರವನ್ನು ಕೊಡಬೇಕೆಂದು ನನ್ನನ್ನು ಪ್ರೋತ್ಸಾಹಿಸುತ್ತಿದೆ.

ಅಷ್ಟೌ ವಯಾಂಸಿ ವಿಧಿನಾ ತವ ವತ್ಸ ದತ್ತಾ-
ನ್ಯನ್ಯಾನಿ ಚಾಷ್ಟ ಭವತಾ ಸುಧಿಯಾಽರ್ಜಿತಾನಿ ।
ಭೂಯೋಽಪಿ ಷೋಡಶ ಭವಂತು ಭವಾಜ್ಞಯಾ ತೇ
ಭೂಯಾಚ್ಚ ಭಾಷ್ಯಮಿದಮಾರವಿಚಂದ್ರತಾರಮ್ ॥ ೫೫

"ಹೇ ವತ್ಸ, ನಿನಗೆ ಎಂಟು ವರ್ಷ ಆಯುಸ್ಸು ವಿಧಿಯಿಂದ ಪ್ರಾಪ್ತವಾಗಿತ್ತು ಮೇಧಾವಿಯಾದ ನೀನು ಇನ್ನೂ ಎಂಟು ವರ್ಷಗಳ ಆಯುಸ್ಸನ್ನು ಸ್ವತಃ ಗಳಿಸಿ ಕೊಂಡಿದ್ದೀಯೆ. ಈಗ ಪರಶಿವನ ಆಜ್ಞೆಯಂತೆ ಇನ್ನೂ ಹದಿನಾರು ವರ್ಷಗಳ ಆಯುಸ್ಸು ನಿನಗೆ ಬರಲಿ. ಸೂರ್ಯ ಚಂದ್ರ ನಕ್ಷತ್ರಗಳಿರುವ ವರೆಗೆ ಈ ಭಾಷ್ಯವು ವಿರಾಜಿಸುತ್ತಿರಲಿ.

ವಿವರಣೆ:-ಆಚಾರ್ಯರು ಜನಿಸಿದಾಗ ಬ್ರಹ್ಮನಿಂದ ಲಬ್ಧವಾದ ಆಯುಸ್ಸು ಎಂಟುವರ್ಷ. ನದಿಯಲ್ಲಿ ಮೊಸಳೆ ಹಿಡಿದುಕೊಂಡಾಗ ಪ್ರೈಷೋಚ್ಚಾರಣೆಯನ್ನು ಮಾಡಿ ಆತುರಸಂನ್ಯಾಸವನ್ನು ಸ್ವೀಕರಿಸಿದರಷ್ಟೆ. ಸಂನ್ಯಾಸರೂಪಧರ್ಮದಿಂದ ಪ್ರಾರಬ್ಧಕರ್ಮವು ನಾಶವಾಗುತ್ತದೆಯೆಂದೂ ಪುನರ್ಜನ್ಮವಾಯಿತೆಂದೂ ತಿಳಿಯ ಬೇಕು. ಪುನರ್ಜನ್ಮದಲ್ಲಿ ಮತ್ತೆ ಎಂಟು ವರ್ಷ ಆಯುಸ್ಸು. ಈಗ ಪರಶಿವನ ಆಜ್ಞೆಯಿಂದ ಮತ್ತೆ ಹದಿನಾರು ವರ್ಷಗಳು ಲಬ್ಧವಾದವು. ಒಟ್ಟು ಆಚಾರ್ಯರ ಜೀವಿತಕಾಲ ಮೂವತ್ತೆರಡು ವರ್ಷಗಳು.

ತ್ವಮಾಯುಷಾऽನೇನ ವಿರೋಧಿವಾದಿ-
ಗರ್ವಾಂಕುರೋನ್ಮೂಲನ ಜಾಗರೂಕೈಃ |
ವಾಕ್ಯೈಃ ಕುರುಷ್ವೋಜ್ಝಿತ ಭೇದಬುದ್ಧೀನ್
ಅದ್ವೈತವಿದ್ಯಾಪರಿಪಂಥಿನೋऽನ್ಯಾನ್ || ೫೬

ನೀನು ಈ ಆಯುಸ್ಸನ್ನು ಪಡೆದು ಅದ್ವೈತವಿರೋಧಿಗಳಾದ ವಾದಿಗಳ ಗರ್ವವನ್ನು ಉನ್ಮೂಲನ ಮಾಡತಕ್ಕ ಶಾಸ್ತ್ರೀಯ ವಾಕ್ಯಗಳಿಂದ ಅವರು ದ್ವೈತ ಬುದ್ಧಿಯನ್ನು ತ್ಯಜಿಸುವಂತೆ ಮಾಡು. ಅದ್ವೈತವಿದ್ಯೆಗೆ ವಿರೋಧಿಗಳಾದ ಅನ್ಯರನ್ನು ಜಯಿಸು"ಎಂದರು.

ಇತೀರಯಂತಂ ಪ್ರತಿ ವಾಚಮೂಚೇ
ಸ ಶಂಕರಃ ಪಾವಿತಸರ್ವಲೋಕಃ |
ತ್ವತ್ಸೂತ್ರಸಂಬಂಧ ವಶಾನ್ಮದೀಯಂ
ಭಾಷ್ಯಂ ಪ್ರಚಾರಂ ಭುವಿ ಯಾತು ವಿದ್ವನ್ || ೫೭

ಹೀಗೆ ನುಡಿಯುತ್ತಿದ್ದ ವ್ಯಾಸಮುನಿಗಳನ್ನು ಕುರಿತು ಸರ್ವಲೋಕವನ್ನೂ ಪಾವನಗೊಳಿಸಿದ ಶ್ರೀ ಶಂಕರರು "ಹೇ ವಿದ್ವದ್ವರೇಣ್ಯರೇ, ನೀವು ರಚಿಸಿದ ಸೂತ್ರಗಳ ಸಂಬಂಧದಿಂದಾದ ಮಹಿಮೆಯಿಂದಲೇ ನನ್ನ ಭಾಷ್ಯವು ಲೋಕದಲ್ಲಿ ಪ್ರಚಾರಗೊಳ್ಳುವುದು"ಎಂದರು.

ಇತೀರಯಿತ್ವಾ ಚರಣೌ ವವಂದೇ
ಯತಿರ್ಮುನೇಃ ಸರ್ವವಿದೋ ಮಹಾತ್ಮಾ |
ಪ್ರದಾಯ ಸಂಭಾವ್ಯ ವರಂ ಮುನೀಶೋ
ದ್ವೈಪಾಯನಃ ಸೋऽಂತರಧಾದ್ಯತಾತ್ಮಾ || ೫೮

ಹೀಗೆ ನುಡಿದು ಮಹಾತ್ಮರಾದ ಆ ಯತಿಗಳು ಸರ್ವಜ್ಞರಾದ ವ್ಯಾಸ ಮಹರ್ಷಿಗಳ ಪಾದಗಳಿಗೆ ವಂದಿಸಿದರು. ಜಿತೇಂದ್ರಿಯರಾದ ಆ ದ್ವೈಪಾಯನಮುನೀಶ್ವರರು ಅವಶ್ಯಭಾವಿಯಾದ ಈ ವರವನ್ನಿತ್ತು ಅಂತರ್ಧಾನ ಹೊಂದಿದರು.

ಇತ್ಥಂ ನಿಗದ್ಯ ಋಷಿವೃಷ್ಣಿ ತಿರೋಹಿತೇಽಸ್ಮಿ-
ನ್ನಂತರ್ವಿವೇಕನಿಧಿರಪ್ಯಥ ವಿವ್ಯಥೇ ಸಃ |
ಹೃತ್ತಾಪಹಾರಿನಿರುಪಾಧಿಕೃಪಾರಸಾನಾಂ
ತತ್ತಾದೃಶಾಂ ಕಥಮಹೋ ವಿರಹೋ ವಿಷಹ್ಯಃ || ೫೯

ಆ ಋಷೀಶ್ವರರು ಹೀಗೆ ನುಡಿದು ಅಂತರ್ಹಿತರಾಗಲು ಅಂತಃಕರಣದಲ್ಲಿ ವಿವೇಕ ನಿಧಿಗಳಾಗಿದ್ದ ಆಚಾರ್ಯರು (ಅವರ ವಿರಹದಿಂದ) ವ್ಯಥೆಪಟ್ಟರು. ಹೃದಯಸಂತಾಪ ಹಾರಿಗಳೂ ನಿರ್ವ್ಯಾಜ ಕಾರುಣ್ಯಪೂರ್ಣರೂ ಆದ ಅಂತಹ ಮಹನೀಯರ ವಿರಹವು, ಅಹೋ, ಹೇಗೆ ತಾನೇ ಸಹ್ಯವಾದೀತು?

ತತ್ಪಾದಪದ್ಮೇ ನಿಜಚಿತ್ತಪದ್ಮೇ
ಪಶ್ಯನ್ ಕಥಂಚಿದ್ವಿರಹಂ ವಿಷಹ್ಯ |
ಯತಿಕ್ಷಿತೀಶೋಽಪಿ ಗುರೋರ್ನಿಯೋಗಾತ್
ಮನೋ ದಧೇ ದಿಗ್ವಿಜಯೇ ಮನೀಷೀ || ೬೦

ಅನಂತರ ಧೀರರಾದ ಶ್ರೀ ಶಂಕರ ಯತೀಶ್ವರರು ತಮ್ಮ ಚಿತ್ತಕಮಲದಲ್ಲಿ ವ್ಯಾಸರ ಪಾದಕಮಲವನ್ನೇ ಕಾಣುತ್ತ ಆ ವಿರಹ ದುಃಖವನ್ನು ಹೇಗೋ ನಿಗ್ರಹಿಸಿ, ಗುರುಗಳ ಆಜ್ಞೆಯಂತೆ ದಿಗ್ವಿಜಯಕ್ಕೆ ಹೊರಡಲು ಮನಸ್ಸು ಮಾಡಿದರು.

ಭಾಷ್ಯಸ್ಯ ವಾರ್ತಿಕಮಥೈಷ ಕುಮಾರಿಲೇನ
ಭಟ್ಟೇನ ಕಾರಯಿತುಮಾದರವಾನ್ ಮುನೀಂದ್ರಃ |
ವಂಧ್ಯಾಯಮಾನಮದವಿಂಧ್ಯಮಹೀಧರೇಣ
ವಾಚಂಯಮೇನ ಚರಿತಾಂ ಹರಿತಂ ಪ್ರತಸ್ಥೇ || ೬೧

ಆ ಮುನೀಂದ್ರರು ಕುಮಾರಿಲಭಟ್ಟರಿಂದ ತಮ್ಮ ಭಾಷ್ಯಕ್ಕೆ ವಾರ್ತಿಕವನ್ನು ಬರೆಸಬೇಕೆಂದು ದೃಢಸಂಕಲ್ಪ ಮಾಡಿದರು. ಅನಂತರ ವಿಂಧ್ಯ ಪರ್ವತದ ಮದವನ್ನು ನಾಶಮಾಡಿದ ಅಗಸ್ತ್ಯಮುನಿಯಿಂದ ಆಕ್ರಾಂತವಾದ (ದಕ್ಷಿಣ) ದಿಕ್ಕಿಗೆ ಪ್ರಯಾಣ ಮಾಡಿದರು.

ತತಃ ಸ ವೇದಾಂತರಹಸ್ಯವೇತ್ತಾ
ಭೇತ್ತಾಽಮತಾನಾಂ ತರಸಾ ಮತಾನಾಮ್ |

ಪ್ರಯಾಗಮಾಗಾತ್ಪ್ರಥಮಂ ಜಿಗೀಷುಃ
ಕುಮಾರಿಲಂ ಸಾಧಿತಕರ್ಮಜಾಲಮ್ || ೬೨

ತರುವಾಯ ತಮಗೆ ಸಮ್ಮತವಲ್ಲದ ಮತಗಳನ್ನು ಶೀಘ್ರದಲ್ಲಿಯೇ ಖಂಡಿಸಿ ಹಾಕಬಲ್ಲ ಮತ್ತು ವೇದಾಂತ ರಹಸ್ಯವನ್ನು ಬಲ್ಲ ಆಚಾರ್ಯರು ಪ್ರಯಾಗಕ್ಷೇತ್ರಕ್ಕೆ ಹೊರಟರು. ಕರ್ಮಕಾಂಡದಲ್ಲಿ ಧುರೀಣರಾದ ಕುಮಾರಿಲಭಟ್ಟರನ್ನು ಮೊದಲು ಜಯಿಸಬೇಕೆಂದು ಅವರಿಗೆ ಇಚ್ಛೆಯಾಯಿತು.

ಆಮಜ್ಜತಾಂ ಕಿಲ ತನೂಮಸಿತಾಂ ಸಿತಾಂ ಚ
ಕರ್ತುಂ ಕಲಿಂದಸುತಯಾ ಕಲಿತಾನುಷಂಗಾಮ್ |
ಅಹ್ನಾಯ ಜಹ್ನುತನಯಾಮಥ ನಿಹ್ನುತಾಘಾಂ
ಮಧ್ಯೇಪ್ರಯಾಗಮಗಮನ್ಮುನಿರರ್ಥಮಾರ್ಗಮ್ || ೬೩

ಆ ಮುನಿಗಳು ಪ್ರಯಾಗದ ನಡುವೆ ಪುರುಷಾರ್ಥಗಳಿಗೆ ಮಾರ್ಗ ಭೂತವಾಗಿ ಪ್ರವಹಿಸುತ್ತಿದ್ದ ಗಂಗಾನದಿಯನ್ನು ತಲುಪಿದರು. ಆ ನದಿಯು ತನ್ನಲ್ಲಿ ಮುಳುಗಿದವರ ದೇಹವನ್ನು ಕಪ್ಪಾಗಿಯೂ ಬಿಳುಪಾಗಿಯೂ ಮಾಡುವ ಉದ್ದೇಶದಿಂದಲೋ ಎಂಬಂತೆ ಕಲಿಂದತನಯೆಯಾದ ಯಮುನೆಯೊಡನೆ ಸಂಗತಳೂ ಶೀಘ್ರವಾಗಿಯೇ ಪಾಪವನ್ನು ದೂರಮಾಡತಕ್ಕವಳೂ ಆಗಿದ್ದಳು.

ವಿವರಣೆ:-ಗಂಗಾನದೀಜಲವು ಶುಭ್ರವಾಗಿ ಬಿಳುಪಾದದ್ದು. ಯಮುನೆಯ ಜಲ ಕಪ್ಪು. ಇವೆರಡರ ಸಂಗಮದಲ್ಲಿ ಸ್ನಾನಮಾಡಿದರೆ ಕೆಲವರ ಮೈ ಕಪ್ಪಾಗಬಹುದು, ಕೆಲವರ ಮೈ ಬಿಳುಪಾಗಬಹುದು -ಎಂದು ಕವಿಕಲ್ಪನಾ ಚಮತ್ಕಾರ. ತಾತ್ಪರ್ಯ ಹೀಗೆ- ಪುಣ್ಯಕರವಾದ ಆ ಸಂಗಮಸ್ಥಳದಲ್ಲಿ ಸ್ನಾನಮಾಡಿದರೆ ಕೆಲವರಿಗೆ ವಿಷ್ಣುಸಾರೂಪ್ಯ ಬರುತ್ತದೆ. ಕೆಲವರಿಗೆ ಶಿವಸಾರೂಪ್ಯಬರುತ್ತದೆ. ವಿಷ್ಣು ಕಪ್ಪು. ಶಿವ ಬಿಳುಪು.

ಗಂಗಾಪ್ರವಾಹೈರುಪರುದ್ಧವೇಗಾ
ಕಲಿಂದಕನ್ಯಾ ಸ್ತಿಮಿತಪ್ರವಾಹಾ |
ಅಪೂರ್ವಸಖ್ಯಾಗತಲಜ್ಜಯೇವ
ಯತ್ರಾಧಿಕಂ ಭಾತಿ ವಿಚಿತ್ರಪಾಥಾಃ || ೬೪

ಗಂಗಾಪ್ರವಾಹಗಳಿಂದ ಯಮುನಾ ನದಿಯ ವೇಗವು ತಡೆಯಲ್ಪಟ್ಟಿದ್ದರಿಂದ ಅದರ ಪ್ರವಾಹವು ಹರಿಯದೇ ನಿಂತಿತ್ತು. ಅದನ್ನು ನೋಡಿದರೆ ಅನಿರೀಕ್ಷಿತಳಾದ ಗೆಳತಿಯು ಬಂದಕಾರಣ ಒಬ್ಬ ಯುವತಿಯು ಲಜ್ಜೆಯಿಂದ ತಟ್ಟನೆ ನಿಂತು ವಿವಿಧಭಾವಗಳನ್ನು ಪ್ರದರ್ಶಿಸಿದಂತೆ ಕಾಣುತ್ತಿತ್ತು.

ಅಂತೇವಸದ್ಭಿರಮಲಚ್ಛವಿಸಂಪ್ರದಾಯ-
ಮಧ್ಯೇತುಮಾಶ್ರಿತಜಲಾಂ ಕುಹಚಿನ್ಮರಾಲೈಃ |
ಚಕ್ರದ್ವಯೇನ ರಜನೀಸಹವಾಸ ಸೌಖ್ಯ -
ಸಂಶೀಲನಾಯ ಕಿಲ ಸಂವಲಿತಾಂ ಪರತ್ರ || ೬೫

ಆ ನದಿಯ ಒಂದು ಪಾರ್ಶ್ವದಲ್ಲಿ ಶುಭ್ರಕಾಂತಿಯ ಸಂಪ್ರದಾಯವನ್ನು ಕಲಿಯಲು ಅಂತೇವಾಸಿಗಳಾದ ಹಂಸಗಳು ಜಲವನ್ನು ಆಶ್ರಯಿಸಿಕೊಂಡಿದ್ದವು. ಇನ್ನೊಂದು ಪಾರ್ಶ್ವದಲ್ಲಿ ರಜನಿಯೆಂಬ ಪದ್ಮಿನಿಯ ಸಹವಾಸ ಸೌಖ್ಯವನ್ನು ಅನುಭವಿಸುವುದಕ್ಕಾಗಿ ಚಕ್ರವಾಕ ದಂಪತಿಗಳು ಕಾದುಕೊಂಡಿದ್ದವು.

ವಿವರಣೆ:-ಆ ಸಂಗಮ ಸ್ಥಳದಲ್ಲಿ ನದಿಯ ಒಂದು ಪಾರ್ಶ್ವ ಗಂಗಾನದಿಯಿಂದ ಬಿಳುಪಾಗಿಯೂ ಇನ್ನೊಂದು ಪಾರ್ಶ್ವ ಯಮುನೆಯಿಂದ ಕಪ್ಪಾಗಿಯೂ ಇತ್ತು. ಗಂಗಾಪಾರ್ಶ್ವದಲ್ಲಿ ಹಂಸಗಳಿದ್ದವು. ಯಮುನೆಯ ಪಾರ್ಶ್ವದಲ್ಲಿ ಕತ್ತಲಾಯಿತೆಂದು ಚಕ್ರವಾಕಗಳು ಕಾದಿದ್ದವು ಎಂದು ಅಭಿಪ್ರಾಯ. ರಜನೀಶಬ್ದಕ್ಕೆ ಪದ್ಮಿನಿ (ತಾವರೆ ಬಳ್ಳಿ) ಎಂಬ ಅರ್ಥವೂ ಇದೆ. ಪದ್ಮಿನೀಲಕ್ಷಣವುಳ್ಳ ಸ್ತ್ರೀ ಎಂದು ಧ್ವನಿತವಾಗುತ್ತದೆ. ರಾತ್ರಿಯಲ್ಲಿ ಚಕ್ರವಾಕಗಳು ವಿರಹ ದುಃಖವನ್ನು ಅನುಭವಿಸುತ್ತವೆ ಎಂದು ಕವಿಸಮಯ. ಈಗ ರಾತ್ರಿಯಲ್ಲಿಯೂ ಜೊತೆಯಾಗಿದ್ದುದರಿಂದ ಸದಾ ಸೌಖ್ಯವನ್ನು ಅನುಭವಿಸುತ್ತವೆಯೆಂದು ಅಭಿಪ್ರಾಯ.

ಯತ್ರಾಪ್ಲುತಾ ದಿವ್ಯಶರೀರಭಾಜ
ಆಚಂದ್ರತಾರಂ ದಿವಿ ಭೋಗಜಾತಮ್ |
ಸಂಭುಂಜತೇ ವ್ಯಾಧಿಕಥಾನಭಿಜ್ಞಾಃ
ಪ್ರಾಹೇಮಮರ್ಥಂ ಶ್ರುತಿರೇವ ಸಾಕ್ಷಾತ್ || ೬೬

ಯಮುನಾಸಂಗತವಾದ ಯಾವ ನದಿಯಲ್ಲಿ ಸ್ನಾನ ಮಾಡಿದವರು ದಿವ್ಯಶರೀರವನ್ನು ಧರಿಸಿ ಚಂದ್ರತಾರೆಗಳಿರುವ ವರೆಗೂ ಸ್ವರ್ಗದಲ್ಲಿ ಸುಖಭೋಗಗಳನ್ನು ಅನುಭವಿಸುತ್ತಾರೆಯೋ ಯಾವುದೇ ರೋಗಾದಿ ಪೀಡೆಯ ಲೇಶವನ್ನೂ ತಿಳಿಯದೇ ಇರುತ್ತಾರೋ ಅಂತಹ ನದಿಯ ಸಮೀಪಕ್ಕೆ ಆಚಾರ್ಯರು ಬಂದರು. ಈ ವಿಷಯವನ್ನು ಸಾಕ್ಷಾತ್ ವೇದವೇ ಹೇಳುತ್ತದೆ.

ಟಿಪ್ಪಣಿ:"ಸಿತಾಸಿತೇ ಸರಿತೇ ಯತ್ರಸಂಗತೇ| ತತ್ರಾಽ ಆಪ್ಲುಸಾತೋ ದಿವಮುತ್ಪತಂತಿ||"ಎಂದು ಶ್ರುತಿ ಇದೆ.

ಅಜ್ಞಾತ ಸಂಭವತಿರೋಧಿಕಥಾಽಪಿ ವಾಣೀ
ಯಸ್ಯಾಃ ಸಿತಾಸಿತತಯೈವ ಗೃಣಾತಿ ರೂಪಮ್ |
ಭಾಗೀರಥೀಂ ಯಮುನಯಾ ಪರಿಚರ್ಯಮಾಣಾ -
ಮೇತಾಂ ವಿಗಾಹ್ಯ ಮುದಿತೋ ಮುನಿರಿತ್ಯಭಾಣೀತ್ || ೬೭

ಉತ್ಪತ್ತಿ ನಾಶಗಳೆರಡರ ಲೇಶವೂ ಇಲ್ಲದ ವೇದ ವಾಣಿಯು ಯಮುನಾಸಂಗತವಾದ ಭಾಗೀರಥೀ ನದಿಯನ್ನು ಸಿತಾ-ಬಿಳಿಪು ಅಸಿತ-ಕಪ್ಪು ಎಂಬುದಾಗಿಯೇ ಅದರ ರೂಪದಿಂದ ವರ್ಣಿಸುತ್ತದೆ. ಅಂತಹ ಭಾಗೀರಥೀ ನದಿಯಲ್ಲಿ ಶ್ರೀಶಂಕರಮುನಿಗಳು ಸ್ನಾನಮಾಡಿ ಸಂತುಷ್ಟರಾಗಿ ಹೀಗೆಂದರು.

ಟಿಪ್ಪಣಿ:- ತಿರೋಧಿ=ತಿರೋಧಾನ, ನಾಶ.

ಸಿದ್ಧಾಪಗೇ ಪುರವಿರೋಧಿಜಟೋಪರೋಧ-
ಕ್ರುದ್ಧಾ ಕುತಃ ಶತಮದಃ ಸದೃಶಾನ್ ವಿಧತ್ಸೇ ।
ಬದ್ಧಾ ನ ಕಿಂ ನು ಭವಿತಾಸಿ ಜಟಾಭಿರೇಷಾ -
ಮುದ್ಧಾ ಜಡಪ್ರಕೃತಯೋ ನ ವಿದಂತಿ ಭಾವಿ ॥ ೭೮

"ಎಲೌ ದೇವನದಿಯೆ, ತ್ರಿಪುರ ಸಂಹಾರಿಯಾದ ಶಿವನ ಜಟೆಯು ಅಡ್ಡಿಮಾಡಿತೆಂದು ಕ್ರುದ್ಧಳಾದ ನೀನು ಅದೇಕೆ ನೂರಾರು ಜನರನ್ನು ಶಿವಸದೃಶರನ್ನಾಗಿ ಮಾಡುತ್ತಿದ್ದೀಯೆ? ಹೀಗೆ ಮಾಡಿದರೆ ಇವರೆಲ್ಲರ ಜಟೆಗಳಿಂದ ಮತ್ತೆ ನೀನು ಬದ್ಧಳಾಗಿ ಬಿಡುವುದಿಲ್ಲವೇ! ಆಹಾ! ಜಡಪ್ರಕೃತಿಯವರು ಭವಿಷ್ಯತ್ತನ್ನು ತಿಳಿಯಲೇ ಆರರು!"

ಟಿಪ್ಪಣಿ: ಜಡಪ್ರಕೃತಯಃ=ಡಲಯೋರಭೇದಃ-ಎಂದು ಹೇಳಿರುವುದರಿಂದ ಜಲಪ್ರಕೃತಯಃ ಎಂಬ ಇನ್ನೊಂದು ಅರ್ಥವೂ ಇಲ್ಲಿ ಸಂಗತವಾಗುತ್ತದೆ.

ಸನ್ಮಾರ್ಗವರ್ತನಪರಾಽಪಿ ಸುರಾಪಗೇ ತ್ವಂ
ಅಸ್ಥೀನಿ ನಿತ್ಯಮಶುಚೀನಿ ಕಿಮಾದದಾಸಿ ।
ಆ ಜ್ಞಾತಮಂಬ ಹೃದಯಂ ತವ ಸಜ್ಜನಾನಾಂ
ಪ್ರಾಯಃ ಪ್ರಸಾಧನಕೃತೇ ಕೃತಮಜ್ಜನಾನಾಮ್ ॥ ೭೯

"ಹೇ ದಿವ್ಯನದಿಯೇ, ಸನ್ಮಾರ್ಗಗಾಮಿನಿಯಾಗಿದ್ದರೂ ನೀನು ಅಶುಚಿಯಾದ ಮೂಳೆಗಳನ್ನು ಅದೇಕೆ ಸ್ವೀಕರಿಸುತ್ತಿದ್ದೀಯೆ? ಆಹಾ, ನಿನ್ನ ಹೃದಯವು ತಿಳಿಯಿತು. ಇಲ್ಲಿ ಸ್ನಾನ ಮಾಡಿದ ಸಜ್ಜನರನ್ನು (ಶಿವರೂಪಧಾರಿಗಳಾದ್ದರಿಂದ) ಅಲಂಕರಿಸುವುದಕ್ಕಾಗಿ ಮೂಳೆಗಳನ್ನು ತೆಗೆದುಕೊಳ್ಳುತ್ತಿದ್ದೀಯೆ!"

ಸ್ವಾಪಾನುಷಂಗ ಜಡತಾಭರಿತಾನ್ ಜನೌಘಾನ್
ಸ್ವಾಪಾನುಷಂಗಜಡತಾವಿಧುರಾನ್ವಿಧತ್ಸೇ ।
ದೂರೀಭವದ್ವಿಷಯರಾಗ ಹೃದೋಽಪಿ ತೂರ್ಣಂ
ಧೂರ್ತಾವತಂಸಯಸಿ ದೇವಿ ಕ ಏಷ ಮಾರ್ಗಃ ॥ ೮೦

"ನಿದ್ರಾ ಸಂಬಂಧದಿಂದ ಜಡರಾಗಿರತಕ್ಕ ಈ ಮನುಷ್ಯರನ್ನು ನಿದ್ರಾ ಸಂಬಂಧವೇ ಇಲ್ಲದಂತವರನ್ನಾಗಿ (ದೇವತೆಗಳನ್ನಾಗಿ) ಮಾಡುತ್ತೀಯೆ. ಯಾರಿಗೆ ಹೃದಯದಲ್ಲಿ ವಿಷಯಾಭಿಲಾಷೆಗಳಿಲ್ಲವೋ ಅಂತಹವರನ್ನು ಶೀಘ್ರದಲ್ಲಿಯೇ ಧೂರ್ತ ಶಿರೋಮಣಿಗಳನ್ನಾಗಿ ಮಾಡಿಬಿಡುತ್ತೀಯೆ! ಓ ದೇವಿ, ಇದು ಯಾವ ನೀತಿಮಾರ್ಗ?"

ವಿವರಣೆ:-ದೇವತೆಗಳು ಅನಿಮಿಷರು. ಕಣ್ಣುಮುಚ್ಚದಿರುವುದರಿಂದ ಅವರಿಗೆ ನಿದ್ರೆ ಇಲ್ಲ. ಮೂರ್ಖರನ್ನು ದೇವತೆಗಳನ್ನಾಗಿ ಮಾಡುತ್ತೀಯೆ. ವಿರಕ್ತರನ್ನು ಧೂರ್ತರನ್ನಾಗಿ ಮಾಡುತ್ತೀಯೆ ಎಂದು ಆಕ್ಷೇಪ. ಇಲ್ಲಿ ಧೂರ್ತಎಂಬ ಶಬ್ದಕ್ಕೆ ಧತ್ತೂರಿ ಹೂವು ಎಂದೂ ಅರ್ಥವಿದೆ. ಶಿವನು ಧತ್ತೂರಿಪ್ರಿಯ. ವಿರಕ್ತರನ್ನು ಶಿವರೂಪಿಗಳನ್ನಾಗಿ ಮಾಡುತ್ತೀಯೆ ಎಂದು ಅರ್ಥ. ಮೊದಲನೆಯ ಸಾಲಿನಲ್ಲಿರುವ ಸ್ವಾಪ ಎಂಬ ಶಬ್ದದಲ್ಲಿ ಸು+ಆಪ ಎಂದು ಪದವಿಭಾಗ. ಶುದ್ಧವಾದ ಜಲರಾಶಿಯಲ್ಲಿ ಸ್ನಾನಮಾಡತಕ್ಕವರನ್ನು ದೇವತೆಗಳನ್ನಾಗಿ ಮಾಡುತ್ತೀಯೆ ಎಂದು ಇನ್ನೊಂದು ಅರ್ಥ.

ಇತಿ ಸ್ತುವಂಸ್ತಾಪಸರಾಟ್ ತ್ರಿವೇಣೀಂ
ಶಾಟ್ಯಾ ಸಮಾಚ್ಛಾದ್ಯ ಕಟೀಂ ಕೃಪೀಟೇ |
ದೋರ್ದಂಡಯುಗ್ಮೋದ್ಧೃತ ವೇಣುದಂಡೋಽ
ಘಮರ್ಷಣ ಸ್ನಾನಮನಾ ಬಭೂವ || ೭೧

ಹೀಗೆ ತ್ರಿವೇಣಿಯನ್ನುಸ್ತೋತ್ರಮಾಡಿದ ಆ ಮುನೀಶ್ವರರು ತಮ್ಮ ಕಾಷಾಯವಸ್ತ್ರವನ್ನು ಸೊಂಟಕ್ಕೆ ಬಿಗಿದುಕಟ್ಟಿ ಎರಡು ಕೈಗಳಿಂದಲೂ ವೇಣುದಂಡವನ್ನು ಮೇಲೆತ್ತಿ ಆ ಜಲದಲ್ಲಿ ಅಘಮರ್ಷಣ ಸ್ನಾನವನ್ನು ಮಾಡಲು ಉದ್ದೇಶಿಸಿದರು.

ಟಿಪ್ಪಣಿ: ಕೃಪೀಟ=ಜಲ.

ಸಸ್ನೌ ಪ್ರಯಾಗೇ ಸಹ ಶಿಷ್ಯಸಂಘೈಃ
ಸ್ವಯಂ ಕೃತಾರ್ಥೋऽ ಜನಸಂಗ್ರಹಾರ್ಥೀ |
ಅಸ್ಮಾರಿ ಮಾತಾऽಪಿ ಚ ಸಾ ಪುಪೋಷ
ದಧಾರ ಯಾ ದುಃಖಮಸೋಢ ಭೂರಿ || ೭೨

ಅವರು ಸ್ವಯಂ ಕೃತಾರ್ಥರಾಗಿದ್ದರೂ (ಸ್ನಾನ ಫಲಾಪೇಕ್ಷೆ ಇಲ್ಲದಿದ್ದರೂ) ಲೋಕಸಂಗ್ರಹಕ್ಕಾಗಿ ಶಿಷ್ಯರೊಡನೆ ಪ್ರಯಾಗದಲ್ಲಿ ಅಘಮರ್ಷಣಸ್ನಾನವನ್ನು ಮಾಡಿದರು. ಅಲ್ಲದೆ ತಮ್ಮನ್ನು ಪೋಷಿಸಿದ ಮತ್ತು ಲೋಕದಲ್ಲಿ ಬಹುಕಷ್ಟಗಳನ್ನುನುಭವಿಸಿದ ತಮ್ಮ ತಾಯಿಯನ್ನು ಸ್ಮರಿಸಿಕೊಂಡರು.

ಅನುಷ್ಠಿತಿಂ ದ್ರಾಗವಸಾಯ್ಯ ವಾತೈಃ
ಕಹ್ಲಾರಶೀತೈರುಪಸೇವ್ಯಮಾನಃ |

ತೀರೇ ವಿಶಶ್ರಾಮ ತಮಾಲಮಾಲಿ-
ನ್ಯತ್ರಾಂತರೇ ಶ್ರೂಯತ ಲೋಕವಾರ್ತಾ || ೭೩

ಅನಂತರ ಬೇಗನೆ ತಮ್ಮ ಅನುಷ್ಠಾನವನ್ನು ನೆರವೇರಿಸಿ, ನದೀತೀರದಲ್ಲಿದ್ದ ಹೊಂಗೆಯಮರಗಳ ಕೆಳಗೆ ವಿಶ್ರಮಿಸಿದರು. ಬಿಳಿಯ ಜಲಪುಷ್ಪಗಳ ಮೇಲೆ ಬೀಸಿ ತಂಪಾಗಿ ಸುಳಿಯುತ್ತಿದ್ದ ಗಾಳಿಯು ಅವರನ್ನು ಸೇವಿಸುತ್ತಿತ್ತು. ಆಗ ಜನರು ಹೇಳಿಕೊಳ್ಳುತ್ತಿದ್ದ ಒಂದು ಸುದ್ದಿಯು ಆಚಾರ್ಯರಿಗೆ ಕೇಳಿಸಿತು.

ಗಿರೇರವಪ್ಲುತ್ಯ ಗತಿಃ ಸತಾಂ ಯಃ
ಪ್ರಾಮಾಣ್ಯಮಾಮ್ನಾಯ ಗಿರಾಮವಾದೀತ್ |
ಯಸ್ಯ ಪ್ರಸಾದಾತ್ ತ್ರಿದಿವೌಕಸೋಽಪಿ
ಪ್ರಪೇದಿರೇ ಪ್ರಾಕ್ತನಯಜ್ಞಭಾಗಾನ್ || ೭೪

(ಅದು ಕುಮಾರಿಲಭಟ್ಟರ ಸುದ್ದಿ)" ಯಾರು ವೈದಿಕಸಜ್ಜನರಿಗೆ ಗತಿಯಾಗಿದ್ದರೋ, ಬೆಟ್ಟದಿಂದ ಧುಮುಕಿ ವೇದಪ್ರಾಮಾಣ್ಯವನ್ನು ಸ್ಥಾಪಿಸಿದ್ದರೋ ಯಾರ ಅನುಗ್ರಹದಿಂದ ದೇವತೆಗಳೂ ಸಹ ಹಿಂದಿನಂತೆ ಯಜ್ಞದ ಹವಿರ್ಭಾಗಗಳನ್ನು ಪಡೆಯಲಾರಂಭಿಸಿದರೋ (ಮುಂದಿನ ಶ್ಲೋಕದಲ್ಲಿ ಅನ್ವಯ)

ಸೋಽಯಂ ಗುರೋರುನ್ಮಥನ ಪ್ರಸಕ್ತಂ
ಮಹತ್ತರಂ ದೋಷಮಪಾಕರಿಷ್ಣುಃ |
ಅಶೇಷವೇದಾರ್ಥವಿದಾಸ್ತಿಕತ್ವಾತ್-
ತುಷಾನಲಂ ಪ್ರಾವಿಶದೇಷ ಧೀರಃ|| ೭೫

ಆ ಕುಮಾರಿಲಭಟ್ಟರು ತಮ್ಮ ಬೌದ್ಧಗುರುವಿನ ಮತವನ್ನು ಖಂಡಿಸಿದ್ದಕ್ಕಾಗಿ ಗುರುದ್ರೋಹವಾಯಿತೆಂದು ಬಗೆದು, ಆ ಮಹತ್ತರವಾದ ಪಾಪವನ್ನು ಪರಿಹರಿಸಿ ಕೊಳ್ಳುವುದಕ್ಕಾಗಿ ತುಷಾಗ್ನಿಯನ್ನು ಪ್ರವೇಶಿಸಿಬಿಟ್ಟರು! ಸಮಸ್ತವೇದಾರ್ಥವನ್ನೂ ಬಲ್ಲವರು. ಆಸ್ತಿಕರಾದ್ದರಿಂದ (ಈ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತಿದ್ದಾರೆ) ಎಂತಹ ಧೀರರು!

ಅಯಂ ಹ್ಯಧೀತಾಖಿಲ ವೇದಮಂತ್ರಃ
ಕೂಲಂಕಷಾಲೋಡಿತ ಸರ್ವತಂತ್ರಃ |
ನಿತಾಂತದೂರೀಕೃತ ದುಷ್ಟತಂತ್ರ-
ಸ್ತ್ರೈಲೋಕ್ಯ ವಿಭ್ರಾಮಿತ ಕೀರ್ತಿಯಂತ್ರಃ || ೭೬

"ಇವರು ಸಮಸ್ತವೇದಮಂತ್ರಗಳನ್ನೂ ಅಧ್ಯಯನಮಾಡಿದವರು. ನಿಖಿಲ ಶಾಸ್ತ್ರಗಳನ್ನೂ ಕೂಲಂಕಷವಾಗಿ ಮಥಿಸಿಬಿಟ್ಟಿದ್ದಾರೆ. ದುಷ್ಟಜನರು ಬರೆದ ಗ್ರಂಥಗಳನ್ನು ಖಂಡಿಸಿ ವಿಧ್ವಂಸಮಾಡಿದ್ದಾರೆ. ಮೂರುಲೋಕಗಳಲ್ಲಿಯೂ ಇವರ ಕೀರ್ತಿಹರಡಿಹೋಗಿದೆ!"

ಟಿಪ್ಪಣಿ: ಕುಮಾರಿಲಭಟ್ಟರು"ವೇದಗಳು ಪ್ರಮಾಣಭೂತಗಳಾಗಿದ್ದರೆ ನನಗೆ ಏನೂ ಆಗದಿರಲಿ"ಎಂದು ಘೋಷಿಸಿ ಮಹಡಿಯ ಶಿಖರದಿಂದ ಧುಮುಕಿ ವೇದ ಪ್ರಾಮಾಣ್ಯವನ್ನು ಸ್ಥಾಪಿಸಿದ್ದರು. ಬೌದ್ಧಮತದ ರಹಸ್ಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ಒಬ್ಬ ಬೌದ್ಧಗುರುವನ್ನು ಆಶ್ರಯಿಸಿ, ಆ ಮತದ ತಿರುಳನ್ನು ತಿಳಿದುಕೊಂಡು, ಅನಂತರ ಬೌದ್ಧಮತವನ್ನು ಖಂಡಿಸಿದ್ದರು. ಇದು ಗುರುದ್ರೋಹವೆಂದು ತಿಳಿದು ಪ್ರಾಯಶ್ಚಿತ್ತಕ್ಕಾಗಿ ತುಷಾನಲಪ್ರವೇಶವೆಂಬ ಶಿಕ್ಷೆಯನ್ನು ತಮಗೆ ತಾವೇ ವಿಧಿಸಿಕೊಂಡರು. ತುಷ= ಬತ್ತದ ಹೊಟ್ಟು. ತುಷರಾಶಿಗೆ ಬೆಂಕಿಯನ್ನು ಹೊತ್ತಿಸಿ ಅದರ ಮಧ್ಯದಲ್ಲಿ ಕುಳಿತು ಕ್ರಮವಾಗಿ ಸುಟ್ಟುಹೋಗಿ ಪ್ರಾಣಬಿಡುವುದೇ ಗುರುದ್ರೋಹಕ್ಕೆ ಪ್ರಾಯಶ್ಚಿತ್ತ.

ಶ್ರುತ್ವೇತಿ ತಾಂ ಸತ್ವರಮೇಷ ಗಚ್ಛನ್
ವ್ಯಲೋಕಯತ್ತಂ ತುಷರಾಶಿಸಂಸ್ಥಮ್ ।
ಪ್ರಭಾಕರಾದ್ಯೈಃ ಪ್ರಥಿತಪ್ರಭಾವೈ-
ರುಪಸ್ಥಿತಂ ಸಾಶ್ರುಮುಖೈರ್ವಿನೇಯೈಃ ॥ ೭೭

ಈ ಸುದ್ದಿಯನ್ನು ಕೇಳಿದೊಡನೆ ಶ್ರೀಶಂಕರರು ಥಟ್ಟನೆ ಎದ್ದು ಬೇಗಬೇಗನೆ ಹೋಗಿ ತುಷರಾಶಿಯ ನಡುವೆ ಕುಳಿತಿದ್ದ ಕುಮಾರಿಲಭಟ್ಟರನ್ನು ಕಂಡರು. ಪ್ರಭಾಕರನೇ ಮೊದಲಾದ ಮಹಿಮಾನ್ವಿತಶಿಷ್ಯರು ಕಣ್ಣೀರು ಸುರಿಸುತ್ತ ತಮ್ಮ ಗುರುಗಳ ಸುತ್ತಲೂ ನಿಂತುಕೊಂಡಿದ್ದರು.

ಧೂಮಾಯಮಾನೇನ ತುಷಾನಲೇನ
ಸಂದಹ್ಯಮಾನೇಽಪಿ ವಪುಷ್ಯಶೇಷೇ ।
ಸಂದೃಶ್ಯಮಾನೇನ ಮುಖೇನ ಬಾಷ್ಪ-
ಪರೀತ ಪದ್ಮಶ್ರಿಯಮಾದಧಾನಮ್ ॥ ೭೮

ಹೊಗೆಸುತ್ತಿದ ತುಷಾಗ್ನಿಯಿಂದ ಭಟ್ಟರ ದೇಹವೆಲ್ಲವೂ ಸುಡುತ್ತಿತ್ತು. ಅವರ ಮುಖವು ಮಾತ್ರ ಮೇಲೆ ಕಾಣಿಸುತ್ತಿತ್ತು. ಹೊಗೆಯಿಂದ ಅವರ ಕಣ್ಣಲ್ಲಿ ನೀರು ತುಂಬಿತ್ತು. ಆದರೂ ಅರಳಿದ ಪದ್ಮದಂತೆ ಅವರ ಮುಖವು ಶೋಭಿಸುತ್ತಿತ್ತು.

ದೂರೇ ವಿಧೂತಾಘಮಪಾಂಗಭಂಗ್ಯಾ
ತಂ ದೇಶಿಕಂ ದೃಷ್ಟಿಪಥಾವತೀರ್ಣಮ್ ।
ದದರ್ಶ ಭಟ್ಟೋ ಜ್ವಲದಗ್ನಿಕಲ್ಪೋ
ಜುಗೋಪ ಯೋ ವೇದಪಥಂ ಜಿತಾರಿಃ ॥ ೭೯

ಪ್ರತಿವಾದಿಗಳನ್ನು ಜಯಿಸಿ ವೇದಮಾರ್ಗವನ್ನು ಸಂರಕ್ಷಿಸಿದ ಆ ಭಟ್ಟಪಾದರು ಉರಿಯುತ್ತಿರುವ ಅಗ್ನಿಯಂತೆ (ತುಷರಾಶಿಯ ಮಧ್ಯದಲ್ಲಿ) ಕಾಣಿಸುತ್ತಿದ್ದರು. ಕಟಾಕ್ಷ ಪಾತದಿಂದಲೇ ಪಾಪವನ್ನು ದೂರಕ್ಕೆ ತಳ್ಳಿಬಿಡಲು ಸಮರ್ಥರಾದ ಶ್ರೀಶಂಕರ ದೇಶಿಕರನ್ನು, ಕಣ್ಣಿಗೆ ನಿಲುಕುವಷ್ಟು ದೂರದಲ್ಲಿದ್ದಾಗಲೇ, ಭಟ್ಟಪಾದರು ನೋಡಿದರು.

ಅದೃಷ್ಟಪೂರ್ವಂ ಶ್ರುತಪೂರ್ವವೃತ್ತಂ
ದೃಷ್ಟ್ವಾಽತಿಮೋದಂ ಸ ಜಗಾಮ ಭಟ್ಟಃ |
ಅಚೀಕರಚ್ಛಿಷ್ಯಗಣೈಃ ಸಪರ್ಯಾ-
ಮುಪಾದದೇ ತಾಮಪಿ ದೇಶಿಕೇಂದ್ರಃ || ೮೦

ಕುಮಾರಿಲಭಟ್ಟರು ಶ್ರೀಶಂಕರರನ್ನು ಹಿಂದೆ ನೋಡಿರಲಿಲ್ಲ. ಆದರೆ ಅವರ ಪೂರ್ವವೃತ್ತಾಂತವು ತಿಳಿದಿತ್ತು. ಆಚಾರ್ಯರನ್ನು ಕಂಡೊಡನೆ ಭಟ್ಟರಿಗೆ ಪರಮಾನಂದವಾಯಿತು. (ಅವರು ಶ್ರೀಶಂಕರರೆಂದು ನಿಶ್ಚಯಿಸಿ) ತಮ್ಮ ಶಿಷ್ಯರಿಂದ ಅರ್ಘ್ಯಪಾದ್ಯಾದಿಗಳನ್ನರ್ಪಿಸಿ ಸತ್ಕರಿಸಿದರು. ದೇಶಿಕೇಂದ್ರರು ಆ ಸತ್ಕಾರವನ್ನು ಸ್ವೀಕರಿಸಿದರು.

ಉಪಾತ್ತಭಿಕ್ಷಃ ಪರಿತುಷ್ಟಚಿತ್ತಃ
ಪ್ರದರ್ಶಯಾಮಾಸ ಸ ಭಾಷ್ಯಮಸ್ಮೈ |
ಸರ್ವೋಽಪಿ ನಿಬಂಧೋ ಹ್ಯಮಲೋಽಪಿ ಲೋಕೇ
ಶಿಷ್ಟೇಕ್ಷಿತಃ ಸಂಚರಣಂ ಪ್ರಯಾತಿ || ೮೧

(ನಡೆದ ಸಂಗತಿಯನ್ನು ವಿಚಾರಿಸಿದಮೇಲೆ) ಭಟ್ಟರ ಶಿಷ್ಯರು ಅರ್ಪಿಸಿದ ಭಿಕ್ಷೆಯನ್ನು ಸ್ವೀಕರಿಸಿ ಆಚಾರ್ಯರು ಸಂತೃಪ್ತರಾದರು. ಆಮೇಲೆ ತಮ್ಮ ಭಾಷ್ಯವನ್ನು ಕುಮಾರಿಲರಿಗೆ ತೋರಿಸಿದರು. ಏಕೆಂದರೆ, ಎಲ್ಲ ಗ್ರಂಥವೂ ಎಷ್ಟೇ ಪರಿಶುದ್ಧವಾಗಿದ್ದರೂ ಶಿಷ್ಟಜನರು ನೋಡಿ ಮೆಚ್ಚಿದಾಗಲೇ ಲೋಕದಲ್ಲಿ ಪ್ರಸಿದ್ಧವಾಗುತ್ತದೆ.

ದೃಷ್ಟ್ವಾಽಥ ಭಾಷ್ಯಂ ಹೃಷ್ಟಚೇತಾಃ ಕುಮಾರಃ
ಪ್ರೋಚೇ ವಾಚಂ ಶಂಕರಂ ದೇಶಿಕೇಂದ್ರಮ್ |
ಲೋಕೇ ತ್ವಲ್ಪೋ ಮತ್ಸರಗ್ರಾಮಶಾಲೀ
ಸರ್ವಜ್ಞಾನೋ ನಾಲ್ಪಭಾವಸ್ಯ ಪಾತ್ರಮ್ || ೮೨

ಭಾಷ್ಯವನ್ನು ನೋಡಿ ಕುಮಾರಿಲರಿಗೆ (ಸ್ವಯಂ ಭೇದವಾದಿಯಾಗಿದ್ದರೂ) ಆನಂದವಾಯಿತು. ಲೋಕದಲ್ಲಿ ಕ್ಷುದ್ರಬುದ್ಧಿಯಾದ ಅಲ್ಪನಿಗೆ ಮಾತ್ರ ಹೊಟ್ಟೆಕಿಚ್ಚು

ಇರುತ್ತದೆ. ಸರ್ವಜ್ಞನಾದ ವಿದ್ವಾಂಸನಿಗೆ (ಭಟ್ಟಪಾದರಂಥವರಿಗೆ) ಸಣ್ಣತನವಿರುವುದಿಲ್ಲ. ಅವರು ಶ್ರೀಶಂಕರದೇಶಿಕೇಂದ್ರರನ್ನು ನೋಡಿ ಹೀಗೆಂದರು-

ಅಷ್ಟೌಸಹಸ್ರಾಣಿ ವಿಭಾಂತಿ ವಿದ್ವನ್
ಸದ್ವಾರ್ತಿಕಾನಾಂ ಪ್ರಥಮೇಽತ್ರ ಭಾಷ್ಯೇ |
ಅಹಂ ಯದಿ ಸ್ಯಾಮಗೃಹೀತದೀಕ್ಷೋ
ಧ್ರುವಂ ವಿಧಾಸ್ಯೇ ಸುನಿಬಂಧಮಸ್ಯ || ೮೩

"ವಿದ್ವಾಂಸರೆ, ಈ ಸೂತ್ರಭಾಷ್ಯದ ಪ್ರಥಮಾಧ್ಯಾಯದಲ್ಲಿ ಸರಿಯಾದ ಎಂಟುಸಾವಿರ ವಾರ್ತಿಕಗಳು ಬೇಕೆಂದು ನನಗೆ ತೋರುತ್ತದೆ!ನಾನು ಈ ಪ್ರಾಯಶ್ಚಿತ್ತದೀಕ್ಷೆಯನ್ನು ತೆಗೆದುಕೊಳ್ಳದೆ ಹೋಗಿದ್ದರೆ ನಿಶ್ಚಯವಾಗಿ ಈ ವಾರ್ತಿಕನಿಬಂಧವನ್ನು ರಚಿಸುತ್ತಿದ್ದೆ.

ಭವಾದೃಶಾಂ ದರ್ಶನಮೇವ ಲೋಕೇ
ವಿಶೇಷತೋಽಸ್ಮಿನ್ ಸಮಯೇ ದುರಾಪಮ್ |
ಪುರಾಽರ್ಜಿತೈಃ ಪುಣ್ಯಚಯೈಃ ಕಥಂಚಿತ್
ತ್ವಮದ್ಯ ಮೇ ದೃಷ್ಟಿಪಥಂ ಗತೋಽಭೂಃ || ೮೪

"ನಿಮ್ಮಂಥವರ ದರ್ಶನವು, ಅದರಲ್ಲಿಯೂ ವಿಶೇಷವಾಗಿ ಇಂತಹ ಸಮಯದಲ್ಲಿ, ದುರ್ಲಭವೇ ಸರಿ. ನನ್ನ ಪೂರ್ವಾರ್ಜಿತ ಪುಣ್ಯರಾಶಿಗಳಿಂದಲೇ ನೀವು ಈಗ ನನ್ನ ದೃಷ್ಟಿಗೆ ಗೋಚರರಾದಿರಿ.

ಅಸಾರಸಂಸಾರ ಪಯೋಽಬ್ಧಿಮಧ್ಯೇ
ನಿಮಜ್ಜತಾಂ ಸದ್ಭಿರುದಾರವೃತ್ತೈಃ |
ಭವಾದೃಶೈಃ ಸಂಗತಿರೇವ ಸಾಧ್ಯಾ
ನಾನ್ಯಸ್ತದುತ್ತಾರವಿಧಾವುಪಾಯಃ || ೮೫

"ನಿಃಸಾರವಾದ ಈ ಸಂಸಾರಸಾಗರದಲ್ಲಿ ಮುಳುಗಿ ಹೋಗುವವರಿಗೆ ಉದಾರಚರಿತರಾದ ನಿಮ್ಮಂತಹ ಸಜ್ಜನರ ಸಹವಾಸವೇ ದೊರಕಬೇಕು. ಈ ಸಂಸಾರ ಸಮುದ್ರದಿಂದ ಮೇಲೆ ಬರುವುದಕ್ಕೆ ಬೇರೆ ದಾರಿಯೇ ಇಲ್ಲ.

ಚಿರಂ ದಿದೃಕ್ಷೇ ಭಗವಂತಮಿತ್ಥಂ
ತ್ವಮದ್ಯ ಮೇ ದೃಷ್ಟಿಪಥಂ ಗತೋಽಭೂಃ |
ನ ಹ್ಯತ್ರ ಸಂಸಾರಪಥೇ ನರಾಣಾಂ
ಸ್ವೇಚ್ಛಾವಿಧೇಯೋಽಭಿಮತೇನ ಯೋಗಃ || ೮೬

"ಪೂಜ್ಯರಾದ ನಿಮ್ಮನ್ನು ಸಂದರ್ಶಿಸಬೇಕೆಂದು ಬಹಳಕಾಲದಿಂದ ಬಯಸಿದ್ದೆನು. ಈ ಪ್ರಕಾರದಲ್ಲಿ ಈ ದಿನ ನೀವೇ ನನಗೆ ಕಾಣಿಸಿಕೊಂಡಿರಿ. ಈ ಸಂಸಾರದಲ್ಲಿ ಮನುಷ್ಯರಿಗೆ ಇಷ್ಟವಾದವರೊಡನೆ ದರ್ಶನಯೋಗವು ನಮ್ಮ ಬಯಕೆಯಂತೆ ಆಗುವುದಿಲ್ಲವಷ್ಟೆ.

ಯುನಕ್ತಿ ಕಾಲಃ ಕ್ವಚಿದಿಷ್ಟವಸ್ತುನಾ
ಕ್ವಚಿತ್ತ್ವರಿಷ್ಟೇನ ಚ ನೀಚವಸ್ತುನಾ ।
ತಥೈವ ಸಂಯೋಜ್ಯ ವಿಯೋಜಯತ್ಯಸೌ
ಸುಖಾಸುಖೇ ಕಾಲಕೃತೇ ಪ್ರವೇದ್ಮ್ಯತಃ ॥ ೮೭

"ಒಂದೊಂದು ಸಲ ಕಾಲವು ಇಷ್ಟವಸ್ತುವಿನೊಡನೆ ಕೂಡಿಸುತ್ತದೆ. ಇನ್ನೊಂದು ಸಲ ಅನಿಷ್ಟವಾದ ನೀಚವಸ್ತುವಿನೊಡನೆ ಸೇರಿಸುತ್ತದೆ. ಹಾಗೆಯೇ ಈ ಕಾಲವು ಸುಖದುಃಖಗಳನ್ನು ಒದಗಿಸುತ್ತದೆ, ಅಗಲಿಸುತ್ತದೆ. ಎಲ್ಲವೂ ಕಾಲವಶವಾದ್ದೆಂದು ನಾನು ತಿಳಿಯುತ್ತೇನೆ.

ಕೃತೋ ನಿಬಂಧೋ ನಿರಣಾಯಿ ಪಂಥಾ
ನಿರಾಸಿ ನೈಯಾಯಿಕಯುಕ್ತಿಜಾಲಮ್ ।
ತಥಾಽನ್ವಭೂವಂ ವಿಷಯೋತ್ಥಜಾತಂ
ನ ಕಾಲಮೇನಂ ಪರಿಹರ್ತುಮೀಶೇ ॥ ೮೮

"ನಾನು ಗ್ರಂಥವನ್ನು ರಚಿಸಿದೆನು. ವೈದಿಕಮಾರ್ಗವನ್ನು ನಿರ್ಣಯಿಸಿದೆನು. ನೈಯಾಯಿಕರ ಯುಕ್ತಿಜಾಲವನ್ನು ತುಂಡರಿಸಿದೆನು. ಹಾಗೆಯೇ ವನಿತಾದಿವಿಷಯಗಳಿಂದ ಬರುವ ಸುಖದುಃಖಗಳನ್ನೂ ಅನುಭವಿಸಿದೆನು. ಕಾಲಪ್ರಾಪ್ತವಾದ ಇದನ್ನು ತಪ್ಪಿಸಿಕೊಳ್ಳಲಾರೆ.

ನಿರಾಸ್ಥಮೀಶಂ ಶ್ರುತಿಲೋಕಸಿದ್ಧಂ
ಶ್ರುತೇಃ ಸ್ವತೋ ಮಾತ್ವಮುದಾಹರಿಷ್ಯನ್ ।
ನ ನಿಹ್ನುವೇ ಯೇನ ವಿನಾ ಪ್ರಪಂಚಃ
ಸೌಖ್ಯಾಯ ಕಲ್ಪೇತ ನ ಜಾತು ವಿದ್ವನ್ ॥ ೮೯

"ಶ್ರುತಿಗಳಿಂದಲೂ ಲೌಕಿಕಯುಕ್ತಿಗಳಿಂದಲೂ ಈಶ್ವರನಿದ್ದಾನೆಂದು ಸಿದ್ಧವಾಗುತ್ತದೆ. ಆದರೂ ಶ್ರುತಿಗಳಿಗೆ ಸ್ವತಃಪ್ರಾಮಾಣ್ಯವನ್ನು ಸ್ಥಾಪಿಸುವುದಕ್ಕೋಸ್ಕರ ಈಶ್ವರನೇ ಇಲ್ಲವೆಂದು ನಿರಾಕರಿಸಿದೆನು. ವಿದ್ವಾಂಸರಾದ ಯತಿಗಳೆ, ಈಶ್ವರನಿಲ್ಲದಿದ್ದರೆ ಈ ಪ್ರಪಂಚವು ಸೌಖ್ಯವನ್ನು ಕಂಡೀತೆ? ಪರಮೇಶ್ವರನಿಲ್ಲವೆಂದು ನಾನು ಎಂದಿಗೂ ಅಪಲಾಪಮಾಡಲಾರೆ!

ಟಿಪ್ಪಣಿ: ವೇದವು ಸ್ವತಃ ಪ್ರಮಾಣವಾದದ್ದು. ಈಶ್ವರನು ಹೇಳಿದ್ದರಿಂದ ಪ್ರಮಾಣವೆಂದು ಹೇಳಲಾಗದು-ಎಂದು ಸ್ಥಾಪಿಸುವುದಕ್ಕಾಗಿ ಈಶ್ವರನೇ ಇಲ್ಲವೆಂದು ವಾದಿಸಿದ್ದೇನೆ. ವೇದವು ಅನಾದಿಯೆಂದು ಸ್ಥಾಪಿಸಿದ್ದೇನೆ- ಎಂದು ಅಭಿಪ್ರಾಯ.

ತಥಾಗತಾಕ್ರಾಂತಮಭೂದಶೇಷಂ
ಸ ವೈದಿಕೋಽಧ್ವಾ ವಿರಲೀಬಭೂವ |
ಪರೀಕ್ಷ್ಯ ತೇಷಾಂ ವಿಜಯಾಯ ಮಾರ್ಗಂ
ಪ್ರಾವರ್ತಿ ಸಂತ್ರಾತುಮನಾಃ ಪುರಾಣಮ್ || ೬೦

"ಎಲ್ಲೆಲ್ಲಿಯೂ ಬೌದ್ಧಮತವು ಆಕ್ರಮಿಸಿಬಿಟ್ಟಿತು. ವೈದಿಕಮಾರ್ಗವು ವಿರಳವಾಯಿತು. ಆದ್ದರಿಂದ ಬೌದ್ಧಮತವನ್ನು ಸರಿಯಾಗಿ ಪರೀಕ್ಷಿಸಿ ಜಯಿಸಬೇಕೆಂದೂ ಪ್ರಾಚೀನವಾದ ವೇದಮಾರ್ಗವನ್ನು ರಕ್ಷಿಸಬೇಕೆಂದೂ ಮನುಸ್ಸುಮಾಡಿ ಕಾರ್ಯಪ್ರವೃತ್ತನಾದೆನು.

ಸಶಿಷ್ಯಸಂಘಾಃ ಪ್ರವಿಶಂತಿ ರಾಜ್ಞಾಂ
ಗೇಹಂ ತದಾದಿ ಸ್ವವಶೇ ವಿಧಾತುಮ್ |
ರಾಜಾ ಮದೀಯೋಽಜಿರಮಸ್ಮದೀಯಂ
ತದಾದ್ರಿಯಧ್ವಂ ನ ತು ವೇದಮಾರ್ಗಮ್ || ೬೧

ಈ ಬೌದ್ಧರು ಎಲ್ಲರನ್ನೂ ತಮ್ಮ ವಶಮಾಡಿಕೊಳ್ಳಬೇಕೆಂದು ಶಿಷ್ಯಸಂಘದೊಡನೆ ರಾಜರ ಅರಮನೆಗೆ ಹೋಗುತ್ತಾರೆ. ಆಮೇಲೆ "ಈ ರಾಜನು ನಮ್ಮವನು, ಈ ದೇಶವೆಲ್ಲವೂ ನಮ್ಮದು, ನಮ್ಮ ಮತವನ್ನು ಗೌರವಿಸಿರಿ, ವೇದ ಮಾರ್ಗವನ್ನು ಅನುಸರಿಸಬೇಡಿರಿ.

ಟಿಪ್ಪಣಿ: ಅಜಿರಶಬ್ದಕ್ಕೆ ದೇಶವೆಂಬ ಅರ್ಥ ಮೇದಿನೀಕೋಶದಲ್ಲಿದೆ-'ಅಜಿರಂ ಪ್ರಾಂಗಣೇ ಚಾಂತೇ ವಿಷಯೇ ದರ್ದುರೇಽನಿಲೇ'.ವಿಷಯ = ದೇಶ.

ವೇದೋಽಪ್ರಮಾಣಂ ಬಹುಮಾನಬಾಧಾತ್
ಪರಸ್ಪರವ್ಯಾಹತ ವಾಚಕತ್ವಾತ್ |
ಏವಂ ವದಂತೋ ವಿಚರಂತಿ ಲೋಕೇ
ನ ಕಾಚಿದೇಷಾಂ ಪ್ರತಿಪತ್ತಿರಾಸೀತ್ || ೬೨

ವೇದವು ಪ್ರಮಾಣವಲ್ಲ, ಅದು ಅನೇಕ ಪ್ರಮಾಣಗಳಿಗೆ ವಿರುದ್ಧವಾಗಿದೆ. ಪರಸ್ಪರವಿರುದ್ಧವಾದ ವಿಷಯವನ್ನು ವೇದವು ಹೇಳುವುದರಿಂದ ಪ್ರಮಾಣವಾಗುವುದಿಲ್ಲ" ಎಂದು ಪ್ರಚಾರಮಾಡುತ್ತ ದೇಶದಲ್ಲಿಸುತ್ತಾಡುತ್ತಾರೆ. ಇವರಿಗೆ ಪ್ರತೀಕಾರವೇ ಇಲ್ಲದೆ ಹೋಯಿತು.

ಅವಾದಿಷಂ ವೇದವಿಘಾತದಕ್ಷೈಃ
 ತಾನ್ನಾಶಕಂ ಜೇತುಮಬುಧ್ಯಮಾನಃ |
ತದೀಯ ಸಿದ್ಧಾಂತರಹಸ್ಯವಾರ್ಧೀ-
 ನ್ನಿಷೇಧ್ಯಬೋಧಾದ್ಧಿ ನಿಷೇಧ್ಯಬಾಧಃ || ೯೩

"ಆದ್ದರಿಂದ ನಾನು ಈ ವೇದ ವಿರೋಧಿಗಳೊಡನೆ ವಾದಮಾಡಿದೆನು. ಆದರೆ ಸಮುದ್ರದಂತೆ ಗಹನವಾದ ಬೌದ್ಧಸಿದ್ಧಾಂತರಹಸ್ಯಗಳು ನನಗೆ ಗೊತ್ತಿಲ್ಲದ್ದರಿಂದ ಅವರನ್ನು ಗೆಲ್ಲಲಾಗಲಿಲ್ಲ. ಖಂಡಿಸಬೇಕಾದ ವಿಷಯವನ್ನು ಚೆನ್ನಾಗಿ ತಿಳಿದು ಕೊಂಡಿದ್ದರಲ್ಲವೆ ಅದನ್ನು ಖಂಡಿಸಲು ಸಾಧ್ಯ?

ತದಾ ತದೀಯಂ ಶರಣಂ ಪ್ರಪನ್ನಃ
 ಸಿದ್ಧಾಂತಮಶ್ರೌಷಮನುದ್ಧತಾತ್ಮಾ |
ಅದೂದುಷದ್ವೈದಿಕಮೇವ ಮಾರ್ಗಂ
 ತಥಾಗತೋ ಜಾತು ಕುಶಾಗ್ರಬುದ್ಧಿಃ || ೯೪

"ಅದಕ್ಕೋಸ್ಕರ ನಾನು ಔದ್ಧತ್ಯವನ್ನು ತ್ಯಜಿಸಿ ಒಬ್ಬ ಬೌದ್ಧಗುರುವಿಗೆ ಶರಣಾಗಿ ಅವರ ಸಿದ್ಧಾಂತವನ್ನು ಕೇಳಿ ತಿಳಿದುಕೊಂಡೆನು. ಬುದ್ಧಿಶಾಲಿಯಾದ ಆ ಬೌದ್ಧಗುರುವು ಒಂದು ಸಲ ವೇದಮಾರ್ಗವನ್ನು ದೂಷಿಸಿದನು.

ತದಾಽಪತನ್ಮೇ ಸಹಸಾಽಶ್ರುಬಿಂದುಃ
 ತಚ್ಚಾವಿದುಃ ಪಾರ್ಶ್ವನಿವಾಸಿನೋಽನ್ಯೇ |
ತದಾಪ್ರಭೃತ್ಯೇವ ವಿವೇಶ ಶಂಕಾ
 ಮಯ್ಯಾಪ್ತಭಾವಂ ಪರಿಹೃತ್ಯ ತೇಷಾಮ್ || ೯೫

"ಆ ಸಮಯದಲ್ಲಿ ವೇದನಿಂದೆಯನ್ನು ಕೇಳಿ ನನ್ನ ಕಣ್ಣಿಂದ ಅಶ್ರುಬಿಂದುಗಳುದುರಿದವು. ನನ್ನ ಪಕ್ಕದಲ್ಲಿದ್ದ ಇತರರು ಇದನ್ನು ಕಂಡರು. ಆಗಿನಿಂದಲೇ ಅವರಿಗೆ ನನ್ನ ವಿಷಯದಲ್ಲಿ ಸಂದೇಹ ಹುಟ್ಟಿತು. ನನ್ನಲ್ಲಿ ಆಪ್ತಭಾವವನ್ನು ತ್ಯಜಿಸಿದರು.

ವಿಪಕ್ಷಪಾಠೀ ಬಲವಾನ್ ದ್ವಿಜಾತಿಃ
 ಪ್ರತ್ಯಾದದದ್ದರ್ಶನ ಮಸ್ಮದೀಯಮ್ |
ಉಚ್ಚಾಟನೀಯಃ ಕಥಮಪ್ಯುಪಾಯೈ-
 ರ್ನೈತಾದೃಶಃ ಸ್ಥಾಪಯಿತುಂ ಹಿ ಯೋಗ್ಯಃ || ೯೬

"(ಬುದ್ಧಿ ಶಕ್ತಿಯಲ್ಲಿ)ಪ್ರಬಲನಾದ ಈ ಬ್ರಾಹ್ಮಣನು ನಮಗೆ ವಿರೋಧಿಯಾಗಿ ಕಲಿಯಲು ಬಂದಿದ್ದಾನೆ. ನಮ್ಮ ಸೌಗತಶಾಸ್ತ್ರವನ್ನು ಇವನು ತಿಳಿದುಕೊಂಡುಬಿಟ್ಟನು. ಹೇಗಾದರೂ ಉಪಾಯಗಳಿಂದ ಇವನನ್ನು ಉಚ್ಚಾಟನೆಮಾಡಬೇಕು. ಇಂಥವನು ನಮ್ಮ ನಡುವೆ ಇರಲು ಯೋಗ್ಯನಲ್ಲ."

ಸಂಮಂತ್ರ್ಯ ಚೇತ್ಥಂ ಕೃತನಿಶ್ಚಯಾಸ್ತೇ
ಯೇ ಚಾಪರೇಽಹಿಂಸನವಾದಶೀಲಾಃ |
ನ್ಯಪಾತಯನ್ನುಚ್ಚತರಾತ್ ಪ್ರಮತ್ತಂ
ಮಾಮಗ್ರಸೌಧಾದ್ವಿನಿಪಾತ ಭೀರುಮ್ || ೯೭

ಹೀಗೆ ತಮ್ಮೊಳಗೆ ಮಾತಾಡಿಕೊಂಡು ನನ್ನನ್ನು ಬಹಿಷ್ಕರಿಸಲು ನಿಶ್ಚಯಿಸಿದರು. "ಅಹಿಂಸಾವಾದಿ"ಗಳೆಂದು ಹೇಳಿಕೊಳ್ಳುವ ಇನ್ನೂಕೆಲವರು ಸೇರಿ, ನನಗೆ ಗೊತ್ತಾಗದಂತೆ ಮಹಡಿಯ ತುದಿಯಿಂದ ಇದ್ದಕ್ಕಿದ್ದಂತೆ ನನ್ನನ್ನು ಕೆಳಗೆ ತಳ್ಳಿದರು!ಬಿದ್ದುಹೋಗುತ್ತೇನೆಂದು ನನಗೆ ಭಯವಾಯಿತು.

ಪತನ್ ಪತನ್ ಸೌಧತಲಾನ್ಯರೋರುಹಂ
ಯದಿ ಪ್ರಮಾಣಂ ಶ್ರುತಯೋ ಭವಂತಿ |
ಜೀವೇಯಮಸ್ಮಿನ್ ಪತಿತೋಽಸಮಸ್ಥಲೇ
ಮಜ್ಜೀವನೇ ತಚ್ಛ್ರುತಿಮಾನತಾ ಗತಿಃ || ೯೮

ಹೀಗೆ ಮತ್ತೆ ಮತ್ತೆ ಬೀಳುತ್ತಲೇ ಮಹಡಿಯನ್ನು ಹತ್ತುತ್ತಿದ್ದೆನು (ನಾನು ಮಹಡಿಯನ್ನು ಹತ್ತುತ್ತಿದ್ದಾಗ ಮತ್ತೆ ಮತ್ತೆ ತಳ್ಳುತ್ತಿದ್ದರೆಂದು ಅಭಿಪ್ರಾಯ). ಆಗ ನಾನು ವೇದಗಳು ಪ್ರಮಾಣವೇ ಆಗಿದ್ದರೆ ನಾನು ವಿಷಮಸ್ಥಳದಲ್ಲಿ ಬಿದ್ದರೂ ಬದುಕುವೆನು. ನನ್ನ ಬದುಕುವಿಕೆಗೆ ಶ್ರುತಿಪ್ರಾಮಾಣ್ಯವೇ ಗತಿ ಎಂದು ಹೇಳಿದೆನು.

ಯದೀಹ ಸಂದೇಹ ಪದಪ್ರಯೋಗಾತ್
ವ್ಯಾಜೇನ ಶಾಸ್ತ್ರಶ್ರವಣಾಚ್ಚ ಹೇತೋಃ |
ಮಮೋಚ್ಚದೇಶಾತ್ಪತತೋ ವ್ಯನಂಕ್ಷೀತ್
ತದೇಕಚಕ್ಷುರ್ವಿಧಿಕಲ್ಪನಾ ಸಾ || ೯೯

"ನಾನು "ಯದಿ"ಎಂದು ಶ್ರುತಿಯು ಪ್ರಮಾಣವಾಗಿದ್ದರೆ- ಎಂಬುದಾಗಿ ಸಂದೇಹಸೂಚಕ ಪದವನ್ನು ಪ್ರಯೋಗಮಾಡಿದ್ದರಿಂದಲೂ, ಬೇರೊಂದು ನೆವದಿಂದ ಬೌದ್ಧಶಾಸ್ತ್ರವನ್ನು ಶ್ರವಣಮಾಡಿದ್ದರಿಂದಲೂ ನಾನು ಎತ್ತರದಿಂದ ಬೀಳುವಾಗ ನನ್ನ ಒಂದು ಕಣ್ಣು ಹೋಯಿತು. ಇದು ದೈವಕಲ್ಪಿತವಾದದ್ದು.

ಏಕಾಕ್ಷರಸ್ಯಾಪಿ ಗುರುಃ ಪ್ರದಾತಾ
ಶಾಸ್ತ್ರೋಪದೇಷ್ಟಾ ಕಿಮು ಭಾಷಣೀಯಮ್ |
ಅಹಂ ಹಿ ಸರ್ವಜ್ಞಗುರೋರಧೀತ್ಯ
ಪ್ರತ್ಯಾದಿಶೇ ತೇನ ಗುರೋರ್ಮಹಾಗಃ || ೧೦೦

"ಒಂದು ಅಕ್ಷರವನ್ನು ಕಲಿಸಿದವನೂ ಗುರುವಾಗುತ್ತಾನೆ. ಹೀಗಿರುವಾಗ ಒಂದು ಶಾಸ್ತ್ರವನ್ನು ಉಪದೇಶಿಸಿದವನು ಗುರುವೆಂದು ಹೇಳಬೇಕಾದ್ದೇನಿದೆ?ನಾನು ಬೌದ್ಧಗುರುವಿನಿಂದ ಶಾಸ್ತ್ರಾಧ್ಯಯನವನ್ನು ಮಾಡಿ ಆತನ ಮತವನ್ನೇ ಖಂಡಿಸಿದೆ. ಇದು ಗುರುದ್ರೋಹವೆಂಬ ಒಂದು ಮಹಾಪರಾಧ.

ಟಿಪ್ಪಣಿ: ಕಡೆಯ ಸಾಲಿನಲ್ಲಿರುವ 'ಪ್ರತ್ಯಾದಿಶೇ'ಎಂಬುದು ' ಪ್ರತ್ಯಾದಿಶಂ'ಎಂದು ಇರಬೇಕಾಗಿತ್ತು.

ತದೇವಮಿತ್ಥಂ ಸುಗತಾದಧೀತ್ಯ
ಪ್ರಾಘಾತಯಂ ತತ್ಕುಲಮೇವ ಪೂರ್ವಮ್ |
ಜೈಮಿನ್ಯುಪಜ್ಞೇಽಭಿನಿವಿಷ್ಟಚೇತಾಃ
ಶಾಸ್ತ್ರೇ ನಿರಾಸ್ಥಂ ಪರಮೇಶ್ವರಂ ಚ || ೧೦೧

"ಈ ಪ್ರಕಾರ ಬೌದ್ಧನಿಂದ ಕಲಿತು ಬೌದ್ಧಕುಲವನ್ನೇ ನಾಶಪಡಿಸಿದೆನು. ಅಲ್ಲದೆ ಜೈಮಿನಿ ಪ್ರಣೀತವಾದ ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ಅಭಿನಿವೇಶವನ್ನು ತಾಳಿ ಪರಮೇಶ್ವರನನ್ನೂ ನಿರಾಕರಿಸಿದೆನು

ದೋಷದ್ವಯಸ್ಯಾಸ್ಯ ಚಿಕೀರ್ಷುರರ್ಹನ್
ಯಥೋದಿತಾಂ ನಿಷ್ಕೃತಿಮಾಶ್ರಯಾಶಮ್ |
ಪ್ರಾವಿಕ್ಷಮೇಷಾ ಪುನರುಕ್ತಭೂತಾ
ಜಾತಾ ಭವತ್ಪಾದನಿರೀಕ್ಷಣೇನ || ೧೦೨

"ಈ ದೋಷದ್ವಯಕ್ಕೆ ಶಾಸ್ತ್ರೋಕ್ತವಾದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂದು ತುಷಾಗ್ನಿಯನ್ನು ಪ್ರವೇಶಿಸಿದ್ದೇನೆ. ಪೂಜ್ಯರೆ, ನಿಮ್ಮ ಪಾದದರ್ಶನದಿಂದ ಈ ಪ್ರಾಯಶ್ಚಿತ್ತವು ಪುನರುಕ್ತವಾಯಿತು.

ಟಿಪ್ಪಣಿ: ನಿಮ್ಮ ಪಾದದರ್ಶನದಿಂದ ದೋಷದ್ವಯವು ಪರಿಹಾರವಾಗುತ್ತದೆ. ಆದ್ದರಿಂದ ಎರಡು ಸಲ ಪ್ರಾಯಶ್ಚಿತ್ತ ಮಾಡಿಕೊಂಡಂತಾಯಿತೆಂದು ಅಭಿಪ್ರಾಯ.

ಭಾಷ್ಯಂ ಪ್ರಣೀತಂ ಭವತೇತಿ ಯೋಗಿನ್
ಆಕರ್ಣ್ಯ ತತ್ರಾಪಿ ವಿಧಾಯ ವೃತ್ತಿಮ್ |
ಯಶೋಽಧಿಗಚ್ಛೇಯಮಿತಿ ಸ್ಮ ವಾಂಛಾ
ಸ್ಥಿತಾ ಪುರಾ ಸಂಪ್ರತಿ ಕಿಂ ತದುಕ್ತ್ಯಾ || ೧೦೩

"ಯೋಗೀಶ್ವರರೆ, ನಿಮ್ಮಿಂದ ಸೂತ್ರಭಾಷ್ಯವು ಪ್ರಣೀತವಾಗಿದೆ ಎಂದು ಕೇಳಿದ್ದೆ. ಅದಕ್ಕೂ ಒಂದು ವೃತ್ತಿಯನ್ನು ಬರೆದು ಕೀರ್ತಿಯನ್ನು ಪಡೆಯಬೇಕೆಂದು ನನಗೆ ಆಸೆ ಇತ್ತು. ಇದು ಹಿಂದಿನ ಕಥೆ. ಈಗ ಅದನ್ನು ಹೇಳಿದ್ದರಿಂದ ಏನಾಗುತ್ತದೆ?

ಜಾನೇ ಭವಂತಮಹಮಾರ್ಯಜನಾರ್ಥಜಾತಂ
ಅದ್ವೈತ ರಕ್ಷಣಕೃತೇ ವಿಹಿತಾವತಾರಮ್ |
ಪ್ರಾಗೇವ ಚೇನ್ನಯನವರ್ತ್ಮ ಕೃತಾರ್ಥಯೇಥಾಃ
ಪಾಪಕ್ಷಯಾಯ ನ ತದೇದೃಶ ಮಾಚರಿಷ್ಯಮ್ || ೧೦೪

"ಆರ್ಯರಾದ ವೈದಿಕ ಜನರ ಹಿತಕ್ಕಾಗಿ ಅದ್ವೈತ ಸಿದ್ಧಾಂತವನ್ನು ರಕ್ಷಿಸಬೇಕೆಂದು ನೀವು ಅವತರಿಸಿದ್ದೀರೆಂದು ನನಗೆ ಗೊತ್ತಿದೆ. ಮೊದಲೇ ನೀವು ನನ್ನ ದೃಷ್ಟಿಮಾರ್ಗವನ್ನು ಕೃತಾರ್ಥಗೊಳಿಸಿದ್ದರೆ (ಮೊದಲೇ ನೀವು ಕಾಣಿಸಿದ್ದರೆ) ಪಾಪಕ್ಷಯಕ್ಕಾಗಿ ನಾನು ಇಂತಹ ಕಾರ್ಯವನ್ನು ಮಾಡುತ್ತಿರಲಿಲ್ಲ.

ಪ್ರಾಯೋಽಧುನಾ ತದುಭಯ ಪ್ರಭವಾಘಶಾಂತ್ಯೈ
ಪ್ರಾವಿಕ್ಷಮಾರ್ಯ ತುಷಪಾವಕಮಾತ್ತದೀಕ್ಷಃ |
ಭಾಗ್ಯಂ ನ ಮೇಽಜನಿ ಹಿ ಶಾಬರಭಾಷ್ಯವ ತ್ತ್ವದ್-
ಭಾಷ್ಯೇಽಪಿ ಕಿಂಚನ ವಿಲಿಖ್ಯ ಯಶೋಽಧಿಗಂತುಮ್ || ೧೦೫

ಹೇ ಪೂಜ್ಯರೆ, ಆ ಎರಡು ಅನುಚಿತಕಾರ್ಯಗಳಿಂದ ಆದ ಪಾಪದ ಶಾಂತಿಗೋಸ್ಕರ ದೀಕ್ಷಾಬದ್ಧನಾಗಿ ಈ ತುಷಾಗ್ನಿಯನ್ನು ಪ್ರವೇಶಿಸಿದ್ದೇನೆ. ಶಾಬರ ಭಾಷ್ಯಕ್ಕೆ ಬರೆದಂತೆ ನಿಮ್ಮ ಭಾಷ್ಯಕ್ಕೂ ಏನಾದರೂ ಬರೆದು ಯಶಸ್ಸನ್ನು ಪಡೆಯಲು ನನಗೆ ಭಾಗ್ಯವಿಲ್ಲ" ಎಂದರು.

ಇತ್ಯೂಚಿವಾಂಸಮಥ ಭಟ್ಟಕುಮಾರಿಲಂ ತಂ
ಈಷದ್ವಿಕಸ್ವರ ಮುಖಾಂಬುಜಮಾಹ ಮೌನೀ |
ಶ್ರುತ್ಯರ್ಥಕರ್ಮ ವಿಮುಖಾನ್ ಸುಗತಾನ್ ನಿಹಂತುಂ
ಜಾತಂ ಗುಹಂ ಭುವಿ ಭವಂತಮಹಂ ತು ಜಾನೇ || ೧೦೬

ಈ ಪ್ರಕಾರ ಹೇಳಿದ ಕುಮಾರಿಲಭಟ್ಟರನ್ನು ನೋಡಿ ಮುನೀಶ್ವರರಾದ ಶ್ರೀಶಂಕರರು ತಮ್ಮ ಮುಖಕಮಲವನ್ನು ಕೊಂಚ ಅರಳಿಸಿ (ಮುಗುಳ್ನಗೆಯನ್ನು ಬೀರುತ್ತ) ಹೀಗೆಂದರು "ಭಟ್ಟಪಾದರೆ, ಶ್ರುತಿವಿಹಿತಕರ್ಮಗಳಿಗೆ ವಿರೋಧಿಗಳಾದ ಸೌಗತರನ್ನು ನಿರಾಕರಿಸುವುದಕ್ಕಾಗಿ ಭೂಮಿಯಲ್ಲಿ ಅವತರಿಸಿದ ಸ್ಕಂದನೇ ನೀವೆಂದು ತಿಳಿದಿದ್ದೇನೆ.

ಸಂಭಾವನಾಪಿ ಭವತೋ ನ ಹಿ ಪಾತಕಸ್ಯ
ಸತ್ಯಂ ವ್ರತಂ ಚರಸಿ ಸಜ್ಜನಶಿಕ್ಷಣಾಯ |
ಉಜ್ಜೀವಯಾಮಿ ಕರಕಾಂಬುಕಣೋಕ್ಷಣೇನ
ಭಾಷ್ಯೇಽಪಿ ಮೇ ರಚಯ ವಾರ್ತಿಕಮಂಗ ಭವ್ಯಮ್ || ೧೦೭

ನಿಮಗೆ ಪಾಪವು ತಗುಲಿತೆಂಬ ಸಂಭಾವನೆಯು ಸಲ್ಲದು. ಸಜ್ಜನರಿಗೆ ಶಿಕ್ಷಣವನ್ನೀಯುವುದಕ್ಕಾಗಿಯೇ ನಿಜವಾಗಿಯೂ ಈ ಪ್ರಾಯಶ್ಚಿತ್ತವ್ರತವನ್ನು ಕೈಗೊಂಡಿದ್ದೀರಿ. ಒಳ್ಳೆಯದು. ಈ ಕಮಂಡಲುವಿನಲ್ಲಿರುವ ಜಲಕಣಗಳನ್ನು ಚಿಮುಕಿಸಿ ನಿಮ್ಮನ್ನು ಬದುಕಿಸುತ್ತೇನೆ. ನನ್ನ ಭಾಷ್ಯದಮೇಲೂ ಭವ್ಯವಾದ ವಾರ್ತಿಕವನ್ನು ರಚಿಸಿ"ಎಂದು ಹೇಳಿದರು.

ಇತ್ಯೂಚಿವಾಂಸಂ ವಿಬುಧಾವತಂಸಂ
ಸ ಬ್ರಹ್ಮವಿದ್ ಬ್ರಹ್ಮವಿದಾಂ ವರೇಣ್ಯಮ್ |
ವಿದ್ಯಾಧನಃ ಶಾಂತಿಧನಾಗ್ರಗಣ್ಯಂ
ಸಪ್ರಶ್ರಯಂ ವಾಚಮುವಾಚ ಭೂಯಃ || ೧೦೮

ಪಂಡಿತಶಿರೋಮಣಿಗಳೂ ಬ್ರಹ್ಮವಿದರಲ್ಲಿ ವರೇಣ್ಯರೂ ಶಾಂತಿಧನರಾದ ತಪಸ್ವಿಗಳಲ್ಲಿ ಅಗ್ರಗಣ್ಯರೂ ಆದ ಆಚಾರ್ಯರು ಈ ರೀತಿ ನುಡಿಯಲಾಗಿ ಧರ್ಮಜ್ಞರೂ ವಿದ್ಯಾಧನರೂ ಆದ ಭಟ್ಟಪಾದರು ವಿನಯದಿಂದ ಹೀಗೆಂದರು-

ನಾರ್ಹಾಮಿ ಶುದ್ಧಮಪಿ ಲೋಕವಿರುದ್ಧಕೃತ್ಯಂ
ಕರ್ತುಂ ಮಯೀಡ್ಯ ಮಹಿತೋಕ್ತಿರಿಯಂ ತವಾರ್ಹಾ |
ಆಜಾನತೋಽತಿಕುಟಿಲೇಽಪಿ ಜನೇ ಮಹಾಂತ-
ಸ್ತ್ವಾರೋಪಯಂತಿ ಹಿ ಗುಣಂ ಧನುಷೀವ ಶೂರಾಃ || ೧೦೯

"ಪೂಜ್ಯರೆ, ಹಾಗೆ ಮಾಡುವುದು ಶುದ್ಧವಾದರೂ ಲೋಕವಿರುದ್ಧವಾದ್ದರಿಂದ ಅದು ನನಗೆ ಯೋಗ್ಯವಲ್ಲ. ನನ್ನನ್ನು ಬದುಕಿಸುತ್ತೇನೆಂಬ ಆದರೋಕ್ತಿಯು (ಮಹಿಮಾನ್ವಿತರಾದ) ನಿಮಗೆ ಅರ್ಹವಾದದ್ದೇ ಹೌದು. ಸ್ವಾಭಾವಿಕವಾಗಿ ಅತ್ಯಂತ ಕುಟಿಲರಾದ ಜನರಲ್ಲಿಯೂ ಸಹ,

ಧನುಸ್ಸಿನಲ್ಲಿ ಶೂರರು ಗುಣವನ್ನು (ಹೆದೆಯನ್ನು) ಸೆಳೆದು ಏರಿಸುವಂತೆ, ಮಹಾತ್ಮರು ಗುಣವನ್ನು ಆರೋಪಿಸುತ್ತಾರೆ.

ವಿವರಣೆ:-ನೀವು ಭಾವಿಸಿದಷ್ಟು ಪಾಂಡಿತ್ಯವು ನನ್ನಲ್ಲಿಲ್ಲ. ಆದರೂ ವಾರ್ತಿಕವನ್ನು ಬರೆಯುವ ಪಾಂಡಿತ್ಯವು ನನ್ನಲ್ಲಿದೆಯೆಂದು ಹೀಗೆ ಹೇಳಿದ್ದೀರಿ-ಎಂದು ವಿನಯ ಪ್ರದರ್ಶನವಿದು. ಆಜಾನತಃ=ಜಾನವೆಂದರೆ ಜನ್ಮ ಆಜನ್ಮತಃ-ಜನ್ಮದಿಂದ ಹಿಡಿದು, ಸ್ವಾಭಾವಿಕವಾಗಿ ಎಂದು ತಾತ್ಪರ್ಯ.'ಜನಾನಾಮಯಂ ಜಾನಃ , ಆ ಸಮಂತಾಜ್ಜಾನಃ ತಸ್ಮಾತ್ ಸ್ವಭಾವತಃ'ಎಂದು ವ್ಯಾಖ್ಯಾನದಲ್ಲಿದೆ.

ಸಂಜೀವನಾಯ ಚಿರಕಾಲಮೃತಸ್ಯ ಚ ತ್ವಂ
ಶಕ್ತೋऽಸಿ ಶಂಕರ ದಯೋರ್ಮಿಲದೃಷ್ಟಿಪಾತೈಃ |
ಆರಬ್ಧಮೇತದಧುನಾ ವ್ರತಮಾಗಮೋಕ್ತಂ
ಮುಂಚನ್ ಸತಾಂ ನ ಭವಿತಾऽಸ್ಮಿ ಬುಧಾವಿನಿಂದ್ಯಃ || ೧೧೦

"ಶ್ರೀಶಂಕರಯತಿಗಳೆ, ಒಬ್ಬನು ಮೃತನಾಗಿ ಬಹಳ ಹೊತ್ತಾಗಿದ್ದರೂ ನಿಮ್ಮ ಕರುಣಾಮಯ ದೃಷ್ಟಿಪಾತಗಳಿಂದಲೇ ಅವನನ್ನು ಬದುಕಿಸಲು ಶಕ್ತರಾಗಿದ್ದೀರಿ. ಈಗಲಾದರೋ ಶಾಸ್ತ್ರೋಕ್ತವಾಗಿ ಈ ಪ್ರಾಯಶ್ಚಿತ್ತವ್ರತವನ್ನು ಆರಂಭಿಸಿಬಿಟ್ಟಿದ್ದೇನೆ. ವಿದ್ವಾಂಸರೆ, ಇದನ್ನು ತ್ಯಜಿಸಿದರೆ ಸತ್ಪುರುಷರಿಂದ ನಾನು ನಿಂದಿತನಾಗದೆ ಇರುವುದಿಲ್ಲ.

ಜಾನೇ ತವಾಹಂ ಭಗವನ್ ಪ್ರಭಾವಂ
ಸಂಹೃತ್ಯ ಭೂತಾನಿ ಪುನರ್ಯಥಾವತ್ |
ಪ್ರಷ್ಟುಂ ಸಮರ್ಥೋऽಸಿ ತಥಾವಿಧೋ ಮಾಂ
ಉಜ್ಜೀವಯೇಶ್ಚೇದಿಹ ಕಿಂ ವಿಚಿತ್ರಮ್ || ೧೧೧

"ಭಗವತ್ಪಾದರೆ, ನಿಮ್ಮ ಮಹಿಮೆಯನ್ನು ನಾನು ಬಲ್ಲೆ. ಈ ಪ್ರಾಣಿಗಳೆಲ್ಲವನ್ನೂ ಸಂಹರಿಸಿ ಮತ್ತೆ ಯಥಾವತ್ತಾಗಿ ಸೃಜಿಸಲು ಸಮರ್ಥರಾಗಿದ್ದೀರಿ. ಅಂತಹ ಮಹಿಮಶಾಲಿಗಳಾದ ನೀವು ನನ್ನನ್ನು ಉಜ್ಜೀವಿತಗೊಳಿಸಿದರೆ ಅಚ್ಚರಿ ಏನಿದೆ?

ನಾಭ್ಯುತ್ಸಹೇ ಕಿಂತು ಯತಿಕ್ಷಿತೀಂದ್ರ
ಸಂಕಲ್ಪಿತಂ ಹಾತುಮಿದಂ ವ್ರತಾಗ್ರ್ಯಮ್ |
ತತ್ತಾರಕಂ ದೇಶಿಕವರ್ಯ ಮಹ್ಯಂ
ಆದಿಶ್ಯ ತದ್‌ಬ್ರಹ್ಮ ಕೃತಾರ್ಥಯೇಥಾಃ || ೧೧೨

"ಆದರೆ ಯತಿಶ್ರೇಷ್ಠರೆ, ನಾನು ಸಂಕಲ್ಪಸಿರುವ ಈ ದೊಡ್ಡ ಪ್ರಾಯಶ್ಚಿತ್ತ ವ್ರತವನ್ನು ಕೈಬಿಡಲು ನನಗೆ ಇಚ್ಛೆಯಿಲ್ಲ. ಆದ್ದರಿಂದ, ದೇಶಿಕೋತ್ತಮರೆ, ಸಂಸಾರತಾರಕವಾದ ಬ್ರಹ್ಮವನ್ನು ನನಗೆ ಉಪದೇಶಿಸಿ ನನ್ನನ್ನು ಧನ್ಯನನ್ನಾಗಿ ಮಾಡಿರಿ.

ಅಯಂ ಚ ಪಂಥಾ ಯದಿ ತೇ ಪ್ರಕಾಶ್ಯಃ
ಸುಧೀಶ್ವರೋ ಮಂಡನಮಿಶ್ರಶರ್ಮಾ |
ದಿಗಂತವಿಶ್ರಾಂತಯಶಾ ವಿಜೇಯೋ
ಯಸ್ಮಿನ್‌ಜಿತೇ ಸರ್ವಮಿದಂ ಜಿತಂ ಸ್ಯಾತ್ || ೧೧೩

"ಈ ಅದ್ವೈತವಿದ್ಯಾಮಾರ್ಗವನ್ನು ನೀವು ಪ್ರಕಾಶ ಪಡಿಸಬೇಕಾದರೆ ಸುಧೀಂದ್ರನಾದ ಮಂಡನಮಿಶ್ರನನ್ನು ಮೊದಲು ಜಯಿಸಿದರೆ, ಈ ಭೂತಳವನ್ನೇ ನೀವು ಜಯಿಸಿದಂತಾಗುತ್ತದೆ!

ಸದಾ ವದನ್ ಯೋಗಪದಂ ಚ ಸಾಂಪ್ರತಂ
ಸ ವಿಶ್ವರೂಪಃ ಪ್ರಥಿತೋ ಮಹೀತಲೇ |
ಮಹಾಗೃಹೀ ವೈದಿಕಕರ್ಮತತ್ಪರಃ
ಪ್ರವೃತ್ತಿಶಾಸ್ತ್ರೇ ನಿರತಃ ಸುಕರ್ಮಠಃ || ೧೧೪

"ಸಾಂಪ್ರತದಲ್ಲಿ ಅವನು ಸದಾ ಕರ್ಮಯೋಗವನ್ನೇ ಬೋಧಿಸುತ್ತಿದ್ದಾನೆ. ಅವನು ವಿಶ್ವರೂಪನೆಂಬ ಇನ್ನೊಂದು ಹೆಸರಿನಿಂದ ಲೋಕದಲ್ಲಿ ಪ್ರಸಿದ್ಧನಾಗಿದ್ದಾನೆ. ಆತನು ವೈದಿಕ ಕರ್ಮಮಾರ್ಗದಲ್ಲಿ ನಿರತನಾದ ದೊಡ್ಡ ಗೃಹಸ್ಥ. ಒಳ್ಳೆಯ ಕರ್ಮಠನಾಗಿ ಪ್ರವೃತ್ತಿಮಾರ್ಗದಲ್ಲಿ ಆಸಕ್ತನಾಗಿದ್ದಾನೆ.

ಟಿಪ್ಪಣಿ: ಮಂಡನಮಿಶ್ರನು ಈ ವಿಶ್ವರೂಪನಲ್ಲವೆಂದು ಇತಿಹಾಸಕಾರರ ಅಭಿಪ್ರಾಯವಿದೆ.

ನಿವೃತ್ತಿಶಾಸ್ತ್ರೇ ನಕೃತಾದರಃ ಸ್ವಯಂ
ಕೇನಾಪ್ಯುಪಾಯೇನ ವಶಂ ಸ ನೀಯತಾಮ್ |
ವಶಂ ಗತೇ ತತ್ರ ಭವೇನ್ಮನೋರಥ-
ಸ್ತದಂತಿಕಂ ಗಚ್ಛತು ಮಾ ಚಿರಂ ಭವಾನ್ || ೧೧೫

"ಅವನು ನಿವೃತ್ತಿಶಾಸ್ತ್ರದಲ್ಲಿ ಸ್ವಲ್ಪವೂ ಆದರವಿಲ್ಲದವನು. ಏನಾದರೊಂದು ಉಪಾಯದಿಂದ ಅವನನ್ನು ವಶಪಡಿಸಿಕೊಳ್ಳಿರಿ. ಆತನು ವಶನಾಗಿಬಿಟ್ಟರೆ ನಿಮ್ಮ ಮನೋರಥವು ಸಿದ್ಧಿಸುತ್ತದೆ. ಆದ್ದರಿಂದ ನೀವು ಬೇಗನೆ ವಿಶ್ವರೂಪನ ಬಳಿಗೆ ಹೋಗಿರಿ.

ಉಂಬೇಕ ಇತ್ಯಭಿಹಿತಸ್ಯ ಹಿ ತಸ್ಯ ಲೋಕೈಃ
ಉಂಬೇತಿ ಬಾಂಧವ ಜನೈರಭಿಧೀಯಮಾನಾ |
ಹೇತೋಃ ಕುತಶ್ಚಿದಿಹ ವಾಕ್ಪುರುಷಾ ಭಿಶಪ್ತಾ
ದುರ್ವಾಸಸಾಜನಿ ವಧೂರ್ದ್ವಯಭಾರತೀತಿ || ೧೧೬

"ಪ್ರಾಕೃತಜನರು ಮಂಡನಮಿಶ್ರನನ್ನು ಉಂಬೇಕ ಎಂದೂ ಕರೆಯುತ್ತಾರೆ. (ಇದು ಮೂರನೆಯ ಹೆಸರು)ಅವನ ಪತ್ನಿಯನ್ನು ಬಾಂಧವರು 'ಉಂಬಾ'ಎಂದು ಕರೆಯುತ್ತಾರೆ. ಯಾವುದೋ ಕಾರಣಕ್ಕಾಗಿ ಕೋಪಿಷ್ಠನಾದ ದುರ್ವಾಸಮುನಿಯಿಂದ ಶಪ್ತಳಾದ ಸರಸ್ವತಿಯೇ ವಿಶ್ವರೂಪನ ಪತ್ನಿ. ಅವಳ ನಿಜವಾದ ಹೆಸರು ಉಭಯಭಾರತೀ.

ಟಿಪ್ಪಣಿ: ೮ನೆಯ ಸರ್ಗದ ೬೬ನೆಯ ಶ್ಲೋಕದಲ್ಲಿ ಉಭಯಭಾರತಿಯನ್ನು 'ಅಂಬಾ'ಎಂದು ಹೆಸರಿಸಲಾಗಿದೆ. ಆದಕ್ಕೆ ಅನುಗುಣವಾಗಿ ಉಂಬಾ ಎಂಬುದರ ಸ್ಥಾನದಲ್ಲಿ 'ಅಂಬಾ'ಎಂದೂ ಉಂಬೇಕ ಎಂಬುದರ ಸ್ಥಾನದಲ್ಲಿ' ಅಂಬೇಕ 'ಎಂದೂ ಪಾಠವಿದ್ದರೆ ಉತ್ತಮವೆನಿಸುತ್ತದೆ.

ಸರ್ವಾಸು ಶಾಸ್ತ್ರಸರಣೀಷು ಸ ವಿಶ್ವರೂಪೋ
ಮತ್ತೋಽಧಿಕಃ ಪ್ರಿಯತಮಶ್ಚ ಮದಾಶ್ರವೇಷು |
ತತ್ಪ್ರೇಯಸೀಂ ಶಮಧನೇಂದ್ರ ವಿಧಾಯ ಸಾಕ್ಷ್ಯೇ
ವಾದೇ ವಿಜಿತ್ಯ ತಮಿಮಂ ವಶಗಂ ವಿಧೇಹಿ || ೧೧೭

"ಸಮಸ್ತ ಶಾಸ್ತ್ರಸರಣಿಗಳಲ್ಲಿಯೂ ಆ ವಿಶ್ವರೂಪನು ನನಗಿಂತ ಅಧಿಕನಾಗಿದ್ದಾನೆ ! ನನ್ನ ಶಿಷ್ಯರಲ್ಲಿ ಅವನು ನನಗೆ ಅತ್ಯಂತಪ್ರಿಯನಾದವನು. ಯತಿಶ್ರೇಷ್ಠರೆ, ಅವನ ಪತ್ನಿಯಾದ ಉಭಯಭಾರತಿಯನ್ನು ವಾದದಲ್ಲಿ ಸಾಕ್ಷಿಯಾಗಿಟ್ಟುಕೊಂಡು ವಾದದಲ್ಲಿ ಗೆದ್ದು ಆತನನ್ನು ವಶಪಡಿಸಿಕೊಳ್ಳಿರಿ.

ತೇನೈವ ತಾವಕಕೃತಿಷ್ವಪಿ ವಾರ್ತಿಕಾನಿ
ಕರ್ಮಂದಿವರ್ಯತಮ ಕಾರಯ ಮಾ ವಿಲಂಬಮ್ |
ತ್ವಂ ವಿಶ್ವನಾಥ ಇವ ಮೇ ಸಮಯೇ ಸಮಾಗಾಃ
ತತ್ತಾರಕಂ ಸಮುಪದಿಶ್ಯ ಕೃತಾರ್ಥಯೇಥಾಃ || ೧೧೮

"ಆ ವಿಶ್ವರೂಪನಿಂದಲೇ ನಿಮ್ಮ ಕೃತಿಗಳಿಗೆ ವಾರ್ತಿಕಗಳನ್ನು ಬರೆಸಿರಿ. ವಿಲಂಬಿಸುವುದು ಬೇಡ. ಸಂನ್ಯಾಸಿವರ್ಯರೆ, ಸಾಕ್ಷಾತ್ ವಿಶ್ವನಾಥ ಸ್ವಾಮಿಯಂತೆ ಈ ಸಮಯದಲ್ಲಿ ಆಗಮಿಸಿದ್ದೀರಿ. ಆ ತಾರಕಬ್ರಹ್ಮವನ್ನುಪದೇಶಿಸಿ ನನ್ನನ್ನು ಕೃತಕೃತ್ಯನನ್ನಾಗಿ ಮಾಡಿರಿ.

ನಿರ್ವ್ಯಾಜಕಾರುಣ್ಯ ಮುಹೂರ್ತಮಾತ್ರಂ
ಅತ್ರ ತ್ವಯಾ ಭಾವ್ಯಮಹಂ ತು ಯಾವತ್ |
ಯೋಗೀಂದ್ರಹೃತ್ಪಂಕಜ ಭೃಂಗ್ಯಮೇತತ್
ತ್ಯಜಾಮ್ಯಸೂನ್ ರೂಪಮವೇಕ್ಷಮಾಣಃ || ೧೧೯

ನಿರ್ವ್ಯಾಜ ಕರುಣಾ ಶಾಲಿಗಳಾದವರು ನೀವು. ಒಂದು ಮುಹೂರ್ತಕಾಲದ ವರೆಗೆ ಇಲ್ಲಿ ಇರೋಣವಾಗಲಿ. ಯೋಗೀಂದ್ರರ ಹೃದಯ ಪದ್ಮಗಳ ಭಾಗ್ಯವಾದ ಈ ಭವ್ಯರೂಪವನ್ನು ನೋಡುತ್ತ ಪ್ರಾಣಬಿಡುವೆನು"ಎಂದರು.

ಇತ್ಯೂಚಿವಾಂಸಮಿಮಮಿದ್ಧಸುಖಪ್ರಕಾಶಂ
ಬ್ರಹ್ಮೋಪದಿಶ್ಯ ಬಹಿರಂತರಪಾಸ್ತಮೋಹಮ್ |
ತನ್ವನ್ ದಯಾನಿಧಿರಸೌ ತರಸಾಭ್ರಮಾರ್ಗಾತ್
ಶ್ರೀಮಂಡನಸ್ಯ ನಿಲಯಂ ಸ ಇಯೇಷ ಗಂತುಮ್ || ೧೨೦

ಹೀಗೆ ನುಡಿದ ಕುಮಾರಿಲಭಟ್ಟರಿಗೆ ದಯಾನಿಧಿಗಳಾದ ಶ್ರೀಶಂಕರರು ದೀಪ್ತಚಿದಾನಂದ ರೂಪವಾದ ಪರಬ್ರಹ್ಮವನ್ನುಪದೇಶಿಸಿ ಬಾಹ್ಯಾಂತರಗಳ ಅಜ್ಞಾನವನ್ನು ಹೋಗ ಲಾಡಿಸಿದರು. ಅನಂತರ ತಮ್ಮ ಯೋಗ ಬಲದಿಂದ ಶ್ರೀಮಂಡನಮಿಶ್ರರ ವಾಸಸ್ಥಾನಕ್ಕೆ ಆಕಾಶ ಮಾರ್ಗದಲ್ಲಿ ಹೋಗಲಿಚ್ಛಿಸಿದರು.

ಅಥ ಗಿರಮುಪಸಂಹೃತ್ಯಾದರಾದ್ಭಟ್ಟಪಾದಃ
ಶಮಧನಪತಿನಾಸೌ ಬೋಧಿತಾದ್ವೈತತತ್ತ್ವಃ |
ಪ್ರಶಮಿತಮಮತಃ ಸಂಸ್ತತ್ಪ್ರಸಾದೇನ ಸದ್ಯೋ
ವಿದಲದಖಿಲಬಂಧೋ ವೈಷ್ಣವಂ ಧಾಮ ಪೇದೇ || ೧೨೧

ಹೀಗೆ ಶಮಧನರಾದ ತಪಸ್ವಿಗಳ ಪ್ರಭುಗಳಾದ ಆಚಾರ್ಯರಿಂದ ಆದರ ಪೂರ್ವಕವಾಗಿ ಅದ್ವೈತತತ್ತ್ವದ ಉಪದೇಶವನ್ನು ಪಡೆದ ಭಟ್ಟಪಾದರು ಮಾತನ್ನು ನಿಲ್ಲಿಸಿ ಮೌನವನ್ನು ತಾಳಿದರು. ಆಚಾರ್ಯರ ಅನುಗ್ರಹದಿಂದ ಅವರು ಎಲ್ಲ ಮಮತ್ವವನ್ನೂ ದೂರಮಾಡಿ, ಎಲ್ಲ ಸಂಸಾರಬಂಧವನ್ನೂ ತರಿದು ಹಾಕಿ ವೈಷ್ಣವ ಧಾಮವನ್ನು-ವಿಶ್ವವ್ಯಾಪಿಯಾದ ತೇಜೋಮಯ ಬ್ರಹ್ಮವನ್ನು-ಸೇರಿಕೊಂಡರು(ಮುಕ್ತರಾದರು).

ಇತಿ ಶ್ರೀ ಮಾಧವೀಯೇ ತದ್ವ್ಯಾಸಸಂದರ್ಶಚಿತ್ರಗಃ |
ಸಂಕ್ಷೇಪ ಶಂಕರಜಯೇ ಸರ್ಗೋಽಸೌ ಸಪ್ತಮೋಽಭವತ್ ||

ಇಲ್ಲಿಗೆ ಶ್ರೀಮಾಧವೀಯ ಸಂಕ್ಷೇಪ ಶಂಕರ ವಿಜಯದಲ್ಲಿ ಶ್ರೀಶಂಕರಾಚಾರ್ಯರು ವ್ಯಾಸಮಹರ್ಷಿಗಳನ್ನು ಸಂದರ್ಶಿಸಿದ ಚಿತ್ರಣವನ್ನು ನಿರೂಪಿಸುವ ಏಳನೆಯ ಸರ್ಗವು ಸಮಾಪ್ತವಾಯಿತು

✤ ✤ ✤

ಅಷ್ಟಮಃ ಸರ್ಗಃ
ಶ್ರೀಮದಾಚಾರ್ಯ ಮಂಡನಮಿಶ್ರ ಸಂವಾದಃ

ಆಚಾರ್ಯರು ಮಂಡನಪಂಡಿತನನ್ನು ಜಯಿಸುವುದಕ್ಕಾಗಿ ಆತನ ಮನೆಗೆ ಆಗಮಿಸುವುದು. ಉದ್ಧಟ ತನದಿಂದ ಆತನು ಕೇಳಿದ ಪ್ರಶ್ನೆಗಳಿಗೆ ಆಚಾರ್ಯರಿಂದ ಚಮತ್ಕಾರಿಯಾದ ಉತ್ತರ. ಭಿಕ್ಷಾಸ್ವೀಕಾರ. ಮಾರನೆಯ ದಿನದಿಂದ ಶ್ರೀಶಂಕರರಿಗೂ ಮಂಡನನಿಗೂ ಶಾಸ್ತ್ರದಲ್ಲಿವಾಗ್ವಾದ. ಮಂಡನಪಂಡಿತನ ಪರಾಜಯ.

ಅಥ ಪ್ರತಸ್ಥೇ ಭಗವಾನ್ ಪ್ರಯಾಗಾತ್
ತಂ ಮಂಡನಂ ಪಂಡಿತಮಾಶು ಜೇತುಮ್ |
ಗಚ್ಛನ್ ಸ್ವಸೃತ್ಯಾ ಪುರಮಾಲುಲೋಕೇ
ಮಾಹಿಷ್ಮತೀಂ ಮಂಡನಮಂಡಿತಾಂ ಸಃ || ೧

ಅನಂತರ ಯೋಗೀಂದ್ರರಾದ ಶ್ರೀಶಂಕರರು ಮಂಡನನೆಂಬ ಪಂಡಿತನನ್ನು ಜಯಿಸುವುದಕ್ಕಾಗಿ ಪ್ರಯಾಗದಿಂದ ಆಕಾಶಮಾರ್ಗದಲ್ಲಿ ವೇಗವಾಗಿ ಪ್ರಯಾಣ ಮಾಡಿದರು. ತಮ್ಮ ಮಾರ್ಗದಲ್ಲಿ ಹೋಗುತ್ತ, ಮಂಡನಮಿಶ್ರನಿಂದಲೂ-ಧ್ವಜ ಪತಾಕಾದ್ಯಲಂಕಾರ ಗಳಿಂದಲೂ ಭೂಷಿತವಾದ ಮಾಹಿಷ್ಮತೀನಗರವನ್ನು ಕಂಡರು.

ಅವಾತರದ್ರತ್ನ ವಿಚಿತ್ರವಪ್ರಾಂ
ವಿಲೋಕ್ಯ ತಾಂ ವಿಸ್ಮಿತಮಾನಸೋಽಸೌ |
ಪುರಾಣವತ್ಪುಷ್ಕರವರ್ತನೀತಃ
ಪುರೋಪಕಂಠಸ್ಥವನೇ ಮನೋಜ್ಞೇ || ೨

ರತ್ನಗಳಿಂದ ನಾನಾ ಪ್ರಕಾರವಾಗಿ ಅಲಂಕೃತವಾದ ಗೋಪುರಗಳುಳ್ಳ ಮಾಹಿಷ್ಮತೀಪುರವನ್ನು ನೋಡಿ ಆಚಾರ್ಯರು ವಿಸ್ಮಿತರಾಗಿ, ನಗರದ ಬಳಿ ಇದ್ದ ರಮ್ಯವಾದ ಉಪವನದಲ್ಲಿ, ಪುರಾಣ ಪುರುಷನಾದ ವಿಷ್ಣುವಿನಂತೆ ಆಕಾಶ ಮಾರ್ಗದಿಂದ ಕೆಳಗಿಳಿದರು.

ವಿವರಣೆ:-ಮಾಹಿಷ್ಮತಿಯಲ್ಲಿ ಹಿಂದೆ ಕಾರ್ತವೀರ್ಯನಿದ್ದನು. ಅವನನ್ನು ಜಯಿಸುವುದಕ್ಕಾಗಿ ವಿಷ್ಣುವಿನ ಅವತಾರವಾದ ಪರಶುರಾಮನು ಆಕಾಶಮಾರ್ಗದಿಂದ ಅಲ್ಲಿಗೆ ಬಂದನೆಂದು ಪೂರ್ವಕಥೆ ಇದೆ. ಪುಷ್ಕರವರ್ತನೀ = ಆಕಾಶಮಾರ್ಗ.

ಪ್ರಫುಲ್ಲರಾಜೀವವನೇ ವಿಹಾರೀ
ತರಂಗರಿಂಗತ್ಕಣಶೀಕರಾರ್ದ್ರಃ |
ರೇವಾಮರುತ್ಕಂಪಿತ ಸಾಲಮಾಲಃ
ಶ್ರಮಾಪಹೃದ್ ಭಾಷ್ಯಕೃತಂ ಸಿಷೇವೇ || ೩

ಅಲ್ಲಿ ನರ್ಮದಾನದಿಯ ಮೇಲೆ ಬೀಸಿಬರುವ ಗಾಳಿಯು ಅರಳಿದ ತಾವರೆಗಳ ವನದಲ್ಲಿ ವಿಹರಿಸುತ್ತ, ಅಲೆಗಳ ಶೀತಕಣಗಳಿಂದ ಒದ್ದೆಯಾಗಿ, ಸಾಲವೃಕ್ಷಗಳನ್ನು ಅಲ್ಲಾಡಿಸುತ್ತ ಬಂದು ಆಚಾರ್ಯರ ಆಯಾಸವನ್ನು ಪರಿಹರಿಸುತ್ತ ಆ ಭಾಷ್ಯಕಾರರನ್ನು ಸೇವಿಸಿತು.

ತಸ್ಮಿನ್ ಸ ವಿಶ್ರಮ್ಯ ಕೃತಾಹ್ನಿಕಃ ಸನ್
ಖಸ್ವಸ್ತಿಕಾರೋಹಣಶಾಲಿನೀನೇ |
ಗಚ್ಛನ್ನಸೌ ಮಂಡನಪಂಡಿತೌಕೋ
ದಾಸೀಸ್ತದೀಯಾಃ ಸ ದದರ್ಶ ಮಾರ್ಗೇ || ೪

ಆಚಾರ್ಯರು ಆ ಉಪವನದಲ್ಲಿ ಸ್ವಲ್ಪಕಾಲ ವಿಶ್ರಮಿಸಿ, ಪ್ರಣವಜಪಾದಿ ನಿತ್ಯಕರ್ಮವನ್ನು ಮುಗಿಸಿದರು. ಸೂರ್ಯನು ಸ್ವಸ್ತಿಕವೆಂಬ ಆಕಾಶಮಧ್ಯಸ್ಥಳವನ್ನೇರಲಾಗಿ ಅವರು ಮಂಡನಪಂಡಿತನ ಮನೆಯ ಕಡೆಗೆ ಹೊರಟರು. ದಾರಿಯಲ್ಲಿ ಮಂಡನಪಂಡಿತನ ಮನೆಗೆಲಸದ ದಾಸಿಯರನ್ನು ಕಂಡರು.

ಕುತ್ರಾಲಯೋ ಮಂಡನಪಂಡಿತಸ್ಯೇ-
ತ್ಯೇತಾಃ ಸ ಪಪ್ರಚ್ಛ ಜಲಾಯ ಗಂತ್ರೀಃ |
ತಾಶ್ಚಾಪಿ ದೃಷ್ಟ್ವಾದ್ಭುತ ಶಂಕರಂ ತಂ
ಸಂತೋಷವತ್ಯೋ ದದುರುತ್ತರಂ ಸ್ಮ || ೫

ನೀರಿಗಾಗಿ ಹೋಗುತ್ತಿದ್ದ ಆ ಸ್ತ್ರೀಯರನ್ನು ಕುರಿತು ಆಚಾರ್ಯರು "ಮಂಡನಪಂಡಿತರ ಮನೆ ಎಲ್ಲಿದೆ? "ಎಂದು ಕೇಳಿದರು. ವಿಸ್ಮಯಕಾರಿಗಳಾದ ಶ್ರೀಶಂಕರರನ್ನು ನೋಡಿ ಆ ದಾಸಿಯರು ಸಂತೋಷಪಡುತ್ತ ಹೀಗೆ ಉತ್ತರಿಸಿದರು-

ಸ್ವತಃ ಪ್ರಮಾಣಂ ಪರತಃ ಪ್ರಮಾಣಂ
ಕೀರಾಂಗನಾ ಯತ್ರ ಗಿರಂ ಗಿರಂತಿ |
ದ್ವಾರಸ್ಥನೀಡಾಂತರ ಸಂನಿರುದ್ಧಾ
ಜಾನೀಹಿ ತನ್ಮಂಡನ ಪಂಡಿತೌಕಃ || ೬

"ಗೃಹದ್ವಾರದ ಬಳಿ ಪಂಜರಗಳನ್ನು ತೂಗುಹಾಕಿದ್ದಾರೆ. ಅದರಲ್ಲಿರುವ ಹೆಣ್ಣು ಗಿಳಿಗಳು "ಸ್ವತಃ ಪ್ರಮಾಣಂ, ಪರತಃ ಪ್ರಮಾಣಂ" ಎಂದು ಕೂಗುತ್ತ ಇರುತ್ತವೆ!ಅದೇ ಮಂಡನಪಂಡಿತರ ಗೃಹವೆಂದು ತಿಳಿಯಿರಿ!

ಫಲಪ್ರದಂ ಕರ್ಮ ಫಲಪ್ರದೋಽಜಃ
ಕೀರಾಂಗನಾ ಯತ್ರ ಗಿರಂ ಗಿರಂತಿ |

ದ್ವಾರಸ್ಥನೀಡಾಂತರ ಸಂನಿರುದ್ಧಾ
ಜಾನೀಹಿ ತನ್ಮಂಡನ ಪಂಡಿತೌಕಃ || ೭

"ಯಾವ ಮನೆಯ ಬಾಗಿಲಲ್ಲಿ ಪಂಜರದೊಳಗಿರುವ ಗಿಳಿಗಳು "ಫಲವನ್ನು ಕೊಡತಕ್ಕದ್ದು ಕರ್ಮ, ಫಲವನ್ನು ಕೊಡತಕ್ಕವನು ಈಶ್ವರ!"ಎಂಬ ಮಾತನ್ನು ಆಡುತ್ತ ಇರುತ್ತವೆಯೋ ಅದೇ ಮಂಡನಪಂಡಿತರ ಮನೆಯೆಂದು ತಿಳಿಯಿರಿ!

ಜಗದ್ ಧ್ರುವಂ ಸ್ಯಾಜ್ಜಗದಧ್ರುವಂ ಸ್ಯಾತ್
ಕೀರಾಂಗನಾ ಯತ್ರ ಗಿರಂ ಗಿರಂತಿ |
ದ್ವಾರಸ್ಥನೀಡಾಂತರ ಸಂನಿರುದ್ಧಾ
ಜಾನೀಹಿ ತನ್ಮಂಡನ ಪಂಡಿತೌಕಃ || ೮

ಅಥವಾ ದ್ವಾರಸ್ಥ ಪಂಜರಗಳಲ್ಲಿರುವ ಗಿಳಿಗಳು "ಜಗತ್ತು ನಿತ್ಯ, ಜಗತ್ತು ಅನಿತ್ಯ!" ಎಂದು ಹೇಳುತ್ತ ಇರುತ್ತವೆ! ಅದೇ ಮಂಡನಪಂಡಿತರ ಗೃಹವೆಂದು ತಿಳಿಯಿರಿ!"ಎಂದು ನುಡಿದರು.

ವಿವರಣೆ:-ಮೀಮಾಂಸಕರೂ ತಾರ್ಕಿಕರೂ ವೇದಾಂತಿಗಳೂ ಮಂಡನಪಂಡಿತರ ಗೃಹದಲ್ಲಿ ಶಾಸ್ತ್ರಗೋಷ್ಠಿಗಳನ್ನು ನಡೆಸುತ್ತಲೇ ಇರುತ್ತಾರೆ. ಆಗ ವಾದಿ ಪ್ರತಿವಾದಿಗಳು ಬಳಸುವ ಈ ಶಬ್ದಗಳನ್ನು ಕೇಳಿ ಕೇಳಿ ಗಿಳಿಗಳೂ ಆ ಮಾತುಗಳನ್ನು ಕಲಿತುಕೊಂಡು ಬಿಟ್ಟಿವೆ. ಅನವರತವೂ ಶಾಸ್ತ್ರಗೋಷ್ಠಿಗಳು ಅಲ್ಲಿ ನಡೆಯುತ್ತವೆಯೆಂದು ಇದರಿಂದ ಧ್ವನಿತವಾಗುತ್ತದೆ.

ಪೀತ್ವಾ ತದುಕ್ತೀರಥ ತಸ್ಯ ಗೇಹಾತ್
ಗತ್ವಾ ಬಹಿಃ ಸದ್ಮ ಕವಾಟಗುಪ್ತಮ್ |
ದುರ್ವೇಶಮಾಲೋಚ್ಯ ಸ ಯೋಗಶಕ್ತ್ಯಾ
ವ್ಯೋಮಾಧ್ವನಾಽವಾತರದಂಗಣಾಂತಃ || ೯

ಆಚಾರ್ಯರು ಆ ಸ್ತ್ರೀಯರ ಮಾತುಗಳನ್ನು ಕುತೂಹಲದಿಂದ ಕೇಳಿ ಸಂತೋಷಪಟ್ಟು, ಮಂಡನಮಿಶ್ರನ ಮನೆಗೆ ಹೋದರು. ಮನೆಯ ಹೊರಬಾಗಿಲು ಹಾಕಿತ್ತು. ಒಳಗೆ ಹೋಗುವುದು ಸಾಧ್ಯವಿಲ್ಲವೆಂದು, ತಮ್ಮ ಯೋಗ ಶಕ್ತಿಯಿಂದ ಆಕಾಶಮಾರ್ಗವಾಗಿ ಭವನದ ಒಳ ಅಂಗಣದಲ್ಲಿ ಇಳಿದರು.

ತದಾ ಸ ಲೇಖೇಂದ್ರನಿಕೇತನಾಭಂ
ಸ್ಫುರನ್ಮರುಚ್ಚಂಚಲಕೇತನಾಭಮ್ |
ಸಮಗ್ರಮಾಲೋಕತ ಮಂಡನಸ್ಯ
ನಿವೇಶನಂ ಭೂತಲಮಂಡನಸ್ಯ || ೧೦

ಮಂಡನಮಿಶ್ರನ ಭವನವು ದೇವೇಂದ್ರನ ಅರಮನೆಯಂತಿತ್ತು. ಗೃಹದ ಮೇಲೆ ಕಟ್ಟಿದ್ದ ಧ್ವಜಪಟವು ಗಾಳಿಗೆ ಹಾರಾಡುತ್ತಿತ್ತು. ಭೂತಳಕ್ಕೆ ಭೂಷಣ ಪ್ರಾಯನಾದ ಮಂಡನಮಿಶ್ರನ ಗೃಹವನ್ನು ಆಚಾರ್ಯರು ಸಮಗ್ರವಾಗಿ ಕಂಡರು.

ಸೌಧಾಗ್ರಸಂಛನ್ನನಭೋವಕಾಶಂ
ಪ್ರವಿಶ್ಯ ತತ್ಪ್ರಾಪ್ಯ ಕವೇಃ ಸಕಾಶಮ್ ।
ವಿದ್ಯಾವಿಶೇಷಾತ್ತಯಶಃಪ್ರಕಾಶಂ
ದದರ್ಶ ತಂ ಪದ್ಮಜಸಂನಿಕಾಶಮ್ ॥ ೧೧

ಸೌಧದ ಅಗ್ರಭಾಗವು ಆಕಾಶಪರ್ಯಂತ ವ್ಯಾಪಿಸಿತ್ತು. ಒಳಗೆ ಪಂಡಿತನ ಹತ್ತಿರ ಹೋಗಿ ಆತನನ್ನು ನೋಡಿದರು. ಮಹತ್ತರವಾದ ವಿದ್ಯಾ ವಿಶೇಷದಿಂದ ಗಳಿಸಿದ ಕೀರ್ತಿಪ್ರಕಾಶ ಉಳ್ಳವನೂ ಸಾಕ್ಷಾತ್ ಬ್ರಹ್ಮದೇವನಂತೆ ತೇಜೋವಿಶಿಷ್ಟನೂ ಆದ ಮಂಡನಪಂಡಿತನನ್ನು ಆಚಾರ್ಯರು ವೀಕ್ಷಿಸಿದರು.

ತಪೋ ಮಹಿಮ್ನೈವ ತಪೋನಿಧಾನಂ
ಸಜೈಮಿನಿಂ ಸತ್ಯವತೀತನೂಜಮ್ ।
ಯಥಾವಿಧಿ ಶ್ರಾದ್ಧವಿಧೌ ನಿಮಂತ್ರ್ಯ
ತತ್ಪಾದಪದ್ಮಾನ್ಯವನೇಜಯಂತಮ್ ॥ ೧೨

(ಆ ದಿನ ಮಂಡನಮಿಶ್ರನು ತನ್ನ ಪಿತೃಶ್ರಾದ್ಧವನ್ನು ಮಾಡಬೇಕಾಗಿತ್ತು). ತಪೋನಿಧಿಯಾದ ಆತನು ತನ್ನ ತಪೋಮಹಿಮೆಯಿಂದಲೇ ಜೈಮಿನಿ ಮಹರ್ಷಿಗಳೊಡನೆ ಸತ್ಯವತೀ ಪುತ್ರರಾದ ವೇದವ್ಯಾಸರನ್ನೂ ಶ್ರಾದ್ಧಕ್ಕೆ ನಿಮಂತ್ರಿಸಿದ್ದನು. ಶ್ರಾದ್ಧಕಾರ್ಯದಲ್ಲಿ ಯಥಾವಿಧಿಯಾಗಿ ಅವರಿಬ್ಬರ ಪಾದಪದ್ಮಗಳನ್ನು ಪ್ರಕ್ಷಾಲಿಸುತ್ತಿದ್ದ ಮಂಡನಮಿಶ್ರನನ್ನು ಶ್ರೀಶಂಕರರು ನೋಡಿದರು.

ತತ್ರಾಂತರಿಕ್ಷಾದವತೀರ್ಯ ಯೋಗಿ-
ವರ್ಯಃ ಸಮಾಗಮ್ಯ ಯಥಾರ್ಹಮೇಷಃ ।
ದ್ವೈಪಾಯನಂ ಜೈಮಿನಿಮಪ್ಯುಭಾಭ್ಯಾಂ
ತಾಭ್ಯಾಂ ಸಹರ್ಷಂ ಪ್ರತಿನಂದಿತೋಽಭೂತ್ ॥ ೧೩

ಆ ಯೋಗಿಶ್ರೇಷ್ಠರು ಆಕಾಶದಿಂದಿಳಿದು ಆ ಸ್ಥಳಕ್ಕೆ ಹೋಗಿ ವೇದವ್ಯಾಸರನ್ನೂ ಜೈಮಿನಿ ಮುನಿಗಳನ್ನೂ ಯಥಾಯೋಗ್ಯವಾಗಿ ಕಂಡು ವಂದಿಸಲಾಗಿ, ಅವರಿಬ್ಬರೂ ಹರ್ಷದಿಂದ ಆಚಾರ್ಯರನ್ನು ಅಭಿನಂದಿಸಿದರು.

ಅಥ ದ್ಯುಮಾರ್ಗಾದವತೀರ್ಣಮಂತಿಕೇ
ಮುನ್ಯೋಃ ಸ್ಥಿತಂ ಜ್ಞಾನಶಿಖೋಪವೀತಿನಮ್ |
ಸಂನ್ಯಾಸ್ಯಸಾವಿತ್ಯವಗತ್ಯ ಸೋಽಭವತ್
ಪ್ರವೃತ್ತಿಶಾಸ್ತ್ರೈಕರತೋಽಪಿ ಕೋಪನಃ || ೧೪

ಆಕಾಶಮಾರ್ಗದಲ್ಲಿ ಬಂದು ಆ ಮುನಿಗಳೀರ್ವರ ಬಳಿ ನಿಂತಿದ್ದ ಆಚಾರ್ಯರಿಗೆ ಜ್ಞಾನವೇ ಶಿಖಾಯಜ್ಞೋಪವೀತಗಳಾಗಿರುವುದನ್ನು ಕಂಡು ಮಂಡನಪಂಡಿತನು 'ಈತನು ಸಂನ್ಯಾಸಿ ' ಯೆಂದು ತಿಳಿದು ಪ್ರವೃತ್ತಿಶಾಸ್ತ್ರದಲ್ಲಿ ನಿರತನಾದ ಕರ್ಮಠನಾಗಿದ್ದರೂ ಕೋಪಗೊಂಡನು.

ಟಿಪ್ಪಣಿ: ಸಂನ್ಯಾಸಿಗಳಿಗೆ ಶಿಖಾಯಜ್ಞೋಪವೀತಗಳಿಲ್ಲ. ಶ್ರಾದ್ಧಕಾಲದಲ್ಲಿ ಕೋಪಮಾಡಿಕೊಳ್ಳಬಾರದೆಂದು ಧರ್ಮಶಾಸ್ತ್ರವಿದೆ. ಆದ್ದರಿಂದ ಶ್ಲೋಕದಲ್ಲಿ ' ಪ್ರವೃತ್ತಿಶಾಸ್ತ್ರೈಕರತೋಽಪಿ'ಎಂದು ಅಪಿ ಶಬ್ದವನ್ನು ಪ್ರಯೋಗಿಸಿದ್ದಾರೆ.
ಅಕ್ರೋಧನೈಃ ಶೌಚಪರೈಃ ಸತತಂ ಬ್ರಹ್ಮವಾದಿಭಿಃ |
ಭವಿತವ್ಯಂ ಭವದ್ಭಿಶ್ಚ ಮಯಾ ಚ ಶ್ರಾದ್ಧಕರ್ಮಣಿ ||ಎಂದು ಶ್ರಾದ್ಧಪ್ರಯೋಗದಲ್ಲಿ ವಚನವಿದೆ.

ತದಾಽತಿರುಷ್ಟಸ್ಯ ಗೃಹಾಶ್ರಮೇಶಿತುಃ
ಯತೀಶ್ವರಸ್ಯಾಪಿ ಕುತೂಹಲಂ ಭೃತಃ |
ಕ್ರಮಾತ್ಕಿಲೈವಂ ಬುಧಶಸ್ತಯೋಸ್ತಯೋಃ
ಪ್ರಶ್ನೋತ್ತರಾಣ್ಯಾಸುರಥೋತ್ತರೋತ್ತರಮ್ || ೧೫

ಆಗ ಅತ್ಯಂತಕ್ರುದ್ಧನೂ ಗೃಹಸ್ಥಾಶ್ರಮಿಗಳಲ್ಲಿ ಶ್ರೇಷ್ಠನೂ ಆದ ಮಂಡನಮಿಶ್ರನಿಗೂ ಕುತೂಹಲಗೊಂಡ ಯತೀಶ್ವರರಿಗೂ ಕ್ರಮವಾಗಿ ಸಂವಾದ ನಡೆಯಿತು. ಪಂಡಿತೋತ್ತಮರಾದ ಅವರಿಬ್ಬರಿಗೆ ಈ ಪ್ರಕಾರದಲ್ಲಿ ಮೇಲಿಂದಮೇಲೆ ಪ್ರಶ್ನೋತ್ತರಗಳು ನಡೆದವು-

ಟಿಪ್ಪಣಿ: ಬಿಭರ್ತೀತಿ ಭೃತ್. ಕ್ವಿಪ್‌ಪ್ರತ್ಯಯ. 'ಭೃತಃ'ಎಂಬುದು ಯತೀಶ್ವರಸ್ಯ ಎಂಬುದಕ್ಕೆ ವಿಶೇಷಣ. (ಮಂಡನಮಿಶ್ರನು ಸಂನ್ಯಾಸಾಶ್ರಮವನ್ನು ತುಚ್ಛೀಕರಿಸಿ ಔದ್ಧತ್ಯದಿಂದ ಪ್ರಶ್ನಿಸಿದ ಕಾರಣವಾಗಿ ಶ್ರೀಶಂಕರರು ಅವನ ಪ್ರಶ್ನೆಗೆ ಛಲದಿಂದ ಅರ್ಥಾಂತರವನ್ನು ಕಲ್ಪಿಸಿ ತಕ್ಕ ಉತ್ತರವನ್ನು ನೀಡುತ್ತಾರೆ)

ಕುತೋ ಮುಂಡ್ಯಾಗಲಾನ್ಮುಂಡೀ
ಪಂಥಾಸ್ತೇ ಪೃಚ್ಛ್ಯತೇ ಮಯಾ |
ಕಿಮಾಹ ಪಂಥಾಸ್ತ್ವನ್ಮಾತಾ
ಮುಂಡೇತ್ಯಾಹ ತಥೈವ ಹಿ || ೧೬

ಪಂಥಾನಂ ತ್ವಮಪೃಚ್ಛಸ್ತ್ವಾಂ ಪಂಥಾಃ ಪ್ರತ್ಯಾಹ ಮಂಡನ |
ತ್ವನ್ಮಾತೇತ್ಯತ್ರ ಶಬ್ದೋಽಯಂ ನ ಮಾಂ ಬ್ರೂಯಾದಪೃಚ್ಛಕಮ್ || ೧೭

ಮಂಡನ-ಕುತೋ ಮುಂಡೀ= ಈ ಬೋಳ ಸಂನ್ಯಾಸಿ ಯಾವ ದಾರಿಯಿಂದ ಬಂದ?
ಶ್ರೀಶಂಕರ-(ಎಲ್ಲಿಂದ ಬೋಳ ಎಂದು ಅರ್ಥವನ್ನು ಕಲ್ಪಿಸಿ) ಆ ಗಲಾನ್ಮುಂಡೀ= ಕುತ್ತಿಗೆಯಿಂದ ಮೇಲಕ್ಕೆ ಬೋಳ.
ಮಂಡನ-ಪಂಥಾಸ್ತೇ ಪೃಚ್ಛ್ಯತೇ ಮಯಾ= ನೀನು ಬಂದ ದಾರಿಯಾವುದೆಂದು ಕೇಳುತ್ತಿದ್ದೇನೆ.
ಶ್ರೀಶಂಕರ-(ದಾರಿಯನ್ನು ಕೇಳುತ್ತಿದ್ದೇನೆ ಎಂಬ ಅರ್ಥವನ್ನಿಟ್ಟು) ದಾರಿ ಏನು ಹೇಳಿತು?
ಮಂಡನ-(ಸಿಟ್ಟಿನಿಂದ) ನಿನ್ನ ತಾಯಿ ಮುಂಡೆ ಎಂದು ಹೇಳಿತು!
ಶ್ರೀಶಂಕರ-ಹಾಗೆಯೇ ಆಗಿರಬಹುದು!ಮಂಡನ, ನೀನು ದಾರಿಯನ್ನು ಕುರಿತು ಪ್ರಶ್ನೆ ಮಾಡಿದ್ದೀಯೆ.(ದಾರಿಯು ಉತ್ತರ ಹೇಳಿದಾಗ) ನಿನ್ನ - ಎನ್ನುವುದು ಪ್ರಶ್ನೆಮಾಡಿದ ನಿನಗೆ ಸಂಬಂಧಿಸುತ್ತದೆ. ಪ್ರಶ್ನೆಯನ್ನೇ ಹಾಕದ ನನಗೆ ಸಂಬಂಧಿಸುವುದಿಲ್ಲ!

ಅಹೋ ಪೀತಾ ಕಿಮು ಸುರಾ ನೈವ ಶ್ವೇತಾ ಯತಃ ಸ್ಮರ |
ಕಿಂ ತ್ವಂ ಜಾನಾಸಿ ತದ್ವರ್ಣಮಹಂ ವರ್ಣಂ ಭವಾನ್ ರಸಮ್ || ೧೮

ಮಂಡನ-ಓಹೊ!ಹೆಂಡವು ಪೀತವಾಗಿದೆಯೊ?(ಕುಡಿಯಲ್ಪಟ್ಟಿದೆಯೊ?)
ಶ್ರೀಶಂಕರ- ('ಪೀತಾ'ಶಬ್ದಕ್ಕೆ ಹಳದಿ ಎಂಬ ಅರ್ಥವನ್ನಿಟ್ಟು)ಹೆಂಡವು ಹಳದಿಯಲ್ಲ, ಬೆಳ್ಳಗಿರುತ್ತದೆ, ನೆನಪು ಮಾಡಿಕೊ!
ಮಂಡನ- ನಿನಗೆ ಹೆಂಡದ ಬಣ್ಣ ಗೊತ್ತಿದೆಯೇನು!
ಶ್ರೀಶಂಕರ-ನನಗೆ ಬಣ್ಣ ಗೊತ್ತಿದೆ, ನಿನಗೆ ಅದರ ರುಚಿ ಗೊತ್ತಿದೆ!

ಮತ್ತೋ ಜಾತಃ ಕಲಂಜಾಶೀ ವಿಪರೀತಾನಿ ಭಾಷತೇ |
ಸತ್ಯಂ ಬ್ರವೀತಿ ಪಿತೃವತ್ತ್ವತ್ತೋ ಜಾತಃ ಕಲಂಜಭುಕ್ || ೧೯

ಮಂಡನ-ಕಲಂಜಭಕ್ಷಣ ಮಾಡಿದವನು ಉನ್ಮತ್ತನಾಗಿ ಏನೋನೋ ವಿಪರೀತ ಮಾತುಗಳನ್ನು ಬಡಬಡಿಸುತ್ತಿದ್ದಾನೆ!

ಟಿಪ್ಪಣಿ: ಕಲಂಜ = ವಿಷಪೂರಿತ ಬಾಣದಿಂದ ಕೊಲ್ಲಲ್ಪಟ್ಟ ಮೃಗದ ಮಾಂಸ. ಇದನ್ನು ತಿನ್ನುವುದು ನಿಷಿದ್ಧ.

(ಮತ್ತ =ಉನ್ಮತ್ತ. ಇಲ್ಲಿ 'ಮತ್ತಃ ' ಎಂಬುದಕ್ಕೆ ನನ್ನಿಂದ ಎಂದೂ ಅರ್ಥವಾಗುತ್ತದೆ. ಮತ್ತೋ ಜಾತಃ = ನನ್ನಿಂದ ಹುಟ್ಟಿದವನು-ಎಂಬ ಅರ್ಥವನ್ನು ಕಲ್ಪಿಸಿ ಆಚಾರ್ಯರು ಉತ್ತರ ಹೇಳುತ್ತಾರೆ)

ಶ್ರೀಶಂಕರ-ಸತ್ಯವೇ, ನಿನ್ನಿಂದ ಹುಟ್ಟಿದವನು ಕಲಂಜವನ್ನು ಭಕ್ಷಿಸಿ ತನ್ನ ತಂದೆಯಂತೆ ವಿಪರೀತ ಮಾತುಗಳನ್ನು ಬಡಬಡಿಸುತ್ತಾನೆಂದರೆ ನಿಜವೇ!

ಟಿಪ್ಪಣಿ: ಇಲ್ಲಿ 'ಬ್ರವೀತಿ' ಎಂಬುದಕ್ಕೆ 'ವಿಪರೀತಾನಿ ' ಎಂಬುದೇ ಕರ್ಮಪದವೆಂದು ತಿಳಿದು ಅಧ್ಯಾಹಾರಮಾಡಿ ಅನ್ವಯಿಸುವುದು ಯುಕ್ತ.

ಕಂಥಾಂ ವಹಸಿ ದುರ್ಬುದ್ಧೇ ಗರ್ದಭೇನಾಪಿ ದುರ್ವಹಾಮ್ |
ಶಿಖಾಯಜ್ಞೋಪವೀತಾಭ್ಯಾಂ ಕಸ್ತೇ ಭಾರೋ ಭವಿಷ್ಯತಿ || ೨೦

ಮಂಡನ-ಎಲೋ ಬುದ್ಧಿಹೀನ, ಕತ್ತೆಯೂ ಹೊರಲಾರದ ಕಂತೆಚೀಲವನ್ನು ಹೊತ್ತು ಕೊಂಡಿದ್ದೀಯಲ್ಲ, ಶಿಖಾಯಜ್ಞೋಪವೀತಗಳಿಂದ ನಿನಗೆ ಏನು ಹೊರೆಯಾದೀತು?

ಕಂಥಾಂ ವಹಾಮಿ ದುರ್ಬುದ್ಧೇ ತವ ಪಿತ್ರಾಪಿ ದುರ್ವಹಾಮ್ |
ಶಿಖಾಯಜ್ಞೋಪವೀತಾಭ್ಯಾಂ ಶ್ರುತೇರ್ಭಾರೋ ಭವಿಷ್ಯತಿ || ೨೧

ಶ್ರೀಶಂಕರ-ಎಲೋ ದುರ್ಬುದ್ಧಿಯೆ, ನಿನ್ನ ತಂದೆಗೂ ಹೊರಲು ಸಾಧ್ಯವಾಗದ ಕಂತೆಯನ್ನು ಹೊತ್ತಿದ್ದೇನೆ!ಶಿಖಾಯಜ್ಞೋಪವೀತಗಳಿಂದ ಶ್ರುತಿಗೆ ಭಾರವಾಗುತ್ತದೆ.

ವಿವರಣೆ:- 'ನಿನ್ನ ತಂದೆಗೂ ಸಂನ್ಯಾಸಿಯಾಗುವ ಮನೋದಾರ್ಢ್ಯವಿರಲಿಲ್ಲ, ಅವನು ಕತ್ತೆ ಯಂಥವನು'ಎಂಬ ಧ್ವನಿ ಇಲ್ಲಿದೆ. 'ಯದಹರೇವ ವಿರಜೇತ್‌ತದಹರೇವ ಪ್ರವ್ರಜೇತ್, ಸಂನ್ಯಸ್ಯ ಶ್ರವಣಂ ಕುರ್ಯಾತ್, ಅಥ ಪರಿವ್ರಾಡ್ ವಿವರ್ಣವಾಸಾ ಮುಂಡೋಽಪರಿಗ್ರಹಃ 'ಇತ್ಯಾದಿಶ್ರುತಿಗಳು ಸಂನ್ಯಾಸವನ್ನು ವಿಧಿಸಿರುತ್ತವೆ.

ತ್ಯಕ್ತ್ವಾ ಪಾಣಿಗೃಹೀತೀಂ ಸ್ವಾಮಶಕ್ತ್ಯಾ ಪರಿರಕ್ಷಣೇ |
ಶಿಷ್ಯಪುಸ್ತಕಭಾರೇಚ್ಛೋರ್ ವ್ಯಾಖ್ಯಾತಾ ಬ್ರಹ್ಮನಿಷ್ಠತಾ || ೨೨

ಮಂಡನ-ತನ್ನ ಕೈಹಿಡಿದ ಪತ್ನಿಯನ್ನು ರಕ್ಷಿಸಲು ಸಾಮರ್ಥ್ಯವಿಲ್ಲದೆ ಅವಳನ್ನು ಬಿಟ್ಟು, ಶಿಷ್ಯರನ್ನು ಕಟ್ಟಿಕೊಂಡು ಪುಸ್ತಕಗಳ ಭಾರವನ್ನು ಹೊರಲು ಬಯಸತಕ್ಕವನ ಬ್ರಹ್ಮನಿಷ್ಠೆಯೇನೆಂಬುದು ಸ್ಪಷ್ಟವಾಗುತ್ತದೆ!

ಗುರುಶುಶ್ರೂಷಣಾಲಸ್ಯಾತ್ಸಮಾವರ್ತ್ಯ ಗುರೋಃ ಕುಲಾತ್ |
ಸ್ತ್ರಿಯಃ ಶುಶ್ರೂಷಮಾಣಸ್ಯ ವ್ಯಾಖ್ಯಾತಾ ಕರ್ಮನಿಷ್ಠತಾ || ೨೩

ಶ್ರೀಶಂಕರ - ಗುರುಶುಶ್ರೂಷೆಯನ್ನು ಮಾಡಲಾರದೆ ಸೋಮಾರಿತನದಿಂದ ಗುರು ಕುಲವನ್ನು ಬಿಟ್ಟುಬಂದು ಹೆಂಗಸರ ಸೇವೆಯಲ್ಲಿ ನಿರತನಾದವನ ಕರ್ಮನಿಷ್ಠೆ ಎಷ್ಟೆಂಬುದು ಸ್ಪಷ್ಟವಾಗಿಯೇ ಇದೆ!

ಸ್ಥಿತೋಽಸಿ ಯೋಷಿತಾಂ ಗರ್ಭೇ ತಾಭಿರೇವ ವಿವರ್ಧಿತಃ |
ಅಹೋ ಕೃತಘ್ನತಾ ಮೂರ್ಖ ಕಥಂ ತಾ ಏವ ನಿಂದಸಿ || ೨೪

ಮಂಡನ-ಹೆಂಗಸರ ಗರ್ಭದಲ್ಲಿದ್ದು ಅವರಿಂದಲೇ ಪೋಷಿತನಾಗಿ ಬೆಳೆದಿರುವ ನೀನು ಆ ಸ್ತ್ರೀಯರನ್ನೇ ನಿಂದಿಸುತ್ತಿದ್ದೀಯೆ. ಅಯ್ಯೋ ಮೂರ್ಖ, ನಿನ್ನ ಕೃತಘ್ನತೆ ಎಷ್ಟಿರಬಹುದು?

ಯಾಸಾಂ ಸ್ತನ್ಯಂ ತ್ವಯಾ ಪೀತಂ ಯಾಸಾಂ ಜಾತೋಽಸಿ ಯೋನಿತಃ |
ತಾಸು ಮೂರ್ಖತಮ ಸ್ತ್ರೀಷು ಪಶುವದ್ರಮಸೇ ಕಥಮ್ || ೨೫

ಶ್ರೀಶಂಕರ-ಯಾವ ಸ್ತ್ರೀಯರ ಸ್ತನ್ಯವನ್ನು ನೀನು ಕುಡಿದಿದ್ದೀಯೋ, ಯಾರ ಯೋನಿಯಿಂದ ಹುಟ್ಟಿ ಬಂದಿದ್ದೀಯೋ, ಅಂಥ ಸ್ತ್ರೀಯರಲ್ಲಿ, ಎಲೋ ಮೂರ್ಖತಮ, ಪಶುಗಳಂತೆ ಹೇಗೆ ನೀನು ರಮಿಸುತ್ತಿರಬಹುದು?

ವೀರಹತ್ಯಾಮವಾಪ್ತೋಽಸಿ ವಹ್ನೀನುದ್ವಾಸ್ಯ ಯತ್ನತಃ |
ಆತ್ಮಹತ್ಯಾಮವಾಪ್ತಸ್ತ್ವಮವಿದಿತ್ವಾ ಪರಂ ಪದಮ್ || ೨೬

ಮಂಡನ-ತ್ರೇತಾಗ್ನಿಗಳನ್ನು ಯತ್ನಪೂರ್ವಕವಾಗಿ ತ್ಯಜಿಸಿರುವ ನೀನು ವೀರಹತ್ಯಾ ದೋಷಕ್ಕೆ ಭಾಗಿಯಾಗಿದ್ದೀಯೆ.
ಶ್ರೀಶಂಕರ - ಪರಬ್ರಹ್ಮವನ್ನು ಅರಿಯದಿರುವ ನೀನು ಆತ್ಮಹತ್ಯಾದೋಷಕ್ಕೆ ಭಾಗಿ ಯಾಗಿದ್ದೀಯೆ!

ವಿವರಣೆ:- 'ವೀರಹಾ ವಾ ಏಷ ದೇವಾನಾಂ ಯೋಽಗ್ನೀನುದ್ವಾಸಯತಿ' ಎಂದು ಶ್ರುತಿ ಇದೆ. ಅಗ್ನಿಗಳನ್ನು ಉಪಾಸನೆ ಮಾಡದೆ ತ್ಯಜಿಸಿದರೆ ವೀರಹತ್ಯೆಯ ದೋಷಬರುತ್ತದೆ. ವೀರ = ಇಂದ್ರ. ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ-ಇವು ತ್ರೇತಾಗ್ನಿಗಳು. ಗೃಹಸ್ಥನಾಗಿ ಈ ಅಗ್ನಿಗಳನ್ನು ಉಪಾಸನೆ ಮಾಡಬೇಕೆಂದು ವಿಧಿ ಇದೆ.

ಯಾವನು ಬ್ರಹ್ಮಜ್ಞಾನಿಯಾಗುವುದಿಲ್ಲವೋ ಅವನು ಆತ್ಮಹತ್ಯೆಯನ್ನು ಮಾಡಿದಂತೆ-ಎಂದು ಶ್ರುತಿಸ್ಮೃತಿಗಳು ಹೇಳುತ್ತವೆ- 'ಅಸನ್ನೇವ ಸ ಭವತಿ ಅಸದ್ ಬ್ರಹ್ಮೇತಿ ವೇದಚೇತ್'
ಅಸುರ್ಯಾ ನಾಮ ತೇ ಲೋಕಾ ಅಂಧೇನ ತಮಸಾವೃತಾಃ |
ತಾಂಸ್ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇ ಚಾತ್ಮಹನೋ ಜನಾಃ ||

ಅನ್ಯಥಾ ಸಂತಮಾತ್ಮಾನಂ ಯೋಽನ್ಯಥಾ ಪ್ರತಿಪದ್ಯತೇ |
ಕಿಂ ತೇನ ನ ಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ ||

ದೌವಾರಿಕಾನ್ ವಂಚಯಿತ್ವಾ ಕಥಂ ಸ್ತೇನವದಾಗತಃ |
ಭಿಕ್ಷುಭ್ಯೋಽನ್ನಮದತ್ವಾ ತ್ವಂ ಸ್ತೇನವದ್ಭೋಕ್ಷ್ಯಸೇ ಕಥಮ್ || ೨೭

ಮಂಡನ-ದ್ವಾರಪಾಲಕರನ್ನು ವಂಚಿಸಿ ಕಳ್ಳನಂತೆ ಹೇಗೆ ಒಳಗೆ ಬಂದೆ?
ಶ್ರೀಶಂಕರ-ಭಿಕ್ಷುಗಳಿಗೆ ಅನ್ನವನ್ನು ನೀಡದೆ ಕಳ್ಳನಂತೆ ಹೇಗೆ ಊಟಮಾಡುವೆ?

ಕರ್ಮಕಾಲೇ ನ ಸಂಭಾಷ್ಯ ಅಹಂ ಮೂರ್ಖೇಣ ಸಂಪ್ರತಿ |
ಅಹೋ ಪ್ರಕಟಿತಂ ಜ್ಞಾನಂ ಯತಿಭಂಗೇನ ಭಾಷಿಣಾ || ೨೮

ಮಂಡನ-ಇದು ಶ್ರಾದ್ಧಕರ್ಮದ ಸಮಯ. ಈಗ ಮೂರ್ಖನೊಡನೆ ನಾನು ಮಾತು ಬೆಳೆಸಬಾರದು!
ಶ್ರೀಶಂಕರ-ಆಹಾ!ಯತಿಭಂಗದಿಂದ ಮಾತಾಡತಕ್ಕವನ ಜ್ಞಾನವೆಷ್ಟೆಂಬುದು ಗೊತ್ತಾಯಿತು!

ವಿವರಣೆ:- 'ಕರ್ಮಕಾಲೇ ನ ಸಂಭಾಷ್ಯ ಅಹಂ ಮೂರ್ಖೇಣ ಸಂಪ್ರತಿ' ಎಂದು ಮಂಡನವಾಕ್ಯದಲ್ಲಿ ಸಂಭಾಷ್ಯಃ+ಅಹಂ = ಸಂಭಾಷ್ಯೋಽಹಂ ಎಂದು ರೂಪವಾಗಬೇಕು. ಹಾಗೆ ಸಂಧಿಮಾಡಿದರೆ ಅನುಷ್ಟುಪ್ ವೃತ್ತದಲ್ಲಿ ಒಂದು ಅಕ್ಷರ ಕಡಿಮೆಯಾಗಿ ಛಂದೋದೋಷವಾಗುತ್ತದೆ. ಆದ್ದರಿಂದ ಸಂಧಿಕಾರ್ಯವನ್ನು ಮಾಡಿಲ್ಲ. ಸಂಧಿಕಾರ್ಯವನ್ನು ಮಾಡದಿದ್ದರೆ ವ್ಯಾಕರಣದೋಷವಾಗುತ್ತದೆ. ಇದು ವಿಸಂಧಿ ಎಂಬ ಕಾವ್ಯದೋಷ. ಇದೇ ಪ್ರಕೃತದಲ್ಲಿಯತಿಭಂಗ, ಯತಿಸ್ಥಾನದಲ್ಲಾದ ವಿಸಂಧಿ ದೋಷವೆಂದರ್ಥ.

ಯತಿಭಂಗೇ ಪ್ರವೃತ್ತಸ್ಯ ಯತಿಭಂಗೋ ನ ದೋಷಭಾಕ್ |
ಯತಿಭಂಗೇ ಪ್ರವೃತ್ತಸ್ಯ ಪಂಚಮ್ಯಂತಂ ಸಮಸ್ಯತಾಮ್ || ೨೯

ಮಂಡನ-ಯತಿಭಂಗದಲ್ಲಿ (ಸಂನ್ಯಾಸಿಯ ಖಂಡನೆಗಾಗಿ) ತೊಡಗಿದವನಿಗೆ ಯತಿಭಂಗವು ದೋಷವಲ್ಲ!
ಶ್ರೀಶಂಕರ- 'ಯತಿಭಂಗೇ'ಎಂಬಲ್ಲಿ ಪಂಚಮ್ಯಂತದೊಡನೆ ಸಮಾಸವನ್ನು ಮಾಡಿಕೊಳ್ಳಬೇಕು!(ಯತಿಯ ದೆಸೆಯಿಂದ ಭಂಗ ಪಡುವುದರಲ್ಲಿ ತೊಡಗಿದವನಿಗೆ ಎಂದರ್ಥ)

ವಿವರಣೆ:-ಯತೇಃ ಭಂಗಃ = ಯತಿಭಂಗಃ'ಯತೇಃ-' ಎಂಬುದು ಪಂಚಮ್ಯಂತವೂ ಆಗುತ್ತದೆ. ಷಷ್ಠ್ಯಂತವೂ ಆಗುತ್ತದೆ. ಷಷ್ಠೀಸಮಾಸವೆಂದು ಮಂಡನನು ಪ್ರಯೋಗಿಸಿದ್ದಾನೆ. ಪಂಚಮೀಸಮಾಸವನ್ನು ಮಾಡಿಕೊಳ್ಳಬೇಕೆಂದು ಆಚಾರ್ಯರ ಉತ್ತರ. ಅರ್ಥಭೇದವು ಸ್ಪಷ್ಟವಾಗಿದೆ.

ಕ್ವ ಬ್ರಹ್ಮಕ್ವ ಚ ದುರ್ಮೇಧಾಃ ಕ್ವ ಸಂನ್ಯಾಸಃ ಕ್ವ ವಾ ಕಲಿಃ |
ಸ್ವಾದ್ವನ್ನ ಭಕ್ಷಕಾಮೇನ ವೇಷೋಽಯಂ ಯೋಗಿನಾಂ ಧೃತಃ || ೩೦

ಮಂಡನ-ಬ್ರಹ್ಮವೆಲ್ಲಿ?ಈ ದುರ್ಬುದ್ಧಿಯವನೆಲ್ಲಿ?,ಸಂನ್ಯಾಸವೆಲ್ಲಿ? ಕಲಿಯುಗವೆಲ್ಲಿ? ಮೃಷ್ಟಾನ್ನಭೋಜನದ ಆಸೆಯಿಂದ ಈತನು ಸಂನ್ಯಾಸಿಗಳ ವೇಷವನ್ನು ಹಾಕಿದ್ದಾನೆಂದು ಭಾವಿಸುತ್ತೇನೆ!

ಕ್ವ ಸ್ವರ್ಗಃ ಕ್ವ ದುರಾಚಾರಃ ಕ್ವಾಗ್ನಿಹೋತ್ರಂ ಕ್ವ ವಾ ಕಲಿಃ |
ಮನ್ಯೇ ಮೈಥುನಕಾಮೇನ ವೇಷೋಽಯಂ ಕರ್ಮಿಣಾಂ ಧೃತಃ || ೩೧

ಶ್ರೀಶಂಕರ-ಸ್ವರ್ಗವೆಲ್ಲಿ ? ಈ ದುರಾಚಾರನೆಲ್ಲಿ? ಅಗ್ನಿಹೋತ್ರವೆಲ್ಲಿ ? ಕಲಿಯುಗವೆಲ್ಲಿ? ಮೈಥುನದ ಬಯಕೆಯಿಂದ ಈತನು ಕರ್ಮಠರ ವೇಷವನ್ನು ಹಾಕಿದ್ದಾನೆಂದು ಭಾವಿಸುತ್ತೇನೆ!

ಇತ್ಯಾದಿ ದುರ್ವಾಕ್ಯಗಣಂ ಬ್ರುವಾಣೇ
ರೋಷೇಣ ಸಾಹಂಕೃತಿ ವಿಶ್ವರೂಪೇ |
ಶ್ರೀ ಶಂಕರೇ ವಕ್ತರಿ ತಸ್ಯ ತಸ್ಯೋ-
ತ್ತರಂ ಚ ಕೌತೂಹಲತಶ್ಚ ಚಾರು || ೩೨

ಹೀಗೆ ಅಹಂಕಾರಿಯಾದ ವಿಶ್ವರೂಪನು (ಮಂಡನಮಿಶ್ರನು)ಸಿಟ್ಟಿನಿಂದ ದುರ್ವಾಕ್ಯಗಳನ್ನಾಡುತ್ತಿದ್ದನು. ಶ್ರೀಶಂಕರರಾದರೋ ಅವನ ಒಂದೊಂದು ಮಾತಿಗೂ ಚಮತ್ಕಾರಕ್ಕಾಗಿ ಸೊಗಸಾದ ಉತ್ತರವನ್ನು ನೀಡುತ್ತಿದ್ದರು.

ಟಿಪ್ಪಣಿ: ಆಚಾರ್ಯರು ಸಿಟ್ಟಿನಿಂದ ಉತ್ತರವನ್ನು ಹೇಳಲಿಲ್ಲ.

ತಂ ಮಂಡನಂ ಸಸ್ಮಿತಜೈಮಿನೀಕ್ಷಿತಂ
ವ್ಯಾಸೋಽಬ್ರವೀಜ್ಜಲ್ಪಸಿ ವತ್ಸ ದುರ್ವಚಃ |
ಆಚಾರಣಾ ನೇಯಮನಿಂದಿತಾತ್ಮನಾಂ
ಜ್ಞಾತಾತ್ಮತತ್ತ್ವಂ ಯಮಿನಂ ಧುತೈಷಣಮ್ || ೩೩

ಆಗ ಜೈಮಿನಿಮುನಿಗಳು ಮುಗುಳ್ನಗೆ ಬೀರುತ್ತ ಮಂಡನನನ್ನು ನೋಡುತ್ತಿದ್ದರು. ವೇದವ್ಯಾಸರು ಮಂಡನನನ್ನು ಕುರಿತು ಇಂತೆಂದರು: "ವತ್ಸ, ನೀನು ಕೆಟ್ಟಮಾತುಗಳನ್ನಾಡುತ್ತಿದ್ದೀಯೆ. ಏಷಣಾತ್ಯಾಗಮಾಡಿದವರೂ ಆತ್ಮಜ್ಞಾನಿಗಳೂ ಆದ ಈ ಯತಿಗಳಿಗೆ ಅಂತಹ ಮಾತುಗಳನ್ನಾಡುವುದು ಸಜ್ಜನರ ಆಚಾರವಲ್ಲ."

ಟಿಪ್ಪಣಿ: ಏಷಣಾ= ಬಯಕೆ. ಪುತ್ರೈಷಣಾ, ವಿತ್ತೈಷಣಾ(ಲೋಕೈಷಣಾ) ದಾರೈಷಣಾ ಎಂದು ಏಷಣಾತ್ರಯ, ಈಷಣಾತ್ರಯವೆಂದೂ ಹೇಳುವುದುಂಟು.

ಅಭ್ಯಾಗತೋಽಸೌ ಸ್ವಯಮೇವ ವಿಷ್ಣು-
ರಿತ್ಯೇವ ಮತ್ವಾಽಽಶು ನಿಮಂತ್ರಯ ತ್ವಮ್ |
ಇತ್ಯಾಶ್ರವಂ ಜ್ಞಾತವಿಧಿಂ ಪ್ರತೀತಂ
ಸುಧ್ಯಗ್ರಣೀಃ ಸಾಧ್ವಶಿಷನ್ಮುನಿಸ್ತಮ್ || ೩೪

ತಾವಾಗಿ ಅಭ್ಯಾಗತರಾಗಿ ಬಂದ ಇವರನ್ನು ಸಾಕ್ಷಾತ್ ವಿಷ್ಣುವೆಂದು ತಿಳಿದು, ಶ್ರಾದ್ಧಕ್ಕೆ ಇವರನ್ನು ನಿಮಂತ್ರಿಸು." ಈ ರೀತಿಯಾಗಿ ವಿದ್ವದ್ವರೇಣ್ಯರಾದ ವ್ಯಾಸಮಹರ್ಷಿಗಳು ತಮಗೆ ವಿಧೇಯನೂ ವಿಧಿಜ್ಞನೂ ವಿಖ್ಯಾತನೂ ಆದ ಮಂಡನ ಮಿಶ್ರನಿಗೆ ಆದೇಶಿಸಿದರು.

ಟಿಪ್ಪಣಿ: ಆಶ್ರವ = ಮಾತನ್ನು ಕೇಳತಕ್ಕ ವಿಧೇಯ.

ಅಥೋಪಸಂಸ್ಪೃಶ್ಯ ಜಲಂ ಸ ಶಾಂತಃ
ಸಸಂಭ್ರಮಂ ಮಂಡನ ಪಂಡಿತೋಽಪಿ |
ವ್ಯಾಸಾಜ್ಞಯಾ ಶಾಸ್ತ್ರವಿದರ್ಚಯಿತ್ವಾ
ನ್ಯಮಂತ್ರಯದ್ಭೈಕ್ಷಕೃತೇ ಮಹರ್ಷಿಮ್ || ೩೫

ಆಗ ಮಂಡನಪಂಡಿತನು ಶಾಂತನಾಗಿ ತ್ವರೆಪಡುತ್ತ ಜಲದಿಂದ ಆಚಮನ ಮಾಡಿದನು. ಅವನು ಶಾಸ್ತ್ರಜ್ಞನಾದ್ದರಿಂದ ವ್ಯಾಸರ ಆಜ್ಞೆಯಂತೆ ಮಹರ್ಷಿಗಳಾದ ಶ್ರೀಶಂಕರರನ್ನು ಅರ್ಚಿಸಿ ಭೈಕ್ಷವನ್ನು ಸ್ವೀಕರಿಸಬೇಕೆಂದು ನಿಮಂತ್ರಿಸಿದನು.

ಸ ಚಾಬ್ರವೀತ್ ಸೌಮ್ಯ ವಿವಾದಭಿಕ್ಷಾ-
ಮಿಚ್ಛನ್ ಭವತ್ಸನ್ನಿಧಿಮಾಗತೋಽಸ್ಮಿ |
ಸಾಽನ್ಯೋನ್ಯಶಿಷ್ಯತ್ವಪಣಾ ಪ್ರದೇಯಾ
ನಾಸ್ತ್ಯಾದರಃ ಪ್ರಾಕೃತಭಕ್ತಭೈಕ್ಷ್ಯೇ || ೩೬

ಆಗ ಶ್ರೀಶಂಕರಾಚಾರ್ಯರು "ಸೌಮ್ಯ, ಶಾಸ್ತ್ರದಲ್ಲಿ ವಾದಭಿಕ್ಷೆಯನ್ನು ಬಯಸಿ ನಾನು ನಿನ್ನ ಬಳಿಗೆ ಬಂದಿದ್ದೇನೆ. (ವಾದದಲ್ಲಿ ಸೋತವನು) ಗೆದ್ದವನಿಗೆ ಶಿಷ್ಯನಾಗಬೇಕೆಂದು ಅನ್ಯೋನ್ಯವಾಗಿ ಪಣವಿರತಕ್ಕದ್ದು. ಸಾಮಾನ್ಯವಾದ ಈ ಅನ್ನಭಿಕ್ಷೆಯಲ್ಲಿ ನನಗೆ ಆದರವಿಲ್ಲ.

ಮಮ ನ ಕಿಂಚಿದಪಿ ಧ್ರುವಮೀಪ್ಸಿತಂ
ಶ್ರುತಿಶಿರಃ ಪಥ ವಿಸ್ತೃತಿಮಂತರಾ |
ಅವಹಿತೇನ ಮಖೇಷ್ವವಧೀರಿತಃ
ಸ ಭವತಾ ಭವತಾಪಹಿಮದ್ಯುತಿಃ || ೩೭

"ವೇದಾಂತಮಾರ್ಗವನ್ನು ವಿಸ್ತರಿಸುವುದರ ಹೊರತಾಗಿ ಬೇರೆಯಾವುದೂ ನನಗೆ ಖಂಡಿತವಾಗಿ ಬೇಕಾಗಿಲ್ಲ. ಸಂಸಾರದ ತಾಪವನ್ನು ಪೂರ್ಣಚಂದ್ರನಂತೆ ಪರಿಹರಿಸತಕ್ಕದ್ದು ವೇದಾಂತ. ಸದಾ ಯಜ್ಞಗಳಲ್ಲಿ ಪ್ರಸಕ್ತನಾದ ನೀನು ಉಪನಿಷನ್ಮಾರ್ಗವನ್ನು ತಿರಸ್ಕರಿಸಿಬಿಟ್ಟಿದ್ದೀಯೆ.

ಜಗತಿ ಸಂಪ್ರತಿ ತಂ ಪ್ರಥಯಾಮ್ಯಹಂ
ಸಮಭಿಭೂಯ ಸಮಸ್ತ ವಿವಾದಿನಮ್ |
ತ್ವಮಪಿ ಸಂಶ್ರಯ ಮೇ ಮತಮುತ್ತಮಂ
ವಿವದ ವಾ ವದ ವಾಽಸ್ಮಿ ಜಿತಸ್ತ್ವಿತಿ || ೩೮

ಈಗಲಾದರೋ ನಾನು ಸಮಸ್ತ ಪ್ರತಿವಾದಿಗಳನ್ನೂ ಜಯಿಸಿ ಆ ಉಪನಿಷನ್ಮಾರ್ಗವನ್ನು ಜಗತ್ತಿನಲ್ಲಿ ಹರಡುವುದಕ್ಕಾಗಿ ಉದ್ಯುಕ್ತನಾಗಿದ್ದೇನೆ. ನೀನೂ ಸಹ ಶ್ರೇಷ್ಠವಾದ ನನ್ನ ಈ ಸಿದ್ಧಾಂತವನ್ನು ಅಂಗೀಕರಿಸು. ಇಲ್ಲವಾದರೆ ವಾದಭೂಮಿಗೆ ಇಳಿ. ಅಥವಾ ಸೋತೆನೆಂದಾದರೂ ಹೇಳು" ಎಂದರು.

ಇತಿ ಯತಿಪ್ರವರಸ್ಯ ನಿಶಮ್ಯ ತ-
ದ್ವಚನಮರ್ಥವದಾಗತ ವಿಸ್ಮಯಃ |
ಪರಿಭವೇನ ನವೇನ ಮಹಾಯಶಾಃ
ಸ ನಿಜಗೌ ನಿಜಗೌರವಮಾಸ್ಥಿತಃ || ೩೯

ಟಿಪ್ಪಣಿ:- ನಿಜಗೌ = ನಿ + ಗೈ - ಶಬ್ದೇ. ಲಿಟ್.

ಯತಿಶ್ರೇಷ್ಠರ ಅರ್ಥವತ್ತಾದ ಆ ನುಡಿಯನ್ನು ಕೇಳಿ ಮಂಡನಮಿಶ್ರನಿಗೆ ಆಶ್ಚರ್ಯವಾಗಿ ಹೋಯಿತು. (ತನ್ನೊಡನೆ ವಾದಮಾಡು ಎಂದದ್ದೇ) ಅವನಿಗೆ ನೂತನವಾದ ಅವಮಾನವಾಗಿ ತೋರಿ ವಿಸ್ಮಿತನಾದನು. ತನ್ನ ಗುರುತ್ವವನ್ನು ಉಳಿಸಿಕೊಂಡೇ ಹೀಗೆಂದನು:

ಅಪಿ ಸಹಸ್ರಮುಖೇ ಫಣಿನಾಮಕೇ
ನ ವಿಜಿತಸ್ತ್ವಿತಿ ಜಾತು ಫಣತ್ಯಯಮ್ |
ನ ಚ ವಿಹಾಯ ಮತಂ ಶ್ರುತಿಸಂಮತಂ
ಮುನಿಮತೇ ನಿಪತೇತ್ಪರಿಕಲ್ಪಿತೇ || ೪೦

"ಸಹಸ್ರಶೀರ್ಷನಾದ ಆದಿಶೇಷನು ವಾದಕ್ಕೆ ಬಂದರೂ'ಸೋತೆನು'ಎಂಬ ಮಾತನ್ನು ಈ ಮಂಡನಮಿಶ್ರನು ಎಂದಿಗೂ ಹೇಳಲಿಕ್ಕಿಲ್ಲ!ವೇದಸಂಮತವಾದ ಕರ್ಮಸಿದ್ಧಾಂತವನ್ನು ಬಿಟ್ಟು ಪರಿಕಲ್ಪಿತವಾದ ಇನ್ನೊಬ್ಬ ಮುನಿಯ ಮತದಲ್ಲಿ ಈತನು ಇಳಿಯಲಿಕ್ಕಿಲ್ಲ!

ಅಪಿ ಕದಾಚಿದುದೇಷ್ಯತಿ ಕೋವಿದಃ
ಸರಸವಾದಕಥಾಽಪಿ ಭವಿಷ್ಯತಿ |
ಇತಿ ಕುತೂಹಲಿನೋ ಮಮ ಸರ್ವದಾ
ಜಯಮಹೋಽಯಮಹೋ ಸ್ವಯಮಾಗತಃ || ೪೧

ಎಂದಾದರೂ ಒಬ್ಬ ವಿದ್ವಾಂಸನು (ಈ ಜಗತ್ತಿನಲ್ಲಿ) ಹುಟ್ಟಬಹುದೆ?ಹುಟ್ಟಿದರೆ ಅವನೊಡನೆ ನನಗೆ ರಸವತ್ತಾದ ವಾದಕಥೆ ನಡೆದೀತು!'ಎಂಬುದಾಗಿ ನಾನು ಸರ್ವದಾ ಕುತೂಹಲದಿಂದ ಕಾದುಕೊಂಡಿದ್ದೇನೆ. ಆಹಾ!ಈ ಜಯಮಹೋತ್ಸವವು ತಾನಾಗಿ ಒದಗಿ ಬಂದಿತು!

ಭವತು ಸಂಪ್ರತಿ ವಾದಕಥಾಽಽವಯೋಃ
ಫಲತು ಪುಷ್ಕಲಶಾಸ್ತ್ರಪರಿಶ್ರಮಃ |
ಉಪನತಾ ಸ್ವಯಮೇವ ನ ಗೃಹ್ಯತೇ
ನವಸುಧಾ ವಸುಧಾವಸಥೇನ ಕಿಮ್ || ೪೨

"ನಮ್ಮಿರ್ವರಿಗೂ ವಾದ ನಡೆಯಲಿ! ಶಾಸ್ತ್ರದಲ್ಲಿ ಮಾಡಿದ ಪುಷ್ಕಳವಾದ ಪರಿಶ್ರಮವು ಈಗ ಸಫಲವಾಗಲಿ! ತಾನಾಗಿ ಒದಗಿ ಬಂದ ನೂತನಸುಧೆಯನ್ನು ಯಾವ ಮನುಷ್ಯನು ಸ್ವೀಕರಿಸದೆ ಇದ್ದಾನು?

ಟಿಪ್ಪಣಿ: ವಸುಧಾವಸಥ = ಭೂಲೋಕವು ವಾಸಸ್ಥಾನವಾಗಿ ಉಳ್ಳ ಮನುಷ್ಯ.

ಅಯಮಹಂ ಯಮಹಂತುರಪಿ ಸ್ವಯಂ
ಶಮಯಿತಾ ಮಯಿ ತಾವಕಸದ್ಗಿರಾಮ್ |
ಸುಕಲಹಂ ಕಲಹಂಸಕಲಾಭೃತಾಂ
ದಿಶ ಸುಧಾಂಶು ಸುಧಾಮಲಸತ್ತ್ವನೋ || ೪೩

"ಮೃತ್ಯುಂಜಯನಾದ ರುದ್ರನೇ ಸ್ವಯಂ ಬಂದರೂ ವಾದಕಲಹದಲ್ಲಿ ಅವನನ್ನು ಸೋಲಿಸತಕ್ಕವನು ನಾನು! ಚಂದ್ರನ ಬೆಳದಿಂಗಳಂತೆ ಕೋಮಲವಾದ ದೇಹವುಳ್ಳ ಯತಿಗಳೆ, ಕಲಹಂಸದ ಕಲಕಲಧ್ವನಿಗಳಂತೆ ಮಧುರವಾದ ನಿಮ್ಮ ವಾಣಿಗಳಿಂದ ವಾದಕಲಹವನ್ನು ನನ್ನಲ್ಲಿ ಪ್ರದರ್ಶಿಸಬಹುದು!

ಅಪಿ ತು ದುರ್ಹೃದಯಸ್ಮಯಕಾನನ-
ಕ್ಷತಿಕಠೋರ ಕುಠಾರ ಧುರಂಧರಾ |
ನ ಪಟುತಾ ಮಮ ತೇ ಶ್ರವಣಾಂತಿಕಂ
ನನು ಗತಾನುಗತಾಖಿಲದರ್ಶನಾ || ೪೪

"ಆದರೆ ಉದ್ಧತರಾದ ಪ್ರತಿವಾದಿಗಳ ಅಹಂಕಾರವೆಂಬ ಅರಣ್ಯವನ್ನು ಕಡಿದು ಕೊಚ್ಚಿ ತುಂಡರಿಸುವ ಕಠೋರ ಕುಠಾರಸದೃಶವೂ ಸಕಲಶಾಸ್ತ್ರಗಳಲ್ಲಿ ಅಪ್ರತಿಹತ ಗತಿಯುಳ್ಳದ್ದೂ ಆದ ನನ್ನ ವಾಕ್‌ಪಟುತ್ವವು ನಿಮ್ಮ ಕಿವಿಗಳ ಬಳಿಯಲ್ಲಿ ಇನ್ನೂ ಸುಳಿದಿಲ್ಲ!

ಅತ್ಯಲ್ಪಮೇತದ್ಭವತೇರಿತಂ ಮುನೇ
ಭೈಕ್ಷ್ಯಂ ಪ್ರಕುರ್ವೇ ಯದಿ ವಾದದಿತ್ಸುತಾ |
ಗತೋದ್ಯಮೋಽಹಂ ಶ್ರುತವಾದವಾರ್ತಯಾ
ಚಿರೇಪ್ಸಿತೇಯಂ ವದಿತಾ ನ ಕಶ್ಚನ || ೪೫

"ಮುನಿಗಳೆ, 'ವಾದಕ್ಕೆ ಬರುವುದಾದರೆ ಭಿಕ್ಷೆಯನ್ನು ಸ್ವೀಕರಿಸುತ್ತೇನೆಂದು' ಹೇಳಿದಿರಲ್ಲ, ಇದು ಅತ್ಯಲ್ಪವಿಚಾರ. ವಾದದ ವಾರ್ತೆಯನ್ನು ಕೇಳಿದರೆ ಸಾಕು, ಎಲ್ಲ ಉದ್ಯಮವನ್ನೂ ಬಿಟ್ಟು ವಾದಕ್ಕೆ ಸಜ್ಜಾಗತಕ್ಕವನು ನಾನು! ಬಹುಕಾಲದಿಂದ ವಾದಕ್ಕಾಗಿ ಹವಣಿಸುತ್ತಲೇ ಇದ್ದೇನೆ. ಒಬ್ಬ ವಾದಿಯೂ ದೊರೆಯಲಿಲ್ಲ!

ವಾದಂ ಕರಿಷ್ಯಾಮಿ ನ ಸಂದಿಹೇಽತ್ರ
ಜಯಾಜಯೌ ನೌ ವದಿತಾ ನ ಕಶ್ಚಿತ್ |
ನ ಕಂಠಶೋಷೈಕಫಲೋ ವಿವಾದೋ
ಮಿಥೋ ಜಿಗೀಷೂ ಕುರುತಸ್ತು ವಾದಮ್ || ೪೬

"ಸಂದೇಹವೇ ಇಲ್ಲ, ನಿಮ್ಮೊಡನೆ ವಾದಮಾಡವೆನು. ಆದರೆ ನಮ್ಮಿಬ್ಬರ ಜಯಾಪಜಯಗಳನ್ನು ನಿರ್ಣಯಿಸಿ ಹೇಳತಕ್ಕ ಮಧ್ಯಸ್ಥನೇ ಇಲ್ಲ. ವಿವಾದಕ್ಕೆ ಕಂಠಶೋಷಣೆಯೇ ಫಲವಾಗಬಾರದು. ಒಬ್ಬರನ್ನೊಬ್ಬರು ಜಯಿಸುವುದಕ್ಕಾಗಿಯಲ್ಲವೆ ವಾದಮಾಡುತ್ತಾರೆ?

ವಾದೇ ಹಿ ವಾದಿಪ್ರತಿವಾದಿನೌ ದ್ವೌ
ವಿಪಕ್ಷ ಪಕ್ಷಗ್ರಹಣಂ ವಿಧತ್ತಃ |
ಕಾ ನೌ ಪ್ರತಿಜ್ಞಾ ವದತೋಽಶ್ಚ ತಸ್ಯಾಂ
ಕಿಂ ಮಾನಮಿಷ್ಟಂ ವದ ಕಃ ಸ್ವಭಾವಃ || ೪೭

"ಶಾಸ್ತ್ರೀಯವಾದದಲ್ಲಿ ವಾದಿಪ್ರತಿವಾದಿಗಳಿಬ್ಬರು ಪಕ್ಷ-ವಿಪಕ್ಷಗಳನ್ನು ಆಶ್ರಯಿಸುತ್ತಾರಷ್ಟೆ. ವಾದಿಸತಕ್ಕ ನಮ್ಮೀರ್ವರ ಪಕ್ಷಪ್ರತಿಪಕ್ಷಗಳ ಪ್ರತಿಜ್ಞೆಯಾವುದು? ಆ ಪ್ರತಿಜ್ಞೆಯನ್ನು ಸಾಧಿಸಲು ಇಷ್ಟವಾದ ಪ್ರಮಾಣವಾವುದು? ಅವುಗಳಲ್ಲಿ ನಿಮ್ಮ ಸ್ವಕೀಯ ಪಕ್ಷವು ಯಾವುದೆಂಬುದನ್ನು ಹೇಳಿರಿ.

ಕಃ ಪಾರ್ಷ್ಣಿಕೋಽಹಂ ಗೃಹಮೇಧಿಸತ್ತಮಃ
ತ್ವಂ ಭಿಕ್ಷುರಾಜೋ ವದತಾಮನುತ್ತಮಃ |
ಜಯಾಜಯೌ ನೌ ಸಪಣೌ ವಿಧೀಯತಾಂ
ತತಃ ಪರಂ ಸಾಧು ವದಾವ ಸುಸ್ಮಿತೌ || ೪೮

"ಈ ವಾದದಲ್ಲಿ ಮಧ್ಯಸ್ಥನು ಯಾರು?ನಾನಾದರೋ (ಕರ್ಮಠರಾದ) ಗೃಹಸ್ಥರಲ್ಲಿ ಉತ್ತಮನೆನಿಸಿಕೊಂಡವನು. ನೀವು ವಾದಿಶ್ರೇಷ್ಠರಾದ ಯತೀಶ್ವರರು. ಜಯಾಪಜಯಗಳಿಗೆ ಪಣವೇನೆಂಬುದು ವಿಹಿತವಾಗಲಿ. ಅನಂತರ ನಗುನಗುತ್ತ ಸಂತೋಷದಿಂದ ವಾದಿಸೋಣ.

ಟಿಪ್ಪಣಿ: ಯಾರು ಯಾವ ಪಕ್ಷವನ್ನು ವಹಿಸಬೇಕೆಂಬುದು ಇಲ್ಲಿ ಸೂಚಿತವಾಗಿದೆ.

ಅದ್ಯಾತಿಧನ್ಯೋಽಸ್ಮಿ ಯದಾರ್ಯಪಾದೋ
ಮಯಾ ಸಹಾಭ್ಯರ್ಥಯತೇ ವಿವಾದಮ್ |
ಭವಿಷ್ಯತೇ ವಾದಕಥಾಽಪರೇದ್ಯುಃ
ಮಾಧ್ಯಾಹ್ನಿಕಂ ಸಂಪ್ರತಿ ಕರ್ಮ ಕುರ್ಯಾಮ್ || ೪೯

ಪೂಜ್ಯರಾದ ನೀವು ನನ್ನೊಡನೆ ವಾದವನ್ನು ಇಂದು ಯಾಚಿಸುತ್ತಿರುವಿರಲ್ಲ, ಅದರಿಂದ ನಾನು ಪರಮಧನ್ಯನಾದೆನು. ನಾಳೆಯ ದಿನ ವಾದಕಥೆಯು ನಡೆಯುವುದು!ಸಾಂಪ್ರತ ನಾನು ಮಾಧ್ಯಾಹ್ನಿಕವಿಧಿಯನ್ನಾಚರಿಸುವೆನು"ಎಂದನು.

ತಥೇತಿ ಸೂಕ್ತೇ ಸ್ಮಿತಶಂಕರೇಣ
ಭವಿಷ್ಯತೇ ವಾದಕಥಾ ಶ್ವ ಏವ |
ತತ್ಸಾಕ್ಷಿಭಾವಂ ವ್ರಜತಂ ಮುನೀಂದ್ರೌ
ಇತ್ಯಾರ್ಥಯದ್ಬಾದರಿ ಜೈಮಿನೀ ಸಃ || ೫೦

ಆಗ ಶ್ರೀಶಂಕರಾಚಾರ್ಯರು ಮಂದಹಾಸದಿಂದ "ಹಾಗೆಯೇ ಆಗಲಿ" ಎಂದರು. ಮಂಡನಮಿಶ್ರನು ಬಾದರಾಯಣ ವ್ಯಾಸರನ್ನೂ ಜೈಮಿನಿಮುನಿಗಳನ್ನೂ ಕುರಿತು 'ನಾಳೆಯೇ ನಮ್ಮ ವಾದಕಥೆಯು ನಡೆಯುವುದು, ನೀವು ಅದಕ್ಕೆ ಸಾಕ್ಷಿಭಾವವನ್ನು (ಮಾಧ್ಯಸ್ಥ್ಯವನ್ನು) ವಹಿಸಬೇಕು' ಎಂದು ಪ್ರಾರ್ಥಿಸಿದನು.

ಟಿಪ್ಪಣಿ: ಬಾದರಿ = ಬಾದರಾಯಣ. ೪೯-೫೦ನೆಯ ಶ್ಲೋಕಗಳಲ್ಲಿ 'ಭವಿಷ್ಯತೇ' ಎಂಬ ಆತ್ಮನೇಪದ ಪ್ರಯೋಗವು ಚಿಂತನೀಯ.

ವಿಧಾಯ ಭಾರ್ಯಾಂ ವಿದುಷೀಂ ಸದಸ್ಯಾಂ
ವಿಧೀಯತಾಂ ವಾದಕಥಾ ಸುಧೀಂದ್ರ |
ಇತ್ಥಂ ಸರಸ್ವತ್ಯವತಾರತಾಜ್ಞೌ
ತದ್ಧರ್ಮಪತ್ನ್ಯಾಸ್ತಮಭಾಷಿಷಾತಾಮ್ || ೫೧

ಮಂಡನಪಂಡಿತನ ಧರ್ಮಪತ್ನಿಯಾದ ಉಭಯಭಾರತಿಯು ಸರಸ್ವತಿಯ ಅವತಾರವೆಂಬುದು ಆ ಮುನಿಗಳಿಗೆ ಗೊತ್ತಿತ್ತು. ಆದ್ದರಿಂದ ಅವರು "ಪಂಡಿತೋತ್ತಮ-ಮಂಡನ, ವಿದುಷಿಯಾದ ನಿನ್ನ ಭಾರ್ಯೆಯನ್ನು ಸದಸ್ಯಳಾದ ಮಧ್ಯಸ್ಥಳನ್ನಾಗಿ ಮಾಡಿಕೊಂಡು ಈ ವಾದಕಥೆಯು ನಡೆಯಲಿ"ಎಂದರು.

ಅಥಾನುಮೋದ್ಯಾಭಿಹಿತಂ ಮುನಿಭ್ಯಾಂ
ಸ ಮಂಡನಾರ್ಯಃ ಪ್ರಕೃತಂ ಚಿಕೀರ್ಷುಃ |

ಆನರ್ಚ ದೈವೋಪಗತಾನ್ಮುನೀಂದ್ರಾನ್
ಅಗ್ನೀನಿವ ತ್ರೀನ್ಮುನಿಶೇಖರಾಂಸ್ತಾನ್ ॥ ೫೨

ಮುನಿಗಳು ಹೇಳಿದ ಆ ನುಡಿಯನ್ನು ಮಂಡನಾರ್ಯನು ಅನುಮೋದಿಸಿ, ಪ್ರಕೃತವಾದ ಶ್ರಾದ್ಧಕ್ರಿಯೆಯನ್ನು ಮಾಡಲು ಉದ್ಯುಕ್ತನಾಗಿ, ದೈವಿಕವಾಗಿ ಆಗಮಿಸಿದ್ದ ತ್ರೇತಾಗ್ನಿಗಳಂತಿರುವ ಆ ಮೂವರು ಮುನೀಂದ್ರರನ್ನು ವಿಧಿವತ್ತಾಗಿ ಅರ್ಚಿಸಿದನು.

ಭುಕ್ತ್ವೋಪವಿಷ್ಟಸ್ಯ ಮುನಿತ್ರಯಸ್ಯ
ಶ್ರಮಾಪನೋದಾಯ ತದೀಯಶಿಷ್ಯೌ ।
ಅತಿಷ್ಠತಾಂ ಪಾರ್ಶ್ವಗತೌ ವಟೂ ದ್ವೌ
ಸಚಾಮರೌ ವೀಜನಮಾಚರಂತೌ ॥ ೫೩

ಅನಂತರ ಭೋಜನಮಾಡಿ ಆ ಮುನಿತ್ರಯರು ಆಸೀನರಾಗಲು, ಮಂಡನನ ಶಿಷ್ಯರಾದ ಇಬ್ಬರು ವಟುಗಳು ಚಾಮರಗಳನ್ನು ಹಿಡಿದು ಮುನಿಗಳ ಎರಡು ಪಾರ್ಶ್ವಗಳಲ್ಲಿಯೂ ನಿಂತು ಶ್ರಮಪರಿಹಾರಕ್ಕಾಗಿ ಗಾಳಿಯನ್ನು ಬೀಸುತ್ತಿದ್ದರು.

ಅಥ ಕ್ರಿಯಾಂತೇ ಕಿಲ ಸೂಪವಿಷ್ಟಾಃ
ತ್ರಯ್ಯಂತವೇದ್ಯಾರ್ಥವಿದಸ್ತ್ರಯೋಽಮೀ ।
ಆಮಂತ್ರಯಂಶ್ಚಾರು ಪರಸ್ಪರಂ ತೇ
ಮುಹೂರ್ತಮಾತ್ರಂ ಕಿಮಪಿ ಪ್ರಹೃಷ್ಟಾಃ ॥ ೫೪

ಹೀಗೆ ಶ್ರಾದ್ಧಕರ್ಮವಾದ ಮೇಲೆ ಸುಖಾಸೀನರಾಗಿ ಒಂದು ಮುಹೂರ್ತಕಾಲ ವಿಶ್ರಮಿಸಿಕೊಂಡು, ಉಪನಿಷದರ್ಥವನ್ನು ಚೆನ್ನಾಗಿ ಬಲ್ಲ ಆ ಮೂವರು ಮುನಿಗಳು ಸಂತುಷ್ಟರಾಗಿ ಒಬ್ಬರನ್ನೊಬ್ಬರು ಬೀಳ್ಕೊಂಡರು.

ತೇಷಾಂ ದ್ವಿಜೇಂದ್ರಾಲಯ ನಿರ್ಗತಾನಾಂ
ಅದರ್ಶನಂ ಜಗ್ಮತುರಂಜಸಾ ದ್ವೌ ।
ರೇವಾತಟೇ ರಮ್ಯಕದಂಬಜಾಲೇ
ದೇವಾಲಯೇಽವಸ್ಥಿತವಾಂಸ್ತೃತೀಯಃ ॥ ೫೫

ದ್ವಿಜೇಂದ್ರನಾದ ಮಂಡನಮಿಶ್ರನ ಗೃಹದಿಂದ ಮೂವರು ನಿರ್ಗಮಿಸಿದಾಗ, ಅವರಲ್ಲಿಬ್ಬರು (ವ್ಯಾಸ-ಜೈಮಿನಿಗಳು)ಥಟ್ಟನೆ ಅದೃಶ್ಯರಾದರು. ಮೂರನೆಯವರಾದ ಆಚಾರ್ಯರು ಕದಂಬವೃಕ್ಷಗಳಿಂದ ರಮ್ಯವಾದ ನರ್ಮದಾತೀರದಲ್ಲಿದ್ದ ಒಂದು ದೇವಾಲಯಕ್ಕೆ ಹೋಗಿ ವಸತಿಮಾಡಿದರು.

ಇತಿ ಸ ಯತಿವರೇಣ್ಯೋ ದೈವಯೋಗಾದ್ಗುರೂಣಾಮ್
ಇತರಜನದುರಾಪಂ ದರ್ಶನಂ ಪ್ರಾಪ್ಯ ಹೃಷ್ಟಃ ।
ತದುದಿತವಚನಾನಿ ಶ್ರಾವಯನ್ನಾತ್ಮಶಿಷ್ಯಾನ್
ಅನಯದಮೃತತುಲ್ಯಾನ್ಯಾತ್ಮವಿತ್ತಾಂ ತ್ರಿಯಾಮಾಮ್ ॥ ೫೬

ಪೂಜ್ಯರಾದ ವ್ಯಾಸ-ಜೈಮಿನಿಮುನಿಗಳ ಅನ್ಯದುರ್ಲಭವಾದ ದರ್ಶನವು ದೈವಯೋಗದಿಂದ ಹೀಗೆ ಪ್ರಾಪ್ತವಾದುದಕ್ಕಾಗಿ ಆ ಯತಿವರೇಣ್ಯರಿಗೆ ಬಹಳ ಹರ್ಷವಾಯಿತು. ಆ ಮುನಿಗಳಾಡಿದ ಅಮೃತಸಮಾನವಾದ ನುಡಿಗಳನ್ನು ಆತ್ಮವಿದರಾದ ಆಚಾರ್ಯರು ತಮ್ಮ ಶಿಷ್ಯರಿಗೆ ಹೇಳುತ್ತ ಆ ರಾತ್ರಿಯನ್ನು ಕಳೆದರು.

ಪ್ರಾತಃ ಶೋಣಸರೋಜ ಬಾಂಧವರುಚಿ ಪ್ರದ್ಯೋತಿತೇ ವ್ಯೋಮನಿ
ಪ್ರಖ್ಯಾತಃ ಸ ವಿಧಾಯ ಕರ್ಮ ನಿಯತಂ ಪ್ರಜ್ಞಾವತಾಮಗ್ರಣೀಃ ।
ಸಾಕಂ ಶಿಷ್ಯವರ್ಯೈಃ ಪ್ರಪದ್ಯ ಸದನಂ ಸನ್ಮಂಡಿತಂ ಮಾಂಡನಂ
ವಾದಾಯೋಪವಿವೇಶ ಪಂಡಿತಸಭಾಮಧ್ಯೇ ಮುನಿರ್ಧ್ಯೇಯವಿತ್ ॥

ಬೆಳಗಾಯಿತು, ಕಮಲಬಾಂಧವನಾದ ಸೂರ್ಯನ ಅರುಣಕಿರಣಗಳು ಗಗನತಳವನ್ನು ಬೆಳಗಿಸಿದವು. ಪ್ರಖ್ಯಾತರೂ ಪರಮಪ್ರಾಜ್ಞರೂ ಆದ ಆಚಾರ್ಯರು ನಿಯತವಾದ ಪ್ರಾತಃಕರ್ಮವನ್ನಾಚರಿಸಿ, ತಮ್ಮ ಶಿಷ್ಯೋತ್ತಮರಿಂದ ಒಡಗೂಡಿ, ಪಂಡಿತಮಂಡಿತವಾಗಿದ್ದ ಮಂಡನನ ಭವನಕ್ಕೆ ಆಗಮಿಸಿದರು. (ವಾದಯೋಗ್ಯವಾದ) ಧ್ಯೇಯವನ್ನು ಚೆನ್ನಾಗಿ ಬಲ್ಲ ಶ್ರೀಶಂಕರಯತಿಗಳು ಪಂಡಿತ ಸಭಾಮಧ್ಯದಲ್ಲಿ ವಾದಕ್ಕೆ ಸಿದ್ಧರಾಗಿ ಕುಳಿತರು.

ತತಃ ಸಮಾದಿಶ್ಯ ಸದಸ್ಯತಾಯಾಂ
ಸಧರ್ಮಿಣೀಂ ಮಂಡನಪಂಡಿತೋಽಪಿ ।
ಸ ಶಾರದಾಂ ನಾಮ ಸಮಸ್ತವಿದ್ಯಾ-
ವಿಶಾರದಾಂ ವಾದಸಮುತ್ಸುಕೋಽಭೂತ್ ॥ ೫೮

ಆಮೇಲೆ ಮಂಡನಪಂಡಿತನೂ ಸಹ ತನ್ನ ಸಹಧರ್ಮಿಣಿಯೂ ಸಮಸ್ತ ವಿದ್ಯಾವಿಶಾರದೆಯೂ ಸಾಕ್ಷಾತ್ ಶಾರದೆಯೂ ಆದ ಉಭಯಭಾರತಿಗೆ ಮಧ್ಯಸ್ಥಳಾಗಿರುವಂತೆ ತಿಳಿಸಿ, ವಾದೋತ್ಸುಕನಾಗಿ ಬಂದು ಕುಳಿತನು.

ಪತ್ಯಾ ನಿಯುಕ್ತಾ ಪತಿದೇವತಾ ಸಾ
ಸದಸ್ಯಭಾವೇ ಸುದತೀ ಚಕಾಶೇ ।
ತಯೋರ್ವಿವೇಕ್ತುಂ ಶ್ರುತತಾರತಮ್ಯಂ
ಸಮಾಗತಾ ಸಂಸದಿ ಭಾರತೀವ ॥ ೫೯

ಪತಿದೇವತೆಯಾದ ಆ ವನಿತೆಯು, ಸದಸ್ಯಳಾಗಿರುವಂತೆ ಪತಿಯಿಂದ ನಿಯುಕ್ತಳಾಗಿ, ಅವರಿಬ್ಬರ ವೈದುಷ್ಯದ ತಾರತಮ್ಯವನ್ನು ಪರೀಕ್ಷಿಸುವುದಕ್ಕಾಗಿ ಆಗಮಿಸಿದ ಸರಸ್ವತೀದೇವಿಯಂತೆ ಸಭೆಯಲ್ಲಿ ವಿರಾಜಿಸಿದಳು.

ಪ್ರವೃದ್ಧವಾದೋತ್ಸುಕತಾಂ ತದೀಯಾಂ
ವಿಜ್ಞಾಯ ವಿಜ್ಞಃ ಪ್ರಥಮಂ ಯತೀಂದ್ರಃ |
ಪರಾವರಜ್ಞಃ ಸ ಪರಾವರೈಕ್ಯ-
ಪರಾಂ ಪ್ರತಿಜ್ಞಾಮಕರೋತ್ಸ್ವಕೀಯಾಮ್ || ೬೦

ಪ್ರಾಜ್ಞರಾದ ಆ ಯತೀಂದ್ರರು ಮಂಡನಪಂಡಿತನ ತೀವ್ರವಾದ ವಾದೋತ್ಸಾಹವನ್ನರಿತವರಾಗಿ, ಮೊದಲು ತಮ್ಮ ವಾದ ಪ್ರತಿಜ್ಞೆಯನ್ನು ಮುಂದಿಟ್ಟರು. ಪರಮಾತ್ಮ ಜೀವಾತ್ಮರ ತತ್ತ್ವವೇನೆಂಬುದನ್ನು ಬಲ್ಲ ಅವರು ಪರಮಾತ್ಮಜೀವಾತ್ಮರ ಐಕ್ಯಪರವಾದ ಪ್ರತಿಜ್ಞೆಯನ್ನು ಹೇಳಿದರು.

ಟಿಪ್ಪಣಿ: ಪರಾವರಜ್ಞಃ = ಪರ-ಕಾರಣ, ಅವರ-ಕಾರ್ಯ ಇವುಗಳನ್ನು ಬಲ್ಲವನು. ಪರ = ಭವಿಷ್ಯತ್ತು, ಅವರ = ಭೂತ ಇವುಗಳನ್ನು ಬಲ್ಲವನು. ಪರರಾದ ಬ್ರಹ್ಮಾದಿಗಳು ಯಾರಿಗಿಂತ ಅವರರೋ ಅಂತಹ ಪರಬ್ರಹ್ಮವನ್ನು ಬಲ್ಲವನು -ಎಂದೂ ಅರ್ಥವನ್ನು ಹೇಳಬಹುದು.

ಬ್ರಹ್ಮೈಕಂ ಪರಮಾರ್ಥಸಚ್ಚಿದಮಲಂ ವಿಶ್ವಪ್ರಪಂಚಾತ್ಮನಾ
ಶುಕ್ತೀ ರೂಪ್ಯಪರಾತ್ಮನೇವ ಬಹಲಾಜ್ಞಾನಾವೃತಂ ಭಾಸತೇ |
ತಜ್ಜ್ಞಾನಾನ್ನಿಖಿಲ ಪ್ರಪಂಚವಿಲಯಾ ಸ್ವಾತ್ಮವ್ಯವಸ್ಥಾ ಪರಂ
ನಿರ್ವಾಣಂ ಜನಿಮುಕ್ತಮಭ್ಯುಪಗತಂ ಮಾನಂ ಶ್ರುತೇರ್ಮಸ್ತಕಮ್ ||

ಏನೆಂದರೆ- "ಪರಮಾರ್ಥವೂ ಸಚ್ಚಿದ್ರೂಪವೂ ನಿರ್ಮಲವೂ ಆದ ಬ್ರಹ್ಮ (ಅದ್ವಿತೀಯವಾಗಿ) ಒಂದೇ ಇದೆ. ಕಪ್ಪೆಚಿಪ್ಪು ಬೆಳ್ಳಿಯೆಂಬ ಅನ್ಯರೂಪದಿಂದ ಭಾಸವಾಗುವಂತೆ, ಬ್ರಹ್ಮವು ನಿಬಿಡವಾದ ಅಜ್ಞಾನದಿಂದ ಆವೃತವಾಗಿ ಸಮಸ್ತಪ್ರಪಂಚ ರೂಪದಿಂದ ತೋರುತ್ತದೆ. ಸಚ್ಚಿದ್ರೂಪವಾದ ಬ್ರಹ್ಮದ ಜ್ಞಾನದಿಂದ ನಿಖಿಲಪ್ರಪಂಚವೂ ವಿಲಯವಾಗುತ್ತದೆ. ಆಗ ಉಂಟಾಗುವ ಸ್ವಸ್ವರೂಪಾವಸ್ಥಾನವೇ ಶ್ರೇಷ್ಠವಾದ ಮೋಕ್ಷವು. ಆ ಸ್ಥಿತಿಯು ಪುನರ್ಜನ್ಮರಹಿತವಾದದ್ದು. ಇದು ನಮಗೆ ಸಂಮತವಾದ ಪಕ್ಷ. ಈ ವಿಷಯದಲ್ಲಿ ವೇದಗಳ ಶಿರಸ್ಸೆನಿಸಿದ ಉಪನಿಷತ್ತು ಪ್ರಮಾಣವಾಗಿದೆ.

ಬಾಢಂ ಜಯೇ ಯದಿ ಪರಾಜಯಭಾಗಹಂ ಸ್ಯಾಂ
ಸಂನ್ಯಾಸಮಂಗ ಪರಿಹೃತ್ಯ ಕಷಾಯಚೇಲಮ್ |
ಶುಕ್ಲಂ ವಸೀಯ ವಸನಂ ದ್ವಯಭಾರತೀಯಂ
ವಾದೇ ಜಯಾಜಯಫಲಪ್ರತಿದೀಪಿಕಾಽಸ್ತು || ೬೨

ನಿಶ್ಚಯವಾಗಿ ನನಗೆ ಜಯವಾಗುತ್ತದೆಯಾದರೂ, ಆಹಾ, ಒಂದು ವೇಳೆ ನಾನು ಪರಾಜಯವನ್ನು ಹೊಂದಿದರೆ ಕಷಾಯವಸ್ತ್ರದ ಈ ಸಂನ್ಯಾಸವನ್ನು ಪರಿತ್ಯಜಿಸಿ ಬಿಳಿಯವಸ್ತ್ರವನ್ನುಡುತ್ತೇನೆ! ಈ ಉಭಯಭಾರತೀದೇವಿಯು ನಮ್ಮ ಜಯಾಪಜಯಗಳನ್ನು ಪ್ರಕಾಶಪಡಿಸತಕ್ಕ ಮಧ್ಯಸ್ಥಳಾಗಿರಲಿ" ಎಂದರು.

ಇತ್ಥಂ ಪ್ರತಿಜ್ಞಾಂ ಕೃತವತ್ಯುದಾರಾಂ
ಶ್ರೀಶಂಕರೇ ಭಿಕ್ಷುವರೇ ಸ್ವಕೀಯಾಮ್ ।
ಸ ವಿಶ್ವರೂಪೋ ಗೃಹಮೇಧಿವರ್ಯಃ
ಚಕ್ರೇ ಪ್ರತಿಜ್ಞಾಂ ಸ್ವಮತಪ್ರತಿಷ್ಠಾಮ್ ॥ ೬೩

ಈ ಪ್ರಕಾರವಾಗಿ ಯತಿವರೇಣ್ಯರಾದ ಶ್ರೀಶಂಕರಾಚಾರ್ಯರು ಗಂಭೀರವಾದ ಪ್ರತಿಜ್ಞೆಯನ್ನು ತೊಡಲಾಗಿ, ಗೃಹಮೇಧಿಗಳಲ್ಲಿ ಉತ್ತಮನಾದ ವಿಶ್ವರೂಪನು (ಮಂಡನಪಂಡಿತನು) ತನ್ನ ಮತವನ್ನು ಪ್ರತಿಷ್ಠಾಪಿಸುವ ಪ್ರತಿಜ್ಞೆಯನ್ನು ಮಾಡಿದನು.

ವೇದಾಂತಾ ನ ಪ್ರಮಾಣಂ ಚಿತಿವಪುಷಿ ಪದೇ ತತ್ರ ಸಂಗತ್ಯಯೋಗಾತ್
ಪೂರ್ವೋ ಭಾಗಃ ಪ್ರಮಾಣಂ ಪದಚಯಗಮಿತೇ
ಕಾರ್ಯವಸ್ತುನ್ಯಶೇಷೇ ।
ಶಬ್ದಾನಾಂ ಕಾರ್ಯಮಾತ್ರಂ ಪ್ರತಿ ಸಮಧಿಗತಾ ಶಕ್ತಿರಭ್ಯುನ್ನತಾನಾಂ
ಕರ್ಮಭ್ಯೋ ಮುಕ್ತಿರಿಷ್ಟಾ ತದಿಹ ತನುಭೃತಾಮಾಽಽಯುಷಃ
ಸ್ಯಾತ್ಸಮಾಪ್ತೇಃ ॥ ೬೪

ಏನೆಂದರೆ- "ಚಿದ್ರೂಪವಾದ ಬ್ರಹ್ಮದ ವಿಷಯದಲ್ಲಿ ಉಪನಿಷತ್ತುಗಳು ಪ್ರಮಾಣವಲ್ಲ. ಚಿದ್ರೂಪವಾದ ಬ್ರಹ್ಮದ ವಿಷಯದಲ್ಲಿ ಅವು ಸಂಗತವಾಗುವುದಿಲ್ಲ. ಆದ್ದರಿಂದ ವೇದದ ಪೂರ್ವಭಾಗವಾದ ಕರ್ಮಕಾಂಡವು ನಮಗೆ ಪ್ರಮಾಣ. ಪದಸಮೂಹಾತ್ಮಕವಾಕ್ಯದಿಂದ ಚೋದಿತವಾಗುವ ಸಮಸ್ತಕ್ರಿಯೆಯಲ್ಲಿಯೂ ಅದೇ ಪ್ರಮಾಣ. ಪ್ರಸಿದ್ಧವಾದ ಎಲ್ಲ ಶಬ್ದಾತ್ಮಕವಾಕ್ಯಗಳಿಗೂ ಕಾರ್ಯಮಾತ್ರದಲ್ಲಿ ಬೋಧಕಶಕ್ತಿಯಿರುವುದು ನಿಶ್ಚಿತವಾಗಿ ತಿಳಿದು ಬಂದಿದೆ. ಕರ್ಮಗಳಿಂದಲೇ ಮುಕ್ತಿಯಾಗುತ್ತದೆಯೆಂಬುದು ನಮಗೆ ಸಂಮತ. ಮಾನವರಿಗೆ ಆಯುಸ್ಸು ಮುಗಿಯುವವರೆಗೂ ವಿಹಿತಕರ್ಮವು ಇದ್ದೇ ಇರುತ್ತದೆ.

ವಿವರಣೆ:-ವೇದವೆಲ್ಲವೂ ಕರ್ಮವನ್ನು ವಿಧಿಸುವುದಕ್ಕಾಗಿಯೇ ಹೊರಟಿದೆ 'ಅಗ್ನಿಹೋತ್ರಂ ಜುಹುಯಾತ್, ಸಂಧ್ಯಾಮುಪಾಸೀತ' ಮುಂತಾದ ವಾಕ್ಯಗಳು ಕರ್ಮವನ್ನು ಮಾಡಬೇಕೆಂದು ಚೋದಿಸುತ್ತವೆ. ಕ್ರಿಯೆಯನ್ನು ವಿಧಿಸುವುದರಿಂದಲೇ ವಾಕ್ಯದ ಆಕಾಂಕ್ಷೆಯು ಮುಗಿಯುತ್ತದೆಯೆಂಬುದು ಲೋಕದಲ್ಲಿಯೂ ಕಂಡು ಬಂದಿದೆ. 'ಈ ಹಣ್ಣು ಚೆನ್ನಾಗಿದೆ' ಎಂದರೆ 'ಇದನ್ನುನೋಡು, ಇದನ್ನು ತಿನ್ನು ಅಥವಾ ಇದನ್ನು ಕೊಡು' ಎಂದು ಸೇರಿಸಿದ ಹೊರತು ವಾಕ್ಯದ ಆಕಾಂಕ್ಷೆಯು ಪೂರ್ಣವಾಗುವುದೇ ಇಲ್ಲ. ಆದ್ದರಿಂದ ಕ್ರಿಯೆಯನ್ನು ವಿಧಿಸದೇ ಇರುವ ವಾಕ್ಯವು ಪ್ರಮಾಣವಲ್ಲ. 'ಬ್ರಹ್ಮವು ಸಚ್ಚಿದಾನಂದ ಸ್ವರೂಪವಾಗಿದೆ 'ಎಂದು ಉಪನಿಷತ್ತು

ಹೇಳುತ್ತದೆ. ಆದರಿಂದ ಯಾವ ಕರ್ಮವೂ ಚೋದಿತವಾಗದಿರುವುದರಿಂದ ಆ ಮಾತು ಪ್ರಮಾಣವಲ್ಲ-ಎಂದು ಅಭಿಪ್ರಾಯ.

ವಾದೇ ಕೃತೇಽಸ್ಮಿನ್ಯದಿ ಮೇ ಜಯಾನ್ಯ-
ಸ್ತ್ವಯೋದಿತಾತ್ಸ್ಯಾದ್ವಿಪರೀತಭಾವಃ |
ಯೇಯಂ ತ್ವಯಾಽಭ್ಯೂದ್ಗದಿತಾ ಪ್ರಸಾಕ್ಷ್ಯೇ
ಜಾನಾತಿ ಚೇತ್ಸಾ ಭವಿತಾ ವಧೂರ್ಮೇ || ೬೫

ಈ ವಾದವನ್ನು ನಾನು ನಡೆಸಿದಾಗ ನನಗೆ ಪರಾಜಯವಾದ ಪಕ್ಷದಲ್ಲಿ, ಯತಿಗಳೆ, ನೀವು ಹೇಳಿದ್ದಕ್ಕೆ ವಿರುದ್ಧವಾದ ಪರಿಸ್ಥಿತಿ ನನಗೆ ಆಗತಕ್ಕದ್ದು (ನಾನು ಬಿಳಿಯ ವಸ್ತ್ರವನ್ನು ತ್ಯಜಿಸಿ ಕಾಷಾಯ ವಸ್ತ್ರವನ್ನುಟ್ಟು ಸಂನ್ಯಾಸಿಯಾಗುತ್ತೇನೆ).ನನ್ನ ಪತ್ನಿಯು ಮಧ್ಯಸ್ಥಳಾಗಿರಲೆಂದು ನೀವು ಹೇಳಿದಿರಷ್ಟೆ, ಅವಳು ಇದೆಲ್ಲವನ್ನೂ ತಿಳಿದು ಒಪ್ಪುವುದಾದರೆ, ನನಗೂ ಸಹ ಅವಳು ಸಾಕ್ಷಿಯಾಗಿರಲಿ"ಎಂದನು.

ಜೇತುಃ ಪರಾಜಿತ ಇಹಾಶ್ರಮಮಾದದೀತೇ-
ತ್ಯೇತೌ ಮಿಥಃ ಕೃತಪಣೌ ಯತಿವಿಶ್ವರೂಪೌ |
ಅಂಬಾಮುದಾರಧಿಷಣಾಮಭಿಷಿಚ್ಯ ಸಾಕ್ಷ್ಯೇ
ಜಲ್ಪಂ ವಿತೇನತುರಥೋ ಜಯದತ್ತದೃಷ್ಟೀ || ೬೬

"ಸೋತವನು ಗೆದ್ದವನ ಆಶ್ರಮವನ್ನು ಸ್ವೀಕರಿಸತಕ್ಕದ್ದು"ಎಂದು ಶ್ರೀಶಂಕರಯತಿಗಳೂ ವಿಶ್ವರೂಪನೂ ಅನ್ಯೋನ್ಯವಾಗಿ ಹೀಗೆ ವಾದಕ್ಕೆ ಪಣವನ್ನು ಗೊತ್ತುಮಾಡಿಕೊಂಡರು. ಉಭಯಭಾರತಿಯಾದ ಅಂಬೆಯನ್ನು ಸಾಕ್ಷಿಪಟ್ಟದಲ್ಲಿ ಕುಳ್ಳಿರಿಸಿ ಜಯದಲ್ಲಿಯೇ ತಮ್ಮ ದೃಷ್ಟಿಯನ್ನಿಟ್ಟು ಜಲ್ಪವನ್ನು ನಡೆಸಿದರು.

ವಿವರಣೆ:-ಉಭಯಭಾರತಿಗೆ 'ಅಂಬಾ' ಎಂಬ ವ್ಯಾವಹಾರಿಕನಾಮವಿತ್ತು. 'ಉಭಯಸಾಧನವತೀ ವಿಜಿಗೀಷುಕಥಾ ಜಲ್ಪಃ' ಎಂದು ಜಲ್ಪದ ಲಕ್ಷಣ. ಜಯಾ ಪೇಕ್ಷಿಯಾದವನು ವಿಜಿಗೀಷು. ಸ್ವಪಕ್ಷವನ್ನು ಸಾಧಿಸುವುದು, ಪರಪಕ್ಷವನ್ನು ಖಂಡಿಸುವುದು- ಹೀಗೆ ಉಭಯವನ್ನೂ ಸಾಧಿಸುವುದಕ್ಕಾಗಿ ಆತನು ಮಾಡುವ ವಾದಪ್ರಕಾರವು ಜಲ್ಪವೆನಿಸುತ್ತದೆ. ಕಥಾ =.ಕಥನ, ವಾದ ಪ್ರಕಾರ.

ಆವಶ್ಯಕಂ ಪರಿಸಮಾಪ್ಯ ದಿನೇ ದಿನೇ ತೌ
ವಾದಂ ಸಮಂ ವ್ಯತನುತಾಂ ಕಿಲ ಸರ್ವವೇದೌ |
ಏವಂ ವಿಜೇತುಮನಸೋರುಪವಿಷ್ಟಯೋಸ್ತಾಂ
ಮಾಲಾಂ ಗಲೇ ನ್ಯಧಿತ ಸೋಭಯಭಾರತೀಯಮ್ || ೬೭

ಸರ್ವವೇದ ಪಾರಂಗತರಾದ ಅವರಿಬ್ಬರೂ ಪ್ರತಿದಿನವೂ ಆವಶ್ಯಕವಾದ ಪ್ರಾತಃಕೃತ್ಯಗಳನ್ನು ನೆರವೇರಿಸಿ ಸಮಜೋಡಿಯಾಗಿ ವಾದವನ್ನು ನಡೆಸುತ್ತಿದ್ದರು. ಹೀಗೆ

ಒಬ್ಬರನ್ನೊಬ್ಬರು ಜಯಿಸಬೇಕೆಂದು ಅವರು ವಾದಕ್ಕೆ ಕುಳಿತುಕೊಂಡಾಗ ಈ ಉಭಯಭಾರತಿಯು ಅವರಿಬ್ಬರ ಕೊರಳಿಗೆ ಒಂದೊಂದು ಹೂಮಾಲೆಯನ್ನು ಹಾಕುತ್ತಿದ್ದಳು.

ಮಾಲಾ ಯದಾ ಮಲಿನಭಾವಮುಪೈತಿ ಕಂಠೇ
ಯಸ್ಯಾಪಿ ತಸ್ಯ ವಿಜಯೇತರ ನಿಶ್ಚಯಃ ಸ್ಯಾತ್ |
ಉಕ್ತ್ವಾ ಗೃಹಂ ಗತವತೀ ಗೃಹಕರ್ಮಸಕ್ತಾ
ಭಿಕ್ಷಾಶನೇಽಪಿ ಚರಿತುಂ ಗೃಹಿಮಸ್ಕರಿಭ್ಯಾಮ್ || ೬೮

"ಯಾರ ಕೊರಳಲ್ಲಿರುವ ಮಾಲೆಯು ಬಾಡಿ ಮಲಿನವಾಗುವುದೋ ಆತನು ಪರಾಜಯ ಹೊಂದಿ ಸೋತನೆಂದು ನಿಶ್ಚಯಿಸಲಾಗುತ್ತದೆ"ಎಂದು ಹೇಳಿ, ಗೃಹಕೃತ್ಯವನ್ನು ಮಾಡಬೇಕಾದ ಅವಳು ಈ ಗೃಹಸ್ಥಯತಿಗಳಿಗೆ ಅಡಿಗೆಯನ್ನೂ ಭಿಕ್ಷೆಯನ್ನೂ ಸಿದ್ಧಪಡಿಸುವುದಕ್ಕಾಗಿ ಮನೆಯೊಳಗೆ ಹೋಗುತ್ತಿದ್ದಳು."

ಟಿಪ್ಪಣಿ: 'ಭಿಕ್ಷಾಶನೇಽಪಿ' ಎಂಬಲ್ಲಿ ಅಪಿ ಶಬ್ದದ ಅಕಾರವು ಪೂರ್ವರೂಪಸಂಧಿಯಿಂದ ಲುಪ್ತವಾಗುವುದಿಲ್ಲ. ಇಲ್ಲಿ ಪ್ರಕೃತಿಭಾವ ಬರಬೇಕು. ಆದ್ದರಿಂದ 'ಪಿ'ಎಂಬುದಕ್ಕೆ ಬದಲಾಗಿ 'ತು'ಶಬ್ದವಿದ್ದರೆ ಉತ್ತಮ.

ಅನ್ಯೋಽನ್ಯಸಂಜಯಫಲೇ ವಿಹಿತಾದರೌ ತೌ
ವಾದಂ ವಿವಾದ ಪರಿನಿರ್ಣಯಮಾತನಿಷ್ಟಾಮ್ |
ಬ್ರಹ್ಮಾದಯಃ ಸುರವರಾ ಅಪಿ ವಾಹನಸ್ಥಾಃ
ಶ್ರೋತುಂ ತದೀಯಸದನೇ ಸ್ಥಿತವಂತ ಊರ್ಧ್ವಮ್ || ೬೯

ಅನ್ಯೋಽನ್ಯರನ್ನು ಜಯಿಸಬೇಕೆಂಬ ಉದ್ದೇಶದಲ್ಲಿ ಆಸಕ್ತಿಯನ್ನಿಟ್ಟ ಅವರಿಬ್ಬರೂ ವಿವಾದವನ್ನು ನಿರ್ಣಯಿಸಿಬಿಡುವಂತಹ (ಅರ್ಥವತ್ತಾದ) ವಾದವನ್ನು ನಡೆಸುತ್ತಿದ್ದರು. ಅದನ್ನು ಕೇಳುವುದಕ್ಕಾಗಿ ಬ್ರಹ್ಮಾದಿದೇವತೆಗಳು ವಾಹನಾರೂಢರಾಗಿ ಮಂಡನಮಿಶ್ರನ ಭವನದ ಮೇಲುಗಡೆ ಬಂದು ನಿಲ್ಲುತ್ತಿದ್ದರು!

ತತಸ್ತಯೋರಾಸ ಮಹಾನ್ವಿವಾದಃ
ಸದಸ್ಯ ವಿಶ್ರಾಣಿತ ಸಾಧುವಾದಃ |
ಸ್ವಪಕ್ಷಸಾಕ್ಷೀಕೃತ ಸರ್ವವೇದಃ
ಪರಸ್ಪರಸ್ಯಾಪಿ ಕೃತಪ್ರಮೋದಃ || ೭೦

ಅನಂತರ ಅವರಿಬ್ಬರ ನಡುವೆ ಮಹತ್ತರವಾದ ವಾದವು ನಡೆಯಲಾರಂಭಿಸಿತು. ವಿದ್ವಾಂಸರಾದ ಸದಸ್ಯರು ಆಗಾಗ 'ಸಾಧು, ಸಾಧು'ಎಂದು ಘೋಷಿಸುತ್ತಿದ್ದರು. ವಾದಿ ಪ್ರತಿವಾದಿಗಳಿಬ್ಬರೂ ತಮ್ಮ ನಿಲುವನ್ನು ಸಮರ್ಥಿಸುವುದಕ್ಕಾಗಿ ಸಮಸ್ತವೇದಗಳನ್ನೂ

ಪ್ರಮಾಣವಾಗಿ ಉದಾಹರಿಸುತ್ತಿದ್ದರು. ವಾದಪ್ರಕಾರವನ್ನು ನೋಡಿ ಅವರಿಗೇ ಹರ್ಷವಾಗುತ್ತಿತ್ತು.

ದಿನೇ ದಿನೇ ಚಾಧಿಗತಪ್ರಕರ್ಷೋ
ಭೂರೀಭವತ್ಖಂಡಿತ ಸನ್ನಿಕರ್ಷಃ |
ಅನ್ಯೋನ್ಯ ಭಂಗಾಹಿತ ತೀವ್ರತರ್ಷಃ
ತಥಾಪಿ ದೂರೀಕೃತಜನ್ಯಮರ್ಷಃ || ೭೧

ದಿನದಿನವೂ ವಾದಪ್ರಕಾರವು ಪ್ರಬಲವಾಗುತ್ತ ಹೋಯಿತು. ಪಂಡಿತರು ಹೆಚ್ಚುಹೆಚ್ಚಾಗಿ ಸಭೆಗೆ ಬರತೊಡಗಿದರು. ಒಬ್ಬರನ್ನೊಬ್ಬರು ಪರಾಜಯಗೊಳಿಸಬೇಕೆಂಬ ಉತ್ಕಟವಾದ ಇಚ್ಛೆಯು ವ್ಯಕ್ತವಾಗುತ್ತಿತ್ತು. ಆದರೂ ವಾದದಲ್ಲಿ ಕೋಪವು ಯಾರ ಬಳಿಯೂ ಸುಳಿಯಲಿಲ್ಲ.

ಟಿಪ್ಪಣಿ:- ದೂರೀಕೃತಜನಿ = ಉತ್ಪತ್ತಿಯಾಗದಿರುವ.

ದಿನೇ ದಿನೇ ವಾಸರಮಧ್ಯಮೇ ಸಾ
ಬ್ರೂತೇ ಪತಿಂ ಭೋಜನಕಾಲಮೇವ |
ಸಮೇತ್ಯ ಭಿಕ್ಷುಂ ಸಮಯಂ ಚ ಭೈಕ್ಷ್ಯೇ
ದಿನಾನ್ಯಭೂವನ್ನಿತಿ ಪಂಚಷಾಣಿ|| ೭೨

ಪ್ರತಿದಿನವೂ ಮಧ್ಯಾಹ್ನದ ಸಮಯದಲ್ಲಿ ಉಭಯಭಾರತಿಯು ಬಂದು ತನ್ನ ಪತಿಯನ್ನು ಕುರಿತು ಭೋಜನ ಸಮಯವಾಯಿತೆಂದೂ, ಯತೀಶ್ವರರನ್ನು ಕುರಿತು ಭಿಕ್ಷೆಗೆ ಸಮಯವಾಗಿದೆಯೆಂದೂ ಹೇಳಿ ಆಹ್ವಾನಿಸುತ್ತಿದ್ದಳು. ಹೀಗೆ ಐದಾರುದಿನಗಳು ಕಳೆದವು.

ಅನ್ಯೋನ್ಯಮುತ್ತರಮಖಂಡಯತಾಂ ಪ್ರಗಲ್ಭಂ
ಬದ್ಧಾಸನೌ ಸ್ಮಿತವಿಕಾಸಿ ಮುಖಾರವಿಂದೌ |
ನ ಸ್ವೇದ ಕಂಪಗಗನೇಕ್ಷಣ ಶಾಲಿನೌ ವಾ
ನ ಕ್ರೋಧ ವಾಕ್ಛಲಮವಾದಿ ನಿರುತ್ತರಾಭ್ಯಾಮ್ || ೭೩

ಶ್ರೀಶಂಕರರೂ ಮಂಡನಪಂಡಿತನೂ ತಮ್ಮ ಆಸನಗಳಲ್ಲಿ ಕುಳಿತು ವಾದಮಾಡುತ್ತಿರುವಾಗ ಅನ್ಯೋನ್ಯವಾಗಿ (ತಮ್ಮ ಪೂರ್ವಪಕ್ಷಕ್ಕೆ ಕೊಟ್ಟ) ಉತ್ತರವನ್ನು ಪ್ರಗಲ್ಭಶೈಲಿಯಲ್ಲಿ ಖಂಡಿಸುತ್ತಿದ್ದರು. ಆಗಲೂ ಅವರ ಮುಖಕಮಲಗಳು ಮಂದಹಾಸದಿಂದ ಶೋಭಿಸುತ್ತಿದ್ದವು. ಒಬ್ಬರೂ ಬೆವರಲಿಲ್ಲ, ಕಂಪಿಸಲಿಲ್ಲ, (ಉತ್ತರವು ತೋರದೆ) ಆಕಾಶವನ್ನು ನೋಡಲಿಲ್ಲ! ಉತ್ತರವನ್ನು ಕೊಡಲಾರದೆ ಸಿಟ್ಟಿನಿಂದ ವಾಕ್ಛಲವನ್ನೂ ಪ್ರದರ್ಶಿಸಲಿಲ್ಲ.

ಟಿಪ್ಪಣಿ: 'ಅಭಿಪ್ರಾಯಾಂತರೇಣ ಪ್ರಯುಕ್ತಸ್ಯ ಅರ್ಥಾಂತರಂ ಪ್ರಕಲ್ಪ್ಯ ದೂಷಣಂ ಛಲಂ'ಎಂದು ಛಲದ ಲಕ್ಷಣ. ಒಂದು ಅಭಿಪ್ರಾಯದಿಂದ ಮಾತನಾಡಿದಾಗ ಆ ಮಾತಿಗೆ ಬೇರೊಂದು ಅರ್ಥವನ್ನು ಕಲ್ಪಿಸಿ ದೂಷಿಸುವುದು ಛಲವೆನಿಸುತ್ತದೆ. ಈ ಸರ್ಗದ ಆರಂಭದಲ್ಲಿ ಶ್ರೀಶಂಕರರಿಗೂ ಮಂಡನನಿಗೂ ನಡೆದ ವ್ಯಂಗ್ಯಪೂರ್ಣವಾದ ಸಂವಾದವು ಇದಕ್ಕೆ ಉದಾಹರಣೆ.

ತತೋ ಯತಿಕ್ಷ್ಮಾಭೃದವೇಕ್ಷ್ಯ ದಾರ್ಢ್ಯಂ
ಕ್ಷೋದಕ್ಷಮಂ ತಸ್ಯ ವಿಚಕ್ಷಣಸ್ಯ |
ಚಿಕ್ಷೇಪ ತಂ ಕ್ಷೋಭಿತ ಸರ್ವಪಕ್ಷಂ
ವಿದ್ವತ್ಸಮಕ್ಷಾಽಪ್ರತಿಭಾತಕಕ್ಷ್ಯಮ್ || ೭೪

ವಿಚಕ್ಷಣನಾದ ಮಂಡನಪಂಡಿತನ ಗಾಢವಾದ ವಾದಸಾಮರ್ಥ್ಯವನ್ನು ಯತೀಶ್ವರರಾದ ಶ್ರೀಶಂಕರರು ಗಮನಿಸಿದರು. ಅವನು ತನ್ನ ಪಕ್ಷದ ಸಮರ್ಥನೆಗಾಗಿ ಒಡ್ಡಿದ ಎಲ್ಲ ಆಕ್ಷೇಪಗಳನ್ನೂ ಖಂಡಿಸಿದರು. (ವಿವಾದ ಕೌತುಕವನ್ನು ನೋಡಲು ಬಂದ)ವಿದ್ವಾಂಸರೆದುರಿಗೆ ಮುಂದೆ ತಾನು ಯಾವ ಕೋಟಿಯನ್ನೆತ್ತಬೇಕೆಂಬುದು ಆತನಿಗೆ ಹೊಳೆಯಲಿಲ್ಲ. ಆಗ 'ಇನ್ನು ನೀನು ಹೇಳ ಬೇಕಾದ್ದೇನಿದೆ?ಅದನ್ನು ಹೇಳು'ಎಂದು ಶ್ರೀಶಂಕರರು ಮಂಡನನನ್ನು ಆಕ್ಷೇಪಿಸಿ ಕೇಳಿದರು.

ತತಃ ಸ್ವಸಿದ್ಧಾಂತ ಸಮರ್ಥನಾಯ
ಪ್ರಾಗಲ್ಭ್ಯ ಹೀನೋಽಪಿ ಸ ಸಭ್ಯಮುಖ್ಯಃ |
ಜಗಾದ ವೇದಾಂತವಚಃಪ್ರಸಿದ್ಧಂ
ಅದ್ವೈತ ಸಿದ್ಧಾಂತಮಪಾಕರಿಷ್ಣುಃ || ೭೫

ಸಭ್ಯರಲ್ಲಿ ಮುಖ್ಯನಾದ ಮಂಡನಪಂಡಿತನಿಗೆ ತನ್ನ ಕರ್ಮಸಿದ್ಧಾಂತವನ್ನು ಸಮರ್ಥಿಸುವುದಕ್ಕೆ ಬೇಕಾದ ಪ್ರಾಗಲ್ಭ್ಯವು ಉಳಿಯಲಿಲ್ಲ. ಆದರೂ ವೇದಾಂತವಾಕ್ಯಗಳಿಂದ ಪ್ರಸಿದ್ಧವಾದ ಅದ್ವೈತಸಿದ್ಧಾಂತವನ್ನಾದರೂ ದೂಷಿಸಬೇಕೆಂದು ಉದ್ದೇಶಿಸಿ ಇಂತೆಂದನು:

ಭೋ ಭೋ ಯತಿಕ್ಷ್ಮಾಧಿಪತೇ ಭವದ್ಭಿಃ
ಜೀವೇಶಯೋರ್ವಾಸ್ತವ ಮೈಕರೂಪ್ಯಮ್ |
ವಿಶುದ್ಧ ಮಂಗೀಕ್ರಿಯತೇ ಹಿ ತತ್ರ
ಪ್ರಮಾಣಮೇವಂ ನ ವಯಂ ಪ್ರತೀಮಃ|| ೭೬

"ಹೇ ಯತೀಶ್ವರರೆ, ಜೀವಾತ್ಮನಿಗೂ ಪರಮಾತ್ಮನಿಗೂ ವಾಸ್ತವವಾಗಿ ಪರಿಶುದ್ಧವಾದ ಅಭೇದವಿದೆಯೆಂದು ನೀವು ಅಂಗೀಕರಿಸುತ್ತೀರಷ್ಟೆ. ಆ ವಿಷಯದಲ್ಲಿ ಆಧಾರವೇನೆಂಬುದು ನಮಗೆ ತೋರುವುದಿಲ್ಲ"ಎಂದನು.

ಸ ಪ್ರತ್ಯವಾದೀದಿದಮೇವ ಮಾನಂ
ಯಚ್ಛ್ವೇತಕೇತು ಪ್ರಮುಖಾನ್ವಿನೇಯಾನ್ |
ಉದ್ದಾಲಕಾದ್ಯಾ ಗುರವೋ ಮಹಾಂತಃ
ಸಂಗ್ರಾಹಯನ್ನಾತ್ಮತಯಾ ಪರೇಶಮ್ || ೭೭

ಅದಕ್ಕೆ ಆಚಾರ್ಯರು "ಮಹಾತ್ಮರಾದ ಉದ್ದಾಲಕಾದಿಗುರುಗಳು ಶ್ವೇತುಕೇತುವೇ ಮೊದಲಾದ ಶಿಷ್ಯರಿಗೆ ಪರಮಾತ್ಮನು ನಿಮ್ಮ ಆತ್ಮನೇ ಎಂದು ಸ್ಪಷ್ಟವಾಗಿ ಉಪದೇಶಿಸುತ್ತಾರೆ. ಇದೇ ಆಧಾರ"-ಎಂದರು.

ವಿವರಣೆ:-೧. ಉದ್ದಾಲಕನು ಶ್ವೇತುಕೇತುವಿಗೆ 'ತತ್ ಸತ್ಯಂ | ಸ ಆತ್ಮಾ | ತತ್ತ್ವಮಸಿ ಶ್ವೇತಕೇತೋ'ಎಂದು ಒಂಬತ್ತುಸಲ ಉಪದೇಶಿಸಿದ್ದಾನೆ(ಛಾಂ. ೬)
೨. ಯಾಜ್ಞವಲ್ಕ್ಯನು ಚಾಕ್ರಾಯಣನಿಗೆ 'ಏಷ ತ ಆತ್ಮಾ ಸರ್ವಾಂತರಃ' (ಬೃಹ. ೪)ಎಂದಿದ್ದಾನೆ
೩. ಪರಮೇಷ್ಠಿಯು ಆಶ್ವಲಾಯನನಿಗೆ 'ಸೂಕ್ಷ್ಮಾತ್‌ಸೂಕ್ಷ್ಮತರಂ ನಿತ್ಯಂ ಸ ತ್ವಮೇವ ತ್ವಮೇವ ತತ್'(ಕೈವಲ್ಯ. ೧-೧೬)ಎಂದ ಬೋಧಿಸಿದ್ದಾನೆ
೪. ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ (ಬೃಹ. ೪-೪), ' ಆತ್ಮಾನಂ ಚೇದ್ವಿಜಾನೀಯಾತ್ ಅಯಮಸ್ಮೀತಿ ಪೂರುಷಃ' (ಬೃಹ. ೪-೧೨), 'ಯ ಏವಂ ವೇದಾಹಂ ಬ್ರಹ್ಮಾಸ್ಮೀತಿ ಸ ಇದಂ ಸರ್ವಂ ಭವತಿ' (ಬೃಹ. ೨-೧೦)-ಇತ್ಯಾದಿ.

ವೇದಾವಸಾನೇಷು ಹಿ ತತ್ತ್ವಮಾದಿ-
ವಚಾಂಸಿ ಜಪ್ಯಾನ್ಯಘಮರ್ಷಣಾನಿ |
ಹುಂ ಫಣ್ಮುಖಾನೀವ ವಚಾಂಸಿ ಯೋಗಿನ್
ನೈಷಾಂ ವಿವಕ್ಷಾಽಸ್ತಿ ಕುಹಸ್ವಿದರ್ಥೇ || ೭೮

ಮಂಡನ–ಯತಿಗಳೆ, ವೇದದಲ್ಲಿ ಹುಂ, ಫಟ್-ಮುಂತಾದ ಶಬ್ದಗಳಿವೆ. ಅವುಗಳಿಗೆ ಅರ್ಥವೇನೂ ಇಲ್ಲ. ಬರಿಯ ಜಪಕ್ಕಾಗಿ ಹೇಳಿದವು, ಅಲ್ಲವೆ? ಹಾಗೆಯೇ 'ತತ್ತ್ವಮಸಿ' ಮೊದಲಾದ ವಾಕ್ಯಗಳು ಪಾಪ ಪರಿಹಾರಕ್ಕೋಸ್ಕರ ಜಪಾರ್ಥವಾಗಿ ಹೇಳಲ್ಪಟ್ಟಿವೆ. ಯಾವುದೇ ವಿಷಯವನ್ನು ಬೋಧಿಸುವುದರಲ್ಲಿ ಅವುಗಳಿಗೆ ವಿವಕ್ಷೆ ಇಲ್ಲ.

ಅರ್ಥಾಪ್ರತೀತೌ ಕಿಲ ಹುಂಫಡಾದೇ-
ರ್ಜಪೋಪಯೋಗಿತ್ವಮಭಾಣಿ ವಿಜ್ಞೈಃ |
ಅರ್ಥಪ್ರತೀತೌ ಸ್ಫುಟಮತ್ರ ಸತ್ಯಾಂ
ಕಥಂ ಭವೇತ್ಪ್ರಾಜ್ಞ ಜಪಾರ್ಥತೈವ || ೭೯

ಶ್ರೀಶಂಕರ–ಹುಂ, ಫಟ್-ಮುಂತಾದ ಶಬ್ದಗಳಿಗೆ ಅರ್ಥವೇನೂ ತೋರದಿರುವ ಕಾರಣದಿಂದ ಅವು ಜಪಾರ್ಥಗಳೆಂದು ಪ್ರಾಜ್ಞರು ಹೇಳಿರುತ್ತಾರೆ. ಆದರೆ, ಪಂಡಿತೋತ್ತಮ,

'ತತ್ತ್ವಮಸಿ'ಮುಂತಾದ ವಾಕ್ಯಗಳಿಗೆ ಸ್ಫುಟವಾಗಿ ಅರ್ಥವು ತೋರುತ್ತಿರುವಾಗ ಅವು 'ಬರಿಯ ಜಪಾರ್ಥವಾದವುಗಳು' ಎನ್ನುವುದು ಹೇಗೆ ಯುಕ್ತವಾದೀತು?

ಆಪಾತತಸ್ತತ್ತ್ವಮಸೀತಿ ವಾಕ್ಯಾ-
ದ್ಯತೀಶ ಜೀವೇಶ್ವರಯೋರಭೇದಃ |
ಪ್ರತೀಯತೇಽಥಾಽಪಿ ಮಖಾದಿ ಕರ್ತೃ-
ಪ್ರಶಂಸಯಾ ಸ್ಯಾದ್ವಿಧಿಶೇಷ ಏವ || ೮೦

ಮಂಡನ–ಯೋಗೀಶ್ವರರೆ,'ತತ್ತ್ವಮಸಿ'ವುಮುಂತಾದ ವಾಕ್ಯಗಳಿಂದ ಜೀವೇಶ್ವರರ ಅಭೇದವು ಮೇಲ್ನೋಟಕ್ಕೆ ತೋರುವುದೇನೋ ಹೌದು. ಆದರೆ ಯಜ್ಞಾದಿಕರ್ಮಗಳನ್ನು ಮಾಡತಕ್ಕ ಕರ್ತೃವನ್ನು (ನೀನು ಈಶ್ವರನಾಗಿದ್ದೀಯೆ) ಎಂದು ಸ್ತುತಿಸುವುದಕ್ಕಾಗಿ ಇವು ಹೊರಟಿವೆಯಾದ್ದರಿಂದ ಇಂತಹ ವಾಕ್ಯವು ವಿಧಿಶೇಷವಾಗುತ್ತದೆಯೇ ಹೊರತು ಬೇರೆಯಲ್ಲ.

ವಿವರಣೆ:-ವೇದವು ಯಾವುದಾದರೊಂದು ಕ್ರಿಯೆಯನ್ನು(ಕರ್ಮವನ್ನು) ವಿಧಿಸುವುದಕ್ಕಾಗಿ ಹೊರಟಿರುತ್ತದೆ. ಇಂತಹ ವಾಕ್ಯಕ್ಕೆ ವಿಧಿವಾಕ್ಯವೆಂದು ಹೆಸರು. ವಿಧಿವಾಕ್ಯವು ಮಾತ್ರ ಅರ್ಥವತ್ತಾದದ್ದು. ವಿಧಿಯನ್ನು ಹೇಳದ ವಾಕ್ಯವು ಪ್ರಮಾಣವಲ್ಲ. ವಿಹಿತಕರ್ಮದ ಕರ್ತೃವನ್ನೋ ದೇವತೆಯನ್ನೋ ಕರ್ಮಫಲವನ್ನೋ ಪ್ರತಿಪಾದಿಸತಕ್ಕ ಆ ವಾಕ್ಯವನ್ನು ವಿಧಿಗೆ ಶೇಷವಾಗಿ ಎಂದರೆ ಉಪಕಾರಕವಾಗಿ ಬಳಸಿಕೊಳ್ಳಬೇಕು. ಇದಕ್ಕೆ ವಿಧಿಶೇಷವೆಂದೂ ಅರ್ಥವಾದವೆಂದೂ ಹೆಸರು. ಕ್ರಿಯೆಯು ಯಾವಾಗಲೂ ಸಾಧ್ಯವಾಗಿರುತ್ತದೆ. ಅದು ಸಿದ್ಧವಸ್ತುವಲ್ಲ. ಸಿದ್ಧವಸ್ತುವನ್ನು ಹೇಳತಕ್ಕದ್ದು ವಿಧಿವಾಕ್ಯವಲ್ಲ-ಎಂದು ಮೀಮಾಂಸಕರ ಸಿದ್ಧಾಂತವಿದೆ. ಅವರ ಮತದಂತೆ ಸಿದ್ಧವಿಷಯವನ್ನು ತಿಳಿಸತಕ್ಕದ್ದು ಪ್ರಮಾಣವಲ್ಲ. ಪ್ರಕೃತದಲ್ಲಿ ' ತತ್ತ್ವಮಸಿ'ಎಂಬ ವಾಕ್ಯವು ಯಾವ ಕ್ರಿಯೆಯನ್ನೂ ವಿಧಿಸುವುದಿಲ್ಲವಾದ್ದರಿಂದ ಪ್ರಮಾಣವಲ್ಲ. ಅದು ಕೇವಲ ಸಿದ್ಧವಿಷಯವನ್ನು ಬೋಧಿಸುತ್ತದೆ. ಆದ್ದರಿಂದ ಅದು ಯಾಗಕರ್ತೃವನ್ನು ಸ್ತುತಿಸುವುದಕ್ಕಾಗಿ ಹೊರಟಿದೆಯಾದ್ದರಿಂದ ಬರಿಯ ಅರ್ಥವಾದವೇ ಸರಿ -ಎಂದು ಅಭಿಪ್ರಾಯ.

ಕ್ರತ್ವಂಗಯೂಪಾದಿ ಕಮರ್ಯಮಾದಿ-
ದೇವಾತ್ಮನಾ ವಾಕ್ಯಗಣಃ ಪ್ರಶಂಸನ್ |
ಶೇಷಃ ಕ್ರಿಯಾಕಾಂಡಗತೋ ಯದಿ ಸ್ಯಾತ್
ಕಾಂಡಾಂತರಸ್ಥೋಽಪಿ ಭವೇತ್ಕಥಂ ಸಃ || ೮೧

ಶ್ರೀಶಂಕರ–ಕ್ರತುವಿಗೆ (ಯಜ್ಞಕ್ಕೆ) ಅಂಗವಾದ ಯೂಪ- ಮುಂತಾದ್ದನ್ನು ಆದಿತ್ಯ-ಇತ್ಯಾದಿ ದೇವತಾರೂಪದಲ್ಲಿ ಸ್ತುತಿಸುವ ವೇದವಾಕ್ಯಗಳು ಕ್ರಿಯೆಯನ್ನು ವಿಧಿಸುವ ಕರ್ಮಕಾಂಡದಲ್ಲಿರುತ್ತವೆ. ಆ ವಾಕ್ಯಗಳು ವಿಧಿಶೇಷಗಳಾಗಬಹುದು. ಆದರೆ ಪ್ರತ್ಯೇಕವಾಗಿ ಜ್ಞಾನಕಾಂಡದಲ್ಲಿರತಕ್ಕ ತತ್ತ್ವಮಸ್ಯಾದಿ ವಾಕ್ಯಗಳು ಹೇಗೆ ವಿಧಿಶೇಷವಾದಾವು?

ವಿವರಣೆ:-ಕರ್ಮಕಾಂಡದಲ್ಲಿ ಜ್ಯೋತಿಃಷ್ಟೋಮಾದಿ ಕ್ರತುಗಳನ್ನು ವಿಧಿಸಿದೆ. ಅಲ್ಲಿ ಆದಿತ್ಯೋ ಯೂಪಃ, ಯಜಮಾನಃ ಪ್ರಸ್ತರಃ(ಯೂಪಸ್ತಂಭವು ಆದಿತ್ಯ, ಯಜಮಾನನು ಶಿಲೆ)-ಮುಂತಾದ ವಾಕ್ಯಗಳಿವೆ. ಅವು ಯಜ್ಞಾಂಗಗಳಾದ ಯೂಪಾದಿಗಳನ್ನು ಪ್ರಶಂಸೆಮಾಡುವುದಕ್ಕಾಗಿ ಹೊರಟಿವೆ. ಸ್ವತಃ ಅರ್ಥವಿಲ್ಲವಾದ್ದರಿಂದ ವಿಧಿಶೇಷವೆಂದು ಹೇಳುವುದು ಯುಕ್ತವೇ. ಆದರೆ ಪ್ರತ್ಯೇಕವಾದ ಜ್ಞಾನಕಾಂಡದಲ್ಲಿ ಹೇಳಿರುವ'ಸದೇವ ಸೌಮ್ಯೇದ ಮಗ್ರೇ ಆಸೀತ್, ಏಕಮೇವಾದ್ವಿತೀಯಂ ಬ್ರಹ್ಮ, ಅಯಮಾತ್ಮಾ ಬ್ರಹ್ಮ, ತತ್ತ್ವಮಸಿ'ಮುಂತಾದವು ಹೇಗೆ ವಿಧಿಶೇಷಗಳು?ಯಾವ ವಿಧಿಗೆ ಶೇಷ?ಈ ಪ್ರಕರಣದಲ್ಲಿ ವಿಧಿಯೇ ಇಲ್ಲ. ಎಲ್ಲಿಯೋ ಹೇಳಿದ್ದನ್ನು ಎಲ್ಲಿಗೋ ಎಳೆದುತಂದು ಜೋಡಿಸುವುದು ಅಸಾಧ್ಯ, ಅಕ್ರಮ- ಎಂದು ಅಭಿಪ್ರಾಯ.

ತರ್ಹ್ಯಸ್ತು ಜೀವೇ ಪರಮಾತ್ಮದೃಷ್ಟಿ-
ವಿಧಾಯಕಃ ಕರ್ಮಸಮೃದ್ಧಯೇಽರ್ಹನ್ |
ಅಬ್ರಹ್ಮಣಿ ಬ್ರಹ್ಮಧಿಯಂ ವಿಧತ್ತೇ
ಯಥಾ ಮನೋಽನ್ನಾರ್ಕನಭಸ್ವದಾದೌ || ೬೨

ಮಂಡನ–ಪೂಜ್ಯರೆ, ಹಾಗಾದರೆ 'ತತ್ತ್ವಮಸಿ', 'ಅಹಂಬ್ರಹ್ಮಾಸ್ಮಿ'ಮುಂತಾದ ವಾಕ್ಯಗಳು (ಉಪಾಸನಾರ್ಥವಾಗಿ) ಜೀವನಲ್ಲಿ ಬ್ರಹ್ಮಬುದ್ಧಿಯನ್ನು ವಿಧಿಸುತ್ತವೆ -ಎಂದಾಗಲಿ. ಇದು ಕರ್ಮಸಮೃದ್ಧಿಗಾಗಿ. ಮನಸ್ಸು, ಅನ್ನ, ಸೂರ್ಯ, ವಾಯು- ಮುಂತಾದವುಗಳಲ್ಲಿ ಬ್ರಹ್ಮಬುದ್ಧಿಯನ್ನಿಡಬೇಕೆಂದು ಬೇರೆಬೇರೆ ವಿಧಿಗಳಿವೆಯಷ್ಟೆ. ಅವುಗಳಂತೆಯೇ ಇಲ್ಲಿಯೂ ಎಂದು ತಿಳಿಯತಕ್ಕದ್ದು.

ವಿವರಣೆ:-ಮನೋಬ್ರಹ್ಮೇತ್ಯುಪಾಸೀತ, ಅನ್ನಂ ಬ್ರಹ್ಮೇತಿ ವ್ಯಜಾನಾತ್, ಆದಿತ್ಯೋಬ್ರಹ್ಮೇತ್ಯಾದೇಶಃ, ವಾಯುರ್ವಾವ ಸಂಸರ್ಗಃ-ಇತ್ಯಾದಿ ಉಪಾಸನಾವಿಧಿಗಳಿವೆ. ಮನಸ್ಸನ್ನು ಬ್ರಹ್ಮವೆಂದು ಉಪಾಸನೆ ಮಾಡಬೇಕು- ಈ ರೀತಿ ಅವುಗಳಿಗೆ ಅರ್ಥ. ಹಾಗೆಯೇ ಇಲ್ಲಿಯೂ ಮಾಡುವುದರಿಂದ ಉಪಾಸನಾಕರ್ಮಕ್ಕೆ ಹೆಚ್ಚಿನ ಫಲವು ದೊರೆಯುತ್ತದೆ. ಜೀವನಲ್ಲಿ ಬ್ರಹ್ಮಬುದ್ಧಿಯು ಆರೋಪಿತವಾಗುತ್ತದೆಯೇ ಹೊರತು ಜೀವಬ್ರಹ್ಮರ ಐಕ್ಯವು ಸಿದ್ಧಿಸುವುದಿಲ್ಲವೆಂದು ಅಭಿಪ್ರಾಯ.

ಸಂಶ್ರೂಯತೇಽನ್ಯತ್ರ ಯಥಾ ಲಿಜಾದಿಃ
ವಿಧಾಯಕೋ ಬ್ರಹ್ಮವಿಭಾವನಾಯ |
ತಥಾ ವಿಧೇರಶ್ರವಣಾನ್ಮನೀಷಿನ್
ಸಂಜಾಘಟೀತ್ಯತ್ರ ಕಥಂ ವಿಧಾನಮ್ || ೬೩

ಶ್ರೀಶಂಕರ–'ಮನೋ ಬ್ರಹ್ಮೇತ್ಯುಪಾಸೀತ'ಮುಂತಾದ ವಾಕ್ಯಗಳಲ್ಲಿ' ಉಪಾಸೀತ' ಎಂದು ವಿಧಿಯನ್ನು ಬೋಧಿಸುವ ಲಿಙ್ ಪ್ರತ್ಯಯ ಮೊದಲಾದದ್ದು ಇದೆ. ಬ್ರಹ್ಮವೆಂಬ ಬುದ್ಧಿಯನ್ನು ಇಡಬೇಕೆಂದು ವಿಧಿಸುವ ವಾಕ್ಯವದು. ಎಲೈ ವಿದ್ವಾಂಸನೆ, '

ತತ್ತ್ವಮಸಿ'ಮುಂತಾದ ವಾಕ್ಯಗಳಲ್ಲಿ ವಿಧಿಯನ್ನು ಬೋಧಿಸುವ ಯಾವ ಶಬ್ದವೂ ಇಲ್ಲ. ಹೀಗಿರುವಾಗ ಇದೆಲ್ಲವೂ ಉಪಾಸನಾವಿಧಿಯೆಂಬುದು ಹೇಗೆ ಹೊಂದುತ್ತದೆ?

ವಿವರಣೆ:-ಉಪಾಸೀತ, ಇತಿ, ಇತ್ಯಾದೇಶಃ-ಮೊದಲಾದ ಶಬ್ದಗಳಿರುವುದರಿಂದ ಆ ದೃಷ್ಟಾಂತಗಳು ವಿಧಿವಾಕ್ಯಗಳೆನ್ನಬಹುದು. ಪ್ರಕೃತದಲ್ಲಿ ಅಂತಹ ಶಬ್ದ ಯಾವುದೂ ಇಲ್ಲವಾದ್ದರಿಂದ ವಿಧಿಯೆಂಬುದು ಯುಕ್ತವಲ್ಲ.
ಸಂಜಾಘಟೀತಿ = ಘಟಧಾತುವಿನ ಯಙ್‌ಲುಗಂತ ಪ್ರಯೋಗ. ಸಂ-ಉಪಸರ್ಗ.

ಯದ್ವತ್ಪ್ರತಿಷ್ಠಾಫಲದರ್ಶನೇನ
ವಿಧಿರ್ಯತೀನಾಂ ವರ ರಾತ್ರಿಸತ್ರೇ |
ಪ್ರಕಲ್ಪ್ಯತೇ ತದ್ವದಿಹಾಪಿ ಮುಕ್ತಿ-
ಫಲಶ್ರುತೇಃ ಕಲ್ಪಯಿತುಂ ಸ ಯುಕ್ತಃ || ೮೪

ಮಂಡನ–ಸಂನ್ಯಾಸಿವರೇಣ್ಯರೆ, ರಾತ್ರಿಸತ್ರ ಪ್ರಕರಣದಲ್ಲಿ ಪ್ರತಿಷ್ಠೆ (ಕೀರ್ತಿ) ಎಂಬ ಫಲವನ್ನು ಹೇಳಿದ್ದರಿಂದ 'ರಾತ್ರಿಸತ್ರವನ್ನು ಆಚರಿಸಬೇಕು' ಎಂಬ ವಿಧಿಯನ್ನು ಕಲ್ಪಿಸಿಕೊಳ್ಳಬೇಕೆಂದು ಮೀಮಾಂಸಾಶಾಸ್ತ್ರದಲ್ಲಿ ನಿರ್ಣಯಿಸಿದ್ದಾರೆ. ಹಾಗೆಯೇ ಪ್ರಕೃತದಲ್ಲಿ ಮೋಕ್ಷವೆಂಬ ಫಲವನ್ನು ಹೇಳಿರುವುದರಿಂದ 'ತತ್ತ್ವಮಸಿ' ಇತ್ಯಾದಿ ಸ್ಥಳಗಳಲ್ಲಿಯೂ ಉಪಾಸನಾವಿಧಿಯನ್ನು ಕಲ್ಪಿಸಿಕೊಳ್ಳುವುದು ಯುಕ್ತವಾಗಿದೆ.

ವಿವರಣೆ:- 'ಪ್ರತಿತಿಷ್ಠಂತಿ ಹ ವಾ ಯ ಏತಾ ರಾತ್ರೀರುಪಯಂತಿ'ಎಂದು ವೇದ ವಾಕ್ಯವಿದೆ. ರಾತ್ರಿಯೆಂದರೆ ಕೆಲವು ಸೋಮಯಾಗ ವಿಶೇಷಗಳು. ಇದನ್ನು ಆಚರಿಸಬೇಕೆಂಬ ವಿಧಿವಾಕ್ಯವಿಲ್ಲ. ಯಾಗಕ್ಕೆ ಪ್ರತಿಷ್ಠೆಯೆಂಬ ಫಲವಿದೆ ಎಂದು ಹೇಳಿದೆ. ಫಲವು ಯಾವ ಕರ್ಮಕ್ಕೆ? ಎಂಬ ಪ್ರಶ್ನೆ ಹುಟ್ಟುವುದರಿಂದ ರಾತ್ರಿಯಾಗಕ್ಕೆ ಅದು ಫಲವೆಂದೂ ಆ ರಾತ್ರಿಯಾಗವನ್ನು ಮಾಡಬೇಕೆಂದೂ ವಿಧಿಪರವಾಗಿ ಅರ್ಥವನ್ನು ಮಾಡತಕ್ಕದ್ದು. ಹಾಗೆಯೇ'ಬ್ರಹ್ಮವೇದ ಬ್ರಹ್ಮೈವ ಭವತಿ' ಮುಂತಾದ ವಾಕ್ಯವು ಫಲವನ್ನು ಹೇಳುತ್ತದೆ. ಯಾವ ಕರ್ಮಕ್ಕೆ ಫಲ?ಬ್ರಹ್ಮವೆಂಬ ಉಪಾಸನೆಗೆ ಫಲವೆಂದು 'ಆತ್ಮೇತ್ಯೇವೋಪಾಸೀತ' ಎಂದು ವಿಧಿಯನ್ನು ಕಲ್ಪಿಸಿ ಕೊಳ್ಳಬೇಕು. ಜೀವನನ್ನು ಬ್ರಹ್ಮವೆಂದು ಭಾವಿಸಿ ಉಪಾಸನೆ ಮಾಡಿದರೆ ಮೋಕ್ಷಫಲವು ಸಿದ್ಧಿಸುತ್ತದೆ ಎಂದರ್ಥ. ಏವಂಚ ಜೀವ ಬ್ರಹ್ಮರಿಗೆ ಐಕ್ಯವು ಸಿದ್ಧಿಸುವುದಿಲ್ಲಎಂದು ಅಭಿಪ್ರಾಯ.

ತರ್ಹಿ ಕ್ರಿಯಾಜನ್ಯತಯಾ ವಿಮುಕ್ತಿಃ
ಸ್ವರ್ಗಾದಿವದ್ಧಂತ ವಿನಶ್ವರಾ ಸ್ಯಾತ್ |
ಉಪಾಸನಾ ಕರ್ತುಮಕರ್ತುಮನ್ಯಥಾ
ವಾ ಕರ್ತುಮರ್ಹಾ ಮನಸಃ ಕ್ರಿಯೈವ || ೮೫

ಶ್ರೀಶಂಕರ–ಹಾಗಾದರೆ ಮೋಕ್ಷವು ಕ್ರಿಯಾಜನ್ಯವೆಂದಾಗಿ ಬಿಡುತ್ತದೆ. ಆಗ ಯಾಗಕ್ರಿಯಾ ಜನ್ಯವಾದ ಸ್ವರ್ಗಾದಿಫಲದಂತೆ ನಶ್ವರವೇ ಆಗಿಬಿಡುತ್ತದೆಯಲ್ಲ!ಉಪಾಸನೆಯನ್ನು

ಮಾಡುವುದು, ಮಾಡದಿರುವುದು ಅಥವಾ ಇನ್ನೊಂದು ವಿಧದಲ್ಲಿ ಮಾಡುವುದು ಕರ್ತೃವಿಗೆ ಅಧೀನವಾದ್ದರಿಂದ, ಉಪಾಸನೆಯು ಕ್ರಿಯೆಯೇ ಸರಿ.

ವಿವರಣೆ:- 'ಯತ್ ಕೃತಕಂ ತದನಿತ್ಯಂ' ಎಂಬುದು ಸರ್ವಲೋಕಪ್ರಸಿದ್ಧ. ಯಾವುದು ಕ್ರಿಯೆಯಿಂದ ಹೊಸದಾಗಿ ಹುಟ್ಟುತ್ತದೆಯೋ ಅದು ಅನಿತ್ಯ. ಸ್ವರ್ಗವು ಯಾಗಕ್ರಿಯೆಯಿಂದ ಲಭ್ಯವಾಗುವ ಕಾರಣ ಅನಿತ್ಯವಾಗಿದೆ. ಮೋಕ್ಷವಾದರೋ ನಿತ್ಯವೆಂದೂ ಶಾಶ್ವತವೆಂದೂ ಶಾಸ್ತ್ರಸಿದ್ಧವಾಗಿದೆ. ಉಪಾಸನೆಯು ಮಾನಸಕ್ರಿಯೆ. ಕರ್ತೃವಿಗೆ ಕ್ರಿಯೆ ಅಧೀನವಾಗಿರುತ್ತದೆಯಾದ್ದರಿಂದ ಕರ್ತೃತಂತ್ರವೆನಿಸುತ್ತದೆ. ಜ್ಞಾನವು ವಸ್ತುತಂತ್ರ. ವಸ್ತು ಹೇಗಿದೆಯೋ ಹಾಗೆ ಜ್ಞಾನವಾಗುತ್ತದೆ. ನಮ್ಮ ಇಷ್ಟದಂತೆ ಜ್ಞಾನವಾಗುವುದಿಲ್ಲ. ಗಡಿಗೆಯನ್ನು ನೋಡಿದಾಗ ಇದು ಬಡಿಗೆ ಎಂಬ ಜ್ಞಾನ ಎಂದಿಗೂ ಬರುವುದಿಲ್ಲ. ಮೋಕ್ಷವು ಬ್ರಹ್ಮಜ್ಞಾನದಿಂದ ಆಗತಕ್ಕದ್ದು, ಕ್ರಿಯೆಯಿಂದಲ್ಲ. ಪರಮಾರ್ಥಜ್ಞಾನವೇ ಮೋಕ್ಷ.

ಮಾಭೂದಿದಂ ತತ್ತ್ವಮಸೀತಿ ವಾಕ್ಯಂ
ಉಪಾಸನಾಪರ್ಯವಶಾಯಿ ಕಾಮಮ್ |
ಕಿಂತ್ವಸ್ಯ ಜೀವಸ್ಯ ಪರೇಣ ಸಾಮ್ಯ-
ಪ್ರತ್ಯಾಯಕಂ ಸತ್ತಮ ಬೋಭವೀತು || ೮೬

ಮಂಡನ–ಒಳ್ಳೆಯದು, ತತ್ತ್ವಮಸಿ ಎಂಬ ವಾಕ್ಯವು ಉಪಾಸನಾವಿಧಾಯಕವಾಗದಿದ್ದರೆ ಬೇಡ. ವಿದ್ವಾಂಸರೆ, ಆ ವಾಕ್ಯವು ಜೀವನಿಗೆ ಪರಮಾತ್ಮನೊಡನೆ ಸಾಮ್ಯವನ್ನು ಬೋಧಿಸುತ್ತದೆ -ಎಂದಾಗಬಹುದಲ್ಲ!

ವಿವರಣೆ:- 'ಸಿಂಹೋ ದೇವದತ್ತಃ'ದೇವದತ್ತನು ಸಿಂಹ ಎಂದು ಹೇಳಿದರೆ ದೇವದತ್ತನು ಸಿಂಹವೇ ಎಂದು ಸಿದ್ಧವಾಗುವುದಿಲ್ಲ. ಸಿಂಹಕ್ಕೆ ಸಮನಾದ ವೀರ-ಎಂದು ಮಾತ್ರ ಅರ್ಥವಾಗುತ್ತದೆ. ಹಾಗೆಯೇ ಜೀವನು ಬ್ರಹ್ಮ ಎಂದರೆ ಬ್ರಹ್ಮಕ್ಕೆ ಸಮಾನನಾದವನು ಎಂದು ಹೇಳಬೇಕು. ಇಲ್ಲಿ ಸಾಮ್ಯವು ವಿವಕ್ಷಿತವೇ ಹೊರತು ಅಭೇದವಲ್ಲ-ಎಂದು ತಾತ್ಪರ್ಯ. ಬೋಭವೀತು = ಭೂಧಾತುವಿನ ಯಙ್‌ಲುಕ್ಕಿನ ರೂಪ.

ಕಿಂ ಚೇತನತ್ವೇನ ವಿವಕ್ತಿ ಸಾಮ್ಯಂ
ಸಾರ್ವಜ್ಞ್ಯ ಸಾರ್ವಾತ್ಮ್ಯಮುಖೈರ್ಗುಣೈರ್ವಾ |
ಆದ್ಯೇ ಪ್ರಸಿದ್ಧಂ ನ ಖಲೂಪದೇಶ್ಯ-
ಮಂತೇ ಸ್ವಸಿದ್ಧಾಂತ ವಿರುದ್ಧತಾ ಸ್ಯಾತ್ || ೮೭

ಶ್ರೀಶಂಕರ–ಜೀವನಿಗೂ ಈಶ್ವರನಿಗೂ ಚೇತನತ್ವಗುಣವನ್ನಿಟ್ಟು ಕೊಂಡು ಈ ವಾಕ್ಯವು ಸಾಮ್ಯವನ್ನು ಹೇಳುತ್ತದೆಯೊ? ಅಥವಾ ಸರ್ವಜ್ಞತ್ವ, ಸರ್ವಾತ್ಮತ್ವ, ಸರ್ವಶಕ್ತಿತ್ವ -ಮುಂತಾದ ಗುಣಗಳನ್ನನುಸರಿಸಿ ಸಾಮ್ಯವನ್ನು ಹೇಳುತ್ತದೆಯೊ?ಮೊದಲನೆಯ ಪಕ್ಷವಾದರೆ ಜೀವವು ಚೇತನವೆಂಬುದು ಲೋಕಪ್ರಸಿದ್ಧವೇ ಆಗಿರುವುದರಿಂದ, ವೇದವು

ಅದನ್ನು ಬೋಧಿಸಬೇಕಾದ್ದಿಲ್ಲ. ಕಡೆಯದಾದ ಎರಡನೆಯ ಪಕ್ಷವಾದರೆ ನಿಮ್ಮ ಸ್ವಕೀಯ ಪಕ್ಷಕ್ಕೆವಿರುದ್ಧವೇ ಆಗಿಬಿಡುತ್ತದೆ!

ವಿವರಣೆ:-ಲೋಕಪ್ರಸಿದ್ಧವನ್ನು ತಿಳಿಸುವುದು ಶಾಸ್ತ್ರದ ಕರ್ತವ್ಯವಲ್ಲ. ಬೆಂಕಿಸುಡುತ್ತದೆ- ಎಂದು ವೇದವು ಹೇಳಿಕೊಡಬೇಕಾಗಿಲ್ಲ. ಸರ್ವಜ್ಞತ್ವಾದಿ ಗುಣಗಳು ಜೀವನಲ್ಲಿವೆಯೆಂದಾದರೆ ಅವನು ಈಶ್ವರನೇ ಎಂದು ಸಿದ್ಧವಾಗುತ್ತದೆ. ಅದು ಮಂಡನನ ಪಕ್ಷಕ್ಕೆ ವಿರುದ್ಧ. ಜೀವನು ಚೇತನ ಎಂಬುದು ಲೋಕಸಿದ್ಧ.

ನಿತ್ಯತ್ವಮಾತ್ರೇಣ ಮುನೇ ಪರಾತ್ಮ-
ಗುಣೋಪಮಾನ್ಯೈಃ ಸುಖಬೋಧಪೂರ್ವೈಃ |
ಗುಣೈರವಿದ್ಯಾವೃತಿತೋಽಪ್ರತೀತೈಃ
ಸಾಮ್ಯಂ ಬ್ರವೀತ್ವಸ್ಯ ತತೋ ನ ದೋಷಃ || ೮೮

ಮಂಡನ–ಮುನಿಗಳೆ, ಪರಮಾತ್ಮನಲ್ಲಿ ಆನಂದ, ಜ್ಞಾನ ಮುಂತಾದ ಗುಣಗಳು ಹೇಗೆ ನಿತ್ಯವಾಗಿವೆಯೋ ಹಾಗೆ ಜೀವನಲ್ಲಿಯೂ ಅವು ನಿತ್ಯವಾಗಿವೆ, ಅವಿದ್ಯೆಯ ಆವರಣ ವಿರುವುದರಿಂದ ನಿತ್ಯವಾಗಿ ತೋರುವುದಿಲ್ಲ-ಎಂದು ನಿತ್ಯತ್ವಮಾತ್ರದಿಂದ ಜೀವೇಶ್ವರರಿಗೆ ತತ್ತ್ವಮಸ್ಯಾದಿವಾಕ್ಯಗಳು ಸಾಮ್ಯವನ್ನು ಬೋಧಿಸುತ್ತವೆ-ಎಂದು ಹೇಳಬಹುದು. ಆಗ ನೀವು ಹೇಳಿದ ದೋಷವು ಅಂಟುವುದಿಲ್ಲ.

ವಿವರಣೆ:-ಜೀವನಲ್ಲಿ ಆನಂದ, ಜ್ಞಾನ ಮುಂತಾದ ಗುಣಗಳಿದ್ದರೂ ನಿತ್ಯವಾಗಿ ಪ್ರಕಟವಾಗುವುದಿಲ್ಲ. ಅವಿದ್ಯೆಯಿಂದ ಅವು ಆವೃತವಾಗಿವೆ. ಈಶ್ವರನಲ್ಲಿರುವಂತೆ ಜೀವನ ಆನಂದಾದಿಗಳೂ ನಿತ್ಯ- ಎಂದು ಗುಣನಿತ್ಯತ್ವವೆಂಬ ಸಾಧಾರಣ ಧರ್ಮವನ್ನಿಟ್ಟುಕೊಂಡು ಸಾಮ್ಯವನ್ನು ಹೇಳಬಹುದು -ಎಂದು ಅಭಿಪ್ರಾಯ.

ಯದ್ಯೇವಮೇತಸ್ಯ ಪರತ್ವಮೇವ
ಪ್ರತ್ಯಾಯಯತ್ವತ್ರ ದುರಾಗ್ರಹಃ ಕಃ |
ತ್ವಯೈವ ತಸ್ಯ ಪ್ರತಿಭಾಸಶಂಕಾ
ವಿದ್ವನ್ನವಿದ್ಯಾವರಣಾನ್ನಿರಸ್ತಾ || ೮೯

ಶ್ರೀಶಂಕರ–ಹಾಗಾದರೆ ಜೀವನು ಪರಮಾತ್ಮನೆಂದೇ ಈ ವಾಕ್ಯವು ಪ್ರತಿಪಾದಿಸುತ್ತದೆ ಯೆಂದಾಗಲಿ. ಸಾಮ್ಯವನ್ನೇ ಬೋಧಿಸುತ್ತದೆಯೆಂಬ ದುರಾಗ್ರಹವೇಕೆ? ಎಲೈ ವಿದ್ವಾಂಸನೆ, ಜೀವನಲ್ಲಿ ನಿತ್ಯಾನಂದಾದಿಗಳೇಕೆ ತೋರುವುದಿಲ್ಲವೆಂಬ ಶಂಕೆಯನ್ನು ಅವಿದ್ಯಾವರಣವೆಂಬ ಹೇತುವಿನಿಂದ ನೀನೇ ಹೋಗಲಾಡಿಸಿದ್ದೀಯೆ!

ವಿವರಣೆ:-ಅವಿದ್ಯೆಯನ್ನೂ, ಅವಿದ್ಯೆಯಿಂದ ಜೀವನಲ್ಲಿ ನಿತ್ಯಾನಂದ, ನಿತ್ಯಜ್ಞಾನಾದಿ ಪರಮಾತ್ಮಗುಣಗಳು ತೋರುವುದಿಲ್ಲವೆಂದೂ ಒಪ್ಪಿಕೊಂಡಮೇಲೆ ಜೀವನು ಪರಮಾತ್ಮನೇ ಎಂದೇಕೆ ಒಪ್ಪಬಾರದು?

ಸಮತ್ವವನ್ನು ಉಪನಿಷದ್ವಾಕ್ಯವು ಬೋಧಿಸುತ್ತದೆ, ಅಭೇದವನ್ನಲ್ಲ -ಎಂಬುದು ಬರಿಯ ದುರಾಗ್ರಹವೇ ಸರಿ.

ಭೋಶ್ಚೇತನತ್ವೇನ ಶರೀರಿಸಾಮ್ಯ-
ಮಾವೇದ್ಯತಾಮಸ್ಯ ಜಗತ್ಪ್ರಸೂತೇಃ |
ಚಿದುತ್ಥಿತತ್ವೇನ ಪರೋದಿತಸ್ಯಾ-
ಪ್ಯಣುಪ್ರಧಾನ ಪ್ರಭೃತೇರ್ನಿರಾಸಃ || ೯೦

ಮಂಡನ–ಮಾನ್ಯರೆ, ಜಗತ್ಕಾರಣನಾದ ಈಶ್ವರನಿಗೆ ಚೇತನತ್ವಧರ್ಮದಿಂದ ಜೀವಸಾದೃಶ್ಯವನ್ನು ಬೋಧಿಸುತ್ತದೆಯೆಂದಾಗಲಿ!ಚೇತನನಾದ ಈಶ್ವರನಿಂದ ಜಗತ್ತು ಹುಟ್ಟಿದೆಯೆಂದು ಸಿದ್ಧವಾಗುವುದರಿಂದ, ತಾರ್ಕಿಕಾದಿಗಳು ಹೇಳುವ ಪರಮಾಣುವಾದ, ಪ್ರಧಾನವಾದ- ಮೊದಲಾದವುಗಳ ನಿರಾಸವೂ ಆಗುತ್ತದೆ.

ವಿವರಣೆ:-ಜೀವನಿಗೆ ಈಶ್ವರಸಾದೃಶ್ಯವನ್ನು ಹೇಳುವುದಕ್ಕಾಗದಿದ್ದರೆ, ಈಶ್ವರನಿಗೇ ಜೀವಸಾದೃಶ್ಯವನ್ನು ಹೇಳಬಹುದು-ಎಂದು ಅಭಿಪ್ರಾಯ! ಈ ಸಾದೃಶ್ಯದಿಂದ ಈಶ್ವರನು ಚೇತನನೆಂದು ಸಿದ್ಧವಾಗುತ್ತದೆ. ಅವನಿಂದ ಜಗತ್ತು ಹುಟ್ಟಿದೆಯೆಂಬುದೂ ಸಂಗತವಾಗುತ್ತದೆ. ಇದರಿಂದ ತಾರ್ಕಿಕರ ಪರಮಾಣುವಾದ- ಮುಂತಾದವು ನಿರಸ್ತವಾಗುತ್ತವೆ.

ಹಂತೈವಮಸ್ತೀತಿ ತದಾ ಪ್ರಯೋಗಃ
ಸ್ಯಾತ್ತ್ವನ್ಮತೇ ತತ್ತ್ವಮಸೀತಿ ನ ಸ್ಯಾತ್ |
ತದೈಕ್ಷತೇತ್ಯತ್ರ ಜಡತ್ವಶಂಕಾ-
ವ್ಯಾವರ್ತನಾಚ್ಚಾತ್ರ ಪುನರ್ನ ಚೋದ್ಯಮ್ || ೯೧

ಶ್ರೀಶಂಕರ–ಓಹೊ! ಹಾಗೆ ನಿನ್ನ ಮತವಾದರೆ ಉಪನಿಷದ್ವಾಕ್ಯವು 'ತತ್ತ್ವಮಸ್ತಿ' ಎಂದಿರಬೇಕಾಗಿತ್ತು'ತತ್ತ್ವಮಸಿ'ಎಂದಾಗುವುದಿಲ್ಲ. ಅಲ್ಲದೆ 'ತದೈಕ್ಷತ ಬಹು ಸ್ಯಾಂ ಪ್ರಜಾಯೇಯೇತಿ' (ಛಾಂ. ೬-೩) ಎಂಬುದರಿಂದಲೇ ಪರಮಾತ್ಮನು ಜಡನಲ್ಲವೆಂದು ಸ್ಪಷ್ಟವಾಗಿರುವ ಕಾರಣ, ಇಲ್ಲಿ ಅವನು ಜಡನೆಂಬ ಶಂಕೆಗೆ ಮತ್ತೆ ಅವಕಾಶವಿಲ್ಲ.

ವಿವರಣೆ:-ಮಂಡನನ ಪ್ರಕಾರ'ತತ್ = ಆ ಬ್ರಹ್ಮವು ತ್ವಂ =ನಿನಗೆ ಸದೃಶವಾದದ್ದು ಅಸ್ತಿ = ಆಗಿದೆ'ಎಂದು ವಾಕ್ಯದ ಅರ್ಥವನ್ನು ಹೇಳಬೇಕಾಗುತ್ತದೆ. ಏವಂಚ 'ತತ್ತ್ವಮಸ್ತಿ'ಎಂದು ಇದ್ದಿದ್ದರೆ ಹಾಗೆ ಹೇಳಲು ಸಾಧ್ಯವಾಗುತ್ತಿತ್ತು. ಆಗ 'ಅಸ್ತಿ'ಎಂದು ಪ್ರಥಮ ಪುರುಷವಿರಬೇಕು. ಆದರೆ 'ಅಸಿ'ಎಂದು ಮಧ್ಯಮ ಪುರುಷವಿದೆಯಾದ್ದರಿಂದ ಮಂಡನನು ಹೇಳಿದ ಅರ್ಥಕೂಡುವುದೇ ಇಲ್ಲ. ಅಲ್ಲದೆ ಪರಮಾತ್ಮನು ಚೇತನ, ಚಿದ್ರೂಪ-ಎಂಬುದು ಉಪನಿಷತ್ತಿನ ಬೇರೆಬೇರೆ ವಾಕ್ಯಗಳಿಂದ ಸಿದ್ಧವಾಗಿಯೇ ಇದೆ. ಅವನು ಜಡನೆಂಬ ಶಂಕೆಗೆ ಅವಕಾಶವೇ ಇಲ್ಲ. ತದೈಕ್ಷತ= ಆ ಬ್ರಹ್ಮವು ಹೀಗೆ ಆಲೋಚಿಸಿತು. ಆಲೋಚನೆ-ಜ್ಞಾನ ಜಡವಸ್ತುವಿಗೆ ಇರುವುದಿಲ್ಲ.

ನನ್ವೇವಮಪ್ಯೈಕ್ಯ ಪರತ್ವಮಸ್ಯ
ಪ್ರತ್ಯಕ್ಷಪೂರ್ವ ಪ್ರಮಿತಿ ಪ್ರಕೋಪಾತ್ |
ನ ಯುಜ್ಯತೇ ತಜ್ಜಪಮಾತ್ರಯೋಗಿ-
ಸ್ವಾಧ್ಯಾಯವಿಧ್ಯಾಶ್ರಿತಮಭ್ಯುಪೇಯಮ್ || ೯೨

ಮಂಡನ–ಆದರೂ ಆ ವಾಕ್ಯವು ಜೀವೇಶ್ವರರಿಗೆ ಏಕತ್ವವನ್ನು ಬೋಧಿಸುತ್ತದೆ ಎನ್ನುವುದು ಯುಕ್ತವಲ್ಲ. ಏಕೆಂದರೆ, 'ನಾನು ಈಶ್ವರನಿಗಿಂತ ಭಿನ್ನನಾದವನು'ಎಂದು ಪ್ರತ್ಯಕ್ಷವಾದ ಜ್ಞಾನವು ಜೀವನಿಗಿರುತ್ತದೆ. ಈ ಜ್ಞಾನಕ್ಕೆ ಏಕತ್ವಬೋಧನೆ ವಿರುದ್ಧವಾಗಿಬಿಡುತ್ತದೆ. ಆದ್ದರಿಂದ ತತ್ತ್ವಮಸಿ ಮೊದಲಾದ ವಾಕ್ಯವೆಲ್ಲವೂ 'ಸ್ವಾಧ್ಯಾಯೋಽಧ್ಯೇತವ್ಯಃ ' ಎಂಬ ವಿಧಿಗೆ ಅಧೀನವಾಗಿ ಜಪಮಾತ್ರಕ್ಕೆ ಉಪಯುಕ್ತವೇ ಹೊರತು ಬೇರೆ ಪ್ರಯೋಜನವಿಲ್ಲವೆಂದು ಒಪ್ಪಬೇಕಾಗುತ್ತದೆ.

ಅಕ್ಷ್ಣೇಣ ಚೇದ್ಭೇದ ಮಿತಿಸ್ತದಾ ಸ್ಯಾತ್
ಅಭೇದವಾದಿ ಶ್ರುತಿವಾಕ್ಯಬಾಧಃ |
ಅಸನ್ನಿಕರ್ಷಾನ್ನ ಭವೇದ್ಧಿ ಭೇದ-
ಪ್ರಮೈವ ತೇನಾಸ್ಯ ಕುತೋ ವಿರೋಧಃ || ೯೩

ಶ್ರೀಶಂಕರ– 'ನಾನು ಈಶ್ವರನಿಗಿಂತ ಭಿನ್ನನಾದವನು'ಎಂಬಲ್ಲಿ ಭೇದವು ಮನುಷ್ಯನ ಇಂದ್ರಿಯಕ್ಕೆ ಯಥಾರ್ಥವಾಗಿ ಗೋಚರಿಸುವುದಾದರೆ ಅಭೇದಬೋಧಕ ಶ್ರುತಿಗೆ ಬಾಧೆಯುಂಟಾಗುತ್ತಿತ್ತು. ಇಂದ್ರಿಯಕ್ಕೂ ಭೇದಕ್ಕೂ ಸಂನಿಕರ್ಷವೇ (ಸಂಬಂಧವೇ) ಇಲ್ಲದಿರುವಾಗ ಭೇದದ ಪ್ರಮೆಯೇ ಉಂಟಾಗುವುದಿಲ್ಲ. ಹೀಗಿರುವಾಗ ಶ್ರುತಿವಾಕ್ಯಕ್ಕೆ ವಿರೋಧ ಹೇಗೆ?

ವಿವರಣೆ:-ಪಂಚೇಂದ್ರಿಯಗಳಲ್ಲಿ ಯಾವ ಇಂದ್ರಿಯಕ್ಕಾದರೂ ವಿಷಯದ ಸಂನಿಕರ್ಷ(ಸಂಬಂಧ)ವಾಗದೆ ವಿಷಯದ ಪ್ರತ್ಯಕ್ಷಜ್ಞಾನವಾಗುವುದಿಲ್ಲ. ಭೇದವೆಂದರೆ ಅನ್ಯೋನ್ಯಾಭಾವ. ಜೀವನಿಗೂ ಪರಮಾತ್ಮನಿಗೂ ಭೇದವಿರುವುದಾದರೆ ಅದು ಇಂದ್ರಿಯಕ್ಕೆ ಗೋಚರವಾಗಬೇಕು. ಇಂದ್ರಿಯ-ಅನ್ಯೋನ್ಯಾಭಾವಗಳಿಗೆ ಪ್ರಕೃತದಲ್ಲಿ ಸಂನಿಕರ್ಷವಿಲ್ಲ-ಎಂಬ ಅಭಿಪ್ರಾಯ.

ಭಿನ್ನೋಽಹಮೀಶಾದಿತಿ ಭಾಸತೇ ಹಿ
ಭೇದಸ್ಯ ಜೀವಾತ್ಮವಿಶೇಷಣತ್ವಮ್ |
ತತ್ಸನ್ನಿಕರ್ಷೋಽಸ್ತ್ವಥ ಸಂಪ್ರಯೋಗಾ-
ಭಾವೇ ಽಪಿ ಭೇದೇಂದ್ರಿಯಯೋರ್ಮನೀಷಿನ್ || ೯೪

ಮಂಡನ–'ನಾನು ಈಶ್ವರನಿಗಿಂತ ಭಿನ್ನನಾದವನು'ಎಂಬ ಜ್ಞಾನವಿದೆಯಷ್ಟೆ. ಇಲ್ಲಿ ಭೇದವು 'ನಾನು'ಎಂಬ ಜೀವಾತ್ಮನಿಗೆ ವಿಶೇಷಣವಾಗಿ ತೋರುತ್ತದೆಯಲ್ಲವೆ ? ಈ ವಿಶೇಷಣತೆಯೇ ಭೇದ-ಇಂದ್ರಿಯಗಳಿಗಿರುವ ಸಂನಿಕರ್ಷವಾಗಬಹುದು. ಸಂಯೋಗ, ಸಮವಾಯ-ಮೊದಲಾದ ಸಂನಿಕರ್ಷಗಳಿಲ್ಲದಿದ್ದರೆ ಬೇಡ.

ವಿವರಣೆ:-ಇಂದ್ರಿಯಗಳಿಂದ ಪದಾರ್ಥದ ಪ್ರತ್ಯಕ್ಷಜ್ಞಾನವಾಗುವುದಕ್ಕೆ ಇಂದ್ರಿಯಾರ್ಥಸಂನಿಕರ್ಷವು ಕಾರಣ. ಇದು ಸಂಯೋಗ, ಸಂಯುಕ್ತಸಮವಾಯ, ಸಂಯುಕ್ತಸಮವೇತ ಸಮವಾಯ, ಸಮವೇತಸಮವಾಯ, ವಿಶೇಷಣ ವಿಶೇಷ್ಯಭಾವ-ಎಂದು ಆರುವಿಧ. ಚಕ್ಷುರಿಂದ್ರಿಯದಿಂದ ಘಟವನ್ನು ನೋಡಿದಾಗ ಆ ಇಂದ್ರಿಯವು ತೇಜೋರೂಪದಿಂದ ಘಟದೊಡನೆ ಸಂಯೋಗವನ್ನು ಹೊಂದಿ ಘಟಪ್ರತ್ಯಕ್ಷವಾಗುತ್ತದೆ. ಘಟದಲ್ಲಿ ಘಟತ್ವವು ಸಮವಾಯಸಂಬಂಧದಿಂದ ಇದೆ. ಘಟತ್ವದ ಪ್ರತ್ಯಕ್ಷಕ್ಕೆ ಸಂಯುಕ್ತಸಮವಾಯವು ಸಂನಿಕರ್ಷ. ಘಟದರೂಪವೂ ಸಂಯುಕ್ತಸಮವಾಯ ಸಂಬಂಧವಿರುವುದರಿಂದ ತೋರುತ್ತದೆ. ಘಟರೂಪತ್ವವು ಸಂಯುಕ್ತ ಸಮವೇತ ಸಮವಾಯದಿಂದ ಗೃಹೀತವಾಗುತ್ತದೆ. ಶಬ್ದವು ಆಕಾಶದಲ್ಲಿ ಸಮವಾಯ ಸಂಬಂಧದಿಂದ ಇದೆ. ಶ್ರೋತ್ರೇಂದ್ರಿಯವೆಂದರೆ ಕಿವಿಯ ಒಳಗಿರುವ ಆಕಾಶವೇ. ಆದ್ದರಿಂದ ಶಬ್ದದ ಜ್ಞಾನಕ್ಕೆ ಸಮವಾಯವು ಸಂನಿಕರ್ಷ. ಶಬ್ದತ್ವವು ಸಮವೇತ ಸಮವಾಯದಿಂದ ತೋರುತ್ತದೆ. ಭೂತಳದಲ್ಲಿ ಘಟವಿಲ್ಲದಿದ್ದಾಗ ಘಟಾಭಾವವು ವಿಶೇಷಣವಿಶೇಷ್ಯ ಭಾವವೆಂಬ ಸಂನಿಕರ್ಷದಿಂದ ಪ್ರತ್ಯಕ್ಷವಾಗುತ್ತದೆ-ಎಂದು ತಾರ್ಕಿಕರ ಪ್ರಕ್ರಿಯೆ ಇದೆ. ಘಟಾಭಾವವಿರುವ ಭೂತಳದಲ್ಲಿ ಅಭಾವವು ವಿಶೇಷಣವಾಗಿದೆ. ಭೂತಳವು ವಿಶೇಷ್ಯವಾಗಿದೆ. ಎಲ್ಲ ಅಭಾವವೂ ವಿಶೇಷಣ ವಿಶೇಷ್ಯಭಾವವೆಂಬ ಸಂನಿಕರ್ಷದಿಂದಲೇ ತೋರಬೇಕು. ಪ್ರಕೃತದಲ್ಲಿ ಭೇದವೆಂದರೆ ಅನ್ಯೋನ್ಯಾಭಾವ. 'ಈಶ್ವರನಿಗಿಂತ ನಾನು ಭಿನ್ನ'-ಎಂದರೆ ಭೇದವುಳ್ಳವನು ಎಂದರ್ಥ.'ನಾನು'ಎಂಬ ಜೀವಾತ್ಮನಿಗೆ ಭೇದವು ವಿಶೇಷಣವಾಯಿತು. ಜೀವಾತ್ಮನು ವಿಶೇಷ್ಯನಾದನು. ಪ್ರಪಂಚ ಭೇದದಲ್ಲಿ ವಿಶೇಷಣತಾ ಸಂನಿಕರ್ಷವಿರುವ ಕಾರಣ ಭೇದವು ತೋರುತ್ತದೆ-ಎಂದು ಮಂಡನಪಂಡಿತನ ಅಭಿಪ್ರಾಯ.

ಅತಿಪ್ರಸಕ್ತೇರ್ನ ತು ಕೇವಲಸ್ಯ
ವಿಶೇಷಣತ್ವಸ್ಯ ತದಭ್ಯುಪೇಯಮ್ ।
ಭೇದಾಶ್ರಯೇ ಹೀಂದ್ರಿಯಸನ್ನಿಕೃಷ್ಟೇ
ನ ಸನ್ನಿಕೃಷ್ಟತ್ವಮಿಹಾತ್ಮನೋಽಸ್ತಿ ॥ ೮೫

ಶ್ರೀಶಂಕರ–ಬರಿಯ ವಿಶೇಷಣತೆಯು ಸಂನಿಕರ್ಷವೆಂದು ಒಪ್ಪಕೂಡದು. ಆಗ ಅತಿ ಪ್ರಸಕ್ತಿಯೆಂಬ ದೋಷವು ಬರುತ್ತದೆ.(ವಿಶೇಷ್ಯದೊಡನೆಯೂ ಸಂನಿಕರ್ಷವಿರಬೇಕು). ಭೇದಾಶ್ರಯವಾದ ವಿಶೇಷ್ಯದಲ್ಲಿಯೂ ಇಂದ್ರಿಯಸಂನಿಕರ್ಷವಿದ್ದಲ್ಲಿ ಮಾತ್ರ ವಿಶೇಷಣವಿಶೇಷ್ಯಭಾವವು (ಪ್ರತ್ಯಕ್ಷಜ್ಞಾನಕ್ಕೆ ಕಾರಣವಾಗಿ)ಸಂನಿಕರ್ಷವೆನಿಸುತ್ತದೆ. ಪ್ರಕೃತದಲ್ಲಿ ಭೇದಾಶ್ರಯನಾದ ಆತ್ಮನಲ್ಲಿ ಇಂದ್ರಿಯಸಂನಿಕರ್ಷವಿಲ್ಲವಷ್ಟೆ?

ವಿವರಣೆ:-ಇಂದ್ರಿಯಕ್ಕೆ ಆತ್ಮನೊಡನೆ ಯಾವ ಸಂನಿಕರ್ಷವೂ ಇಲ್ಲವಾದ್ದರಿಂದ ಆತ್ಮನು ಇಂದ್ರಿಯ ಗೋಚರನಾಗುವುದಿಲ್ಲ. ಅತಿಪ್ರಸಕ್ತಿ = ಕಾರಣವಿದ್ದರೂ ಕಾರ್ಯವು ಹುಟ್ಟದೆ ಇರುವುದು.

ನಮ್ಮೆದುರಿಗಿರುವ ಗೋಡೆಯ ಆಚೆಗೆ ಘಟವಿಲ್ಲವೆನ್ನೋಣ. ಅಲ್ಲಿ ಘಟಾಭಾವವಿದೆ. ವಿಶೇಷ್ಯವಾದ ಭೂತಳಕ್ಕೆ ಇಂದ್ರಿಯ ಸಂನಿಕರ್ಷವಿಲ್ಲವಾದ್ದರಿಂದ ಕಾಣಿಸುವುದಿಲ್ಲ. ವಿಶೇಷಣತೆ ಮಾತ್ರ ಸಂನಿಕರ್ಷವಾದರೆ, ಗೋಡೆಯ ಆಚೆಗಿರುವ ಘಟಾಭಾವವು ಪ್ರತ್ಯಕ್ಷವಾಗಬೇಕಾದೀತು. ಭೂತಳವು ಕಾಣದಿದ್ದರೂ ಘಟಾಭಾವವು ಕಾಣುತ್ತದೆ-ಎಂದು ಯಾರೂ ಹೇಳುವುದಿಲ್ಲ!

ಭೇದಾಶ್ರಯಾತ್ಮೇಂದ್ರಿಯ ಸನ್ನಿಕರ್ಷೋ
ನೇತ್ಯುಕ್ತಮೇತಚ್ಚತುರಂ ನ ಯಸ್ಮಾತ್ |
ಚಿತ್ತಾತ್ಮನೋರ್ದ್ರವ್ಯತಯಾ ದ್ವಯೋರ-
ಪ್ಯಸ್ತ್ಯೇವ ಸಂಯೋಗ ಸಮಾಶ್ರಯತ್ವಮ್ || ೯೬

ಮಂಡನ-ಭೇದಾಶ್ರಯನಾದ ಆತ್ಮನಿಗೂ ಇಂದ್ರಿಯಕ್ಕೂ ಸಂನಿಕರ್ಷವಿಲ್ಲವೆಂದು ನೀವು ಹೇಳಿದ್ದು ಸರಿಯಾದ ನುಡಿಯಾಗಲಿಲ್ಲ. ಏಕೆಂದರೆ, ಮನಸ್ಸೆಂಬ ಇಂದ್ರಿಯವೂ ಆತ್ಮನೂ ದ್ರವ್ಯಗಳಾದ್ದರಿಂದ ಅವುಗಳಿಗೆ ಸಂಯೋಗವೆಂಬ ಸಂನಿಕರ್ಷವು ಆಗಿಯೇ ಆಗುತ್ತದೆ.

ಟಿಪ್ಪಣಿ:ಮನಸ್ಸು ಇಂದ್ರಿಯವೆಂದೂ ಮನಸ್ಸಿಗೆ ಜೀವಾತ್ಮನು ಗೋಚರನೆಂದೂ ಅಭಿಪ್ರಾಯ.

ಆತ್ಮಾ ವಿಭುಃ ಸ್ಯಾದಥವಾಽಣುಮಾತ್ರಃ
ಸಂಯೋಗಿತಾ ನೋಭಯಥಾಽಪಿ ಯುಕ್ತಾ |
ದೃಷ್ಟಾ ಹಿ ಸಾ ಸಾವಯವಸ್ಯ ಲೋಕೇ
ಸಂಯೋಗಿತಾ ಸಾವಯವೇನ ಯೋಗಿನ್ || ೯೭

ಶ್ರೀಶಂಕರ-ಅಯ್ಯಾ ಕರ್ಮಯೋಗಿಯೆ, ಆತ್ಮನು (ಸರ್ವವ್ಯಾಪಿಯಾದ) ವಿಭುವಾಗಿರಲಿ ಅಥವಾ ಪರಮಾಣುಮಾತ್ರನಾಗಿರಲಿ, ಉಭಯಪಕ್ಷದಲ್ಲಿಯೂ ಅವನಲ್ಲಿ ಮನಸ್ಸಿನ ಸಂಯೋಗವಾಗುತ್ತದೆಯೆಂಬುದು ಯುಕ್ತವಲ್ಲ. ಏಕೆಂದರೆ, ಅವಯವಸಹಿತವಾದ ಪದಾರ್ಥಕ್ಕೆ ಅವಯವಸಹಿತವಾದ ಪದಾರ್ಥದೊಡನೆ ಮಾತ್ರ ಸಂಯೋಗವು ಲೋಕದಲ್ಲಿ ಕಂಡು ಬಂದಿರುತ್ತದೆ.

ವಿವರಣೆ:-ವಿಭು ಮತ್ತು ಅಣು-ಇವೆರಡೂ ಅವಯವರಹಿತವೆಂದು ಸರ್ವರೂ ಒಪ್ಪಿರುವ ಸಿದ್ಧಾಂತ. ಸಂಯೋಗವು ಒಂದು ವಸ್ತುವಿನ ಒಂದು ಪಾರ್ಶ್ವದಲ್ಲಿ ಮಾತ್ರ ಆಗುತ್ತದೆ. ಸರ್ವವ್ಯಾಪಿಯಾಗಿ ಸಂಯೋಗವಾಗುವುದೇ ಇಲ್ಲ. ಗಡಿಗೆಯು ಇನ್ನೊಂದು ಗಡಿಗೆಗೆ ತಗುಲಿದಾಗ ಒಂದು ಪಾರ್ಶ್ವಕ್ಕೆ ಮಾತ್ರ ಸಂಯೋಗವಾಗುತ್ತದೆ. ಆ ಪಾರ್ಶ್ವವೇ ಅವಯವ. ಮನಸ್ಸು ಕೂಡ ಅಣುವಾದ್ದರಿಂದ ಅವಯವರಹಿತ. ಹೀಗಿರುವಾಗ ಸಂಯೋಗವೆಂಬ ಸಂನಿಕರ್ಷವು ಆತ್ಮನಿಗಾಗಲು ಶಕ್ಯವಿಲ್ಲ. ಆದ್ದರಿಂದಲೇ ಸಂಯೋಗವನ್ನು ಅವ್ಯಾಪ್ಯವೃತ್ತಿ ಎನ್ನುತ್ತಾರೆ. ಏಕಾಂಶದಲ್ಲಿ ಮಾತ್ರ ಇರತಕ್ಕದ್ದು ಅವ್ಯಾಪ್ಯವೃತ್ತಿ.

ಮನೋಽಕ್ಷಮಿತ್ಯಭ್ಯುಪಗಮ್ಯ ಭೇದಾ-
ಸಂಗಿತ್ವಮುಕ್ತಂ ಪರಮಾರ್ಥತಸ್ತು |

ಸಾಹಾಯ್ಯಕೃಲ್ಲೋಚನ ಪೂರ್ವಕಸ್ಯ
ದೀಪಾದಿವನ್ನೇಂದ್ರಿಯಮೇವ ಚಿತ್ತಮ್ ॥ ೯೮

ಅಲ್ಲದೆ ಮನಸ್ಸು ಇಂದ್ರಿಯವೆಂಬ ಪಕ್ಷವನ್ನು ಒಪ್ಪಿಕೊಂಡು, ಅದರೊಡನೆ ಸಂನಿಕರ್ಷವಾಗದ ಕಾರಣ ಆತ್ಮನ ಭೇದಪ್ರತ್ಯಕ್ಷವಾಗುವುದಿಲ್ಲವೆಂದು ಹೇಳಿದ್ದೇನೆ. ಪರಮಾರ್ಥದಲ್ಲಾದರೋ ಮನಸ್ಸು ಇಂದ್ರಿಯವೇ ಅಲ್ಲ. ಅದು ಚಕ್ಷುರಾದಿ ಇಂದ್ರಿಯಗಳಿಗೆ ದೀಪದಂತೆ (ಜ್ಞಾನವನ್ನು ಹುಟ್ಟಿಸಲು) ಸಹಾಯಮಾಡುತ್ತದೆ;ಅಷ್ಟೆ.

ವಿವರಣೆ:-ಮನಸ್ಸು ಇಂದ್ರಿಯವಲ್ಲವೆಂದು ಸಿದ್ಧಾಂತ.'ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ'ಎಂಬ ಕಠಶ್ರುತಿಯಲ್ಲಿ ಇಂದ್ರಿಯಗಳಿಗಿಂತ ಮನಸ್ಸು ಬೇರೆ ಎಂದು ಸ್ಪಷ್ಟವಾಗಿ ಹೇಳಿದೆ. ಇಂದ್ರಿಯ ಜನ್ಯಪ್ರತ್ಯಕ್ಷಕ್ಕೆ ಮಾತ್ರ ಸಂನಿಕರ್ಷವು ಅವಶ್ಯಕ. ಆತ್ಮನು ಇಂದ್ರಿಯಗಳಿಗೆ ಪ್ರತ್ಯಕ್ಷನಲ್ಲ-ಎಂಬುದು ಮಾತ್ರ ಇಲ್ಲಿವಿವಕ್ಷಿತ.

ಭೇದಪ್ರಮಾ ನೇಂದ್ರಿಯಜಾಽಸ್ತು ತರ್ಹಿ
ಸಾಕ್ಷಿಸ್ವರೂಪೈವ ತಥಾಽಪಿ ಯೋಗಿನ್ ।
ತಯಾ ವಿರೋಧಾತ್ಪರಮಾತ್ಮಜೀವಾ-
ಭೇದಂ ಕಥಂ ಬೋಧಯಿತುಂ ಪ್ರಮಾಣಮ್ ॥ ೯೯

ಮಂಡನ–ಹಾಗಾದರೆ (ಜೀವನು ಪರಮಾತ್ಮನಿಗಿಂತ)ಭಿನ್ನನೆಂಬ ಪ್ರಮೆಯು ಇಂದ್ರಿಯ ಜನ್ಯವಾಗದಿದ್ದರೆ ಬೇಡ. ಅದು ಸಾಕ್ಷಿಸ್ವರೂಪವಾಗಿಯೇ ತೋರುತ್ತದೆಯೆನ್ನೋಣ. ಯೋಗೀಶ್ವರರೆ, ಆಗಲೂ ಸಹ ಈ ಪ್ರಮೆಗೆ ವಿರುದ್ಧವಾಗುವುದರಿಂದ'ತತ್ತ್ವಮಸಿ' ಎಂಬ ವಾಕ್ಯವು ಜೀವಾತ್ಮನಿಗೂ ಪರಮಾತ್ಮನಿಗೂ ಅಭೇದವನ್ನು ಬೋಧಿಸಲು ಹೇಗೆ ಪ್ರಮಾಣವಾಗುತ್ತದೆ?

ವಿವರಣೆ:-ಸಾಕ್ಷಿಸ್ವರೂಪವೆಂದರೆ ಸಾಕ್ಷಿಭಾಸ್ಯವೆಂದರ್ಥ. ನಾನು ಈಶ್ವರನಿಗಿಂತ ಭಿನ್ನನೆಂಬುವುದು ಸ್ವತಃ ತನಗೆ ತೋರುತ್ತದೆ ಎಂದು ತಾತ್ಪರ್ಯ.

ಪ್ರತ್ಯಕ್ಷಮಾತ್ಮೇಶ್ವರಯೋರವಿದ್ಯಾ-
ಮಾಯಾಯುಜೋರ್ದ್ಯೋತಯತಿ ಪ್ರಭೇದಮ್ ।
ಶ್ರುತಿಸ್ತಯೋಃ ಕೇವಲಯೋರಭೇದಂ
ಭಿನ್ನಾಶ್ರಯತ್ವಾನ್ನ ತಯೋರ್ವಿರೋಧಃ ॥ ೧೦೦

ಶ್ರೀಶಂಕರ–ನಿಜ; (ಸಾಕ್ಷಿಸ್ವರೂಪವಾದ) ಪ್ರತ್ಯಕ್ಷವು ಅವಿದ್ಯಾಸಹಿತನಾದ ಜೀವನಿಗೂ ಮಾಯಾಯುಕ್ತನಾದ ಈಶ್ವರನಿಗೂ ಭೇದವಿದೆಯೆಂದು ತಿಳಿಸುತ್ತದೆ. ತತ್ತ್ವಮಸಿ - ಎಂಬ

ಶ್ರುತಿಯಾದರೋ ಅವಿದ್ಯಾಮಾಯಾಶಕ್ತಿಗಳೆರಡರಿಂದಲೂ ರಹಿತವಾದ ಈ ಎರಡರ ಚೈತನ್ಯಗಳಿಗೆ ಅಭೇದವನ್ನು ಬೋಧಿಸುತ್ತದೆ. ಆದ್ದರಿಂದ ಇವುಗಳಿಗೆ ವಿರೋಧವೇನೂ ಇಲ್ಲ.

ವಿವರಣೆ :- ಜೀವನು ಅವಿದ್ಯೆಯಿಂದ ಕೂಡಿ ನಾನು ಅಲ್ಪಜ್ಞ, "ಅಲ್ಪಶಕ್ತಿಯುಳ್ಳವನು". "ಸರ್ವಜ್ಞನೂ ಸರ್ವಶಕ್ತನೂ ಆದ ಈಶ್ವರನಲ್ಲ -ಎಂದು ಕೊಳ್ಳುತ್ತಾನೆ. ಈಶ್ವರನಲ್ಲಿ ಮಾಯಾಶಕ್ತಿ ದೆ. ಅದನ್ನು ಕಳೆದಾಗ ಚಿನ್ಮಾತ್ರವಾದ ಪರಬ್ರಹ್ಮವು ಒಂದೇ ಆಗಿಬಿಡುತ್ತದೆ. ಸಾಕ್ಷಿಭಾಸ್ಯವಾದ ಭೇದಕ್ಕೆ ವಿಷಯ ಬೇರೆ ಪರಮಾರ್ಥವಾದ ಅಭೇದಕ್ಕೆ ವಿಷಯ ಬೇರೆ. ಆದ್ದರಿಂದ ವಿರೋಧವಿಲ್ಲ.

ಸ್ಯಾದ್ವವಿರೋಧಸ್ತದಪಿ ಪ್ರವೃತ್ತಂ
ಪ್ರತಕ್ಷಮಗ್ರೇಽಬಲಮೇವ ಬಾಧ್ಯಮ್ ।
ಪ್ರಾಬಲ್ಯವತ್ಯಾ ಚರಮಪ್ರವೃತ್ತ್ಯಾ
ಶ್ರುತ್ಯಾ ಹ್ಯಪಚ್ಛೇದನಯೋಕ್ತರೀತ್ಯಾ॥ ೧೦೧

ಅಥವಾ ವಿರೋಧವಿದ್ದರೂ ಇರಲಿ. ಮೊದಲು ಪ್ರವೃತ್ತವಾದ ಈ ಭೇದಪ್ರತ್ಯಕ್ಷವು ದುರ್ಬಲವಾದ್ದರಿಂದ, ಅನಂತರ ಪ್ರವೃತ್ತವಾದ ಪ್ರಬಲಶ್ರುತಿಯಿಂದ ಬಾಧಿತವಾಗಲೇ ಬೇಕು. ಅಪಚ್ಛೇದನ್ಯಾಯದಲ್ಲಿ ಉಕ್ತವಾಗಿರುವಂತೆ ಆಮೇಲೆ ಪ್ರವೃತ್ತವಾದ ಶ್ರುತಿಯೇ ಪ್ರಬಲವಾಗುತ್ತದೆ.

ವಿವರಣೆ :- "ಪೌರ್ವಾಪರ್ಯೇ ಪೌರ್ವದೌರ್ಬಲ್ಯಂ ಪ್ರಕೃತಿವತ್" ಎಂದು ಪೂರ್ವ ಮೀಮಾಂಸಾಸೂತ್ರವಿದೆ. ಅದರ ಪ್ರಕಾರ ಪೂರ್ವಪ್ರವೃತ್ತವಾದದ್ದು ಆಮೇಲೆ ಪ್ರವನತ್ತವಾದುದಕ್ಕಿಂತ ದುರ್ಬಲವೆಂದು ವ್ಯವಸ್ಥಿತವಾಗಿದೆ. ಜ್ಯೋತಿಷ್ಟೋಮಯಾಗದಲ್ಲಿ ಋತ್ವಿಜರೂ ಯಜಮಾನನೂ ಹವಿಃಸ್ಥಾನದಿಂದ ಹೊರಗೆ ಹೋಗುವಾಗ ಒಂದು ಕ್ರಮವನ್ನು ಅನುಸರಿಸಿ ಹೋಗಬೇಕು. ಆ ಕ್ರಮವು ತಪ್ಪಿಹೋಗುವುದಕ್ಕೆ ಅಪಚ್ಛೇದ (ವಿಚ್ಛೇದ) ವೆಂದು ಹೆಸರು. ಅದರ ವಿವರಣೆ ವಿಸ್ತೃತವಾಗುವುದರಿಂದ ಇಲ್ಲಿ ಬರೆದಿಲ್ಲ. ಪೂರ್ವಪ್ರವೃತ್ತವಾದದ್ದು ದುರ್ಬಲವೆಂದು ಅಪಚ್ಛೇದನ್ಯಾಯವು ತಿಳಿಸುತ್ತದೆ. ಚಂದ್ರನು ಅಲ್ಪಪ್ರಮಾಣನೆಂದು ಬಾಲಕರು ಬಾಲ್ಯದಲ್ಲಿ ತಿಳಿದಿದ್ದರೂ ಖಗೋಳಶಾಸ್ತ್ರವನ್ನು ಓದಿದಮೇಲೆ ಚಂದ್ರನು ದೊಡ್ಡಪ್ರಮಾಣದವನೆಂದು ಗೊತ್ತಾಗಿ ಹಿಂದೆ ಇದ್ದ ತಿಳಿವಳಿಕೆ ಬಾಧಿತವಾಗುತ್ತದೆ. ಹಾಗೆಯೇ ಇಲ್ಲಿಯೂ ತಿಳಿಯಬೇಕು.

ನನ್ವೇವಮಪ್ಯಸ್ತ್ಯನುಮಾನಬಾಧೋಽ-
ಬೇದಶ್ರುತೇಃ ಸಂಯಮಿಚಕ್ರವರ್ತಿನ್।
ಘಟಾದಿವದ್ ಬ್ರಹ್ಮನಿರೂಪಿತೇನ
ಭೇದೇನ ಯುಕ್ತೋಽಯಮಸರ್ವವಿತ್ತ್ವಾತ್ ॥ ೧೦೨

ಮಂಡನ- ಯತೀಶ್ವರರೆ, ಅಭೇದಶ್ರುತಿಯು ಅನುಮಾನಪ್ರಮಾಣದಿಂದ ಬಾಧಿತವಾಗಿಬಿಡುತ್ತದೆ ! ಜೀವನು ಸರ್ವಜ್ಞನಲ್ಲವಾದ್ದರಿಂದ, ಘಟಪಟಾದಿಗಳಂತೆ

ಬ್ರಹ್ಮನಿರೂಪಿತ ಭೇದಾಶ್ರಯನೆಂದು (ಬ್ರಹ್ಮಭಿನ್ನನೆಂದು) ಅನುಮಾನದಿಂದ ನಿಶ್ಚಯಿಸಬಹುದು.

ಅನುಮಾನ ಪ್ರಕಾರ—
೧. ಜೀವನು ಬ್ರಹ್ಮಕ್ಕಿಂತ ಭಿನ್ನನಾದವನು. ೨. ಸರ್ವಜ್ಞತೆ ಇಲ್ಲದಿರುವುದರಿಂದ. ೩. ಎಲ್ಲೆಲ್ಲಿ ಸರ್ವಜ್ಞತೆಯಿಲ್ಲವೋ ಅದೆಲ್ಲವೂ ಬ್ರಹ್ಮಭಿನ್ನವಾದದ್ದು, ಘಟಪಟಾದಿಗಳ ಹಾಗೆ. ೪. ಹಾಗೆಯೇ ಜೀವನೂ ಸರ್ವಜ್ಞತೆ ಇಲ್ಲದವನು. ೫. ಆದ್ದರಿಂದ ಘಟಪಟಾದಿಗಳಂತೆ ಬ್ರಹ್ಮಭಿನ್ನನೇ ಸರಿ.

ಕಿಮೇಷ ಭೇದಃ ಪರಮಾರ್ಥಭೂತಃ
ಪ್ರಸಾಧ್ಯತೇ ಕಾಲ್ಪನಿಕೋಽಥವಾಽದ್ಯೇ |
ದೃಷ್ಟಾಂತಹಾನಿಶ್ಚರಮೇ ತು ವಿದ್ವನ್-
ದೂರೀಕೃತೋಽಸ್ಮಾಭಿರಸಾಧನೀಯಃ || ೧೦೩

ಶ್ರೀಶಂಕರ—ಹೀಗೆ ನೀನು ಸಾಧಿಸುತ್ತಿರುವುದು ಪರಮಾರ್ಥವಾದ ಭೇದವೋ?ಅಥವಾ (ವ್ಯವಹಾರದಲ್ಲಿ ಕಾಣುವ) ಕಲ್ಪಿತಭೇದವೋ? ಒಂದನೆಯ ಪರಮಾರ್ಥಭೇದವೆಂದಾದರೆ ಈ ಅನುಮಾನಕ್ಕೆ ದೃಷ್ಟಾಂತವೇ ಇರುವುದಿಲ್ಲ. ಎರಡನೆಯ ಕಲ್ಪಿತಭೇದವಾದರೆ ಅದನ್ನು ನಾವು ಒಪ್ಪಿಕೊಂಡೇ ಇದ್ದೇವೆ. ಅದನ್ನು ಸಾಧಿಸಬೇಕಾದ್ದಿಲ್ಲ.

ವಿವರಣೆ:-ಅದ್ವೈತಸಿದ್ಧಾಂತದ ಪ್ರಕಾರ ಘಟಪಟಾದಿಗಳೂ ಪರಮಾರ್ಥದಲ್ಲಿ ಬ್ರಹ್ಮವೇ ಆಗಿರುವುದರಿಂದ ಬ್ರಹ್ಮಭಿನ್ನವಾದ ದೃಷ್ಟಾಂತವೇ ಇಲ್ಲ. ದೃಷ್ಟಾಂತವಿಲ್ಲದ ಅನುಮಾನವು ಪ್ರಮಾಣವಾಗುವುದಿಲ್ಲ. ವ್ಯವಹಾರದಲ್ಲಿ ಕಲ್ಪಿತಘಟಪಟಾದಿಗಳಿವೆ. ಅವುಗಳಲ್ಲಿ ಬ್ರಹ್ಮಭೇದವೂ ಇದೆ. ಅಂಗೀಕೃತಭೇದವನ್ನು ಸಾಧಿಸುವುದು ಸಿದ್ಧಸಾಧನವೆಂಬ ದೋಷವಾಗುತ್ತದೆ. ಜೀವೇಶ್ವರರಿಗೆ ವ್ಯಾವಹಾರಿಕ ಭೇದ ಉಂಟು.

ಸ್ವಪ್ರತ್ಯಯಾಬಾಧ್ಯಭಿದಾಶ್ರಯತ್ವಂ
ಸಾಧ್ಯಂ ಘಟಾದೌ ಚ ತದಸ್ತಿ ಯೋಗಿನ್ |
ತ್ವಯಾಽತ್ಮಬೋಧೇನ ಭಿದಾ ನ ಬಾಧ್ಯೇ-
ತ್ಯನಭ್ಯುಪೇತೇತಿ ನ ಕೋಽಪಿ ದೋಷಃ || ೧೦೪

ಮಂಡನ—ಆತ್ಮಜ್ಞಾನದಿಂದ ಭೇದವು ಬಾಧಿತವಾಗುವುದಿಲ್ಲವೆಂದೂ ಅಂತಹ ಭೇದಕ್ಕೆ ಘಟಪಟಾದಿಗಳು ಆಶ್ರಯವಾಗಿವೆಯೆಂದೂ ಅನುಮಾನದಿಂದ ಸಾಧಿಸಬೇಕಾದದ್ದು. ಯೋಗಿಗಳೆ, ಅಂತಹ ಭೇದವು ಘಟಪಟಾದಿಗಳಲ್ಲಿ ಇದ್ದೇ ಇದೆ. ನೀವಾದರೋ ಆತ್ಮಜ್ಞಾನದಿಂದ ಭೇದವು ಬಾಧಿತವಾಗುವುದಿಲ್ಲ-ಎಂಬುದನ್ನು ಅಂಗೀಕರಿಸಿಲ್ಲ. (ಆದ್ದರಿಂದ ದೋಷವನ್ನು ಹೇಳುತ್ತಿದ್ದೀರಿ). (ಭೇದವು ನನ್ನ ಮತದಲ್ಲಿ ಬಾಧಿತವಾಗುವುದಿಲ್ಲವಾದ ಕಾರಣ) ನಾನು ಹೇಳಿದ ಅನುಮಾನ ಪ್ರಕಾರದಲ್ಲಿ ಯಾವ ದೋಷವೂ ಇಲ್ಲ (ಸಿದ್ಧಸಾಧನವಲ್ಲ).

ವಿವರಣೆ:-ಮಂಡನನು ಮೀಮಾಂಸಕನಾದ್ದರಿಂದ ದ್ವೈತಿ. ಮೀಮಾಂಸಕರ ಮತದಲ್ಲಿ ಆತ್ಮಜ್ಞಾನವಾದರೂ ಘಟಪಟಾದಿಗಳಲ್ಲಿ ಆತ್ಮಭೇದವು ಪಾರಮಾರ್ಥಿಕವಾಗಿ ಇದ್ದೇ ಇರುತ್ತದೆ. ಅದ್ವೈತದಲ್ಲಾದರೋ ಸರ್ವವೂ ಆತ್ಮನೇ ಆದ್ದರಿಂದ ಪಾರಮಾರ್ಥಿಕವಾಗಿ ಘಟಪಟಗಳೂ ಇಲ್ಲ, ಆತ್ಮಭೇದವೂ ಇಲ್ಲ.

ನನು ಸ್ವಶಬ್ದೇನ ಸುಖಾದಿಮಾನ್ವಾ
ವಿವಕ್ಷಿತಸ್ತದ್ವಿಧುರೋಽಥವಾಽಽತ್ಮಾ |
ಆದ್ಯೇಽಸ್ಮದಿಷ್ಟಂ ನ ತು ಸಾಧ್ಯಮಂತ್ಯೇ
ದೃಷ್ಟಾಂತಹಾನಿಃ ಪುನರೇವ ತೇ ಸ್ಯಾತ್ || ೧೦೫

ಶ್ರೀಶಂಕರ– (ನೀನು ಹೇಳಿದ'ಸ್ವಪ್ರತ್ಯಯ...........'ಇತ್ಯಾದಿ ವಾಕ್ಯದಲ್ಲಿ)ಸ್ವ ಎಂಬ ಪದದಿಂದ ಯಾವ ಆತ್ಮನು ವಿವಕ್ಷಿತ?ಸುಖದುಃಖ ಕರ್ತೃತ್ವಾದ್ಯುಪಾಧಿಗಳಿಂದ ಕೂಡಿದ ಆತ್ಮನೊ?ಅಥವಾ ಉಪಾಧಿರಹಿತನಾದ ಕೇವಲಾತ್ಮನೊ ?ಮೊದಲನೆಯ ಪಕ್ಷವಾದರೆ ಘಟಪಟಾದಿಗಳಲ್ಲಿರುವ ಭೇದವು ನಮಗೆ ಸಂಮತವೇ ಸರಿ. ಅದನ್ನು ಸಾಧಿಸಬೇಕಾಗಿಲ್ಲ. (ಸಿದ್ಧಸಾಧನ ದೋಷವಿದ್ದೇ ಇದೆ). ಎರಡನೆಯ ಪಕ್ಷವಾದರೆ, ನೀನು ಹೇಳಿದ ಅನುಮಾನಪ್ರಕಾರದಲ್ಲಿ ಮತ್ತೆ ದೃಷ್ಟಾಂತಹಾನಿಯೇ ಆಗುತ್ತದೆ.

ವಿವರಣೆ:-ಸುಖದುಃಖಕರ್ತೃತ್ವಾದಿಧರ್ಮಗಳು ಅವಿದ್ಯೆಯೆಂಬ ಉಪಾಧಿಯಿಂದ ಆತ್ಮನಲ್ಲಿರುವಂತೆ ತೋರುತ್ತವೆ. ಇದು ವ್ಯಾವಹಾರಿಕ ಸತ್ಯ. ಈ ಪಕ್ಷದಲ್ಲಿ ಘಟಪಟಾದಿಗಳೂ ಅವುಗಳಲ್ಲಿ ಆತ್ಮಭೇದವೂ ತೋರುವುದು ಸತ್ಯವೇ. ಉಪಾಧಿರಹಿತನಾದ ಕೇವಲಾತ್ಮನ ಜ್ಞಾನವಾದಾಗ ಯಾವ ಭೇದವೂ ಇರುವುದಿಲ್ಲ.

ಯೋಗಿನ್ನನೌಪಾಧಿಕಭೇದವತ್ತ್ವಂ
ವಿವಕ್ಷಿತಂ ಸಾಧ್ಯಮಿಹ ತ್ವದಿಷ್ಟಃ |
ಔಪಾಧಿಕಸ್ತ್ವೀಶ್ವರಜೀವಭೇದೋ
ಘಟೇಶಭೇದೋ ನಿರುಪಾಧಿಕಶ್ಚ || ೧೦೬

ಮಂಡನ– ಉಪಾಧಿರಹಿತವಾದ ಪಾರಮಾರ್ಥಿಕಭೇದವೇ ಘಟಪಟಾದಿಗಳಲ್ಲಿದೆ ಯೆಂಬುದನ್ನು ಸಾಧಿಸುವುದೇ ನನ್ನ ಉದ್ದೇಶವಾಗಿದೆ. ಜೀವೇಶ್ವರಭೇದವು ಔಪಾಧಿಕವೆಂಬುದು ನಿಮಗೆ ಸಂಮತ. ಈಶ್ವರ-ಘಟಗಳಿಗೆ ನಿರುಪಾಧಿಕವಾದ ವಾಸ್ತವ ಭೇದವೇ ಇದೆ.

ಟಿಪ್ಪಣಿ:ಜಗತ್ತುಸತ್ಯವೆಂಬ ದ್ವೈತಪಕ್ಷದಲ್ಲಿ ಮಂಡನನು ಹೇಳಿದ್ದು ಯುಕ್ತವೇ ಆಗಿದೆ.

ಘಟೇಶ ಭೇದೇಽಪ್ಯುಪಧಿರ್ಹ್ಯವಿದ್ಯಾ
ತವಾನುಮಾನೇಷು ಜಡತ್ವಮೇವ |

ಚಿತ್ತ್ವಾದಭಿನ್ನಃ ಪರವತ್ಪರಸ್ಮಾತ್
ಆತ್ಮೇತಿ ವಾಽತ್ರ ಪ್ರತಿಪಕ್ಷಹೇತುಃ || ೧೦೭

ಶ್ರೀಶಂಕರ– ಈಶ್ವರನಿಗಿಂತ ಘಟವು ಭಿನ್ನವೆಂದಾಗಲೂ ಅವಿದ್ಯೆಯೇ ಉಪಾಧಿಯಾಗಿರುತ್ತದೆ. (ಅವಿದ್ಯೆಯಿಂದ ಘಟವಾಗಿ ತೋರುತ್ತದೆ. ಪರಮಾರ್ಥದಲ್ಲಿ ಎಲ್ಲವೂ ಬ್ರಹ್ಮವೇ ಆದ್ದರಿಂದ ಭೇದವಿಲ್ಲ). ನೀನು ಹೇಳಿದ ಅನುಮಾನ ಪ್ರಕಾರದಲ್ಲಿ ಜಡತ್ವವು ಉಪಾಧಿಯೇ ಆಗುತ್ತದೆ. ಮತ್ತು 'ಜೀವಾತ್ಮನು ಪರಮಾತ್ಮನಿಗಿಂತ ಭಿನ್ನನಲ್ಲ. ಚಿತ್‌ಸ್ವರೂಪನೇ ಆದ್ದರಿಂದ' ಎಂದು ಪ್ರತಿಬಂದಿಯಾಗಿ ಹೇಳಬಹುದಾದ ಕಾರಣ ಸತ್‌ಪ್ರತಿಪಕ್ಷವೆಂಬ ಹೇತ್ವಾಭಾಸವೂ ನಿನ್ನ ಅನುಮಾನಪ್ರಕಾರದಲ್ಲಿದೆ.

ವಿವರಣೆ:-ಉಪಧಿ, ಉಪಾಧಿ-ಎಂದು ಎರಡು ರೂಪಗಳೂ ಉಂಟು. ಶುದ್ಧವಾದ ಸ್ಫಟಿಕವನ್ನು ಕೆಂಪಾಗಿ ತೋರಿಸತಕ್ಕ ದಾಸವಾಳದ ಹೂ ಸ್ಫಟಿಕಕ್ಕೆ ಉಪಾಧಿ. ಒಂದು ಪದಾರ್ಥದಲ್ಲಿ ಅನ್ಯಥಾ ಪ್ರತೀತಿಯನ್ನುಂಟುಮಾಡತಕ್ಕ ವ್ಯಾವರ್ತಕವಸ್ತು ಉಪಾಧಿ ಎನಿಸುತ್ತದೆ. ಶ್ಲೋಕದ ಮೊದಲನೆಯ ಸಾಲಿನಲ್ಲಿ ಅವಿದ್ಯೆ ಉಪಾಧಿ ಎಂದಾಗ ಇದು ವಿವಕ್ಷಿತ. ಜಡತ್ವವು ಉಪಾಧಿಯೆಂದಾಗ ಅನುಮಾನದಲ್ಲಿ ಹೇತುವಿನ ಜೊತೆಗಿರಬಹುದಾದ ಒಂದು ದೋಷವೆಂದರ್ಥ. 'ಸಾಧ್ಯವ್ಯಾಪಕತ್ವೇಸತಿ ಸಾಧನಾವ್ಯಾಪಕತ್ವಮುಪಾಧಿಃ' ಸಾಧ್ಯದ ಜೊತೆಗೆ ಸರ್ವತ್ರ ಇದ್ದು ಸಾಧನವಾದ ಹೇತುವಿನ ಜೊತೆಗೆ ಸರ್ವತ್ರ ಇಲ್ಲದಿರುವುದು ಉಪಾಧಿಯ ಲಕ್ಷಣ. "ಜೀವಾತ್ಮನು ಪರಮಾತ್ಮನಿಗಿಂತ ಭಿನ್ನನಾದವನು, ಅಸರ್ವಜ್ಞನಾದ್ದರಿಂದ" ಎಂದು ಮಂಡನನು ಹೇಳಿದ್ದಾನಷ್ಟೆ. ಇಲ್ಲಿ ಜಡತ್ವವು ಉಪಾಧಿ. ಹೇಗೆಂದರೆ, ಇಲ್ಲಿ ಭೇದವು ಸಾಧ್ಯವಾದದ್ದು. ಎಲ್ಲೆಲ್ಲಿ ಈಶ್ವರ ಭೇದವಿದೆಯೋ ಅಲ್ಲಲ್ಲಿ ಜಡತ್ವವಿದ್ದೇ ಇದೆ, ಘಟಾದಿಗಳಲ್ಲಿ ಇರುವಂತೆ. ಆದರೆ ಅಸರ್ವಜ್ಞತ್ವವೆಂಬ ಹೇತುವಿರುವ ಜೀವಾತ್ಮನಲ್ಲಿ ಜಡತ್ವವಿಲ್ಲ. ಆದಕಾರಣ ಸೋಪಾಧಿಕವಾದ ಈ ಹೇತು ದುಷ್ಟವಾದದ್ದು. ವ್ಯಾಪ್ಯತ್ವಾಸಿದ್ಧವೆಂಬ ಹೇತ್ವಾಭಾಸವಿದು. ಇದರಿಂದ ಇಷ್ಟವನ್ನು ಸಾಧಿಸಲಾಗುವುದಿಲ್ಲ. ಅಲ್ಲದೆ ಸತ್‌ಪ್ರತಿಪಕ್ಷವೆಂಬ ಹೇತ್ವಾಭಾಸವೂ ಇದೆ.

ಧರ್ಮಿಪ್ರಮಾಽಬಾಧ್ಯ ಶರೀರಿಭೇದೋ
ಹ್ಯಸಂಸೃತೌ ಬ್ರಹ್ಮಣಿ ಸಾಧ್ಯಮಿಷ್ಟಮ್ |
ತ್ವಯೇಷ್ಯತೇ ಬ್ರಹ್ಮಧಿಯಾಽಽತ್ಮಭೇದೋ
ಬಾಧ್ಯೋ ಘಟಾದಿಪ್ರಮಯಾ ತ್ವಬಾಧ್ಯಃ || ೧೦೮

ಮಂಡನ–ಬ್ರಹ್ಮವು ಸಂಸಾರಧರ್ಮವಿಲ್ಲದ್ದು. ಜೀವಾತ್ಮನು ಸುಖದುಃಖಾದಿ ಸಂಸಾರ ಧರ್ಮವುಳ್ಳವನು. ಇಂತಹ ಆತ್ಮನನ್ನು ಅರಿಯುವುದರಿಂದ ಜೀವಾತ್ಮ-ಪರಮಾತ್ಮರ ಭೇದವು ಬಾಧಿತವಾಗುವುದಿಲ್ಲ. ಬ್ರಹ್ಮದಲ್ಲಿ ಈ ಭೇದವು ಅನುಮಾನ ಸಾಧ್ಯವೆಂದು ನಮ್ಮ ಮತ (ಆದ್ದರಿಂದ ಸಿದ್ಧಸಾಧನದೋಷವಿಲ್ಲ). ನೀವಾದರೋ ಬ್ರಹ್ಮಜ್ಞಾನದಿಂದ ಆತ್ಮಭೇದವೇ ಬಾಧಿತವಾಗುತ್ತದೆಯೆಂದು ಅಭಿಪ್ರಾಯಪಡುತ್ತೀರಿ. ಘಟಾದಿಜ್ಞಾನದಿಂದ ಈ ಭೇದವು ಬಾಧಿತವಾಗುವುದಿಲ್ಲವೆಂಬುದು ನಿಮಗೂ ಸಂಮತ(ಆದ್ದರಿಂದ ದೃಷ್ಟಾಂತ ಹಾನಿಯೂ ಇಲ್ಲ).

ಟಿಪ್ಪಣಿ:ಎಲ್ಲ ಭೇದವೂ ಅವಿದ್ಯೆಯಿಂದ ತೋರುತ್ತದೆಯೆಂಬುದು ಆಚಾರ್ಯರ ಮತ. ಮಂಡನನು ಇದನ್ನೊಪ್ಪದೆ ದ್ವೈತಪಕ್ಷದಲ್ಲಿಯೇ ನಿಂತು ವಾದಿಸುತ್ತಿದ್ದಾನೆ. ಆದ್ದರಿಂದ ಈ ವಿವಾದವು ಬೆಳೆಯುತ್ತ ಬಂದಿದೆ. ಶ್ಲೋಕದಲ್ಲಿ 'ಧರ್ಮಿಪ್ರಮಾ+ಅಬಾಧ್ಯ ' ಎಂದು ಪದಚ್ಛೇದ. ಪ್ರಮಾ = ಯಥಾರ್ಥಜ್ಞಾನ.

ಕಿಂ ಕೃತ್ಸ್ನಧರ್ಮಿಪ್ರಮಯಾ ನ ಬಾಧ್ಯಃ
ಕಿಂ ವಾ ಸ ಯತ್ಕಿಂಚನಧರ್ಮಿಬೋಧಾತ್ |
ಘಟಾದಿಕೇ ಬ್ರಹ್ಮಣಿ ಚಾತ್ಮಭೇದ-
ಸ್ಯೈಕ್ಯಾತ್ ಪುನಃ ಸ್ಯಾನ್ನನು ಪೂರ್ವದೋಷಃ || ೧೧೯

ಶ್ರೀಶಂಕರ– (ಸಂಸಾರಗುಣಯುಕ್ತರಾದ) ಎಲ್ಲ ಜೀವಾತ್ಮರ ಪ್ರಮೆಯಿಂದ ಬ್ರಹ್ಮವು ಜೀವಭಿನ್ನವೆಂಬ ಜ್ಞಾನವು ಬಾಧಿತವಾಗುವುದಿಲ್ಲವೊ? ಅಥವಾ ಯಾವನೋ ಒಬ್ಬ ಜೀವನನ್ನು ತಿಳಿಯುವುದರಿಂದ ಬಾಧಿತವಾಗುವುದಿಲ್ಲವೊ? (ನಮಗೆ ಇದು ವ್ಯಾವಹಾರಿಕ ಪಕ್ಷವಾದ್ದರಿಂದ)ಯಾವರೀತಿಯಲ್ಲಿಯೂ ಜೀವಭೇದವು ಘಟಾದಿಗಳಲ್ಲಿಯೂ ಇರುತ್ತದೆ, ಬ್ರಹ್ಮದಲ್ಲಿಯೂ ಇರುತ್ತದೆ. ಅದು ಒಂದೇ ಆದ್ದರಿಂದ ಸಿದ್ಧಸಾಧನದೋಷವು ಮತ್ತೆ ಗಂಟು ಬೀಳುತ್ತದೆ!

ಕಿಂ ಚಾಗುಣೋ ವಾ ಸಗುಣೋ ಮನೀಷಿನ್
ವಿವಕ್ಷ್ಯತೇ ಧರ್ಮಿಪದೇನ ನಾಂತ್ಯಃ |
ಭೇದಸ್ಯ ತದ್‌ಬುದ್ಧ್ಯವಿಬಾಧ್ಯತೇಷ್ಟೇ-
ರ್ನಾದ್ಯಶ್ಚ ತತ್ರೋಭಯಥಾಽಪಿ ದೋಷಾತ್ || ೧೨೦

ಮತ್ತು, ಹೇ ಪಂಡಿತೋತ್ತಮ, 'ಧರ್ಮಿಪ್ರಮಾಽಬಾಧ್ಯ' ನೆಂದು (ಶ್ಲೋಕ. ೧೧೮) ಹೇಳಿದೆಯಲ್ಲ. ಅಲ್ಲಿ ಧರ್ಮಿಯೆಂದರೆ ಯಾರು? (ವೇದಾಂತಬೋಧ್ಯನಾದ) ನಿರ್ಗುಣಾತ್ಮನೆ? ಅಥವಾ (ಶಿವ, ವಿಷ್ಣು ಮೊದಲಾದ) ಸಗುಣಾತ್ಮನೆ?ಎರಡನೆಯ ಪಕ್ಷವಾದ ಸಗುಣಾತ್ಮನಾದರೆ, ಆತನ ಜ್ಞಾನದಿಂದ ಭೇದಪ್ರಪಂಚವು ಬಾಧಿತವಾಗುವುದಿಲ್ಲವೆಂಬುದು ನಮಗೂ ಸಂಮತವಾಗಿಯೇ ಇದೆ (ಆಗ ಸಿದ್ಧಸಾಧನ ದೋಷ ಇರುತ್ತದೆ). ಮೊದಲನೆಯ ಪಕ್ಷವಾದ ನಿರ್ಗುಣಾತ್ಮನಾದರೆ, (ಅವನು ಪ್ರಮಿತನೆ-ಪ್ರಮಿತನಲ್ಲವೆ?ಎಂದು ವಿಕಲ್ಪಿಸಿದಾಗ) ಎರಡು ವಿಧದಲ್ಲಿಯೂ ದೋಷವಿದ್ದೇ ಇದೆ."

ಕಿಂ ನಿರ್ವಿಶೇಷಂ ಪ್ರಮಿತಂ ನ ವಾಽಂತ್ಯೇ
ಪ್ರಾಪ್ತಾಽಶ್ರಯಾಸಿದ್ಧಿರಥಾದ್ಯಕಲ್ಪೇ |
ಶರೀರ್ಯಭೇದೇನ ಪರಸ್ಯ ಸಿದ್ಧೇಃ
ಪ್ರಾಪ್ನೋತಿ ಧರ್ಮಿಗ್ರಹಮಾನಕೋಪಃ || ೧೨೧

ಹೇಗೆಂದರೆ, ನಿರ್ವಿಶೇಷನಾದ ನಿರ್ಗುಣಾತ್ಮನು ಪ್ರಮಿತನೆ-ಪ್ರಮಿತನಲ್ಲವೆ? -ಎಂದು ವಿಕಲ್ಪಿಸಿದಾಗ, ಎರಡನೆಯ ಪಕ್ಷದಂತೆ ಪ್ರಮಿತನಲ್ಲವೆಂಬುದಾದರೆ ಆಶ್ರಯಾಸಿದ್ಧಿ ಎಂಬ ದೋಷ ಬರುತ್ತದೆ. ಪ್ರಮಿತನೆಂಬ ಮೊದಲನೆಯ ಕಲ್ಪವಾದರೆ ಜೀವಾತ್ಮನಿಗೆ ಅಭಿನ್ನನಾದ ಪರಮಾತ್ಮನಿದ್ದಾನೆಂದು ಸಿದ್ಧವಾಗುತ್ತದೆ. ಇಲ್ಲದಿದ್ದರೆ ಪಕ್ಷಧರ್ಮಿಯಾದ ಆತ್ಮನ ಸ್ವರೂಪವನ್ನು ಬೋಧಿಸುವ ವೇದಾಂತ ವಾಕ್ಯವೆಂಬ ಪ್ರಮಾಣಕ್ಕೆ ವಿರುದ್ಧ ವಾಗುತ್ತದೆ"ಎಂದರು.

ವಿವರಣೆ:-ಪ್ರಮಿತ = ಯಥಾರ್ಥವಾಗಿ ತಿಳಿಯಲ್ಪಟ್ಟವನು. ಅಪ್ರಮಿತ = ಯಥಾರ್ಥವಾಗಿ ತಿಳಿಯದೆ ಅರೆಬರೆಯಾಗಿ ತಿಳಿಯಲ್ಪಟ್ಟವನು. ಈ ಎಲ್ಲ ವಿಕಲ್ಪಗಳಿಗೂ ಆತ್ಮನು ಆಶ್ರಯನಾಗಿದ್ದಾನೆ. ಸರಿಯಾಗಿ ಆತ್ಮಸ್ವರೂಪವು ತಿಳಿಯದಿದ್ದಾಗ ಈ ವಿಕಲ್ಪಗಳು ನಿಷ್ಫಲ. ಆಶ್ರಯವಿಲ್ಲವೆಂದೇ ಆಗುವುದರಿಂದ ಆಶ್ರಯಾಸಿದ್ಧಿಯೆಂಬ ಹೇತ್ವಾಭಾಸವಿದು. ಆತ್ಮಸ್ವರೂಪವು ಪ್ರಮಿತವಾದರೆ ಅದ್ವಿತೀಯನಾದ ಒಬ್ಬನೇ ಕೇವಲಾತ್ಮನೆಂದೂ ಜೀವಾತ್ಮನು ಪರಮಾತ್ಮನೇ ಸರಿಯೆಂದೂ ನಿಶ್ಚಿತವಾಗಿ ಬಿಡುತ್ತದೆ. ಈ ನಿಶ್ಚಯಕ್ಕೆ ಉಪನಿಷದ್ವಾಕ್ಯವೇ ಪ್ರಮಾಣ. ಅನುಮಾನಪ್ರಮಾಣಕ್ಕಿಂತ ವೇದವಾಕ್ಯವು ಪ್ರಬಲತರವಾದ ಪ್ರಮಾಣವೆಂದು ತಾತ್ಪರ್ಯ.

ಭೋ 'ದ್ವಾಸುಪರ್ಣಾಸಯುಜಾ ಸಖಾಯೇ'-
ತ್ಯಾದ್ಯಾ ಶ್ರುತಿರ್ಭೇದಮುದೀರಯಂತೀ |
ಜೀವೇಶಯೋಃ ಪಿಪ್ಪಲ ಭೋಕ್ತೃಭೋಕ್ತ್ರೋಃ
ತಯೋರಭೇದಶ್ರುತಿಬಾಧಿಕಾಽಸ್ತು || ೧೧೨

ಈಗ ಅದ್ವೈತಸಿದ್ಧಾಂತಕ್ಕೇ ಆಧಾರವಿಲ್ಲವೆಂದು ಮಂಡನನು ಆಕ್ಷೇಪಿಸುತ್ತಾನೆ–ಯತಿಗಳೆ, 'ದ್ವಾಸುಪರ್ಣಾ ಸಯುಜಾ ಸಖಾಯಾ......'ಇತ್ಯಾದಿ ಶ್ರುತಿಯಿದೆಯಷ್ಟೆ. ಪಿಪ್ಪಲವೆಂಬ ಕರ್ಮಫಲವನ್ನು ಭೋಗಿಸತಕ್ಕ ಜೀವಾತ್ಮನೂ ಭೋಗಿಸದೆ ತಟಸ್ಥನಾಗಿರತಕ್ಕ ಪರಮಾತ್ಮನೂ ಈ ದೇಹದಲ್ಲಿದ್ದಾರೆಂದು ಹೇಳುತ್ತದೆ. ದ್ವೈತವನ್ನು ಬೋಧಿಸತಕ್ಕ ಈ ಶ್ರುತಿಯು ಜೀವಾತ್ಮಪರಮಾತ್ಮರಿಗೆ ಅಭೇದವನ್ನು ಹೇಳತಕ್ಕ 'ತತ್ತ್ವಮಸಿ'ಮುಂತಾದ ಶ್ರುತಿಯನ್ನು ಬಾಧಿಸುತ್ತದೆ ಎಂದಾಗಲಿ.

ವಿವರಣೆ:-ಪೂರ್ತಿಯಾಗಿ ಮಂತ್ರವು ಹೀಗಿದೆ-
ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ |
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ ಅನಶ್ನನ್ನನ್ಯೋ ಅಭಿಚಾಕಶೀತಿ ||
(ಮುಂಡಕ ೨-೧; ಶ್ವೇತಾಶ್ವತರ ೪-೬)
ಮಂಡನನ ಪ್ರಕಾರ ಇದರ ಅರ್ಥ-
"ಜೊತೆಗೆ ಇರತಕ್ಕವೂ ಮಿತ್ರರೂ ಆದ (ಜೀವೇಶ್ವರರೆಂಬ) ಎರಡು ಹಕ್ಕಿಗಳು (ಶರೀರವೆಂಬ) ಒಂದು ವೃಕ್ಷವನ್ನು ಆಶ್ರಯಿಸಿಕೊಂಡಿರುತ್ತವೆ. ಅವುಗಳಲ್ಲೊಂದಾದ (ಜೀವನೆಂಬ) ಹಕ್ಕಿಯು ತಾನು ಆಚರಿಸಿದ ಕರ್ಮಕ್ಕೆ ಫಲವಾದ ಪಿಪ್ಪಲವೆಂಬ ರುಚಿಕರವಾದ ಹಣ್ಣನ್ನು ತಿನ್ನುತ್ತದೆ. ಇನ್ನೊಂದು (ಈಶ್ವರನೆಂಬ)

ಪಕ್ಕಿಯು ಫಲವನ್ನು ತಿನ್ನದೆ ನೋಡುತ್ತ ಇರುತ್ತದೆ.ಜೀವನು ಕರ್ತನಾದ್ದರಿಂದ ಫಲದ ಭೋಕ್ತನಾಗುತ್ತಾನೆ. ಈಶ್ವರನು ಕರ್ತನಲ್ಲವಾದ್ದರಿಂದ ಫಲಭೋಕ್ತನಲ್ಲ. ಜೀವೇಶ್ವರ ಭೇದವನ್ನು ಸ್ಪಷ್ಟವಾಗಿ ಹೇಳುವ ಈ ಶ್ರುತಿಯು ಅಭೇದಶ್ರುತಿಯನ್ನು ಬಾಧಿಸುತ್ತದೆ. ಅಭೇದಶ್ರುತಿಗೆ ಬೇರೆ ಅರ್ಥವನ್ನೇ ಹೇಳಬೇಕು.

ಪ್ರತ್ಯಕ್ಷಸಿದ್ಧೇ ವಿಫಲೇ ಪರಾತ್ಮ-
ಭೇದೇ ಶ್ರುತಿರ್ನೋ ನಯವಿತ್ಪ್ರಮಾಣಮ್ ।
ಸ್ಯಾದನ್ಯಥಾ ಮಾನಮತತ್ಪರೋಽಪಿ
ಸ್ವಾರ್ಥೇಽ ರ್ಥವಾದಃ ಸಕಲೋಽಪಿ ವಿದ್ವನ್ ॥ ೧೧೩

ಶ್ರೀಶಂಕರ—ಮೀಮಾಂಸಾನ್ಯಾಯಗಳನ್ನು ಬಲ್ಲ ವಿದ್ವಾಂಸನೆ, (ನೀನು ಹೀಗೆ ಹೇಳಬಹುದೆ?) ಜೀವೇಶ್ವರ ಭೇದವು (ಲೋಕದಲ್ಲಿ ಜನರಿಗೆ) ಪ್ರತ್ಯಕ್ಷಸಿದ್ಧವೇ ಆಗಿದೆ. ಗೊತ್ತಿರುವ ವಿಷಯವನ್ನೇ ವ್ಯರ್ಥವಾಗಿ ತಿಳಿಸುವುದಾದರೆ ಆ ಶ್ರುತಿವಾಕ್ಯವು ಪ್ರಮಾಣವಾಗುವುದೇ ಇಲ್ಲ. ಹಾಗಲ್ಲದೆ ಅದನ್ನು ಪ್ರಮಾಣವೆಂದು ಒಪ್ಪುವುದಾದರೆ, ಸ್ವಾರ್ಥದಲ್ಲಿ ತಾತ್ಪರ್ಯವಿಲ್ಲದ ಸಕಲ ಅರ್ಥವಾದವೂ ಪ್ರಮಾಣವಾಗ ಬೇಕಾದೀತು.

ವಿವರಣೆ:-ನಮಗೆ ಗೊತ್ತಿಲ್ಲದ ನೂತನಾರ್ಥವನ್ನು ತಿಳಿಸುವ ಶ್ರುತಿವಾಕ್ಯವು ಪ್ರಮಾಣವೆನಿಸುತ್ತದೆ. ಪ್ರಮಾಣವು ಯಾವಾಗಲೂ ಅಜ್ಞಾತಾರ್ಥಜ್ಞಾಪಕವಾಗಿರುತ್ತದೆ. ಜನರು ಹುಟ್ಟಿನಿಂದಲೇ ಜೀವ-ಜಗತ್ತು-ಈಶ್ವರ ಎಂಬ ಭೇದವನ್ನು ತಿಳಿದುಕೊಂಡಿದ್ದಾರೆ. ಇದನ್ನು ಶ್ರುತಿಯು ಮತ್ತೆ ಹೇಳಿಕೊಡಬೇಕಾಗಿಲ್ಲ. ವೇದದಲ್ಲಿ ವಿಧಿವಾಕ್ಯ, ಅರ್ಥವಾದ-ಎಂದು ಎರಡು ಬಗೆಯ ನುಡಿಗಳಿವೆ. ನೂತನಾರ್ಥವನ್ನು ಬೋಧಿಸುವುದರಿಂದ ವಿಧಿವಾಕ್ಯವು ಪ್ರಮಾಣವೆಂದೂ, ನೂತನಾರ್ಥವನ್ನು ತಿಳಿಸದಿರುವುದರಿಂದ ಅರ್ಥವಾದವು ಪ್ರಮಾಣವಾಕ್ಯವಲ್ಲವೆಂದೂ ಜೈಮಿನಿನ್ಯಾಯದ ಸಿದ್ಧಾಂತವಾಗಿದೆ. ಅರ್ಥವಾದವು ವಿಧಿವಿಹಿತವಾದ್ದನ್ನು ಪ್ರಶಂಸೆ ಮಾಡುವುದಕ್ಕಾಗಿ ಹೊರಟಿರುತ್ತದೆ. ಅದಕ್ಕೆ ಸ್ವಾರ್ಥದಲ್ಲಿ ತಾತ್ಪರ್ಯವಿಲ್ಲ.

ಸ್ಮೃತಿ ಪ್ರಸಿದ್ಧಾರ್ಥವಿಬೋಧಿ ವಾಕ್ಯಂ
ಯಥೇಷ್ಯತೇ ಮೂಲತಯಾ ಪ್ರಮಾಣಮ್ ।
ಪ್ರತ್ಯಕ್ಷಸಿದ್ಧಾರ್ಥಕ ವಾಕ್ಯಮೇವಂ
ಸ್ಯಾದೇವ ತನ್ಮೂಲತಯಾ ಪ್ರಮಾಣಮ್ ॥ ೧೧೪

ಮಂಡನ—ಸ್ಮೃತಿಗ್ರಂಥಗಳು ತಿಳಿಸಿರುವ ಪ್ರಸಿದ್ಧವಾದ ವಿಷಯಕ್ಕೆ, ಸ್ಮೃತಿಗೆ ಮೂಲವಾದ ಶ್ರುತಿಯು ಪ್ರಮಾಣವೆಂದು ಸ್ವೀಕೃತವಾಗಿದೆಯಷ್ಟೆ. ಅದರಂತೆಯೇ ಭೇದವು ಲೋಕಪ್ರಸಿದ್ಧವಾಗಿದ್ದರೂ ಭೇದ ಪ್ರವೃತ್ತಿಗೆ ಮೂಲವಾಗುವುದರಿಂದ ಆ ಶ್ರುತಿವಾಕ್ಯವು ಪ್ರಮಾಣವಾಗಿಯೇ ಆಗುತ್ತದೆ.

ವಿವರಣೆ:-ನಾನು ಬೇರೆ, ನೀನು ಬೇರೆ, ದೇವರು ಬೇರೆ-ಎಂಬುದು ಮಾನಸ ಪ್ರತ್ಯಕ್ಷ. ಜಗತ್ತು ಬೇರೆ ಎಂಬುದು ಇಂದ್ರಿಯ ಪ್ರತ್ಯಕ್ಷ. ಹೀಗೆ ಭೇದವು ಪ್ರಸಿದ್ಧವಾದರೂ ಈ ಭೇದಪ್ರವೃತ್ತಿಗೆ ಮೂಲಾಧಾರವಾಗಿ ಶ್ರುತಿಯೂ

ಪ್ರಮಾಣವಾಗಲಿ. ಸ್ಮೃತಿಯು ತಿಳಿಸಿಕೊಟ್ಟ ವಿಷಯಕ್ಕೇ ಆಧಾರವಾಗಿ ವೇದವನ್ನು ಪ್ರಮಾಣವಾಗಿ ಉದಾಹರಿಸುವುದಿಲ್ಲವೆ?-ಎಂದು ಅಭಿಪ್ರಾಯ.

ಶ್ರುತಿಃ ಸ್ಮೃತೇಽರ್ಥೇ ಯದಿ ವೇದವಿದ್ಭಿಃ
ಭವೇನ್ನ ತನ್ಮೂಲತಯಾ ಪ್ರಮಾಣಮ್ |
ಕಥಂ ಭವೇದ್ವೇದ ಕಥಾನಭಿಜ್ಞೈಃ
ಜ್ಞಾತೇಽಪಿ ಭೇದೇ ಪರಜೀವಯೋಃ ಸಾ || ೧೧೫

ಶ್ರೀಶಂಕರ–ವೇದವಿದರಾದ ಮನ್ವಾದಿಗಳಿಂದ ಸ್ಮೃತವಾದ ವಿಷಯದಲ್ಲಿ ವೇದವು ಸ್ಮೃತಿಯ ಮೂಲಕವಾಗಿ ಪ್ರಮಾಣವಲ್ಲ(ಕಿಂತು, ಅಜ್ಞಾತಜ್ಞಾಪಕವಾದ್ದರಿಂದ ಸ್ವತಃ ಪ್ರಮಾಣವಾದದ್ದು ವೇದ).ಹೀಗಿರುವಾದ ವೇದದ ಸುಳಿವನ್ನೇ ಅರಿಯದ(ಪಾಮರ) ಜನರಿಗೆ ತಿಳಿದಿರುವ ಜೀವೇಶ್ವರ ಭೇದದಲ್ಲಿ ವೇದವು ಹೇಗೆ ಪ್ರಮಾಣವಾದೀತು?

ವಿವರಣೆ:- ಅಜ್ಞಾತವಾದ ನೂತನ ವಿಷಯವನ್ನು ಸ್ಮೃತಿಯು ತಿಳಿಸುತ್ತದೆ. ಸ್ಮೃತಿಯು ಮನುಷ್ಯಪ್ರಣೀತವಾದ್ದರಿಂದ ಅದಕ್ಕೆ ಆಧಾರವೇನೆಂಬ ಶಂಕೆ ಬರಬಹುದು. ಆಗ ಶ್ರುತಿಯು ಪ್ರಮಾಣವಾಗಿ ನಿಲ್ಲುತ್ತದೆ. ಅದು ಅಜ್ಞಾತಜ್ಞಾಪಕವಾದ್ದರಿಂದಲೇ ಪ್ರಮಾಣ. ಜೀವೇಶ್ವರಭೇದವಾದರೋ ಲೋಕದಲ್ಲಿ ಪಾಮರರಿಗೆ ಸಹ ಗೊತ್ತಿದೆ. ಹಾಗೆಯೇ ವ್ಯವಹಾರ ನಡೆಯುತ್ತಿದೆ. ಭೇದವು ಪ್ರತ್ಯಕ್ಷವಾಗಿದೆ. ಆದಕ್ಕೆ ಆಧಾರವೇನೆಂಬ ಶಂಕೆಯೇ ಹುಟ್ಟುವುದಿಲ್ಲವಾದ್ದರಿಂದ ಅದನ್ನು ತಿಳಿಸಲು ಶ್ರುತಿಯು ಬೇಕಾಗಿಲ್ಲವೆಂದು ಅಭಿಪ್ರಾಯ.

ಜೀವೇಶ್ವರೌ ಸಾ ವದತೀತ್ಯುಪೇತ್ಯ
ಪ್ರಾವೋಚಮೇತತ್ಪರಮಾರ್ಥತಸ್ತು |
ವಿವಿಚ್ಯ ಸತ್ತ್ವಾತ್ಪುರುಷಂ ಸಮಸ್ತ-
ಸಂಸಾರರಾಹಿತ್ಯಮಮುಷ್ಯ ವಕ್ತಿ || ೧೧೬

"ಅಲ್ಲದೆ'ದ್ವಾಸುಪರ್ಣಾ......'ಎಂಬ ವೇದಮಂತ್ರವು ಜೀವೇಶ್ವರರ ವಿಚಾರವನ್ನು ಹೇಳುತ್ತದೆ-ಎಂಬ ನಿನ್ನ ಪಕ್ಷವನ್ನನುಸರಿಸಿ ಹೀಗೆ ಉತ್ತರವನ್ನು ಹೇಳಿದ್ದೇನೆ. ವಸ್ತುತಸ್ತು ಬುದ್ಧಿಯಿಂದ ಜೀವಾತ್ಮನನ್ನು ಪೃಥಕ್ಕರಿಸಿ ಆತನಿಗೆ ಸಮಸ್ತ ಸಂಸಾರರಾಹಿತ್ಯವನ್ನು ಆ ವೇದಮಂತ್ರವು ಬೋಧಿಸುತ್ತದೆ"ಎಂದರು.

ಯದೀಯಮಾಖ್ಯಾತ್ಯಥ ಸತ್ತ್ವಜೀವೌ
ವಿಹಾಯ ಸರ್ವಜ್ಞಶರೀರಭಾಜೌ |
ಜಡಸ್ಯ ಭೋಕ್ತೃತ್ವಮುದಾಹರಂತೀ
ಪ್ರಾಮಾಣ್ಯಮರ್ಹನ್ ಕಥಮಶ್ನುವೀತ || ೧೧೭

ಮಂಡನ–ಶರೀರಿಯಾದ ಜೀವನನ್ನೂ ಸರ್ವಜ್ಞನಾದ ಈಶ್ವರನನ್ನೂ ಬಿಟ್ಟು ಆ ವೇದಮಂತ್ರವು ಬುದ್ಧಿಯನ್ನೂ ಜೀವಾತ್ಮನನ್ನೂ ಕುರಿತು ಹೇಳುತ್ತದೆಯೆಂಬುದು ಸಂಗತವಲ್ಲ. ಆಗ ಜಡವಾದ ಬುದ್ಧಿಯು ಕರ್ಮಫಲವನ್ನು ಭೋಗಿಸುತ್ತದೆ-ಎಂದಾಗುತ್ತದೆ. ಇಂತಹ ಮಾತು ಹೇಗೆ ಪ್ರಮಾಣವಾದೀತು?

ವಿವರಣೆ:-ಜಡವಾದ ಬುದ್ಧಿಯು ಅನುಭವಕ್ಕೆ ಕರ್ತೃವಾಗಲಾರದು. ಬುದ್ಧಿಯು ಭೋಗವನ್ನು ಅನುಭವಿಸುತ್ತದೆ-ಎನ್ನುವುದು ತಪ್ಪು. ಅದನ್ನು ಕರಣವಾಗಿ ಬಳಸಬೇಕಾಗುತ್ತದೆ. ಬುದ್ಧಿಯಿಂದ ಭೋಗವನ್ನು ಅನುಭವಿಸುತ್ತಾನೆ-ಎನ್ನಬಹುದು.

ನ ಚೋದನೀಯಾ ವಯಮತ್ರ ವಿದ್ವನ್
ಯತಸ್ತ್ವಯಾ ಪೈಂಗಿರಹಸ್ಯಮೇವ |
ಅತ್ತೀತಿ ಸತ್ತ್ವಂ ತ್ವಭಿಪಶ್ಯತಿ ಜ್ಞ
ಇತಿ ಸ್ಮ ಸಮ್ಯಗ್ವಿವೃಣೋತಿ ಮಂತ್ರಮ್ || ೧೧೮

ಶ್ರೀಶಂಕರ–ವಿದ್ವಾಂಸನೆ, ಈ ವಿಷಯದಲ್ಲಿ ನಮ್ಮನ್ನು ಆಕ್ಷೇಪಿಸಬಾರದು! ಪೈಂಗಿರಹಸ್ಯಬ್ರಾಹ್ಮಣವೇ'ಸತ್ತ್ವವು (ಬುದ್ಧಿಯು) ಫಲವನ್ನು ಭೋಗಿಸುತ್ತದೆ. ಕ್ಷೇತ್ರಜ್ಞನಾದ ಜೀವಾತ್ಮನು ನೋಡುತ್ತಿರುವನು'ಎಂಬುದಾಗಿ 'ದ್ವಾಸುಪರ್ಣಾ'ಎಂಬ ಮಂತ್ರದ ಅರ್ಥವನ್ನು ಸ್ಪಷ್ಟವಾಗಿ ವಿವರಿಸುತ್ತಿದೆ.

ವಿವರಣೆ:-ಸೂತ್ರಭಾಷ್ಯದಲ್ಲಿ ಗುಹಾಪ್ರವಿಷ್ಟಾಧಿಕರಣದ 'ವಿಶೇಷಣಾಚ್ಚ'ಎಂಬ ಸೂತ್ರವನ್ನು ವ್ಯಾಖ್ಯಾನ ಮಾಡುವಾಗ ಪೈಂಗಿರಹಸ್ಯ ಬ್ರಾಹ್ಮಣದಿಂದ ಈ ವಾಕ್ಯಗಳು ಉದ್ಧೃತವಾಗಿವೆ-
೧. ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತೀತಿ ಸತ್ತ್ವಮ್ |ಅನಶ್ನನ್ನನ್ಯೋಽಭಿಚಾಕಶೀತೀತ್ಯನಶ್ನನ್ನನ್ಯೋಽಭಿ ಪಶ್ಯತಿ ಜ್ಞಃ |ತಾವೇತೌ ಸತ್ತ್ವಕ್ಷೇತ್ರಜ್ಞೌ ||
೨. ತದೇತತ್ ಸತ್ತ್ವಂ ಯೇನ ಸ್ವಪ್ನಂ ಪಶ್ಯತಿ|ಅಥ ಯೋಽಯಂ ಶಾರೀರ ಉಪದ್ರಷ್ಟಾ ಸ ಕ್ಷೇತ್ರಜ್ಞಃ|ತಾವೇತೌ ಸತ್ತ್ವಕ್ಷೇತ್ರಜ್ಞೌ ||

ಶರೀರವಾಚೀ ನನು ಸತ್ತ್ವಶಬ್ದಃ
ಕ್ಷೇತ್ರಜ್ಞಶಬ್ದಃ ಪರಮಾತ್ಮವಾಚೀ |
ತತ್ರಾಪ್ಯತೋ ನಾನ್ಯಪರತ್ವಮಸ್ಯ
ವಾಕ್ಯಸ್ಯ ಪೈಂಗ್ಯೋದಿತವರ್ತ್ಮನಾಽಪಿ || ೧೧೯

ಮಂಡನ–ಪೈಂಗಿರಹಸ್ಯದಲ್ಲಿರುವ ಸತ್ತ್ವಶಬ್ದವು ಶರೀರಸ್ಥ ಜೀವಾತ್ಮನ ವಾಚಕವೇ ಸರಿ. ಕ್ಷೇತ್ರಜ್ಞ ಶಬ್ದವು ಪರಮಾತ್ಮವಾಚಕ. ಆದ್ದರಿಂದ ಪೈಂಗಿರಹಸ್ಯದಲ್ಲಿ ಹೇಳಿದ ಮಾರ್ಗದಿಂದಲೂ ಸಹ ದ್ವಾಸುಪರ್ಣಾ ಎಂಬುದು ಬೇರೆವಿಧವಾದ ಅರ್ಥವನ್ನು ಕೊಡುವುದಿಲ್ಲ.

ಟಿಪ್ಪಣಿ:ಸತ್ತ್ವಶಬ್ದಕ್ಕೆ ಚಿತ್ತ, ಪ್ರಾಣ-ಎಂಬ ಎರಡು ಅರ್ಥಗಳು ಕೋಶದಲ್ಲಿ ದೊರೆಯುತ್ತವೆ. ಕ್ಷೇತ್ರಜ್ಞ ಶಬ್ದಕ್ಕೆ ಆತ್ಮ ಎಂದು ಅರ್ಥವಿದೆ.

ತದೇತದಿತ್ಯಾದಿಗಿರಾ ಹಿ ಚಿತ್ತೇ
ಪ್ರದರ್ಶಿತಾ ಸತ್ತ್ವಪದಸ್ಯ ವೃತ್ತಿಃ |
ಕ್ಷೇತ್ರಜ್ಞಶಬ್ದಸ್ಯ ಚ ವೃತ್ತಿರುಕ್ತಾ
ಶಾರೀರಕೇ ದ್ರಷ್ಟರಿ ತತ್ರ ವಿದ್ವನ್ || ೧೨೦

ಶ್ರೀಶಂಕರ–ಪೈಂಗಿರಹಸ್ಯದಲ್ಲಿಯೇ'ತದೇತತ್ ಸತ್ತ್ವಂ ಯೇನ ಸ್ವಪ್ನಂ ಪಶ್ಯತಿ 'ಎಂಬ ವಚನದಿಂದ ಇಲ್ಲಿ ಸತ್ತ್ವಶಬ್ದವು ಚಿತ್ತಾರ್ಥಕವೆಂದು ಸೂಚಿತವಾಗಿದೆ. ಹಾಗೆಯೇ 'ಅಥ ಯೋಽಯಂ ಶಾರೀರ ಉಪದ್ರಷ್ಟಾ ಸ ಕ್ಷೇತ್ರಜ್ಞಃ'ಎಂಬ ವಚನದಿಂದ ಕ್ಷೇತ್ರಜ್ಞನೆಂದರೆ ಶಾರೀರನೂ ದ್ರಷ್ಟೃವೂ ಆದ ಆತ್ಮನೆಂದು ವಿವೃತವಾಗಿದೆ.

ಟಿಪ್ಪಣಿ:ಸ್ವಪ್ನವನ್ನು ನೋಡಲು ಸಾಧನವಾದದ್ದು ಚಿತ್ತವೇ. ಶಾರೀರನೆಂದರೆ ಶರೀರದಲ್ಲಿರತಕ್ಕ ಜೀವಾತ್ಮ.

ಯೇನೇತಿ ಹಿ ಸ್ವಪ್ನದೃಶಿ ಕ್ರಿಯಾಯಾಃ
ಕರ್ತೋಽಚ್ಯತೇ ತತ್ರ ಸ ಜೀವ ಏವ |
ಕ್ಷೇತ್ರಜ್ಞಶಬ್ದಾಭಿಹಿತಶ್ಚ ಯೋಗಿನ್
ಸ್ಯಾತ್ಸ್ವಪ್ನದೃಕ್ ಸರ್ವವಿದೀಶ್ವರೋಽಪಿ || ೧೨೧

ಮಂಡನ–ಪೈಂಗಿರಹಸ್ಯದಲ್ಲಿರುವ'ಯೇನ'ಎಂಬ ಶಬ್ದದಿಂದ ಸ್ವಪ್ನದರ್ಶನ ಕ್ರಿಯೆಯ ಕರ್ತನು ಉಕ್ತನಾಗಿದ್ದಾನೆ. ಸ್ವಪ್ನವನ್ನು ಕಾಣತಕ್ಕ ಕರ್ತನು ಜೀವನೇ ಸರಿ. ಯತಿಗಳೆ, ಕ್ಷೇತ್ರಜ್ಞ ಶಬ್ದಕ್ಕೆ ಈಶ್ವರನೆಂದರ್ಥ. ಈಶ್ವರನು ಸರ್ವಜ್ಞನಾದ್ದರಿಂದ ಅವನು ಸ್ವಪ್ನವನ್ನೂ ನೋಡುತ್ತಾನೆ ಎಂಬುದು ಸಮಂಜಸವೇ ಸರಿ.

ಟಿಪ್ಪಣಿ: 'ಯೇನ'ಎಂಬಲ್ಲಿ ಕರ್ತರಿ ತೃತೀಯಾ ವಿಭಕ್ತಿ ಬಂದಿದೆಯೆಂದು ಮಂಡನನು ಭ್ರಮಿಸಿ ಹೀಗೆ ನುಡಿದಿದ್ದಾನೆ.

ತಿಙ್ಪ್ರತ್ಯಯೇನಾಭಿಹಿತೋಽತ್ರ ಕರ್ತಾ
ತತಸ್ತೃತೀಯಾ ಕರಣೇಽಭ್ಯುಪೇಯಾ |
ದ್ರಷ್ಟಾ ಚ ಶಾರೀರತಯಾ ಮನೀಷಿನ್
ವಿಶೇಷ್ಯತೇ ತೇನ ಸ ನೇಶ್ವರಃ ಸ್ಯಾತ್ || ೧೨೨

ಶ್ರೀಶಂಕರ–'ಯೇನ ಸ್ವಪ್ನಂ ಪಶ್ಯತಿ'ಎಂಬಲ್ಲಿರುವ 'ಪಶ್ಯತಿ'ಶಬ್ದದ ತಿಙ್ ಪ್ರತ್ಯಯದಿಂದ ಕರ್ತನು ಅಭಿಹಿತನಾಗಿದ್ದಾನೆ. ಆದ್ದರಿಂದ ತೃತೀಯಾ ವಿಭಕ್ತಿಯು ಕರಣಾರ್ಥದಲ್ಲಿದೆಯೆಂದೇ

ಅಂಗೀಕರಿಸಬೇಕು. ವಿದ್ವಾಂಸನೆ, ದ್ರಷ್ಟೃವಿಗೆ ಇಲ್ಲಿ ಶಾರೀರನೆಂಬ ವಿಶೇಷಣವಿದೆ. ಆದ್ದರಿಂದ ದ್ರಷ್ಟೃವು ಈಶ್ವರನಾಗುವುದಿಲ್ಲ.

ವಿವರಣೆ:-ವ್ಯಾಕರಣಶಾಸ್ತ್ರದಲ್ಲಿ'ಅನಭಿಹಿತೇ'ಎಂಬ ಅಧಿಕಾರದಲ್ಲಿ ' ಕರ್ತೃಕರಣಯೋ ಸ್ತೃತೀಯಾ'ಎಂಬ ಸೂತ್ರವಿದೆ. ಕರ್ತೃವೂ ಕರಣವೂ ಇನ್ನೊಂದರಿಂದ ಅಭಿಹಿತ (ಉಕ್ತ)ವಾಗದಿದ್ದರೆ ತೃತೀಯಾ ವಿಭಕ್ತಿ ಬರುತ್ತದೆ. ಪಶ್ಯತಿ- ಎಂಬಲ್ಲಿ ದರ್ಶನಕ್ರಿಯೆಯ ಕರ್ತನು ತಿಙ್ಪ್ರತ್ಯಯದಿಂದ ಅಭಿಹಿತನಾಗಿದ್ದಾನೆ. ಆದ್ದರಿಂದ ' ಯೇನ'ಎಂಬಲ್ಲಿ ಕರ್ತರಿ ತೃತೀಯಾ ಬರುವುದಿಲ್ಲ. ಕರಣೇ ತೃತೀಯಾ-ಎಂದೇ ಹೇಳಬೇಕು. ಕರಣವೆಂದರೆ ಸಾಧನ. ಸ್ವಪ್ನದರ್ಶನಕ್ಕೆ ಸಾಧನವಾದದ್ದು ಚಿತ್ತವೇ ಹೊರತು ಜೀವನಲ್ಲ -ಎಂದು ಅಭಿಪ್ರಾಯ.

ವೃತ್ತಿಃ ಶರೀರೇ ಭವತೀತ್ಯಮುಷ್ಮಿನ್
ಅರ್ಥೇ ಹಿ ಶಾರೀರಪದಸ್ಯ ಯೋಗಿನ್ |
ತಸ್ಮಿನ್ ಭವನ್ ಸರ್ವಗತೋ ಮಹೇಶಃ
ಕಥಂ ನ ಶಾರೀರಪದಾಭಿಧೇಯಃ || ೧೨೩

ಮಂಡನನು ತನ್ನ ತಪ್ಪನ್ನು ತಿಳಿದು ಕೊಂಡು ಸತ್ತ್ವಶಬ್ದವನ್ನು ಕೈಬಿಟ್ಟು ಶಾರೀರ ಶಬ್ದದ ವಿಚಾರಕ್ಕೆ ತೊಡಗುತ್ತಾನೆ-

ಮಂಡನ–ಯತಿಗಳೆ, 'ಶರೀರೇ ಭವತೀತಿ ಶಾರೀರಃ'ಎಂದು ವಿಗ್ರಹ. ಶರೀರದಲ್ಲಿ ಇರತಕ್ಕವನು ಎಂದರ್ಥ. ಸರ್ವಗತನಾದ ಪರಮೇಶ್ವರನು ಶರೀರದಲ್ಲಿಯೂ ಇರುತ್ತಾನೆ. ಶಾರೀರನೆಂಬ ವಿಶೇಷಣವಿದ್ದರೆ ಈಶ್ವರನೆಂದೇಕೆ ಅರ್ಥವಾಗುವುದಿಲ್ಲ?

ಭವನ್ ಶರೀರಾದಿತರತ್ರ ಚೇಶಃ
ಕಥಂ ಚ ಶಾರೀರ ಪದಾಭಿಧೇಯಃ ||
ನಭಃ ಶರೀರೇಽಪಿ ಭವತ್ಯಥಾಪಿ
ನ ಕೇಽಪಿ ಶಾರೀರಮಿತೀರಯಂತಿ || ೧೨೪

ಶ್ರೀಶಂಕರ–ನಿಜ; ಈಶ್ವರನು ಶರೀರದಲ್ಲಿಯೂ ಇದ್ದಾನೆ. ಹೊರಗಡೆಯೂ ಇದ್ದಾನೆ. ಅಷ್ಟುಮಾತ್ರದಿಂದ ಅವನನ್ನು ಶಾರೀರ ಎನ್ನಲಾಗದು. ಆಕಾಶವು ಶರೀರದಲ್ಲಿಯೂ ಇದೆ(ಹೊರಗಡೆಯೂ ಇದೆ). ಆದರೆ ಆಕಾಶವನ್ನು ಶಾರೀರವೆಂದು ಯಾರೂ ಹೇಳುವುದಿಲ್ಲ!

ವಿವರಣೆ:-ಶರೀರದಲ್ಲಿರತಕ್ಕವನು ಶಾರೀರ-ಎಂದು ವ್ಯುತ್ಪತ್ತಿಯಾದರೂ ಶರೀರದಲ್ಲಿ ಮಾತ್ರ ಇರತಕ್ಕವನು ಶಾರೀರನೆಂಬ ಅರ್ಥವೇ ರೂಢಿಯಲ್ಲಿದೆ.

ಯದ್ಯೇಷ ಮಂತ್ರೋಽನಭಿಧಾಯ ಜೀವ-
ಪ್ರಾಜ್ಞೌ ವದೇದ್ಬುದ್ಧಿಶರೀರಭಾಜೌ |

ಅತ್ತೀತಿ ಭೋಕ್ತೃತ್ವಮಚೇತನಾಯಾ
ಬುದ್ಧೇರ್ವದೇತ್ತರ್ಹಿ ಕಥಂ ಪ್ರಮಾಣಮ್ ॥ ೧೨೫

ಮಂಡನ–ದ್ವಾಸುಪರ್ಣಾ-ಎಂಬ ಮಂತ್ರವು ನಿಮ್ಮ ಪ್ರಕಾರ ಜೀವೇಶ್ವರರನ್ನು ಹೇಳುವುದಿಲ್ಲ, ಬುದ್ಧಿ-ಜೀವರನ್ನು ಹೇಳುತ್ತದೆ ಎಂದಾಗುತ್ತದೆ. ಹಾಗಾದರೆ,'ಅತ್ತಿ = ತಿನ್ನುತ್ತದೆ'ಎಂದು ಅಚೇತನವಾದ ಬುದ್ಧಿಗೆ ಭೋಕ್ತೃತ್ವವನ್ನು (ಅಸಂಗತವಾಗಿ) ಹೇಳತಕ್ಕ ಈ ಮಂತ್ರವು ಹೇಗೆ ಪ್ರಮಾಣವಾಗುತ್ತದೆ?

ವಿವರಣೆ:-ಜೀವನು ಕೇವಲ ದ್ರಷ್ಟೃವಾದ್ದರಿಂದ 'ಅತ್ತಿ'ಎನ್ನುವುದನ್ನು ಬುದ್ಧಿಗೇ ಅನ್ವಯಿಸಬೇಕಾಗುತ್ತದೆ. ಬುದ್ಧಿಯು (ಚಿತ್ತವು) ಜಡಪದಾರ್ಥ. ಅದು ಭೋಕ್ತೃ ಎನ್ನುವುದು ಅಸಂಗತ. ಹಿಂದೆ ೧೧೭ನೆಯ ಶ್ಲೋಕದಲ್ಲಿ ಹೇಳಿದ ಆಕ್ಷೇಪವೇ ಇದು.

ಅದಾಹಕಸ್ಯಾಪ್ಯಯಸಃ ಕೃಶಾನೋ-
ರಾಶ್ಲೇಷಣಾದ್ದಾಹಕತಾ ಯಥಾಽಸ್ತೇ ।
ತಥೈವ ಭೋಕ್ತೃತ್ವಮಚೇತನಾಯಾ
ಬುದ್ಧೇರಪಿ ಸ್ಯಾಚ್ಚಿದನುಪ್ರವೇಶಾತ್ ॥ ೧೨೬

ಶ್ರೀಶಂಕರ–ಕಬ್ಬಿಣದ ತುಂಡಿಗೆ ಸ್ವತಃ ಸುಡುವ ಶಕ್ತಿಇಲ್ಲದಿದ್ದರೂ ಬೆಂಕಿಯ ಸಂಬಂಧಧಿಂದ (ಕಾದು ಬಿಸಿಯಾದಾಗ) ಸುಡುವ ಶಕ್ತಿ ಬಂದು ಬಿಡುತ್ತದೆ. ಹಾಗೆಯೇ ಚೇತನನಾದ ಆತ್ಮನ ಸಂಬಂಧದಿಂದ, ಅಚೇತನವಾದ ಬುದ್ಧಿಗೂ ಭೋಕ್ತೃತ್ವವು ಬರಬಹುದು.

ವಿವರಣೆ:-ಕಬ್ಬಿಣವು ಸುಡುತ್ತದೆ ಎಂದು ಹೇಳಿದಂತೆ ಬುದ್ಧಿಯು ಕರ್ಮಫಲವನ್ನು ಭೋಗಿಸುತ್ತದೆ ಎಂದು ಹೇಳಬಹುದು. ಬುದ್ಧಿಯು ಕರಣವಾದ್ದರಿಂದ ಅದರಲ್ಲಿ ಕರ್ತೃತ್ವವನ್ನು ಆರೋಪಿಸಿಯೂ ಹೀಗೆ ಪ್ರಯೋಗಮಾಡಬಹುದು. ಕತ್ತರಿಯಿಂದ ಕತ್ತರಿಸುತ್ತಾನೆ-ಎಂಬಲ್ಲಿ ಕತ್ತರಿಯು ಕತ್ತರಿಸುತ್ತದೆ ಎಂಬ ಪ್ರಯೋಗವಿದೆಯಷ್ಟೆ. ಪರಮಾರ್ಥದಲ್ಲಾದರೋ ದ್ವಾಸುಪರ್ಣಾ ಎಂಬ ಶ್ರುತಿಯು, ಅಚೇತನವಾದ ಬುದ್ಧಿಯು ಭೋಕ್ತೃವೆಂದು ಹೇಳಲು ಹೊರಟಿಲ್ಲ. ಚೇತನನಾದ ಕ್ಷೇತ್ರಜ್ಞನು ಭೋಕ್ತೃವಲ್ಲವೆಂದು ತಿಳಿಸಲು ಹೊರಟಿದೆ-ಎಂದು ಅಭಿಪ್ರಾಯ.

ಛಾಯಾತಪೌ ಯದ್ವದತೀವ ಭಿನ್ನೌ
ಜೀವೇಶ್ವರೌ ತದ್ವದಿತಿ ಬ್ರುವಾಣಾ ।
ಋತಂ ಪಿಬಂತಾವಿತಿ ಕಾಠಕೇಷು
ಶ್ರುತಿಸ್ತ್ವಭೇದಶ್ರುತಿ ಬಾಧಿಕಾಽಸ್ತು ॥ ೧೨೭

ಮಂಡನ–ಕಠವಲ್ಲಿಯಲ್ಲಿ-
ಋತಂ ಪಿಬಂತೌ ಸುಕೃತಸ್ಯ ಲೋಕೇ ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ।

ಛಾಯಾತಪೌ ಬ್ರಹ್ಮವಿದೋ ವದಂತಿ ಪಂಚಾಗ್ನಯೋ ಯೇ ಚ ತ್ರಿಣಾಚಿಕೇತಾಃ||
(ಕಠ ೧-೩-೧)

ಎಂದಿದೆಯಷ್ಟೆ. ಇಲ್ಲಿ ಕರ್ಮಫಲವೆಂಬ ಋತವನ್ನು ಭೋಗಿಸತಕ್ಕ ಈರ್ವರು ಹೃದಯ ಗುಹೆಯನ್ನು ಪ್ರವೇಶಿಸಿ ನೆಲಸಿದ್ದಾರೆ -ಎಂದು ಜೀವೇಶ್ವರರನ್ನು ತಿಳಿಸಲಾಗಿದೆ. ನೆರಳು-ಬಿಸಿಲುಗಳಂತೆ ಇವರು ವಿರುದ್ಧಧರ್ಮದವರು-ಛಾಯಾತಪಗಳು-ಎಂದು ಹೇಳಿದ್ದರಿಂದ ಇವರು ಜೀವೇಶ್ವರರೇ. ಈ ಶ್ರುತಿಯು ಅದ್ವೈತಶ್ರುತಿಯನ್ನು ಬಾಧಿಸುತ್ತದೆ ಎಂದಾಗಲಿ.

ಭೇದಂ ವದಂತೀ ವ್ಯವಹಾರಸಿದ್ಧಂ
ನ ಬಾಧತೇಽಭೇದಪರಶ್ರುತಿಂ ಸಾ |
ಏಷಾ ತ್ವಪೂರ್ವಾರ್ಥತಯಾ ಬಲಿಷ್ಠಾ
ಭೇದಶ್ರುತೇಃ ಪ್ರತ್ಯುತ ಬಾಧಿಕಾ ಸ್ಯಾತ್ || ೧೨೮

ಶ್ರೀಶಂಕರ–ವ್ಯವಹಾರಸಿದ್ಧವಾದ ದ್ವೈತವನ್ನು ಅನುವಾದ ಮಾಡುತ್ತಿರುವ ಈ ಶ್ರುತಿಯು ಅದ್ವೈತಪರವಾದ ಶ್ರುತಿಯನ್ನು ಬಾಧಿಸುವುದಿಲ್ಲ. ಅಪೂರ್ವವಾದ ಅಜ್ಞಾತವಿಷಯವನ್ನು ಬೋಧಿಸುವ ಅದ್ವೈತಶ್ರುತಿಯೇ ಬಲಿಷ್ಠವಾದದ್ದು. ಅದಕ್ಕೆ ಪ್ರತಿಯಾಗಿ (ಗೊತ್ತಿರುವುದನ್ನೇ ಹೇಳುವ) ಭೇದಶ್ರುತಿಗೆ ಅದ್ವೈತಶ್ರುತಿಯೇ ಬಾಧಕವಾಗಿ ಬಿಡುತ್ತದೆ.

ಮಾನಾಂತರೋಪೋದ್ಬಲಿತಾ ಹಿ ಭೇದ-
ಶ್ರುತಿರ್ಬಲಿಷ್ಠಾ ಯಮಿನಾಂ ವರೇಣ್ಯ |
ತದ್ಬಾಧಿತುಂ ಸಾ ಪ್ರಭವತ್ಯಭೇದ-
ಶ್ರುತಿಂ ಪ್ರಮಾಣಾಂತರಬಾಧಿತಾರ್ಥಾಮ್ || ೧೨೯

ಮಂಡನ–ಯತಿವರೇಣ್ಯರೆ, ಪ್ರತ್ಯಕ್ಷವೆಂಬ ಪ್ರಮಾಣಾಂತರದಿಂದ ಪೋಷಿತವಾಗಿ ಭೇದಶ್ರುತಿಯು ಹೆಚ್ಚು ಪ್ರಬಲವಾಗುತ್ತದೆ. ಅದು ಅಭೇದಶ್ರುತಿಯನ್ನು ಬಾಧಿಸುತ್ತದೆ. ಏಕೆಂದರೆ, ಪ್ರತ್ಯಕ್ಷ ಪ್ರಮಾಣಕ್ಕೆ ವಿರುದ್ಧವಾದ್ದನ್ನು ಹೇಳುವುದರಿಂದ ಅಭೇದ ಶ್ರುತಿಯು ದುರ್ಬಲ!

ಪ್ರಾಬಲ್ಯಮಾಪಾದಯತಿ ಶ್ರುತೀನಾಂ
ಮಾನಾಂತರಂ ನೈವ ಬುಧಾಗ್ರಯಾಯಿನ್ |
ಗತಾರ್ಥತಾದಾನಮುಖೇನ ತಾಸಾಂ
ದೌರ್ಬಲ್ಯಸಂಪಾದಕಮೇವ ಕಿಂತು || ೧೩೦

ಶ್ರೀಶಂಕರ–ಬುಧವರೇಣ್ಯ, ಶ್ರುತಿಗಳಿಗೆ ಪ್ರಮಾಣಾಂತರವು ಬಲವನ್ನು ಕೊಡುವುದಿಲ್ಲ. ಅದಕ್ಕೆ ವಿರುದ್ಧವಾಗಿ, ಪ್ರಮಾಣಾಂತರವು ತನ್ನಿಂದ ಗತಾರ್ಥವಾಯಿತೆಂದು ಅಂತಹ ಶ್ರುತಿಗಳಿಗೆ ದೌರ್ಬಲ್ಯವನ್ನೇ ತಂದು ಬಿಡುತ್ತದೆ.

ವಿವರಣೆ:- ಪ್ರತ್ಯಕ್ಷೇಣಾನುಮಿತ್ಯಾ ವಾ ಯಸ್ತೂಪಾಯೋ ನ ಬುಧ್ಯತೇ|
ಏನಂ ವಿದಂತಿ ವೇದೇನ ತಸ್ಮಾದ್ವೇದಸ್ಯ ವೇದತಾ || ಎಂದು ಪ್ರಾಮಾಣಿಕರ ಉಕ್ತಿ ಇದೆ. ಪ್ರತ್ಯಕ್ಷದಿಂದಾಗಲಿ ಅನುಮಿತಿಯಿಂದಾಗಲಿ ಯಾವ ಮಾರ್ಗವು ಗೊತ್ತಾಗುವುದಿಲ್ಲವೋ ಅದನ್ನು ವೇದದಿಂದ ತಿಳಿಯುತ್ತಾರೆ. ಆದ್ದರಿಂದ ವೇದಕ್ಕೆ ವೇದತ್ವ ಬಂದಿದೆ. ವೇದಯತೀತಿ ವೇದಃ = ಅಜ್ಞಾತವಾದ್ದನ್ನು ತಿಳಿಸುವುದರಿಂದ ವೇದವೆಂದು ಶಬ್ದದ ವ್ಯುತ್ಪತ್ತಿ. ಶಾಸ್ತ್ರವು ಅಜ್ಞಾತಜ್ಞಾಪಕವಾಗಿದ್ದರೆ ಮಾತ್ರ ಪ್ರಮಾಣವಾಗುತ್ತದೆ.

ಇತ್ಯಾದ್ಯಾ ದೃಢಯುಕ್ತಿರಸ್ಯ ಶುಶುಭೇ ದತ್ತಾನುಮೋದಾ ಗಿರಾಂ
ದೇವ್ಯಾ ತಾದೃಶ ವಿಶ್ವರೂಪರಭಸಾವಷ್ಟಂಭಮುಷ್ಟಿಂಧಯಾ |
ಭರ್ತೃನ್ಯಾಸವಿಲಕ್ಷ್ಯಸೂಕ್ತಿಜನನೀಸಾಕ್ಷಿತ್ವ ಕುಕ್ಷಿಂಭರಿಃ
ಸಶ್ಲಾಘಾದ್ಭುತ ಪುಷ್ಪವೃಷ್ಟಿ ಲಹರೀಸೌಗಂಧ್ಯ ಪಾಣಿಂಧಯಾ || ೧೩೧

ಈ ಪ್ರಕಾರವಾಗಿ ಶ್ರೀಶಂಕರಭಗವತ್ಪಾದರು ವಾದಸಂದರ್ಭದಲ್ಲಿ ಹೇಳಿದ ಇವೇ ಮೊದಲಾದ ದೃಢಯುಕ್ತಿಯು ವಾಗ್ದೇವಿಯಾದ ಉಭಯಭಾರತಿಯ ಮೆಚ್ಚುಗೆಯನ್ನು ಗಳಿಸಿ ಶೋಭಿಸಿತು. ಅಷ್ಟು ಅದ್ವಿತೀಯ ಪಂಡಿತೋತ್ತಮನೆನಿಸಿದ ವಿಶ್ವರೂಪನು (ಮಂಡನಮಿಶ್ರನು) ರಭಸದಿಂದಾಡುತ್ತಿದ್ದ ಅಹಂಕಾರದ ಪ್ರತ್ಯುತ್ತರವನ್ನು ಆಚಾರ್ಯರ ಯುಕ್ತಿಯು ನುಂಗಿ ನೊಣೆಯಿತು. ತನ್ನ ಪತಿಯು ಸಂನ್ಯಾಸವನ್ನು ಸ್ವೀಕರಿಸಬೇಕಾಗಿ ಬರುವುದೆಂದು ಮುಖಮ್ಲಾನತೆಯಿಂದ ಉಭಯಭಾರತಿಯು ಆಡಲಿರುವ ಚತುರೋಕ್ತಿಗೆ ಅದು ನಿಮಿತ್ತವಾಯಿತು. ಆಕೆಯ ಸಂಪೂರ್ಣ ಸಾಕ್ಷ್ಯವನ್ನು ಆಚಾರ್ಯರ ವಚನವು ಪಡೆದು ಕೊಂಡಿತ್ತು. ಅಲ್ಲದೆ ಪ್ರಶಂಸಾಪೂರ್ವಕವಾಗಿ (ದೇವತೆಗಳು) ಸುರಿಸಿದ ಪುಷ್ಪ ವೃಷ್ಟಿ ಪ್ರವಾಹದ ಪರಿಮಳವನ್ನೂ ಆಚಾರ್ಯರ ವಾದವು ಪಡೆದುಕೊಂಡಿತು.

ಟಿಪ್ಪಣಿ:ಮುಷ್ಟಿಂಧಯಾ = ಧೇಟ್-ಪಾನೇ ಎಂಬ ಧಾತುವಿಗೆ' ನಾಡೀಮುಷ್ಟ್ಯೋಶ್ಚ' ಎಂಬ ಸೂತ್ರದಿಂದ ಖಶ್‌ಪ್ರತ್ಯಯ. 'ಅರುರ್ದ್ವಿಷದಜಂತಸ್ಯ ಮುಮ್' ಎಂಬ ಸೂತ್ರದಿಂದ ಮುಷ್ಟಿಶಬ್ದಕ್ಕೆ ಮುಮಾಗಮ. ಪಾಣಿಂಧಯಾ = ಈ ಶಬ್ದವು ವ್ಯಾಕರಣದಿಂದ ಸಿದ್ಧವಾಗುವುದಿಲ್ಲ, ಪಾಣಿಂಧಮಾ ಎಂದು ಪಾಠವಿದ್ದರೆ ಉತ್ತಮ.'ಉಗ್ರಂಪಶ್ಯೇರಂಮದ ಪಾಣಿಂಧಮಾಶ್ಚ' ಎಂಬ ಸೂತ್ರದಿಂದ ಈ ಶಬ್ದವು ನಿಪಾತಿತವಾಗಿದೆ. ಪಾಣಿಂಧಮ = ಚಪ್ಪಾಳೆ. ಆಚಾರ್ಯರ ಯುಕ್ತಿಯು ಪುಷ್ಪವೃಷ್ಟಿಯ ಪರಿಮಳವನ್ನೂ ಚಪ್ಪಾಳೆಯನ್ನೂ ಪಡೆಯಿತು-ಎಂದರ್ಥ
ಕುಕ್ಷಿಂಭರಿಃ = 'ಫಲೇಗ್ರಹಿರಾತ್ಮಂಭರಿಶ್ಚ' ಚಾತ್ ಕುಕ್ಷಿಂಭರಿಃ(ಸಿ. ಕೌಮುದೀ).

ಇತ್ಥಂ ಯತಿಕ್ಷಿತಿಪತೇರನುಮೋದ್ಯ ಯುಕ್ತಿಂ
ಮಾಲಾಂ ಚ ಮಂಡನಗಲೇ ಮಲಿನಾಮವೇಕ್ಷ್ಯ |
ಭಿಕ್ಷಾರ್ಥಮುಚ್ಚಲತಮದ್ಯ ಯುವಾಮಿತೀಮಾ -
ವಾಚಷ್ಟ ತಂ ಪುನರುವಾಚ ಯತೀಂದ್ರಮಂಬಾ || ೧೩೨

ಈ ಪ್ರಕಾರವಾಗಿ ಯತಿವರೇಣ್ಯರ ಯುಕ್ತಿವಿಧಾನವನ್ನು ಶಾರದಾಂಬೆಯು ಅನುಮೋದಿಸಿ, ಮಂಡನಪಂಡಿತನ ಕೊರಳಲ್ಲಿದ್ದ ಪುಷ್ಪಮಾಲೆಯು ಬಾಡಿಹೋದದ್ದನ್ನೂ ನೋಡಿ ಅವರಿಬ್ಬರನ್ನೂ ಕುರಿತು"ಇನ್ನು ನೀವಿಬ್ಬರೂ ಭಿಕ್ಷೆಯನ್ನು ಸ್ವೀಕರಿಸುವುದಕ್ಕೆ ಏಳಿರಿ!"ಎಂದಳು. ಮತ್ತೆ ಶ್ರೀಶಂಕರರನ್ನು ನೋಡಿ ಹೀಗೆಂದಳು-

ಕೋಪಾತಿರೇಕವಶತಃ ಶಪತಾ ಪುರಾ ಮಾಂ
ದುರ್ವಾಸಸಾ ತದವಧಿರ್ವಿಹಿತೋ ಜಯಸ್ತೇ |
ಸಾಽಹಂ ಯಥಾಗತಮುಪೈಮಿ ಶಮಿಪ್ರವೀರೇ -
ತ್ಯುಕ್ತ್ವಾ ಸಸಂಭ್ರಮಮಮುಂ ನಿಜಧಾಮ ಯಾಂತೀಮ್ || ೧೩೩

"ಹಿಂದೊಮ್ಮೆ ದುರ್ವಾಸಮುನಿಯು ಕೋಪಾತಿರೇಕಕ್ಕೆ ಒಳಗಾಗಿ ನನ್ನನ್ನು ಶಪಿಸಿ, ಯತೀಂದ್ರರೆ, ನೀವು ಗಳಿಸುವ ಜಯವೇ ಆ ಶಾಪಕ್ಕೆ ಅವಧಿಯೆಂದು ವಿಧಿಸಿದ್ದನು. ಇನ್ನು ನಾನು ಬಂದ ಹಾಗೆ ಹಿಂದಿರುಗುವೆನು"ಎಂದು ನುಡಿದು ತನ್ನ ಲೋಕಕ್ಕೆ ಹೋಗಲು ಸಜ್ಜಾದಳು.

ಬಬಂಧ ನಿಶ್ಶಂಕಮರಣ್ಯದುರ್ಗಾ-
ಮಂತ್ರೇಣ ತಾಂ ಜೇತುಮನಾ ಮುನೀಂದ್ರಃ |
ಜಯೋಽಪಿ ತಸ್ಯಾಃ ಸ್ವಮತೈಕ್ಯಸಿದ್ಧ್ಯೈ
ಸಾರ್ವಜ್ಞ್ಯತಃ ಸ್ವಸ್ಯ ನ ಮಾನಹೇತೋಃ || ೧೩೪

ಒಡನೆಯೇ ಮುನೀಂದ್ರರಾದ ಶ್ರೀಶಂಕರರು ಅವಳನ್ನು ವಾದದಲ್ಲಿ ಜಯಿಸಬೇಕೆಂದು ಉದ್ದೇಶಿಸಿ, ಸಂಕೋಚವಿಲ್ಲದೆ ವನದುರ್ಗಾಮಂತ್ರದಿಂದ ಬಂಧಿಸಿ, ಹೋಗದಂತೆ ತಡೆದರು. ಅವರಿಗೆ ಸರಸ್ವತೀದೇವಿಯ ಸಂಮತಿಯನ್ನು ಗಳಿಸಿ ತಮ್ಮ ಸಿದ್ಧಾಂತವು ಏಕತೆಯನ್ನು ಪಡೆಯಲಿ-ಎಂಬುದು ಜಯಿಸುವ ಉದ್ದೇಶವಾಗಿತ್ತೇ ಹೊರತು, ತಾವು ಸರ್ವಜ್ಞರೆಂದು ಸ್ಥಾಪಿಸಿ ಮನ್ನಣೆಯನ್ನು ಗಳಿಸುವುದಾಗಿರಲಿಲ್ಲ.

ಜಾನಾಮಿ ದೇವೀಂ ಭವತೀಂ ವಿಧಾತುಃ
ದೇವಸ್ಯ ಭಾರ್ಯಾಂ ಪುರಭಿತ್ಸಗರ್ಭ್ಯಾಮ್ |
ಉಪಾತ್ತಲಕ್ಷ್ಮ್ಯಾದಿ ವಿಚಿತ್ರರೂಪಾಂ
ಗುಪ್ತ್ಯೈ ಪ್ರಪಂಚಸ್ಯ ಕೃತಾವತಾರಾಮ್ || ೧೩೫

ಅನಂತರ ಆಚಾರ್ಯರು "ದೇವಿ, ನೀನು ಬ್ರಹ್ಮದೇವನ ಪತ್ನಿಯಾದ ಶಾರದಾದೇವಿಯೆಂಬುದನ್ನೂ ತ್ರಿಪುರಾರಿಯಾದ ಮಹೇಶ್ವರನ ಸಹೋದರಿ ಎಂಬುದನ್ನೂ ನಾನು ಬಲ್ಲೆನು. ಲಕ್ಷ್ಮೀದೇವಿಯೇ ಮೊದಲಾದ ವಿಭಿನ್ನಸ್ವರೂಪಳಾಗಿರುವೆಯೆಂದೂ ಪ್ರಪಂಚದ ರಕ್ಷಣೆಗಾಗಿ ಅವತರಿಸುತ್ತೀಯೆ"ಎಂಬುದನ್ನೂ ತಿಳಿದಿದ್ದೇನೆ.

ವ್ರಜ ಜನನಿ ತದಾ ತ್ವಂ ಭಕ್ತಚೂಡಾಮಣಿಸ್ತೇ
ನಿಜಪದಮನುದಾಸ್ಯಾಮ್ಯಭ್ಯನುಜ್ಞಾಂ ಯದೈತುಮ್ |
ಇತಿ ನಿಜವಚನೇಽಸ್ಮಿನ್ ಶಾರದಾಸಂಮತೇಽಸೌ
ಮುನಿರಥ ಮುದಿತೋಽಭೂನ್ಮಂಡನಂ ಹೃದ್ಬುಭುತ್ಸುಃ || ೧೩೬

"ತಾಯಿ, ನಿನ್ನ ಪರಮಭಕ್ತನಾದ ನಾನು, ನಿನ್ನ ಧಾಮಕ್ಕೆ ಹೋಗಲು ಸಂಮತಿಸಿದ ಮೇಲೆ ತೆರಳುವಂಥವಳಾಗು"ಎಂದು ಪ್ರಾರ್ಥಿಸಿದರು. ಅದಕ್ಕೆ ಶಾರದಾ ದೇವಿಯು ಸಂಮತಿಸಲಾಗಿ ಶ್ರೀಶಂಕರ ಮುನಿಗಳಿಗೆ ಆನಂದವಾಯಿತು. ಅವರು ಮಂಡನ ಪಂಡಿತನ ಹೃದಯವೇನೆಂದು ತಿಳಿಯಲು ಬಯಸಿದರು.

ಟಿಪ್ಪಣಿ:ಸರಸ್ವತಿಯು ಶಿವನ ಸಹೋದರಿಯೆಂದೂ ಅವಳೇ ಮಹಾಲಕ್ಷ್ಮಿಯೆಂದೂ ಪುರಾಣಗಳಲ್ಲಿ ವರ್ಣನೆ ಇದೆ.

ಇತಿ ಶ್ರೀ ಮಾಧವೀಯೇ ತನ್ಮಂಡನಾರ್ಯಕಥಾಪರಃ |
ಸಂಕ್ಷೇಪ ಶಂಕರಜಯೇ ಸರ್ಗೋಽಸಾವಷ್ಟಮೋಽಭವತ್ ||

ಇಲ್ಲಿಗೆ ಶ್ರೀಮಾಧವೀಯ ಸಂಕ್ಷೇಪ ಶಂಕರವಿಜಯದಲ್ಲಿ ಮಂಡನಪಂಡಿತನ ವಾದಕಥೆಯನ್ನು ನಿರೂಪಿಸುವ ಎಂಟನೆಯ ಸರ್ಗವು ಸಮಾಪ್ತವಾಯಿತು

✣ ✣ ✣

ನವಮಃ ಸರ್ಗಃ

ಶ್ರೀಮದಾಚಾರ್ಯ ಸರಸ್ವತೀ ಸಂವಾದಃ

ಜೈಮಿನಿಮಹರ್ಷಿಗಳ ಸಿದ್ಧಾಂತವು ದೂಷಿತವಾಯಿತೆಂದು ಮಂಡನ ಪಂಡಿತನ ವ್ಯಥೆ. ಆಚಾರ್ಯರು ಅದಕ್ಕೆ ಹೇಳಿದ ಸಮಾಧಾನವನ್ನು ಜೈಮಿನಿಮುನಿಗಳು ಅನುಮೋದಿಸುವುದು. ಮಂಡನನು ಆಚಾರ್ಯರನ್ನು ಸ್ತುತಿಸುವುದು. ಉಭಯಭಾರತಿಯು ಕಾಮಶಾಸ್ತ್ರದಲ್ಲಿ ಪ್ರಶ್ನೆಯನ್ನೆತ್ತುವುದು. ಶ್ರೀಶಂಕರರು ಉತ್ತರಹೇಳಲು ಅವಧಿಯನ್ನು ಪಡೆದು ನಿರ್ಗಮಿಸುವುದು. ಮೃತನಾಗಿದ್ದ ಅಮರುಕರಾಜನ ಶರೀರದಲ್ಲಿ ಯೋಗಶಕ್ತಿಯಿಂದ ಅನುಪ್ರವೇಶ.

ಅಥ ಸಂಯಮಿಕ್ಷಿತಿಪತೇರ್ವಚನೈ-
ರ್ನಿಗಮಾರ್ಥನಿರ್ಣಯಕರೈಃ ಸನಯೈಃ ।
ಶಮಿತಾಗ್ರಹೋಽಪಿ ಪುನರಪ್ಯವದತ್
ಕೃತಸಂಶಯಃ ಸಪದಿ ಕರ್ಮಜಡಃ ॥ ೧

ಈ ಪ್ರಕಾರವಾಗಿ ವಿವಿಧ ನ್ಯಾಯಸಹಿತವಾದ ವೇದಾರ್ಥನಿರ್ಣಯಕರಗಳಾದ ಯತೀಶ್ವರರ ವಚನಗಳಿಂದ ಮಂಡನಮಿಶ್ರನಿಗೆ ಕರ್ಮವಾದದಲ್ಲಿದ್ದ ಆಗ್ರಹವು ಶಾಂತವಾಯಿತು. ಆದರೂ ಕರ್ಮಜಡನಾದ ಆತನು ಸಂಶಯಗ್ರಸ್ತನಾಗಿ ಮತ್ತೆ ಹೀಗೆಂದನು:

ಯತಿರಾಜ ಸಂಪ್ರತಿ ಮಮಾಭಿನವಾತ್
ನ ವಿಷಾದಿತೋಽಸ್ಮ್ಯಪಜಯಾದಪಿ ತು ।
ಅಪಿ ಜೈಮಿನೀಯ ವಚನಾನ್ಯಹಹೋ-
ನ್ಮಥಿತಾನಿ ಹೀತಿ ಭೃಶಮಸ್ಮಿ ಕೃಶಃ ॥ ೨

"ಹೇ ಯತಿರಾಜರೇ, ನನಗೆ ಹೊಸದಾಗಿ ಒದಗಿದ ಈ ಮೊದಲನೆಯ ಅಪಜಯದಿಂದ ಈಗ ವಿಷಾದವೇನೂ ಆಗಿಲ್ಲ. ಆದರೆ ಜೈಮಿನಿ ಮಹರ್ಷಿಗಳ ಉಕ್ತಿಗಳೂ ಸಹ ಖಂಡಿಸಲ್ಪಟ್ಟವು. ಅಯ್ಯೋ!ಎಂದು ಬಹಳ ದೀನನಾಗಿದ್ದೇನೆ.

ಸ ಹಿ ವೇತ್ತ್ಯನಾಗತಮತೀತಮಪಿ
ಪ್ರಿಯಕೃತ್ಸಮಸ್ತ ಜಗತೋಽಧಿಕೃತಃ ।
ನಿಗಮ ಪ್ರವರ್ತನವಿಧೌ ಸ ಕಥಂ
ತಪಸಾಂ ನಿಧಿರ್ವಿತಥಸೂತ್ರಪದಃ ॥ ೩

ಜೈಮಿನಿ ಮುನಿಗಳಾದರೋ ಸಮಸ್ತ ಜಗತ್ತಿಗೂ ಹಿತಕಾರಿಗಳೆಂದೂ ಭೂತಭವಿಷ್ಯತ್ತುಗಳನ್ನು ತಿಳಿದವರೆಂದೂ ಪ್ರಸಿದ್ಧರಾಗಿದ್ದಾರೆ. ವೇದವನ್ನು ನೆಲೆಗೊಳಿಸುವ ಕಾರ್ಯದಲ್ಲಿ

ಅಧಿಕೃತರಾದವರು. ತಪೋನಿಧಿಗಳು. ಅವರ ಸೂತ್ರರಚನೆಯು ವ್ಯರ್ಥವಾಗಿ ಹೋಯಿತಲ್ಲ!"ಎಂದನು.

ಇತಿ ಸಂದಿಹಾನಮವದತ್ತಮಸೌ
ನ ಹಿ ಜೈಮಿನಾವಪನಯೋಽಸ್ತಿ ಮನಾಕ್ |
ಪ್ರಮಿಮೀಮಹೇ ನ ವಯಮೇವ ಮುನೇಃ
ಹೃದಯಂ ಯಥಾವದನಭಿಜ್ಞತಯಾ || ೪

ಹೀಗೆ ಸಂದೇಹಪಡುತ್ತಿದ್ದ ಮಂಡನನನ್ನು ಕುರಿತು ಆಚಾರ್ಯರು "ಜೈಮಿನಿಮುನಿಗಳು ಸ್ವಲ್ಪವಾದರೂ ತಪ್ಪನ್ನು ಮಾಡಿಯೇ ಇಲ್ಲ. ನಾವೇ ಯಥಾಸ್ಥಿತಿಯನ್ನು ಅರಿಯದಿರುವುದರಿಂದ ಆ ಮುನಿಗಳ ಹೃದಯವೇನೆಂಬುದನ್ನು ತಿಳಿಯಲಾರದೇ ಇದ್ದೇವೆ"ಎಂದರು.

ಯದಿ ವಿದ್ಯತೇ ಕವಿಜನಾವಿದಿತಂ
ಹೃದಯಂ ಮುನೇಸ್ತದಿಹ ವರ್ಣಯ ಭೋಃ |
ಯದಿ ಯುಕ್ತಮತ್ರ ಭವತಾ ಕಥಿತಂ
ಹೃದಿ ಕುರ್ಮಹೇ ದಲದಹಂಕೃತಯಃ || ೫

ಆಗ ಮಂಡನನು "ಸ್ವಾಮಿ, ಆ ಮುನಿಗಳ ಹೃದಯವು ವಿದ್ವಾಂಸರಿಗೂ ಗೊತ್ತಿಲ್ಲದೆ ಹೋಗಿದೆ ಎಂದಾದರೆ ಅದೇನೆಂಬುದನ್ನು ವರ್ಣಿಸಿರಿ. ಈ ವಿಷಯದಲ್ಲಿ ನೀವು ಹೇಳುವುದು ಯುಕ್ತವಾಗಿದ್ದರೆ, ನಾವು ಅಹಂಕಾರವನ್ನು ಬಿಟ್ಟು ಅದನ್ನು ಹೃದಯಪೂರ್ವಕವಾಗಿ ಸ್ವೀಕರಿಸುತ್ತೇವೆ"ಎಂದನು.

ಅಭಿಸಂಧಿಮಾನಪಿ ಪರೇ ವಿಷಯ-
ಪ್ರಸರನ್ಮತೀನನುಜಿಘೃಕ್ಷುರಸೌ |
ತದವಾಪ್ತಿಸಾಧನತಯಾ ಸಕಲಂ
ಸುಕೃತಂ ನ್ಯರೂಪಯದಿತಿ ಸ್ಮ ಪರಮ್ || ೬

ಆಗ ಆಚಾರ್ಯರು ಹೇಳಿದ್ದೇನೆಂದರೆ- "ಪರಬ್ರಹ್ಮದಲ್ಲಿ ಜೈಮಿನಿಮುನಿಗಳಿಗೆ ಸಮ್ಮತವಾದ ಅಭಿಪ್ರಾಯವಿದ್ದರೂ ವಿಷಯಸುಖಗಳಲ್ಲಿ ಆಸಕ್ತಿಯುಳ್ಳವರನ್ನು ಅನುಗ್ರಹಿಸುವುದಕ್ಕಾಗಿ ಅವರು ಹಾಗೆ ಹೇಳಿದ್ದಾರೆ. ಸ್ವರ್ಗಾದಿ ಸುಖವನ್ನು ಪಡೆಯಲು ಸಾಧನವೆಂದು ಕರ್ಮಕೃತವಾದ ಸಕಲ ಪುಣ್ಯವಿಚಾರವನ್ನೂ ಹೇಳಿದ್ದಾರೆ, ಅಷ್ಟೆ."

ವಚನಂ ತಮೇತಮಿತಿ ಧರ್ಮಚಯಂ
ವಿದಧಾತಿ ಬೋಧಜನಹೇತುತಯಾ |

ತದಪೇಕ್ಷಯೈವ ಸ ಚ ಮೋಕ್ಷಪರೋ
ನಿರಧಾರಯನ್ನ ಪರಥೇತಿ ವಯಮ್ ॥ ೭

'ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ | ಯಜ್ಞೇನ ದಾನೇನ ತಪಸಾಽನಾಶಕೇನ' ಎಂಬ ವೇದವಚನವು ಪರಬ್ರಹ್ಮಜ್ಞಾನಕ್ಕೆ ಕಾರಣವಾದ ನಾನಾಧರ್ಮವನ್ನು ವಿಧಿಸುತ್ತದೆ. ಧರ್ಮರೂಪವಾದ ಕರ್ಮದ ಮೂಲಕವೇ ಮೋಕ್ಷವನ್ನು ಪಡೆಯ ಬಹುದೆಂದು ತಿಳಿಸುವ ಜೈಮಿನಿಮುನಿಗಳು ಕರ್ಮವನ್ನು ಮಾಡಬೇಕೆಂದು ನಿರ್ಧರಿಸಿದರೇ ಹೊರತು ಬೇರೆ ಅಲ್ಲ- ಎಂದು ನಾವು ಹೇಳುತ್ತೇವೆ- ಎಂದು ಉತ್ತರಿಸಿದರು.

ಶ್ರುತಯಃ ಕ್ರಿಯಾರ್ಥಕತಯಾ ಸಫಲಾ
ಅತದರ್ಥಕಾನಿ ತು ವಚಾಂಸಿ ವೃಥಾ |
ಇತಿ ಸೂತ್ರಯನ್ನನು ಕಥಂ ಮುನಿರಾಟ್
ಅಪಿ ಸಿದ್ಧವಸ್ತುಪರತಾಂ ಮನುತೇ ॥ ೮

ಆಗ ಮಂಡನಮಿಶ್ರನು "ಶ್ರುತಿವಾಕ್ಯಗಳು ಕರ್ಮಪರವಾಗಿದ್ದರೆ ಮಾತ್ರ ಸಫಲವಾಗಿ ಸಾರ್ಥಕವಾಗುತ್ತವೆ. ಕರ್ಮವನ್ನು ಬೋಧಿಸದ ವಾಕ್ಯಗಳು ಅರ್ಥರಹಿತಗಳು-ಎಂದು ಭಾವಿಸಿ 'ಆಮ್ನಾಯಸ್ಯ ಕ್ರಿಯಾರ್ಥತ್ವಾತ್‌ಆನರ್ಥಕ್ಯಮತದರ್ಥಾನಾಂ' ಎಂದು ಸೂತ್ರಿಸಿದ್ದಾರೆ. ಅಲ್ಲವೇ? ಅಂತಹ ಜೈಮಿನಿ ಮುನೀಶ್ವರರು ವೇದವಚನಗಳಿಗೆ ಸಿದ್ಧವಸ್ತು ಪರತ್ವವನ್ನು ಹೇಗೆ ತಿಳಿದಾರು?"ಎಂದುಕೇಳಿದನು.

ಟಿಪ್ಪಣಿ:ಕರ್ಮವು ಎಂದರೆ ಕ್ರಿಯೆಯು ಯಾವಾಗಲೂ ಸಾಧ್ಯವಾಗಿರುತ್ತದೆ. ವೇದವು ಸಾಧ್ಯವಾದ ಕ್ರಿಯೆಯನ್ನು ಬೋಧಿಸುತ್ತದೆ. ಪರಬ್ರಹ್ಮವಾದರೋ ಸಿದ್ಧವಸ್ತು. ಅದನ್ನು ಬೋಧಿಸುತ್ತದೆ ಎಂಬುದು ಜೈಮಿನಿ ಸೂತ್ರಕ್ಕೆ ವಿರುದ್ಧವೆಂದು ಅಭಿಪ್ರಾಯ.

ಶ್ರುತಿರಾಶಿರದ್ವಯಪರೋಽಪಿ ಪರಂ-
ಪರಯಾತ್ಮಬೋಧಫಲಕರ್ಮಣಿ ಚ |
ಪ್ರಸರತ್ಕಟಾಕ್ಷ ಇತಿ ಕಾರ್ಯಪರ-
ತ್ವಮಸೂಚಿ ತತ್ಪ್ರಕರಣಸ್ಥಗಿರಾಮ್ ॥ ೯

ಅದಕ್ಕೆ ಶ್ರೀ ಶಂಕರರು "ಶ್ರುತಿರಾಶಿಯು ಅದ್ವೈತವಾದ ಪರಬ್ರಹ್ಮದ ಪರವೇ. ಆದರೂ ಆತ್ಮಜ್ಞಾನವೆಂಬ ಫಲವನ್ನು ಕೊಡುವ ಕರ್ಮದಲ್ಲಿಯೂ ಪರಂಪರೆಯಿಂದ ಶ್ರುತಿಗೆ ಕಟಾಕ್ಷವಿದೆ - ಎಂಬ ಅಭಿಪ್ರಾಯದಿಂದ ಶ್ರುತಿಯು ಕರ್ಮಪರವೆಂದು ಜೈಮಿನಿ ಮುನಿಗಳು ಸೂಚಿಸಿದ್ದಾರೆ. ಕರ್ಮಕಾಂಡದಲ್ಲಿರುವ ವಾಕ್ಯಗಳಿಗೆ ಮಾತ್ರ ಹಾಗೆ ಅರ್ಥವನ್ನು ಹೇಳಿದ್ದಾರೆ"ಎಂದು ತಿಳಿಸಿದರು.

ಕಟಾಕ್ಷವಿದೆ - ಎಂಬ ಅಭಿಪ್ರಾಯದಿಂದ ಶ್ರುತಿಯು ಕರ್ಮಪರವೆಂದು ಜೈಮಿನಿ ಮುನಿಗಳು ಸೂಚಿಸಿದ್ದಾರೆ. ಕರ್ಮಕಾಂಡದಲ್ಲಿರುವ ವಾಕ್ಯಗಳಿಗೆ ಮಾತ್ರ ಹಾಗೆ ಅರ್ಥವನ್ನು ಹೇಳಿದ್ದಾರೆ"ಎಂದು ತಿಳಿಸಿದರು.

ಟಿಪ್ಪಣಿ:ಕರ್ಮವನ್ನು ಮಾಡುವುದರಿಂದ ಚಿತ್ತಶುದ್ಧಿಯಾಗಿ ವೈರಾಗ್ಯ ಹುಟ್ಟುತ್ತದೆ. ಆದ್ದರಿಂದ ಬ್ರಹ್ಮಜ್ಞಾನಕ್ಕೆ ಕರ್ಮವು ಪರಂಪರೆಯಿಂದ ಕಾರಣವೆಂದು ಅಭಿಪ್ರಾಯ.

ನನು ಸಚ್ಚಿದಾತ್ಮಪರತಾಽಭಿಮತಾ
ಯದಿ ಕೃತ್ಸ್ನವೇದ ನಿಚಯಸ್ಯ ಮುನೇಃ |
ಫಲದಾತೃತಾಮಪುರುಷಸ್ಯ ವದನ್
ಸ ಕಥಂ ನಿರಾಹ ಪರಮೇಶಮಪಿ || ೧೦

ಆಗ ಮಂಡನಮಿಶ್ರನು"ಸಮಸ್ತ ವೇದರಾಶಿಗೂ ಸಚ್ಚಿದಾತ್ಮಪರತ್ವವೇ ಸರಿಯೆಂದು ಜೈಮಿನಿ ಮುನಿಗಳಿಗೆ ಒಪ್ಪಿಗೆಯಾಗಿದ್ದರೆ ಆಗ'ಕರ್ಮಫಲದಾತೃತ್ವವು ಈಶ್ವರನಿಗಿಲ್ಲ. ಕರ್ಮಕ್ಕೆ ಇದೆ'- ಎಂನು ಅವರು ಹೇಗೆ ಹೇಳಿದರು?ಅಂತೆಯೇ ಪರಮೇಶ್ವರನು ಇಲ್ಲವೆಂದು ಹೇಗೆ ನಿರಾಕರಿಸಿದರು?"ಎಂದನು.

ನನು ಕರ್ತೃಪೂರ್ವಕಮಿದಂ ಜಗದಿ-
ತ್ಯನುಮಾನಮಾಗಮವಚಾಂಸಿ ವಿನಾ |
ಪರಮೇಶ್ವರಂ ಪ್ರಥಯತಿ ಶ್ರುತಯ-
ಸ್ತ್ವನುವಾದಮಾತ್ರಮಿತಿ ಕಾಣಭುಜಾಃ || ೧೧

ಆಗ ಭಗವತ್ಪಾದರು ಹೇಳಿದ್ದೇನೆಂದರೆ "ಕಣಾದಶಿಷ್ಯರಾದ ತಾರ್ಕಿಕರ ಮತ ಹೀಗಿದೆ -ಈ ಜಗತ್ತು ಒಬ್ಬ ಕರ್ತೃವಿನಿಂದ ನಿರ್ಮಿತವಾಗಿದೆ. ಇದನ್ನು ನಿರ್ಮಿಸುವ ಕರ್ತೃ ಈಶ್ವರನೇ ಸರಿ ಎಂದು ಅನುಮಾನ ಪ್ರಯೋಗದಿಂದ ಈಶ್ವರನಿದ್ದಾನೆಂದು ಸಾಧಿಸಬಹುದು. ವೇದವಾಕ್ಯಗಳು ಬೇಕಾಗಿಲ್ಲ. ಈಶ್ವರನಿದ್ದಾನೆಂದು ಹೇಳುವ ವೇದಗಳು ಕೇವಲ ಅನುವಾದ ಮಾತ್ರ"ಎಂದು ಹೇಳುತ್ತಾರಲ್ಲವೆ?

ನ ಕಥಂಚಿದೌಪನಿಷದಂ ಪುರುಷಂ
ಮನುತೇ ಬೃಹಂತಮಿತಿ ವೇದವಚಃ |
ಕಥಯತ್ಯವೇದವಿದಗೋಚರತಾಂ
ಗಮಯೇತ್ ಕಥಂ ತಮನುಮಾನಮಿದಮ್ || ೧೨

ಇತಿ ಭಾವಮಾತ್ಮನಿ ನಿಧಾಯ ಮುನಿಃ
ಸ ನಿರಾಕರೋನ್ನಿಶಿತಯುಕ್ತಿಶತೈಃ |
ಅನುಮಾನಮೀಶ್ವರಪರಂ ಜಗತಃ
ಪ್ರಭವಂ ಲಯಂ ಫಲಮಪೀಶ್ವರತಃ || ೧೩

ಈ ಅಭಿಪ್ರಾಯವನ್ನು ಹೃದಯದಲ್ಲಿಟ್ಟುಕೊಂಡು ಆ ಮುನಿಗಳು ಹರಿತವಾದ ನೂರಾರು ಯುಕ್ತಿಗಳಿಂದ ಈಶ್ವರನಿಲ್ಲವೆಂದು ನಿರಾಕರಿಸಿದರು. ಜಗತ್ತು ಈಶ್ವರನಿಂದ ಹುಟ್ಟಿದೆ. ಅವನಲ್ಲಿ ಲಯವಾಗುತ್ತದೆ.ಅವನೇ ಫಲವನ್ನು ಕೊಡುತ್ತಾನೆ"ಎಂಬ ಅನುಮಾನ ಪ್ರಕಾರವನ್ನು ಮಾತ್ರ ಅವರು ಖಂಡಿಸಿದರು.

ತದಿಹಾಸ್ಮದುಕ್ತವಿಧಯಾ ನಿಷದಾ
ನ ವಿರುದ್ಧಮಣ್ವಪಿ ಮುನೇರ್ವಚಸಿ |
ಇತಿ ಗೂಢಭಾವಮನವೇಕ್ಷ್ಯ ಬುಧಾಃ
ತಮನೀಶವಾದ್ಯಯಮಿತಿ ಬ್ರುವತೇ || ೧೪

"ಆದ್ದರಿಂದ ನಾವು ಅರ್ಥಹೇಳದ ಪ್ರಕಾರ ಉಪನಿಷತ್ತಿಗೆ ಮುನಿಗಳ ಮಾತಿನಲ್ಲಿ ಸ್ವಲ್ಪವೂ ವಿರೋಧವೇನೂ ಇಲ್ಲ. ಇದು ಜೈಮಿನಿಮುನಿಗಳ ಗೂಢವಾದ ಮತ್ತು ಗಂಭೀರವಾದ ಅಭಿಪ್ರಾಯ. ಇದನ್ನರಿಯದೆ ಪಂಡಿತರು ಜೈಮಿನಿಮುನಿಯು ಅನೀಶ್ವರವಾದಿ ಎಂದು ಹೇಳುತ್ತಾರೆ.

ಕಿಮು ತಾವತೈವ ಸ ನಿರೀಶ್ವರ ವಾದ್ಯ-
ಭವತ್ಪರಾತ್ಮವಿದುಷಾಂ ಪ್ರವರಃ |
ನ ನಿಶಾಟನಾಹಿತತಮಃ ಕ್ವಚಿದ-
ಪ್ಯಹನಿ ಪ್ರಭಾಂ ಮಲಿನಯೇತ್ತರಣೇಃ || ೧೫

ಜೈಮಿನಿಮುನಿಗಳು ಪರಮಾತ್ಮನನ್ನು ಅರಿತ ಜ್ಞಾನಿಗಳಲ್ಲಿ ಅಗ್ರಗಣ್ಯರು. ಹಾಗೆ ವಾದಿಸಿದ ಮಾತ್ರದಿಂದ ಅವರು ನಿರೀಶ್ವರವಾದಿಗಳಾಗಿ ಬಿಡುತ್ತಾರೆಯೆ?ಕತ್ತಲೆಯಲ್ಲಿ ತಿರುಗತಕ್ಕ ಜಂತುಗಳಿಗೆ ಮಾತ್ರ ಹಗಲು ಕತ್ತಲೆಯೆನಿಸಿದರೆ, ಅದು ಸೂರ್ಯನ ಪ್ರಭೆಯನ್ನು ಎಂದಿಗಾದರೂ ಮಲಿನಗೊಳಿಸೀತೆ?"ಎಂದು ತಿಳಿಸಿದರು.

ಇತಿ ಜೈಮಿನೀಯವಚಸಾಂ ಹೃದಯಂ
ಕಥಿತಂ ನಿಶಮ್ಯ ಯತಿಕೇಸರಿಣಾ |
ಮನಸಾ ನನಂದ ಕವಿರಾಣ್ಣತರಾಂ
ಸಹಶಾರದಾಶ್ಚ ಸದಸಸ್ಪತಯಃ || ೧೬

ಹೀಗೆ ಜೈಮಿನಿಸೂಕ್ತಿಗಳ ಹೃದಯವನ್ನು ಯತೀಶ್ವರರು ಹೇಳಲಾಗಿ ಅದನ್ನು ಕೇಳಿ ಪಂಡಿತ ಮಂಡನಮಿಶ್ರನ ಮನಸ್ಸಿಗೆ ಆನಂದವಾಯಿತು. ಸಭೆಯಲ್ಲಿದ್ದ ಶಾರದಾದೇವಿಯೂ (ಉಭಯಭಾರತೀ)ಸಭಾನಾಯಕರೂ ಸಂತೋಷಿಸಿದರು.

ವಿದಿತಾಶಯೋಽಪಿ ಪರಿವರ್ತಿಮನಾಗ್-
ವಿಶಯಃ ಸ ಜೈಮಿನಿಮವಾಪ ಹೃದಾ ।
ಅವಗಂತುಮಸ್ಯ ವಚಸಾಽಪಿ ಪುನಃ
ಸ ಚ ಸಂಸ್ಮೃತಃ ಸವಿಧಮಾಪ ಕವೇಃ ॥ ೧೭

ಈ ರೀತಿಯಲ್ಲಿ ಜೈಮಿನಿಮುನಿಗಳ ಅಭಿಪ್ರಾಯವೇನೆಂಬುದು ತಿಳಿದರೂ ಮಂಡನಮಿಶ್ರನು ಮತ್ತೆ ಸ್ವಲ್ಪಸಂದೇಹಪಡುತ್ತ ಮನಸ್ಸಿನಲ್ಲಿಯೇ ಜೈಮಿನಿಮುನಿಗಳನ್ನು ಧ್ಯಾನಿಸಿದನು. ಅವರ ಮಾತಿನಿಂದಲೇ ಈ ವಿಷಯವನ್ನು ನಿಶ್ಚಯಿಸಬೇಕೆಂದು ಅವನ ಉದ್ದೇಶವಾಗಿತ್ತು. ಆಗ ಜೈಮಿನಿಮುನಿಗಳು ಅವನಿಗೆ ಪ್ರತ್ಯಕ್ಷರಾಗಿ ಸಂನಿಧಿಯಲ್ಲಿ ಕಾಣಿಸಿಕೊಂಡರು.

ಅವದಚ್ಚ ಶೃಣ್ವತಿ ಸ ಭಾಷ್ಯಕೃತಿ
ಪ್ರಜಹಾಹಿ ಸಂಶಯಮಿಮಂ ಸುಮತೇ ।
ಯದವೋಚದೇಷ ಮಮ ಸೂತ್ರತತೇಃ
ಹೃದಯಂ ತದೇವ ಮಮ ನಾಪರಥಾ ॥ ೧೮

ಅವರು ಮಂಡನನನ್ನು ಕುರಿತು ಇಂತೆಂದರು: "ಬುದ್ಧಿಶಾಲಿಯೆ ಕೇಳು, ಈ ಭಾಷ್ಯಕಾರರಲ್ಲಿ ನಿನಗೆ ಸಂದೇಹಬೇಡ. ನನ್ನ ಸೂತ್ರರಾಶಿಗೆ ಇವರು ಯಾವ ಅರ್ಥವನ್ನು ಹೇಳಿದರೋ ಅದೇ ನನ್ನ ಹೃದಯವಾಗಿದೆ, ಬೇರೆಯಲ್ಲ.

ನ ಮಮೈವ ವೇದ ಹೃದಯಂ ಯಮಿರಾ-
ಡಪಿ ತು ಶ್ರುತೇಃ ಸಕಲಶಾಸ್ತ್ರತತೇಃ ।
ಯದಭೂದ್ಭವಿಷ್ಯತಿ ಭವತ್ ತದಪಿ
ಹ್ಯಯಮೇವ ವೇದ ನ ತಥಾ ತ್ವಿತರಃ ॥ ೧೯

"ಈ ಮುನೀಂದ್ರರು ನನ್ನ ಹೃದಯವನ್ನು ಮಾತ್ರವಲ್ಲ, ಎಲ್ಲ ಶ್ರುತಿಗಳ ಎಲ್ಲ ಶಾಸ್ತ್ರಸಮುದಾಯಗಳ ಅಭಿಪ್ರಾಯವನ್ನೂ ಬಲ್ಲರು. ಭೂತ ಭವಿಷ್ಯತ್ ವರ್ತಮಾನಗಳನ್ನು ಇವರೇ ಸರಿಯಾಗಿ ತಿಳಿಸಬಲ್ಲರು. ಈ ರೀತಿಯಲ್ಲಿ ಇನ್ನೊಬ್ಬನು ತಿಳಿಯಲಾರ.

ಗುರುಣಾ ಚಿದೇಕರಸತತ್ಪರತಾ
ನಿರಣಾಯಿ ಹಿ ಶ್ರುತಿಶಿರೋವಚಸಾಮ್ ।

ಕಥಮೇಕಸೂತ್ರಮಪಿ ತದ್ವಿಮತಂ
ಕಥಯಾಮ್ಯಹಂ ತದುಪಸಾದಿತಧೀಃ ॥ ೨೦

"ನನ್ನ ಗುರುಗಳಾದ ವೇದವ್ಯಾಸರು ಉಪನಿಷದ್‌ವಾಕ್ಯಗಳಿಗೆ ಚಿದೇಕರಸವಾದ ಬ್ರಹ್ಮದಲ್ಲಿ ತಾತ್ಪರ್ಯವೆಂದು ನಿರ್ಣಯಿಸಿದ್ದಾರೆ. ಅವರ ಶುಶ್ರೂಷೆಯಿಂದ ವಿವೇಕ ಜ್ಞಾನವನ್ನು ಪಡೆದ ನಾನು ಆ ಗುರುಗಳಿಗೆ ಸಮ್ಮತವಲ್ಲದ ಒಂದು ಸೂತ್ರವನ್ನಾದರೂ ಹೇಳಬಹುದೆ?

ಅಲಮಾಕಲಯ್ಯ ವಿಶಯಂ ಸುಯಶಃ
ಶೃಣು ಮೇ ರಹಸ್ಯಮಿಮಮೇವ ಪರಮ್ ।
ತ್ವಮವೇಹಿ ಸಂಸೃತಿನಿಮಗ್ನಜನೋ -
ತ್ತರಣೇ ಗೃಹೀತವಪುಷಂ ಪುರುಷಮ್ ॥ ೨೧

"ಎಲೈ ಕೀರ್ತಿಶಾಲಿಯೇ, ಸಂಶಯವನ್ನು ಬದಿಗಿಟ್ಟು ನನ್ನ ಮಾತಿನಂತೆ ರಹಸ್ಯವಾದ ಈ ತತ್ತ್ವವನ್ನು ಕೇಳು. ಇವರು ಸಂಸಾರದಲ್ಲಿ ಮುಳುಗಿದ ಜನರನ್ನು ಉದ್ಧರಿಸುವುದಕ್ಕಾಗಿ ದೇಹಧಾರಿಗಳಾಗಿ ಬಂದ ಪರಮಪುರುಷರೆಂದು ತಿಳಿ.

ಆದ್ಯೇ ಸತ್ತ್ವಮುನಿಃ ಸತಾಂ ವಿತರತಿ ಜ್ಞಾನಂ ದ್ವಿತೀಯೇ ಯುಗೇ
ದತ್ತೋ ದ್ವಾಪರನಾಮಕೇ ತು ಸುಮತಿರ್ವ್ಯಾಸಃ ಕಲೌ ಶಂಕರಃ ।
ಇತ್ಯೇವಂ ಸ್ಫುಟಮೀರಿತೋಽಸ್ಯ ಮಹಿಮಾ ಶೈವೇ ಪುರಾಣೇ ಯತ -
ಸ್ತಸ್ಯ ತ್ವಂ ಸುಮತೇ ಮತೇತ್ವವತರೇಃ ಸಂಸಾರವಾರ್ಧಿಂ ತರೇಃ ॥ ೨೨

ಮೊದಲನೆಯದಾದ ಕೃತಯುಗದಲ್ಲಿ ಸತ್ತ್ವಗುಣ ಪ್ರಧಾನನಾದ ಕಪಿಲಮುನಿಯು ಸಜ್ಜನರಿಗೆ ಜ್ಞಾನವನ್ನು ಉಪದೇಶಿಸುತ್ತಾನೆ. ಎರಡನೆಯ ತ್ರೇತಾಯುಗದಲ್ಲಿ ದತ್ತಾತ್ರೇಯನೂ, ದ್ವಾಪರ ಯುಗದಲ್ಲಿ ಮೇಧಾವಿಗಳಾದ ವ್ಯಾಸರೂ ಜ್ಞಾನೋಪದೇಶ ಮಾಡುತ್ತಾರೆ. ಕಲಿಯುಗದಲ್ಲಿ ಸಾಕ್ಷತ್ ಶಂಕರನೇ ಆ ಕಾರ್ಯವನ್ನು ಮಾಡುತ್ತಾನೆ. ಈ ಪ್ರಕಾರವಾಗಿ ಶೈವಪುರಾಣದಲ್ಲಿ ಈ ಆಚಾರ್ಯರ ಮಹಿಮೆಯು ಸ್ಫುಟವಾಗಿ ಉಕ್ತವಾಗಿದೆ. ಆದ್ದರಿಂದ ಬುದ್ಧಿಶಾಲಿಯಾದ ನೀನು ಇವರ ಮತವನ್ನು ಆಶ್ರಯಿಸು."ಎಂದು ನುಡಿದರು.

ಇತಿ ಬೋಧಿತ ದ್ವಿಜವರೋಽಂತರಧಾ-
ನ್ಮನಸೋಪಗುಹ್ಯ ಯಮಿನಾಮೃಷಭಮ್ ।
ಸ ಚ ಯಾಯಜೂಕ ಪರಿಷತ್ಪ್ರಮುಖಃ
ಪ್ರಣಿಪತ್ಯ ಶಂಕರಮವೋಚದಿದಮ್ ॥ ೨೩

ಈ ರೀತಿಯಲ್ಲಿ ದ್ವಿಜೋತ್ತಮನಾದ ಮಂಡನಮಿಶ್ರನಿಗೆ ಬೋಧಿಸಿ ಜೈಮಿನಿಮುನಿಗಳು ಮನಸ್ಸಿನಲ್ಲಿಯೇ ಯತಿಶ್ರೇಷ್ಠರಾದ ಶಂಕರರಿಗೆ ನಮಸ್ಕರಿಸಿ ಅಂತರ್ಧಾನ ಹೊಂದಿದರು. ಅನಂತರ ಯಾಜಕರ ಪರಿಷತ್ತಿನಲ್ಲಿ ಪ್ರಮುಖನೆಂದೆನಿಸಿದ ಮಂಡನಮಿಶ್ರನು ಶ್ರೀ ಶಂಕರಾಚಾರ್ಯರಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಇಂತೆಂದನು.

ವಿದಿತೋಽಸ್ತಿ ಸಂಪ್ರತಿ ಭವಾನ್‌ಜಗತಃ
ಪ್ರಕೃತಿರ್ನಿರಸ್ತ ಸಮತಾತಿಶಯಃ |
ಅವಬೋಧಮಾತ್ರವಪುರಪ್ಯಬುಧೋ-
ದ್ಧರಣಾಯ ಕೇವಲಮುಪಾತ್ತತನುಃ || ೨೪

"ಈಗ ನನಗೆ ಗೊತ್ತಾಯಿತು. ನೀವೇ ಜಗತ್ತಿಗೆ ಮೂಲ ಕಾರಣವಾದವರು. ಯಾವ ಸಾದೃಶ್ಯವೂ ಇಲ್ಲದ ಅದ್ವಿತೀಯವೂ ಆದ ಕೇವಲ ಜ್ಞಾನ ಸ್ವರೂಪನಾದ ಪರಮಾತ್ಮನೆಂದು ಗೊತ್ತಾಯಿತು. ಅಶರೀರಿಯಾಗಿದ್ದರೂ ಅಜ್ಞಾನಿಗಳ ಉದ್ಧಾರಕ್ಕಾಗಿ ಮಾತ್ರ ಶರೀರವನ್ನು ಧರಿಸಿ ಬಂದಿದ್ದೀರಿ-ಎಂದು ತಿಳಿಯಿತು.

ಯದೇಕಮುದಿತಂ ಪದಂ ಯತಿವರ ತ್ರಯೀಮಸ್ತಕೈ-
ಸ್ತದಸ್ಯ ಪರಿಪಾಲಕಸ್ತ್ವಮಪಿ ತತ್ತ್ವಮಸ್ಯಾಯುಧಃ |
ಪರಂ ಗಲಿತಸೌಗತಪ್ರಲಪಿತಾಂಧಕೂಪಾಂತರೇ
ಪತತ್ಕಥಮಿವಾನ್ಯಥಾ ಪ್ರಲಯಮದ್ಯ ನಾಪತ್ಸ್ಯತೇ || ೨೫

"ಓ ಯತಿಶ್ರೇಷ್ಠರೆ, ಉಪನಿಷತ್ತುಗಳಲ್ಲಿ ಉಕ್ತವಾದ ಅದ್ವಿತೀಯವೂ ಏಕವೂ ಆದ ಯಾವ ಪರಬ್ರಹ್ಮವುಂಟೋ ಅದನ್ನು ಹಾಗೆಯೇ ಸಂರಕ್ಷಿಸುವುದಕ್ಕಾಗಿ 'ತತ್ತ್ವಮಸಿ' ಎಂಬ ಆಯುಧವನ್ನು ಹಿಡಿದು ಹೊರಟಿದ್ದೀರಿ. ಇಲ್ಲದಿದ್ದರೆ ಬೌದ್ಧರ ಪ್ರಲಾಪವೆಂಬ ಅಂಧಕೂಪದಲ್ಲಿ ಮುಳುಗಿಹೋದ ಆ"ಬ್ರಹ್ಮ"ಪದವು ಅಲ್ಲಿಯೇ ಲಯವಾಗದೆ ಇದ್ದೀತೆ?"

ವಿವರಣೆ:-'ಆತ್ಮಾವಾ ಇದಮೇಕ ಏವ ಅಗ್ರ ಆಸೀತ್''ಸದೇವಸೌಮ್ಯೇದಮಗ್ರಆಸೀತ್' 'ಏಕಮೇವಾದ್ವಿತೀಯಂ'ಇತ್ಯಾದಿಯಾಗಿ ಉಪನಿಷತ್ತು ಬ್ರಹ್ಮವೆಂಬ ಪದವನ್ನು ವರ್ಣಿಸಿದೆ. ಬೌದ್ಧರ ವಾದದಲ್ಲಿ ಇದು ಅಸ್ತಂಗತವಾಗಿ ಬಿಡುತ್ತಿತ್ತು ಎಂದು ಅದನ್ನು ಉದ್ಧರಿಸುವುದಕ್ಕಾಗಿ ಆಚಾರ್ಯರು ಅವತರಿಸಿದ್ದಾರೆ ಎಂದು ಅಭಿಪ್ರಾಯ.

ಪ್ರಬುದ್ಧೋಽಹಂ ಸ್ವಪ್ನಾದಿತಿ ಕೃತಮತಿಃ ಸ್ವಪ್ನಮಪರಂ
ಯಥಾ ಮೂಢಃ ಸ್ವಪ್ನೇ ಕಲಯತಿ ತಥಾ ಮೋಹವಶಗಾಃ |
ವಿಮುಕ್ತಿಂ ಮನ್ಯಂತೇ ಕತಿಚಿದಿಹ ಲೋಕಾಂತರಗತಿಂ
ಹಸಂತ್ಯೇತಾನ್ ದಾಸಾಸ್ತವ ಗಲಿತಮಾಯಾಃ ಪರಗುರೋಃ || ೨೬

"ಲೋಕದಲ್ಲಿ ಮೂಢನಾದವನು 'ನನಗೆ ಸ್ವಪ್ನಕಾಣಿಸುತ್ತಿತ್ತು, ಈಗ ಎಚ್ಚರವಾದೆನು' ಎಂದು ಹೇಳಿ ಕೊಳ್ಳುತ್ತಲೇ ಇನ್ನೊಂದು ಜಾಗ್ರತ್ ಎಂಬ ಸ್ವಪ್ನವನ್ನು ಹೇಗೆ ಕಾಣುತ್ತಾನೋ ಹಾಗೆ ಅಜ್ಞಾನಿಗಳಾದ ಕೆಲವರು ಲೋಕಾಂತರಕ್ಕೆ ಹೋಗುವುದೇ ಮುಕ್ತಿಯೆಂದು ತಿಳಿದಿದ್ದಾರೆ. ಪರಗುರುವಾದ ನಿಮ್ಮ ದಾಸರು ಮಾಯೆಯನ್ನು ದಾಟಿದವರಾದ್ದರಿಂದ ಆ ಮೂಢರ ಮಾತನ್ನು ಕೇಳಿ ನಗುತ್ತಾರೆ.

ಟಿಪ್ಪಣಿ:ಜಾಗ್ರದವಸ್ಥೆಯು ಮಿಥ್ಯೆಯಾದ್ದರಿಂದ ಜ್ಞಾನಿಯ ದೃಷ್ಟಿಯಲ್ಲಿ ಅದು ಸ್ವಪ್ನವೆಂದೇ ತಿಳಿಯಬೇಕು. ಸ್ವರ್ಗಾದಿ ಲೋಕಕ್ಕೆ ಹೋಗುವುದು ಮೋಕ್ಷವಲ್ಲ. ಸ್ವಸ್ವರೂಪದಲ್ಲಿ ನಿಲ್ಲುವುದೇ ಮೋಕ್ಷ. ಮುಕ್ತನಾದವನು ಎಲ್ಲಿಗೂ ಹೋಗುವುದಿಲ್ಲ.

ಮುಹುರ್ಧಿಗ್ಧಿಗ್ಭೇದಿ ಪ್ರಲಪಿತ ವಿಮುಕ್ತಿಂ ಯದುದಯೇಽ-
ಪ್ಯಸಾರಃ ಸಂಸಾರೋ ವಿರಮತಿ ನ ಕರ್ತೃತ್ವಮುಖರಃ |
ಭೃಶಂ ವಿದ್ವನ್ಮೋದೇ ಸ್ಥಿರತಮವಿಮುಕ್ತಿಂ ತ್ವದುದಿತಾಂ
ಭವಾತೀತಾ ಯೇಯಂ ನಿರವಧಿಚಿದಾನಂದಲಹರೀ || ೨೭

"ಭೇದ ವಾದಿಗಳು ಹಲಬುವ ಮುಕ್ತಿ ಎಂಬುದೇನುಂಟೋ ಅದಕ್ಕೆ ಧಿಕ್ಕಾರ!ಅವರು ಹೇಳುವ ಮುಕ್ತಿದೊರಕಿದರೂ ಕರ್ತೃತ್ವವಿದ್ದೇ ಇರುವುದರಿಂದ ಸಂಸಾರವು ಎಂದಿಗೂ ಹೋಗುವುದಿಲ್ಲ. ಹೇ ಜ್ಞಾನಿಗಳೇ, ನೀವು ಹೇಳಿದ ಸ್ಥಿರವಾದ ಯಾವ ಮುಕ್ತಿಸ್ವರೂಪವುಂಟೋ ಅದನ್ನು ನಾನು ಪೂರ್ಣವಾಗಿ ಅನುಮೋದಿಸುತ್ತೇನೆ. ನೀವು ಹೇಳಿದ ಮುಕ್ತಿಯಾದರೋ ಸಂಸಾರದ ಆಚೆಗಿರುವ ನಿರವಧಿಯಾದ ಚಿದಾನಂದ ಲಹರಿಯೇ ಆಗಿದೆ.

ಅವಿದ್ಯಾರಾಕ್ಷಸ್ಯಾ ಗಿಲಿತಮಖಿಲೇಶಂ ಪರಗುರೋ
ಪಿಚಂಡಂ ಭಿತ್ವಾಸ್ಯಾಃ ಸರಭಸಮಮುಷ್ಮಾದುದಹರಃ |
ವೃತಾಂ ಪಶ್ಯನ್ ರಕ್ಷೋಯುವತಿಭಿರಮುಷ್ಯ ಪ್ರಿಯತಮಾಂ
ಹನೂಮಾನ್ಲೋಕೇಡ್ಯಸ್ತವ ತು ಕಿಯತೀ ಸ್ಯಾನ್ಮಹಿತತಾ || ೨೮

"ಓ ಪರಮಗುರುಗಳೆ, ಅವಿದ್ಯೆಎಂಬ ರಾಕ್ಷಸಿಯು ಸರ್ವೇಶ್ವರನಾದ ಪರಮಾತ್ಮನನ್ನು ನುಂಗಿಬಿಟ್ಟಿತ್ತು. ನೀವು ರಭಸದಿಂದ ಅವಳ ಹೊಟ್ಟೆಯನ್ನು ಸೀಳಿ ಈಶ್ವರನನ್ನು ಹೊರಗೆ ಕಾಣಿಸಿದಿರಿ. ಈ ಪರಮಾತ್ಮನೇ ಆದ ಶ್ರೀರಾಮನ ಪ್ರಿಯತಮೆಯಾದ ಸೀತಾದೇವಿಯು ರಾಕ್ಷಸಿಯರಿಂದ ಸುತ್ತುವರಿಯಲ್ಪಟ್ಟಿದ್ದಳು. ಹನುಮಂತನು ಅವಳನ್ನು ನೋಡಿದನು. ಅಷ್ಟುಮಾತ್ರದಿಂದಲೇ ಅವನು ಲೋಕದಲ್ಲಿ ಸ್ತೋತ್ರಾರ್ಹನಾದನು. ಹೀಗಿರುವಾಗ ನಿಮ್ಮ ಮಹಿಮೆ ಎಷ್ಟುದೊಡ್ಡದಿರಬೇಕು!

ಟಿಪ್ಪಣಿ:ಅಜ್ಞಾನದಿಂದ ನಾನು ಈಶ್ವರನಿಲ್ಲವೆಂದು ತಿಳಿದುಕೊಂಡಿದ್ದೆ. ನನ್ನ ಅಜ್ಞಾನವನ್ನು ಹೋಗಲಾಡಿಸಿ ನೀವು ಈಶ್ವರನಿದ್ದಾನೆಂದು ತೋರಿಸಿಕೊಟ್ಟಿರಿ. ಹನುಮಂತನು ರಾಕ್ಷಸೀಪರಿವೃತಳಾದ ಸೀತೆಯನ್ನು ನೋಡಿಬಂದದ್ದರಿಂದಲೇ ಮಹಿಮಾನ್ವಿತನೆನಿಸಿದ್ದಾನೆ. ನೀವಾದರೋ ಅವಿದ್ಯಾರಾಕ್ಷಸಿಯಿಂದ ಆವೃತನಾದ ಈಶ್ವರನನ್ನು ಬಿಡಿಸಿ ತಂದಿದ್ದೀರಿ. ನೀವು ಅಧಿಕರು- ಎಂದು ಅಭಿಪ್ರಾಯ.

ಜಗದಾರ್ತಿಹನ್ನನವಗಮ್ಯ ಪುರಾ
ಮಹಿಮಾನಮೀದೃಶಮಚಿಂತ್ಯಮಹಮ್ |
ತವ ಯತ್ಪುರೋಽಬ್ರವಮಸಾಂಪ್ರತಮ-
ಪ್ಯಖಿಲಂ ಕ್ಷಮಸ್ವ ಕರುಣಾಜಲಧೇ || ೨೯

"ಜಗತ್ತಿನ ಸಂಕಟವನ್ನು ಪರಿಹರಿಸತಕ್ಕ ಮಹಾತ್ಮರೇ, ಈ ಪ್ರಕಾರವಾದ ನಿಮ್ಮ ಅಚಿಂತ್ಯಮಹಿಮೆಯನ್ನು ನಾನು ತಿಳಿಯದೆ ಮೊದಲು ತಮ್ಮೆದುರಿಗೆ ಅನುಚಿತವಾದ ಮಾತನ್ನಾಡಿದೆನು. ಹೇ ಕರುಣಾಸಮುದ್ರರೇ, ಅದೆಲ್ಲವನ್ನೂ ಕ್ಷಮಿಸಿರಿ.

ಕಪಿಲಾಕ್ಷಪಾದ ಕಣಭುಕ್ಪ್ರಮುಖಾ
ಅಪಿ ಮೋಹಮೀಯುರಮಿತಪ್ರತಿಭಾಃ |
ಶ್ರುತಿಭಾವನಿರ್ಣಯವಿಧಾವಿತರಃ
ಪ್ರಭವೇತ್ಕಥಂ ಪರಶಿವಾಂಶಮೃತೇ || ೩೦

"ಕಪಿಲಮುನಿಗಳೂ, ಗೌತಮರೂ, ಕಣಾದರೂ ಮೊದಲಾದ ಮಹಾಪ್ರತಿಭಾಶಾಲಿಗಳೂ ಸಹ ಶ್ರುತಿಯ ಅಭಿಪ್ರಾಯವನ್ನು ನಿರ್ಣಯಿಸುವಾಗ ಮೋಹವನ್ನೈದಿದರು. ಪರಶಿವನ ಅಂಶವಲ್ಲದೆ ಇನ್ನಾವನು ಶ್ರುತಿಯ ಅರ್ಥವನ್ನು ನಿರ್ಣಯಿಸುವುದಕ್ಕೆ ಸಮರ್ಥನಾದಾನು?

ಸಮೇತೈರೇತೈಃ ಕಿಂ ಕಪಿಲ ಕಣಭುಗ್ಗೌತಮವಚ-
ಸ್ತಮಸ್ತೋಮೈಶ್ಚೇತೋ ಮಲಿನಿಮಸಮಾರಂಭಣಚಣೈಃ |
ಸುಧಾಧಾರೋದ್ಗಾರ ಪ್ರಚುರ ಭಗವತ್ಪಾದ ವದನ-
ಪ್ರರೋಹದ್ವ್ಯಾಹಾರಾಮೃತಕಿರಣಪುಂಜೇ ವಿಜಯಿನಿ || ೩೧

"ಕಪಿಲ, ಕಣಾದ, ಗೌತಮ ಮೊದಲಾದವರ ವಚನಗಳು ಕತ್ತಲೆಯ ರಾಶಿಗಳಂತಿವೆ. ಚಿತ್ತವನ್ನು ಮಲಿನ ಮಾಡುವುದರಲ್ಲಿ ಮಾತ್ರ ಉದ್ಯುಕ್ತವಾಗಿವೆ. ಅಮೃತಧಾರೆಯನ್ನು ಉದ್ಗರಿಸುವ ಭಗವತ್ಪಾದರ ಮುಖಚಂದ್ರನಿಂದ ಹೊರಡುವ ಸೂಕ್ತಿಗಳೆಂಬ ಅಮೃತ ಕಿರಣಗಳು ಬೆಳಕನ್ನು ಚೆಲ್ಲುತ್ತಾ ವಿಜಯಶಾಲಿಯಾಗಿರುವಾಗ ಕಪಿಲಾದಿಗಳ ವಚನಗಳೆಂಬ ಕತ್ತಲೆಯ ರಾಶಿ ಏನು ಮಾಡೀತು?

ಟಿಪ್ಪಣಿ:ಆರಂಭಣಚಣ್ಯೈಃ ='ತೇನವಿತ್ತಶ್ಚುಂಚುಪ್ಚಣಪೌ'ಎಂಬ ಸೂತ್ರದಿಂದ 'ಯುಕ್ತವಾದ' ಎಂಬ ಅರ್ಥದಲ್ಲಿ 'ಚಣಪ್'ಪ್ರತ್ಯಯ ಬಂದಿದೆ.

ಭಿಂದಾನೈರ್ದೇವಮೇತೈರಭಿನವಯವನೈಃ ಸದ್ಗವೀಭಂಜನೋತ್ಕೈ-
ರ್ವ್ಯಾಪ್ತಾ ಸರ್ವೇಯಮುರ್ವೀ ಕ್ವ ಜಗತಿ ಭಜತಾಂ ಕೈವ
ಮುಕ್ತಿಪ್ರಸಕ್ತಿಃ |
ಯದ್ವಾ ಸದ್ವಾದಿರಾಜಾ ವಿಜಿತಕಲಿಮಲಾ ವಿಷ್ಣುತತ್ತ್ವಾನುರಕ್ತಾ
ಉಜ್ಜೃಂಭಂತೇ ಸಮಂತಾದ್ದಿಶಿ ದಿಶಿ ಕೃತಿನಃ ಕಿಂ ತಯಾ ಚಿಂತಯಾ ಮೇ ||

"ವೇದವಾಣಿ ಎಂಬ ಗೋವನ್ನು ಕತ್ತರಿಸಲು ಉದ್ಯುಕ್ತರಾಗಿ ಅದ್ವೈತಾತ್ಮನನ್ನು ನಾಶಮಾಡಲು ಹೊರಟ ಈ ಅಭಿನವಯವನರಿಂದ ಜಗತ್ತೆಲ್ಲವೂ ವ್ಯಾಪ್ತವಾಗಿ ಹೋಗಿದೆ. ಇವರನ್ನು ಆಶ್ರಯಿಸಿದ ಭಕ್ತರಿಗೆ ಮೋಕ್ಷದ ಪ್ರಸಕ್ತಿಯು ಎಲ್ಲಿಂದಬಂದೀತು?ಅಥವಾ ಕಲಿದೋಷವನ್ನು ಜಯಿಸಿದವರಾಗಿ ವಿಷ್ಣುತತ್ತ್ವದಲ್ಲಿ ಅನುರಕ್ತರಾದ ನಿಮ್ಮಂಥ ವಾದಿರಾಜರಾದ ವಿದ್ವಾಂಸರು ದಿಕ್ಕುದಿಕ್ಕುಗಳಲ್ಲಿಯೂ ವಿಜೃಂಭಿಸುವುದಾದರೆ ಆ ಚಿಂತೆಯಾದರೂ ನನಗೇಕೆ?

ಟಿಪ್ಪಣಿ:ಸದ್ವಾದಿರಾಜಾಃ ="ರಾಜಾಹಃಸಖಿಭ್ಯಷ್ಟಚ್"ಎಂಬ ಸೂತ್ರದಿಂದ ಸಮಾಸಾಂತ ' ಟಚ್'ಪ್ರತ್ಯಯ ಬಂದಿದೆ.

ಕಥಮಲ್ಪಬುದ್ಧಿವಿವೃತಿ ಪ್ರಚಯ
ಪ್ರಬಲೋರಗಕ್ಷತಿಹತಾಃ ಶ್ರುತಯಃ |
ನ ಯದಿ ತ್ವದುಕ್ತ್ಯಮೃತಸೇಕಧೃತಾ
ವಿಹರೇಯುರಾತ್ಮವಿಧೃತಾನುಶಯಾಃ || ೩೩

"ಅಲ್ಪಬುದ್ಧಿಗಳಾದ ಪಂಡಿತರು ಬರೆದ ವ್ಯಾಖ್ಯಾನಗಳೆಂಬ ಪ್ರಬಲವಾದ ಹಾವುಗಳ ಕಡಿತದಿಂದ ಶ್ರುತಿಗಳು ಹತವಾಗಿ ಹೋಗಿದ್ದವು. ನಿಮ್ಮ ಉಕ್ತಿಯೆಂಬ ಅಮೃತಸೇಚನದಿಂದ ಅವನ್ನು ಉಳಿಸದೇ ಹೋದರೆ ಅವು ಆತ್ಮನಲ್ಲಿ ದೃಢವಾಗಿ ಇರಿಸಿದ ತಾತ್ಪರ್ಯ ಉಳ್ಳವುಗಳಾಗಿ ಹೇಗೆ ವಿಹರಿಸಬಲ್ಲವು?

ಭವದುಕ್ತಸೂಕ್ತ್ಯಮೃತ ಭಾನುಕರಾ
ನ ಚರೇಯುರಾರ್ಯ ಯದಿ ಕಃ ಶಮಯೇತ್ |
ಅತಿತೀವ್ರದುಃಸಹಭವೋಷ್ಣಕರ-
ಪ್ರಚುರಾತಪಪ್ರಭವತಾಪಮಿಮಮ್ || ೩೪

"ಓ ಪೂಜ್ಯರೆ, ನಿಮ್ಮ ಸೂಕ್ತಿಯೆಂಬ ಸುಧಾಕಿರಣನಾದ ಚಂದ್ರನ ಬೆಳದಿಂಗಳು ಹರಡದೇ ಹೋದರೆ ಅತ್ಯಂತ ತೀವ್ರವೂ ದುಃಸ್ಸಹವೂ ಆದ ಸಂಸಾರವೆಂಬ ಬಿಸಿಲಿನ ಧಗೆಯಿಂದಾದ ಈ ತಾಪವನ್ನು ಇನ್ನಾರು ಹೋಗಲಾಡಿಸಬಲ್ಲರು?

ಬತ ಕರ್ಮಯಂತ್ರಮಧಿರುಹ್ಯ ತಪಃ
ಶ್ರುತಗೇಹದಾರಸುತಭೃತ್ಯಧನೈಃ |
ಅತಿರೂಢಮಾನಭರಿತಃ ಪತಿತೋ
ಭವತೋದ್ಧೃತೋಽಸ್ಮಿ ಭವಕೂಪಬಿಲಾತ್ || ೩೫

"ಅಯ್ಯೋ!ತಪಸ್ಸು, ವಿದ್ಯೆ, ಮನೆ, ಮಡದಿ, ಸುತ, ಭೃತ್ಯ, ಧನ-ಇವುಗಳಿಂದ ಹುಟ್ಟಿದ ದುರಭಿಮಾನದಿಂದ ತುಂಬಿದ ನಾನು ಕರ್ಮಯಂತ್ರವನ್ನೇರಿ ಸಂಸಾರವೆಂಬ ಹಾಳುಬಾವಿ ಯಲ್ಲಿ ಬಿದ್ದುಹೋಗಿದ್ದೆ. ಆದರಿಂದ ನೀವು ನನ್ನನ್ನು ಮೇಲೆಎತ್ತಿ ಉದ್ಧರಿಸಿದ್ದೀರಿ.

ಅಹಮಾಚರಂ ಬಹು ತಪೋಽಸುಕರಂ
ನನು ಪೂರ್ವಜನ್ಮಸು ನ ಚೇದಧುನಾ |
ಜಗದೀಶ್ವರೇಣ ಕರುಣಾನಿಧಿನಾ
ಭವತಾ ಕಥಾ ಮಮ ಕಥಂ ಘಟತೇ || ೩೬

"ನಾನು ಹಿಂದಿನ ಜನ್ಮಗಳಲ್ಲಿ ಕಠಿಣವಾದ ಬಹಳ ತಪಸ್ಸನ್ನು ಆಚರಿಸಿರಬೇಕು. ಇಲ್ಲದಿದ್ದರೆ ಕರುಣಾನಿಧಿಗಳೂ ಜಗತ್ತಿಗೆ ಈಶ್ವರರೂ ಆದ ನಿಮ್ಮೊಡನೆ ಈ ರೀತಿಯಾದ ಮಾತುಕತೆ ಹೇಗೆ ನಡೆದೀತು?

ಶಾಂತಿಪ್ರಾಕ್ಸುಕೃತಾಂಕುರಂ ದಮಸಮುಲ್ಲಾಸೋಲ್ಲಸತ್ಪಲ್ಲವಂ
ವೈರಾಗ್ಯದ್ರುಮಕೋರಕಂ ಸಹನತಾವಲ್ಲೀ ಪ್ರಸೂನೋತ್ಕರಮ್ |
ಐಕಾಗ್ರ್ಯಸುಮನೋಮರಂದವಿಸೃತಿಂ ಶ್ರದ್ಧಾಸಮುದ್ಯತ್ಫಲಂ
ವಿಂದೇಯಂ ಸುಗುರೋರ್ಗಿರಾಂ ಪರಿಚಯಂ ಪುಣ್ಯೈರಗಣ್ಯೈರಹಮ್||

"ಸದ್ಗುರುಗಳಾದ ತಮ್ಮ ವಾಕ್ಯಗಳ ಪರಿಚಯವು ನನ್ನ ಅಗಣ್ಯಪುಣ್ಯಗಳಿಂದ ನನಗೆ ಪ್ರಾಪ್ತವಾಗಿದೆ. ಪೂರ್ವಪುಣ್ಯದಿಂದ ಉಂಟಾದ ಶಮದ ಮೊಳಕೆಯಿದು. ದಮದ ಉಚ್ಛ್ರಾಯವನ್ನು ಸೂಚಿಸುವ ಚಿಗುರು. ವೈರಾಗ್ಯವೆಂಬ ವೃಕ್ಷದ ಮೊಗ್ಗು. ತಿತಿಕ್ಷೆಯೆಂಬ ಬಳ್ಳಿಯ ಹೂ. ಏಕಾಗ್ರತೆ ಎಂಬ ಹೂವಿನ ಮಕರಂದ. ಶ್ರದ್ಧೆಯೆಂಬ ಪುಣ್ಯದ ಹಣ್ಣು."

ವಿವರಣೆ:-ವೇದಾಂತಶ್ರವಣಕ್ಕೆ ಬೇಕಾದ ಅಧಿಕಾರಸಂಪತ್ತನ್ನು ಇಲ್ಲಿ ತಿಳಿಸಿದೆ. ಶಮ = ಮನೋನಿಗ್ರಹ, ದಮ = ಬಾಹ್ಯೇಂದ್ರಿಯ ನಿಗ್ರಹ, ತಿತಿಕ್ಷೆ = ಶೀತೋಷ್ಣಾದಿದ್ವಂದ್ವಗಳನ್ನು ಸಹಿಸಿಕೊಳ್ಳುವುದು.

ತ್ರಿದಿವೌಕಸಾಮಪಿ ಪುಮರ್ಥಕರೀ-
ಮಿಹ ಸಂಸರಜ್ಜನ ವಿಮುಕ್ತಿಕರೀಮ್ |
ಕರುಣೋರ್ಮಿಲಾಂ ತವ ಕಟಾಕ್ಷ ಝರೀ-
ಮವಗಾಹತೇಽತ್ರ ಖಲು ಧನ್ಯತಮಃ || ೩೮

"ನಿಮ್ಮ ಕಟಾಕ್ಷದ ಝರಿಯಾದರೋ ದೇವತೆಗಳಿಗೂ ಸಹ ಪುರುಷಾರ್ಥವನ್ನು ಕೊಡತಕ್ಕದ್ದು. ಈ ಲೋಕದಲ್ಲಿ ಸಂಸಾರದಲ್ಲಿ ತೊಡಗುವ ಜನರಿಗೆ ಮುಕ್ತಿದಾಯಕವಾದದ್ದು. ಇಂತಹ ದಯಾಪೂರ್ಣವಾದ ನಿಮ್ಮ ಕಟಾಕ್ಷದ ಹೊಳೆಯಲ್ಲಿ ಅತ್ಯಂತ ಧನ್ಯನಾದವನು ಮಾತ್ರ ಇಳಿದು ಸ್ನಾನ ಮಾಡುವನು.

ಟಿಪ್ಪಣಿ:ನಿಮ್ಮ ಕಟಾಕ್ಷಕ್ಕೆ ಪಾತ್ರನಾಗ ತಕ್ಕವನು ಪುಣ್ಯವಂತನೇ ಸರಿ ಎಂದು ಅಭಿಪ್ರಾಯ.

ಕೇಚಿಚ್ಚಂಚಲಲೋಚನಾಕುಚತಟೀಚೇಲಾಂಚಲೋಚ್ಚಾಲನ-
ಸ್ಪರ್ಶದ್ರಾಕ್ಪರಿರಂಭ ಸಂಭ್ರಮಕಲಾಲೀಲಾಸು ಲೋಲಾಶಯಾಃ |
ಸಂತ್ವೇತೇ ಕೃತಿನಸ್ತು ನಿಸ್ತುಲಯಶಃಕೋಶಾದಯಃ ಶ್ರೀಗುರು -
ವ್ಯಾಹಾರಕ್ಷರಿತಾಮೃತಾಬ್ಧಿಲಹರೀದೋಲಾಸು ಖೇಲಂತ್ಯಮೀ || ೩೯

"ಲೋಕದಲ್ಲಿ ಕೆಲವರು ಚಪಲನೇತ್ರೆಯಗಾದ ತರುಣಿಯರ ಕುಚತಟದ ಮೇಲಿರುವ ವಸ್ತ್ರವನ್ನು ಸರಿಸುವುದು, ಸ್ಪರ್ಶಿಸುವುದು, ಆಲಂಗಿಸುವುದು ಮುಂತಾದ ಸಂಭ್ರಮ ಲೀಲೆಗಳಲ್ಲಿ ಲೋಲವಾದ ಮನಸ್ಸುಳ್ಳವರಾಗಿ ಇದ್ದರೆ ಇದ್ದುಕೊಳ್ಳಲಿ. ಆದರೆ ಅಸದೃಶವಾದ ಕೀರ್ತಿ ಸಂಪುಟವನ್ನೇ ವರಿಸಿದ ಪುಣ್ಯಶಾಲಿಗಳೂ ಇರುತ್ತಾರೆ. ಇವರು ಶ್ರೀಗುರುವಿನ ಸೂಕ್ತಿಗಳಿಂದ ಹೊರಡುವ ಅಮೃತಸಾಗರದ ಅಲೆಗಳೆಂಬ ಉಯ್ಯಾಲೆಗಳಲ್ಲಿ ಕ್ರೀಡಿಸುತ್ತಾರೆ.

ಚಿಂತಾಸಂತಾನತಂತುಗ್ರಥಿತನವಭವತ್ಸೂಕ್ತಿಮುಕ್ತಾಫಲೌಘೈ-
ರುದ್ಯದ್ವೈಶದ್ಯಸದ್ಯಃ ಪರಿಹೃತ ತಿಮಿರೈರ್ಹಾರಿಣೋ ಹಾರಿಣೋಽಮೀ |
ಸಂತಃ ಸಂತೋಷವಂತೋ ಯತಿವರ ಕಿಮತೋ ಮಂಡನಂ ಪಂಡಿತಾನಾಂ
ವಿದ್ಯಾ ಹೃದ್ಯಾ ಸ್ವಯಂ ತಾನ್ ಶತಮುಖಮುಖರಾನ್ ವಾರಯಂತೀ
ವೃಣೀತೇ || ೪೦

"ಹೇ ಯತಿಶ್ರೇಷ್ಠರೆ, ತಮ್ಮ ಸ್ವಚ್ಛತೆಯಿಂದ ಕತ್ತಲನ್ನೇ ನಾಶಮಾಡುವಷ್ಟು ಪ್ರಕಾಶವುಳ್ಳದ್ದಾಗಿ, ವಿಚಾರ ಸಂತತಿಯೆಂಬ ಎಳೆಗಳಿಂದ ಹೊಸದಾಗಿ ಪೋಣಿಸಲ್ಪಟ್ಟಿರುವ ಸೂಕ್ತಿಗಳೆಂಬ ಮುಕ್ತಾಫಲಗಳಿಂದ ನಿಮಗೆ ವಶರಾಗಿರುವ ಈ ಸಭಾಸದರು ಆ ಮುಕ್ತಾಹಾರವನ್ನು ಧರಿಸಿದ್ದಾರೆ. ಈ ಸಜ್ಜನರು ಹರ್ಷಪೂರ್ಣರಾಗಿದ್ದಾರೆ. ಇದಕ್ಕಿಂತಲೂ

ಪಂಡಿತರಿಗೆ ಭೂಷಣವಾದ ಆನಂದಕರವಾದ ವಿದ್ಯೆ ಯಾವುದಿದೆ?ವಿದ್ಯೆಯು ಇಂದ್ರಾದಿಗಳನ್ನು ಅಲ್ಲಗಳೆದು ನಿಮ್ಮಂತಹ ವಿದ್ವಾಂಸರನ್ನು ವರಿಸುತ್ತದೆ.

ಟಿಪ್ಪಣಿ:ನಿಮ್ಮ ಸೂಕ್ತಿಗಳಿಂದ ಇಲ್ಲಿ ನೆರೆದಿರುವ ಸಜ್ಜನರು ಸಂತುಷ್ಟರಾಗಿದ್ದಾರೆ. ನಿಮ್ಮ ವಿದ್ಯೆಯು ಪಂಡಿತರಿಗೆ ಭೂಷಣವಾದದ್ದು ಎಂದು ಅಭಿಪ್ರಾಯ. ಪಾರಿ=(ಕರ್ಮಣಿ ಘ್ಞ್. ಇನಿಃ)ವಶ.

ಸಂತಃ ಸಂತೋಷಪೋಷಂ ದಧತು ತವ ಕೃತಾಮ್ನಾಯಶೋಭೈರ್ಯಶೋಭಿಃ
ಸೌರಾಲೋಕೈರುಲೂಕಾ ಇವ ನಿಖಿಲಖಲಾ ಮೋಹಮಾಹೋ ವಹಂತು |
ಧೀರಶ್ರೀಶಂಕರಾರ್ಯಪ್ರಣತಿಪರಿಣತಿ ಭ್ರಶ್ಯದಂತರ್ದುರಂತ -
ಧ್ವಾಂತಾಃ ಸಂತೋ ವಯಂ ತು ಪ್ರಚುರತರನಿಜಾನಂದಸಿಂಧೌ ನಿಮಗ್ನಾಃ ||

"ನಿಮ್ಮ ಉಪದೇಶಗಳಿಂದ ಶೋಭಿಸುತ್ತಿರುವ ಕೀರ್ತಿಗಳಿಂದ ಸಜ್ಜನರು ಅಧಿಕ ಸಂತೋಷವನ್ನಾದರೂ ಪಡೆಯಲಿ. ಅಥವಾ ಸೂರ್ಯನ ಬೆಳಕಿನಿಂದ ಗೂಬೆಗಳಂತೆ ಸಕಲ ಖಳಜನರೂ ಮೋಹ, ಮೌಢ್ಯವನ್ನಾದರೂ ಹೊಂದಲಿ. ನಾವಂತೂ ಧೀರರಾದ ಶ್ರೀ ಶಂಕರಾಚಾರ್ಯರಿಗೆ ಸಾಷ್ಟಾಂಗ ಪ್ರಣಾಮ ಮಾಡುವುದರಿಂದ ಚಿತ್ತದಲ್ಲಿದ್ದ ದುರಂತವಾದ ಅಜ್ಞಾನವನ್ನು ಕಳೆದುಕೊಂಡವರಾಗಿ ವಿಶಾಲವಾದ ಆನಂದಸಾಗರದಲ್ಲಿ ಮುಳುಗಿ ಹೋಗಿದ್ದೇವೆ.

ಚಿಂತಾಸಂತಾನಶಾಖೀ ಪದಸರಸಿಜಯೋರ್ವಂದನಂ ನಂದನಂ ತೇ
ಸಂಕಲ್ಪಃ ಕಲ್ಪವಲ್ಲೀ ಮನಸಿ ಗುಣನುತೇರ್ವರ್ಣನಾ ಸ್ವರ್ಣದೀಯಮ್ |
ಸ್ವರ್ಗೋ ದೃಗ್ಗೋಚರಸ್ತ್ವತ್ಪದಭಜನಮತಃಸಂವಿಚಾರ್ಯೇದಮಾರ್ಯಾ
ಮನ್ಯಂತೇ ಸ್ವರ್ಗಮನ್ಯಂ ತೃಣವದತಿಲಘುಂ ಶಂಕರಾರ್ಯ ತ್ವದೀಯಾಃ ||

"ಶ್ರೀ ಶಂಕರಭಗವತ್ಪಾದರೆ, ನಿಮ್ಮನ್ನು ಧ್ಯಾನಿಸುವುದೇ ಸಂತಾನವೆಂಬ ದೇವವೃಕ್ಷ. ನಿಮ್ಮ ಪಾದಕಮಲಗಳಿಗೆ ವಂದಿಸುವುದೇ ನಂದನವನ. ನಿಮ್ಮನ್ನು ಆರಾಧಿಸಬೇಕೆಂಬ ಮನಸ್ಸಿನ ಸಂಕಲ್ಪವೇ ಕಲ್ಪಲತೆ. ಪ್ರಶಂಸನೀಯ ಗುಣಗಳ ವರ್ಣನೆಯೇ ದೇವಗಂಗೆ. ನಿಮ್ಮ ದೃಷ್ಟಿಗೆ ಗೋಚರವಾಗುವುದೇ ಸ್ವರ್ಗ. ಆದ್ದರಿಂದ ನಿಮ್ಮ ಪಾದಸೇವೆಯೇ ಉತ್ತಮವೆಂದು ಆರ್ಯರಾದ ನಿಮ್ಮ ಶಿಷ್ಯರು ವಿಚಾರಮಾಡಿ ಇನ್ನೊಂದು ಮೇಲಿರುವ ಸ್ವರ್ಗವನ್ನು ಹುಲ್ಲುಕಡ್ಡಿಯಂತೆ ಅತ್ಯಂತ ಕ್ಷುದ್ರವಾದದ್ದೆಂದು ತಿಳಿದಿದ್ದಾರೆ.

ತದಹಂ ವಿಸೃಜ್ಯ ಸುತದಾರಗೃಹಂ
ದ್ರವಿಣಾನಿ ಕರ್ಮ ಚ ಗೃಹೇ ವಿಹಿತಮ್ |
ಶರಣಂ ವೃಣೋಮಿ ಭಗವಚ್ಚರಣಾ-
ವನುಶಾಧಿ ಕಿಂಕರಮಮುಂ ಕೃಪಯಾ || ೪೩

ಆದ್ದರಿಂದ ನಾನು ಪುತ್ರ ಪತ್ನೀ ಗೃಹಗಳನ್ನೂ ಮನೆಯಲ್ಲಿರುವ ಸಕಲ ಧನರಾಶಿಯನ್ನೂ ವಿಧಿವಿಹಿತವಾದ ನಿತ್ಯಕರ್ಮವನ್ನೂ ಪರಿತ್ಯಜಿಸಿ ಭಗವತ್ಪಾದರಾದ ನಿಮ್ಮ ಚರಣಗಳಿಗೆ ಶರಣಾಗಲು ಬಯಸುತ್ತೇನೆ. ತಮ್ಮ ಕಿಂಕರನಾದ ನನಗೆ ಕೃಪೆಯಿಂದ ಅನುಜ್ಞೆಯನ್ನು ಕೊಡಿರಿ" ಎಂದು ಪ್ರಾರ್ಥಿಸಿದನು.

ಇತಿ ಸೂನೃತೋಕ್ತಿಭಿರುದೀರ್ಣಗುಣಃ
ಸುಧಿಯಾಽತ್ಮವಾನನುಜಿಘೃಕ್ಷುರಸೌ |
ಸಮುದೈಕ್ಷತಾಸ್ಯ ಸಹಧರ್ಮಚರೀಂ
ವಿದಿತಾಶಯಾ ಮುನಿಮವೋಚತ ಸಾ || ೪೪

ಈ ಪ್ರಕಾರವಾಗಿ ಸತ್ಯವೂ ಪ್ರಿಯವೂ ಆದ ಮಾತುಗಳಿಂದ ಮಂಡನಪಂಡಿತನು ಆಚಾರ್ಯರ ಗುಣಗಳನ್ನು ಕೀರ್ತಿಸಲಾಗಿ ಆತನನ್ನು ಅನುಗ್ರಹಿಸಬೇಕೆಂಬ ಇಚ್ಛೆಯುಳ್ಳ ಧೀರರಾದ ಶ್ರೀ ಶಂಕರರು ಮಂಡನನ ಧರ್ಮಪತ್ನಿಯಾದ ಉಭಯಭಾರತಿಯ ಕಡೆಗೆ ನೋಡಿದರು. ಆಗ ಆಚಾರ್ಯರ ಅಭಿಪ್ರಾಯವನ್ನು ತಿಳಿದು ಆಕೆಯು ಈ ಮುನೀಶ್ವರರನ್ನು ಕುರಿತು ಇಂತೆಂದಳು.

ಯತಿಪುಂಡರೀಕ ತವ ವೇದ್ಮಿ ಮನೋ
ನನು ಪೂರ್ವಮೇವ ವಿದಿತಂ ಚ ಮಯಾ |
ಇಹ ಭಾವಿ ತಾಪಸಮುಖಾದಖಿಲಂ
ತದುದೀರ್ಯತೇ ಶೃಣು ಸಸಭ್ಯಜನಃ || ೪೫

"ಯತಿಶ್ರೇಷ್ಠರೆ, ನಿಮ್ಮ ಮನಸ್ಸಿನಲ್ಲಿರುವುದು ಗೊತ್ತಾಯಿತು. ಇದೆಲ್ಲವೂ ನನಗೆ ಮೊದಲೇ ತಿಳಿದಿತ್ತು. ಒಬ್ಬ ತಪಸ್ವಿಯು ಈ ಭವಿಷ್ಯತ್ತೆಲ್ಲವನ್ನೂ ಹೇಳಿದ್ದನು. ಅದನ್ನೀಗ ಹೇಳುತ್ತೇನೆ. ನೀವೂ ಈ ಸಭಾಸದರೂ ಇದನ್ನು ಆಲಿಸಬೇಕು.

ಮಯಿ ಜಾತು ಮಾತುರುಪಕಂಠಜುಷಿ
ಪ್ರಭಯಾ ತಡಿತ್ಪ್ರತಿಭಟೋಚ್ಚಜಟಃ |
ಸಿತಭೂತಿರೂಷಿತಸಮಸ್ತತನುಃ
ಶ್ರಮಣೋಽಭ್ಯಯಾದಪರಸೂರ್ಯ ಇವ || ೪೬

"(ನಾನು ಬಾಲ್ಯದಲ್ಲಿ)ಒಮ್ಮೆ ನನ್ನ ತಾಯಿಯ ಬಳಿಯಲ್ಲಿದ್ದಾಗ ಒಬ್ಬ ತಪಸ್ವಿಯು ಅಲ್ಲಿಗೆ ಆಗಮಿಸಿದನು. ಅವನ ಉನ್ನತವಾದ ಜಟೆಯು ಮಿಂಚಿನಂತೆ ಪ್ರಭೆಯನ್ನು ಬೀರುತ್ತಿತ್ತು. ತನ್ನ ದೇಹಕ್ಕೆಲ್ಲಾ ಪೂರ್ತಿಯಾಗಿ ವಿಭೂತಿಯನ್ನು ಹಚ್ಚಿಕೊಂಡಿದ್ದನು. ಇನ್ನೊಬ್ಬ ಸೂರ್ಯನೋ ಎಂಬಂತೆ ಆಗಮಿಸಿದನು.

ಪರಿಗೃಹ್ಯ ಪಾದ್ಯಮುಖಯಾರ್ಹಣಯಾ
ರಚಿತಾಂಜಲಿರ್ನಮಿತಪೂರ್ವತನುಃ |
ಜನನೀ ತದಾಽತ್ತವರಿವಸ್ಯಮಮುಂ
ಮುನಿಮನ್ವಯುಂಕ್ತ ಮಮ ಭಾವ್ಯಖಿಲಮ್ || ೪೭

"ಆಗ ನನ್ನ ತಾಯಿಯು ಪಾದ್ಯ ಮುಂತಾದವುಗಳಿಂದ ಆತನನ್ನು ಅರ್ಚಿಸಿ, ದೇಹವನ್ನು ನಮ್ರತೆಯಿಂದ ಬಾಗಿಸಿ, ಕೈಮುಗಿದುಕೊಂಡು ಪೂಜಿತನಾದ ಆ ಮುನಿಯನ್ನು ಕುರಿತು ನನಗೊದಗುವ ನಿಖಿಲ ಭವಿಷ್ಯದ್‌ವೃತ್ತಾಂತವನ್ನೂ ಕೇಳಿದಳು."

ಭಗವನ್ನ ವೇದ್ಮಿ ದುಹಿತುರ್ಮಮ ಭಾ-
ವ್ಯಖಿಲಂ ಚ ವೇತ್ತಿ ತಪಸಾ ಹಿ ಭವಾನ್ |
ಪ್ರಣತೇ ಜನೇ ಹಿ ಸುಧಿಯಃ ಕಥಯಂ-
ತ್ಯಪಿ,ಗೋಪ್ಯಮಾರ್ಯಸದೃಶಾಃ ಕೃಪಯಾ || ೪೮

"ಭಗವಂತರೇ, ನನ್ನ ಮಗಳ ಭವಿಷ್ಯತ್ತು ಹೇಗಿರುವುದು?ಎಂಬುದನ್ನು ನಾನು ಅರಿಯೆನು. ನೀವು ತಪೋ ಮಹಿಮೆಯಿಂದ ಎಲ್ಲವನ್ನೂ ಬಲ್ಲವರಾಗಿದ್ದೀರಿ. ಪೂಜ್ಯರಾದ ವಿದ್ವಾಂಸರು ಪ್ರಣತರಾದ ಭಕ್ತಜನರ ಮೇಲೆ ಕೃಪೆಯನ್ನಿಟ್ಟು ರಹಸ್ಯವಾದುದನ್ನೂ ಸಹ ಹೇಳುತ್ತಾರಲ್ಲವೆ?

ಕಿಯದಾಯುರಾಪ್ಸ್ಯತಿ ಸುತಾನ್ ಕತಿ ವಾ
ದಯಿತಂ ಕಥಂವಿಧ ಮುಪೈಷ್ಯತಿ ಚ |
ಅಥ ಚ ಕ್ರತೂನಪಿ ಕರಿಷ್ಯತಿ ಮೇ
ದುಹಿತಾ ಪ್ರಭೂತಧನಧಾನ್ಯವತೀ || ೪೯

ಈ ನನ್ನ ಮಗಳು ಎಷ್ಟು ವರ್ಷ ಆಯುಸ್ಸನ್ನು ಪಡೆದಿರುವಳು?ಇವಳಿಗೆ ಎಷ್ಟು ಮಕ್ಕಳಾಗುವರು? ಎಂತಹ ಪತಿಯನ್ನು ಪಡೆಯುವಳು?ಹಾಗೆಯೇ ಬೇಕಾದಷ್ಟು ಧನಧಾನ್ಯಗಳನ್ನು ಪಡೆದವಳಾಗಿ ನನ್ನ ಮಗಳು ಯಜ್ಞಗಳನ್ನು ನಡೆಸುವಳೇ?"ಎಂದು ಕೇಳಿದಳು.

ಇತಿ ಪೃಷ್ಟಭಾವಿಚರಿತಃ ಪ್ರಸುವಾ
ಕ್ಷಣಮಾತ್ರಮೀಲಿತ ವಿಲೋಚನಕಃ |
ಸಕಲಂ ಕ್ರಮೇಣ ಕಥಯನ್ನಿದಮ-
ಪ್ಯಪರಂ ಜಗಾದ ಸುರಹಸ್ಯಮಪಿ || ೫೦

"ಹೀಗೆ ನನ್ನ ಭವಿಷ್ಯಚ್ಚರಿತೆಯನ್ನು ತಾಯಿಯು ಕೇಳಿದಾಗ, ಆ ತಪಸ್ವಿಯು ಒಂದು ಕ್ಷಣಕಾಲ ಕಣ್ಣುಮುಚ್ಚಿಕೊಂಡಿದ್ದು ಅನಂತರ ಎಲ್ಲವನ್ನೂ ಕ್ರಮವಾಗಿ ಹೇಳುತ್ತಾ ಅತ್ಯಂತ ರಹಸ್ಯವಾದ ಇನ್ನೊಂದು ವಿಷಯವನ್ನೂ ಹೇಳಿಬಿಟ್ಟನು.

ನಿಗಮಾಧ್ವನಿ ಪ್ರಬಲಬಾಹ್ಯಮತ್ಯೈ-
ರಮತ್ಯೈರಧಿಕ್ಷಿತಿ ಖಿಲೇ ದ್ರುಹಿಣಃ |
ಪುನರುದ್ದಿಧೀರ್ಷುರವತೀರ್ಯ ಖಲು
ಪ್ರತಿಭಾತಿ ಮಂಡನಕವೀಂದ್ರಮಿಷಾತ್ || ೫೧

"ಭೂಲೋಕದಲ್ಲಿ ಪ್ರಬಲವಾದ ವೇದಬಾಹ್ಯಮತಗಳು ವಿಪುಲವಾಗಿ ಬೆಳೆದು ವೇದಮಾರ್ಗವು ಕ್ಷೀಣವಾಗಲು, ಬ್ರಹ್ಮದೇವನು ವೈದಿಕ ಮಾರ್ಗವನ್ನು ಪುನರುದ್ಧರಿಸುವುದಕ್ಕಾಗಿ ಮಂಡನಪಂಡಿತೇಂದ್ರನೆಂಬ ಹೆಸರಿನಿಂದ ಅವತರಿಸಿ ವಿರಾಜಿಸುತ್ತಿದ್ದಾನೆ.

ತಮವಾಪ್ಯ ರುದ್ರಮಿವ ಸಾಽದ್ರಿಸುತಾ
ದುಹಿತಾ ತವಾಚ್ಯುತಮಿವಾಬ್ಧಿಸುತಾ |
ಅನುರೂಪಮಾಹೃತ ಸಮಸ್ತಮಖಾ
ಸಸುತಾ ಭವಿಷ್ಯತಿ ಚಿರಂ ಮುದಿತಾ || ೫೨

"ಹಿಮಾಚಲಸುತೆಯಾದ ಪಾರ್ವತಿಯು ಪರಮೇಶ್ವರನನ್ನೂ ಸಮುದ್ರಕನ್ಯೆಯಾದ ಲಕ್ಷ್ಮೀದೇವಿಯು ಮಹಾವಿಷ್ಣುವನ್ನೂ ವರಿಸಿದಂತೆ, ನಿನ್ನ ಮಗಳು ಅನುರೂಪನಾದ ಆ ಮಂಡನಪಂಡಿತೇಂದ್ರನನ್ನು ಮದುವೆಯಾಗಿ ಎಲ್ಲಯಜ್ಞಗಳನ್ನೂ ನೆರವೇರಿಸುತ್ತಾಳೆ. ಪುತ್ರವತಿಯಾಗಿ ಬಹುಕಾಲ ಸೌಖ್ಯದಿಂದಿರುವಳು.

ಅಥ ನಷ್ಟಮೌಪನಿಷದಂ ಪ್ರಬಲೈಃ
ಕುಮತೈಃ ಕೃತಾಂತಮಿಹ ಸಾಧಯಿತುಮ್ |
ನನು ಮಾನುಷಂ ವಪುರುಪೇತ್ಯ ಶಿವಃ
ಸಮಲಂಕರಿಷ್ಯತಿ ಧರಾಂ ಸ್ವಪದೈಃ || ೫೩

"ಆಗ ಕುತ್ಸಿತಮತಗಳಿಂದ ನಷ್ಟವಾದ ಔಪನಿಷದಸಿದ್ಧಾಂತವನ್ನು ಈ ಲೋಕದಲ್ಲಿ ಸ್ಥಾಪಿಸುವುದಕ್ಕಾಗಿ, ಪರಶಿವನು ಮಾನುಷ ದೇಹವನ್ನು ಧರಿಸಿ ತನ್ನ ಪಾದಗಳಿಂದ ಈ ಭೂಮಿಯನ್ನು ಅಲಂಕರಿಸುವನು.

ಸಹ ತೇನ ವಾದಮುಪಗಮ್ಯ ಚಿರಂ
ದುಹಿತುಃ ಪತಿಸ್ತು ಯತಿವೇಷಜುಷಾ |

ವಿಜಿತಸ್ತ್ವಮೇವ ಶರಣಂ ಜಗತಾಂ
ಶರಣಂ ಗಮಿಷ್ಯತಿ ವಿಸೃಷ್ಟಗೃಹಃ || ೫೪

ಸಂನ್ಯಾಸಿ ವೇಷದಿಂದ ಬಂದ ಪರಶಿವನೊಡನೆ ನಿನ್ನ ಮಗಳ ಗಂಡನು ಬಹಳಕಾಲ ವಾದಮಾಡಿ ಸೋತುಹೋಗುವನು. ಅನಂತರ ಗೃಹವನ್ನು ಪರಿತ್ಯಜಿಸಿ ಜಗತ್ತಿಗೇ ಶರಣನಾದ ಆ ಸಂನ್ಯಾಸಿಗೆ ಶರಣು ಹೋಗುವನು."

ಇತಿ ಗಾಮುದೀರ್ಯ ಸ ಮುನಿಃ ಪ್ರಯಯೌ
ಸಕಲಂ ಯಥಾತಥಮಭೂಚ್ಚ ಮಮ |
ಭವದೀಯ ಶಿಷ್ಯಪದಮಸ್ಯ ಕಥಂ
ವಿತಥಂ ಭವಿಷ್ಯತಿ ಮುನೇರ್ವಚಸಿ || ೫೫

"ಈ ಮಾತನ್ನು ಹೇಳಿ ಆ ಮುನಿಯು ಹೊರಟು ಹೋದನು. ನನಗೆ ಸಕಲವೂ ಆತನ ಮಾತಿನಂತೆಯೇ ಯಥಾರ್ಥವಾಗಿ ನಡೆಯಿತು. ಆ ಮುನಿಯು ಈ ಮಾತನ್ನು ಹೇಳಿರುವಾಗ, ನನ್ನ ಪತಿಯು ನಿಮ್ಮ ಶಿಷ್ಯನಾಗುವುದು ಹೇಗೆ ಅಸತ್ಯವಾದೀತು?

ಅಪಿ ತು ತ್ವಯಾದ್ಯ ನ ಸಮಗ್ರಜಿತಃ
ಪ್ರಥಿತಾಗ್ರಣೀರ್ಮಮ ಪತಿರ್ಯದಹಮ್ |
ವಪುರರ್ಧಮಸ್ಯ ನ ಜಿತಾ ಮತಿಮನ್
ಅಪಿ ಮಾಂ ವಿಜಿತ್ಯ ಕುರು ಶಿಷ್ಯಮಿಮಮ್ || ೫೬

"ಆದರೆ ಪಂಡಿತೋತ್ತಮರಾದ ನನ್ನ ಪತಿಯು ನಿಮ್ಮಿಂದ ಪೂರ್ಣವಾಗಿ ಪರಾಜಿತ ರಾಗಲಿಲ್ಲ! ಏಕೆಂದರೆ, ನಾನು ಇವರ ಅರ್ಧಾಂಗಿಯಾಗಿದ್ದೇನೆ! ವಿದ್ವಾಂಸರೆ, ನನ್ನನ್ನು ವಾದದಲ್ಲಿ ಸೋಲಿಸಿ, ಬಳಿಕ ಇವರನ್ನು ನಿಮ್ಮ ಶಿಷ್ಯರನ್ನಾಗಿ ಮಾಡಿಕೊಳ್ಳಬಹುದು!"

ಯದಪಿ ತ್ವಮಸ್ಯ ಜಗತಃ ಪ್ರಭವೋ
ನನು ಸರ್ವವಿಚ್ಚ ಪರಮಃ ಪುರುಷಃ |
ತದಪಿ ತ್ವಯೈವ ಸಹ ವಾದಕೃತೇ
ಹೃದಯಂ ಬಿಭರ್ತಿ ಮಮ ತೂತ್ಕಲಿಕಾಮ್ || ೫೭

ನೀವು ಈ ಜಗತ್ತಿಗೆ ಮೂಲಕಾರಣರೂ ಸರ್ವಜ್ಞರಾದ ಪರಮ ಪುರುಷರೂ ಎಂಬುದೇನೋ ದಿಟ! ಆದರೂ ನಿಮ್ಮೊಡನೆ ವಾದಮಾಡಬೇಕೆಂದು ನನ್ನ ಹೃದಯದಲ್ಲಿ ಪ್ರಬಲವಾದ ಇಚ್ಛೆಯುಂಟಾಗಿದೆ!"ಎಂದಳು.

ಇತಿ ಯಾಯಜೂಕ ಸಹಧರ್ಮಚರೀ-
ಕಥಿತಂ ವಚೋಽರ್ಥವದಗರ್ಹ್ಯಪದಮ್ |
ಮಧುರಂ ನಿಶಮ್ಯ ಮುದಿತಃ ಸುತರಾಂ
ಪ್ರತಿವಕ್ತುಮೈಹತ ಯತಿಪ್ರವರಃ || ೫೮

ಯಜನಶೀಲರಾದ ಮಂಡನಮಿಶ್ರರ ಪತ್ನಿಯು ಅರ್ಥವತ್ತಾಗಿ ಹೀಗೆ ನುಡಿಯಲು ಪ್ರಶಂಸಾರ್ಹವೂ ಮಧುರವೂ ಆದ ಆ ಮಾತನ್ನು ಕೇಳಿ, ಸಂನ್ಯಾಸಿ ಪ್ರವರರಾದ ಶ್ರೀಶಂಕರರಿಗೆ ಬಹಳ ಸಂತೋಷವಾಯಿತು. ಅವರು ಅದಕ್ಕೆ ಪ್ರತಿಯಾಗಿ ಇಂತೆಂದರು-

ಯದವಾದಿ ವಾದಕಲಹೋತ್ಸುಕತಾಂ
ಪ್ರತಿಪದ್ಯತೇ ಹೃದಯಮಿತ್ಯಬಲೇ |
ತದಸಾಂಪ್ರತಂ ನ ಹಿ ಮಹಾಯಶಸೋ
ಮಹಿಲಾಜನೇನ ಕಥಯಂತಿ ಕಥಾಮ್ || ೫೯

"ಎಲೌ ಅಬಲೆ, ನಿನ್ನ ಹೃದಯವು ವಾದಕಲಹದಲ್ಲಿ ಉತ್ಸಕವಾಗಿದೆಯೆಂದು ಹೇಳಿದೆಯಲ್ಲ, ಅದು ಪ್ರಕೃತದಲ್ಲಿ ಸರಿಯಲ್ಲ. ಕೀರ್ತಿಶಾಲಿಗಳಾದ ಮಹಾಜನರು ಮಹಿಳೆಯರೊಡನೆ ವಾದಕ್ಕಿಳಿಯುವುದಿಲ್ಲ."

ಸ್ವಮತಂ ಪ್ರಭೇತ್ತುಮಿಹ ಯೋ ಯತತೇ
ಸ ವಧೂಜನೋಽಸ್ತು ಯದಿವಾಽ ಸ್ತ್ರ್ಯಿತರಃ |
ಯತಿತವ್ಯಮೇವ ಖಲು ತಸ್ಯ ಜಯೇ
ನಿಜಪಕ್ಷ ರಕ್ಷಣ ಪರೈರ್ಭಗವನ್ || ೬೦

ಆಗ ಉಭಯಭಾರತಿಯು"ಭಗವಾನರೆ, ತಮ್ಮ ಸಿದ್ಧಾಂತವನ್ನು ಖಂಡಿಸುವುದಕ್ಕಾಗಿ ಯಾರು ಪ್ರಯತ್ನಿಸುತ್ತಾರೋ ಅವರು ಮಹಿಳೆಯಾದರೇನು, ಪುರುಷರಾದರೇನು?ತಮ್ಮ ಸಿದ್ಧಾಂತವನ್ನು ಉಳಿಸಿಕೊಳ್ಳಬೇಕೆನ್ನುವವರು ಅವರೊಡನೆ ವಾದಕ್ಕಾಗಿ ಯತ್ನಿಸಲೇ ಬೇಕಲ್ಲವೆ?

ಅತ ಏವ ಗಾರ್ಗ್ಯಭಿಧಯಾ ಕಲಹಂ
ಸಹ ಯಾಜ್ಞವಲ್ಕ್ಯಮುನಿರಾಡಕರೋತ್ |
ಜನಕಸ್ತಥಾ ಸುಲಭಯಾಽಬಲಯಾ
ಕಿಮಮೀ ಭವಂತಿ ನ ಯಶೋನಿಧಯಃ || ೬೧

ಆದ್ದರಿಂದಲೇ ಯಾಜ್ಞವಲ್ಕ್ಯಮುನಿಗಳು ಗಾರ್ಗಿ ಎಂಬವಳೊಡನೆ ವಾದವನ್ನು ಮಾಡಿದರು. ಜನಕರಾಜನು ಸುಲಭಾ ಎಂಬ ವನಿತೆಯೊಡನೆ ವಾದಮಾಡಿದ್ದಾನೆ. ಅವರೆಲ್ಲರೂ ಕೀರ್ತಿಶಾಲಿಗಳಾದ ಮಹಾಜನರಲ್ಲವೇನು?"ಎಂದು ಕೇಳಿದಳು.

ಇತಿ ಯುಕ್ತಿಮದ್ಗದಿತಮಾಕಲಯನ್
ಮುದಿತಾಂತರಃ ಶ್ರುತಿಸರಿಜ್ಜಲಧಿಃ |
ಸ ತಯಾ ವಿವಾದಮಧಿದೇವತಯಾ
ವಚಸಾಮಿಯೇಷ ವಿದುಷಾಂ ಸದಸಿ || ೬೨

ಯುಕ್ತಿಯುಕ್ತವಾದ ಆ ಮಾತನ್ನು ಕೇಳಿ ಆಚಾರ್ಯರಿಗೆ ಮನಸ್ಸಿನಲ್ಲಿ ಸಂತೋಷವೇ ಆಯಿತು. ಶ್ರುತಿಗಳೆಂಬ ನದಿಗಳಿಗೆ ಸಮುದ್ರಪ್ರಾಯರಾದ ಶ್ರೀಶಂಕರರು ಆ ವಿದ್ವತ್ಸಭೆಯಲ್ಲಿ ವಾಗ್ದೇವತೆಯಾದ ಉಭಯಭಾರತಿಯೊಡನೆ ವಾದಮಾಡಲು ಒಪ್ಪಿದರು.

ಅಥ ಸಾ ಕಥಾ ಪ್ರವವೃತೇ ಸ್ಮ ತಯೋ-
ರುಭಯೋಃ ಪರಸ್ಪರಜಯೋತ್ಸುಕಯೋಃ |
ಮತಿಚಾತುರೀರಚಿತಶಬ್ದಝುರೀ
ಶ್ರುತಿವಿಸ್ಮಯೀಕೃತ ವಿಚಕ್ಷಣಯೋಃ || ೬೩

ಅನಂತರ ಒಬ್ಬರನ್ನೊಬ್ಬರು ಜಯಿಸಬೇಕೆಂದು ಉತ್ಸುಕರಾದ ಅವರಿಬ್ಬರಿಗೂ ವಾದಕಥೆಯು ಆರಂಭವಾಯಿತು. ಅತ್ಯಂತವಿಚಕ್ಷಣರಾದ ಅವರೀರ್ವರ ಬಾಯಿಯಿಂದ ಹೊರಡುತ್ತಿದ್ದ ಪ್ರೌಢವಾದ ಶಬ್ದಝರಿಯು ಸಭೆಯಲ್ಲಿದ್ದವರ ಕಿವಿಗೆ ಅಚ್ಚರಿಯನ್ನುಂಟು ಮಾಡುತ್ತಿತ್ತು.

ಅನಯೋರ್ವಿಚಿತ್ರ ಪದಯುಕ್ತಿಭರೈಃ
ನಿಶಮಯ್ಯ ಸಂಕಥನ ಮಾಕಲಿತಮ್ |
ನ ಫಣೀಶಮಪ್ಯತುಲಯನ್ನ ಪಪೀಂ
ನ ಗುರುಂ ಕವಿಂ ಕಿಮಪರಂ ಜಗತಿ || ೬೪

ವಿಚಿತ್ರವಾದ ನಾನಾ ಯುಕ್ತಿಗಳಿಂದ ತುಂಬಿದ ಇವರಿಬ್ಬರ ಸಂವಾದವನ್ನು ಕೇಳಿ ಅಲ್ಲಿದ್ದ ಸಭಾಸದರು ಸಹಸ್ರಫಣಗುಳುಳ್ಳ ಆದಿಶೇಷನನ್ನೂ ಸೂರ್ಯನನ್ನೂ ಇವರಿಗೆ ಸಮರೆಂದು ಎಣಿಸಲಿಲ್ಲ. ಬೃಹಸ್ಪತಿಯನ್ನೂ ಶುಕ್ರನನ್ನೂ ಸಹ ಇವರಿಗೆ ಸದೃಶರೆಂದು ತಿಳಿಯಲಿಲ್ಲ. ಈ ಜಗತ್ತಿನಲ್ಲಿ ಇನ್ನು ಯಾರನ್ನು ಅವರಿಬ್ಬರೊಡನೆ ಹೋಲಿಸಲಾದೀತು?

ಟಿಪ್ಪಣಿ:ಪಪೀ=ಸೂರ್ಯ.

ನ ದಿವಾ ನ ನಿಶ್ಯಪಿ ಚ ವಾದಕಥಾ
ವಿರರಾಮ ನೈಯಮಿಕಕಾಲಮೃತೇ |
ಇತಿ ಜಲ್ಪತೋಃ ಸಮಮನಲ್ಪಧಿಯೋಃ
ದಿವಸಾಶ್ಚ ಸಪ್ತ ದಶ ಚಾತ್ಯಗಮನ್ || ೬೫

ಸಂಧ್ಯಾಜಪಾದಿ ನಿಯತಕಾಲವೊಂದನ್ನು ಬಿಟ್ಟು ಉಳಿದ ಸಮಯದಲ್ಲಿ ವಾದಮಾಡುತ್ತಿದ್ದ ಮಹಾಮೇಧಾವಿಗಳಾದ ಶ್ರೀಶಂಕರ-ಉಭಯಭಾರತಿಯರ ವಾದಕಥೆಯು ಹಗಲೂ ನಿಲ್ಲಲಿಲ್ಲ. ರಾತ್ರಿಯೂ ನಿಲ್ಲಲಿಲ್ಲ. ಹೀಗೆ ಒಂದೇ ಸಮನಾಗಿ ಹದಿನೇಳು ದಿವಸಗಳು ಕಳೆದುಹೋದವು.

ಅಥ ಶಾರದಾಽಕೃತಕವಾಕ್ಯಮುಖೇ-
ಷ್ವಖಿಲೇಷು ಶಾಸ್ತ್ರನಿಚಯೇಷು ಪರಮ್ |
ತಮಜಯ್ಯಮಾತ್ಮನಿ ವಿಚಿಂತ್ಯ ಮುನಿಂ
ಪುನರಪ್ಯಚಿಂತಯದಿದಂ ತರಸಾ || ೬೬

ಆಗ ಶಾರದೆಯೇ ಆದ ಉಭಯಭಾರತಿಯು ನಿತ್ಯವಾಕ್ಕುಗಳೆನಿಸಿದ ವೇದವೇ ಮೊದಲಾದ ಅಖಿಲಶಾಸ್ತ್ರವಿಷಯಗಳಲ್ಲಿಯೂ ಸಹ ಶ್ರೀಶಂಕರ ಮುನಿಗಳು ಅಜೇಯರೆಂದು ಮನಸ್ಸಿನಲ್ಲಿ ನಿಶ್ಚಯಿಸಿ ಒಡನೆಯೇ ಈ ಪ್ರಕಾರವಾಗಿ ಆಲೋಚಿಸಿದಳು.

ಅತಿಬಾಲ್ಯ ಏವ ಕೃತಸಂನ್ಯಸನೋ
ನಿಯಮೈಃ ಪರೈರವಿಧುರಶ್ಚ ಸದಾ |
ಮದನಾಗಮೇಷ್ವಕೃತಬುದ್ಧಿರಸೌ
ತದನೇನ ಸಂಪ್ರತಿ ಜಯೇಯಮಹಮ್ || ೬೭

"ಇವರು ಚಿಕ್ಕಬಾಲಕರಾಗಿದ್ದಾಗಲೇ ಸಂನ್ಯಾಸವನ್ನು ಸ್ವೀಕರಿಸಿದ್ದಾರೆ. ಕಟ್ಟುನಿಟ್ಟಾಗಿ ಸಂನ್ಯಾಸವಿಧಿಗಳನ್ನು ಸದಾಪಾಲಿಸುತ್ತಲೇ ಇದ್ದಾರೆ. ಇವರಿಗೆ ಕಾಮಶಾಸ್ತ್ರದಲ್ಲಿ ಪರಿಚಯವಿಲ್ಲ. ಆದ್ದರಿಂದ ಈ ಕಾಮಶಾಸ್ತ್ರವನ್ನು ಮುಂದೊಡ್ಡಿ ಇವರನ್ನು ನಾನು ಜಯಿಸಬೇಕು."

ಇತಿ ಸಂಪ್ರಧಾರ್ಯ ಪುನರಪ್ಯಮುನಾ
ಕಥನೇ ಪ್ರಸಂಗಮಥ ಸಂಗತಿತಃ |
ಯಮಿನಂ ಸದಸ್ಯಮುಮಪೃಚ್ಛದಸೌ
ಕುಸುಮಾಸ್ತ್ರಶಾಸ್ತ್ರಹೃದಯಂ ವಿದುಷೀ || ೬೮

ಈ ಪ್ರಕಾರವಾಗಿ ನಿಶ್ಚಯಿಸಿ ಆ ಯತಿಗಳೊಡನೆ ವಾದಮಾಡುತ್ತಿರುವಾಗ ಪ್ರಸಂಗಾನುಸಾರವಾಗಿ ಆ ವಿದುಷಿಯು ಸಭೆಯಲ್ಲಿ ಕಾಮಶಾಸ್ತ್ರದ ರಹಸ್ಯವನ್ನು ಕುರಿತು ಪ್ರಶ್ನೆಮಾಡಿದಳು.

ಕಲಾಃ ಕಿಯತ್ಯೋ ವದ ಪುಷ್ಪಧನ್ವನಃ
ಕಿಮಾತ್ಮಿಕಾಃ ಕಿಂ ಚ ಪದಂ ಸಮಾಶ್ರಿತಾಃ |
ಪೂರ್ವೇ ಚ ಪಕ್ಷೇ ಕಥಮನ್ಯಥಾ ಸ್ಥಿತಿಃ
ಕಥಂ ಯುವತ್ಯಾಂ ಕಥಮೇವ ಪೂರುಷೇ || ೬೯

"ಮನ್ಮಥನ ಕಲೆಗಳು ಎಷ್ಟು ಹೇಳಿರಿ. ಅವುಗಳ ಸ್ವರೂಪವೇನು?ಆ ಕಲೆಗಳು ಯಾವ ಸ್ಥಾನದಲ್ಲಿ ಗೋಚರಿಸುತ್ತವೆ?ಅವು ಶುಕ್ಲಪಕ್ಷದಲ್ಲಿ ಮತ್ತು ಕೃಷ್ಣಪಕ್ಷದಲ್ಲಿ ಯಾವ ಪ್ರಕಾರದಲ್ಲಿರುತ್ತವೆ?ಈ ಕಲೆಗಳು ತರುಣಿಯಲ್ಲಿರುವುದಕ್ಕೂ ಪುರುಷನಲ್ಲಿರುವುದಕ್ಕೂ ವ್ಯತ್ಯಾಸವೇನು?"

ನೇತೀರಿತಃ ಕಿಂಚಿದುವಾಚ ಶಂಕರೋ
ವಿಚಿಂತಯನ್ನತ್ರ ಚಿರಂ ವಿಚಕ್ಷಣಃ |
ತಾಸಾಮನುಕ್ತೌ ಭವಿತಾಽಲ್ಪವೇದಿತಾ
ಭವೇತ್ತದುಕ್ತೌ ಮಮ ಧರ್ಮಸಂಕ್ಷಯಃ || ೭೦

"ಹೀಗೆ ಪ್ರಶ್ನೆಮಾಡಲಾಗಿ ಶ್ರೀ ಶಂಕರರು ಯಾವ ಉತ್ತರವನ್ನೂ ಕೊಡಲಿಲ್ಲ. ಆ ವಿಚಕ್ಷಣರು ಈ ವಿಷಯವಾಗಿ ಚಿರಕಾಲ ತಮ್ಮಲ್ಲಿಯೇ ವಿಮರ್ಶಿಸಿದರು. "ಆ ಕಲೆಗಳ ವಿಷಯವಾಗಿ ಹೇಳದಿದ್ದರೆ ನಾನು ಅಲ್ಪಜ್ಞನೆಂದಾಗುತ್ತದೆ. ಅವುಗಳನ್ನು ಹೇಳಿದರೆ ನನ್ನ ಯತಿಧರ್ಮಕ್ಕೆ ಬಾಧೆ ಬರುತ್ತದೆ."

ಇತಿ ಸಂವಿಚಿಂತ್ಯ ಸ ಹೃದಾಽಽಶು ತದಾ
ನವಬುದ್ಧಪುಷ್ಪಶರಶಾಸ್ತ್ರ ಇವ |
ವಿದಿತಾಗಮೋಽಪಿ ಸುರಿರಕ್ಷಯಿಷುಃ
ನಿಯಮಂ ಜಗಾದ ಜಗತಿ ವ್ರತಿನಾಮ್ || ೭೧

ಹೀಗೆ ತಮ್ಮ ಮನಸ್ಸಿನಲ್ಲಿಯೇ ವಿಚಾರಮಾಡಿ ಆಚಾರ್ಯರು ತಮಗೆ ಕಾಮಶಾಸ್ತ್ರವೇನೂ ಗೊತ್ತಿಲ್ಲದವರಂತೆ ಅದನ್ನು ಬಲ್ಲವರಾದರೂ ಉತ್ತರಹೇಳಲಿಲ್ಲ. ಸಂನ್ಯಾಸಿಗಳ ನಿಯಮವನ್ನು ಸರಿಯಾಗಿ ಪಾಲಿಸಬೇಕೆಂಬ ಉದ್ದೇಶದಿಂದ ಉತ್ತರ ಹೇಳದೆ, ಅನಂತರ ಹೀಗೆಂದರು.

ಇಹ ಮಾಸಮಾತ್ರಮವಧಿಃ ಕ್ರಿಯತಾಂ
ಅನುಮನ್ಯತೇ ಹಿ ದಿವಸಸ್ಯ ಗಣಃ |
ತದನಂತರಂ ಸುದತಿ ಹಾಸ್ಯಸಿ ಭೋಃ
ಕುಸುಮಾಸ್ತ್ರಶಾಸ್ತ್ರ ನಿಪುಣತ್ವಮಪಿ || ೭೨

"ಈಗ ಒಂದುತಿಂಗಳುಮಾತ್ರ ಅವಧಿಯನ್ನು ಕೊಡಬೇಕು. ಹೀಗೆ ದಿನಗಳ ಅವಧಿಯನ್ನು ಕೊಡತಕ್ಕದ್ದು ವಿದ್ವಜ್ಜನರಿಗೆ ಸಮ್ಮತವಾದದ್ದೇ ಸರಿ. ಅನಂತರ, ಎಲೌ ಮಹಿಳೆಯೇ, ಮನ್ಮಥಶಾಸ್ತ್ರದಲ್ಲಿ ನಿನಗಿರುವ ನೈಪುಣ್ಯದ ಮಾತನ್ನು ನೀನು ಪರಿತ್ಯಜಿಸುವೆ!"ಎಂದರು.

ಉರರೀಕೃತೇ ಸತಿ ತಥೇತಿ ತಯಾಽಽ-
ಕ್ರಮತೇ ಸ್ಮ ಯೋಗಿಮೃಗರಾಡ್ ಗಗನಮ್ |
ಶ್ರುತವಿಗ್ರಹಃ ಶ್ರುತವಿನೇಯಯುತೋ
ದಧದಭ್ರಚಾರಮಥ ಯೋಗದೃಶಾ || ೭೩

ಅಂತೆಯೇ ಉಭಯಭಾರತಿಯು ಒಂದು ತಿಂಗಳು ಅವಧಿಗೆ ಸಮ್ಮತಿಸಲಾಗಿ ಈ ಯೋಗೀಶ್ವರರು ಈ ವಾದದ ಪ್ರಶ್ನೆಯನ್ನು ತಿಳಿದುಕೊಂಡವರಾಗಿ ತಮ್ಮ ಶಿಷ್ಯರೊಡನೆ ಆಕಾಶಮಾರ್ಗವನ್ನೇರಿದರು. ಯೋಗಶಕ್ತಿಯಿಂದ ಆಕಾಶಗಮನವು ಅವರಿಗೆ ವಶವಾಗಿತ್ತು.

ಟಿಪ್ಪಣಿ:ವಿಗ್ರಹ = ಶಾಸ್ತ್ರಕ್ಕೆ ಸಂಬಂಧಿಸಿದ ವಾದ

ಸ ದದರ್ಶ ಕುತ್ರಚಿದಮರ್ತ್ಯಮಿವ
ತ್ರಿದಿವಚ್ಚ್ಯುತಂ ವಿಗತಸತ್ತ್ವಮಪಿ |
ಮನುಜೇಶ್ವರಂ ಪರಿವೃತಂ ಪ್ರಲಪತ್-
ಪ್ರಮದಾಭಿರಾರ್ತಿಮದಮಾತ್ಯಜನಮ್ || ೭೪

ಅವರು ಆಕಾಶಮಾರ್ಗದಲ್ಲಿ ಹೋಗುವಾಗ ಒಂದು ಕಡೆ ಮೃತನಾಗಿದ್ದ ಒಬ್ಬರಾಜನನ್ನು ಕಂಡರು. ಆತನು ಮೃತನಾಗಿದ್ದರೂ ದೇವಲೋಕದಿಂದ ಕೆಳಗೆ ಬಿದ್ದ ದೇವತೆಯಂತೆ ತೇಜಸ್ವಿಯಾಗಿದ್ದನು. ಅಳುತ್ತಿದ್ದ ಪ್ರಮದೆಯರೂ ದುಃಖದಿಂದ ಕೊರಗುತ್ತಿದ್ದ ಅಮಾತ್ಯರೂ ಆ ದೇಹವನ್ನು ಸುತ್ತುವರೆದಿದ್ದರು.

ಅಥೋ ನಿಶಾಖೇಟವಶಾದಟವ್ಯಾಂ
ಮೂಲೇ ತರೋರ್ಮೋಹವಶಾತ್ಪರಾಸುಮ್ |
ತಂ ವೀಕ್ಷ್ಯ ಮಾರ್ಗೇಽಮರುಕಂ ನೃಪಾಲಂ
ಸನಂದನಂ ಪ್ರಾಹ ಸ ಸಂಯಮೀಂದ್ರಃ || ೭೫

ಮೃತನಾದ ಆ ರಾಜನ ಹೆಸರು ಅಮರುಕ. ರಾತ್ರಿಯ ಹೊತ್ತು ಬೇಟೆಗಾಗಿ ಬಂದು ಅಡವಿಯಲ್ಲಿ ಮೂರ್ಛಿತನಾಗಿ ಒಂದು ಮರದಕೆಳಗೆ ಅವನು ಅಸುವನ್ನು ನೀಗಿದ್ದನು. ಈ ಸಂಯಮೀಂದ್ರರು ದಾರಿಯಲ್ಲಿ ಆ ನೃಪಾಲನನ್ನು ನೋಡಿ ಬಳಿಯಲ್ಲಿದ್ದ ಶಿಷ್ಯನಾದ ಸನಂದನನನ್ನು ಕುರಿತು ಇಂತೆಂದರು.

ಸೌಂದರ್ಯಸೌಭಾಗ್ಯನಿಕೇತ ಸೀಮಾಃ
ಪರಃಶತಾ ಯಸ್ಯ ಪಯೋರುಹಾಕ್ಷ್ಯಃ |
ಸ ಏಷ ರಾಜಾಽಮರುಕಾಭಿಧಾನಃ
ಶೇತೇ ಗತಾಸುಃ ಶ್ರಮತೋ ಧರಣ್ಯಾಮ್ || ೭೬

"ಸನಂದನ, ಸೌಂದರ್ಯ ಸೌಭಾಗ್ಯಗಳ ಪರಮಾವಧಿಗಳೇ ಆದ ನೂರಾರುಮಂದಿ ಕಮಲನೇತ್ರೆಯರಾದ ತರುಣಿಯರು ಈತನಿಗಿದ್ದಾರೆ. ಅಮರುಕನೆಂಬ ಈ ರಾಜನು ಅತ್ಯಾಯಾಸ ನಿಮಿತ್ತದಿಂದ ಪ್ರಾಣರಹಿತನಾಗಿ ನೆಲದಮೇಲೆ ಮಲಗಿದ್ದಾನೆ.

ಪ್ರವಿಶ್ಯ ಕಾಯಂ ತಮಿಮಂ ಪರಾಸೋಃ
ನೃಪಸ್ಯ ರಾಜ್ಯೇಽಸ್ಯ ಸುತಂ ನಿವೇಶ್ಯ |
ಯೋಗಾನುಭಾವಾತ್ಪುನರಪ್ಯುಪೈತು-
ಮುತ್ಕಂಠತೇ ಮಾನಸಮಸ್ಮದೀಯಮ್ || ೭೭

"ನಮ್ಮ ಯೋಗಮಹಿಮೆಯಿಂದ ಈ ರಾಜನ ಮೃತ ಶರೀರವನ್ನು ಪ್ರವೇಶಿಸಿ ರಾಜ್ಯದಲ್ಲಿ ಈತನ ಮಗನನ್ನು ಪ್ರತಿಷ್ಠಾಪಿಸಬೇಕೆಂದೂ ಅನಂತರ ಮತ್ತೆ ನಮ್ಮ ದೇಹಕ್ಕೆ ಹಿಂದಿರುಗಬೇಕೆಂದೂ ಮನಸ್ಸು ಬಯಸುತ್ತಿದೆ.

ಅನ್ಯಾದೃಶಾನಾಮದಸೀಯನಾನಾ-
ಕುಶೇಶಯಾಕ್ಷೀಕಿಲಕಿಂಚಿತಾನಾಮ್ |
ಸರ್ವಜ್ಞತಾನಿರ್ವಹಣಾಯ ಸೋಽಹಂ
ಸಾಕ್ಷಿತ್ವಮಪ್ಯಾಶ್ರಯಿತುಂ ಸಮೀಹೇ || ೭೮

ಈ ರಾಜನ ಪತ್ನಿಯರಾದ ಸುಂದರಿಯರು ಪ್ರದರ್ಶಿಸುವ ಕಿಲಕಿಂಚಿತಗಳನ್ನು ಸಾಕ್ಷಿಯಾಗಿ ನಾನು ನೋಡಬೇಕಾಗಿದೆ. ನನ್ನ ಸರ್ವಜ್ಞತ್ವವನ್ನು ನಿರ್ವಹಿಸುವುದಕ್ಕಾಗಿ ಮಾತ್ರ-ಹೀಗೆ ಮಾಡಲು ಇಚ್ಛಿಸುತ್ತೇನೆ"ಎಂದರು.

ಟಿಪ್ಪಣಿ:ಕಿಲಕಿಂಚಿತ – ಪ್ರಿಯತಮನೆದರಿಗೆ ಸ್ತ್ರೀಯರು ಮಾಡುವ ಒಂದು ಬಗೆಯ ಶೃಂಗಾರ ಚೇಷ್ಟೆ.

ಇತ್ಯೂಚಿವಾಂಸಂ ಯತಿತಲ್ಲಜಂ ತಂ
ಸನಂದನಃ ಪ್ರಾಹ ಸಸಾಂತ್ವಮೇನಮ್ |
ಸರ್ವಜ್ಞ ನೈವಾವಿದಿತಂ ತವಾಸ್ತಿ
ತಥಾಽಪಿ ಭಕ್ತಿರ್ಮುಖರಂ ತನೋತಿ || ೭೯

ಹೀಗೆ ಹೇಳಿದ ಆ ಯತಿಶ್ರೇಷ್ಠರನ್ನು ಕುರಿತು ಸನಂದನನು ವಿನಯಪೂರ್ವಕವಾಗಿ "ಸರ್ವಜ್ಞರೇ, ನಿಮಗೆ ಗೊತ್ತಿಲ್ಲದ್ದು ಯಾವುದೂ ಇಲ್ಲ. ಆದರೂ ನನಗಿರುವ ಭಕ್ತಿಯು ಮಾತಾಡುವಂತೆ ನನ್ನನ್ನು ಪ್ರೇರಿಸುತ್ತಿದೆ.

ಮತ್ಸ್ಯೇಂದ್ರನಾಮಾ ಹಿ ಪುರಾ ಮಹಾತ್ಮಾ
ಗೋರಕ್ಷಮಾದಿಶ್ಯ ನಿಜಾಂಗಗುಪ್ತ್ಯೈ |
ನೃಪಸ್ಯ ಕಸ್ಯಾಪಿ ತನುಂ ಪರಾಸೋಃ
ಪ್ರವಿಶ್ಯ ತತ್ಪತ್ತನಮಾಸಸಾದ || ೮೦

"ಹಿಂದೆ ಮತ್ಸ್ಯೇಂದ್ರನೆಂಬ ಮಹಾತ್ಮನು ತನ್ನ ದೇಹವನ್ನು ರಕ್ಷಿಸುವುದಕ್ಕಾಗಿ ಗೋರಕ್ಷನೆಂಬ ಶಿಷ್ಯನಿಗೆ ಅಪ್ಪಣೆಮಾಡಿ, ಮೃತನಾದ ಒಬ್ಬಾನೊಬ್ಬ ರಾಜನ ದೇಹವನ್ನು ಪ್ರವೇಶಿಸಿದನು. ಅನಂತರ ಅವನ ರಾಜಧಾನಿಗೆ ಹೋದನು.

ಭದ್ರಾಸನಾಧ್ಯಾಸಿನಿ ಯೋಗಿವರ್ಯೇ
ಭದ್ರಾಣ್ಯನಿದ್ರಾಣ್ಯಭವನ್ಪ್ರಜಾನಾಮ್ |
ವವರ್ಷ ಕಾಲೇಷು ಬಲಾಹಕೋಽಪಿ
ಸಸ್ಯಾನಿ ಚಾಽಽಶಾಸ್ಯ ಫಲಾನ್ಯಭೂವನ್ || ೮೧

"ಆ ಯೋಗಿವರೇಣ್ಯನು ಸಿಂಹಾಸನವನ್ನೇರಲಾಗಿ ಪ್ರಜೆಗಳಿಗೆ ನಾನಾಸೌಖ್ಯಗಳು ಪ್ರಕಾಶಗೊಂಡವು. ಕಾಲಕಾಲದಲ್ಲಿ ಮೋಡವು ಮಳೆ ಸುರಿಸಿತು. ಪೈರುಗಳು ಯಥೇಚ್ಛವಾಗಿ ಫಸಲುಗಳನ್ನು ಕೊಟ್ಟವು.

ವಿಜ್ಞಾಯ ವಿಜ್ಞಾಃ ಸಚಿವಾ ನೃಪಸ್ಯ
ಕಾಯೇ ಪ್ರವಿಷ್ಟಂ ಕಮಪೀಹ ದಿವ್ಯಮ್ |
ಸಮಾದಿಶನ್ ರಾಜಸರೋರುಹಾಕ್ಷೀಃ
ಸರ್ವಾತ್ಮನಾ ತಸ್ಯ ವಶೀಕ್ರಿಯಾಯೈ || ೮೨

"ಹೀಗಿರಲು ಬುದ್ಧಿಶಾಲಿಗಳಾದ ಮಂತ್ರಿಗಳು ರಾಜನ ದೇಹದಲ್ಲಿ ಯಾವನೋ ಒಬ್ಬ ದಿವ್ಯ ಪುರುಷನು ಪ್ರವೇಶಿಸಿದ್ದಾನೆಂದು ತಿಳಿದುಕೊಂಡುಬಿಟ್ಟರು. ರಾಜನ ರಾಣಿಯರೆಲ್ಲರಿಗೂ ಈತನನ್ನು ಸರ್ವವಿಧದಲ್ಲಿಯೂ ವಶೀಕಾರ ಮಾಡಿಕೊಳ್ಳಬೇಕೆಂದು ತಿಳಿಸಿದರು.

ಸಂಗೀತಲಾಸ್ಯಾಭಿನಯಾದಿಕೇಷು
ಸಂಸಕ್ತಚೇತಾ ಲಲಿತೇಷು ತಾಸಾಮ್ ।
ಸ ಏಷ ವಿಸ್ಮೃತ್ಯ ಮುನಿಃ ಸಮಾಧಿಂ
ಸರ್ವಾತ್ಮನಾ ಪ್ರಾಕೃತವದ್ಬಭೂವ ॥ ೮೩

"ಅನಂತರ ಆ ಸ್ತ್ರೀಯರ ಸಂಗೀತ ನೃತ್ಯ ಅಭಿನಯ ಮುಂತಾದ ಲಲಿತಕಲೆಗಳಲ್ಲಿ ಮತ್ಸ್ಯೇಂದ್ರಯೋಗಿಯು ಆಸಕ್ತನಾಗಿ ಬಿಟ್ಟನು. ಆ ಯೋಗಿಯು ತನ್ನ ತಪಸ್ಸೆಲ್ಲವನ್ನೂ ಮರೆತು ಸರ್ವವಿಧದಲ್ಲಿಯೂ ಒಬ್ಬ ಪ್ರಾಕೃತ ಮನುಷ್ಯನಂತೆ ಆಗಿಹೋದನು.

ಗೋರಕ್ಷ ಏಷೋಽಥ ಗುರೋಃ ಪ್ರವೃತ್ತಿಂ
ವಿಜ್ಞಾಯ ರಕ್ಷನ್ ಬಹುಧಾಽಸ್ಯ ದೇಹಮ್ ।
ನಿಶಾಂತಕಾಂತಾನಟನೋಪದೇಷ್ಟಾ
ನಿತಾಂತಮಸ್ಯಾಭವದಂತರಂಗಃ॥ ೮೪

"ಅನಂತರ ಗೋರಕ್ಷನು ತನ್ನಗುರುವಿನ ಈ ಪ್ರವೃತ್ತಿಯನ್ನು ಅರಿತನು. ಅವನ ದೇಹವನ್ನು ಬಹು ಪ್ರಕಾರವಾಗಿ ಕಷ್ಟದಿಂದ ಸಂರಕ್ಷಿಸುತ್ತಲೇ ಇದ್ದನು. ಅನಂತರ ರಾಜನ ಅಂತಃಪುರದ ಕಾಂತೆಯರಿಗೆ ನರ್ತನವನ್ನು ಕಲಿಸುವ ಶಿಕ್ಷಕನ ವೇಷವನ್ನು ಧರಿಸಿ ಕ್ರಮವಾಗಿ ರಾಜನ ಅಂತರಂಗದ ಒಬ್ಬ ಮನುಷ್ಯನಾದನು.

ತತ್ರೈಕದಾ ತತ್ತ್ವನಿಬೋಧನೇನ
ನಿವೃತ್ತರಾಗಂ ನಿಜದೇಶಿಕಂ ಸಃ ।
ಯೋಗಾನುಪೂರ್ವೀಮುಪದಿಶ್ಯ ನಿನ್ಯೇ
ಯಥಾಪುರಂ ಪ್ರಾಕ್ತನಮೇವ ದೇಹಮ್ ॥ ೮೫

"ಅಲ್ಲಿ ಒಂದು ಸಲ ಸಮಯವರಿತು ಗೋರಕ್ಷನು ತನ್ನ ಗುರುವಾದ ಮತ್ಸ್ಯೇಂದ್ರನಿಗೆ ತತ್ತ್ವವಿಷಯವನ್ನರುಹಿ ಆತನ ವಿಷಯಾನುರಾಗವನ್ನು ಹೋಗಲಾಡಿಸಿದನು. ಅನಂತರ ಹಿಂದಿನ ಯೋಗಮಾರ್ಗವನ್ನು ನೆನಪಿಸಿ ಮೊದಲಿನಂತೆಯೇ ಹಿಂದಿನ ದೇಹಕ್ಕೆ ಅವನನ್ನು ಸೇರಿಸಿದನಂತೆ.

ಹಂತೇದೃಶೋಽಯಂ ವಿಷಯಾನುರಾಗಃ
ಕಿಂಚೋರ್ಧ್ವರೇತೋ ವ್ರತಖಂಡನೇನ |
ಕಿಂ ನೋದಯೇತ್ಕಿಲ್ಬಿಷಮುಲ್ಬಣಂ ತೇ
ಕೃತ್ಯಂ ಭವಾನೇವ ಕೃತೀ ವಿವೇಕ್ತುಮ್ || ೮೬

"ಅಬ್ಬಾ!ವಿಷಯವ್ಯಾಮೋಹವೆಂಬುದು ಈ ಪರಿಯಾಗಿರುತ್ತದೆ!ಅಲ್ಲದೆ (ಈ ರೀತಿಯಲ್ಲಿ ರಾಜನ ದೇಹವನ್ನು ಪ್ರವೇಶಿಸಿದರೆ)ಊರ್ಧ್ವರೇತಸ್ಕನಾದ ಯತಿಯ ವ್ರತವು ಭಗ್ನವಾಗುವುದರಿಂದ ನಿಮಗೆ ಘೋರವಾದ ಪಾಪವು ಅಂಟದಿರುವುದೆ?ಇದನ್ನು ವಿಚಾರಮಾಡಲು ನೀವೇ ಸಮರ್ಥರು.

ವ್ರತಮಸ್ಮದೀಯಮತುಲಂ ಕ್ವ ಮಹತ್
ಕ್ವ ಚ ಕಾಮಶಾಸ್ತ್ರಮತಿಗರ್ಹ್ಯಮಿದಮ್ |
ತದಪೀಷ್ಯತೇ ಭಗವತೈವ ಯದಿ
ಹ್ಯನವಸ್ಥಿತಂ ಜಗದಿಹೈವ ಭವೇತ್ || ೮೭

"ಅಸದೃಶವೂ ಮಹತ್ತರವೂ ಆದ ನಮ್ಮ ವ್ರತವೆಲ್ಲಿ?ಅತ್ಯಂತ ಹೀನವಾದ ಈ ಕಾಮಶಾಸ್ತ್ರವೆಲ್ಲಿ?ಹೀಗಿದ್ದರೂ ಭಗವತ್ಪಾದರಾದ ನೀವೇ ಅದನ್ನು ಬಯಸುವುದಾದರೆ, ಜಗತ್ತು ಈಗಲೇ ದುರ್ದೆಸೆಗೆ ಇಳಿದು ಎಲ್ಲ ಧರ್ಮವ್ಯವಸ್ಥೆಯೂ ಭಗ್ನವಾದೀತು.

ಅಧಿಮೇದಿನಿ ಪ್ರಥಯಿತುಂ ಶಿಥಿಲಂ
ಧೃತಕಂಕಣಸ್ಯ ಯತಿಧರ್ಮಮಿಮಮ್ |
ಭವತಃ ಕಿಮಸ್ತ್ಯವಿದಿತಂ ತದಪಿ
ಪ್ರಣಯಾನ್ಮಯೋದಿತಮಿದಂ ಭಗವನ್ || ೮೮

ಹೇ ಭಗವನ್, ಈ ಭೂಮಿಯಲ್ಲಿ ಶಿಥಿಲವಾಗಿ ಹೋದ ಸಂನ್ಯಾಸ ಧರ್ಮವನ್ನು ಪ್ರಚಾರಗೊಳಿಸುವುದಕ್ಕಾಗಿ ಬದ್ಧಕಂಕಣರಾದವರು ನೀವು. ನಿಮಗೆ ತಿಳಿಯದ ವಿಷಯವಾದರೂ ಯಾವುದಿದೆ?ಆದರೂ ತಮ್ಮಲ್ಲಿ ನನಗಿರುವ ಪ್ರೇಮಭಕ್ತಿಯಿಂದ ಈ ಮಾತನ್ನು ಹೇಳಿಬಿಟ್ಟೆನು" ಎಂದನು.

ಸ ನಿಶಮ್ಯ ಪದ್ಮಚರಣಸ್ಯ ಗಿರಂ
ಗಿರತಿ ಸ್ಮ ಗೀಷ್ಪತಿಸಮಪ್ರತಿಭಃ |
ಅವಿಗೀತಮೇವ ಭವತಾ ಫಣಿತಂ
ಶೃಣು ಸೌಮ್ಯ ವಚ್ಮಿ ಪರಮಾರ್ಥಮಿದಮ್ || ೮೯

ಬೃಹಸ್ಪತಿಗೆ ಸಮವಾದ ಪ್ರತಿಭಾಶಕ್ತಿಯಿದ್ದ ಶ್ರೀಶಂಕರರು ಆ ಮಾತನ್ನು ಕೇಳಿ ಇಂತೆಂದರು: "ಸೌಮ್ಯ- ಪದ್ಮಪಾದ, ನೀನು ಹೇಳಿದ್ದು ಯೋಗ್ಯವಾದದ್ದೇ ಸರಿ, ಆದರೂ ಪರಮಾರ್ಥ ವೇನೆಂಬುದನ್ನು ಹೇಳುತ್ತೇನೆ, ಕೇಳು.

ಅಸಂಗಿನೋ ನ ಪ್ರಭವಂತಿ ಕಾಮಾ
ಹರೇರಿವಾಭೀರವಧೂಸಖಸ್ಯ |
ವಜ್ರೋಲಿಯೋಗಪ್ರತಿಭೂಃ ಸ ಏಷ
ವತ್ಸಾವಕೀರ್ಣಿತ್ವವಿಪರ್ಯಯೋ ನಃ || ೯೦

"ವಿಷಯಾಸಂಗವನ್ನು ಪೂರ್ಣವಾಗಿ ತೊರೆದವನಿಗೆ ಈ ಕಾಮವಿಷಯಗಳು ಏನೂ ಮಾಡಲಾರವು. ಗೋಪಸ್ತ್ರೀಯರೊಡನೆ ಗೆಳೆಯನಾಗಿ ವರ್ತಿಸಿದ ಶ್ರೀಕೃಷ್ಣನಿದ್ದಂತೆ ವಿಷಯಾಸಕ್ತಿಯನ್ನು ತ್ಯಜಿಸಿದವನು. ವತ್ಸ, ನಮಗೆ ರೇತಃಪಾತದಿಂದ ವ್ರತಭಂಗ ವಾಗದಿರುವುದು ವಜ್ರೋಲಿಯೋಗಕ್ಕೆ ಸಮಾನವಾದದ್ದು.

ವಿವರಣೆ:-ಅವಕೀರ್ಣಿ=ರೇತೋವಿಸರ್ಜನದಿಂದ ಭಗ್ನವ್ರತನಾದವನು, ಬ್ರಹ್ಮಚರ್ಯ ವ್ರತವನ್ನು ಕೆಡಿಸಿಕೊಂಡವನು. ವಿಸೃಷ್ಟವಾದ ರೇತಸ್ಸನ್ನು ಮತ್ತೆ ಹಿಂದಕ್ಕೆ ಆಕರ್ಷಿಸಿ ತೆಗೆದುಕೊಳ್ಳುವುದು ವಜ್ರೋಲಿ ಎಂಬ ಹಠಯೋಗ.

ಸಂಕಲ್ಪ ಏವಾಖಿಲಕಾಮಮೂಲಂ
ಸ ಏವ ಮೇ ನಾಸ್ತಿ ಸಮಸ್ಯ ವಿಷ್ಣೋಃ |
ತನ್ಮೂಲಹಾನೌ ಭವಪಾಶನಾಶಃ
ಕರ್ತುಃ ಸದಾ ಸ್ಯಾದ್ಭವದೋಷದೃಷ್ಟೇಃ || ೯೧

"ಸಂಕಲ್ಪವೇ ಸಕಲ ಕಾಮಗಳಿಗೂ ಮೂಲವಾದದ್ದು. ವಿಷ್ಣುವಿಗೆ ಸಮನಾದ ನನಗೆ ಸಂಕಲ್ಪವೆಂಬುದೇ ಇಲ್ಲ. ಯಾವಾಗಲೂ ಸಂಸಾರ ದೋಷದಲ್ಲಿ ದೃಷ್ಟಿಯುಳ್ಳ ಕರ್ತೃವಿಗೆ ಕಾಮಮೂಲವಾದ ಸಂಕಲ್ಪವೇ ಇಲ್ಲದಾಗ ಸಂಸಾರ ಪಾಶವು ಇರುವುದೇ ಇಲ್ಲ.

ಅವಿಚಾರ್ಯ ಯಸ್ತು ವಪುರಾದ್ಯಹಮಿ-
ತ್ಯಭಿಮನ್ಯತೇ ಜಡಮತಿಃ ಸುದೃಢಮ್ |
ತಮಬುದ್ಧತತ್ತ್ವಮಧಿಕೃತ್ಯ ವಿಧಿ-
ಪ್ರತಿಷೇಧಶಾಸ್ತ್ರಮಖಿಲಂ ಸಫಲಮ್ || ೯೨

"ಯಾವ ಜಡಬುದ್ಧಿಯವನು ದೇಹವೇ ಮೊದಲಾದದ್ದು ನಾನು ಎಂದು ದೃಢವಾಗಿ ಅಭಿಮಾನವಿಟ್ಟುಕೊಂಡಿರುವವನೋ ಅವನು ತತ್ತ್ವಜ್ಞಾನವನ್ನು ತಿಳಿದವನಲ್ಲ. ಅಂತಹ ಅಜ್ಞಾನಿಗೋಸ್ಕರ ಸಮಸ್ತ ವಿಧಿಶಾಸ್ತ್ರವೂ ಪ್ರತಿಷೇಧ ಶಾಸ್ತ್ರವೂ ಅರ್ಥವತ್ತಾಗಿ ಹೊರಟಿವೆ.

ಕೃತಧೀಸ್ತ್ವನಾಶ್ರಮಮವರ್ಣಮಜಾ-
ತ್ಯವಬೋಧಮಾತ್ರಮಜಮೇಕರಸಮ್ ।
ಸ್ವತಯಾಽವಗತ್ಯ ನ ಭಜೇನ್ನಿವಸನ್
ನಿಗಮಸ್ಯ ಮೂರ್ಧ್ನಿ ವಿಧಿಕಿಂಕರತಾಮ್ ॥ ೯೩

"ಆದ್ದರಿಂದ ಮಹಾವಾಕ್ಯ ಜನ್ಯವಾದ ಬ್ರಹ್ಮಜ್ಞಾನವಿರತಕ್ಕವನು ತಾನು ಆಶ್ರಮರಹಿತನೂ ವರ್ಣವಿಲ್ಲದವನೂ ಅಜನೂ ಏಕರಸವೂ ಆದ ಅವಬೋಧಸ್ವರೂಪನು ಎಂದು ತಿಳಿದಿರುತ್ತಾನೆ. ಆತನು ವೇದದ ಶಿರಸ್ಸಿನಮೇಲೆ ಕುಳಿತವನು. ಆತನು ಎಂದಿಗೂ ವಿಧಿಶಾಸ್ತ್ರಕ್ಕೆ ಕಿಂಕರ ನಾಗುವುದಿಲ್ಲ.

ಕಲಶಾದಿ ಮೃತ್ಪ್ರಭವಮಸ್ತಿ ಯಥಾ
ಮೃದಮಂತರಾ ನ ಜಗದೇವಮಿದಮ್ ।
ಪರಮಾತ್ಮಜನ್ಯಮಪಿ ತೇನ ವಿನಾ
ಸಮಯತ್ರಯೇಽಪಿ ನ ಸಮಸ್ತಿ ಖಲು ॥ ೯೪

"ಗಡಿಗೆ, ಹರಿವಿ ಮೊದಲಾದದ್ದು ಮಣ್ಣಿನಿಂದ ನಿರ್ಮಿತವಾಗಿರುತ್ತವೆ. ಅದು ಮಣ್ಣನ್ನು ಬಿಟ್ಟು ಹೇಗೆ ಬೇರೆಯಲ್ಲವೋ ಹಾಗೆಯೇ ಪರಮಾತ್ಮಜನ್ಯವಾದ ಈ ಜಗತ್ತು ಪರಮಾತ್ಮನಲ್ಲದೆ ಬೇರೆಯಲ್ಲ -ಎಂಬುದು ಕಾಲತ್ರಯದಲ್ಲಿಯೂ ನಿಶ್ಚಿತವಾಗಿಯೇ ಇದೆ ಅಲ್ಲವೆ?

ವಿವರಣೆ:-ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ, ಸರ್ವಂ ಖಲ್ವಿದಂ ಬ್ರಹ್ಮ-ಇತ್ಯಾದಿ ಶ್ರುತಿವಚನಗಳನ್ನು ಇಲ್ಲಿ ಸ್ಮರಿಸಿಕೊಳ್ಳ ಬೇಕು.

ಕಥಮಜ್ಯತೇ ಜಗದಶೇಷಮಿದಂ
ಕಲಯನ್ಮೃಷೇತಿ ಹೃದಿ ಕರ್ಮಫಲೈಃ ।
ನ ಫಲಾಯ ಹಿ ಸ್ವಪನಕಾಲಕೃತಂ
ಸುಕೃತಾದಿ ಜಾತ್ವನೃತಬುದ್ಧಿ ಹತಮ್ ॥ ೯೫

"ನಿಖಿಲ ಜಗತ್ತು ಮಿಥ್ಯೆ ಎಂದು ಹೃದಯದಲ್ಲಿ ನಿಶ್ಚಯಿಸಿರತಕ್ಕವನು ಕರ್ಮಫಲಗಳಿಂದ ಹೇಗೆ ಸಂಬಂಧವನ್ನು ಪಡೆದಾನು?(ಅವನಿಗೆ ಕರ್ಮಫಲವು ಅಂಟುವುದಿಲ್ಲ). ಕನಸಿನಲ್ಲಿ

ಮಾಡಿದ ಪುಣ್ಯವೋ ಪಾಪವೋ ಫಲವನ್ನು ಕೊಡುವುದಿಲ್ಲ, ಅಲ್ಲವೆ?ಏಕೆಂದರೆ, ಕನಸಿನ ಕೃತ್ಯವು ಸುಳ್ಳೆಂಬ ನಿಶ್ಚಯದಿಂದ ಹತವಾಗಿ ಬಿಟ್ಟಿರುತ್ತದೆ.

ತದಯಂ ಕರೋತು ಹಯಮೇಧಶತಾ-
ನ್ಯಮಿತಾನಿ ವಿಪ್ರಹನನಾನ್ಯಥವಾ |
ಪರಮಾರ್ಥವಿನ್ನ ಸುಕೃತೈರ್ದುರಿತೈ-
ರಪಿ ಲಿಪ್ಯತೇಽ ಸ್ತಮಿತ ಕರ್ತೃತಯಾ || ೯೬

"ಆದ್ದರಿಂದ ಪರಮಾರ್ಥತತ್ತ್ವಜ್ಞಾನಿಯು ನೂರಾರು ಅಶ್ವಮೇಧಯಾಗಗಳನ್ನೇ ಮಾಡಲಿ ಅಥವಾ ಲೆಕ್ಕವಿಲ್ಲದಷ್ಟು ಬ್ರಹ್ಮಹತ್ಯೆಗಳನ್ನೇ ಮಾಡಲಿ, ಅವುಗಳಿಂದಾದ ಪುಣ್ಯಗಳಾಗಲಿ ಪಾಪಗಳಾಗಲಿ ಸೋಂಕುವುದಿಲ್ಲ. ಏಕೆಂದರೆ, ತತ್ತ್ವಜ್ಞಾನಿಯು ತಾನು ಕರ್ತೃವೆಂಬ ಭಾವನೆಯನ್ನು ಕಳೆದುಕೊಂಡಿರುತ್ತಾನೆ.

ಅವಧೀತ್ತ್ರಿಶೀರ್ಷಮದದಾಚ್ಚ ಯತೀನ್
ವೃಕಮಂಡಲಾಯ ಕುಪಿತಃ ಶತಶಃ |
ಬತ ಲೋಮಹಾನಿರಪಿ ತೇನ ಕೃತಾ
ನ ಶತಕ್ರತೋರಿತಿ ಹಿ ಬಹ್ವೃಚಗೀಃ || ೯೭

"ದೇವೇಂದ್ರನು ತ್ರಿಶೀರ್ಷನಾದ ವಿಶ್ವರೂಪನನ್ನು ಕೊಂದನು. ಅನೇಕ ಯತಿಗಳನ್ನು ತೋಳಗಳ ಗುಂಪಿಗೆ ಬಲಿಕೊಟ್ಟನು. ಹೀಗೆ ಕುಪಿತನಾಗಿ ಆತನು ಏನು ಮಾಡಿದರೂ ಅವನಿಗೆ ಒಂದು ರೋಮದ ಹಾನಿಯೂ ಆಗಲಿಲ್ಲ-ಎಂದು ಋಗ್ವೇದದ ವಚನವಿದೆಯಲ್ಲವೆ?

ವಿವರಣೆ:-"ತ್ರಿಶೀರ್ಷಾಣಂ ತ್ವಾಷ್ಟ್ರಮಹನಮವಾಙ್ಮುಖಾನ್ ಯತೀನ್ ಶಾಲಾವೃಕೇಭ್ಯಃ ಪ್ರಾಯಚ್ಛಮ್| ತಸ್ಯಮೇ ತತ್ರಲೋಮಾಪಿ ನ ಮೀಯತೇ| ಸ ಯೋ ಮಾ ವೇದ ನ ಹ ವೈ ತಸ್ಯ ಕೇನಚನ ಕರ್ಮಣಾ ಲೋಕೋ ಮೀಯತೇ ನ ಸ್ತೇಯೇನ ನ ಭ್ರೂಣಹತ್ಯಯಾ" (ಪಾಠಾಂತರವಿದೆ). ಕೌಷೀ. ೧೬.

ಬಹುದಕ್ಷಿಣೈರಯಜತ ಕ್ರತುಭಿಃ
ವಿಬುಧಾನತರ್ಪಯದಸಂಖ್ಯಧನೈಃ |
ಜನಕಸ್ತಥಾಪ್ಯಭಯಮಾಪ ಪರಂ
ನ ತು ದೇಹಯೋಗಮಿತಿ ಕಾಣ್ವವಚಃ || ೯೮

"ಹಾಗೆಯೇ ಜನಕರಾಜನು ಬಹಳ ದಕ್ಷಿಣೆಗಳನ್ನಿಟ್ಟು ಕ್ರತುಗಳನ್ನು ಆಚರಿಸಿ ಅಸಂಖ್ಯಾತವಾಗಿ ಹಣವನ್ನು ಖರ್ಚುಮಾಡಿ ದೇವತೆಗಳನ್ನು ತೃಪ್ತಿಪಡಿಸಿದನು. ಆದರೂ

ಆತನು ಅಭಯವಾದ ಬ್ರಹ್ಮವನ್ನೈದಿದನು. ಮತ್ತೆ ದೇಹಸಂಬಂಧವು ಅವನಿಗಾಗಲಿಲ್ಲ" ಎಂದು ಕಾಣ್ವಶ್ರುತಿಯು ಹೇಳುತ್ತದೆ.

ವಿವರಣೆ:- "ಜನಕೋ ಹ ವೈದೇಹೋ ಬಹುದಕ್ಷಿಣೇನ ಯಜ್ಞೇನೇಜೇ"(ಬೃಹ. ೬-೩)" ಅಭಯಂ ವೈ ಜನಕ ಪ್ರಾಪ್ತೋಽಸಿ"(ಬೃಹ. ೪-೨)

ನ ವಿಹೀಯತೇಽಹಿರಿಪುವದ್ದುರಿತೈಃ
ನ ಚ ವರ್ಧತೇ ಜನಕವತ್ಸುಕೃತೈಃ |
ನ ಸ ತಾಪಮೇತ್ಯಕರವಂ ದುರಿತಂ
ಕಿಮಹಂ ನ ಸಾಧ್ವಕರವಂ ತ್ವಿತಿ ಚ || ೯೯

"ಆದ್ದರಿಂದ ಜ್ಞಾನಿಯು ದೇವೇಂದ್ರನಂತೆ ದುರಿತಗಳಿಗೂ ಜನಕರಾಜನಂತೆ ಪುಣ್ಯಗಳಿಗೂ ಪಾತ್ರನಾಗುವುದೇ ಇಲ್ಲ. ಜ್ಞಾನಿಯು 'ನಾನು ಈ ಪಾಪಕೃತ್ಯಗಳನ್ನು ಏಕೆ ಮಾಡಿದೆನು? ಪುಣ್ಯಕಾರ್ಯಗಳನ್ನು ಏಕೆ ಮಾಡಲಿಲ್ಲ?'ಎಂದು ಪಶ್ಚಾತ್ತಾಪ ಪಡುವುದೇ ಇಲ್ಲ.

ತದನಂಗಶಾಸ್ತ್ರ ಪರಿಶೀಲನ ಮ-
ಪ್ಯಮುನೈವ ಸೌಮ್ಯ ಕರಣೇನ ಕೃತಮ್ |
ನ ಹಿ ದೋಷಕೃತ್ತದಪಿ ಶಿಷ್ಟ ಸರ-
ಣ್ಯವನಾರ್ಥಮನ್ಯವಪುರೇತ್ಯ ಯತೇ || ೧೦೦

ಆದ್ದರಿಂದ, ಸೌಮ್ಯ-ಸನಂದನ, ಹಾಗೆಯೇ ಕಾಮಶಾಸ್ತ್ರದ ಪರಿಶೀಲನೆಯನ್ನು ಈ ದೇಹವು ಮಾಡಿದರೆ ಅದರಿಂದ ದೋಷವೇನೂ ಅಂಟುವುದಿಲ್ಲ. ಆದರೂ ಸಹ ಶಿಷ್ಟಮಾರ್ಗವನ್ನನುಸರಿಸಿ ಇನ್ನೊಂದು ದೇಹವನ್ನು ಪಡೆದು ಪ್ರಯತ್ನಿಸುವೆನು"ಎಂದರು.

ಇತಿ ಸತ್ಕಥಾಃ ಸ ಕಥನೀಯಯಶಾ
ಭವಭೀತಿಭಂಜನಕರೀಃ ಕಥಯನ್ |
ಸುದುರಾಸದಂ ಚರಣಚಾರಿಜನೈಃ
ಗಿರಿಶೃಂಗಮೇತ್ಯ ಪುನರೇವ ಜಗೌ || ೧೦೧

ಈ ರೀತಿಯಲ್ಲಿ ಕೀರ್ತಿಶಾಲಿಗಳಾದ ಶ್ರೀ ಶಂಕರರು ಭವಭಯವನ್ನು ದೂರಮಾಡುವ ಸದ್ವಿಚಾರಗಳನ್ನು ಶಿಷ್ಯರಿಗೆ ಹೇಳುತ್ತಾ ಪಾದಚಾರಿಗಳಿಗೆ ದುರಾಸದವಾದ ಒಂದು ಪರ್ವತಶಿಖರಕ್ಕೆ ಹೋದರು. ಅಲ್ಲಿ ಮತ್ತೆ ಹೀಗೆಂದರು:

ಅಧಿಸಾನು ಪಶ್ಯತ ವಿಭಾತಿ ಗುಹಾ
ಪುರತಃ ಶಿಲಾ ಸಮತಲಾ ವಿಪುಲಾ |

ಸರಸೀ ಚ ತತ್ಪರಿಸರೇಽಚ್ಛಜಲಾ
ಫಲಭಾರನಮ್ರತರುರಮ್ಯತಟಾ || ೧೦೨

"ಅಲ್ಲಿ ನೋಡಿರಿ, ಅಲ್ಲೊಂದು ಗುಹೆ ಕಾಣಿಸುತ್ತಿದೆ. ಅದರ ಎದುರುಗಡೆ ವಿಶಾಲವೂ ಸಮತಳವೂ ಆದ ಕಲ್ಲಿನ ಹಾಸು ಇದೆ. ಅದರ ಬಳಿಯಲ್ಲಿಯೇ ಸ್ವಚ್ಛವಾದ ಜಲವುಳ್ಳ ಒಂದು ಸರೋವರವಿದೆ. ಅದರ ತೀರದಲ್ಲಿ ಇರುವ ಮರಗಳು ಹಣ್ಣುಗಳ ಭಾರದಿಂದ ಬಳುಕುತ್ತಿವೆ.

ಪರಿಪಾಲ್ಯತಾಮಿಹ ವಸದ್ಭಿರಿದಂ
ವಪುರಪ್ರಮಾದಮನವದ್ಯಗುಣಾಃ |
ಅಹಮಾಸ್ಥಿತಸ್ತದುಚಿತಂ ಕರಣಂ
ಕಲಯಾಮಿ ಯಾವದಸಮೇಷುಕಲಾಮ್ || ೧೦೩

ಎಲೈ ಗುಣಶಾಲಿಗಳಾದ ಶಿಷ್ಯರೇ, ನೀವು ಇಲ್ಲಿಯೇ ವಾಸಮಾಡಿಕೊಂಡು ಈ ದೇಹವನ್ನು ಎಚ್ಚರಿಕೆಯಿಂದ ರಕ್ಷಿಸುತ್ತಿರಿ. ನಾನು ಕಾಮಕಲೆಗೆ ಉಚಿತವಾದ ಇನ್ನೊಂದು ದೇಹವನ್ನು ಸೇರಿ ಮನ್ಮಥಕಲೆಯನ್ನು ಪರಿಶೀಲಿಸುವೆನು".

ಇತಿ ಶಿಷ್ಯವರ್ಗಮನುಶಾಸ್ಯ ಯಮಿ-
ಪ್ರವರೋ ವಿಸೃಷ್ಟಕರಣೋಽಧಿಗುಹಮ್ |
ಮಹಿಪಸ್ಯ ವರ್ಷ್ಮ ಗುರುಯೋಗಬಲೋಽ-
ವಿಶದಾತಿವಾಹಿಕಶರೀರಯುತಃ || ೧೦೪

ಹೀಗೆ ತಮ್ಮ ಶಿಷ್ಯವರ್ಗಕ್ಕೆ ಆದೇಶವನ್ನಿತ್ತು ಆ ಯತಿಶ್ರೇಷ್ಠರು ಆ ಗುಹೆಯಲ್ಲಿ ತಮ್ಮ ದೇಹವನ್ನು ತ್ಯಜಿಸಿದರು. ಪ್ರಬಲವಾದ ಯೋಗಸಾಮರ್ಥ್ಯವಿದ್ದ ಅವರು ಆತಿವಾಹಿಕಶರೀರ ಯುಕ್ತರಾಗಿ ಅಮರುಕರಾಜನ ಶರೀರವನ್ನು ಪ್ರವೇಶಿಸಿದರು.

ಟಿಪ್ಪಣಿ:ಆತಿವಾಹಿಕ ಶರೀರ = ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಪಂಚಪ್ರಾಣ, ಮನಸ್ಸು, ಬುದ್ಧಿ-ಎಂಬ ಹದಿನೇಳು ಅಂಶಗಳಿಂದ ಕೂಡಿದ ಲಿಂಗ ಶರೀರ.

ಅಂಗುಷ್ಠಮಾರಭ್ಯ ಸಮೀರಣಂ ನಯನ್
ಕರಂಧ್ರಮಾರ್ಗಾದ್ಬಹಿರೇತ್ಯ ಯೋಗವಿತ್ |
ಕರಂಧ್ರಮಾರ್ಗೇಣ ಶನೈಃ ಪ್ರವಿಷ್ಟವಾನ್
ಮೃತಸ್ಯ ಯಾವಚ್ಚರಣಾಗ್ರಮೇಕಧೀಃ || ೧೦೫

ಆ ಯೋಗಜ್ಞರು ತಮ್ಮ ಪಾದದ ಅಂಗುಷ್ಠದಿಂದ ಹಿಡಿದು ವಾಯುವನ್ನು ಮೇಲಕ್ಕೆ ಸೆಳೆಯುತ್ತ ಶಿರಸ್ಸಿನಲ್ಲಿರುವ ಬ್ರಹ್ಮರಂಧ್ರದ ಮಾರ್ಗವಾಗಿ ಹೊರಗೆ ಬಂದು

ನಿಶ್ಚಲಬುದ್ಧಿಯುಳ್ಳವರಾಗಿ ಮೃತನಾದ ಅಮರುಕ ರಾಜನ ಬ್ರಹ್ಮರಂಧ್ರದಿಂದ ಪಾದದ ಅಂಗುಷ್ಠದ ವರೆಗೆ ಮೆಲ್ಲಗೆ ಪ್ರವೇಶಮಾಡಿದರು.

ಗಾತ್ರಂ ಗತಾಸೋರ್ವಸುಧಾಧಿಪಸ್ಯ
ಶನೈಃ ಸಮಾಸ್ಪಂದತ ಹೃತ್ಪ್ರದೇಶೇ |
ತಥೋದಮೀಲನ್ನಯನಂ ಕ್ರಮೇಣ
ತಥೋದತಿಷ್ಠತ್ಸ ಯಥಾ ಪುರೈವ || ೧೦೬

ಆಗ ಮೃತನಾಗಿದ್ದ ಭೂಪತಿಯ ದೇಹವು ಹೃದಯಪ್ರದೇಶದಲ್ಲಿ ಮೆಲ್ಲಗೆ ಹೊಡೆಯಲಾರಂಭಿಸಿತು. ಆಮೇಲೆ ಕ್ರಮವಾಗಿ ಆತನು ಕಣ್ಣುಬಿಟ್ಟನು!ಬಳಿಕ ಮೊದಲಿನಂತೆಯೇ ಮೇಲಕ್ಕೆ ಎದ್ದನು!

ಆದೌ ತದಂಗಮುದಯನ್ಮುಖಕಾಂತಿ ಪಶ್ಚಾತ್
ನಾಸಾಂತನಿರ್ಯದನಿಲಂ ಶನಕೈಃ ಪರಸ್ತಾತ್ |
ಉನ್ಮೀಲದಂಘ್ರಿಚಲನಂ ತದನೂದ್ಯದಕ್ಷಿ-
ವ್ಯಾಕೋಚಮುತ್ಥಿತಮುಪಾತ್ತಬಲಂ ಕ್ರಮೇಣ || ೧೦೭

ಯಾವಕ್ರಮದಿಂದ ಎಂದರೆ, ಮೊದಲು ಅವನ ಮುಖದಲ್ಲಿ ಕಾಂತಿ ಉದಯಿಸಿತು. ಆಮೇಲೆ ಮೂಗಿನ ರಂಧ್ರದಿಂದ ಮೆಲ್ಲನೆ ಉಸಿರು ಹೊರಟಿತು. ತರುವಾಯ ಕಾಲು ಅಲ್ಲಾಡಿತು. ಆಮೇಲೆ ಮೆಲ್ಲನೆ ಕಣ್ಣುತೆರೆಯಿತು. ಅನಂತರ ದೇಹಕ್ಕೆ ಬಲವು ಬಂದು ರಾಜನು ಮೇಲೆದ್ದನು.

ತಂ ಪ್ರಾಪ್ತಜೀವಮುಪಲಭ್ಯ ಪತಿಂ ಪ್ರಭೂತ-
ಹರ್ಷಸ್ವನಾಃ ಪ್ರಮುದಿತಾನನ ಪಂಕಜಾಸ್ತಾಃ |
ನಾರ್ಯೋ ವಿರೇಜುರರುಣೋದಯ ಸಂಪ್ರಫುಲ್ಲ-
ಪದ್ಮಾಃ ಸಸಾರಸರವಾ ಇವ ವಾರಿಜಿನ್ಯಃ || ೧೦೮

ಹೀಗೆ ಮತ್ತೆ ಜೀವವನ್ನು ಪಡೆದ ಪತಿಯನ್ನು ನೋಡಿ ಆತನ ಪತ್ನಿಯರು ಹರ್ಷದಿಂದ ಧ್ವನಿಮಾಡಿದರು. ಅವರ ಮುಖಕಮಲಗಳು ಅರಳಿದವು. ಅರುಣೋದಯ ಕಾಲದಲ್ಲಿ ಅರಳಿದ ತಾವರೆಗಳುಳ್ಳ ಮತ್ತು ಸಾರಸಪಕ್ಷಿಗಳ ಕಲರವದಿಂದ ಸಹಿತವಾದ ತಾವರೆಯ ಬಳ್ಳಿಗಳಂತೆ ಆ ವನಿತೆಯರು ಕಾಣಿಸಿದರು.

ಹರ್ಷಂ ತಾಸಾಮುದಿತಮತುಲಂ ವೀಕ್ಷ್ಯ ವಾಮೇಕ್ಷಣಾನಾಂ
ಆತ್ತಪ್ರಾಣಂ ನೃಪಮಪಿ ಮಹಾಮಾತ್ಯಮುಖ್ಯಾಃ ಪ್ರಹೃಷ್ಟಾಃ |

ದಧ್ಮುಃ ಶಂಖಾನ್ ಪಣವಪಟಹಾನ್ ದುಂದುಭೀಶ್ಚಾಭಿಜಘ್ನು-
ಸ್ತೇಷಾಂ ಘೋಷಾಃ ಸಪದಿ ಬಧಿರೀಚಕ್ರಿರೇ ದ್ಯಾಂ ಭುವಂ ಚ || ೧೧೯

ಈ ಪ್ರಕಾರವಾಗಿ ಆ ಸುಂದರಿಯರ ಅಪಾರವಾದ ಹರ್ಷವನ್ನೂ ಬದುಕಿಬಂದ ರಾಜನನ್ನೂ ಕಂಡು ಅಮಾತ್ಯರೇ ಮೊದಲಾದವರಿಗೆ ಬಹಳ ಸಂತೋಷವಾಯಿತು. ಅಲ್ಲಿದ್ದವರು ಶಂಖಗಳನ್ನು ಊದಿದರು. ತಮಟೆ, ಮೃದಂಗ, ಭೇರಿ ಮುಂತಾದ ವಾದ್ಯಗಳನ್ನು ಬಾರಿಸಿದರು. ಅವೆಲ್ಲವುಗಳ ಘೋಷಗಳು ಒಡನೆಯೇ ಭೂಮ್ಯಾಕಾಶಗಳನ್ನು ಕಿವುಡುಗಟ್ಟಿಸಿದವು.

ಇತಿ ಶ್ರೀ ಮಾಧವೀಯೇ ತತ್ಸಾರ್ವಜ್ಞ್ಯೋಪಾಯಗೋಚರಃ |
ಸಂಕ್ಷೇಪ ಶಂಕರಜಯೇ ಸರ್ಗೋಽಯಂ ನವಮೋಽಭವತ್ ||

ಇಲ್ಲಿಗೆ ಶ್ರೀಮಾಧವೀಯ ಸಂಕ್ಷೇಪ ಶಂಕರವಿಜಯವೆಂಬ ಗ್ರಂಥದಲ್ಲಿ ಆಚಾರ್ಯರು ಸರ್ವಜ್ಞರೆಂಬ ವಿಷಯವನ್ನು ವಿವರಿಸುವ ಒಂಬತ್ತನೆಯ ಸರ್ಗವು ಸಮಾಪ್ತವಾಯಿತು.

*

ಆದಿತಃ ೧೦೨೯ ಶ್ಲೋಕಾಃ

✤ ✤ ✤

ಶ್ಲೋಕಾನುಕ್ರಮಣಿಕೆ

ಸರ್ಗ ೧-೯

	ಸರ್ಗ	ಶ್ಲೋಕ		ಸರ್ಗ	ಶ್ಲೋಕ
ಅಕಾರಿ ಯತ್ಸಾಹಸ	೨	೩೮	ಅಥ ವ್ರತೀಂದುರ್ವಿಧಿ	೬	೬೫
ಅಕ್ಷೀಣ ಚೇದ್ ಭೇದ	೮	೯೩	ಅಥ ಶಾರದಾಽಕೃತ	೯	೬೬
ಅಗ್ನೀನಥಾಧಿತ	೭	೩೬	ಅಥ ಶಿವೋಮನುಜೋ	೪	೧
ಅಗ್ರಹಾರಶತ	೫	೧೩೪	ಅಥ ಶೋಕಪರೀ	೫	೫೧
ಅಂಗುಷ್ಠಮಾರಭ್ಯ	೯	೧೦೫	ಅಥ ಸಂಯಮಿಕ್ಷಿತಿ	೯	೧
ಅಚಿಂತ್ಯಮವ್ಯಕ್ತ	೬	೩೧	ಅಥಸಾ ಕಥಾ	೯	೬೩
ಅಜನಿದುಃಖಕರೋ	೪	೩	ಅಥಾಗಮದ್ಬ್ರಾಹ್ಮಣ	೬	೧
ಅಜ್ಞಾತ ಸಂಭವ	೨	೬೨	ಅಥಾನುಮೋದ್ಯಾಭಿ	೮	೫೭
ಅಜ್ಞಾನಾಂತರ್ಗಹನ	೪	೬೦	ಅಥಾವಲೇರ್ಣಸ್ಯ	೩	೯
ಅಟಾಟ್ಯಮಾನೋಽಪಿ	೬	೫	ಅಥೇಂದ್ರೋನೃಪತಿ	೧	೫೮
ಅತ ಏವ ಗಾರ್ಗ್ಯ	೯	೬೧	ಅಥೋಪಸಂಸ್ಪೃಶ್ಯ	೮	೩೫
ಅತಿಪ್ರಸಕ್ತೇರ್ನತು	೮	೯೫	ಅಥೋ ನಿಶಾಖೇಟ	೯	೨೫
ಅತಿ ಬಾಲ್ಯ ಏವ	೯	೬೨	ಅದಾಹಕಸ್ಯಾಪ್ಯಯಸಃ	೮	೧೭೬
ಅತ್ಯಲ್ಪ ಮೇತದ್ಭವ	೮	೪೫	ಅದೃಷ್ಟಪೂರ್ವಂ ಶ್ರುತ	೨	೮೦
ಅತ್ಯಾದರಾಚ್ಛತ್ರ	೨	೭೭	ಅದ್ಯಾತಿಧನ್ಯೋಽಸ್ಮಿ	೮	೪೯
ಅತ್ರ ಕಿಂ ಸ ಯದಶಿಕ್ಷತ	೪	೧೮	ಅದ್ವಂದ್ವ ಭಕ್ತಿಮಮುಂ	೬	೬೮
ಅತ್ರ ಕೃಷ್ಣಮುನಿ	೫	೧೫೩	ಅದ್ವಿತೀಯ ನಿರತಾ	೬	೨೪
ಅತ್ರ ಕೇಚಿದಿಹ	೫	೧೫೬	ಅದ್ವಿತೀಯಮನವದ್ಯ	೬	೭೬
ಅಥ ಕೈಟಭಜಿತ್	೪	೭೬	ಅದ್ವೈತ ದರ್ಶನ	೬	೫೫
ಅಥ ಕ್ರಿಯಾಂತೇ	೮	೫೪	ಅದ್ವೈತ ವಾದಿವಿಪರೀತ	೭	೨೫
ಅಥ ಗಿರಮುಪ	೨	೧೭೧	ಅದ್ವೈತ ವಿದ್ಯಾ ಸೃಣಿ	೨	೧೯
ಅಥ ಚಕ್ರಭೃತೋ	೪	೩೧	ಅದ್ವೈತೇ ಪರಿಮುಕ್ತ	೪	೮೦
ಅಥ ಜಾತು ದಿದೃಕ್ಷವಃ	೫	೩೬	ಅಧಃ ಪೇತುರ್ಬುಧೇ	೧	೨೦
ಅಥ ದ್ಯುಮಾರ್ಗಾದವ	೮	೧೪	ಅಧಿಜಗೇನಿಗಮಾನ್	೪	೧೭
ಅಥ ನಷ್ಟಮೌಪ	೯	೫೩	ಅಧಿಮೇದಿನಿ ಪ್ರಥ	೯	೮೮
ಅಥ ಪ್ರತಸ್ಥೇ ಭಗವಾನ್	೮	೧	ಅನನ್ಯೇನ್ಯೈವಿಭಾವೇನ	೧	೩೬
ಅಥ ಪ್ರೋವಾಚ ದಿವ್ಯಾ	೧	೮೯	ಅನಯೋರ್ವಿಚಿತ್ರ	೯	೬೪

	ಸರ್ಗ	ಶ್ಲೋಕ		ಸರ್ಗ	ಶ್ಲೋಕ
ಅನಾದಿವಾಕ್ಸಾಗರ	೬	೧೦೦	ಅರುಣಾ ಧರಸಂಗತಾ	೪	೫೭
ಅನುಷ್ಠಿತಿಂ ದ್ರಾಗವಸಾಯ್ಯ	೨	೨೩	ಅರ್ಥಾಪ್ರತೀತೌಕಿಲ	೮	೨೯
ಅನೂದ್ಯ ಸರ್ವಂ	೨	೯	ಅರ್ಥಾವ ಭೋಧನ	೭	೧೪
ಅಂತೇವಸದ್ಭಿರಮಲ	೨	೬೫	ಅಲಮಾ ಕಲಯ್ಯ	೯	೭೧
ಅನ್ಯಾದೃಶಾನಾಮು	೯	೨೮	ಅವದಚ್ಚ ಶೃಣ್ವತಿ	೯	೧೮
ಅನ್ಯಃ ಸ್ವಹಸ್ತಗ	೩	೪೬	ಅವದನ್ ನಂದನಂ	೧	೪೨
ಅನ್ಯೇಽಪಿ ಬಹವೋ	೧	೩೮	ಅವಧೀ ತ್ರಿಶೀರ್ಷ	೯	೯೨
ಅನ್ಯೋನ್ಯಮುತ್ತರ	೮	೨೩	ಅವಾತರದ್ರತ್ನ	೮	೭
ಅನ್ಯೋನ್ಯ ಸಂಜಯ	೮	೬೯	ಅವಾದಿಷಂವೇದವಿಘಾತ	೨	೯೩
ಅನ್ಯೋನ್ಯಸಂದರ್ಶ	೩	೧೮	ಅವಿಚಾರ್ಯ ಯಸ್ತು	೯	೯೭
ಅಪರೇಪ್ಯಭವನ್	೩	೨	ಅವಿದ್ಯಾರಾಕ್ಷಸ್ಯಾ	೯	೭೮
ಅಪಾಂಗ್ಯೈರುತ್ತುಂಗ್ಯೆ	೬	೬	ಅಷ್ಟೌ ವಯಾಂಸಿ	೨	೫೫
ಅಪಿ ಕದಾಚಿತ್	೮	೪೧	ಅಷ್ಟೌಸಹಸ್ರಾಣಿ	೨	೮೩
ಅಪಿ ತು ತ್ವಯಾಽದ್ಯ	೯	೫೬	ಅಸಂಗಿನೋನ ಪ್ರಭವಂತಿ	೯	೯೦
ಅಪಿ ತು ದುರ್ಹೃದ	೮	೪೪	ಅಸಾರ ಸಂಸಾರ	೨	೮೫
ಅಪಿ ಲೋಕಗುರುಃ	೧	೨೨	ಅಸೌ ಶಂಭೋರ್ಲೀಲಾ	೪	೫೯
ಅಪಿ ಸಹಸ್ರಮುಖೇ	೮	೪೦	ಅಸ್ಮಜ್ಜಿಹ್ವಾಗ್ರಸಿಂಹಾಸನ	೧	೧೪
ಅಪ್ಸಾಂ ದೃಪ್ಸಂಸುಲಿಪ್ಸಂ	೪	೯೩	ಅಸ್ಮದಾದಿಪದ	೬	೪೫
ಅಭಿವಂದ್ಯ ಸುರೇಂದ್ರ	೪	೭೨	ಅಸ್ಮಾಕಮದ್ಯ ಪತಿತಂ	೩	೫೧
ಅಭಿಸಂಧಿಮಾನಪಿ	೯	೬	ಅಸ್ಮಾಚ್ಚತುರ್ದಶ	೩	೪೪
ಅಭ್ಯಾಗತೋಽಸೌ	೮	೩೪	ಅಸ್ಮಾನ್ಮುರ್ಹುಹುಃ	೬	೮೭
ಅಭ್ರುವರ್ತ್ಮಾನಿ	೫	೧೩೧	ಅಸ್ಯಾತ್ಮನಿಷ್ಠಾ	೬	೮೩
ಅಮರಸ್ಪೃಹಣೀಯ	೪	೩೩	ಅಸ್ಯಾಮ ಜಾತಾ ಮಮ	೭	೪೭
ಅಮಾನುಷಂ ತಸ್ಯ	೬	೮೧	ಅಹಮಾಚರಂಬಹುತಪೋ	೯	೩೬
ಅಮುಕ ಕ್ರಮಿಕೋಕ್ತಿ	೪	೧೫	ಅಹೋಪೀತಾಕಿಮು	೮	೧೮
ಅಮುನಾ ಕೃತವಃ	೪	೬೭	ಅಹೋ ಶಾಸ್ತ್ರಂಶಾಸ್ತ್ರಂ	೬	೪೩
ಅಮುನಾ ತನಯೇ	೪	೧೦	ಅಹ್ನ್ಯಂಬರಾತ್ರಿಸಮಯೇ	೫	೨೧
ಅಮುನಾ ವಚನೇನ	೪	೩೦	ಆಕರ್ಣಯಜ್ಜ್ವಯ	೭	೬೫
ಅಯಮಹಂ ಯಮ	೮	೪೩	ಆಕರ್ಣಯನ್ನಿತಿ	೭	೫೪
ಅಯಂ ಚ ಪಂಥಾ ಯದಿ	೨	೧೧೩	ಆಕರ್ಣ್ಯ ವಾಚಮಿತಿ	೫	೨೯
ಅಯಂ ಹೃಧೀತಾಖಿಲ	೨	೨೬	ಆಗತ್ಯ ದೇಶಿಕ	೬	೭

	ಸರ್ಗ	ಶ್ಲೋಕ		ಸರ್ಗ	ಶ್ಲೋಕ
ಆಜನ್ಮನೋ ಗಣ	೨	೧೨	ಇತಿ ದೀನಮುದೀರ	೪	೨೪
ಆಜನ್ಮನೋ ವಿಹಿತ	೩	೨೪	ಇತಿ ಪೃಷ್ಟಭಾವಿ	೯	೫೦
ಆತ್ಮಾನಮಕ್ರಿಯಾ	೬	೫೮	ಇತಿ ಬಾಲಮೃಗಾಂಕ	೩	೧
ಆತ್ಮಾ ವಿಭುಃ ಸ್ಯಾದ್	೮	೯೭	ಇತಿ ಬೋಧಿತದ್ವಿಜ	೯	೨೩
ಆತ್ಮೀಯ ಮಂದಿರ	೫	೭೫	ಇತಿ ಭಾವಮಾತ್ಮ	೯	೧೩
ಆದಾಯ ಪುಸ್ತಕ	೪	೪೬	ಇತಿ ಯತಿಪ್ರವರಸ್ಯ	೮	೩೯
ಆದೇಶ ಮೇಕಮನು	೫	೯೨	ಇತಿ ಯಾಯಜೂಕ	೯	೫೮
ಆದೌ ತದಂಗಮುದಯ	೯	೧೦೭	ಇತಿ ಯುಕ್ತಿಮದ್ಗದಿತ	೯	೬೨
ಆದ್ಯೇ ಸತ್ವಮುನಿಃ	೯	೨೨	ಇತಿ ವಾದಿನಿ ಭಾವಿನೀಂ	೫	೪೯
ಆಧಾಯ ವಹ್ನಿಮಥ	೩	೫೯	ಇತಿ ವಿಚಿಂತ್ಯಸ ಜಾತು	೫	೬೧
ಆನೇಷ್ಟ ದೂರಗನದೀಂ	೫	೭೮	ಇತಿ ಶಿಶೌ ಚಕಿತಾ	೫	೬೬
ಆನ್ವೀಕ್ಷಿ ಕ್ಯೃಕ್ಷಿ ತಂತ್ರೀ	೪	೨೦	ಇತಿ ಶಿಷ್ಯವರ್ಗ	೯	೧೦೪
ಆಪಾತತಸ್ತತ್ವ	೮	೮೦	ಇತಿ ಸತ್ಕಥಾಃ ಸ	೯	೧೦೧
ಆಭಾಸಯನ್ನಂತರ	೭	೨೭	ಇತಿ ಸಂದಿಹಾನ	೯	೪
ಆಮಜ್ಜತಾಂ ಕಿಲ	೭	೬೩	ಇತಿ ಸಂಪ್ರಧಾರ್ಯ	೯	೬೮
ಆಮ್ನಾಯಾಂತಾಲವಾಲಾ	೪	೯೫	ಇತಿ ಸಂವಿಚಿಂತ್ಯ	೯	೭೧
ಆಯಾತಿ ಭರ್ತರಿ	೩	೭೪	ಇತಿ ಸಂಶ್ರುತ್ಯ ಗೋತ್ರೇಶೋ	೧	೮೩
ಆಯಾಸಸ್ಯ ನವಾ	೪	೮೫	ಇತಿ ಸಪ್ತ ಮಹಾಯನೇ	೫	೧
ಆರ್ಯಾ ವೇದನಿಕ	೫	೧೫೫	ಇತಿ ಸ ಯತಿವರೇಣ್ಯೋ	೮	೫೬
ಆಲೋಕ್ಯಾऽನನಪಂಕಜೇನ	೪	೧೦೯	ಇತಿ ಸಾದರಮೀರಿತಾಂ	೫	೪೩
ಆವವ್ರುಃ ಕುಟಜ	೫	೧೨೩	ಇತಿ ಸೂನೃತೋಕ್ತಿ	೯	೪೪
ಆವಶ್ಯಕಂ ಪರಿ	೮	೬೭	ಇತಿ ಸ್ತೇನ	೭	೩೨
ಆಶಯೇ ಕಲುಷಿತೇ	೫	೧೩೦	ಇತಿ ಸ್ತುವಂಸ್ತಾಪಸ	೭	೭೧
ಆಸೀತಾನಾಥಸೇತು	೬	೧೦೭	ಇತಿ ಹಾಸಪುರಾಣ	೪	೧೦೬
ಆ ಸೇತೋರಾತುಷಾರಾದ್ರೇಃ	೧	೯೩	ಇತ್ಯಮುಷ್ಯವಚನಾತ್	೫	೨೦
ಇತಿ ಕರ್ಣಕಠೋರ	೫	೫೫	ಇತ್ಯಾದ್ಯಾದೃಢಯುಕ್ತಿ	೮	೧೩೧
ಇತಿ ಗಾಮುದೀರ್ಯ	೯	೫೫	ಇತ್ಯಾದಿದುರ್ವಾಕ್ಯ	೮	೩೨
ಇತಿ ಜೈಮಿನೀಯ	೯	೧೬	ಇತೀ ದಮಾಕರ್ಣ್ಯ	೭	೧೨
ಇತಿ ತದ್ವಚನಂ	೫	೪೭	ಇತೀ ದಮಾಕರ್ಣ್ಯ	೭	೫೨
ಇತಿ ತದ್ವಚನಂ	೪	೨೯	ಇತೀ ರಯಂತಂ ಪ್ರತಿ	೭	೫೭
ಇದಾನೀಮಿದಮುದ್ಧಾರ್ಯಂ	೧	೫೦	ಇತೀ ರಯಿತ್ವಾ ಚರಣೌ	೭	೫೮

	ಸರ್ಗ	ಶ್ಲೋಕ		ಸರ್ಗ	ಶ್ಲೋಕ
ಇತೀ ರಿತೇ ಪ್ರಾಹ	೨	೪೬	ಉತ್ಸಂಗೇಷು ದಿಗ	೪	೧೦೧
ಇತ್ಯುಕ್ತ ಮರ್ಥಂ ನಿಶಮಯ್ಯ	೭	೮	ಉತ್ಸಸರ್ಜ ರಸ	೫	೧೨೫
ಇತ್ಯುಕ್ತ ವಂತಂ ಕೃಪಯಾ	೬	೧೪	ಉಥ್ಥಾಪ್ಯ ತಂ ಗುರು	೬	೩
ಇತ್ಯುಕ್ತವಂತಂ ತಮ್	೭	೫೦	ಉದ ಭಾವಿ ಶಿಲಾ	೩	೫
ಇತ್ಯುಕ್ತ್ವೋಪರತಾನ್	೧	೪೦	ಉದಚಾರಯದ	೨	೮೮
ಇತ್ಯುದಾರವ ಚನೈಃ	೬	೪೪	ಉಹ್ಯ ಶಾಸ್ತ್ರವಿ	೨	೩೪
ಇತ್ಯುದೀರ್ಣಜಲ	೫	೧೩೩	ಉನ್ಮೀಲನ್ನವಮ	೪	೮೮
ಇತ್ಯುದೀರ್ಯ ಮುನಿ	೫	೧೬೦	ಉಪಕ್ರಮ್ಯಸ್ತೋತುಂ	೧	೧೨
ಇತ್ಯುದೀರ್ಯ ಪರಿ	೫	೧೬	ಉಪನಯಂ ಕಿಲ	೪	೧೧
ಇತ್ಯುದೀರ್ಯ ವಚಸಂ	೬	೩೩	ಉಪನ್ಯಸ್ಯತ್ಸು ಸಾ	೧	೭೯
ಇತ್ಯೂಚಿವಾಂಸಮಿ	೭	೧೨೦	ಉಪ ಪಾದನ ನಿರ್ವ್ಯಪೇಕ್ಷ	೪	೧೩
ಇತ್ಯೂಚಿವಾಂಸಮಿಮಂ	೭	೧೦೬	ಉಪವೀತಮಮುಷ್ಯ	೪	೫೦
ಇತ್ಯೂಚಿವಾಂಸಂ ಯತಿ	೯	೭೯	ಉಪಾತ್ತ ಭಿಕ್ಷಃ ಪರಿತುಷ್ಟ	೭	೮೧
ಇತ್ಯೂಚಿವಾಂಸಂವಿಬುಧಾ	೭	೧೦೮	ಉರಗಪತಿ ಮುಖಾತ್	೫	೯೬
ಇಷ್ಟಸ್ಯ ಹಾನೇರನಭೀಷ್ಟ	೩	೨೧	ಉರರೀಕೃತೇ ಸ	೯	೭೩
ಇಷ್ಟೋಽಪಿ ದೃಷ್ಟದೋಷಃ	೧	೯೪	ಉಂಬೇಕ ಇತ್ಯ ಭಿಹಿತಸ್ಯ	೭	೧೧೬
ಇಹ ಮಾಸಮಾತ್ರ	೯	೭೨	ಏಕದಾ ಖಲು ವಿಯತ್	೬	೨೧
ಇಹ ಭವೇತ್ಸುಲಭಂ	೪	೮	ಏಕದಾ ದೇವತಾ	೧	೨೮
ಇತ್ಥಂ ಕಲತ್ರೋಕ್ತಿ	೨	೪೮	ಏಕಸ್ಮಿನ್ ಪುರುಷೋ	೪	೧೧೦
ಇತ್ಥಂ ತರ್ಕೈಃ ಕುಲಿಶ	೬	೭೮	ಏಕಾಕ್ಷರಸ್ಯಾಪಿ	೭	೧೦೦
ಇತ್ಥಂ ನಿಗದ್ಯ ಋಷಿ	೭	೫೯	ಏತತ್ಪ್ರ ಭಾಪ್ರತಿ	೩	೫೫
ಇತ್ಥಂ ನಿಗದ್ಯೋಪ	೭	೩೯	ಏತದೇವ ವಿಬುಧೈರಪಿ	೬	೪೯
ಇತ್ಥಂ ಪ್ರತಿಜ್ಞಾಂ ಕೃತ	೮	೬೩	ಏವಮೇನಮತಿ	೫	೧೦
ಇತ್ಥಂ ಮುನೀಂದ್ರವಚನ	೭	೩೫	ಏವಮೇನ ಮನುಗೃಹ್ಯ	೬	೫೨
ಇತ್ಥಂ ಯತಿಕ್ಷಿತಿ	೮	೧೩೨	ಏವಮೇನ ಮನು ಶಾಸ್ಯ	೫	೧೬೩
ಇತ್ಥಂ ಸುಧೀಃ ಸ ನಿ	೫	೮೧	ಏವಂ ಗುರೋವದ	೨	೨೧
ಇತ್ಥಂ ಸ ಮಾತರ	೫	೭೩	ಏವಂ ಮಿಥಃ ಪರಿ	೩	೫೩
ಈರ್ಷ್ಯಾಭರಾಕುಲ	೬	೭೯	ಏವಂ ಪ್ರಿಯೇ ಗತ	೨	೪೪
ಈಹಿತಂ ತವ ಭವಿಷ್ಯತಿ	೫	೮	ಏವಂ ವದಂತೌ ಯತಿ	೭	೧೦
ಉಕ್ಷ್ಣಾ ನಿಸರ್ಗಧವಲೇನ	೨	೬೪	ಏವಂ ವದನ್ನಯ ಮಥೈಕ್ಷತ	೭	೧೫
ಉಚ್ಚಂಡಾಹಿತವಾವದೂಕ	೪	೬೧	ಏವಂ ವ್ಯಥಾಂತಾಂ ಬಹುಧಾ	೫	೫೯

	ಸರ್ಗ	ಶ್ಲೋಕ
ಏವಂ ಸನಾಭಿಜ	೫	೭೪
ಏಷ ಧೂರ್ಜಟಿರಬೋಧ	೫	೧೦೯
ಏಷ ನಃ ಸ್ಪೃಶತಿ	೫	೧೧೯
ಏಷ್ಯದ್ವಿಜಾನಾಸಿ	೭	೨೬
ಏಷ ಸಿಂಧುರಪರೋ	೫	೧೫
ಕತಿ ನಾಮ ಸುತಾ	೫	೫೩
ಕಥಮಜ್ಯತೇ ಜಗದಶೇಷ	೯	೯೫
ಕಥಮಲ್ಪಬುದ್ಧಿ	೯	೩೩
ಕಥಮೇಕತನೂ	೫	೫೭
ಕಥಾದಪೂರ್ೕತ್ಸರ್ಪತ್	೪	೭೮
ಕಂಥಾಂ ವಹಸಿ ದುರ್ಬುದ್ಧೇ	೮	೨೦
ಕಂಥಾಂ ವಹಾಮಿದುರ್ಬುದ್ಧೇ	೮	೨೧
ಕನ್ಯಾಪಿತುರ್ವರ	೨	೨೯
ಕನ್ಯಾಂ ಪ್ರದಾತುಮನಸೋ	೨	೨೭
ಕನ್ಯಾವರೌಪ್ರಕೃತಿ	೩	೫೪
ಕಮಲಾನಿಲಯಃ	೩	೨
ಕರತಲ ಕಲಿತಾ	೬	೬೧
ಕಃ ಪಾರ್ಷ್ಣಿಕೋಽಹಂ	೮	೪೮
ಕಪಿಲಾಕ್ಷ ಪಾದ	೯	೩೦
ಕರುಣಾರ್ದ್ರದೃಶಾ	೫	೪೨
ಕರ್ತೃತ್ವ ಶಕ್ತಿ ಮಧಿಗಮ್ಯ	೬	೫೪
ಕರ್ಪೂರೇಣ ಖಣೀ	೪	೯೨
ಕರ್ಮಕಾಲೇ ನ ಸಂಭಾಷ್ಯಃ	೮	೨೮
ಕರ್ಮ ನೈಜಮಪಹಾಯ	೫	೧೮
ಕಲಯಾಪಿ ತುಲಾ	೪	೬೩
ಕಲಶಾದಿ ಮೃತ್ಪ್ರಭವ	೯	೯೪
ಕಲಶಾಬ್ಧಿಕಚಾಕಚಿ	೪	೯೮
ಕಲಾಃ ಕಿಯತ್ಯೋವದ	೯	೬೯
ಕಶ್ಚಿತ್ತು ತಸ್ಯಾಃ ಪಿತರಂ	೨	೩೧
ಕಶ್ಚಿದ್ದ್ವಿಜಾತಿರಧಿಗಮ್ಯ	೩	೬೪
ಕಸ್ತೂರೀ ಘನಸಾರ	೪	೭೯
ಕಾಮಂಕಾಮಕಿರಾತ	೬	೯೧
ಕಾಮಂ ಯಸ್ತುಸಮೂಲ	೪	೬೬
ಕಾಮಂ ವಸ್ತುವಿಚಾ	೪	೬೫
ಕಲ್ಪೋಪ್ತ ಬೀಜಾದಿ	೨	೧೧
ಕಿಂ ಕೃತ್ಸ್ನ ಧರ್ಮಿಪ್ರಮಯಾ	೮	೧೦೯
ಕಿಂ ಕೇನ ಸಂಗತ	೩	೩೬
ಕಿಂಚ ಸಂಕ್ರಮಣ	೬	೭೫
ಕಿಂಚಾಗುಣೋ ವಾ ಸಗುಣೋ	೮	೧೧೦
ಕಿಂ ಚೇತನತ್ವೇನ	೮	೮೩
ಕಿಂ ಚೈಕದೇಶೇನ	೬	೭೭
ಕಿಂ ನಿರ್ವಿಶೇಷಂ	೮	೧೧೧
ಕಿಂನು ವಿಷ್ಣುಪದ	೫	೧೨೧
ಕಿಮಾದೇಯಂ ಹೇಯಂ	೫	೧೨೮
ಕಿಮು ತಾವತ್ಯೈವ	೯	೧೫
ಕಿಮು ದೌಹಿತ್ರದತ್ತೇಽಪಿ	೧	೭೬
ಕಿಮೇಷ ಭೇದಃ	೮	೧೦೭
ಕಿಯದಾಯು ರಾಪ್ಸ್ಯತಿ	೯	೪೯
ಕಿಂ ವರ್ಣ್ಯತೇ ಸುದತಿ	೩	೩೭
ಕೀರ್ತಿಂ ಸ್ವಕಾಂ ಭುವಿ	೨	೮೦
ಕುತೋ ಮುಂಡ್ಯಾಗಲಾನ್ಮುಂಡೀ	೮	೧೬
ಕುತ್ರಾಲಯೋಮಂಡನ	೮	೫
ಕುದೃಷ್ಟಿ ತಿಮಿರ	೬	೮೪
ಕುಮತಾನಿ ಚ ತೇನ	೪	೧೬
ಕುಮಾರಿಲ ಮೃಗೇ	೧	೯೭
ಕೃತಧೀಸ್ತ್ವನಾಶ್ರಮ	೯	೯೩
ಕೃತತಂತ್ವಯಾ ಭಾಷ್ಯ	೮	೩೪
ಕೃತವತೀ ಮೃತಚೋದಿತ	೪	೧೦
ಕೃತ ವಿದ್ಯಮಮುಂ	೫	೩೫
ಕೃತೋನಿ ಬಂಧೋ ನಿರಣಾಯಿ	೭	೮೮
ಕೇಚಿ ಚ್ಛಂಚಲಲೋಚನ	೯	೩೯
ಕೇಚಿ ದ್ಧನಂ ನಿದಧತೇ	೩	೩೯

	ಸರ್ಗ	ಶ್ಲೋಕ		ಸರ್ಗ	ಶ್ಲೋಕ
ಕೇಽಮೀ ಕಾಂತದಿವಾ	೪	೬೭	ಗ್ರಂಥಾನ ಸಂಖ್ಯಾನ್	೬	೬೩
ಕೋಪಾತಿ ರೇಕವಶ	೮	೧೩೩	ಗ್ರಸ್ತಂ ಭೂತೈರ್ನದೇವಂ	೬	೮೮
ಕೋಮಲೇನ ನವ	೩	೮೨	ಘಟೇ ಭೇದೇಽಪ್ಯುಪಧಿಃ	೮	೧೦೭
ಕೃತ್ವಂಗಯೂಪಾದಿ	೮	೮೧	ಘೋಷವಾರಿರ್ಘುರ	೫	೧೩೭
ಕ್ರಿಯಾದ್ಯನುಷ್ಠಾನ	೨	೭	ಚಕ್ರಿ ತುಲ್ಯಮಹಿ	೬	೧೯
ಕ್ವ ಕಲಿರ್ಬಹುದೋಷ	೫	೪೦	ಚಂಡಭಾನುರಿವ	೬	೨೦
ಕ್ವ ಬ್ರಹ್ಮ ಕ್ವಚ	೮	೩೦	ಚತುರ್ಥಸರ್ಗೇ	೧	೧೯
ಕ್ವೇದಂ ಶಂಕರಸದ್ಗುರೋಃ	೧	೧೫	ಚತುರ್ದಶೇಪದ್ಮ	೧	೨೫
ಕ್ವೇಮೇ ಶಂಕರಸದ್ಗುರೋಃ	೧	೬	ಚಂದ್ರಿಕಾಮುಸಿತ	೫	೧೪೬
ಕ್ವ ಸ್ವರ್ಗಃ ಕ್ವ ದುರಾಚಾರಃ	೮	೩೧	ಚರ್ಮಕೃಷ್ಣಹರಿ	೫	೨೨
ಕ್ಷಾಂತಿಶ್ಚೇದ್ವಸುಧಾ	೪	೬೯	ಚಾತಕಾವಲಿರನಲ್ಪ	೫	೧೩೨
ಕ್ಷೀರ ನೀರನಿಧೇ	೧	೪೬	ಚಾರ್ವಾಕದರ್ಶನ	೩	೮
ಕ್ಷೀರಂ ಬ್ರಹ್ಮ ಜಗಚ್ಚ	೫	೧೧೫	ಚಾರ್ವಾಕೈರ್ನಿಹ್ನುತಃ	೬	೮೯
ಖಿಂದನ್ಮ ನಾಃ ಶಿವ	೨	೪೩	ಚಿಂತಾಸಂತಾನತಂತು	೯	೪೦
ಗಂಗಾಪ್ರವಾಹೈರುಪ	೭	೬೪	ಚಿಂತಾಸಂತಾನಶಾಖೀ	೯	೪೨
ಗಚ್ಛ ದೂರಮಿತಿ	೬	೨೮	ಚಿರಂ ದಿದೃಕ್ಷೇ	೭	೮೬
ಗಚ್ಛನ್ ವನಾನಿ ಸ	೫	೮೭	ಛನ್ನಮೂರ್ತಿರತಿ	೫	೧೦೮
ಗಚ್ಛ ವತ್ಸ ನಗರು	೫	೧೬೨	ಛಾತ್ರಮುಖ್ಯಮಮುಂ	೫	೧೪೦
ಗತ್ವಾ ನಿಕೇತನ	೨	೨೨	ಛಾಯಾತಪೌ ಯದ್ವದತೀವ	೮	೧೨೭
ಗರ್ಭಂ ದಧಾರಶಿವ	೨	೫೭	ಛಿತ್ವಾಯುಕ್ತಿಕುಠಾರ	೧	೬೭
ಗರ್ಭಾಲಸಾ ಭಗವತೀ	೨	೫೮	ಜಗತಿ ಸಂಪ್ರತಿ	೮	೩೮
ಗಾಢೋಪಗೂಢಂ	೮	೧೬	ಜಗದಾರ್ತಿಹನ್ನನವಗಮ್ಯ	೯	೨೯
ಗಾತ್ರಂ ಗತಾಸೋರ್ವ	೯	೧೦೬	ಜಗದ್ಧ್ರುವಂ ಸ್ಯಾತ್	೮	೮
ಗಾಯತೀವ ಕಲ	೫	೧೬೮	ಜಗ್ರಾಹ ಪಾಣಿಕಮಲಂ	೩	೫೭
ಗಾವೋಹಿರಣ್ಯಂ	೨	೪೧	ಜಯತಿ ಸ್ಮ ಸರೋ	೪	೩೬
ಗಿರಾಂ ಧಾರಾ ಕಲ್ಪ	೬	೯೪	ಜಲ ಮಿಂದುಮಣಿಂ	೪	೩೭
ಗಿರೇರವಪ್ಲುತ್ಯ	೭	೭೪	ಜಾಟಾಟಂಕ ಜಟಾ	೪	೭೬
ಗುರುಣಾ ಚಿದೇಕ	೯	೨೦	ಜಾತರೂಪರುಚಿ	೫	೨೩
ಗುರುಶುಶ್ರೂಷಣಾ	೮	೨೩	ಜಾತು ಮಂದಗಮನಾ	೫	೫
ಗೃಹಗತಾ ಜನ	೫	೬೩	ಜಾನತೇ ಶ್ರುತಿಶಿರಾಂಸ್ಯಪಿ	೬	೩೫
ಗೋರಕ್ಷ ಏಷೋಽಥ	೯	೮೪	ಜಾನಾಮಿದೇವೀಂಭವತೀಂ	೮	೧೩೫

	ಸರ್ಗ	ಶ್ಲೋಕ
ಜಾನೇ ತವಾಹಂ ಭಗವನ್	೭	೧೧೧
ಜಾನೇ ಭವಂತಮಹಂ	೭	೧೦೪
ಜಾಯಾಪಿ ತಸ್ಯ	೨	೫೦
ಜೀವೇಶ್ವರೌ ಸಾ ವದತಿ	೮	೧೧೬
ಜೇತುಃ ಪರಾಜಿತ	೮	೬೬
ಝುಂಝಾ ಮಾರುತವೇಗ	೪	೮೭
ತಚ್ಛ್ರೋದಿತಃ ಕಶ್ಚನ	೨	೨
ತಜ್ಜ್ಞಾತಿ ಬಂಧುಃ	೨	೮೧
ತತಸ್ತಯೋರಾಸ	೮	೭೦
ತತಸ್ತೇ ಸೌಗತಾಃ	೧	೮೭
ತತಃ ಪ್ರಕ್ಷೀಣ	೧	೭೨
ತತಃ ಸತಾರಕಾ	೧	೬೦
ತತಃ ಸಮಾದಿಶ್ಯ	೮	೫೮
ತತಃ ಸ ವೇದಾಂತ	೭	೬೨
ತತಃ ಸ್ವಸಿದ್ಧಾಂತ	೮	೭೫
ತತೋ ಮಹಾಭಾರತ	೬	೬೨
ತತೋ ಮಹೇಶಃ ಕಿಲ	೨	೧
ತತೋ ಯತಿಕ್ಷ್ಮಾ ಭೃದವೇಕ್ಷ್ಯ	೮	೭೪
ತತ್ಪಾದ ಪದ್ಮೇ	೭	೬೦
ತತ್ತತ್ಕುಲೀನಪಿತರಃ	೨	೧೩
ತತ್ರಾದೃಕ್ಷಮುನಿ	೪	೯೦
ತತ್ರಾದೃಗತ್ಯುಜ್ಜ್ವಲ	೭	೨೧
ತತ್ರಾದೃಗ್ಯತಿ ಶೇಖರೋ	೬	೯೭
ತತ್ಪ್ರಣೇತಾಗಮಾ	೧	೩೧
ತತ್ರ ಮೂಢಮತ	೬	೪೮
ತತ್ರಾದಿಮ ಉಪ್ತೋ	೧	೧೮
ತತ್ರಾಂತರಿಕ್ಷಾದವ	೮	೧೩
ತತ್ರೈಕದಾ ತತ್ತ್ವ	೯	೮೫
ತತ್ತ್ವಜ್ಞಾನಫಲೇ	೪	೪೦
ತತ್ಸೂತಿಕಾಗೃಹ	೨	೮೨
ತಥಾಗತ ಪಥಾ	೪	೮೬

	ಸರ್ಗ	ಶ್ಲೋಕ
ತಥಾಗತಾಕ್ರಾಂತ	೭	೯೦
ತಥಾಪ್ಯುಜ್ಜೃಂಭತೇ	೧	೧೩
ತಥೇತಿ ಪ್ರತಿಜಗ್ರಾಹ	೧	೫೭
ತಥೇತಿ ಸೂಕ್ತೇಸ್ಮಿತ	೮	೫೦
ತದನಂಗ ಶಾಸ್ತ್ರ	೧	೧೦೦
ತದನು ಸಂನ್ಯಸನಂ	೫	೬೭
ತದಭೀಪ್ಸಿತಸಿದ್ಧಯೋ	೫	೪೬
ತದಯಂ ಕರೋತು	೯	೯೬
ತದಹಂ ವಿಸೃಜ್ಯ	೯	೪೩
ತದಾಕರ್ಣ್ಯ ಮುಖಾ	೧	೭೪
ತದಾ ಜಹಾಸೇಂದು	೩	೧೧
ತದಾ ತದೀಯಂ	೭	೯೪
ತದಾತಿರುಷ್ಟಸ್ಯ	೮	೧೫
ತದಾಽಪತನ್ಮೇ	೭	೯೫
ತದ ಸ ಲೇಖೇಂದ್ರ	೮	೧೦
ತದಿ ಹಾಸ್ಮದುಕ್ತ	೯	೧೪
ತದೇತದಿತ್ಯಾದಿ	೮	೧೨೦
ತದೇವಮಿತ್ಥಂ	೬	೧೦೧
ತದ್ಭವಾನ್ ಲೋಕರಕ್ಷಾರ್ಥಂ	೧	೩೯
ತದ್ಭವಾನ್ವಿದಿತ	೬	೪೮
ತದ್ಭವಾನ್ವ್ರಜತು	೫	೧೫೨
ತದ್ರಕ್ಷಣೇ ರಕ್ಷಿತಂ	೧	೪೯
ತದ್ರಸಾರ್ದ್ರಗುಣ	೫	೨೬
ತದ್ರೋಮವಲ್ಲೀ	೨	೬೮
ತದ್ವ್ಯಾಸಾಚಾರ್ಯ	೧	೨೧
ತದ್ವಿಕಲ್ಪನಮನಲ್ಪ	೬	೭೩
ತನಯಾಯಪುರಾ	೫	೪೪
ತಪೋಮಹಿಮ್ನೈವ	೮	೧೨
ತಮಖಿಲಗುಣ	೫	೯೭
ತಮಬ್ರವೀದ್ವ್ಯಾಪ್ಯ	೭	೫
ತಮವಾಪ್ಯರುದ್ರ	೯	೫೨

	ಸರ್ಗ	ಶ್ಲೋಕ
ತಮವೋಚತ	೪	೨೨
ತಂ ದದರ್ಶಜನ	೩	೮೧
ತಂ ನಿಶಮ್ಯ	೫	೧೩೯
ತಂ ಪಾಠ ಯಂತಮನವದ್ಯ	೬	೭೨
ತಂ ಪ್ರಾಪ್ತ ಜೀವಮುಪಲಭ್ಯ	೯	೧೦೮
ತಂ ಮಂಡನಂ ಸಸ್ಮಿತ	೮	೩೩
ತಂ ಮಾಮನುಸರಿಷ್ಯಂತಿ	೧	೪೪
ತರ್ಹಿ ಕ್ರಿಯಾಜನ್ಯ	೮	೮೫
ತರ್ಹ್ಯಸ್ತು ಜೀವೇ ಪರ	೮	೮೨
ತಸ್ಮಾತ್ತ್ವಮಾತುರಪಿ	೫	೮೦
ತಸ್ಮಿನ್ದಿನೇ ಮೃಗ	೨	೭೩
ತಸ್ಮಿನ್ದಿನೇ ಶಿವ	೨	೫೬
ತಸ್ಮಿನ್ನಿತಿ ಸ್ತುವತಿ	೫	೯೮
ತಸ್ಮಿನ್ಸ ವಿಶ್ರಮ್ಯ	೮	೪
ತಸ್ಯ ಪ್ರಪನ್ನ ಪರಿತೋಷ	೫	೯೩
ತಸ್ಯೇಶ್ವರಸ್ಯ ಪ್ರಣತ	೨	೩
ತಸ್ಯೋಪದರ್ಶಿತ	೫	೧೦೧
ತಸ್ಯೋಪಧಾಮಕಿಲ	೨	೪೯
ತಾಂ ದೌಹೃದಂ ಭೃಶಂ	೨	೬೧
ತಾಂ ನಿತಾಂತ ಹೃದಯಂಗಮ	೫	೨೭
ತಾಂ ಬಂಧುತಾಗಮತ್	೨	೬೨
ತಾವಾರ್ಚ್ಯ ಸ ದ್ವಿಜವರೌ	೩	೩೦
ತಿಜ್ ಪ್ರತ್ಯಯೇನಾ ಭಿಹಿತೋ	೮	೧೨೨
ತೀರ ದ್ರುಮಾಗ್ರತ	೫	೯೧
ತೀರ ಭೂರುಹತತೀ	೫	೧೩೬
ತೇನ ಪೃಷ್ಟಕುಶಲಃ	೫	೨೫
ತೇನ ವ್ಯನೀಯತ	೬	೫೯
ತೇನಾನುನೀತೋ	೨	೩೨
ತೇನಾನ್ವವರ್ತಿ ಮಹತಾ	೬	೫೭
ತೇನೈವ ತಾವಕ	೭	೧೧೮
ತೇನೈವ ಸಂಪ್ರತಿ	೩	೪೩
ತೇಷಾಂದ್ವಿಜೇಂದ್ರಾಲಯ	೮	೫೫
ತೌದಂಪತೀ ಶಿವ	೫	೫೫
ತೌದಂಪತೀ ಸುವಸನೌ	೨	೩೫
ತೌ ಹೃಷ್ಟಪುಷ್ಟಮನಸೌ	೩	೪೫
ತ್ಯಕ್ತ್ವಾಪಾಣಿಗೃಹೀತೀಂ	೮	೨೨
ತ್ಯಜತಿ ನೂನಮಯಂ	೫	೬೫
ತ್ಯಜ ಬುದ್ಧಿಮಿಮಾಂ	೫	೫೬
ತ್ರಸ್ತ ಮರ್ತ್ಯಗಣ	೫	೧೩೫
ತ್ರಿದಿವೌಕಸಾಮ್	೯	೩೮
ತ್ರಿಪುಂಡ್ರಂ ತಸ್ಯಾಹುಃ	೪	೫೮
ತ್ರೈಲೋಕ್ಯಂ ಸಸುಖಂ	೬	೮೫
ತ್ವತ್ತ್ವಾರಸ್ತ್ವತ	೬	೮
ತ್ವಮಶೇಷ ವಿದಪ್ಯಪಾಸ್ಯ	೫	೫೮
ತ್ವಮ ಸ್ಮದಾದೇಃ	೭	೩೩
ತ್ವಮಾಯುಷಾನೇನ	೭	೫೬
ತ್ವಂ ಶಂಕರಃ ಶಂಕರಏವ	೭	೧೧
ದಂಡಮಂಡಿತ	೬	೨೭
ದಂಡಾನ್ವಿತೇನ	೫	೯೦
ದತ್ತ್ವಾಸನಂ ಮೃದು	೩	೫೦
ದರ್ಶಯತ್ಕುರುಮರೀಚಿ	೬	೨೨
ದಾರಗ್ರಹೋಭವತಿ	೨	೧೭
ದಾಸಾಸ್ತೇಽಹಂ ದೇಹ	೬	೪೧
ದಿದೃಕ್ಷಮಾಣಾವಪಿ	೩	೧೯
ದಿನೇದಿನೇ ಬಾಧಿ	೮	೭೧
ದಿನೇದಿನೇ ವಾಸ	೮	೭೨
ದಿವಿ ಕಲ್ಪತರು	೪	೩೨
ದುಃಖಸಾರದುರಂತ	೫	೧೧೪
ದುರ್ಮತಾನಿ ನಿರಸಿಷ್ಯತಿ	೫	೧೫೯
ದುರ್ವಾರಪ್ರತಿಪಕ್ಷ	೪	೫೬
ದುರ್ವಾರಖರ್ವ	೪	೧೦೫
ದುರ್ವಿಧ್ಯೈರನ್ಯಥಾ	೧	೮೧

	ಸರ್ಗ	ಶ್ಲೋಕ
ದುಷ್ಟಾಚಾರವಿನಾ	೧	೪೧
ದೂರೇ ವಿಧೂತಾಘ	೨	೨೯
ದೂರೇ ಸ್ಥಿತಿಃ ಶ್ರುತ	೩	೩೪
ದೂರೋತ್ಸಾರಿ ತದುಷ್ಟ	೪	೮೧
ದೃಷ್ಟಿಂ ಯಃ ಪ್ರಗುಣೇ	೫	೧೧೨
ದೃಷ್ಟ್ವಾ ತದೀಯೌ ಪಿತರೌ	೩	೭೦
ದೃಷ್ಟ್ವಾ ತಮಕ್ಷತಂ	೧	೨೯
ದೃಷ್ಟ್ವಾ ಪುರಾ ನಿಜ	೫	೯೫
ದೃಷ್ಟ್ವಾ ಭಾಷ್ಯಂಹೃಷ್ಟ	೨	೮೭
ದೃಷ್ಟ್ವಾಽಭಿಧಾತುಮನಲಂ	೩	೬೮
ದೃಷ್ಟ್ವಾವಿಷಣ್ಣಾಂ	೩	೧೩
ದೃಷ್ಟ್ವಾಸುತಂ ಶಿವ	೭	೨೭
ದೇವಃ ಕೃಪಾಪರವಶೋ	೭	೫೧
ದೇವರಾಜಮಪಿ	೫	೧೭೭
ದೇವ್ಯೋಽಪ್ಯಪೃಚ್ಛದಥ	೭	೫೭
ದೇಹೇಽಂಬ ರೋಗವಶಗೇ	೫	೬೯
ದೋಷದ್ವಯಸ್ಯಾಸ್ಯ	೨	೧೦೭
ದೌವಾರಿಕಾನ್ ವಂಚಯಿತ್ವಾ	೮	೭೨
ದ್ಯಾವಾಭೂಮಿಶಿವಂಕರ್ಯೈಃ	೬	೧೭
ದ್ಯುವನಾಂತ ಇವಾ	೪	೬೪
ದ್ವಾದಶೇಹಸ್ತಧಾತ್ರ್ಯಾರ್ಯ	೧	೭೪
ದ್ವಿತ್ರಾಣಿ ವರ್ಣಾನಿ	೭	೮೨
ದ್ವೀಪೇ ಕ್ವಚಿತ್ಸಮು	೨	೭೯
ದ್ವಿಸಮ ಏವ ಶಿಶುಃ	೪	೭
ದ್ವೈತ ಪ್ರವಾದಂ ಕುಚಕುಂಭ	೭	೨೦
ದ್ವೈಪಾಯನ ಸ್ವಾಗತಮಸ್ತು	೨	೭೩
ಧತ್ಸೇ ಸದಾಽರ್ತಿಶಮನಾಯ	೨	೩೦
ಧನ್ಯಂ ಮನ್ಯವಿವೇಕ	೧	೨
ಧಮ್ಮಿಲ್ಲೇ ನವಮಲ್ಲಿವಲ್ಲಿ	೪	೧೦೦
ಧರ್ಮಿಪ್ರಮಾಬಾಧ್ಯ	೮	೧೦೮
ಧವಲಾಂಶುಕ	೪	೪೪

	ಸರ್ಗ	ಶ್ಲೋಕ
ಧವೇ ಪರೋಕ್ಷೇಽಪಿ	೩	೨೫
ಧಾರಣಾದಿ ಭಿರಪಿ	೫	೧೫೧
ಧಾರಾ ವಾಹಿ ಸುಖ	೪	೮೯
ಧೂಮಾಯಮಾನೇನ	೨	೨೮
ನ ಕಥಂಚಿದೌಪ	೯	೧೭
ನ ಚಂಚ ದ್ವೈರಿಂಚಂ	೬	೧೧
ನ ಚ ಶೇಷಗವೀ	೪	೨೪
ನ ಚೋದನೀಯಾ ವಯಮತ್ರ	೮	೧೧೮
ನತಿರ್ದತ್ತೇ ಮುಕ್ತಿಂ	೪	೪೩
ನತೇಽತ್ಯಗಾದುದ್ವಹ	೩	೭೭
ನ ದಿವಾ ನ ನಿಶ್ಯಪಿ	೯	೬೫
ನ ಧರ್ಮಃ ಸೌವರ್ಣೋ	೫	೧೧೩
ನನು ಕರ್ತೃಪೂರ್ವ	೯	೧೧
ನನು ಸಚ್ಚಿದಾತ್ಮ	೯	೧೦
ನನು ಸ್ವಶಬ್ದೇನ	೮	೧೦೫
ನನ್ವೇವ ಮಪ್ಯಸ್ಯನುಮಾನ	೮	೧೦೭
ನನ್ವೇಮಪ್ಯೈಕ್ಯ	೮	೯೭
ನ ಪ್ರಾಕೃತಸ್ತ್ವಂ ಸ	೨	೪೩
ನ ಬಭೂವ ಪುರಾ	೪	೨೧
ನ ಭೂತೇ ಷ್ವಾಸಂಗಃ	೫	೧೧೭
ನ ಭೌಮಾ ರಾಮಾದ್ಯಾಃ	೬	೧೦
ನ ಮಮೈವ ವೇದ	೯	೧೯
ನ ಮೂಢಭಾವಃ ಪರಿತಾಪ	೩	೭೩
ನರ್ಮೋಕ್ತಿಕೃತ್ಯಾಮಪಿ	೭	೬೬
ನವವಿದ್ರುಮಪಲ್ಲವ	೭	೮೯
ನ ವಿಹೀಯತೇ ಹಿ	೯	೯೯
ನ ಸಂಧ್ಯಾದೀನಿ ಕರ್ಮಾಣಿ	೧	೩೩
ನ ಸೂರ್ಯೋ ನೈವೇಂದುಃ	೫	೧೭೨
ನಾಕ್ಷ್ಣಾ ಮಾಕ್ಷಿಕಮೀಕ್ಷಿತಂ	೪	೬೮
ನಾನೇನೋರಸಿ ಚಾಮರೇಣ	೭	೯೭

	ಸರ್ಗ	ಶ್ಲೋಕ		ಸರ್ಗ	ಶ್ಲೋಕ
ನಾ ಭ್ಯುತ್ಸಹೇ ಕಿಂತು	೭	೧೧೨	ಪತ್ಯಾವಭುಕ್ತವತಿ	೩	೭೧
ನಾರ್ಹಾಮಿ ಶುದ್ಧಮಪಿ	೭	೧೧೯	ಪದಾಘಾತ ಸ್ಫೋಟ	೪	೪೧
ನಿಗಮಾಧ್ವನಿ ಪ್ರಬಲ	೯	೫೧	ಪದ್ಮಗಂಧ ಇವ	೬	೭೬
ನಿರ್ಘರ್ಷಣ ಚ್ಛೇದ	೬	೯೮	ಪದ್ಮಾ ಇವ ತವಸ್ತೇಪುಃ	೧	೮೫
ನಿಜಗಾದ ಕಥಾ	೫	೩೯	ಪಂಥಾನಂ ತ್ವಮಪೃಚ್ಛಃ	೮	೧೭
ನಿಜಶಿಷ್ಯಹೃದಬ್ಜ	೬	೬೬	ಪಯೋಧರ ದ್ವಂದ್ವ	೨	೬೯
ನಿತ್ಯತ್ವಮಾತ್ರೇಣ	೮	೮೮	ಪಯೋಬ್ಧಿವಿವರೀ	೧	೫
ನಿರಸ್ತಾ ಖಿಲಸಂದೇಹೋ	೧	೯೨	ಪಪ್ರಚ್ಛ ಸೋಽಧ್ಯಾಯ	೭	೫
ನಿರಸ್ತಮೀಶಂ ಶ್ರುತಿ	೭	೮೯	ಪರಿಗೃಹ್ಯ ಪಾದ್ಯ	೯	೪೭
ನಿರ್ಬಂಧತೋ ಬಹು	೩	೨೫	ಪರಿಘಪ್ರಥಿಮಾ	೪	೪೯
ನಿರ್ವ್ಯಾಜ ಕಾರುಣ್ಯ	೭	೧೧೯	ಪರಿಚರನ್ ಜನನೀಂ	೫	೨
ನಿವೃತ್ತಿಶಾಸ್ತ್ರೇ ನ	೭	೧೧೫	ಪರಿಪಾಲ್ಯತಾಮಿಹ	೯	೧೦೩
ನಿಃಶ್ಯಂಕ ಕ್ಷತಿರೂಕ್ಷ	೪	೫೭	ಪರಿಶುದ್ಧ ಕಥಾ	೪	೯೯
ನಿಷ್ಪುತ್ರಾಽಕುರುತಾ	೫	೮೪	ಪರೋಪಕಾರೋವ್ರತಿನೋ	೨	೩೯
ನಿಸರ್ಗದುರ್ಜ್ಞಾನ	೭	೪೫	ಪರ್ಯಂಕತಾಂಭಜ	೫	೯೪
ನಿಃ ಸ್ಪೋಽಭವೇದ್ಯದಿ	೨	೧೯	ಪವಮಾನ ದಶಾಂ	೩	೪
ನೀರಕ್ಷೀರನಯೇ	೫	೧೧೬	ಪವಮಾನೋಽಪ್ಯಜ	೩	೩
ನೀರದಾಃ ಸುಚಿರ	೫	೧೪೫	ಪಾಣಿಗ್ರಹಾಸ್ತ್ವಾಧಿ	೩	೭೦
ನೃತ್ಯದ್ಧೂತೇಶ	೪	೬೬	ಪಾಥೋರುಹೇಷು	೬	೭೧
ನೃತ್ಯಂತ್ಯಾ ರಸನಾ	೪	೮೨	ಪಾದಾ ದಾಸೀತ್ಪದ್ಮ	೬	೧೦೩
ನೇತಾ ಯತ್ರೋಲ್ಲಸತಿ	೧	೧೭	ಪಾದೌ ಪದ್ಮ ಸಮೌ	೪	೩೮
ನೇತೀ ರಿತಃ ಕಿಂಚಿದುವಾಚ	೯	೭೦	ಪಿತ್ರಾನು ಶಿಷ್ಯವಸುಧಾ	೩	೪೭
ನೈಗಮೀಂ ಕುರು	೧	೫೫	ಪಿತ್ರೋರಿವ ಶ್ವಶುರ	೩	೭೬
ನೈವಂ ನಿಯಂತುಮನಘೇ	೩	೩೫	ಪೀತ್ವಾ ತದುಕ್ತೀರಥ	೮	೯
ನೋ ಹಿತಾಯ ಮಮ	೫	೨೮	ಪೀಯೂಷದ್ಯುತಿ	೧	೯
ಪಂಕಜಪ್ರತಿಮ	೫	೧೬೪	ಪುತ್ರೇಣ ಸೋಽತಿವಿನಯಂ	೩	೨೭
ಪಂಕಜಾನಿ ಸಮುದೂಢ	೫	೧೪೯	ಪುತ್ರೋಽಭವತ್ತಸ್ಯ	೨	೫
ಪಂಕಜಾವಲಿ	೬	೨೩	ಪುತ್ರೋಽಸ್ತುಮೇಬಹು	೨	೫೩
ಪಠಿತಂ ಶ್ರುತಂ	೫	೩೨	ಪುತ್ರ್ಯಾವಚಃ ಪಿಬತಿ	೩	೨೯
ಪತನ್ ಪತನ್ ಸೌಧ	೭	೯೮	ಪುರಾ ಕಿಲಾಧ್ಯೈಷತ	೩	೧೦
ಪತ್ಯಾ ನಿಯುಕ್ತಾ	೮	೫೯	ಪುರಾ ಕ್ಷೀರಾಂಭೋಧೇಃ	೪	೫೫

	ಸರ್ಗ	ಶ್ಲೋಕ
ಪೃಚ್ಛಾಮಿ ಭವತಃ	೧	೮೨
ಪೃಷ್ಟೋ ಬಭಾಣಗುರು	೬	೪
ಪ್ರಣಮ್ಯ ಪರಮಾತ್ಮಾನಂ	೧	೧
ಪ್ರಣಿಪತ್ಯ ಸ ಭಕ್ತಿ	೫	೩೭
ಪ್ರತಿಷ್ಠ ಮಾನೇ ದಯಿತೇ	೩	೬೧
ಪ್ರತ್ಯಕ್ಷ ಮಾತ್ಮೇಶ್ವರ	೮	೧೦೦
ಪ್ರತ್ಯಕ್ಷ ಸಿದ್ಧೇ	೮	೧೧೩
ಪ್ರತ್ಯುತ ಕ್ಷಿತಿಭೃತಾ	೫	೧೯
ಪ್ರಫುಲ್ಲ ರಾಜೀವ	೮	೩
ಪ್ರಬಲಾ ನಿಲವೇಗ	೫	೫೨
ಪ್ರಬುದ್ಧೋಽಹಂ ಸ್ವಪ್ನಾತ್	೯	೨೬
ಪ್ರವಿಶ್ಯಕಾಯಂ	೯	೭೭
ಪ್ರವೃದ್ಧ ವಾದೋತ್ಸುಕತಾಂ	೮	೬೦
ಪ್ರಸನ್ನ ಗಂಭೀರ	೭	೫೪
ಪ್ರಸಾದಾನುಮಿತ	೧	೨೯
ಪ್ರಸಾದಿತೋಽಭೂದಥ	೩	೧೪
ಪ್ರಸ್ಥಾತು ಕಾಮಮನಘಂ	೫	೭೭
ಪ್ರಾಗಿತ್ಥಂ ಜ್ವಲನ	೧	೯೮
ಪ್ರಾತಃ ಶೋಣಸರೋ	೮	೫೭
ಪ್ರಾತರೇವ ಸಮ	೫	೯
ಪ್ರಾಪ ತಾಪಸವರಃ	೫	೧೬೫
ಪ್ರಾಪ ವಿಷ್ಣುಪದ	೫	೧೨೯
ಪ್ರಾಪ್ತಸ್ಯಾಭ್ಯುದಯಂ	೪	೪೨
ಪ್ರಾಬಲ್ಯಮಾಪಾದಯತಿ	೮	೧೩೦
ಪ್ರಾಯೋಽಧುನಾತದು	೭	೧೦೫
ಫಲಪ್ರದಂ ಕರ್ಮ	೮	೭
ಬತ ಕರ್ಮಯಂತ್ರ	೯	೩೫
ಬಬಂಧ ನಿಃಶಂಕ	೮	೧೩೪
ಬಭಾಷೇಽಥಧರಾ	೧	೭೩
ಬಭ್ರಮುಸ್ತಿಮಿರ	೫	೧೨೪
ಬಹವಃ ಶ್ರುತಿಪಾರ	೫	೩೧
ಬಹು ದಕ್ಷಿಣ್ಯೈರಯಜತ	೯	೯೮
ಬಹ್ವರ್ಥ ಗರ್ಭಾಣಿ	೭	೪೪
ಬಹ್ವರ್ಥದಾಯಿಷು	೨	೨೮
ಬಾಢಂ ಜಯೇಯದಿ	೮	೬೨
ಬಾಲೇಯಮಂಗ	೩	೬೩
ಬಾಲೇಽಥ ಮಂಚೇ ಕಿಲ	೨	೮೫
ಬಾಲ್ಯೈರಿಯಂಕ್ರೀಡತಿ	೩	೬೨
ಬಾಲ್ಯೇಷು ಬಾಲ್ಯಾತ್	೩	೬೭
ಬುದ್ಧ್ವಾಮೀನಧ್ವಜ	೧	೨೩
ಬ್ರಹ್ಮಾಽಪಿ ತೇ ಸಹಾಯಾರ್ಥಂ	೧	೫೬
ಬ್ರಹ್ಮೈಕಂ ಪರಮಾರ್ಥಂ	೮	೬೧
ಬ್ರಾಹ್ಮಣಶ್ವಪಚ	೬	೨೯
ಬ್ರುವನ್ನೇವಂ ದಿವಿ	೧	೪೫
ಭಕ್ತಿಪೂರ್ವಕೃತ	೫	೧೦೩
ಭಕ್ತೇಪ್ಸಿತಾರ್ಥ	೨	೪೭
ಭಕ್ತೋಽಪಿಗೇಹಂವ್ರಜ	೨	೯
ಭಗವನ್ನ ವೇದ್ಮಿ	೯	೪೮
ಭಟ್ಟ ಭಾಸ್ಕರವಿಮರ್ದ	೪	೭೫
ಭದ್ರಾಸನಾಧ್ಯಾಸಿನಿ	೯	೮೧
ಭದ್ರೇ ಸುತೇನ ರಹಿತೌ	೨	೪೫
ಭಯೇನ ಭಕ್ತ್ಯಾ	೬	೪೦
ಭರ್ತುಃ ಸಮಕ್ಷಮಪಿ	೩	೭೩
ಭವನ್ ಶರೀರಾದಿ	೮	೧೨೪
ಭವತು ಸಂಪ್ರತಿ	೮	೪೨
ಭವದುಕ್ತಸೂಕ್ತ್ಯಾ	೯	೩೪
ಭವಾದೃಶಾಂ ದರ್ಶನಮೇವ	೭	೮೪
ಭವಾಂಸ್ತಡಿಚ್ಚಾರು	೭	೧೩
ಭಾಟ್ಟೇ ನಯೇ ಗುರು	೨	೨೫
ಭಾತಿ ಯಸ್ಯ ತು ಜ	೬	೩೬
ಭಾರ್ಯಾಮಪೃಚ್ಛದಥ	೩	೩೩
ಭಾವತ್ಕಸೂತ್ರ	೭	೧೪

	ಸರ್ಗ	ಶ್ಲೋಕ
ಭಾವಂ ಮದೀಯಮ	೭	೪೬
ಭಾಷಮಾಣೇತಿ	೬	೩೬
ಭಾಷ್ಯಂ ಪ್ರಣೀತಂ	೭	೧೦೩
ಭಾಷ್ಯಸ್ಯ ವಾರ್ತಿಕ	೭	೬೧
ಭಾಸ್ಕರಾಭಿನವ	೬	೫೦
ಭಿಂದಾನ್ಯೈರ್ದೇವ	೯	೩೨
ಭಿನ್ನೋಽಹಮೀಶಾದಿತಿ	೮	೯೪
ಭುಕ್ತ್ವೋಪವಿಷ್ಟಸ್ಯ	೮	೫೩
ಭೂಭೃನ್ನಿ ಕೇತನ	೩	೨೮
ಭೂಸುರಾರ್ಭಕ	೫	೨೧
ಭೇದಂ ಪ್ರಮಾಣೇಂದ್ರಿಯ	೮	೯೯
ಭೇದಂ ವದಂತೀ	೮	೧೨೮
ಭೇದಾಶ್ರಯಾತ್ಮೇಂದ್ರಿ	೮	೯೬
ಭೈಕ್ಷ್ಯಮನ್ನಮಜಿ	೫	೧೭
ಭೋ ದ್ವಾಸುಪರ್ಣಾಸ	೮	೧೧೨
ಭೋಭೋಯತಿಕ್ಷ್ಮಾಧಿ	೮	೭೬
ಭೋಶ್ಚೇತನತ್ವೇನ	೮	೯೦
ಭ್ರಮತಾಂ ಭವವರ್ತ್ಮನಿ	೫	೫೪
ಮತ್ತೋಜಾತಃ ಕಲಂಜಾ	೮	೧೯
ಮತ್ಸ್ಯಕಚ್ಛಪ	೫	೧೪೪
ಮತ್ಸ್ಯೇಂದ್ರನಾಮಾಹಿ	೯	೮೦
ಮದ್ವಚಃ ಸಚನಿ	೫	೧೫೭
ಮಧ್ಯಮಂ ಕಾಂಡಮು	೧	೫೧
ಮನೋಕ್ಷಮಿತ್ಯಭ್ಯು	೮	೯೮
ಮಂಥಾನಾದ್ರಿಧುರಂ	೬	೧೦೬
ಮಮ ನ ಕಿಂಚಿದ	೮	೩೭
ಮಮ ನ ಮಾನಸ	೫	೬೦
ಮಯಿ ಜಾತು ಮಾತು	೯	೪೬
ಮಲಿನೈಶ್ಚೇನ್ನ ಸ	೧	೬೫
ಮಹತಾನೇಹಸಾ	೧	೨೦
ಮಹ್ಯಂ ತದುಕ್ತಮ	೩	೩೨
ಮಾತರ್ವಿಧೇಯ	೫	೬೮
ಮಾನಾಂತರೋಪೋದ್ಬ	೮	೧೨೯
ಮಾನುಷ್ಯಧರ್ಮ	೨	೬೩
ಮಾಭೂದಯಂ	೩	೪೧
ಮಾ ಭೂದಿದಂ ತತ್ತ್ವ	೮	೮೬
ಮಾಲಾಯದಾ ಮಲಿನ	೮	೬೮
ಮಿತಂ ಪಾದೇನ್ಯೈವ	೫	೧೧೧
ಮಿಥ್ಯಾವಕ್ತೇತಿ ಕೈ	೬	೮೬
ಮೀಮಾಂಸಕಾನಾಮ	೭	೪೨
ಮುನೀಭೂತ್ವಾಮುದೋ	೧	೫೨
ಮುನೇ ಪುರಾಣಾನಿ	೭	೨೪
ಮುಹು ರ್ಧಿಗ್ ಧಿಗ್	೯	೨೭
ಮುಹುಃ ಸಂತೋ	೪	೩೯
ಮುಹೂರ್ತ ಮಾತ್ರಂ	೭	೫೧
ಮೂರ್ಧ್ನಿ ಹಿಮಕ	೨	೯೦
ಮೃ ತಮ ದೀದಹತ್	೪	೯
ಮೃದು ವಚಶ್ಚರೀ	೫	೪
ಮೋಹನ ಪ್ರಕೃತಿ	೧	೪೨
ಮೋಹ ಸಂತಮಸ	೬	೫೧
ಮೌಹೂರ್ತಿಕಾ ಬಹು	೩	೫೬
ಮೌಹೂರ್ತಿಕೈರ್ಬಹು	೩	೪೮
ಯಜ್ಞೋವಿತಂ ಜಲ	೫	೭೦
ಯತಿ ಪುಂಡರೀಕ	೯	೪೫
ಯತಿಭಂಗೇಪ್ರವೃತ್ತಸ್ಯ	೮	೨೯
ಯತಿರಾಜ ಸಂಪ್ರತಿ	೯	೨
ಯತೀಂದ್ರಃ ಶಂಕರೋ	೧	೪೩
ಯತ್ಪಶ್ಯತಾಂ ಶಿಶುರಸೌ	೨	೮೩
ಯತ್ರ ಯತ್ರಚ	೬	೩೮
ಯತ್ರಾ ಪ್ಲುತಾ ದಿವ್ಯ	೭	೬೬
ಯಥಾತಿರುಚ್ಯೇ ಮಧುರೇ	೧	೩
ಯದಪಿ ತ್ವಮಸ್ಯ	೯	೫೭

	ಸರ್ಗ	ಶ್ಲೋಕ
ಯದವಾದಿ ವಾದ	೯	೫೯
ಯದಾಲೋಕಾದಂತಃ	೬	೪೨
ಯದಿ ವಿದ್ಯತೇ ಕವಿ	೯	೫
ಯದಿ ವೇದಾಃ ಪ್ರಮಾಣಂ	೧	೭೫
ಯದಿ ಹಾಟಕವಲ್ಲರೀ	೪	೪೫
ಯದೀ ಯಮಾಖ್ಯಾತ್ಯಥ	೮	೧೧೭
ಯದೀಹ ಸಂದೇಹ	೭	೯೯
ಯದೇಕಮುದಿತಂ	೯	೨೫
ಯದ್ಯದ್ಗೃಹೇಽತ್ರ	೩	೫೨
ಯದ್ಯೇವಮೇತಸ್ಯ	೮	೮೯
ಯದ್ಯೇಷ ಮಂತ್ರೋಽನ ಭಿಧಾ	೮	೧೨೫
ಯದ್ವತ್‌ಪ್ರತಿಷ್ಠಾಫಲ	೮	೮೪
ಯದ್ವದ್ ಘಟಾನಾಂ	೧	೨
ಯದ್ವಾ ದೀನದಯಾ	೧	೧೧
ಯಮಾಮನಂತಿ ಶ್ರುತಯಃ	೭	೩೧
ಯಂ ಯಂ ಪದಾರ್ಥಮಭಿ	೩	೫೮
ಯಯಾ ದೀನಾಧೀನಾ	೬	೯೩
ಯಸ್ಯ ತ್ರಿನೇತ್ರಾಪರ	೫	೮೨
ಯಸ್ಯ ನೈವ ಸದೃಶೋ	೫	೧೨
ಯಾಗೈರನೇಕೈ ರ್ಬಹು	೨	೩೭
ಯಾಗೋಽಪಿ ನಾಕಫಲ	೨	೧೮
ಯಾ ಚಿತಿಃ ಸ್ಫುರತಿ	೬	೩೭
ಯಾ ಮೂರ್ತಿಃ ಕ್ಷಮಯಾ	೪	೭೦
ಯಾವತ್ಸು ಸತ್ಸು ಪರಿಪೂತಿ	೨	೨೦
ಯಾಸಾಂ ಸ್ತನ್ಯಂ ತ್ವಯಾ	೮	೨೫
ಯುನಕ್ತಿ ಕಾಲಃ ಕ್ವಚಿದಿಷ್ಟ	೭	೮೭
ಯೇನೇತಿ ಹಿ ಸ್ವಪ್ನ	೮	೧೨೧
ಯೇಽಪ್ಯನ್ಯೇಽಮುಂ ಸೇವಿತುಂ	೬	೧೬
ಯೋಗಿನ್ನ ನೌಪಾಧಿ	೮	೧೦೬
ರಜಸಾ ತಮಸಾ	೪	೪
ಗಮ್ಯಾಣಿ ಗಂಧಕುಸುಮಾನಿ	೨	೬೦
ರಾಜವರ್ಯ ಕುಲ	೫	೨೯
ರಾಜಿತಾಭ್ರವಸನೈಃ	೫	೧೩
ರಾಜ್ಯಶ್ರೀರಿವ ನಯ	೨	೯೧
ರಾಜ್ಞಃ ಸುಧನ್ವನಃ	೧	೬೨
ರುಚಿರಾ ತದುರಃಸ್ಥಲೀ	೪	೪೮
ರುಷ್ಟೇ ಧವೇಸತಿ	೩	೭೨
ರೂಕ್ಷೈಕಾಕ್ಷರವಃ	೧	೧೬
ರೂಪೇಷು ಮಾರಃ ಕ್ಷಮಯಾ	೨	೪೦
ರೇಣುಭಸ್ಮಕಲಿತೈಃ	೫	೧೫೦
ರೋಷಾನುಷಂಗ ಕಲಯಾ	೭	೪೭
ಲಗ್ನೇ ಶುಭೇ ಶುಭಯುತೇ	೨	೭೧
ಲೋಕತ್ರಯೀ ಲೋಕದೃಶೇವ	೨	೭೮
ಲೋಕಾಲೋಕದರಿ	೪	೧೦೪
ವಕ್ಷ್ಯಾಮಹೇವಯಂ	೧	೮೪
ವಚನಂ ತಮೇತ	೯	೭
ವತ್ಸ ತಂ ಶೃಣು ಸ	೨	೧೫೮
ವತ್ಸೇ ತ್ವಮದ್ಯಗ	೩	೬೯
ವಧ್ವರ್ಜನಾವನ	೩	೩೮
ವಂಧ್ಯಾ ಸೂನುಖರೀ	೧	೮
ವರಮೇನಮವಾ	೪	೩೪
ವರಯಸ್ವಶತಾ	೫	೪೫
ವರ್ಣಾಶ್ರಮ ಸಮಾ	೧	೩೨
ವರ್ಷಾರಂಭ ವಿಜೃಂ	೪	೮೩
ವರ್ಷಾಸು ವರ್ಷತಿ	೫	೭೬
ವಾಗ್ಗುಂಫೈಃ ಕುರುವಿ	೬	೯೬
ವಾಚಃ ಕಲ್ಪಲತಾಃ	೬	೧೦
ವಾಚಾ ಮೋಚಾಫಲ	೬	೯೫
ವಾಣೀಸಾಕ್ಷಿಕಸ	೧	೨೨
ವಾದಂ ಕರಿಷ್ಯಾಮಿ	೮	೪೫
ವಾದಿಭಿರ್ನಿಜನಿ	೫	೮೮
ವಾದೇಕೃತೇಽಸ್ಮಿನ್ನ	೮	೬೫

	ಸರ್ಗ	ಶ್ಲೋಕ		ಸರ್ಗ	ಶ್ಲೋಕ
ವಾದೇ ಹಿ ವಾದಿ ಪ್ರ	೮	೪೬	ವೇದಾವಸಾನೇಷು	೮	೬೮
ವಾರಿದಾ ಯತಿವ	೫	೧೪೧	ವೇದಾಃ ಷಡಂಗಂ	೬	೨೮
ವಾರಿವಾಹ ನಿವಹೇ ಕ್ಷ	೫	೧೨೦	ವೇದೇ ಚ ಶಾಸ್ತ್ರೇ ಚ	೨	೨೭
ವಾರಿವಾಹ ನಿವಹೇ ಪ್ರ	೫	೧೪೩	ವೇದೇ ಪದಕ್ರಮಜಟಾ	೨	೨೪
ವಾರೀ ಚಿತ್ತಮತ	೪	೬೬	ವೇದೇ ಬ್ರಹ್ಮ ಸಮಃ	೪	೧೯
ವಿಕ್ರೀತಾ ಮಧುನಾ	೪	೯೧	ವೇದೇ ಷ್ವಧೀತೇಷು	೨	೮
ವಿಜನತಾವನಿ	೫	೮೭	ವೇದೋಽಪ್ರಮಾಣಂ ಬಹು	೬	೯೨
ವಿಜ್ಞಾತಮೇವ	೧	೩೦	ವ್ರಜ ಜನನಿ ತದಾತ್ವಂ	೮	೧೩೭
ವಿಜ್ಞಾಯ ವಿಜ್ಞಾಃ ಸ	೯	೮೨	ವ್ರತಮಸ್ಮದೀಯ	೯	೮೬
ವಿದಿತಂ ತವ ವತ್ಸ	೪	೨೮	ವ್ಯಾಖ್ಯಾಜೃಂಭಿತವಾದವತ್	೭	೬೯
ವಿದಿತಾಶಯೋಽಪಿ	೯	೧೬	ವ್ಯಾಖ್ಯಾಪ್ಯ ಸಂಖ್ಯೈಃ	೬	೪೮
ವಿದಿತೋಽಸ್ತಿ ಸಂಪ್ರತಿ	೯	೨೪	ವ್ಯಾಖ್ಯಾ ಮೌನಮನುತ್ತರಾಃ	೭	೧೬
ವಿದ್ಯಾಧಿರಾಜಮಘಪಂಡಿತ	೨	೩೩	ವ್ಯಾಖ್ಯಾಹಿ ಭೂಯೋ	೬	೪೯
ವಿದ್ಯಾಮವಾಪ್ಯಾಪಿ	೭	೩೨	ವ್ಯಾಸಃ ಪರಾಶರಸುತಃ	೫	೧೦೫
ವಿದ್ವಜ್ಜ್ವಲತಪಃ ಫಲಂ	೭	೧೦೫	ವ್ಯಾಸೋ ದರ್ಶ ಯತಿ	೭	೧೦೪
ವಿಧಾತುಮಿಷ್ಟಂ ಯದಿಹ	೨	೧೦	ಶಂಕರಸ್ತದನು	೭	೭
ವಿಧಾಯಭಾರ್ಯಾಂ	೮	೫೧	ಶಂಕರಃ ಸವಿನಯ್ಯೈಃ	೫	೧೦೨
ವಿಧಿನಾ ಖಲು ವಂಚಿತಾ	೪	೨೩	ಶಂಕರೋ ದಿವಸ	೭	೨೪
ವಿಧಿರಾಸ ಸುರೇಶ್ವರೋ	೩	೭	ಶನ್ಯೈಃ ಸಾಂತ್ವಾಲಾಪ್ಯೈಃ	೫	೧೨೭
ವಿಪಕ್ಷ ಪಾತೀ ಬಲವಾನ್	೬	೯೭	ಶರದೋಽಷ್ಟ ಪುನಃ	೫	೪೮
ವಿಲೋಕ್ಯವಾಚಂಯಮ	೬	೨೧	ಶಶಾಪ ತಾನ್ದುರ್ವಿನಯೋ	೩	೧೨
ವಿಶಿಷ್ಟಂ ಕರ್ಮಕಾಂಡಂ	೧	೫೪	ಶಾಕ್ಯೈಃ ಪಾಶುಪತ್ಯೈಃ	೩	೮೩
ವಿಶ್ವೇಶಶ್ಚರಣಯುಗಂ	೫	೧೬೨	ಶಾಂತಾಂ ದಿಶಂ ದೇವ	೭	೫೭
ವಿಷ್ಣುಪಾದನಖ	೫	೧೭೬	ಶಾಂತಿಪ್ರಾಕ್ಸುಕೃತಾ	೯	೩೬
ವಿಹಿತಾಂಜಲಿನಾ ವಿಪಶ್ಚಿತಾ	೫	೩೮	ಶಾಂತಿ ಶ್ಚಾವಶಯನ್	೫	೮೫
ವೀರ ಹತ್ಯಾಮವಾಪ್ತೋಽಸಿ	೮	೨೭	ಶಾರದಾಂಬುಧರ	೫	೧೪೮
ವೃಕ್ಷಾಲತಾಃ ಕುಸುಮ	೨	೬೪	ಶಾರೀರವಾಚೀ ನ	೮	೧೧೯
ವೃತ್ತಿಃ ಶರೀರೇ ಭವತಿ	೮	೧೨೩	ಶಾರ್ದೂಲ ಚರ್ಮೋದ್ವಹನೇನ	೬	೧೮
ವೇದಾಂತ ಕಾಂತಾರ	೭	೮೦	ಶಿವಗುರುಃ ಸ ಜರನ್	೪	೬
ವೇದಾಂತಾ ನ ಪ್ರಮಾಣಂ	೮	೭೪	ಶಿವವಿಷ್ಣ್ವಾಗಮಪರೈಃ	೧	೩೫
ವೇದಾರ್ಣವಂ ವ್ಯತಿಯುತಂ	೬	೨೫	ಶಿವ ಮುದೀಕ್ಷ್ಯ ಯುವಾ	೫	೩

	ಸರ್ಗ	ಶ್ಲೋಕ
ಶಿಶುರೇಷ ಕಿಲಾತಿಶೈಶವೇ	೫	೪೧
ಶಿಷ್ಯಾಸ್ತಮೂಚುರ್ಭಗವಾನ್	೭	೩
ಶೀತ ದೀಧಿತಿರಸೌ	೫	೧೪೨
ಶುಚಿರ್ದ್ವಿಜೋಽಹಂ	೬	೩೦
ಶುಶ್ರಾವ ತಸ್ಯ	೫	೧೦೬
ಶೃಣು ಸೌಮ್ಯವಚಃ	೧	೪೮
ಶೇಷಃ ಸಾಧುಭಿರೇವ	೬	೧೮
ಶೈಶವೇ ಸ್ಥಿತವತಾ	೩	೮೦
ಶೋಣಸ್ಯತೀರಮುಪಯಾತ	೩	೪೯
ಶೋಣಾಖ್ಯ ಪುಂನದ	೩	೨೬
ಶ್ಯಾಮಲಾ ಕ್ವ ಚಿದಪಾಂಗ	೫	೧೬೯
ಶ್ರಾಂತೇ ಪ್ವಥಾಧೀತ್ಯ	೭	೨
ಶ್ರೀನೈಷ್ಠಿಕಾಶ್ರಮ	೨	೧೬
ಶ್ರೀವಿಶ್ವರೂಪಗುರುಣಾ	೩	೪೨
ಶ್ರೀಶಂಕರಾಚಾರ್ಯ	೬	೬೪
ಶ್ರುತ ಭೂಸುರವಾಕ್ಯಸ್ಯ	೧	೮೮
ಶ್ರುತಯಃ ಕ್ರಿಯಾರ್ಥ	೯	೮
ಶ್ರುತಿ ರಾಶಿರ ದ್ವಯ	೯	೯
ಶ್ರುತಿಃ ಸ್ಮೃತೇಽರ್ಥೇ	೮	೧೧೫
ಶ್ರುತೀ ನಾಮಾಕ್ರೀಡಃ	೫	೧೧೦
ಶ್ರುತೇ ಪಿದಧತಿ	೧	೩೪
ಶ್ರುತ್ವಾ ಗುರೋಃ ಸದನ	೨	೨೩
ಶ್ರುತ್ವಾ ತದದ್ಭುತಂ	೧	೭೮
ಶ್ರುತ್ವಾಽಶರೀರಿಣೀಂ	೧	೯೧
ಶ್ರುತ್ವೇತಿ ತಾಂ ಸತ್ತ್ವರಮೇಷ	೭	೭೭
ಶ್ವಶ್ರೋರ್ರ್ವರಾಯಾ ವಚನೇನ	೩	೬೬
ಷಡಭಿಜ್ಞಾ ನಿಶಮ್ಯೇಮಾಂ	೧	೬೬
ಷೋಡಶೇ ಶಾರದಾ	೧	೨೬
ಸಂಕಲ್ಪ ಏವಾಖಿಲ	೯	೯೧
ಸುಕಲ್ಪಿತಾ ದ್ವಿಗುಣ	೨	೩೦
ಸಂಗೀತ ಲಾಸ್ಯಾಭಿನಯಾದಿ	೯	೬೩

	ಸರ್ಗ	ಶ್ಲೋಕ
ಸ ಚ ಮರಿಷ್ಯತಿ	೫	೬೪
ಸ ಚ ರುರೋದ	೫	೬೨
ಸ ಚಾಬ್ರವೀತ್ ಸೌಮ್ಯ	೮	೩೬
ಸಚಾಬ್ರವೀದ್ ಭಾಷ್ಯಕೃತಂ	೭	೪
ಸ ಜಾತು ಶಾರೀರಕ	೭	೧
ಸಂಜೀವನಾಯ ಚಿರಕಾಲ	೭	೧೧೦
ಸಂತರ್ಪಯಂತಂ ಪಿತೃದೇವ	೨	೩೮
ಸತಾಂ ಹೃದಬ್ಜಾನಿ	೬	೧೦೧
ಸತ್ಕಾರಪೂರ್ವಮಭಿಯುಕ್ತ	೨	೭೯
ಸತ್ಯಂ ಗುರೋ ನ ನಿಯಮೋಽಸ್ತಿ	೨	೧೫
ಸತ್ಯಮೇವ ಭವತಾ	೬	೩೪
ಸತ್ಯಮೇವ ಮಹಾರಾಜ	೧	೯೦
ಸ ತ್ವಮುತ್ತಮಪುಮಾನಸಿ	೫	೧೬೧
ಸ ದದರ್ಶ ಕುತ್ರ	೯	೭೪
ಸದಾ ವದನ್ಯೋಗಪದಂ	೭	೧೧೪
ಸದ್ಯಃ ಕೃತ್ತದ್ವಿಜಶಿರಃ	೧	೩೭
ಸ ದ್ವಾದಶೇ ವಯಸಿ	೬	೬೦
ಸ ನಿತರಾಮಿತರ	೬	೬೭
ಸಂತಪ್ತಾನಾಂ ಭವದವ	೪	೯೪
ಸಂತಃ ಸಂತೋಷ ಪೋಷಂ	೯	೪೧
ಸಂತಾಡಯನ್ ಹಂತ	೨	೮೬
ಸಂತಾರಿಕಾಽನವ	೬	೭೦
ಸಂದಿಶ್ಯ ವಚನೀಯಾಂಶಂ	೧	೮೬
ಸಂದದರ್ಶ ಸ ಭಗೀರಥ	೫	೧೬೬
ಸಂನಿವೃತ್ಯ ವಿಧಿ	೬	೫೩
ಸನ್ಮಾರ್ಗವರ್ತನ	೭	೭೯
ಸಂನ್ಯಸ್ತವಾನ್ ಶಿಶು	೫	೭೨
ಸ ಪುನಃ ಪುನರೈಕ್ಷತ	೪	೧೦೭
ಸಪ್ತಾಧಿಕಾಬ್ದದರವಿಂಶತಿ	೭	೧೭
ಸ ಪ್ರತ್ಯುವಾದೀದಿದಮೇವ	೮	೭೭
ಸ ಪ್ರಾಹಜೀಯಃ ಕರಣಾ	೭	೭

	ಸರ್ಗ	ಶ್ಲೋಕ		ಸರ್ಗ	ಶ್ಲೋಕ
ಸ ಬ್ರಹ್ಮ ಚಾರೀ ಗುರು	೨	೬	ಸಸ್ನೌಪ್ರಯಾಗೇ	೭	೭೨
ಸ ಭಾರತೀಸಾಕ್ಷಿ	೩	೭೯	ಸಸ್ಮಿತಂ ಮುನಿವರಸ್ಯ	೫	೨೪
ಸ ಭಾಷ್ಯಚಂದ್ರೋಽಯತಿ	೬	೯೯	ಸಂಸದಿ ಶ್ರುತಿಶಿರೋಽರ್ಥಂ	೫	೧೫೪
ಸಭಾಸಮೀಪವಿಟಪಿ	೧	೬೪	ಸಂಸಾರ ಘೋರಜಲಧೇಃ	೬	೧೫
ಸಮರಾಜತ ಕಂಠ	೪	೫೧	ಸಂಸಾರ ಬಂಧಾಮಯ	೬	೧೩
ಸಮಾನತಾ ಸಾತ್ವಿಕ	೨	೬೭	ಸಹ ತೇನ ವಾದ	೯	೫೪
ಸಮಶೋಭತ ತೇನ	೪	೭೨	ಸಹನಿಪಾತಯುತಾ	೪	೧೭
ಸಮಾಸೀ ತ್ತಸ್ಯಾಸ್ಯಂ	೪	೫೪	ಸ ಹಿ ಜಾತುಗುರೋಃ	೪	೨೧
ಸ ಮುನಿರ್ಮುರಭಿತ್	೪	೨೫	ಸ ಹಿ ವೇತ್ತ್ಯನಾಗತ	೯	೩
ಸಮೇತ್ಯೈರೇತ್ಯೈಃ ಕಿಂ	೯	೩೧	ಸಾ ಭಾರತೀ ದುರ್ವಸನೇನ	೩	೭೮
ಸಂಪ್ರತಿ ಪ್ರತಿಜಾನೇ	೧	೫೩	ಸಾಂಪ್ರದಾಯಿಕಪರಾಶರ	೫	೧೦೪
ಸಂಪ್ರಾಪ್ತಾ ಮುನಿಶೇಖರಸ್ಯ	೪	೧೦೨	ಸಾಮೋದ್ಯೈರನುಮೋದಿತಾ	೧	೧೦
ಸಂಪ್ರೇಷಿತೌ ಶ್ರುತ	೩	೩೧	ಸಾರಂಗಾ ಇವ ವಿಶ್ವ	೫	೮೯
ಸಂಭಾವನಾಽಪಿ ಭವತೋ	೭	೧೦೭	ಸಾ ವಿಶ್ವರೂಪಂ ಗುಣಿನಂ	೩	೧೭
ಸಂಮಂತ್ರ್ಯಚೇತ್ಥಂ ಕೃತ	೭	೯೭	ಸಾ ಶಂಕರಸ್ಯ	೫	೩೪
ಸರಹಸ್ಯಸಮಗ್ರ	೪	೩೫	ಸಾ ಶೋಣತೀರೇಽಜನಿ	೩	೧೫
ಸರ್ಗೇ ಪ್ರಾಥಮಿಕೇ	೨	೩೯	ಸಾ ಸಭಾ ವದನೈಸ್ತೇಷಾಂ	೧	೬೮
ಸರ್ವಜ್ಞತಾಲಕ್ಷಣಮಸ್ತಿ	೩	೬೫	ಸಾಹಂಕಾರಸುರಾಸುರಾ	೪	೯೭
ಸರ್ವಜ್ಞೋಽಪ್ಯಸತಾಂ	೧	೫೯	ಸಿದ್ಧಾ ಪಗೇ ಪುರವಿರೋಧಿ	೭	೬೮
ಸರ್ವಂವಿದನ್ ಸಕಲ	೨	೮೪	ಸುಕಪೋಲತಲೇ	೪	೫೩
ಸರ್ವಾಣಿ ಶಾಸ್ತ್ರಾಣಿ	೩	೧೬	ಸುಧಾ ಸ್ಯಂದಾಹಂತಾ	೬	೯೨
ಸರ್ವಾತ್ಮನಾ ದುಹಿ	೩	೪೦	ಸುಧಿ ಯೋಽ ಸ್ಯವಿದಿದ್ಮ್ಯತೇ	೪	೫
ಸರ್ವಾಭಿ ರಾಶಾಭಿ	೨	೭೬	ಸುಧೀರಾಜಃ ಕಲ್ಪದ್ರುಮ	೪	೪೭
ಸರ್ವಾರ್ಥ ತತ್ವವಿದಪಿ	೫	೩೩	ಸುಮನೋಹರಗಂಧಿನೀ	೨	೭೭
ಸರ್ವಾಸು ಶಾಸ್ತ್ರಸರಣೀಷು	೭	೧೧೭	ಸುಮನ್ತು ಪೈಲಪ್ರಥಮಾ	೭	೩೬
ಸ ವಿಶೇಷವಿದಾ	೫	೩೦	ಸುಯಶಃಕುಸುಮೋಚ್ಚಯಃ	೪	೭೩
ಸಂವಿಭಜ್ಯ ಸಕಲ	೬	೪೬	ಸೂತ್ರಾನುಕಾರಿಮೃದು	೭	೪೦
ಸಂವ್ಯಾಪ್ತ ವಾನಪಿ	೨	೫೯	ಸೃಣಿನಾ ಕರಿಣೀ	೫	೫೦
ಸಶಿಷ್ಯ ಸಂಘಾಃ ಪ್ರವಿಶಂತಿ	೭	೯೧	ಸೈಷಾ ಕಲಿಮಲ	೧	೨೭
ಸಂಶ್ರೂಯತೇಽನ್ಯತ್ರ	೮	೮೩	ಸೋತ್ಕಂಠಾ ಕುಂಠ ಕಂಠೀರವ	೪	೧೦೩
ಸ ಸರ್ವಜ್ಞ ಪದಂ	೧	೭೧	ಸೋಽಥ ನೇತು ಮನವದ್ಯ	೫	೭

	ಸರ್ಗ	ಶ್ಲೋಕ		ಸರ್ಗ	ಶ್ಲೋಕ
ಸೋಽಧಿಗಮ್ಯ ಚರ	೫	೧೦೭	ಸ್ಯಾತ್ತ್ವೇ ದೀನದಯಾ	೬	೭
ಸೋಂಽತ್ಯಜಂ ಪಥಿ ನಿರೀಕ್ಷ್ಯ	೬	೨೫	ಸ್ವಾದ್ವಾ ವೀರೋ ಧಸ್ತದಪಿ	೮	೧೦೧
ಸೋಽ ಪ್ಯತಂದ್ರಿತಮಭೀರು	೫	೧೧	ಸ್ವತಃ ಪ್ರಮಾಣಂ ಪರತಃ	೮	೬
ಸೋಽಭಿನಂದ್ಯಾಽಽಶಿಷಾ	೧	೬೩	ಸ್ವ ಪ್ರತ್ಯಯಾಬಾಧ್ಯ	೮	೧೦೪
ಸೋಽಭಿಮಂತ್ರ್ಯ ಕರ	೫	೧೩೮	ಸ್ವಮತಂ ಪ್ರಭೇತ್ತುಮಿಹ	೯	೬೦
ಸೋಽ ಯಂ ಗುರೋರುನ್ಮಥನ	೭	೭೫	ಸ್ವರ್ಣದೀಜಲಕಣಾಹಿತ	೫	೧೭೧
ಸೋಽ ಯಮಾಜಿತ	೫	೧೪	ಸ್ವಾಪಾನುಷಂಗಜ	೭	೭೦
ಸೋಽವಗಾಹ್ಯ ಸಲಿಲಂ	೫	೧೭೦	ಸ್ವಾಮಿನ್ನಹಂ ನ ಪೃಥಿವೀ	೫	೯೯
ಸೋಽಹಂ ಸಮಸ್ತಾರ್ಥ	೭	೩೭	ಹತೇಷು ತೇಷು ದುಷ್ಟೇಷು	೧	೯೬
ಸೌಗತಾಸ್ತ್ವ ಬ್ರುವನ್	೧	೮೦	ಹಂತುಂ ಬೌದ್ಧೋಽನ್ವಧಾವತ್	೬	೮೭
ಸೌಂದರ್ಯ ಸೌಭಾಗ್ಯ	೯	೭೬	ಹಂತೇ ದೃಶೋಽ ಯಂ	೯	೮೬
ಸೌಧಾಗ್ರ ಸಂಭಿನ್ನ	೮	೧೧	ಹಂತೈವಮಸ್ತೀತಿ	೮	೯೧
ಸೌರಂ ಧಾಮ ಸುಧಾ	೬	೯	ಹರತಸ್ತ್ರಿದಶೇಜ್ಯ	೪	೧೪
ಸ್ಕಂದಾನು ಸಾರಿರಾಜೇನ	೧	೯೫	ಹರ್ಷಂ ತಾಸಾಮುದಿತ	೯	೧೦೯
ಸ್ತುತೋಽಪಿ ಸಮ್ಯಕ್ಕವಿಭಿಃ	೧	೪	ಹಂಸಭಾವ ಮಧಿಗಮ್ಯ	೫	೧೧೮
ಸ್ಥಿತೋಽಸಿಯೋಷಿತಾಂ	೮	೭೪	ಹಂಸ ಸಂಗವಿಲಸತ್	೫	೧೪೭
ಸ್ಫುಟಯನ್ನ್ವೇದತಾತ್ಪರ್ಯಂ	೧	೬೧	ಹಿತೋಪದೇಶೇ ವಿನಿವಿಷ್ಟ	೩	೭೭
ಸ್ಮರೇಣ ಕಿಲಮೋಹಿತೌ	೫	೮೩	ಹೃದ್ಯಾ ಪದ್ಯ ವಿನಾಕೃತಾ	೪	೮೪
ಸ್ಮೃತಿಪ್ರಸಿದ್ಧಾರ್ಥ	೮	೧೧೪	ಹೋಮಾವಸಾನ	೩	೬೦

✤ ✤ ✤